ಸೃಷ್ಟಿಕರ್ತನನ್ನು ಅರಿಯಿರಿ

ಡಾ। ಮುಹಮ್ಮದ್ ಮುಅರ್‍ರಿಮ್ ಅಲಿ

ಪರಮ ದಯಾಮಯನೂ ಕರುಣಾಮಯಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ನೈಜ ಆರಾಧ್ಯ ಹೇಗಿರುವನು, ಅವನ ಅಧಿಕಾರ ವ್ಯಾಪ್ತಿ ಎಲ್ಲಿಯ ವರೆಗಿದೆ, ಅವನು ಯಾವೆಲ್ಲ ಶಕ್ತಿ-ಸಾಮರ್ಥ್ಯಗಳನ್ನು ಹೊಂದಿದ್ದಾನೆ ಎಂಬ ಕುರಿತು ಅರಿಯುವ ಜಿಜ್ಞಾಸೆ ಉಳ್ಳವರಿಗಾಗಿ ಈ ಕೃತಿಯನ್ನು ರಚಿಸಲಾಗಿದೆ. ಜಿಜ್ಞಾಸುಗಳು ಪೂರ್ವಗ್ರಹ, ಪಕ್ಷಪಾತ ಮತ್ತು ಸಂಕುಚಿತ ಮನೋಭಾವದಿಂದ ಮುಕ್ತವಾಗಿ ಸೃಷ್ಟಿಕರ್ತನ ಕುರಿತು ಅರಿಯ ಬಯಸುವವರು ಸೃಷ್ಟಿಕರ್ತನ ಮೂಲಗ್ರಂಥವಾದ ಪವಿತ್ರ ಕುರ್‌ಆನ್ ಅನ್ನು ಆಶ್ರಯಿಸಬೇಕಾದುದು ಅನಿವಾರ್ಯ. ವಸ್ತುತಃ ಪವಿತ್ರ ಕುರ್‌ಆನ್ ಮತ್ತು ಪ್ರವಾದಿವಚನಗಳನ್ನು ಆಧರಿಸಿ ಈ ಕೃತಿಯನ್ನು ರಚಿಸಲಾಗಿದೆ.

ನೈಜ ಆರಾಧ್ಯನ ಕುರಿತು ಜನರಲ್ಲಿ ಅರಿವು ಮೂಡಿಸಲಿಕ್ಕಾಗಿಯೇ ಮಕ್ಕಳ ಆರೋಗ್ಯ ತಜ್ಞರಾದ ಡಾಕ್ಟರ್ ಮುಹಮ್ಮದ್ ಮುಅಝ್ಝಮ್ ಅಲಿಯವರು 'ಖಾಲಿಕ್ ಸೆ ಮುಲಾಕಾತ್ ಕೀಜಿಯೆ' ಎಂಬ ಈ ಕೃತಿಯನ್ನು ರಚಿಸಿದ್ದಾರೆ. ಇದನ್ನು ಸನ್ಮಾರ್ಗ ವಾರಪತ್ರಿಕೆಯ ಉಪ ಸಂಪಾದಕರಾದ ಅರಫಾ ಮಂಚಿಯವರು ಅನುವಾದಿಸಿದ್ದು, 'ನೈಜ ಆರಾಧ್ಯನನ್ನು ಅರಿಯಿರಿ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾಗಿದೆ. ಇದು ಈ ಹಿಂದೆ ಪ್ರಕಟವಾದ 'ಸೃಷ್ಟಿಕರ್ತನ ವಾಸ್ತವಿಕತೆ' ಎಂಬ ಕೃತಿಯ ಎರಡನೆಯ ಭಾಗವಾಗಿದೆ. ಆದರೂ ಇದನ್ನು ಒಂದು ಪ್ರತ್ಯೇಕ ಕೃತಿಯಾಗಿಯೂ ಗುರುತಿಸಬಹುದು.

ಈ ಕೃತಿಯಲ್ಲಿ ಸೃಷ್ಟಿಕರ್ತನ ಕುರಿತು ಆಳವಾದ ಅಧ್ಯಯನಕ್ಕೆ ಒತ್ತು ನೀಡಲಾಗಿದೆ. ಅದಕ್ಕೆ ಪೂರಕವಾಗಿ ಏಕದೇವತ್ವ, ಪ್ರವಾದಿತ್ವ ಮತ್ತು ಪರಲೋಕದ ಕುರಿತು ಒಂದಿಷ್ಟು ವಿವರಣೆಯನ್ನೂ ನೀಡಲಾಗಿದೆ. ಒಟ್ಟಿನಲ್ಲಿ ಈ ಕೃತಿಯು ಸೃಷ್ಟಿಕರ್ತನಾದ ನೈಜ ಆರಾಧ್ಯನನ್ನು ಅರಿಯುವಲ್ಲಿ ಓದುಗರಿಗೆ ಉಪಯುಕ್ತವಾಗುವುದೆಂದು ನಿರೀಕ್ಷಿಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

- ಮನುಷ್ಯರಿಗೆ ತನ್ನ ಸಂದೇಶ ತಲುಪಿಸುವ ಸೃಷ್ಟಿಕರ್ತನ ವಿಧಾನ 13
- ಮುಹಮ್ಮದ್(ಸ)ರ ಪ್ರವಾದಿತ್ವವು ಸತ್ಯವೇ? 47
- ಪವಿತ್ರ ಕುರ್‌ಆನ್: ಸೃಷ್ಟಿಕರ್ತನ ಗ್ರಂಥ 107
- ಸೃಷ್ಟಿಕರ್ತನ ಗ್ರಂಥದಿಂದ ಪ್ರವಾದಿ ಮುಹಮ್ಮದ್(ಸ)ರ ಪರಿಚಯ 137
- ವಿಶ್ವ ಸಾಮ್ರಾಟನೇ ನೈಜ ಆರಾಧ್ಯನು 166
- ಪರಲೋಕ 220
- ಪವಿತ್ರ ಕುರ್‌ಆನ್‌ನಲ್ಲಿ ಸತ್ಯೋಪದೇಶ 253
- ಮುನ್ನೆಚ್ಚರಿಕೆ 262

ಮುನ್ನುಡಿ

ಹಿಂದಿನ ಕೃತಿಯಲ್ಲಿ (ಸೃಷ್ಟಿಕರ್ತನ ವಾಸ್ತವಿಕತೆ) ನಾವು ತರ್ಕಬದ್ಧವಾಗಿ ಚರ್ಚಿಸುವ ಮೂಲಕ ವಿಶ್ವ ಸೃಷ್ಟಿಕರ್ತನ ಅಸ್ತಿತ್ವದ ಬಗ್ಗೆ ಅರಿತುಕೊಂಡಿದ್ದೆವು. ಸೃಷ್ಟಿಕರ್ತ ಒಬ್ಬನೇ ಮತ್ತು ಅವನು ಈ ಪ್ರಪಂಚ ಮತ್ತು ಮನುಷ್ಯರನ್ನು ಸೃಷ್ಟಿಸಿದ್ದಾನೆ ಮತ್ತು ಅವನು ಏಕೈಕನು, ಅವನಿಗೆ ಕುಟುಂಬವಿಲ್ಲ ಮತ್ತು ಅವನಿಗೆ ಯಾವುದೇ ಸಹಾಯಕರಿಲ್ಲ ಎಂದು ಸಂತೃಪ್ತರಾಗಿದ್ದೇವೆ. ಸೃಷ್ಟಿಕರ್ತ ಪ್ರತಿಯೊಂದು ವಸ್ತುವಿನಿಂದಲೂ ನಿರಪೇಕ್ಷ. ಅವನು ಯಾರದೇ ಅವಲಂಬಿತನಲ್ಲ. ಸ್ವತಂತ್ರ ಮತ್ತು ಸರ್ವತಂತ್ರ. ಅವನು ಪರಿಪೂರ್ಣ ಗುಣವೈಶಿಷ್ಟ್ಯಗಳ ಒಡೆಯ ಮತ್ತು ಸಕಲ ದೌರ್ಬಲ್ಯಗಳಿಂದ ಹಾಗೂ ಜೀವನದ ಸಕಲ ಮಿತಿಗಳಿಂದ ಮುಕ್ತನು. ಯುಕ್ತಿವಂತನು, ಉನ್ನತನು ಮತ್ತು ಸರ್ವಶಕ್ತನಾಗಿದ್ದಾನೆ. ಈ ಪ್ರಪಂಚವೆಂಬುದೇ ಇರಲಿಲ್ಲ. ಆದರೆ ಆಗಲೂ ಅವನಿದ್ದ. ಈ ಪ್ರಪಂಚ ಒಮ್ಮೆ ಕೊನೆಗೊಳ್ಳಲಿದೆ; ಆಗಲೂ ಅವನು ಅಸ್ತಿತ್ವದಲ್ಲಿಯೇ ಇರುತ್ತಾನೆ. ಅವನಿಗೆ ಮರಣವಿಲ್ಲ. ಅವನು ನಿದ್ರೆ ಮತ್ತು ಮರಣಗಳಂತಿರುವ ಅಸಹಾಯಕ ಸ್ಥಿತಿಗಳಿಂದ ಮುಕ್ತನಾಗಿದ್ದಾನೆ. ನಮ್ಮ ಹಿಂದಿನ ಕೃತಿಯ (ಸೃಷ್ಟಿಕರ್ತನ ವಾಸ್ತವಿಕತೆ) ಅಧ್ಯಯನ ನಡೆಸುವ ಮೂಲಕ ಈ ವಿಶ್ವದ ಸೃಷ್ಟಿಕರ್ತನೇ ಮನುಷ್ಯರ ಆರಾಧ್ಯನಾಗಿದ್ದಾನೆ ಎಂಬ ನಿರ್ಧಾರವನ್ನು ಸಂಪೂರ್ಣ ತಾರ್ಕಿಕತೆ ಮತ್ತು ಸಮಂಜಸತೆಯೊಂದಿಗೆ ನಾವು ಅರ್ಥ ಮಾಡಿಕೊಂಡೆವು. (ಈ ಕೃತಿಯ ಮೊದಲ ಅಧ್ಯಾಯದಲ್ಲಿ ಇದನ್ನು ಜ್ಞಾಪಿಸಲಾಗಿದೆ.)

ವಿಶ್ವದ ಅಸ್ತಿತ್ವ, ಅದರ ರಚನೆ, ಪರಿಪಾಲನೆ ಮತ್ತು ಸೃಷ್ಟಿಕರ್ತನಿಗೆ ಮನುಷ್ಯನಲ್ಲಿ ಪ್ರೀತಿ, ಸೃಷ್ಟಿಕರ್ತನಲ್ಲಿ ಯಾವೆಲ್ಲ ಗುಣಲಕ್ಷಣಗಳು ಮತ್ತು ವೈಶಿಷ್ಟ್ಯಗಳಿರಬೇಕು ಎಂಬತ್ತ ಗಮನಹರಿಸಿ ಚಿಂತನೆ ನಡೆಸಿದಾಗ ಸೃಷ್ಟಿಕರ್ತನ ಅಪಾರ ಗುಣಲಕ್ಷಣಗಳು, ಅತ್ಯುತ್ಕೃಷ್ಟವಾದ ಗುಣವೈಶಿಷ್ಟ್ಯಗಳು ನಮ್ಮ ಹೃದಯ ಮತ್ತು ಮನಸ್ಸುಗಳಿಗೆ ತೃಪ್ತಿ ನೀಡುತ್ತವೆ. ಇದನ್ನು ಈ ಗ್ರಂಥದ ಮೊದಲ ಅಧ್ಯಾಯದಲ್ಲೇ (ಈ ಚರ್ಚೆಯನ್ನು ಮುಂದುವರಿಸುವ ಮೊದಲು) ಜ್ಞಾಪಿಸುವ ಉದ್ದೇಶದಿಂದ ಮತ್ತೊಮ್ಮೆ ವಿವರಿಸಿದ್ದೇವೆ.

ಹಿಂದಿನ ಕೃತಿಯಲ್ಲಿ (ಸೃಷ್ಟಿಕರ್ತನ ವಾಸ್ತವಿಕತೆ) ನಾವು ಚರ್ಚಿಸಿದ್ದು ಮತ್ತು

ಆ ಚರ್ಚೆಯ ಮೂಲಕ ಅರಿತುಕೊಂಡದ್ದು ಬಹುತೇಕ ಒಂದು ಪರಿಕಲ್ಪನೆಯನ್ನಾಗಿತ್ತು. ಅಂದರೆ ಅದು ಸರಿಯೂ ತಪ್ಪೂ ಆಗಬಹುದು. ಬಹಳಷ್ಟು ಊಹೆ, ಕಲ್ಪನೆಯಾಧಾರಿತ ದೇವರುಗಳನ್ನು ನಾವು ನಮ್ಮ ಸಂಶೋಧನಾತ್ಮಕ (ಅನ್ವೇಷಣೆಯಲ್ಲಿ) ಚರ್ಚೆಯ ಮೂಲಕ ತಿರಸ್ಕರಿಸಿದೆವು. ತಾರ್ಕಿಕ ಆಧಾರದಲ್ಲಿರುವ ಕೇವಲ ಒಂದು ಪರಿಕಲ್ಪನೆಯನ್ನು ಒಪ್ಪಿಕೊಂಡು ಆ ಚರ್ಚೆಯಲ್ಲಿ ತೃಪ್ತರಾದೆವು ಮತ್ತು ಇದರಲ್ಲಿ ಹೆಚ್ಚಿನ ಅನ್ವೇಷಣೆ ಮುಂದುವರಿಸಬೇಕಾಗಿದೆ. ಇನ್ನು ಇದು ಕೇವಲ ಒಂದು ಕಲ್ಪನೆ ಮಾತ್ರವಾಗಿ ಉಳಿಯುತ್ತದೆಯೇ ಅಥವಾ ವಾಸ್ತವ ಆಗಿರುವುದೇ ಎಂದು ಈ ಕೃತಿಯಲ್ಲಿ ಚರ್ಚಿಸಲಾಗುತ್ತಿದೆ. ಆದರೆ, ಯಾವಾಗ ಸೃಷ್ಟಿಕರ್ತನಿಂದಲೇ ಸ್ವಯಂ ಅವನ ಪರಿಚಯ ಮತ್ತು ಸಂದೇಶವು ನಮಗೆ ಸಿಗುತ್ತದೋ, ಆಗ ನಮ್ಮ ಕಲ್ಪನೆಯು ವಾಸ್ತವವಾಗಿ ಬಿಡುತ್ತದೆ. ಒಂದು ವೇಳೆ ಸೃಷ್ಟಿಕರ್ತನು ಇದ್ದರೆ ಆವಶ್ಯಕವಾಗಿ ಅವನು ತನ್ನ ಪರಿಚಯವನ್ನು ತನ್ನ ದಾಸರಿಗೆ ಒಂದಲ್ಲ ಒಂದು ರೀತಿಯಲ್ಲಿ ಮಾಡಿಸಿರುತ್ತಾನೆ. ಮನುಷ್ಯರ ಮುಂದೆ ತನ್ನನ್ನು ಅಪರಿಚಿತ ಸ್ಥಿತಿಯಲ್ಲಿ ಖಂಡಿತ ಇರಿಸಲಾರ ಎಂಬುದು ಕೂಡ ಅದೇ ಕಲ್ಪನೆಯಲ್ಲಿ ಸೇರಿದೆ. ಆದುದರಿಂದ ಸೃಷ್ಟಿಕರ್ತನ ಗುಣ ವೈಶಿಷ್ಟ್ಯಗಳನ್ನು ಸರಿಯಾಗಿ ಗಮನಿಸಿ ಚಿಂತನೆ ನಡೆಸಿದಾಗ ನಮ್ಮಲ್ಲಿ ನಂಬಿಕೆ ಹುಟ್ಟುತ್ತದೆ. ಸೃಷ್ಟಿಕರ್ತನಿಗೆ ತನ್ನ ದಾಸರ ಮೇಲಿರುವ ಅಪಾರವಾದ ಪ್ರೀತಿ, ಕರುಣೆ ಮತ್ತು ಮಹಾನ್ ಯುಕ್ತಿಯನ್ನು ನೋಡಿದಾಗ ದೇವನು ತನ್ನನ್ನು ಸ್ಪಷ್ಟವಾಗಿ ಪರಿಚಯಿಸುವ ವ್ಯವಸ್ಥೆಯನ್ನು ಮಾಡಿಸಿಲ್ಲ ಎಂಬ ವಾದವೇ ದೂರ ಉಳಿಯುತ್ತದೆ.

ಆದರೆ ನಮ್ಮ ಈ ಕಲ್ಪನೆಯು ವಾಸ್ತವಿಕವಾಗಬೇಕಾಗಿದೆ. ಆದುದರಿಂದ ಸೃಷ್ಟಿಕರ್ತನು ಖಂಡಿತವಾಗಿಯೂ ತನ್ನ ದಾಸರೆಡೆಯಲ್ಲಿ ತನ್ನ ಪರಿಚಯವನ್ನು ಮಾಡಿಸಿರಬಹುದು. ಇದು ನಮಗೂ ಅರಿವಾದಾಗ ನಮ್ಮ ಕಲ್ಪನೆಯು ಪೂರ್ಣಗೊಂಡು ವಾಸ್ತವವಾಗುತ್ತದೆ. ಈಗ ನಾವು ಸೃಷ್ಟಿಕರ್ತನು ತನ್ನ ಪರಿಚಯವನ್ನು ಮಾಡಿರುವನೇ ಇಲ್ಲವೇ ಎಂಬುದನ್ನು ಅನ್ವೇಷಿಸೋಣ. ಒಂದು ವೇಳೆ ಪರಿಚಯ ಮಾಡಿಸದಿದ್ದರೆ ಎಲ್ಲಿಯೂ ಆತನ ಪರಿಚಯದ ಸುಳಿವು ಮತ್ತು ವಿವರಗಳು ದೊರೆಯಲಾರದು. ಈ ರೀತಿ ಆದಾಗ ಸೃಷ್ಟಿಕರ್ತ ಎಂಬುದು ಒಂದು ಕಲ್ಪನೆಯಾಗಿ ಉಳಿಯುತ್ತದೆಯೇ ಹೊರತು ವಾಸ್ತವವಾಗುವುದೇ ಇಲ್ಲ.

ಒಂದು ವೇಳೆ ಸೃಷ್ಟಿಕರ್ತನ ಕಡೆಯಿಂದ ಕಳುಹಿಸಲ್ಪಟ್ಟ ಆತನ ಕುರಿತ ವಿವರಗಳು ನಮಗೆ ಸಿಕ್ಕರೆ ಮತ್ತು ಅದು ಅಧಿಕೃತ ಎಂದು ದೃಢಪಟ್ಟರೆ ಆಮೇಲೆ ಅದು ಕಲ್ಪನೆಯಾಗಿ ಉಳಿಯುವುದಿಲ್ಲ ಅದೊಂದು ಸತ್ಯವಾಗಿಬಿಡುತ್ತದೆ. ಸೃಷ್ಟಿಕರ್ತನ ಕಡೆಯಿಂದ ಬಂದಿರುವ ಸಂದೇಶವು ಅವನ ಅಸ್ತಿತ್ವ, ಉಪಸ್ಥಿತಿ ಮತ್ತು ಅವನಿಗೆ ಮನುಷ್ಯರೊಡನೆ ಇರುವ ಸಂಬಂಧಕ್ಕೆ ಸಾಕ್ಷ್ಯ ವಹಿಸುತ್ತದೆ.

ಒಂದು ವೇಳೆ ಅಧಿಕೃತ ರೀತಿಯಲ್ಲೇ ಸೃಷ್ಟಿಕರ್ತನ ಪರಿಚಯವಾಗುತ್ತದೆ ಎಂದಾದರೆ ತನ್ನ ಪರಿಪೂರ್ಣವೂ ಸ್ಪಷ್ಟವೂ ಆದ ಪರಿಚಯವನ್ನೇ ತನ್ನ ದಾಸರಿಗೆ ಅವನು ಮಾಡಿಸಿರುವನು ಎಂದರ್ಥ. ಇದು ಯಾಕೆದರೆ ಸೃಷ್ಟಿಕರ್ತನನ್ನು ಅನ್ವೇಷಿಸಿ, ಹುಡುಕಿ, ಅಲೆದಾಡಿ ತಮ್ಮ ಜೀವನದ ಅಮೂಲ್ಯ ಸಮಯ ಹಾಳಾಗಬಾರದು ಎಂಬುದಕ್ಕಾಗಿದೆ. ಆದುದರಿಂದ ಸ್ವಯಂ ಮನುಷ್ಯರ ಜೀವನಕ್ಕೆ ಸೃಷ್ಟಿಕರ್ತನಿಂದ ಬಂದಿರುವ ಅವನ ಸಂದೇಶವೇ ಸರಿ ಮತ್ತು ಇದು ಪರಿಪೂರ್ಣವಾದದ್ದು; ಅಧಿಕೃತ, ವಿಶ್ವಾಸಾರ್ಹ ಹಾಗೂ ತೃಪ್ತಿದಾಯಕವಾಗಿದೆ.

ಸೃಷ್ಟಿಕರ್ತನ ಸಂಪೂರ್ಣ ಮತ್ತು ಸ್ಪಷ್ಟವಾದ ಪರಿಚಯ ಮನುಷ್ಯ ಜೀವನಕ್ಕೆ ಇರಬೇಕಾದದ್ದು ಬಹಳ ಮುಖ್ಯ. ಯಾಕೆಂದರೆ ಮನುಷ್ಯರು ಸೃಷ್ಟಿಕರ್ತನೊಂದಿಗೆ ಸಂಬಂಧವನ್ನು ಸ್ಪಷ್ಟ ಅರ್ಥದಲ್ಲಿ ಮತ್ತು ಸರಿಯಾದ ರೀತಿಯಲ್ಲಿ ಹೊಂದುವುದು ಆವಶ್ಯಕ.

ಸಂದೇಶ ಸೃಷ್ಟಿಕರ್ತನ ಕಡೆಯಿಂದ ಬಂದಿದೆ ಎಂದ ಮೇಲೆ ನಮ್ಮ ಕಲ್ಪನೆಯು ಕಲ್ಪನೆಯಾಗಿ ಉಳಿಯುವುದಿಲ್ಲ; ಅದು ನಿಜವಾಗಿರುತ್ತದೆ. ಆದ್ದರಿಂದ ಈಗ ಕಲ್ಪನೆ ಕಲ್ಪನೆ ಮಾತ್ರ ಅಗಿಲ್ಲ, ಸತ್ಯವಾಯಿತು. ನಂಬಿಕೆ ವಿಶ್ವಾಸ ಎಂಬುದು ಊಹೆಯಿಂದ ಹುಟ್ಟುವುದಿಲ್ಲ. ಬರೇ ಕಲ್ಪಿಸುವುದು ಕರ್ಮವಲ್ಲ. ಖಂಡಿತವಾಗಿ ಕರ್ಮವು ಒಬ್ಬನೆ ಇದ್ದಾಗ, ಜತೆಯಲ್ಲಿದ್ದಾಗ, ಆರಾಮದಲ್ಲಿದ್ದಾಗ, ಕಷ್ಟದಲ್ಲಿದ್ದಾಗ, ಸ್ವತಂತ್ರನಿದ್ದಾಗ ಮತ್ತು ಏಕಾಂತದಲ್ಲಿದ್ದಾಗಲೂ ಮನುಷ್ಯನಲ್ಲಿ ಶಕ್ತಿ ತುಂಬುತ್ತದೆ. ಮನುಷ್ಯನನ್ನು ಸಶಕ್ತಗೊಳಿಸುತ್ತದೆ. ಆದುದರಿಂದ ಕೇವಲ ಪರಿಕಲ್ಪನೆಯಲ್ಲಿ ನಾವು ತೃಪ್ತಿಪಟ್ಟು ಕುಳಿತುಕೊಳ್ಳುವಂತಿಲ್ಲ. ಆದುದರಿಂದ ಸೃಷ್ಟಿಕರ್ತನ ಕಡೆಯಿಂದ ಬಂದ ಸಂದೇಶದ (ಪವಿತ್ರ ಕುರ್‌ಆನ್) ಅನ್ವೇಷಣೆಗಿಳಿಯಬೇಕು. ಆಗ ನಮ್ಮ ಪರಿಕಲ್ಪನೆಯ ಮೊದಲ ಉದ್ದೇಶವು ಪೂರ್ಣವಾಯಿತು. ಈ ಬಗ್ಗೆ ಮಾರ್ಗದರ್ಶನ ಸಿಕ್ಕ ನಂತರ ಪರಿಕಲ್ಪನೆ ವಾಸ್ತವವಾಗಿ ಬಿಡುತ್ತದೆ.

ಈಗ ಏನು ಮಾಡಬೇಕೆಂದರೆ ನಾವು ಸೃಷ್ಟಿಕರ್ತನು ತನ್ನನ್ನು ಸ್ವಯಂ ಪರಿಚಯಿಸಿಕೊಂಡದ್ದು ಎಲ್ಲಿ ಎಂಬುದನ್ನು ಹುಡುಕಬೇಕು. ಅದು ಅಧಿಕೃತವಾದುದೇ ಎಂದು ತೀರ್ಮಾನಿಸಿ ನಂತರ ಅದರ ಕುರಿತು ಅನ್ವೇಷಣೆ ಮಾಡುವ ಮೂಲಕ ತೃಪ್ತರಾಗಬಹುದಾಗಿದೆ. ಯಾರಿಂದ ಸೃಷ್ಟಿಕರ್ತನ ಪರಿಚಯ ಸಿಕ್ಕಿತು ಎಂಬುದು ಕೂಡ ಇಲ್ಲಿ ಪ್ರಮುಖ ಅಂಶವಾಗಿದೆ. ಒಂದು ವೇಳೆ ಹೀಗೆ ಸಿಕ್ಕ ಸೃಷ್ಟಿಕರ್ತನ ಕುರಿತ ಪರಿಚಯವು ನಾವು ನಮ್ಮ ತಾರ್ಕಿಕ ಆಧಾರದಲ್ಲಿರುವ ದೇವನ ಪರಿಕಲ್ಪನೆ ಮತ್ತು ಅವನ ಗುಣವೈಶಿಷ್ಟ್ಯಗಳಿಗೆ ನಿಕಟವಿರಲೂ ಬಹುದಾಗಿದೆ. (ನಮ್ಮ ಮೊದಲ ಕೃತಿ 'ಸೃಷ್ಟಿಕರ್ತ ವಾಸ್ತವಿಕತೆ'ಯಲ್ಲಿ ವಿವರಿಸಿದ ಸೃಷ್ಟಿಕರ್ತನ ಗುಣವೈಶಿಷ್ಟ್ಯಗಳನ್ನು

ಮತ್ತೊಮ್ಮೆ ನೆನಪಿಸಿಕೊಳ್ಳುವ ಸಲುವಾಗಿ ಈ ಕೃತಿಯ ಮೊದಲ ಅಧ್ಯಾಯದಲ್ಲಿ ವಿವರಿಸಲಾಗಿದೆ.)

ಸೃಷ್ಟಿಕರ್ತನ ಪರಿಚಯ ಮತ್ತು ಅವನಿಂದ ದಾಸರಿಗೆ ತಲುಪಿದ ಸಂದೇಶದ ಶೋಧ, ಅದರ ಪರೀಕ್ಷೆ ಮತ್ತು ಪರಿಶೀಲನೆಯ ಸಾಮಗ್ರಿಗಳೆಲ್ಲವೂ ನಮಗೆ ತೃಪ್ತಿ ನೀಡುವಂತಿರಬೇಕು. ಆದ್ದರಿಂದ ಈ ಕಾರ್ಯವಂತೂ ತುಂಬ ಕಷ್ಟದ ಕೆಲಸ ಮತ್ತು ಇದೊಂದು ಅಭಿಯಾನವಾಗಿದೆ. ಆದರೆ ಈ ಕೃತಿಯಲ್ಲಿ ಈ ಅಭಿಯಾವನ್ನು ಯಶಸ್ವಿಯಾಗಿ ಪೂರ್ತಿ ಮಾಡಲು ನಾವು ಪರಿಶ್ರಮಿಸಿದ್ದೇವೆ.

ಈ ಕೃತಿಯಲ್ಲಿ ಎಂಟು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಪ್ರವಾದಿತ್ವದ ಕುರಿತು ಮತ್ತು ಅದನ್ನು ಪ್ರಸ್ತುತಪಡಿಸುತ್ತಿರುವ ಗ್ರಂಥದ ಕುರಿತು ಚರ್ಚಿಸಲಾಗಿದೆ. ಸಂದೇಶದ ಬೌದ್ಧಿಕ (ತಾರ್ಕಿಕ) ಮತ್ತು ಇತಿಹಾಸದ ಕುರಿತ ಚರ್ಚೆಯಲ್ಲಿ, ಪ್ರವಾದಿ ಮುಹಮ್ಮದ್(ಸ) ಮತ್ತು ಅವರಿಗೆ ನೀಡಲಾದ ಗ್ರಂಥ ಪವಿತ್ರ ಕುರ್‌ಆನ್ ದೇವನ ಕಡೆಯಿಂದ ಬಂದ ಗ್ರಂಥವೆಂದು ನಮಗೆ ತಿಳಿದು ಬರುವುದು. ಆದ್ದರಿಂದ ಪವಿತ್ರ ಕುರ್‌ಆನ್ ಸತ್ಯ ಮತ್ತು ಅಧಿಕೃತ ಗ್ರಂಥವಾಗಿದೆ. ಸ್ವತಃ ಪವಿತ್ರ ಕುರ್‌ಆನ್ ತನ್ನ ಬಗ್ಗೆ ವಿವರವಾದ ಪರಿಚಯವನ್ನು ನೀಡುತ್ತದೆ. ಅದನ್ನು ತಂದವರು ಯಾರು? ಮತ್ತು ಅದನ್ನು ಕಳುಹಿಸಿದವನು ಯಾರು? (ಅವತೀರ್ಣ ಗೊಳಿಸಿದವನ ಕುರಿತು) ಸವಿವರವಾಗಿ ಸ್ವಯಂ ಅದು ಪರಿಚಯಿಸುತ್ತದೆ. ಇದಾದ ನಂತರ ಈ ಪ್ರಪಂಚ ಮತ್ತು ಮನುಷ್ಯ ಸೃಷ್ಟಿಯ ಉದ್ದೇಶ ಪೂರ್ಣಗೊಳ್ಳಲು ಒಂದು ನ್ಯಾಯ ವಿಲೇವಾರಿಯ ದಿನ ಮತ್ತು ಜಾಗ ಇದೆ. ಈ ಜಾಗದಲ್ಲಿ ಸಂಪೂರ್ಣ ನ್ಯಾಯವು ಅದರ ಬೇಡಿಕೆಗೆ ತಕ್ಕಂತೆ ಜಾರಿಗೊಳ್ಳುತ್ತದೆ ಎಂಬುದನ್ನು ಸ್ವಯಂ ಅದು ವಿವರಿಸುತ್ತದೆ.

ಅಲ್ಲಿ ಶಿಕ್ಷೆ ಮತ್ತು ಪ್ರತಿಫಲ (ಪುರಸ್ಕಾರ) ಇರುತ್ತದೆ. ಈ ಕೃತಿಯಲ್ಲಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಅಧ್ಯಾಯ ಇದ್ದು ಸತ್ಯ ಮತ್ತು ವಾಸ್ತವಿಕತೆಯ ಮೇಲೆ ಗಂಭೀರ ಗಮನಹರಿಸುವ ಸಲುವಾಗಿ ಸಲಹೆ ಮತ್ತು ಎಚ್ಚರಿಕೆ ಎಂಬ ಅಧ್ಯಾಯಗಳನ್ನು ಕೊನೆಯಲ್ಲಿ ನೀಡಲಾಗಿದೆ.

ಡಾ। ಮುಹಮ್ಮದ್ ಮುಅಝ್ಝಮ್ ಅಲಿ MBBS, DCH

ಅಧ್ಯಾಯ 1

ಮನುಷ್ಯರಿಗೆ ತನ್ನ ಸಂದೇಶ ತಲುಪಿಸುವ ಸೃಷ್ಟಿಕರ್ತನ ವಿಧಾನ ಯಾವುದು?

ಹಿಂದಿನ ಚರ್ಚೆ ಮತ್ತು ಅದರ ಅಂಶಗಳ ಮರು ಉಲ್ಲೇಖ:

ಈ ಹಿಂದಿನ ಕೃತಿ 'ಸೃಷ್ಟಿಕರ್ತನ ವಾಸ್ತವಿಕತೆ'ಯಲ್ಲಿ ವಿವರವಾದ ತಾರ್ಕಿಕ ಚರ್ಚೆಯಲ್ಲಿ ಸೃಷ್ಟಿಕರ್ತನ ಅಸ್ತಿತ್ವದ ಕುರಿತು ಮತ್ತು ಅವನೇ ನೈಜ ಆರಾಧ್ಯನೆನ್ನುವುದರ ಬಗ್ಗೆ ತಿಳಿದೆವು. ಇದನ್ನು ಈ ಕೃತಿಯ ಆರಂಭದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಯಾವುದೇ ವಸ್ತುವನ್ನು ನಿರ್ಮಿಸಬೇಕು. ನಿರ್ಮಿಸದೆ ಅದು ಉಂಟಾಗುವುದಿಲ್ಲ. ಪ್ರತಿಯೊಂದು ವಸ್ತುವಿಗೂ ನಿರ್ಮಾಪಕ (ತಯಾರಕ) ಇದ್ದಾನೆ. ಆದರೂ ಅವನು ಕಣ್ಣೆದುರು ಕಾಣ ಸಿಗುವುದಿಲ್ಲ. ಅಂಗಡಿಯಲ್ಲಿ ಬಹಳಷ್ಟು ಯಂತ್ರಗಳು ಇರುತ್ತವಷ್ಟೇ ಮತ್ತು ಅದನ್ನು ಮಾಡಿದವನು ಅದರ ಜೊತೆಗೆ ಇರುವುದು ನಮಗೆ ಕಂಡು ಬರುವುದಿಲ್ಲ. ಹೀಗೆ ಇವುಗಳನ್ನು ಮಾಡಿದವನು ಕಾಣುವುದಿಲ್ಲವಾದ್ದರಿಂದ ಇದು ಸ್ವಯಂ ಅಸ್ತಿತ್ವಕ್ಕೆ ಬಂತೇ ಎಂದು ನಾವು ಯೋಚಿಸುವುದೂ ಇಲ್ಲ.

ಮತ್ತೆ ಯಾವುದೇ ವಸ್ತು ನಿರ್ಜೀವ ವಸ್ತುವಿನಿಂದ ಆಗಿರುವುದಿಲ್ಲ. ಒಬ್ಬ ಜೀವ ಇರುವವನಿಂದಲೇ (ಜೀವಂತ ಅಸ್ತಿತ್ವದಿಂದ) ಆರಂಭ ಆಗಿದೆ. ಒಂದು ಜೀವ ಇರುವುದೇ (ಜೀವಂತ ಅಸ್ತಿತ್ವವು) ನಿರ್ಜೀವವಾಗಿರುವುದಕ್ಕೆ ಜೀವ ಕೊಡುತ್ತದೆ ಮತ್ತು ಅಸ್ತಿತ್ವಕ್ಕೆ ತರುತ್ತದೆ. ಜೀವ ಇಲ್ಲದ ಒಂದು ಯಂತ್ರವು ಜೀವಂತ ಮನುಷ್ಯನ ಕಾರಣದಿಂದ ಅಸ್ತಿತ್ವಕ್ಕೆ ಬಂದಿರುವಂತೆ ಈ ಪ್ರಪಂಚವು ಒಂದು ಪ್ರಬಲ ಸರ್ವಜ್ಞಾನಿ ಮತ್ತು ಯುಕ್ತಿವಂತನ ಅಸ್ತಿತ್ವದಿಂದಾಯಿತು. ನಾವು ಈ ಅಸ್ತಿತ್ವವನ್ನು ಪ್ರಪಂಚದ ಸೃಷ್ಟಿಕರ್ತ ಎಂದು ಕರೆಯುತ್ತೇವೆ. ಮೊದಲು ಮನುಷ್ಯರಿದ್ದು ಯಂತ್ರಗಳು ಇರಲಿಲ್ಲ ಮತ್ತು ಯಂತ್ರಗಳನ್ನು ಮನಷ್ಯರು ಅಸ್ತಿತ್ವಕ್ಕೆ ತಂದರು ಅಥವಾ ತಯಾರಿಸಿದರು. ಅದೇ ರೀತಿ ಮೊದಲೇ ಸೃಷ್ಟಿಕರ್ತನಿದ್ದ, ಪ್ರಪಂಚ ಇದ್ದಿರಲಿಲ್ಲ. ಸೃಷ್ಟಿಕರ್ತನೇ ಈ ಪ್ರಪಂಚವನ್ನು ಅಸ್ತಿತ್ವಕ್ಕೆ ತಂದನು.

ಇದೇ ರೀತಿ ಈ ಹಿಂದಿನ ಕೃತಿಯಲ್ಲಿ, ಸೃಷ್ಟಿಕರ್ತನು ಸಕಲ ದೌರ್ಬಲ್ಯ ಮುಕ್ತನಾಗಿರಬೇಕು ಮತ್ತು ಯಾವುದೇ ಪರಿಮಿತಿಯಿಲ್ಲದವನಾಗಿರಬೇಕೆಂದು ಚರ್ಚಿಸಿದ್ದೇವೆ. ಸೃಷ್ಟಿಕರ್ತನು ಸರ್ವಗುಣಗಳು ಇರುವವ (ಸಕಲ ಗುಣಸಂಪನ್ನ) ಆಗಿರಬೇಕೆಂದೂ ನಾವು ಚರ್ಚಿಸಿದ್ದೇವೆ. ಅವನು ಯಾರದೇ ಅವಲಂಬಿತನಲ್ಲ. ಅವನ ಪರಿಪೂರ್ಣತೆಯಲ್ಲಿ ಯಾವುದೇ ನ್ಯೂನತೆಗಳಿಲ್ಲ. ಅವನಿಗೆ ನಿದ್ದೆ, ರೋಗ ಅಥವಾ ಮರಣ ಬಾಧಿಸುವುದಿಲ್ಲ; ಅವನಿಗೆ ನಾಶವಿಲ್ಲ. ಅಸಹಾಯಕತೆ ಮತ್ತು ದೌರ್ಬಲ್ಯದ ಕುರುಹು ಎಂಬುದು ನಿದ್ದೆ ಮತ್ತು ಮರಣಗಳಾಗಿವೆ. ಪ್ರಪಂಚ ಸೃಷ್ಟಿಸಲು (ಸೃಷ್ಟಿಕರ್ತನಾಗಲು) ದುರ್ಬಲ ಮತ್ತು ಅಸಹಾಯಕನಿಂದ ಸಾಧ್ಯವಿಲ್ಲ. ವಿಶ್ವದ ಸೃಷ್ಟಿಕರ್ತನಿಗೆ ಯಾವುದೇ ಸಂತಾನವಿಲ್ಲ, ಯಾವುದೇ ಸಹಾಯಕರಿಲ್ಲ. ಅವು ದುರ್ಬಲರ ಮತ್ತು ಪರಾವಲಂಬಿತರ ಅಗತ್ಯವಾಗಿದೆ.

ಅವನು ಏಕೈಕನು ಮತ್ತು ಎಲ್ಲದ್ದರಿಂದ ಸ್ವತಂತ್ರನು ಮತ್ತು ಸಕಲ ವಿಷಯಗಳಿಂದಲೂ ನಿರಪೇಕ್ಷಿತನಾಗಿರುವನು. ಆದ್ದರಿಂದ ಅವನ ಕೆಲಸಗಳ ಮೇಲೆ ಮತ್ತು ಅವನ ವ್ಯವಸ್ಥೆಯ ಮೇಲೆ ಹಸ್ತಕ್ಷೇಪ ಯಾರಿಂದಲೂ ಸಾಧ್ಯವಿಲ್ಲ. ಯಾವುದಾದರೊಂದು ದೇಶಕ್ಕೆ ಅಥವಾ ಒಂದು ಸಂಸ್ಥೆಗೆ ಒಬ್ಬ ರಾಜ ಅಥವಾ ಅಧ್ಯಕ್ಷ ಇರುವಂತೆ ಇಡೀ ಪ್ರಪಂಚಕ್ಕೆ ಒಬ್ಬನೇ ಸೃಷ್ಟಿಕರ್ತ, ಮತ್ತು ಒಡೆಯ, ದೊರೆ ಮತ್ತು ಆಡಳಿತಗಾರ ಇದ್ದಾನೆ.

ಸೃಷ್ಟಿಕರ್ತನ ಅಸ್ತಿತ್ವ ಮತ್ತು ಏಕತ್ವದ ಬಗ್ಗೆ ನಮ್ಮ ಚರ್ಚೆಯ ಕೆಲವು ಅಂಶಗಳನ್ನು ಈ ವರೆಗೆ ವಿವರಿಸಿದೆವು. ಈಗ ನೈಜ ಆರಾಧ್ಯನ ಬಗೆಗಿನ ಈ ಹಿಂದಿನ ಚರ್ಚೆಯನ್ನೇ ಮತ್ತೊಮ್ಮೆ ಸಂಕ್ಷಿಪ್ತವಾಗಿ ಸ್ಮರಿಸಿಕೊಳ್ಳೋಣ– ಯಾವುದೇ ವಸ್ತುವನ್ನು ಸೃಷ್ಟಿಸುವವನೇ ತಾನು ಸೃಷ್ಟಿಸಿದ ವಸ್ತುವಿನ ಮಾಲಕನಾಗಿರುತ್ತಾನೆ ಮತ್ತು ಮಾಲಕನೇ ತನ್ನ ವಸ್ತುಗಳ ಪರಿಪಾಲನೆ, ರಕ್ಷಣೆ ಅದರ ಆವಶ್ಯಕತೆ, ಬೆಳವಣಿಗೆ, ಅಭಿವೃದ್ಧಿಗೆ ಸೂಕ್ತ ವ್ಯವಸ್ಥೆ ಮಾಡುತ್ತಾನೆ. ಆದ್ದರಿಂದ ಮಾಲಕನೇ (ಒಡೆಯನೇ) ಪ್ರಭು ಆಗಿದ್ದಾನೆ. ಮಾಲಕನ ಸಾಮ್ರಾಜ್ಯದಲ್ಲಿ ಮಾಲಕನದೇ ಆಜ್ಞಾಧಿಕಾರ ನಡೆಯುತ್ತದೆ. ಆದ್ದರಿಂದ ಮಾಲಕನೇ ಆಡಳಿತಗಾರ ಆಗಿದ್ದಾನೆ. ಯಾಕೆಂದರೆ ಸೃಷ್ಟಿಕರ್ತನೇ ಒಡೆಯ, ಆದ್ದರಿಂದ ಸೃಷ್ಟಿಕರ್ತನೇ ಪ್ರಭು ಮತ್ತು ಆಡಳಿತಗಾರನಾಗಿದ್ದಾನೆ.

ಮೇಲೆ ವಿವರಿಸಿದ ಉದಾಹರಣೆಗಳನ್ನು ಮುಂದಿಟ್ಟು ಚಿಂತಿಸುವಾಗ ಪ್ರಪಂಚ ಮತ್ತು ಮನುಷ್ಯನ ಸೃಷ್ಟಿಕರ್ತನೇ ಅವರ ಒಡೆಯ ಎಂದು ಮನದಟ್ಟಾಗುತ್ತದೆ. ಆದ್ದರಿಂದ ಅವನೇ ಅವರ ಪ್ರಭು. ಅವನೇ ಅವರ ಆಡಳಿತಗಾರ. ಆದುದರಿಂದ ಮನುಷ್ಯರು ತಮಗೆ ಅಸ್ತಿತ್ವ ನೀಡಿದ ಸೃಷ್ಟಿಕರ್ತನಿಗೆ ಕೃತಜ್ಞತೆ ಸಲ್ಲಿಸಬೇಕು ಮತ್ತು

ಅವನನ್ನು ಪ್ರಶಂಸಿಸಬೇಕು. ಆದುದರಿಂದ ತಮ್ಮ ಒಡೆಯನ ಮುಂದೆ ವಿನಯದಿಂದ ನಿಲ್ಲಬೇಕಾಗಿದೆ. ಅವನ ಮುಂದೆ ಬಾಗಬೇಕು, ಸಾಷ್ಟಾಂಗವೆರಗಬೇಕು ಮತ್ತು ತಮ್ಮ ಪ್ರಭುವಿನ (ಅವನು ಸೃಷ್ಟಿಕರ್ತ ಆಗಿದ್ದಾನೆ) ಮುಂದೆ ಕೈಚಾಚಬೇಕು, ಯಾಚಿಸಬೇಕು. ಅವನಲ್ಲೇ ಭರವಸೆ ಇಡಬೇಕು. ನಿರೀಕ್ಷೆ ಇಡಬೇಕು ಮತ್ತು ಅವನನ್ನು ಪ್ರೀತಿಸಬೇಕು. ಅಂತೆಯೇ ತಮ್ಮ ಆಡಳಿತಗಾರನ (ಅವನೇ ಸೃಷ್ಟಿಕರ್ತ) ಆಜ್ಞೆ ಪಾಲಿಸಬೇಕು. ಅವನಿಗೆ ವಿಧೇಯನಾಗಿರಬೇಕಾಗಿದೆ.

ಮೇಲೆ ವಿವರಿಸಿದ ಈ ಎಲ್ಲ ಮನುಷ್ಯನ ಕರ್ಮ, ಕಾರ್ಯಕ್ರಮಗಳನ್ನೇ ಆರಾಧನೆ ಎನ್ನುವುದು. ಯಾರ ಮುಂದೆ ಇವನ್ನು ಅರ್ಪಿಸಲಾಗುತ್ತದೆ ಅವನೇ ಆರಾಧ್ಯ ಮತ್ತು ಸೃಷ್ಟಿಕರ್ತ. ಈ ಸಕಲ ಕರ್ಮ ಕಾರ್ಯಕ್ರಮಗಳನ್ನು ಮನುಷ್ಯನು ಸೃಷ್ಟಿಕರ್ತನ ಮುಂದೆ ಪ್ರಸ್ತುತಗೊಳಿಸುತ್ತಾನೆ. ಯಾಕೆಂದರೆ ಸೃಷ್ಟಿಕರ್ತನೇ ಆರಾಧ್ಯನಾಗಿರುವುದರಿಂದ ಮನುಷ್ಯನು ತನ್ನ ಆರಾಧನಾ ಕರ್ಮವನ್ನು ಸೃಷ್ಟಿಕರ್ತನ ಮುಂದೆ ಅನುಷ್ಠಾನಿಸುತ್ತಾನೆ. ಮನುಷ್ಯನನ್ನು ಸೃಷ್ಟಿಸಿದವನೇ ಮನುಷ್ಯನ ಸೃಷ್ಟಿಕರ್ತ ನಾಗಿದ್ದಾನೆ ಎಂದು ಇದರಿಂದ ತಿಳಿದು ಬರುತ್ತದೆ. ಯಾಕೆಂದರೆ ಸೃಷ್ಟಿಕರ್ತ ಒಬ್ಬನೇ ಮತ್ತು ಅವನೇ ಆರಾಧ್ಯ. ಈ ವಾಸ್ತವಿಕತೆಗಳನ್ನು ನಾವು ಕಳೆದ ಕೃತಿಯಲ್ಲಿ ತಾರ್ಕಿಕವಾಗಿ ವಿವರಿಸಿದ್ದೇವೆ. ಆದರೆ ಅದೊಂದು ತಾರ್ಕಿಕ ವಿಷಯವಾಗಿತ್ತು-

ಸೃಷ್ಟಿಕರ್ತ ಅತ್ಯುತ್ಕೃಷ್ಟ ಮತ್ತು ಆಲಿಸುವ ಗುಣವೈಶಿಷ್ಟ್ಯಗಳ ಒಡೆಯನೆಂಬುದನ್ನು ನಾವು ನೋಡಿದ್ದೆವು. ಇದೇ ಗುಣವೈಶಿಷ್ಟ್ಯವು ಆರಾಧ್ಯನಲ್ಲಿಯೂ ಕಂಡು ಬರುತ್ತದೆ. ನಾವು ತಾರ್ಕಿಕವಾಗಿ ಮನವರಿಕೆ ಮಾಡಿಕೊಂಡ ಕೆಲವು ಗುಣವೈಶಿಷ್ಟ್ಯಗಳನ್ನು ಮತ್ತೊಮ್ಮೆ ಜ್ಞಾಪಿಸುವ ನಿಟ್ಟಿನಲ್ಲಿ ಇಲ್ಲಿ ಉಲ್ಲೇಖಿಸಲಾಗುತ್ತಿದೆ.

ಆರಾಧ್ಯನಲ್ಲಿ ಇಂತಹ ಗುಣಗಳಿರಬೇಕು:

● ನಮಗೆ ಜೀವ ನೀಡಿದವನು(ಸೃಷ್ಟಿಕರ್ತ) ಆರಾಧ್ಯನಾಗಿದ್ದಾನೆ. ನಾವು ಇರಲಿಲ್ಲ. ನಮಗೆ ಅವನೇ ಅಸ್ತಿತ್ವ ಕೊಟ್ಟಿದ್ದಾನೆ. ಅವನಿಗೆ ಮಾತ್ರ ಸಾಷ್ಟಾಂಗವೆರಗಬೇಕು ಮತ್ತು ಬೇರೆ ಯಾರನ್ನೂ ಆರಾಧಿಸಬಾರದೆಂಬುದು ಆ ಮಹಾನ್ ಶಕ್ತಿಯ ಹಕ್ಕು ಆಗಿದೆ.

● ಮೂಲ, ಮೊದಲ ಮತ್ತು ನೈಜ ಜೀವನ ಕೇವಲ ಸೃಷ್ಟಿಕರ್ತನಿಗೆ ಮಾತ್ರ ಇದೆ. ಆದುದರಿಂದ ಸೃಷ್ಟಿಕರ್ತನೇ ಆರಾಧ್ಯನಾಗಿದ್ದಾನೆ. ಯಾಕೆಂದರೆ, ವಾಸ್ತವದಲ್ಲಿ ಕೇವಲ ಆರಾಧ್ಯನ ಕೈಯಲ್ಲೇ ಮಾತ್ರ ಎಲ್ಲ ಜೀವಿಗಳ ಅಸ್ತಿತ್ವ ಮತ್ತು ಮರಣಗಳಿವೆ. ಆದುದರಿಂದ ಆರಾಧನೆಗೆ ಅವನೇ ಅರ್ಹನಾಗಿರುವನು.

● ಬೇರೆ ಯಾರೋ ಜೀವ ಕೊಟ್ಟಿದ್ದರೆ ಅಂತಹವರು ಅರಾಧ್ಯನಾಗಲು ಹೇಗೆ ಸಾಧ್ಯ? ಸ್ವಯಂ ಜೀವಂತ ಮತ್ತು ಅನಂತನಾಗಿರುವವನು ನೈಜ ಆರಾಧ್ಯನಾಗಿರು

ವನು. ಅಂದರೆ ಏನೂ ಇರಲಿಲ್ಲ. ಆಗಲೂ ಅವನಿದ್ದ. ಮತ್ತು ಏನೂ ಬಾಕಿ ಉಳಿಯದು ಅವನು ಉಳಿಯುವನು ಅವನು ಶಾಶ್ವತನು, ಅನಶ್ವರನು.

• ಆರಾಧ್ಯನ ಪ್ರಮುಖ ಗುಣವೆಂದರೆ ಅವನಿಗೆ ಸಾವಿಲ್ಲ. ಅವನು ಏಕೈಕನು, ಶಾಶ್ವತನು ಮತ್ತು ಅವನ ಅಸ್ತಿತ್ವ ನಾಶವಾಗುವುದಿಲ್ಲ.

• ಅರಾಧ್ಯನು ಯಾವಾಗಲೂ ಸಮಸ್ತ ತೇಜಸ್ಸಿನ ಪ್ರಭೆಯಾಗಿದ್ದಾನೆ. ಆಗಲೇ ತನಗೆ ಪ್ರಾಣ ಕೊಟ್ಟವನೆಡೆಗೆ ಮನುಷ್ಯ ಜೀವ ಸಂಪೂರ್ಣ ತೃಪ್ತಿ ಮತ್ತು ನಂಬಿಕೆಯಲ್ಲಿ ಉನ್ಮುಖವಾಗಿರುತ್ತದೆ.

• ಆರಾಧ್ಯನು (ದೇವನು) ಯಾವಾಗಲೂ ಸುರಕ್ಷಿತನಾಗಿರುತ್ತಾನೆ. ಅಂದರೆ ಎಂದೂ ರೋಗ ಬಾಧಿಸದವನು. ಅವನು ಯಾವುದೇ ಅಪಾಯಕ್ಕೊಳಗಾಗದವನು. ದೌರ್ಬಲ್ಯ ಬಾಧಿಸದವನು. ಅವನ ಪರಿಪೂರ್ಣತೆ ಎಂದಿಗೂ ಕುಂದುವುದಿಲ್ಲ.

• ಸ್ವಯಂ ಅಪಾಯಕ್ಕೊಳಗಾಗುವರಿಂದ ಇನ್ನೊಬ್ಬರಿಗೆ ಭದ್ರತೆ ನೀಡಲಾಗದು. ರಕ್ಷಣೆ ಮಾಡಲಾಗದು.

• ಆರಾಧ್ಯನು ಎಲ್ಲ ಅಲಕ್ಷ್ಯಗಳಿಂದ ಮುಕ್ತನಾಗಿರುವವನು. ತೂಕಡಿಕೆ, ನಿದ್ದೆ ಮತ್ತು ಬಳಲಿಕೆಯಿಂದ ಮುಕ್ತನು.

• ಆರಾಧ್ಯನು ಸಕಲ ವಿಷಯಗಳ ಜ್ಞಾನವಿರುವನು. ಪ್ರತಿಯೊಂದು ಕಾಲದ ಮತ್ತು ಪ್ರತಿಯೊಂದು ಸ್ಥಳದ (ಸ್ಥಾನಗಳ) ಜ್ಞಾನ ಇರುವವನು. ಅಂದರೆ ಯಾವುದೇ ವಸ್ತು ಅವನ ಜ್ಞಾನದಿಂದ, ತಿಳುವಳಿಕೆಯಿಂದ ಮರೆಯಾಗಿರುವುದಿಲ್ಲ.

• ಆರಾಧ್ಯನ ಶಕ್ತಿ ಭೂಮ್ಯಾಕಾಶಗಳನ್ನು ಆವರಿಸಿಕೊಂಡಿದೆ. ಅವನ ಪ್ರಭಾ ಶಕ್ತಿಯಿಲ್ಲದ ಯಾವುದೇ ಜಾಗವಿಲ್ಲ. ಅವನು ಸರ್ವವ್ಯಾಪಿ, ಸಾರ್ವಭೌಮ ಮತ್ತು ಯುಕ್ತಿಪೂರ್ಣನಾಗಿರುವನು.

• ಎಷ್ಟರ ವರೆಗೆ ಈ ಬೃಹತ್ ವಿಶ್ವದ ವ್ಯವಸ್ಥೆ ಮಾಡುವನು ಎಂದರೆ, ಸಾವಿರಾರು ವರ್ಷಗಳಿಂದ ಪ್ರತಿಯೊಂದು ಕ್ಷಣ ಕ್ಷಣಗಳ ವ್ಯವಸ್ಥೆಯನ್ನೂ ಅವನೇ ಮಾಡುತ್ತಿರುವನು ಯಾವುದೇ ಒಂದು ವಸ್ತು ಮಿಲಿಯನ್, ಬಿಲಿಯನ್ ಗಟ್ಟಲೆ ವರ್ಷಗಳ ದೂರದಲ್ಲಿದ್ದರೂ ಅವು ಅವನ ನಿಯಂತ್ರಣದಿಂದ ಯಾವ ಕ್ಷಣವೂ ಹೊರತಾಗಿರುವುದಿಲ್ಲ. ಇಂತಹ ಪ್ರಬಲ ಅಸ್ತಿತ್ವ ಆರಾಧ್ಯನಾಗಿರುವನು.

• ಆರಾಧ್ಯನು ಎಲ್ಲ ಅಪೂರ್ಣತೆಗಳು, ದೋಷಗಳು ಮತ್ತು ಲೋಪಗಳಿಂದ ಮುಕ್ತನಾಗಿರುವವನು. ಪರಿಪೂರ್ಣತೆ ಮತ್ತು ಗುಣವೈಶಿಷ್ಟ್ಯಗಳ ಸಂಯೋಜನೆಯುಳ್ಳವನಾಗಿರುವನು.

● ಆರಾಧ್ಯನು ಪವಿತ್ರ ಶಕ್ತಿಯಾಗಿರುವನು. ಅವನ ವರ್ತನೆಯಿಂದಾಗಿ ಯಾವುದೇ ಕೆಡುಕು ಸಂಭವಿಸುವ ಕುರಿತು ಊಹಿಸಲಾಗದು.

● ಆರಾಧ್ಯನು ಒಂದು ಸರ್ವೋತ್ತಮ (ಪವಿತ್ರ) ಅಸ್ತಿತ್ವವಾಗಿರುತ್ತಾನೆ. ಅವನಿಗೆ ಸಂಬಂಧಿಸಿದಂತೆ ಯಾವುದೇ ಕೆಟ್ಟದನ್ನು ಕಲ್ಪಿಸಿಕೊಳ್ಳಲಾಗದು.

● ಆರಾಧ್ಯನು ಪರಿಪೂರ್ಣ ಅಸ್ತಿತ್ವವಾಗಿರುವನು. ಅವನಲ್ಲಿ ಯಾವುದೇ ದೌರ್ಬಲ್ಯವಿಲ್ಲ ಅಥವಾ ನ್ಯೂನತೆಯಿಲ್ಲ. ಆರಾಧ್ಯನು ಯಾವಾಗಲೂ ನಿರಪೇಕ್ಷನಾಗಿರುತ್ತಾನೆ.

● ಆರಾಧ್ಯನು ಮಹಾನ್ ಶಕ್ತಿಶಾಲಿ. ಎಷ್ಟರ ವರೆಗೆಂದರೆ ಅವನು ಯಾರಿಗೆ ಏನಾದರೂ ಕೊಡಲಿಚ್ಛಿಸಿದರೆ ಯಾರೂ ತಡೆಯುವವರಿಲ್ಲ. ಅವನು ತಡೆದರೆ ಕೊಡಲು ಯಾರಿಂದಲೂ ಸಾಧ್ಯವಾಗುವುದಿಲ್ಲ.

● ಆರಾಧ್ಯನು ಶೂನ್ಯದಿಂದ ವಸ್ತುಗಳನ್ನು ಮತ್ತು ಜೀವಿಗಳನ್ನು ಅಸ್ತಿತ್ವಕ್ಕೆ ತರುವವನು.

● ಆರಾಧ್ಯನು ಪ್ರಪಂಚವನ್ನು ಮತ್ತು ಪ್ರಪಂಚದಲ್ಲಿ ಕಂಡುಬರುವ ಜೀವಿಗಳ ನಡುವೆ ಸಾಮರಸ್ಯವನ್ನು ಜೀವಿಗಳ ಉಳಿವು, ಮುಂದುವರಿಕೆಗಾಗಿ ಇರಿಸಿರುವನು.

● ಆರಾಧ್ಯನ ತೀರ್ಮಾನವನ್ನು ಪ್ರಶ್ನಿಸಲು (ಪಂಥಾಹ್ವಾನ ನೀಡಲು) ಯಾರಿಂದಲೂ ಸಾಧ್ಯವಿಲ್ಲ. ಅದು ಜಾರಿಯಾಗದಂತೆ ತಡೆಯುವವರಿಲ್ಲ. ತನ್ನ ಕರ್ಮಗಳಿಗೆ ಅವನು ಯಾರ ಮುಂದೆ ಉತ್ತರಿಸಬೇಕಾಗುವುದಿಲ್ಲ. ಅವನು ಅತ್ಯುನ್ನತನು. ಪ್ರಬಲ ಅಸ್ತಿತ್ವನಾಗಿರಬೇಕು.

● ಆರಾಧ್ಯನು ಯಾವುದೇ ಜೀವಿ ಮತ್ತು ಜೀವಂತ ಶಕ್ತಿಯ ಮಿತಿಗೆ ಬಂಧಿಯಾಗಿರುವುದಿಲ್ಲ.

● ಆರಾಧ್ಯನು ಮರೆಯಲ್ಲಿರುವವನು, ಪರೋಕ್ಷವಾಗಿರುವವನು, ದೃಷ್ಟಿಗೆ ಗೋಚರಿಸದಿರುವವನಾಗಿದ್ದು, ಪ್ರತಿಯೊಂದು ಸ್ಥಳದಲ್ಲಿ, ಪ್ರತಿಯೊಂದು ಸಮಯದಲ್ಲಿ ಅವನ ನಿಕಟತೆಯನ್ನು ಅವನ ಗುಣವೈಶಿಷ್ಟ್ಯಗಳ ಮೂಲಕ ಅನುಭವಕ್ಕೆ ತಂದು ಕೊಳ್ಳಬಹುದಾಗಿದೆ. ಈ ರೀತಿ ಪ್ರತಿಯೊಂದು ಜಾಗದಲ್ಲಿ ನಾವು ಪ್ರತಿಯೊಂದು ಸಮಯದಲ್ಲಿ ನಮಗೆ ಅವನು ಕಂಡುಬರುವನು. ಅವನು ನಮ್ಮನ್ನು ಪ್ರತಿಯೊಂದು ಜಾಗದಲ್ಲಿ, ಸ್ಥಳದಲ್ಲಿ ಪ್ರತಿಯೊಂದು ಸಮಯದಲ್ಲಿ ನಮ್ಮ ಮೊರೆಯನ್ನು ಆಲಿಸುವನು. ಮತ್ತು ಅವನು ಸಕಲವನ್ನೂ ಸೃಷ್ಟಿಸಲು ಸಮರ್ಥನಾಗಿದ್ದಾನೆ. ಈ ರೀತಿಯಾಗಿ ಅವನ ನಿಕಟತೆಯನ್ನು ನಾವು ಸ್ವತಃ ಅನುಭವಿಸಬಹುದಾಗಿದೆ. ಅವನ ಪ್ರೀತಿಯಲ್ಲಿ,

ಕ್ಷಮೆಯಲ್ಲಿ, ಕರುಣೆಯಲ್ಲಿ, ನಾವು ಅವನ ಸಾಮಿಪ್ಯದ ಅನುಭವನ್ನು ಪಡೆದುಕೊಳ್ಳ ಬಹುದು. ಅವನು ಕೋಪಗೊಳ್ಳುವ ಭಯ ಮತ್ತು ಅವನ ಅವಿಧೇಯತೆಗೆ ಶಿಕ್ಷೆಯ ಭಯ ನಮಗೆ ಅನುಭಕ್ಕೆ ಬರುತ್ತದೆ. ಆರಾಧ್ಯನ ಪರಿಕಲ್ಪನೆಯಲ್ಲಿ ಈ ಎಲ್ಲ ಸಕಲ ಗುಣವೈಶಿಷ್ಯಗಳು ಒಳಗೊಂಡಿರುತ್ತವೆ. ನೈಜ ಆರಾಧ್ಯನಲ್ಲಿ ನಿಶ್ಚಯವಾಗಿಯೂ ಇವೆಲ್ಲ ಇವೆ. ಆದರೆ ಮನುಷ್ಯ ಜೀವನದ ಮೇಲೆ ನೈಜ ಆರಾಧ್ಯನಷ್ಟು ಬೇರೆ ಅಸ್ತಿತ್ವದ ಪರಿಕಲ್ಪನೆಯು ಅಸಾಮಾನ್ಯವಾದ ಪ್ರಭಾವ ಬೀರುವುದಿಲ್ಲ.

● ಸೃಷ್ಟಿಕರ್ತನು ಆರಾಧ್ಯನಾಗಿದ್ದಾನೆ. ಅವನು ಏಕೈಕನೂ ಒಂಟಿಯೂ ಆಗಿದ್ದಾನೆ. ಆದ್ದರಿಂದ ಕೂಡಾ ಒಬ್ಬನೇ ಆರಾಧ್ಯನಿದ್ದಾನೆ.

● ಆರಾಧ್ಯನಿಗೆ ಕುಟುಂಬವಿರಬಾರದು. ಕುಟುಂಬದ ಅರ್ಥ ಆರಾಧ್ಯನಿಗೆ ಕೂಡ ಬಯಕೆ, ಆವಶ್ಯಕತೆ, ಅಭಿಲಾಷೆಗಳು ಇವೆ ಎಂದಾಗುತ್ತದೆ. ಇದು ಅವನು ದುರ್ಬಲ ಎಂಬುದನ್ನು ವ್ಯಕ್ತಪಡಿಸುತ್ತದೆ. ಮತ್ತು ಅದಕ್ಕೆ ಪುರಾವೆಯೂ ಆಗಿದೆ. ಆದರೆ ದುರ್ಬಲ ಅಸ್ತಿತ್ವ ಆರಾಧ್ಯನಾಗುವುದಿಲ್ಲ. ದುರ್ಬಲ ಅಸ್ತಿತ್ವವನ್ನು ಅರಾಧ್ಯನಾಗಿಯೂ ಮಾಡುವುದಿಲ್ಲ.

● ನೈಜ ಆರಾಧ್ಯನ ಮೇಲೆ ಯಾರು ವಿಶ್ವಾಸ ಇರಿಸಲಿ, ಇರಿಸದಿರಲಿ; ವಿಧೇಯತೆ ತೋರಿಸಲಿ, ತೋರಿಸದಿರಲಿ; ಅವನ ಮುಂದೆ ಯಾರು ತಲೆಬಾಗಿಸಲಿ, ಬಾಗಿಸದಿರಲಿ... ಅವನ ಸ್ಥಾನಮಾನದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ.

● ಆರಾಧ್ಯನು ಯಾರೋ ಮಾಡಿರುವುದೋ ಯಾರೋ ಸೃಷ್ಟಿಸಿದ್ದೋ, ಯಾರೋ ಜನ್ಮ ನೀಡಿದ್ದೋ ಆಗಿರುವುದಿಲ್ಲ ಮತ್ತು ಅವನಂತೆಯಾಗಲಿ, ಅವನಿಗೆ ಸಮಾನವಾಗಲಿ ಯಾರೂ ಇರುವುದಿಲ್ಲ. ಸಕಲ ದೌರ್ಬಲ್ಯಗಳಿಂದ ಆರಾಧ್ಯನು ಮುಕ್ತನು. ಕರ್ಮ ಮತ್ತು ಜೀವನದ ನಿರ್ಬಂಧಗಳಿಂದ (ಮಿತಿಗಳಿಂದ) ಮುಕ್ತನು. ಜನಿಸುವುದು, ಜನ್ಮ ನೀಡುವುದು ಒಂದು ದುರ್ಬಲಾವಸ್ಥೆಯಾಗಿದೆ. ಸಾವು ಒಂದು ದುರ್ಬಲ ಮತ್ತು ಅಸಹಾಯಕ ಅವಸ್ಥೆಯಾಗಿದೆ. ಜನನ ಮತ್ತು ಮರಣವೆಂಬುದು ಜೀವನವನ್ನು ಒಂದು ಮಿತಿಗೆ ನಿರ್ಬಂಧಿಸಲ್ಪಡುವುದು ಎಂದು ಆಗಿದೆ.

● ಆರಾಧ್ಯನು ಯಾರ ಮುಂದೆಯೂ ಉತ್ತರಿಸಬೇಕಾದವನು ಆಗಿರುವುದಿಲ್ಲ. ದುರ್ಬಲರಿಗೆ ಮಾತ್ರ ಉತ್ತರಿಸುವ ಆವಶ್ಯಕತೆಯಿರುತ್ತದೆ. ತಪ್ಪೆಸಗುವವನು, ಶಕ್ತಿ, ಸಾಮರ್ಥ್ಯ ಮತ್ತು ವಸ್ತುಗಳ ದುರ್ಬಳಕೆ ಮಾಡುವವನು, ಅಕ್ರಮಿ, ಇತರ ಹಕ್ಕು ಕಬಳಿಕೆ ಮಾಡುವಾತನು, ಅನ್ಯಾಯವೆಸಗುವವನು ಇಂತಹವರು ಉತ್ತರಿಸಬೇಕಾದವರು. ಆದರೆ ಈ ಎಲ್ಲವುಗಳಿಂದ ಆರಾಧ್ಯನು ಮುಕ್ತನು, ಮಹೋನ್ನತನು, ಸರ್ವಶಕ್ತನು, ಸಮರ್ಥನು ಆದ ಅಸ್ತಿತ್ವವಾಗಿದ್ದಾನೆ.

● ಸೃಷ್ಟಿಕಾರ್ಯ ಮತ್ತು ಒಡೆತನ ಹೊಂದಲು ಅಸಮರ್ಥರು ಆರಾಧ್ಯನಾಗಲು ಸಾಧ್ಯವಿಲ್ಲ. ಆದುದರಿಂದ ಇಂತಹವರಿಗೆ ಆರಾಧಿಸಲ್ಪಡುವ ಯಾವ ಹಕ್ಕಿದೆ? ಅವರಾದರೋ ಸೃಷ್ಟಿಕರ್ತರಲ್ಲ. ಒಡೆಯರೂ ಅಲ್ಲ.

● ಆರಾಧ್ಯನು ಆಧಿಪತ್ಯದ ಗುಣಲಕ್ಷಣವನ್ನು ಹೊಂದಿರುವವನಾಗಿರುವನು. ಪ್ರಪಂಚದ ಸಕಲ ವಸ್ತುಗಳು ಅವನ ಆಧಿಪತ್ಯದ ಪರಿಧಿಯಲ್ಲಿರಬೇಕು.

● ಆರಾಧ್ಯನಲ್ಲಿ ಆಶ್ರಯ ಪಡೆಯುವ ವ್ಯಕ್ತಿಯು ಸ್ವಯಂ ಸುರಕ್ಷತೆಯನ್ನು ಅನುಭವಿಸಬೇಕು ಮತ್ತು ಮನುಷ್ಯನು ಇದನ್ನೇ ಬಯಸುತ್ತಾನೆ. ಅಂದರೆ ಆಶ್ರಯ ಮತ್ತು ರಕ್ಷಣೆಯನ್ನು ಬಯಸುತ್ತಾನೆ.

● ಆರಾಧ್ಯ ತನ್ನ ದಾಸನ ಮೊರೆಗೆ ಉತ್ತರಿಸುವವನು. ದಾಸನಿಗೆ ಸಹಾಯ ಮಾಡುವವನು. ಅವನಿಗೆ ಮಾರ್ಗದರ್ಶನ ಮಾಡಿ ಸಂಕಷ್ಟಗಳಿಂದ ಅವನನ್ನು ಪಾರು ಮಾಡುವವನು. ಇಂತಹ ಅಸ್ತಿತ್ವವು ಆರಾಧನೆ, ಕೃತಜ್ಞತೆ ಅರ್ಪಿಸಲು, ಸ್ತುತಿಸಲು ಮತ್ತು ಸಾಷ್ಟಾಂಗವೆರಗಲು ಅರ್ಹವಾಗಿರುವುದು.

● ಆರಾಧ್ಯನಿಗೆ ಮನುಷ್ಯರ ವಿಷಯದಲ್ಲಿ ಆಸಕ್ತಿಯಿರುವುದು. ಮನುಷ್ಯರ ದೈನಂದಿನ ಜೀವನವನ್ನು ಅವನು ಗಮನಿಸುತ್ತಿರುವನು. ಮತ್ತು ನಿರ್ಲಕ್ಷಿಸುವುದಿಲ್ಲ. ಇಂತಹ ಕಾಳಜಿಯಿರುವ ಆರಾಧ್ಯನತ್ತ ಹೃದಯ ಆಕರ್ಷಿತವಾಗುತ್ತದೆ ಮತ್ತು ಬಾಗುತ್ತದೆ. ಮನುಷ್ಯನ ವಿಷಯದಲ್ಲಿ ಆಸಕ್ತಿಯಿಲ್ಲದವನನ್ನು ಆರಾಧಿಸಲು ಮನುಷ್ಯನಲ್ಲಿ ಆಸಕ್ತಿಯಿರಲಾರದು. ಒಂದು ವೇಳೆ ಆರಾಧ್ಯನು ಆಸಕ್ತಿ ವಹಿಸದಿದ್ದರೆ ಮನುಷ್ಯನಿಗೆ ತನ್ನ ಜೀವನವೇ ಹೊರೆಯಾಗಿಬಿಡುತ್ತದೆ. ಇಂತಹ ನಿರಾಸಕ್ತ ಅಸ್ತಿತ್ವವನ್ನು ಆರಾಧ್ಯನೆಂದು ನಂಬಿದರೂ ನಂಬದಿದ್ದರೂ ಯಾವ ಉಪಕಾರವೂ ಇಲ್ಲ.

● ಆರಾಧ್ಯನು ಮನುಷ್ಯನ ಜೀವನದ ಮೂಲಭೂತ ಆವಶ್ಯಕತೆಗಳನ್ನು ಈಡೇರಿಸಿಕೊಡುವವನು ಆಗಿರುವನು. ಅದಕ್ಕಾಗಿ ಉತ್ತಮ ವ್ಯವಸ್ಥೆ ಮಾಡುವವನಾಗಿರುವನು. ಇದನ್ನೇನೂ ಅವನು ಮಾಡದಿದ್ದರೆ, ಮಾಡಲು ಶಕ್ತನಲ್ಲದಿದ್ದರೆ. ಅಂತಹವನಿಗೆ ಆರಾಧ್ಯನಾಗುವ ಅರ್ಹತೆಯಿಲ್ಲ. ಅವನು ಆರಾಧನೆಗೆ ಅರ್ಹನಲ್ಲ. ಇಂತಹ ಅಸ್ತಿತ್ವವನ್ನು ಆರಾಧ್ಯನೆಂದು ನಂಬಿ ಉಪಕಾರವಿಲ್ಲ.

● ದೈನಂದಿನ ಜೀವನದಲ್ಲಿ ಆರಾಧ್ಯನೊಂದಿಗೆ ಮನುಷ್ಯರ ಸಂಬಂಧವು ಅತ್ಯಂತ ನಿಕಟವಾದುದು ಆಗಿರಬೇಕು. ಮನುಷ್ಯರಿಗೆ ಅವನು ಸದಾ ತಮ್ಮೊಂದಿಗಿದ್ದಾನೆಂದು ಅನುಭವವಾಗುತ್ತಿರಬೇಕಾಗಿದೆ. ಈ ಸಾಮಿಪ್ಯದ ಅನುಭವವು ನಂಬಿಕೆಯನ್ನು ಪ್ರಬಲಗೊಳಿಸುತ್ತದೆ ಮತ್ತು ಜೀವನದ ಪ್ರತಿಯೊಂದು ಮಗ್ಗುಲುಗಳನ್ನು

ಹೆಚ್ಚು ಪ್ರಭಾವಿತಗೊಳಿಸುತ್ತದೆ. ಜೀವನದಲ್ಲಿ ನೆಮ್ಮದಿ ಮತ್ತು ಶಾಂತಿಮೂಡಿ ಮತ್ತು ಜೀವನದ ಪ್ರತಿಯೊಂದು ಮಗ್ಗುಲುಗಳು ಸಂಪೂರ್ಣ ಸರಿಯಾದ ನಿಲುವಿನೊಂದಿಗೆ ಸಕ್ರಿಯಗೊಳ್ಳುತ್ತದೆ.

● ಆರಾಧ್ಯನು ತನ್ನ ದಾಸರ ಪಶ್ಚಾತ್ತಾಪ ಸ್ವೀಕರಿಸಿ ಕ್ಷಮಿಸುವವನು. ಏಕೆಂದರೆ ಆರಾಧ್ಯನ ಕ್ರೋಧಕ್ಕೆ ಪಾತ್ರವಾದರೆ ಜೀವನ ಹೊರೆಯಾಗುತ್ತದೆ. ಅವನು ಕ್ಷಮಿಸುವವನಾದರೆ ದಾಸರಿಗೆ ಶಾಂತಿ ದೊರೆಯುತ್ತದೆ.

● ಆರಾಧ್ಯನು ಸಕಲ ಮನುಷ್ಯನನ್ನು ಪ್ರೀತಿಸುವವನು. ಅವರ ನಡುವೆ ಯಾವುದೇ ತಾರತಮ್ಯ ಮಾಡದಿರುವವನು. ಸಕಲ ಮನುಷ್ಯರ ಆರಾಧ್ಯನಾಗಿರುವವನು. ಪ್ರತಿಯೊಬ್ಬರನ್ನೂ ಹುಟ್ಟಿನಿಂದಲೇ ಪ್ರೀತಿಸಿದವನು. ದಾಸರ ಮತ್ತು ಆರಾಧ್ಯನ ನಡುವೆ ಸಂಬಂಧದಲ್ಲಿ ಯಾರ ಹಸ್ತಕ್ಷೇಪವನ್ನೂ ಸಹಿಸದವನು. ನೇರವಾಗಿ ಅವನಲ್ಲಿ ಮೊರೆಯಿಡುವ ಅವಕಾಶ ನೀಡುವವನು. ಅದರ ವಿಧಾನವನ್ನು ತಿಳಿಸಿರುವವನು. (ಪ್ರತಿಯೊಬ್ಬ ಮನುಷ್ಯನಿಗೂ ತಮ್ಮ ಆರಾಧ್ಯನೊಂದಿಗೆ ಶಾಶ್ವತ ಸಂಬಂಧ ಜನ್ಮತಃ ಇರುವುದು ಮತ್ತು ಮನುಷ್ಯನ ಹುಟ್ಟಿನೊಂದಿಗೆ ಆರಂಭವಾಗಿರುವುದು.)

● ಯಾವ ಮಹಾನ್ ಅಸ್ತಿತ್ವಕ್ಕೆ ಸಂತೃಪ್ತಿ ಉದ್ದೇಶವಾಗಿರುವುದೋ ಅವನು ಆರಾಧ್ಯನಾಗಿರುವವನು.

● ಆರಾಧ್ಯ ತನ್ನ ದಾಸರಿಗೆ ನ್ಯಾಯ ನೀಡುವವನು. ವಿಚಾರಣೆಯ ದಿನ ಸಂಪೂರ್ಣ ನ್ಯಾಯ ನೀಡುವವನು- (ನ್ಯಾಯ ಸಿಗುವ ನಿರೀಕ್ಷೆಗಳಿಲ್ಲದವನು. ನ್ಯಾಯ ನೀಡದವನು. ನ್ಯಾಯಕೊಡಲು ಅಸಮರ್ಥನನ್ನು ಆರಾಧಿಸಿ ಒಲಿಸಿಕೊಳ್ಳುವುದರಿಂದ ಯಾವ ಉಪಕಾರವೂ ಇಲ್ಲ.)

● ಆರಾಧ್ಯನು ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿದ ನಂತರ ಅದರ ಉದ್ದೇಶ ಮತ್ತು ಅಸ್ತಿತ್ವವನ್ನು ಪೂರ್ಣಗೊಳಿಸುವ ಸಲುವಾಗಿ ಅವುಗಳಿಗೆ ದಾರಿ ತೋರಿಸುವವನು: ಅವುಗಳ ಸ್ವಭಾವದಲ್ಲಿಯೇ ಅವುಗಳ ಉದ್ದೇಶದ ಜ್ಞಾನ ಇರಿಸುವನು. ಉದ್ದೇಶ ಸಾಧಿಸುವುದು ಮತ್ತು ಸಾಧಿಸುವ ವಿಧಾನವನ್ನು ಇರಿಸಿದವನು. ಮನುಷ್ಯರಿಗೂ ಇದೇ ರೀತಿ ದಾರಿ ತೋರಿಸುವವನೂ ಆ ವ್ಯವಸ್ಥೆ ಮಾಡುವವನೂ ಆಗಿದ್ದಾನೆ.

● ಆರಾಧ್ಯನು ಜೀವನಕ್ಕೆ ಮಾರ್ಗದರ್ಶಿ ತತ್ವ (ಜೀವನ ಸಿದ್ಧಾಂತ) ನೀಡುವವನು ಮತ್ತು ಮನುಷ್ಯರು ಉತ್ತಮ ಮತ್ತು ಶಾಂತಿಯಿಂದ ಜೀವಿಸುವಂತಾಗಲು ಸಂಪೂರ್ಣ ಜೀವನಕ್ಕೆ ಅತ್ಯುತ್ತಮ ತರಬೇತಿ ನೀಡುವವನು ಮತ್ತು ಮನುಷ್ಯರವರೆಗೆ ಈ ವ್ಯವಸ್ಥೆ ತಲುಪಿಸಿ ಕೊಡುವವನು.

• ಜೀವವಿಲ್ಲದ್ದು ಆರಾಧ್ಯನಲ್ಲ ಮತ್ತು ಜೀವನ ಮೂಲದಿಂದ ದುಃಖಿತನೂ ಆರಾಧ್ಯನಲ್ಲ.

• ಆರಾಧ್ಯನಿಗೆ ಮರಣವಿಲ್ಲ. ಸಾಯಿಸಲ್ಪಡುವುದಿಲ್ಲ. ತಮ್ಮ ಜೀವನ ಸಂರಕ್ಷಿಸಿ ಕೊಳ್ಳಲಾಗದವರು ಆರಾಧ್ಯರಾಗುವುದಿಲ್ಲ.

• ಆರಾಧ್ಯನ ಯಾವುದೇ ಕೆಲಸ ನಿರರ್ಥಕವಲ್ಲ. ವ್ಯರ್ಥವೂ ಅಲ್ಲ.

• ಆರಾಧ್ಯನು ಸಕಲ ವಿಷಯಗಳ ಜ್ಞಾನಿ. ಅಜ್ಞಾನಿ ಆರಾಧ್ಯನಾಗುವುದಿಲ್ಲ.

• ಆರಾಧ್ಯ ಅತ್ಯಂತ ಶಕ್ತನು. ಅವನ ಅಧಿಕಾರ ಎಷ್ಟೆಂದರೆ ಯಾವುದೇ ಕೆಲಸ ಆಗಲು ಒಂದು ಆಜ್ಞೆ ಸಾಲುವುದು. ಅವನಿಗೆ ಯಾವುದೇ ಕೆಲಸಗಳಿಗೆ ಓಡಾಟ ಅಥವಾ ಪೂರ್ವ ಸಿದ್ಧತೆಯ ಅಗತ್ಯವಿಲ್ಲ. ಯಾವುದೇ ಕಾರ್ಯಕ್ಕೂ ಅವನ ಒಂದು ಆದೇಶ ಎಷ್ಟೋ ಸಾಲುವುದು.

• ಆರಾಧ್ಯ ಎಲ್ಲ ಸಮಯದಲ್ಲಿ ಎಲ್ಲ ಕೆಲಸಕ್ಕೂ ಎಲ್ಲ ಮಗ್ಗುಲುಗಳಲ್ಲಿ ಸ್ವತಂತ್ರನು. ಯಾರದೇ ಅವಲಂಬನೆ, ಆವಶ್ಯಕತೆ ಎದುರಾಗುವುದು ದುರ್ಬಲ ಎಂಬುದರ ಕಾರಣ ಮತ್ತು ಪುರಾವೆಯಾಗಿದೆ ಮತ್ತು ದುರ್ಬಲ ಅಸ್ತಿತ್ವ ಆರಾಧ್ಯ ನಾಗುವುದಿಲ್ಲ. ದುರ್ಬಲ ಅಸ್ತಿತ್ವವನ್ನು ಆರಾಧಿಸುವುದು ಸ್ವತಃ ತಮ್ಮನ್ನೇ ಅವಮಾನಿಸಿ ದಂತಿರುತ್ತದೆ.

• ಜೀವದ ಉಳಿವಿಗಾಗಿ, ವಿಶ್ವದ ಉಳಿವಿಗಾಗಿ ವ್ಯವಸ್ಥಾಪನೆ ಮಾಡುವವನು ಆರಾಧನೆಗೆ ಅರ್ಹನಾಗಿದ್ದಾನೆ.

ಇವನೇ ಆರಾಧಿಸಲ್ಪಡುವವನು:

• ಸೃಷ್ಟಿಸುವವನೇ ಆರಾಧಿಸಲ್ಪಡುವನು. ಇತರರಿಂದ ಸೃಷ್ಟಿಸಲ್ಪಡುವವನು ಆರಾಧನೆಗೆ ಅರ್ಹನಲ್ಲ.

• ಆರಾಧ್ಯನು ಸ್ವಯಂ ಅಸ್ತಿತ್ವ ಹೊಂದಿದವನು. ಸ್ವಾವಲಂಬಿ, ಇತರರ ಕರುಣೆಯ ಅವಲಂಬಿತನಾದವನಲ್ಲ.

• ಆರಾಧ್ಯನು ಎಲ್ಲ ದೋಷಗಳಿಂದ ಮುಕ್ತನು. ನಿರ್ದೋಷಿ, ದೋಷ ಇರುವವನನ್ನು ಆರಾಧಿಸಲಾಗುವುದಿಲ್ಲ.

• ಆರಾಧಿಸಲ್ಪಡುವವನು ಬಲಾಢ್ಯನು, ದುರ್ಬಲನಲ್ಲ.

• ಅನಶ್ವರನೇ ಆರಾಧ್ಯನಾಗಿರುವನು. ನಾಶ ಹೊಂದುವವನನ್ನು ಅರಾಧಿಸಲಾಗುವುದಿಲ್ಲ.

● ಬೇಡಿಕೆಗಳನ್ನು ಪೂರೈಸುವವನು ಆರಾಧ್ಯನು. ಇತರರ ಅವಲಂಬಿತನನ್ನು ಆರಾಧಿಸಲಾಗುವುದಿಲ್ಲ.

● ಎಲ್ಲವನ್ನು ವೀಕ್ಷಿಸುವವನು, ಸಕಲ ಜ್ಞಾನಿ ಆರಾಧ್ಯನಾಗಿರುವನು. ಏನನ್ನೂ ವೀಕ್ಷಿಸದ, ಆಲಿಸದವನನ್ನು ಆರಾಧಿಸಲಾಗುವುದಿಲ್ಲ.

● ಮಹಿಮಾವಂತ ಪರಿಪೂರ್ಣ ಅಸ್ತಿತ್ವಕ್ಕೆ ಆರಾಧನೆ ಸಲ್ಲುತ್ತದೆ. (ಮನುಷ್ಯರಿಗೂ ಗೌರವ ಇದರಲ್ಲಿದೆ.) ಅಪರಿಪೂರ್ಣನು, ಮಹಿಮೆ ರಹಿತರನ್ನು ಆರಾಧಿಸುವುದರಿಂದ ಮನುಷ್ಯನು ಅವಮಾನಿತನಾಗುವನು.

● ಈ ಚರ್ಚೆ ಮತ್ತು ತಾರ್ಕಿಕ ಪುರಾವೆಗಳಿಂದ ನಮ್ಮ ಅರಿವಿಗೆ ಬಂದ ಪರಿಕಲ್ಪನೆಯೆಂದರೆ ಪ್ರಪಂಚ ಮತ್ತು ಮನುಷ್ಯರನ್ನು ಸೃಷ್ಟಿಸಿದ ಸೃಷ್ಟಿಕರ್ತನಿದ್ದಾನೆ ಎಂಬುದಾಗಿದೆ ಮತ್ತು ಅವನು ಒಬ್ಬನೇ ಮತ್ತು ಏಕೈಕನು. ಅವನು ಸಕಲ ಗುಣ ವೈಶಿಷ್ಟ್ಯಗಳ ಒಡೆಯನಾಗಿದ್ದಾನೆ. ಜೊತೆಗೆ ತಾರ್ಕಿಕ ಪುರಾವೆಗಳ ಸಹಿತ ಸೃಷ್ಟಿಕರ್ತನು ನಿಜವಾದ ಆರಾಧ್ಯನು ಎಂಬ ನಂಬಿಕೆ ವಿಶ್ವಾಸಗಳಿಂದ ನಾವು ತೃಪ್ತರಾದೆವು. ಈಗ ಇದನ್ನು ಇನ್ನಷ್ಟು ದೃಢಪಡಿಸಿಕೊಳ್ಳಲು ಬಯಸುತ್ತೇವೆ ಯಾಕೆಂದರೆ ಆರಾಧ್ಯನ ಬಗ್ಗೆ ದೃಢವಾದ ನಂಬಿಕೆಯು ನಮ್ಮ ಮನಸ್ಸು ಮತ್ತು ಹೃದಯಕ್ಕೆ ತೃಪ್ತಿಯನ್ನು ನೀಡುತ್ತದೆ. ಕರ್ಮವೆಸಗುವ ಶಕ್ತಿ ತುಂಬುತ್ತದೆ.

ಆದುದರಿಂದ ಆರಾಧ್ಯನ ಸರಿಯಾದ ಮತ್ತು ಸಂಪೂರ್ಣ ಪರಿಚಯ ಅಧಿಕೃತ ರೀತಿಯಲ್ಲಿ ಸಿಗುವುದು ಅತ್ಯಂತ ಆವಶ್ಯಕ. ಇದು ತುಂಬ ಮುಖ್ಯವಾದ ಜೀವನದ ಆವಶ್ಯಕತೆಯೂ ಹೌದು. ಯಾಕೆಂದರೆ ಮನುಷ್ಯನು ತನ್ನ ಸೃಷ್ಟಿಕರ್ತನನ್ನು ಸರಿಯಾದ ಮತ್ತು ಪ್ರಬಲವಾದ ರೀತಿಯಿಂದ ಅರಿಯುವುದರಿಂದ ಆತ್ಮ ತೃಪ್ತಿಯಾಗುತ್ತದೆ ಮತ್ತು ಮನಸ್ಸಿಗೆ ನೆಮ್ಮದಿಯಾಗುತ್ತದೆ.

ಆದುದರಿಂದ ಕೇವಲ ಬರೇ ಪರಿಕಲ್ಪನೆ ಸಾಲದು. ಅಷ್ಟು ಮಾತ್ರ ಸುಮ್ಮನೆ ಇರುವುದು ಪ್ರಾಯೋಗಿಕವಲ್ಲ. ವಿಶ್ವಾಸಾರ್ಹತೆಗೆ ಸೃಷ್ಟಿಕರ್ತನ ಕಡೆಯಿಂದ ಅವನ ಕುರಿತ ಪರಿಚಯ ಸಿಗುವುದು ಈ ನಿಟ್ಟಿನಲ್ಲಿ ಮುಖ್ಯವಾಗುತ್ತದೆ. ಸೃಷ್ಟಿಕರ್ತನ ಕಡೆ ಯಿಂದ ನಮ್ಮ ಜೀವನೋದ್ದೇಶ, ನಮ್ಮ ಅಸ್ತಿತ್ವದ ಉದ್ದೇಶದ ಸಂದೇಶವು ಸಿಗುವಂತೆ ಇರಬೇಕು ನಾವು ಮನುಷ್ಯರು ಈ ಪ್ರಪಂಚದಲ್ಲಿ ಯಾಕೆ ಬದುಕಿದ್ದೇವೆ? ಉದ್ದೇಶ ವೇನು? ಪ್ರಪಂಚದಲ್ಲಿ ಸೃಷ್ಟಿಗಳಿವೆ ಮತ್ತು ಬೇರೆ ಬೇರೆ ಮನುಷ್ಯರು ಇದ್ದಾರೆ. ಈ ಪ್ರಪಂಚದಲ್ಲಿ ನಾವು ಯಾಕಿದ್ದೇವೆ. ಅದರ ಉದ್ದೇಶವೇನು. ನಮ್ಮ ಸ್ಥಾನಮಾನವೇನು ಮತ್ತು ಪ್ರಪಂಚದಲ್ಲಿರುವ ಸೃಷ್ಟಿಗಳಿಗೆ ಮತ್ತು ಬೇರೆ ಬೇರೆ ಮನುಷ್ಯರಿಗೆ ಪ್ರಕೃತಿಯೊಂದಿಗಿರುವ ಸಂಬಂಧವೇನು? ಯಾವ ವಿಷಯ ನಮಗೆ ಸೂಕ್ತವಾದುದು

ಮತ್ತು ಯಾವುದು ಸೂಕ್ತವಲ್ಲ? ನಮ್ಮ ಲಾಭ-ನಷ್ಟಗಳು ಯಾವ ವಿಷಯದಲ್ಲಿವೆ ಎಂಬುದು ನಮಗೆ ದೃಢವಾಗಬೇಕಿದೆ. ನಮಗೆ ಆ ಅರಿವು ಅಗತ್ಯವಾಗಿದೆ.

ಸೃಷ್ಟಿಕರ್ತನ ಕುರಿತ ನಮ್ಮ ಪರಿಕಲ್ಪನೆ ಬರೇ ಪರಿಕಲ್ಪನೆಯಲ್ಲ, ವಾಸ್ತವವಾಗಿದ್ದರೆ ಅವನು ನಮ್ಮ ಜೀವನದ ಈ ಮೂಲಭೂತ ಆವಶ್ಯಕತೆಯನ್ನು ತಿಳಿಸಿಕೊಡಲಿಕ್ಕಾಗಿ ನಿಶ್ಚಯವಾಗಿ ವ್ಯವಸ್ಥೆ ಮಾಡಿರುತ್ತಾನೆ ಎಂದಾಯಿತು. ಈಗ ನಾವು ಆ ವ್ಯವಸ್ಥೆ ಯಾವುದೆಂದು ಹುಡುಕುವ ಕೆಲಸ ಮಾಡಬೇಕು ಮತ್ತು ಒಂದು ವೇಳೆ ಅವನು ಈ ವ್ಯವಸ್ಥೆಯನ್ನು ಇರಿಸಿಲ್ಲವೆಂದಾದರೆ ನಮ್ಮ ಪರಿಕಲ್ಪನೆ ಬರೇ ಊಹೆಯಾಗಿ ಬಿಡುವುದು ಮತ್ತು ಅದರಲ್ಲಿ ವಾಸ್ತವಾಂಶ ಇಲ್ಲ ಎಂದಾಗುತ್ತದೆ.

ಹಾಗೆಂದಾದರೆ ಈ ಸಂಕಲ್ಪವನ್ನು ಮನಸ್ಸು-ಮಸ್ತಿಷ್ಕದಲ್ಲಿ ಇಟ್ಟುಕೊಳ್ಳುವುದರಿಂದ ನಮಗೆ ಏನು ಪ್ರಯೋಜನ? ನಮ್ಮ ಈ ಹಾರೈಕೆ ಮತ್ತು ಆವಶ್ಯಕತೆ ಈಡೇರಬೇಕು ಎಂದಾದರೆ ಬರೇ ಅದನ್ನು ಮೆದುಳಲ್ಲಿ ಇಟ್ಟುಕೊಳ್ಳುವುದರಿಂದ ಪ್ರಯೋಜನವಿಲ್ಲ. ಅದು ಈಡೇರಿಸಿಕೊಳ್ಳುವುದಕ್ಕಾಗಿ ಮುಕ್ತ ಮತ್ತು ಗಂಭೀರವಾಗಿ ಆ ಸಂದೇಶ ಎಲ್ಲಿದೆ ಎಂದು ಹುಡುಕುವುದು ಅನಿವಾರ್ಯ.

ಗಮನಿಸೋಣ: ಒಂದು ವೇಳೆ ವಿಶ್ವಕ್ಕೊಬ್ಬ ಸೃಷ್ಟಿಕರ್ತ ಇದ್ದರೆ, ಅವನು ಈ ಪ್ರಮುಖ ಆವಶ್ಯಕತೆಯನ್ನು ಈಡೇರಿಸಿಕೊಟ್ಟಿರಬಹುದು. ನಮ್ಮ ಈ ಆವಶ್ಯಕತೆಗಳನ್ನು ಯಾವುದಾದರೂ ವಿಧದಲ್ಲಿ ತನ್ನ ಪರಿಚಯವನ್ನು ಮಾಡಿಸಿರಬಹುದು. ಅಥವಾ ಯಾವುದಾದರೂ ವಿಧಾನದಲ್ಲಿ ತನ್ನ ಸಂದೇಶವನ್ನು ಕಳುಹಿಸಿಕೊಟ್ಟಿರಬಹುದು. ಇದಕ್ಕೆ ಅವನು ಯಾವ ವಿಧಾನವನ್ನು ಆಯ್ದುಕೊಂಡಿರಬಹುದು. ಅದು ನೈಸರ್ಗಿಕ ವಾಗಿಯೂ ಪ್ರಾಯೋಗಿಕವಾಗಿಯೂ ಕರ್ಮದ ಮೂಲಕವೂ ಇರಬೇಕಾಗಿದೆಯಷ್ಟೇ ಮತ್ತು ಸ್ಪಷ್ಟ ವಿಧಾನದಿಂದ ತಲುಪುವ ವ್ಯವಸ್ಥೆಯೂ ಇರಬೇಕು. ಅಧಿಕೃತವೂ ಸಂದೇಹ ರಹಿತವಾದುದೂ ಆಗಿರಬೇಕು. ಜೊತೆಗೆ ಅವನ ಸಂದೇಶ ಸುಲಭವಾಗಿ ಅರ್ಥಮಾಡಿಕೊಳ್ಳುವಂತಿರಬೇಕು. ಮನವರಿಕೆಯಾಗುವಂತಿರಬೇಕು.

ಗಮನಿಸುವುದಾದರೆ, ಸಂದೇಶ ರವಾನೆಯ ವಿವಿಧ ವಿಧಾನಗಳಲ್ಲಿ ಮೂರು ವಿಧಾನಗಳು ತಿಳಿದು ಬರುತ್ತದೆ. ಈ ಮೂರು ವಿಧಾನಗಳ ವಿಶ್ಲೇಷಣೆಯನ್ನು ಅವ ಲೋಕಿಸಿದರೆ ಯಾವುದು ಹೆಚ್ಚು ಸೂಕ್ತವಾದುದು ಪ್ರಾಯೋಗಿಕ ಮತ್ತು ಸೃಷ್ಟಿಕರ್ತನು ಆಯ್ದುಕೊಂಡಿರಬಹುದು ಎಂದು ನೋಡೋಣ. ಮತ್ತು ಅದನ್ನು ಹುಡುಕೋಣ.

ಯಾವ ವಿಧಾನದಲ್ಲಿ ಸೃಷ್ಟಿಕರ್ತನು ಮನುಷ್ಯರ ಕಡೆಗೆ ತನ್ನ ಸಂದೇಶ ಕಳುಹಿಸಿರಬಹುದು?

ಮನುಷ್ಯರ ಕಡೆಗೆ ತನ್ನ ಸಂದೇಶ ಮತ್ತು ಪರಿಚಯವನ್ನು ಬೌದ್ಧಿಕ ಮತ್ತು

ಪ್ರಾಯೋಗಿಕವಾದ 3 ವಿಧಾನಗಳಿಂದ ಸೃಷ್ಟಿಕರ್ತನು ತಲುಪಿಸಿರಬಹುದಾಗಿದೆ.

1) ಮೊದಲ ವಿಧಾನ, ಸೃಷ್ಟಿಕರ್ತನು ಮನುಷ್ಯರಿಗೆ ಆವಶ್ಯಕವಿರುವ ಸಂದೇಶವನ್ನು ವೈಯಕ್ತಿಕ ಮತ್ತು ಸಾಮೂಹಿಕ ರೂಪದಲ್ಲಿ ವಿವರಿಸಿರಬಹುದು ಎಂಬುದು. ಇದನ್ನು ಮೇಲೆ ಉಲ್ಲೇಖಿಸಲಾಗಿದೆ.

2) ಇನ್ನೊಂದು ವಿಧಾನ, ಸೃಷ್ಟಿಕರ್ತ ಖುದ್ದಾಗಿ ಮನುಷ್ಯರೆಡೆಗೆ ಬಂದು ಅವರಿಗೆ ಈ ಪ್ರಾಮುಖ್ಯ ಮತ್ತು ಆವಶ್ಯಕವಾದ ಸಂದೇಶಗಳನ್ನು ನೀಡುವುದು.

3) ಮೂರನೇ ವಿಧಾನ ಸಾಮಾನ್ಯವಾಗಿ ಇದಾಗಿರಬಹುದು. ಮನುಷ್ಯರಿಂದಲೇ ಮಾನಸಿಕ ಮತ್ತು ದೈಹಿಕ ಹಾಗೂ ಕರ್ಮದಿಂದ ಸಚ್ಚರಿತನಾದ ಓರ್ವ ವ್ಯಕ್ತಿಯ ಮೂಲಕ ಸೃಷ್ಟಿಕರ್ತನು ತನ್ನ ಸಂದೇಶಗಳನ್ನು ತಲುಪಿಸುವುದು. ಹೀಗೆ ಸೃಷ್ಟಿಕರ್ತನು ಆಯ್ದುಕೊಂಡ ವ್ಯಕ್ತಿ ಎಂದೂ ಸುಳ್ಳು ಹೇಳದವನು ಮತ್ತು ಸತ್ಯಸಂಧನೂ ವಿಶ್ವಸ್ಥನೆಂದೂ ಪ್ರಸಿದ್ಧನು. ಯಾರಿಗೂ ಎಂದೂ ಮೋಸ ಮಾಡದವನು. ಜವಾಬ್ದಾರಿಯ ಪ್ರಜ್ಞೆ ಇರುವವನು ಮತ್ತು ಪ್ರಪಂಚದ ಸಾಮ್ರಾಟನಿಗೆ ಉತ್ತರಿಸಬೇಕಿದೆ ಎಂಬ ವಿಶ್ವಾಸ ಇರುವಂತಹನಾಗಿರುವನು. ಇಂತಹ ವ್ಯಕ್ತಿಯ ಮೂಲಕ ಈ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಈ ವ್ಯಕ್ತಿ ಜನರ ನಡುವೆ ಬೆರೆಯುವವನಾಗಿದ್ದು ಅವನ ಮಾತುಗಳಲ್ಲಿ ಜನರು ಕೂಡಾ ಆಸಕ್ತಿ ವಹಿಸುತ್ತಾರೆ. ಅವನು ಅವರ ಸೇವೆ ಮಾಡುತ್ತಿರುವವನು. ಇಂತಹ ಗುಣವಿಶೇಷತೆಗಳಿಂದ ಸಮಾಜದಲ್ಲಿ ಪ್ರಸಿದ್ಧನಾಗಿದ್ದು ಜನರಿಗೆ ನಿಕಟ ಪರಿಚಿತನಾಗಿರುವವನು. ಮನುಷ್ಯರ ಮನಸ್ಸಿನಲ್ಲಿ ಇಂತಹ ವ್ಯಕ್ತಿತ್ವವು ಅಚ್ಚೊತ್ತಿ ಉಳಿಯುತ್ತದೆ. ಅವರನ್ನು ಜನರು ಪ್ರೀತಿಸುವರು ಮತ್ತು ಗೌರವಿಸುವರು. ಅವರ ಮಾತಿಗೆ ಮಹತ್ವ ನೀಡುತ್ತಾರೆ. ಸೃಷ್ಟಿಕರ್ತನು ಇಂತಹ ಗುಣವಿಶೇಷತೆ ಹೊಂದಿರುವ ವ್ಯಕ್ತಿಯ ಮೂಲಕ ಸಂದೇಶ ತಲುಪಿಸುವ ವ್ಯವಸ್ಥೆ ಮಾಡಬಹುದಾಗಿದೆ.

ಈ ಸಂದೇಶವಾಹಕರು ಸೃಷ್ಟಿಕರ್ತನ ಸಂದೇಶವನ್ನು ತಮ್ಮ ಸುತ್ತಲಿರುವ ಮನುಷ್ಯರಿಗೆ ತಲುಪಿಸಿ ತಿಳಿಸಿಕೊಡುತ್ತಾರೆ. ಅವರು ಪ್ರತಿಯೊಂದು ವಿಷಯವನ್ನು ಸ್ಪಷ್ಟವಾಗಿ ವಿವರಿಸುತ್ತಾರೆ. ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸ್ವಯಂ ಕರ್ಮವೆಸಗಿ ಅತ್ಯುತ್ತಮ ಮಾದರಿಯಾಗುತ್ತಾರೆ. ಸೃಷ್ಟಿಕರ್ತನ ಕಡೆಯಿಂದ ಕೊಡಲಾದ ಶಿಕ್ಷಣದಂತೆ ಕರ್ಮವೆಸಗಿದಾಗ ಅದರ ಸರಿಯಾದ ಮತ್ತು ಪ್ರಾಯೋಗಿಕ ರೂಪ ಪ್ರಖರವಾಗಿ ಮುಂದೆ ಬರುತ್ತದೆ. ನಂತರ ಒಬ್ಬರ ನಂತರ ಇನ್ನೊಬ್ಬರಿಗೆಂಬಂತೆ ಸೃಷ್ಟಿಕರ್ತನ ಸಂದೇಶ ವ್ಯಾಪಿಸುತ್ತದೆ. ಸಂದೇಶದ ಮಹತ್ವ ಮತ್ತು ಆವಶ್ಯಕತೆಯ ಕಾರಣದಿಂದ ಹೆಚ್ಚು ಹೆಚ್ಚು ಜನರಿಗೆ ಅದು ಹರಡುತ್ತಾ ಹೋಗುತ್ತಿರುತ್ತದೆ. ಈ

ಸಂದೇಶ ಪ್ರತಿಯೊಂದು ಸ್ಥಳ ಕಾಲಗಳ ಜನರಿಗೆ ಆವಶ್ಯಕವಾದುದಾಗಿದೆ. ಆದುದರಿಂದ ಈ ಸಂದೇಶವು ಕೇವಲ ಸಂದೇಶವಾಹಕರ ಸುತ್ತಲಿರುವ ಜನರಿಗೆ ಮಾತ್ರ ಹರಡಿದರೆ ಸಾಲುವುದಿಲ್ಲ. ಇಡೀ ಪ್ರಪಂಚದ ಸಕಲ ಮನುಷ್ಯರೆಡೆಗೂ ತಲುಪಬೇಕಾದ ಸಂದೇಶವಿದು. ಇಷ್ಟೇ ಅಲ್ಲ, ಮನುಷ್ಯರ ಮುಂದಿನ ಪೀಳಿಗೆಗೂ ಈ ಸಂದೇಶ ವ್ಯಾಪಿಸಬೇಕಾಗಿದೆ. ಆದ್ದರಿಂದ ಸೃಷ್ಟಿಕರ್ತನು ಈ ಆವಶ್ಯಕತೆ ಈಡೇರುವಂತಾಗಲು ಖಂಡಿತ ವ್ಯವಸ್ಥೆಯನ್ನು ಮಾಡಿರಬಹುದು.

ಸಂದೇಶ ರವಾನೆಯ ವಿಧಾನದಲ್ಲಿ ಮೊದಲ ಎರಡು ರೀತಿಗಳು ಎಲ್ಲಿಯೂ ಕಾಣ ಸಿಗುವುದಿಲ್ಲ. ಕೇಳಿಯೂ ಇಲ್ಲ. ಯಾಕೆಂದರೆ ಸೃಷ್ಟಿಕರ್ತನೂ ವಿಶ್ವ ಸಾಮ್ರಾಟನೂ ಆದವನ ಘನತೆಗೆ ಆ ಎರಡು ರೀತಿಗಳು ಒಪ್ಪುವುದಿಲ್ಲ. ಆದುದರಿಂದ ಆ ವಿಧಾನ ವನ್ನು ಉಪಯೋಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಯಾಕೆಂದರೆ ಅವು ಸಹಜವೋ ಪ್ರಾಯೋಗಿಕವೋ ಅಲ್ಲ.

ಆದುದರಿಂದ ಸೃಷ್ಟಿಕರ್ತನು ಮೂರನೇ ವಿಧಾನವನ್ನು ಮಾನವ ಇತಿಹಾಸದಲ್ಲಿ ತನ್ನ ಪರಿಪೂರ್ಣ ಜ್ಞಾನ ಮತ್ತು ಯುಕ್ತಿಯಂತೆ ಆಯ್ದುಕೊಂಡಿರುವುದು ಕಂಡು ಬರುತ್ತದೆ. ಅಂದರೆ ಮನುಷ್ಯನ ಇತಿಹಾಸದಲ್ಲಿ ಅದು ಉಲ್ಲೇಖವಿದೆ. (ಮೂಸಾ, ಈಸಾ, ಇಬ್ರಾಹೀಮರಂತಹ ಶ್ರೇಷ್ಠ ವ್ಯಕ್ತಿಗಳನ್ನೇ ಸೃಷ್ಟಿಕರ್ತನು ಸಂದೇಶವಾಹಕರನ್ನಾಗಿ ಮಾಡಿರುವನು.)

ಈ ವಿಧಾನವೇ ಸಹಜವಾದುದು. ಪ್ರಾಯೋಗಿಕ ಮತ್ತು ಸರಿಯಾದುದು ಯಾವುದು ಮನಸ್ಸಿಗೆ ಒಪ್ಪುವುದೋ ಅದರಲ್ಲಿ ನಂಬಿಕೆ ಸಂತೃಪ್ತಿ ಮೂಡುತ್ತದೆ. ಸಂದೇಶ ತಲುಪಿಸುವ ದಕ್ಷ ವಿಧಾನ ಒಬ್ಬ ಮನುಷ್ಯನನ್ನು ಆಯ್ದುಕೊಳ್ಳುವುದು ಮತ್ತು ಅವನಿಗೆ ಮಾರ್ಗದರ್ಶನ ಮಾಡುವುದು. ಅವನನ್ನು ಇತರ ಮನುಷ್ಯರಿಗೆ ಮಾರ್ಗದರ್ಶನ ಮಾಡುವುದಕ್ಕಾಗಿ ಕಳುಹಿಸಿ ಕೊಡುವುದು. ಮನುಷ್ಯರ ಮಾತುಗಳನ್ನು ಮನುಷ್ಯರೇ ಸರಿಯಾಗಿ ಅರ್ಥಮಾಡಿಕೊಳ್ಳುವರಷ್ಟೇ. ಕರ್ಮದ ಮೂಲಕ ತೋರಿಸಿ ಕೊಡುವ ಮಾದರಿಯನ್ನು ಇತರರು ಬಹಳ ಸುಲಭವಾಗಿ ಕಲಿತು ಅನುಸರಿಸುವರು. ಅವರಿಗೆ ತಮ್ಮ ಜೀವನದಲ್ಲಿ ಉನ್ನತ ಮತ್ತು ಮಹತ್ವದ ಬದಲಾವಣೆ ಅನುಭವವಾಗುತ್ತದೆ. ಈ ರೀತಿ ಬದಲಾವಣೆಗೆ ಒಗ್ಗಿದವರೇ ಅಭಿನಂದನಾರ್ಹರು ಮತ್ತು ಈ ವಿಧಾನವು ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ಸೃಷ್ಟಿಕರ್ತನ ಸಂದೇಶವನ್ನು ಮನುಷ್ಯರಿಗೆ ತಲುಪಿಸುತ್ತದೆ. ಸೃಷ್ಟಿಕರ್ತನೇ ಸ್ವಯಂ ಆತ ಅಥವಾ ಮಾನವೇತರರ ಮೂಲಕ ಸಂದೇಶ ತಲುಪಿಸುವುದರಿಂದ ಈ ಉದ್ದೇಶ ಸಾಧಿಸಲು ಸಾಧ್ಯವಿಲ್ಲ.

ಮನುಷ್ಯನ ಸ್ವಭಾವದಲ್ಲಿ ಸಂದೇಶ ನಿಜವಾದ ಅರ್ಥದಲ್ಲಿ ಅರಿತುಕೊಳ್ಳುವಲ್ಲಿ

ಈ ಕೆಳಗೆ ವಿವರಿಸಿದ ಗುಣಲಕ್ಷಣಗಳು ಪ್ರಮುಖವಾಗಿದೆ. ಈ ಸದ್ಗುಣಗಳಿಂದಾಗಿ ಪ್ರವಾದಿತ್ವವು ಹೆಚ್ಚು ವಿಶ್ವಾಸಾರ್ಹವೂ ಅಧಿಕೃತವೂ ಆಗುತ್ತದೆ.

ಒಂದು, ವ್ಯಕ್ತಿಯು ಅತ್ಯಂತ ವಿಶ್ವಾಸಾರ್ಹ ಮತ್ತು ಪ್ರಾಮಾಣಿಕನಾಗಿರುವುದು. ಎರಡನೆಯದು, ಅವನ ಸತ್ಯಸಂಧತೆಯನ್ನು ನಿರಾಕರಿಸಲು ಸಾಧ್ಯವಿಲ್ಲದಿರುವುದು. ಈ ಕಾರಣದಿಂದ ಅವನು ಪರೋಕ್ಷ ಜ್ಞಾನಿ, ಆಲಿಸುವವನು ಮತ್ತು ವೀಕ್ಷಿಸುವವನು ಆದ ಸೃಷ್ಟಿಕರ್ತನ ಮುಂದೆ ಉತ್ತರದಾಯಿ ಎಂಬ ಹೊಣೆಗಾರಿಕೆಯಿಂದ ಸೃಷ್ಟಿಕರ್ತನ ಸಂದೇಶವನ್ನು ಒಂದು ಅಮಾನತಿನ ರೂಪದಲ್ಲಿ ಜನರಿಗೆ ತಲುಪಿಸುವವನಾಗಿರುತ್ತಾನೆ.

2) ಈ ಗುಣವೈಶಿಷ್ಟ್ಯತೆಗಳ ಆಧಾರದಲ್ಲಿ ಪ್ರವಾದಿತ್ವ ವಾದಿಯ ಮಾತುಗಳನ್ನು ಪೂರ್ಣ ವಿಶ್ವಾಸ ಮತ್ತು ಸಂಪೂರ್ಣ ಭರವಸೆಯಿಂದ ಜನರು ಸ್ವೀಕರಿಸಬಹುದು. ಅವನ ಸಂಪೂರ್ಣ ವ್ಯಕ್ತಿತ್ವ ಅಧಿಕೃತವಾಗಿದ್ದು. ಆದುದರಿಂದ ಸಂದೇಶವಾಹಕನ ಮಾತು ಮತ್ತು ಕೃತಿಗಳನ್ನು ಸ್ವೀಕಾರಾರ್ಹವಾದ ಮಾದರಿ ಮತ್ತು ಅಧಿಕೃತ ಮಾನದಂಡದ ಎಂಬ ರೂಪದಲ್ಲಿ ಜನರು ಅವಲಂಬಿಸುತ್ತಾರೆ.

ಈ ವಿಧಾನ ಸೃಷ್ಟಿಕರ್ತನು ತನ್ನ ದಾಸರಿಗೆ ತನ್ನ ಪರಿಚಯವನ್ನು ತಲುಪಿಸುವ ಯುಕ್ತಿಯುತವೂ ಸರಿಯಾದ ವಿಧಾನವೂ ಆಗಿದ್ದು ಅವರನ್ನು ಈ ಪ್ರಪಂಚದಲ್ಲಿ ಸೃಷ್ಟಿಸಲಾದ ಉದ್ದೇಶವನ್ನು ಮತ್ತು ನ್ಯೂನತೆ ಲೋಪಗಳಿಲ್ಲದ ಸ್ವಾಭಾವಿಕ ಜೀವನ ವಿಧಾನವನ್ನು ತಿಳಿಸಿಕೊಡುವ ವಿಧಾನವಾಗಿದೆ ಮತ್ತು ಸೃಷ್ಟಿಕರ್ತನ ಸಂದೇಶವನ್ನು ಜನರ ಬಳಿಗೆ ತಲುಪಿಸುವ ವಿಧಾನವಾಗಿದೆ. ಜನರ ಅಸ್ತಿತ್ವ, ಪ್ರಪಂಚದಲ್ಲಿ ಅವರಿಗಿರುವ ಸ್ಥಾನಮಾನ ತಿಳಿಸಿಕೊಡುವ ಅತ್ಯುತ್ತಮ ಮತ್ತು ಲೋಪರಹಿತ ವಿಧಾನವಾಗಿದೆ. ಸಚ್ಚಾರಿತ್ರ್ಯದ ಜೀವನ ಮತ್ತು ಮಧ್ಯಮ, ನ್ಯಾಯಯುತ, ಕರುಣೆಯ, ಪರೋಪಕಾರಿ ಜೀವನ ರೀತಿಯನ್ನು ತೃಪ್ತಿಕರವೂ ಮತ್ತು ನಂಬಲರ್ಹವೂ ಅತ್ಯುತ್ತಮವೂ ಆಗಿ ತಿಳಿಸಿಕೊಡುವ ವಿಧಾನ ಇದಾಗಿದೆ.

ಸಂದೇಶದ ಮಾಧ್ಯಮ ಮತ್ತು ಸಂದೇಶದ ಅಧಿಕೃತತೆ

ಸೃಷ್ಟಿಕರ್ತನಿಂದ ದಾಸರಿಗೆ ಸಂದೇಶ ಬರುತ್ತದೆ. ಈ ಸಂದೇಶದಿಂದ ಸೃಷ್ಟಿಕರ್ತನಿದ್ದಾನೆ ಎಂಬುದು ದೃಢವಾಯಿತು. ಆದರೆ ಈ ಸಂದೇಶ ಸೃಷ್ಟಿಕರ್ತನ ಕಡೆಯಿಂದ ಬಂದ ಅಧಿಕೃತ ಸಂದೇಶವೆಂದು ಹೇಗೆ ನಂಬುವುದು? ಮಾತ್ರವಲ್ಲ ಇದು ಸೃಷ್ಟಿಕರ್ತನ ಸಂದೇಶ ಎಂದು ವಾದಿಸುತ್ತಿರುವ ವ್ಯಕ್ತಿ ನಿಜವಾದ ಸಂದೇಶ ವಾಹಕನೇ ಎಂಬ ಕುರಿತು ಅನ್ವೇಷಣೆ ಆವಶ್ಯಕವಾಗಿದೆ.

ನಿಜವಾಗಿಯೂ ಸೃಷ್ಟಿಕರ್ತನ ಕಡೆಯಿಂದ ಬಂದ ಸಂದೇಶವೇ ಆಗಿದ್ದರೆ,

ಆಗಲೇ ಅದನ್ನು ತಂದ ಮಾಧ್ಯಮದ ಅಧಿಕೃತತೆ ಕೂಡಾ ದೃಢಪಡುತ್ತದೆ. ಪರಿಣಾಮತಃ ಸಂದೇಶ ಅಧಿಕೃತವಾಗಿದೆ ಎಂದು ಕೂಡ ಜನರ ಮುಂದೆ ದೃಢ ವಾಯಿತು. ನಂತರ ಯಾರು ಸಂದೇಶ ತಂದದ್ದು ಮತ್ತು ಆ ವ್ಯಕ್ತಿಯ ಸತ್ಯಸಂಧತೆ ಹೇಗಿದೆ ಎಂಬ ಕುರಿತು ಅನ್ವೇಷಣೆ ನಾವು ನಡೆಸಬೇಕಾಗುತ್ತದೆ. ಇದರ ಜೊತೆಗೆ ಅವನು ತಂದಿರುವ ಆ ಸಂದೇಶದ ಸತ್ಯತೆಯನ್ನು ಕೂಡ ಅನ್ವೇಷಿಸಬೇಕಾಗುತ್ತದೆ. ಈ ರೀತಿಯಾಗಿ ಏಕಕಾಲದಲ್ಲಿ ಸಂದೇಶ ತಂದ ವ್ಯಕ್ತಿಯ ಸತ್ಯಸಂಧತೆ ಮತ್ತು ಆತ ಸುಳ್ಳುವಾದಿಯಾದರೆ ಅವನ ಸುಳ್ಳು ಕೂಡಾ ಇನ್ನಷ್ಟು ಪ್ರಖರಗೊಳ್ಳುತ್ತದೆ.

ಒಮ್ಮೆ ನಮ್ಮಲ್ಲಿ ತೃಪ್ತಿಯಾದರೆ ಆನಂತರ ಆ ವ್ಯಕ್ತಿ ಮತ್ತು ಸೃಷ್ಟಿಕರ್ತನ ನಡುವಿನ ಸಂಬಂಧದ ಬಗ್ಗೆ ವಿಶ್ವಾಸ ಮೂಡುತ್ತದೆ. ಯಾಕೆಂದರೆ ಆ ವ್ಯಕ್ತಿ ತಂದ ಗ್ರಂಥದಲ್ಲೇ ವಿವರ ಇದೆ. ಆದ್ದರಿಂದ ಆ ಗ್ರಂಥದ ಅಧ್ಯಯನದಿಂದ ಸೃಷ್ಟಿಕರ್ತ ಮತ್ತು ಅವನ ಪ್ರವಾದಿಯ ನಡುವಿನ ಸಂಬಂಧ, ಸಂಪರ್ಕಗಳು ಅಧ್ಯಯನ ನಡೆಸಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅಂದರೆ ಪ್ರವಾದಿ ಮತ್ತು ಸೃಷ್ಟಿಕರ್ತನ ನಡುವೆ ಇರುವ ಸಂಪರ್ಕದ ಕೊಂಡಿ ಅವರು ತಂದ ಗ್ರಂಥಧ ಮೂಲಕ ತಿಳಿದು ಬರುತ್ತದೆ. ಅದು ಕೂಡ ಬಹಳ ಸುಲಭ ಮತ್ತು ಪೂರ್ಣ ತೃಪ್ತಿಯಿಂದ ಮತ್ತು ಅಷ್ಟೇ ವಿಶ್ವಾಸಯುತವಾಗಿ ನಮಗೆ ಬಗೆಹರಿಯುತ್ತದೆ.

ಒಂದು ವೇಳೆ ಈ ವ್ಯಕ್ತಿ ಮತ್ತು ಅವನ ಸಂದೇಶವು ನಂಬಿಕೆಗೆ ಅರ್ಹ ಅಲ್ಲವೆಂದು ನಮಗೆ ತೋಚಿದರೆ, ಆಗ ನಮ್ಮ ಮುಂದೆ ಅಧಿಕೃತತೆಯ ಪ್ರಶ್ನೆ ಉದ್ಭವಿಸುತ್ತದಷ್ಟೇ. ಹೀಗಾದ ಮೇಲೆ ನಮ್ಮ ಅನ್ವೇಷಣೆಯಿಂದ ಏನು ಪ್ರಯೋಜನ ಉಂಟು? ಅಂದರೆ ಈ ಪ್ರವಾದಿತ್ವವಾದಿಯ ಬಳಿಗೆ ಸೃಷ್ಟಿಕರ್ತನ ಸಂದೇಶ ಹೇಗೆ ಮತ್ತು ಯಾವ ರೀತಿ ಬಂತು ಎಂದು ಶೋಧಕ್ಕಿಳಿಯುವುದು ಕೇವಲ ವ್ಯರ್ಥ ಮತ್ತು ಸಮಯ ವ್ಯಯ ಮಾತ್ರ ಆಗುತ್ತದೆ.

ಹಾಗಿದ್ದರೆ ಅನ್ವೇಷಣೆಯ ಆವಶ್ಯಕತೆ ಯಾಕೆ ಬೇಕು? ವಿಶ್ವದ ಸೃಷ್ಟಿಕರ್ತನು ಯಾವುದೇ ಕಾರ್ಯಕ್ರಮಗಳ ಮೂಲಕ ಜನರಿಗೆ ತನ್ನ ಪ್ರವಾದಿಯನ್ನು ಪರಿಚಯಿಸುವು ದಿಲ್ಲ. ಬದಲಾಗಿ ಸ್ವತಃ ಪ್ರವಾದಿಗಳಿಗೇ ಜನರ ಮುಂದೆ ಹೋಗಿ ತಮ್ಮನ್ನು ಪರಿಚಯಿಸುವ ಹೊಣೆಯನ್ನು ಕೊಟ್ಟಿದ್ದಾನೆ ಎಂಬುದು ಮುಖ್ಯವಾಗಿ ಗಮನಿಸಬೇಕು. ಪ್ರವಾದಿಗಳೇ ತಮ್ಮನ್ನು ಪರಿಚಯಿಸಿಕೊಳ್ಳಲು ಸ್ವತಃ ಜನರ ಬಳಿ ಹೋಗುವುದು ಮತ್ತು ತಮ್ಮ ಪರಿಚಯವನ್ನು ಜನರ ಮುಂದಿಡುವುದ;. ನಾನು ನಿಮ್ಮ ಬಳಿಗೆ ಸೃಷ್ಟಿಕರ್ತನ ಸಂದೇಶ ತಂದಿದ್ದೇನೆ ಸ್ವೀಕರಿಸಿರಿ ಎನ್ನುವುದು. ನಾನು ವಿಶ್ವ ಸಾಮ್ರಾಟನ ಸಂದೇಶವಾಹಕನಾಗಿದ್ದೇನೆ. ಸೃಷ್ಟಿಕರ್ತನ ಸಂದೇಶ–ಆದೇಶಗಳನ್ನು

ಮತ್ತು ಬೋಧನೆಯನ್ನು ನಿಮ್ಮ ಬಳಿಗೆ ತಂದಿರುವೆನು ಮತ್ತು ನೀವು ಅದನ್ನು ಸ್ವೀಕರಿಸಿ ಎಂದು ಜನರಿಗೆ ಕರೆ ನೀಡುವರು. ಒಂದು ವೇಳೆ ಇದರಲ್ಲಿ ನೀವು ವಿಶ್ವಾಸ ಇಟ್ಟು ಸ್ವೀಕರಿಸಿದರೆ ವಿಜಯ ಹೊಂದುವಿರಿ. ನಿರಾಕರಿಸಿದರೆ ನೀವು ಸಂಪೂರ್ಣ ನಷ್ಟ ಹೊಂದುವಿರಿ ಎಂದು ಸಂದೇಶವಾಹಕರು ಎಚ್ಚರಿಸುವರು.

ಬೇರೆ ಬೇರೆ ದಾಸರೆಡೆಗೆ ಸೃಷ್ಟಿಕರ್ತನ ಸಂದೇಶ ತಲುಪುವ ಆವಶ್ಯಕತೆ ಇದ್ದಾಗ ಆಯ್ದ ವ್ಯಕ್ತಿಯನ್ನು ಸಂದೇಶವಾಹಕರನ್ನಾಗಿ ಮಾಡಲಾಗುತ್ತದೆ. ಒಂದು ವೇಳೆ ನಮ್ಮ ಅನ್ವೇಷಣೆಯಲ್ಲಿ ಸಂದೇಶವಾಹಕನೆಂದು ವಾದಿಸುವ ವ್ಯಕ್ತಿ ನಿಜವಾದ ಸಂದೇಶವಾಹಕ ಎಂದು ಸಾಬೀತುಗೊಂಡರೆ ಆ ಮೇಲೆ ಅವನು ತಂದ ಸಂದೇಶವು ಕೂಡ ನೈಜ ಸಂದೇಶವೆಂದು ಸಹಜವಾಗಿ ಸಾಬೀತು ಆಗುತ್ತದೆ. ಹೀಗೆ ಸಂದೇಶ ಮತ್ತು ಸಂದೇಶ ವಾಹಕರು ಜತೆಜತೆಯಾಗಿ ಸಾಗುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಸಂದೇಶ ಮತ್ತು ಸಂದೇಶವಾಹಕರು ಪರಸ್ಪರರಿಗೆ ಸ್ವಯಂ ಸಹಕಾರ, ಬೆಂಬಲ ಮತ್ತು ದೃಢೀಕರಣವೂ ಆಗಿರುತ್ತಾರೆ. ಹೀಗೆ ಇವು ಎರಡಲ್ಲಿ ಒಂದು ಸರಿ ಎಂದು ಸಾಬೀತಾದರೆ, ಸಹಜ ವಾಗಿ ಇನ್ನೊಂದು ತನ್ನಿಂತಾನೆ ಸರಿಯಾದದ್ದೆಂದು ಎಂದು ಸಾಬೀತುಗೊಳ್ಳುತ್ತದೆ. ಒಂದರಲ್ಲಿ ತೃಪ್ತಿ ಮೂಡಿದರೆ ಇನ್ನೊಂದರಲ್ಲಿಯೂ ಸಹಜವಾಗಿ ತೃಪ್ತಿ ದೊರೆಯುವುದು. ಒಂದು ವೇಳೆ ಸಂದೇಶವು ಸೃಷ್ಟಿಕರ್ತನ ಕಡೆಯಿಂದ ಬಂದದ್ದು ಎಂಬ ನಂಬಿಕೆ ಖಚಿತವಾಗುತ್ತದಾದರೆ ಖಂಡಿತವಾಗಿಯೂ ಅದನ್ನು ತಂದವರೂ ಸೃಷ್ಟಿಕರ್ತನ ಕಡೆ ಯಿಂದಿರುವವರೇ ಆಗಿಬಿಡುತ್ತಾರೆ. ಒಂದು ವೇಳೆ ಪ್ರವಾದಿತ್ವವಾದಿಯು ಸೃಷ್ಟಿಕರ್ತನ ನೈಜ ಪ್ರವಾದಿ ಎಂದು ನಮಗೆ ಖಚಿತವಾಯಿತು ಎಂದಾದರೆ ಸಹಜವಾಗಿ ಅವರು ಪ್ರಸ್ತುತ ಪಡಿಸುತ್ತಿರುವ ಸಂದೇಶ ಕೂಡ ಸೃಷ್ಟಿಕರ್ತನ ಕಡೆಯದ್ದೇ ಆಗಿರುತ್ತದೆ ಎಂದೂ ಖಚಿತವಾಗುತ್ತದೆ. ಹೀಗೆ ಈ ಸಂದೇಶ ರವಾನೆಯ ಸೃಷ್ಟಿಕರ್ತನ ಈ ವಿಧಾನ ಪ್ರವಾದಿತ್ವವಾದಿಗೂ ಅಭಿಸಂಬೋಧಿತರಿಗೂ ಅಂದರೆ ಸಂದೇಶ ನೀಡುವವರಿಗೂ ಅದನ್ನು ಸ್ವೀಕರಿಸುವ ಜನರಿಗೂ ಇದು ಬಹುದೊಡ್ಡ ಪರೀಕ್ಷೆಯಾಗಿದೆ.

ಪ್ರವಾದಿಗೆ ಜನರೊಡನೆ ತನ್ನನ್ನು ಸೃಷ್ಟಿಕರ್ತನ ಸಂದೇಶವಾಹಕ ಎಂದು ಪರಿಚಯಿಸುವುದು ಮತ್ತು ಸಂದೇಶವನ್ನು ತಲುಪಿಸುವುದು ಇನ್ನೊಂದೆಡೆ ಅಭಿಸಂಭೋದಿತರಿಗೂ ಪ್ರವಾದಿತ್ವವನ್ನು ವಾದಿಸುವ ವ್ಯಕ್ತಿಯು ನಿಜವಾಗಿ ದೇವನ ಪ್ರವಾದಿ, ಸಂದೇಶವಾಹಕ ಎಂದು ವಿಶ್ವಾಸ ಇರಿಸುವುದು ಮತ್ತು ಅವರ ಸಂದೇಶ ವನ್ನು ಸ್ವೀಕರಿಸುವುದು ಮತ್ತು ಅದರಂತೆ ಕರ್ಮವೆಸಗುವುದು ಈ ಹಂತಗಳು ಪ್ರವಾದಿಗೆ ಮತ್ತು ಅಭಿಸಂಬೋಧಿತರಿಗೆ ಬಹಳ ಕಷ್ಟದ ಹಂತಗಳು ಆಗಿವೆ.

ಯಾಕೆಂದರೆ ಸೃಷ್ಟಿಕರ್ತನ ಕಡೆಯಿಂದ ಈ ವ್ಯಕ್ತಿಯೇ ತನ್ನ ಸಂದೇಶವಾಹಕ

ಎಂದು ಘೋಷಿಸುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಅಂದರೆ ಯಾವ ವ್ಯಕ್ತಿಯನ್ನು ಸಂದೇಶವಾಹಕನಾಗಿ ಆಯ್ದುಕೊಳ್ಳಲಾಗಿದೆ ಮತ್ತು ನಿರ್ಧರಿಸಲಾಗಿದೆ. ಆ ವ್ಯಕ್ತಿಯನ್ನು ಸಂದೇಶವಾಹಕನಾಗಿ ಸ್ವೀಕರಿಸಿ ಘೋಷಿಸುವ ಒಂದು ವ್ಯವಸ್ಥೆಯನ್ನು ಪ್ರಪಂಚ ಸೃಷ್ಟಿಕರ್ತನು ಇರಿಸಿಲ್ಲ. ಇಂತಹದೊಂದು ವ್ಯವಸ್ಥೆಯು ಮಾನವ ಇತಿಹಾಸದಲ್ಲೇ ಎಂದೂ ಆಗಿಲ್ಲ, ಕಂಡು ಬಂದಿಲ್ಲ, ಕೇಳಲು ಸಾಧ್ಯವಾಗಿಲ್ಲ.

ಪ್ರಪಂಚ ಸೃಷ್ಟಿಕರ್ತನು ಈ ವ್ಯಕ್ತಿಯನ್ನು ಸಂದೇಶವಾಹಕನಾಗಿ ಆಯ್ದುಕೊಂಡಿದ್ದೇನೆ ಎಂಬುದಾಗಿ ತನ್ನ ಸಂದೇಶವಾಹಕರ ನಿಯೋಜನೆಯ ಕುರಿತು ಘೋಷಣೆ ಮಾಡುವುದಿಲ್ಲ. ಆದುದರಿಂದ ಸಂದೇಶವಾಹಕರು ಸ್ವಂತ ನೆಲೆಯಲ್ಲಿ ತಾನು ಸೃಷ್ಟಿಕರ್ತನ ಸಂದೇಶವಾಹಕನಾಗಿರುವೆ ಎಂದು ಜನರ ಮುಂದೆ ತಮ್ಮನ್ನು ಪರಿಚಯಿಸಿಕೊಳ್ಳುವುದು ಮತ್ತು ಸ್ವಂತ ನೆಲೆಯಲ್ಲಿ ಸಂದೇಶವನ್ನು ಜನರಿಗೆ ತಲುಪಿಸುವ ಹೊಣೆಗಾರಿಕೆಯನ್ನು ನಿರ್ವಹಿಸುವುದು ಅನಿವಾರ್ಯವೇ ಆಗಿದೆ.

ಆದ್ದರಿಂದ ತಾನು ಸೃಷ್ಟಿಕರ್ತನ ಸಂದೇಶವಾಹಕ ಎಂದು ಅವರು ಪೂರ್ಣ ವಿಶ್ವಾಸದಿಂದ ಘೋಷಿಸುತ್ತಾರೆ ಮತ್ತು ತಾನು ಪ್ರಸ್ತುತಪಡಿಸುತ್ತಿರುವುದು ಸೃಷ್ಟಿಕರ್ತನ ಸಂದೇಶ ಎಂದು ಘೋಷಿಸುತ್ತಾರೆ.

ಆದುದರಿಂದ ಅದನ್ನು ಸ್ವೀಕರಿಸಿರಿ. ಅದರಂತೆ ಕರ್ಮವೆಸಗಿರಿ. ಅದರಲ್ಲಿ ವಿಶ್ವಾಸ ವಿರಿಸಿ ಕರ್ಮವೆಸಗುವವರಿಗೆ ಶಾಶ್ವತ ಸ್ವರ್ಗವಿದೆ ಮತ್ತು ನಿರಾಕರಿಸುವವರಿಗೆ ಶಾಶ್ವತ ನರಕವಿದೆ. ಸ್ವರ್ಗ ಮತ್ತು ನರಕ ಇಲ್ಲಿ ಪರಿಣಾಮವಾಗಿದೆ. ಅಂದರೆ ವಿಶ್ವಾಸಿಗೆ ಸ್ವರ್ಗವೂ, ವಿಶ್ವಾಸ ಇರಿಸದೆ ಸಂದೇಶವನ್ನು ನಿರಾಕರಿಸುವವರಿಗೆ ಶಾಶ್ವತ ನರಕವೂ ಇದೆ. ಇಲ್ಲಿ ವಿಶ್ವಾಸಿ ಯಶಸ್ವಿಯಾಗುತ್ತಾನೆ ಮತ್ತು ಧಿಕ್ಕಾರಿ ವಿಫಲನಾಗುತ್ತಾನೆ. ಆದರೂ ಪ್ರವಾದಿಯು ತಂದ ಸಂದೇಶದಲ್ಲಿ ವಿಶ್ವಾಸ ಇರಿಸಿದವರೂ ಇರಿಸದವರೂ ಸೃಷ್ಟಿಕರ್ತನ ಪರೀಕ್ಷೆಗೆ ಒಳಪಡಲಿಕ್ಕಿದೆ.

ಹೀಗೆ ವಿಶ್ವಾಸವಿರಿಸಿದ ಮತ್ತು ವಿಶ್ವಾಸವಿರಿಸದ (ನಿರಾಕರಿಸಿದ) ಪ್ರತಿಯೊಬ್ಬರೂ ಪರೀಕ್ಷೆಗೊಳಗಾಗುವರೆಂದು ತಿಳಿಸಲಾಗಿದೆಯಷ್ಟೇ. ವಿಶ್ವಾಸ ಇರಿಸುವುದೆಂದರೆ ಸಂದೇಶ ವಾಹಕರು ತಂದ ಆದೇಶ ಮತ್ತು ಶಿಕ್ಷಣದ ಮುಂದೆ ತಲೆಬಾಗುವುದು. ಶರಣಾಗುವುದು ಎಂದು ಅರ್ಥ. ಅಂದರೆ ಸಂದೇಶವಾಹಕರು ಅನುವದನೀಯಗೊಳಿಸಿದ್ದು ಸ್ವೀಕರಿಸುವುದು ಮತ್ತು ಅವರು ನಿಷೇಧಿಸಿದುದನ್ನು ತೊರೆಯುವುದು. ಹೀಗೆ ವಿಶ್ವಾಸ ಇರಿಸಿದ ನಂತರ ಯಾರೂ ಮನಬಂದಂತೆ ಜೀವನ ನಡೆಸುವಂತಿಲ್ಲ ಮತ್ತು ತಮ್ಮ ಜೀವನವನ್ನು ವಿಶ್ವ ಸೃಷ್ಟಿಕರ್ತನ ಆಜ್ಞಾದೇಶ, ಶಿಕ್ಷಣಗಳ ಬೆಳಕಿನಲ್ಲೇ ಮುನ್ನಡೆಸಬೇಕು. ಅಂದರೆ ವಿಶ್ವಾಸ ಇರಿಸುವುದರೊಂದಿಗೆ ಸ್ವೇಚ್ಛೆಯ ಜೀವನ ಶೈಲಿ ಮುಗಿಯಿತು.

ಮುಂದಕ್ಕೆ ವಿಶ್ವಾಸಿಗೆ ಮನಬಂದಂತೆ, ತೋಚಿದಂತೆ ಬದುಕುವುದಕ್ಕಾಗುವುದಿಲ್ಲ. ಬದಲಾಗಿ ಸೃಷ್ಟಿಕರ್ತನ ಕರುಣೆ, ಸಹಾನುಭೂತಿ, ಧರ್ಮ ಮತ್ತು ಬೋಧನೆಗಳಂತೆ ಅವನು ಜೀವನ ನಡೆಸಬೇಕಾಗಿದೆ. ಸೃಷ್ಟಿಕರ್ತನ ಮತ್ತು ಸೃಷ್ಟಿಗಳ ನಡುವೆ ಇರುವ ಹಕ್ಕುಗಳು ಇವು. ಇದರಂತೆ ಬದುಕುವವರು ಸ್ವರ್ಗಕ್ಕೂ ಧಿಕ್ಕರಿಸುವವರು ನರಕಕ್ಕೂ ಹೋಗುವರು.

ಇಲ್ಲಿ ಹೀಗೊಂದು ಪ್ರಶ್ನೆ. ಅಂದರೆ ನಂಬುವಿಕೆ ಮತ್ತು ನಂಬದಿರುವಿಕೆ ಎಂಬ ಎರಡು ಮುಖ್ಯವಾದ ವಿಷಯಗಳು ನಮ್ಮ ಮುಂದೆ ನಿಲ್ಲುತ್ತವೆ. ಪ್ರವಾದಿ ತಂದ ಸಂದೇಶವನ್ನು ಸ್ವೀಕರಿಸುವುದಾದರೆ ಅವರು ಹೇಳಿದ್ದು, ಅವರು ಪ್ರಸ್ತುತಪಡಿಸಿದ್ದು ಅವುಗಳಿಗೆ ನಾವು ಸಂಪೂರ್ಣ ಅರ್ಪಿಸಿಕೊಳ್ಳಬೇಕು. ಅದರಂತೆ ಕರ್ಮವೆಸಗಬೇಕು. ನಂತರ ತಮ್ಮ ಇಚ್ಛೆ ಮತ್ತು ಸ್ವೇಚ್ಛೆಯ ಜೀವನ ಶೈಲಿ ತೊರೆಯಬೇಕಾಗುವುದು. ಬದುಕಿನ ವ್ಯವಹಾರಗಳು ಮತ್ತು ಮಾರ್ಗದರ್ಶನದ ಸಂಪೂರ್ಣ ಹೊಣೆ ಪ್ರವಾದಿಯ ಕೈಗೊಪ್ಪಿಸಬೇಕಾಗುತ್ತದೆ. ಅವರು ಸೃಷ್ಟಿಕರ್ತನ ಕಡೆಯಿಂದ ತಂದಿರುವ ಶಿಕ್ಷಣದಂತೆ ನಾವು ಜೀವನ ನಡೆಸಬೇಕು ಮತ್ತು ಕರ್ಮವೆಸಗಬೇಕು. ಅವರಿಗೆ ವಿಧೇಯರಾಗಿರಬೇಕು. ಹಾಗೆ ನಡೆದುಕೊಳ್ಳುವುದಿಲ್ಲ ಎಂದಾದರೆ ವಿಶ್ವ ಸಾಮ್ರಾಟನ ಅವಿಧೇಯತೆಯಾಗುವುದು. ಆದುದರಿಂದ ಪ್ರವಾದಿ ತಿಳಿಸಿಕೊಟ್ಟ ಸೃಷ್ಟಿಕರ್ತ ಮತ್ತು ಆರಾಧ್ಯನ ಪರಿಚಯವನ್ನು ನಾವು ಮನಸಾರೆ ಸ್ವೀಕರಿಸಬೇಕಿದೆ. ಪ್ರವಾದಿ ಕೂಡ ಬಂದಿರುವುದು ಸೃಷ್ಟಿಕರ್ತನ ಕಡೆಯಿಂದ ಮತ್ತು ಸೃಷ್ಟಿಕರ್ತನೇ ತನ್ನ ಗ್ರಂಥದಲ್ಲಿ ತನ್ನ ಪರಿಚಯವನ್ನು ಮಾಡಿದ್ದು. ಅದನ್ನೇ ಜನರ ಬಳಿಗೆ ಪ್ರವಾದಿ ತಂದದ್ದಾಗಿದೆ.

ಇನ್ನು ವಿಶ್ವಾಸ ಇರಿಸುವುದಿಲ್ಲ ಎಂದಾದರೆ ತಮ್ಮಿಚ್ಛೆಯಂತೆ ಜೀವಿಸಲು ನೀವು ಸ್ವತಂತ್ರರಾಗುವಿರಿ. ವಿಶ್ವಾಸ ಇರಿಸುವ ವಿಚಾರದಲ್ಲಿ ಯಾವುದೇ ಬಲವಂತವೂ ಇಲ್ಲ ಆಮಿಷಗಳಿಲ್ಲ. ಆದರೆ ಅಂತಿಮವಾಗಿ ಕೆಟ್ಟ ಪರಿಣಾಮ ಆಗುವುದು. ಈ ಪರಿಣಾಮ ಬಹಳ ಕಠಿಣತರವಾದದ್ದು. ನಿಮ್ಮ ನಿಟ್ಟಿನಲ್ಲಿ ಇದು ಪ್ರಮುಖ ಸಮಸ್ಯೆಯಾಗಿದ್ದು. ನಿರಾಕರಿಸುವವರು ಇದನ್ನು ಅನುಭವಿಸುವುದಕ್ಕೆ ತಯಾರಾಗಿರಬೇಕಾಗುತ್ತದೆ ಎಂದು ಪ್ರವಾದಿಗಳು ಜನರಿಗೆ ಎಚ್ಚರಿಕೆ ನೀಡುತ್ತಾರೆ. ವಿಷಯ ಇದು.

ಆದ್ದರಿಂದ ವಾದಿ (ಪ್ರವಾದಿತ್ವವಾದಿ) ನಿಜವಾದ ದೇವನ ಸಂದೇಶವಾಹರೇ ಅಥವಾ ಅಲ್ಲವೇ ಎಂದು ಸ್ಪಷ್ಟವಾಗಬೇಕು. ಅದಕ್ಕಾಗಿ ಅನ್ವೇಷಣೆ ಅಗತ್ಯ. ಹೀಗೆ ಅನ್ವೇಷಿಸುವುದರಿಂದ ಮಾತ್ರ ತೃಪ್ತರಾಗಲು ಸಾಧ್ಯ.

ಹೀಗಾಗಿ, ಅನ್ವೇಷಣೆಯನ್ನು ತುಂಬ ಆಳವಾಗಿ, ಗಂಭೀರವಾಗಿ, ಎಚ್ಚರಿಕೆಯಿಂದ ನಡೆಸುವುದು ಅಗತ್ಯವಾಗಿದೆ. ಯಾಕೆಂದರೆ ಇದರಲ್ಲಿಯೇ ವ್ಯಕ್ತಿಯ ಯಶಸ್ಸು ಮತ್ತು

ವೈಫಲ್ಯ ಇದೆ. ಆದ್ದರಿಂದ ಇದು ಜನರ ಯಶಸ್ಸು ಮತ್ತು ವಿಫಲತೆಗೆ ಸಂಬಂಧಿಸಿದ ವಿಷಯ. ಆದ್ದರಿಂದ ಅನ್ವೇಷಿಸುವ ವಿಚಾರವನ್ನು ಖಂಡಿತ ಹಗುರವಾಗಿ ಪರಿಗಣಿಸ ಬಾರದು. ಅನ್ವೇಷಿಸುವ ಹೊಣೆ ಅಭಿಸಂಬೋಧಿತನ ಮೇಲಿದೆ. ಅನ್ವೇಷಿಸಿ ತಿಳಿದು ಕೊಳ್ಳುವುದು ಅವನ ಹೊಣೆಗಾರಿಕೆಯಾಗಿದೆ. ಜನರು ತಮ್ಮ ಜಯ-ಅಪಜಯಗಳಿಗೆ ಸಂಬಂಧಿಸಿದ ವಿಚಾರವಾದ್ದರಿಂದ ಅವರೇ ಸ್ವಯಂ ಅನ್ವೇಷಿಸಿ ಅರಿತು ತೃಪ್ತರಾಗಲು ಪ್ರಯತ್ನಿಸಬೇಕು ಎಂದು ಅವರಿಗೆ ಅನ್ವೇಷಣೆಯ ಹೊಣೆಗಾರಿಕೆ ನೀಡಲಾಗಿದೆ. ಅರ್ಥಾತ್ ಇದು ಜನರಿಗೆ ಸಂಬಂಧಿಸಿದ ಜನರದೇ ಗಂಭೀರ ಸಮಸ್ಯೆ.

ಸಂದೇಶದ ಮಹತ್ವದ ಪ್ರಸ್ತುತತೆಯ ದೃಷ್ಟಿಯಿಂದ ಜನರು ಕೂಡ ಈ ವಿಷಯ ದಲ್ಲಿ ಅನ್ವೇಷಿಸಬೇಕಾಗಿದೆ ಎಂದು ಹೇಳಲಾಗುತ್ತಿದೆ. ಸಂದೇಶವಾಹಕನೆನ್ನುವ ವ್ಯಕ್ತಿ ಪ್ರಾಮಾಣಿಕ ಮತ್ತು ಸತ್ಯಸಂಧನೇ ಅಥವಾ ಸುಳ್ಳುವಾದಿಯೇ ಎಂಬ ಅನ್ವೇಷಣೆಯು ತುಂಬ ನಿರ್ಣಾಯಕಹಂತದ್ದು. ಹೀಗೆ ಮಾಡದಿದ್ದರೆ ಸುಳ್ಳುವಾದಿಯನ್ನು ಅನುಸರಿಸು ವಂತಾಗಿ ಜನರು ಸರ್ವನಾಶವಾಗುತ್ತಾರೆ.

ಈಗ ನಾವು ಪ್ರವಾದಿತ್ವವಾದಿ ಯಾವ ರೀತಿ ತನ್ನನ್ನು ಸಾಬೀತು ಮಾಡಬೇಕು ಮತ್ತು ಇವರೇ ಸೃಷ್ಟಿಕರ್ತನ ಪ್ರವಾದಿ ಎಂದು ಯಾವ ರೀತಿ ಅಭಿಸಂಬೋಧಿತರು (ಜನರು) ಅನ್ವೇಷಣೆ ನಡೆಸಬೇಕೆಂದು ಚರ್ಚಿಸೋಣ–

ವಾದಿಯ ಸಾಕ್ಷ್ಯ

ತನ್ನ ವಾದದ ಕುರಿತು (ನಾನು ಪ್ರವಾದಿ ಎಂದು) ನನ್ನ ಇಡೀ ಅಸ್ತಿತ್ವ (ಜೀವನ) ಮತ್ತು ನನ್ನ ಸಂಪೂರ್ಣ ಶಿಕ್ಷಣದ ಸಾಕ್ಷ್ಯ ನೀಡುತ್ತೇನೆ ಎಂದು ವಾದಿಯು ಹೇಳುತ್ತಾನೆ. ಅಂದರೆ ಪ್ರವಾದಿ ಆಗುವುದಕ್ಕಿಂತ ಮೊದಲ ಜೀವನ ಮತ್ತು ನಂತರದ ಜೀವನ ನಾನು ಸತ್ಯವಾದಿ ಎಂಬುದಕ್ಕೆ ಸಾಕ್ಷ್ಯವಹಿಸುತ್ತದೆ. ನಾನು ಸೃಷ್ಟಿಕರ್ತನ ನಿಜವಾದ ಪ್ರವಾದಿಯಾಗಿರುವೆನು. ತಾನು ಪ್ರಸ್ತುತಪಡಿಸುತ್ತಿರುವುದು ದೇವನ ಸಂದೇಶ, ಶಿಕ್ಷಣ ಮತ್ತು ಪರಿಚಯವಾಗಿದೆ. ಇದರಲ್ಲಿ ಯಾವ ಸಂದೇಹಕ್ಕೂ ಅವಕಾಶವಿಲ್ಲ. ಅದೇ ರೀತಿ ನನ್ನ ಜೀವನ, ನಾನು ತಂದಿರುವ ಶಿಕ್ಷಣ ಮತ್ತು ಅದರ ಪರಿಣಾಮವು ಎರಕ ಹೊಯ್ದಂತೆ ನನಗೆ ಸಾಕ್ಷ್ಯ ವಹಿಸುತ್ತದೆ. ಅದು ಸೂರ್ಯ ಪ್ರಕಾಶದಂತೆ ನಿಮ್ಮ ಕಣ್ಣ ಮುಂದಿದೆ. ಇದರಲ್ಲಿ ಸಂಶೋಧನೆ-ಅನ್ವೇಷಣೆಯನ್ನು ಸತ್ಯಸಂಧವಾಗಿ ಮತ್ತು ಗಂಭೀರವಾಗಿ ನೀವು ಮಾಡಿರಿ. ಯಾವ ತರದ ಪೂರ್ವಗ್ರಹ, ಸಂಕುಚಿತ ಮನೋಭಾವ ಮತ್ತು ಸಂಕುಚಿತ ದೃಷ್ಟಿಕೋನಗಳಿದ್ದಾಗ ಸರಿಯಾದ ದಾರಿ ಕಾಣಿಸದು. ಆದ್ದರಿಂದ ನೈಜ ಪ್ರೀತಿಯಿಂದ ಅನ್ವೇಷಣೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯವಾಗಿದೆ.

ನಾನು ಜನರ ನಡುವೆ ಜನರಂತೆ ಇರುತ್ತೇನೆ. ಅವರಂತೆ ವ್ಯವಹರಿಸುತ್ತೇನೆ. ಮದುವೆ ಮಾಡಿಕೊಂಡಿದ್ದೇನೆ. ಜನರ ದುಃಖ–ನೋವುಗಳಲ್ಲಿ ಪಾಲ್ಗೊಳ್ಳುತ್ತೇನೆ. ಅವರ ಸೇವೆಯನ್ನೂ ಮಾಡುತ್ತೇನೆ ಮತ್ತು ಕಷ್ಟಪಟ್ಟು ತ್ಯಾಗ ಸಹಿಸಿ ನಿಸ್ವಾರ್ಥವಾಗಿ ಸೃಷ್ಟಿಕರ್ತನ ಸಂದೇಶವನ್ನು ಜನರ ಮುಂದೆ ಪ್ರಸ್ತುತಪಡಿಸುತ್ತೇನೆ. ಸ್ವಯಂ ತನ್ನ ಜೀವನದಲ್ಲಿ ಕರ್ಮವೆಸಗಿ ನಿಮಗೆ ಮನವರಿಕೆ ಮಾಡುತ್ತಿದ್ದೇನೆ. ವಿಶ್ವಾಸ ಇರಿಸಿದವರ ಜೀವನವನ್ನು ಸಂಸ್ಕರಿಸುತ್ತೇನೆ ಮತ್ತು ಅವರ ಜೀವನದೊಳಗೆ ಆಗಿರುವ ಬದಲಾವಣೆಯ ಉತ್ತಮ ಪರಿಣಾಮವನ್ನು ಕರ್ಮದ ಮೂಲಕವಾಗಿ ಸ್ಪಷ್ಟವಾದ ರೀತಿಯಲ್ಲಿ ಮನವರಿಕೆ ಮಾಡಿಕೊಡುತ್ತೇನೆ. ಈ ರೀತಿ ತನ್ನ ಹಕ್ಕು ವಾದ ನಿಜವಾದುದು ಎಂದು ಸ್ಪಷ್ಟವಾದ ರೀತಿಯಲ್ಲಿ ಕರ್ಮಗಳ ಪರಿಣಾಮಗಳಿಂದ ಜನರು ಅರಿತುಕೊಳ್ಳಲಿ ಮತ್ತು ಅವರಲ್ಲಿ ನಂಬಿಕೆ ಬರಲಿ ಮತ್ತು ಜನರು ಅದನ್ನು ಸ್ವೀಕರಿಸಲಿ ಮತ್ತು ಸಂಕಷ್ಟದ ಜೀವನ ಮತ್ತು ಪರಲೋಕದ ವಿಫಲತೆಗಳಿಂದ ಪಾರಾಗಲಿ ಎಂಬ ಉದ್ದೇಶದಿಂದ ಮನವರಿಕೆ ಮಾಡಿಕೊಡುವೆನು. ನಾನು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ. ತ್ಯಾಗ, ಸಂಕಷ್ಟಗಳನ್ನು ಸಹಿಸುತ್ತೇನೆ. ಇದು ಕೂಡ ನನ್ನ ಪ್ರವಾದಿತ್ವಕ್ಕೆ ಮತ್ತು ಪ್ರಪಂಚ ಸೃಷ್ಟಿಕರ್ತನನ್ನು ಅರಿತುಕೊಳ್ಳುವುದಕ್ಕೆ ಇರುವ ನೈಜ ಸಾಕ್ಷ್ಯವಾಗಿದೆ.

ಹಕ್ಕುವಾದಿಯೊಳಗಿನ ಈ ಸತ್ಯದ ಪ್ರಖರತೆ ಮತ್ತು ಗಂಭೀರತೆಯ ಸಂದೇಶವು ಪ್ರವಾದಿತ್ವ ವಾದಿಯು ಒಬ್ಬ ಉನ್ನತ ಚಾರಿತ್ರ್ಯದ, ಉನ್ನತ ವಿಷಯಗಳೊಂದಿಗೆ ಸಂಬಂಧ ಇರಿಸಿಕೊಂಡಿರುವ ವ್ಯಕ್ತಿ ಎಂಬುದನ್ನು ಸೂಚಿಸುತ್ತದೆ ಮತ್ತು ಅವರು ಸಮಾಜದ ನಡುವೆ ಇರುವ ವ್ಯಕ್ತಿ. ಸತ್ಯಸಂಧ, ವಿಶ್ವಸ್ಥ ವ್ಯಕ್ತಿ ಎಂದು ಇಡೀ ನಗರವೇ ಒಪ್ಪಿಕೊಂಡಿರುವ ವ್ಯಕ್ತಿಯಾಗಿದ್ದಾರೆ ಎಂದೂ ಸೂಚಿಸುತ್ತದೆ. ಆದುದರಿಂದ ಅವರ ಮಾತುಗಳನ್ನು ಮತ್ತು ಅವರ ವಾದವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಅವರು ಯಾವುದೋ ಸಾಮಾನ್ಯ ಮನುಷ್ಯನಲ್ಲ. ಯಾವುದೇ ಅಪರಿಚಿತ ವ್ಯಕ್ತಿಯೂ ಅಲ್ಲ. ಆದುದರಿಂದ ಅವರ ಹಕ್ಕು ವಾದದತ್ತ ಗಮನಹರಿಸುವುದು ಸ್ವಯಂ ನಮ್ಮದೇ ಒಳಿತಿನ ಬೇಡಿಕೆಯಾಗಿದೆ.

ಜನರಿಗೆ ಸಂದೇಶ ಕಳುಹಿಸುವ ಈ ವಿಧಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ತಿಳುವಳಿಕೆ ಮತ್ತು ಗಂಭೀರತೆಯನ್ನು ಪರೀಕ್ಷೆಗೆ ಒಡ್ಡುತ್ತಿರುವ ಅನುಭವಾಗುತ್ತದೆ.

ಒಂದು ವೇಳೆ ಕಾರ್ಯಕ್ರಮವನ್ನು ಮಾಡಿ ಆ ಮೂಲಕ ಪ್ರವಾದಿಯ ಸ್ಥಾನಮಾನವನ್ನು ವಿವರಿಸುತ್ತಿದ್ದರೆ ಮತ್ತು ಘೋಷಿಸುತ್ತಿದ್ದರೆ ಮನುಷ್ಯನ ಒಳ್ಳೆಯತನ ಹೊರಹೊಮ್ಮುತ್ತಿರಲಿಲ್ಲ. ಅವರಿಗೆ ಪರೀಕ್ಷೆಯೂ ಇರುತ್ತಿರಲಿಲ್ಲ. ಸ್ವಯಂ ತಲೆಬಾಗಿಸುತ್ತಿದ್ದ. ಆದುದರಿಂದ ಸೃಷ್ಟಿಕರ್ತನ ಸಂದೇಶ ರವಾನೆಯ ಈ ವಿಧಾನವು ವಿಶ್ವಾಸದ

ವಿಚಾರದಲ್ಲಿ ಪ್ರವಾದಿಗೂ ಅಭಿಸಂಬೋಧಿತರಿಗೂ ಬಹುದೊಡ್ಡ ಪರೀಕ್ಷೆಯಾಗಿದೆ.

ಜನರಿಗೆ ತಮ್ಮ ಪರಿಚಯವನ್ನು ಮಾಡಿಸುವುದು ಮತ್ತು ಸಂದೇಶವನ್ನು ತಲುಪಿಸುವುದು ಸಂದೇಶವಾಹಕರಿಗೆ ಪರೀಕ್ಷೆಯಾದರೆ, ಸಂದೇಶ ನೀಡುತ್ತಿರುವ ವ್ಯಕ್ತಿಯು ಸೃಷ್ಟಿಕರ್ತನ ಪ್ರವಾದಿ ಎಂದು ವಿಶ್ವಾಸ ಇರಿಸುವುದು, ಅವರ ಸಂದೇಶ ವನ್ನು ಸ್ವೀಕರಿಸಿ ಅದರಲ್ಲಿ ವಿಶ್ವಾಸ ಇರಿಸುವುದು ಜನರಿಗಿರುವ ಪರೀಕ್ಷೆಯಾಗಿದೆ.

ಈ ಕಷ್ಟದ ನುಡುವೆಯೇ ಇಬ್ಬರ ವಿಶ್ವಾಸವು ದೃಢವಾಗುತ್ತದೆ. ನಿಷ್ಠೆ ಹುಟ್ಟುತ್ತದೆ. ಆ ಅನುಗ್ರಹದ ಮಹತ್ವ ಮತ್ತು ಮೌಲ್ಯ ಅನುಭವಗೊಳ್ಳುತ್ತದೆ. ಅಂದರೆ ಈ ಹಾದಿಯಲ್ಲಿ ಬಹಳಷ್ಟು ಸಂದೇಹ, ಅನುಮಾನಗಳಿಂದ ಹಾದು ಹೋಗಬೇಕಾಗುತ್ತದೆ. ಈ ವಿಷಯವು ನಿರ್ಧಾರಕ್ಕೆ ಸಂಬಂಧಿಸಿದ್ದು ಮತ್ತು ಆತ್ಮದೊಂದಿಗೆ ಸಂಘರ್ಷಿಸಿ ದೃಢಪಡಿಸಿಕೊಳ್ಳುವುದು ಮತ್ತು ವಿಶ್ವಾಸ ಇರಿಸಬೇಕಾದ ವಿಷಯವಾಗಿದೆ.

ಸಂದೇಶವಾಹಕರು ಸತ್ಯವು ಜನರಿಗೆ ತಲುಪಿಸಲು ಮತ್ತು ಅದರ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಲು ಮುಕ್ತವಾಗಿ, ನಿಸ್ವಾರ್ಥತೆಯಿಂದ ಸಂದೇಶ ತಲುಪಿಸಬೇಕಾಗುತ್ತದೆ. ಈ ವಿಧಾನದಲ್ಲಿ ಪ್ರವಾದಿತ್ವವಾದಿಯ ಮತ್ತು ಸಂದೇಶವನ್ನು ಸ್ವೀಕರಿಸುವವರ (ಅಭಿಸಂಬೋಧಿತರ) ಇಬ್ಬರ ವ್ಯಕ್ತಿತ್ವಗಳೂ ಈ ಗುಣಗಳು ಹೊರಹೊಮ್ಮಿ ಬರುತ್ತದೆ.

ಮಹತ್ವದ ಮತ್ತು ಬೆಲೆಬಾಳುವ ವಸ್ತುವಿಗೆ ಅದರದ್ದೇ ವಿಶೇಷತೆಯಿದೆ. ಆ ವಸ್ತುವನ್ನು ಕಷ್ಟಪಟ್ಟು ಪಡೆದುಕೊಳ್ಳಬೇಕಾಗುತ್ತದೆ. ಅದು ವಿಶೇಷ ವಸ್ತು ಆಗಿದ್ದುದರಿಂದಲೇ ಅದು ಬೆಲೆಬಾಳುವ ವಸ್ತು ಮತ್ತು ಅದನ್ನು ಸುರಕ್ಷಿತವಾಗಿ ಇರಿಸಲಾಗುತ್ತದೆ. ಅಂದರೆ ಮೌಲ್ಯಯುತ ವಸ್ತು ಯಾರಿಗೂ ಸುಲಭದಲ್ಲಿ ಸಿಕ್ಕುವಂತಹದ್ದಲ್ಲ. ಸುಲಭವಾಗಿ ಅಗ್ಗದ ವಸ್ತು ಮಾತ್ರ ಸಿಗುತ್ತದೆ ಮತ್ತು ಕಷ್ಟದಿಂದ ಲಭಿಸುವ ವಸ್ತು ವಿಶೇಷ ಗುಣಮಟ್ಟದ್ದು ಆಗಿರುತ್ತದೆ.

ಅಭಿಸಂಬೋಧಿತರು/ವೀಕ್ಷಕರ ಅನ್ವೇಷಣೆ

ವೀಕ್ಷಕರು ಅಥವಾ ಅಭಿಸಂಬೋಧಿತರಿಗೆ ವಾದಿ(ಪ್ರವಾದಿತ್ವವಾದಿ)ಯಲ್ಲಿ ಬಹಳ ನಿಕಟವಾದ ಎರಡು ಗುಣವೈಶಿಷ್ಟ್ಯಗಳು ಅನ್ವೇಷಣೆಯ ವೇಳೆ ಕಂಡು ಬರುತ್ತದೆ... ಅದರಲ್ಲಿ ಒಂದು ಸತ್ಯಸಂಧತೆ, ಇನ್ನೊಂದು ವಿಶ್ವಸ್ಥತೆಯಾಗಿದೆ.

ಅವರು ತಮ್ಮ ಜೀವನದ ಅಷ್ಟು ಸಮಯವನ್ನು ಹೇಗೆ ಕಳೆದರು? ಅವರ ದಿನಚರಿ ಹೇಗಿತ್ತು? ಈಗ ಅವರು ವಾದಿಸುತ್ತಿರುವುದು ನಿಜವೇ ಅಲ್ಲವೇ ಎಂದು ಖಚಿತವಾಗಬೇಕಾದರೆ (ಪ್ರವಾದಿತ್ವ) ವಾದಿಯ ಜೀವನಕ್ರಮ ಸತ್ಯಸಂಧವಾಗಿತ್ತೇ ಎಂದು ನೋಡಬೇಕಾಗುವುದು.

ಅರ್ಥಾತ್ ಅವರಿದ್ದ ನಗರದ ನಿವಾಸಿಗಳು ಅವರನ್ನು ಹೇಗೆ ತಿಳಿದು ಕೊಂಡಿರುವರು. ಸತ್ಯಸಂಧ ಎಂದೇ ಅಥವಾ ಬೇರೆ ತರವೇ? ಇದು ಸೃಷ್ಟಿಕರ್ತನಿಗೆ ಸ್ಪಷ್ಟವಾಗಬೇಕು. ಆನಂತರವೇ ಈ ವ್ಯಕ್ತಿ ಸತ್ಯವಾದಿ ಮತ್ತು ಸತ್ಯವನ್ನು ಹೇಳುತ್ತಾರೆ ಮತ್ತು ಇವರು ವಿಶ್ವ ಸಾಮ್ರಾಟನ ಸಂದೇಶವಾಹಕರು ಹಾಗೂ ನೈಜ ಸಂದೇಶವನ್ನು ತಂದಿದ್ದಾರೆ ಎಂದು ಮನ ಮಸ್ತಿಷ್ಕದಲ್ಲಿ ತೃಪ್ತಿ ಮೂಡುತ್ತದೆ. ಜೊತೆಗೆ ಸಂದೇಶವಾಹಕರು ಸಂದೇಶ ತಲುಪಿಸುವ ಕಾರ್ಯ ಎಲ್ಲಿಂದ ಶುರು ಮಾಡಿದರು ಮತ್ತು ಅವರು ಅವರಿದ್ದ (ಅವರು ಹುಟ್ಟಿದ) ಸ್ಥಳದಿಂದಲೇ ಈ ಕಾರ್ಯವನ್ನು ಆರಂಭಿಸಿದರೇ? ಅವರು ಜೀವಿಸುವ ಪರಿಸರ ಯಾವುದು? ಯಾವ ಜನರೊಂದಿಗೆ ಹಗಲು ರಾತ್ರೆ ಇದ್ದು ಬದುಕಿದವರು ಎಂಬುದನ್ನೂ ಅನ್ವೇಷಕ ನೋಡಬೇಕಾಗುತ್ತದೆ. ಆದರೆ ಈ ವಾಸ್ತವಿಕತೆಯನ್ನು ಶೋಧಿಸುವುದು ಕಷ್ಟದ ವಿಚಾರವಾಗುವುದಿಲ್ಲ.

ಪ್ರವಾದಿತ್ವವಾದಿಯು ಜನರ ನಡುವೆ ಹಗಲು ರಾತ್ರೆ ಬೆರೆಯುತ್ತಿರುವ ವ್ಯಕ್ತಿ ಆಗಿದ್ದು ಜನರ ಕಣ್ಣ ಮುಂದೆ ಇರುವಂತಹ ವ್ಯಕ್ತಿ ಜನರಿಗೆ ಅಪರಿಚಿತನಾಗಿರುವುದಿಲ್ಲ. ಒಂದು ವೇಳೆ ಸಂದೇಶವನ್ನು ಅಪರಿಚಿತ ಪರಿಸರಕ್ಕೆ ಹೋಗಿ ನೀಡಿದರೆ ಮತ್ತು ಜನರು ಸ್ವೀಕರಿಸುವ ಸಾಧ್ಯತೆಗಳು ಬಹಳ ಕಡಿಮೆ ಇರುತ್ತದೆ. ಯಾಕೆಂದರೆ ಅವರು ಅಲ್ಲಿನ ಜನರಿಗೆ ಅಪರಿಚಿತ ವ್ಯಕ್ತಿ. ಜನರಿಗೆ ಅವರ ಬಗ್ಗೆ ಏನೂ ಗೊತ್ತಿರುವುದಿಲ್ಲ. ಆದುದರಿಂದ ಈ ವ್ಯಕ್ತಿ ಸತ್ಯ ಹೇಳುತ್ತಾನಾ ಅಥವಾ ಸುಳ್ಳು ಹೇಳುತ್ತಾನಾ ಎಂದು ಸಹಜವಾಗಿ ಸಮಾಜದಲ್ಲಿ ಸಂದೇಹ ಉದ್ಭವಿಸುತ್ತದೆ.

ವಿಶ್ವಾಸಾರ್ಹತೆ – ಸಂದೇಹವಾಕರಲ್ಲಿರಬೇಕಾದ ಎರಡನೇ ಗುಣ. ಅವರೆಡೆಗೆ ಸೃಷ್ಟಿಕರ್ತನಿಂದ ಬಂದಿರುವ ಜ್ಞಾನವು ಅಧನ್ನು ಒಂದು ವಿಶ್ವಾಸಾರ್ಹ ನಿಧಿಯೆಂಬಂತೆ ಜನರಿಗೆ ಯಥಾವತ್ತಾಗಿ ಯಾವುದೇ ಬದಲಾವಣೆ ಮಾಡದೆ ತಲುಪಿಸುವುದು. ಹಾಗೆ ಮಾಡಿದ್ದರೆ ಅವರ ಮಾತನ್ನು ಸ್ವೀಕರಿಸಲು ಯಾವುದೇ ಹಿಂಜರಿಕೆಯಾಗುವುದಿಲ್ಲ.

ಹೀಗೆ ಸಂದೇಶವಾಹಕರು ಸತ್ಯಸಂಧರೂ ವಿಶ್ವಸ್ಥರೂ ಆಗಿ ಗುರುತಿಸಲ್ಪಟ್ಟು ಪ್ರವಾದಿ ಎಂಬ ಸ್ಥಾನದಲ್ಲಿ ಸ್ವಿಕಾರಾರ್ಹರಾಗುತ್ತಾರೆ. ಅಂದರೆ ಅವರು ಸಮಾಜದಲ್ಲಿ ಸತ್ಯಸಂಧ ಎಂಬ ಆಧಾರದಲ್ಲಿ ಸ್ವೀಕಾರ ಯೋಗ್ಯರಾಗುವುದು ಮತ್ತು ಅವರು ತಂದಿರುವ ಸಂದೇಶವೂ ಸ್ವೀಕಾರಾರ್ಹವಾಗುವುದು. ಅವರು ತಮ್ಮ ಸ್ವಂತ ಸಂದೇಶವನ್ನು ತಂದಿಲ್ಲ ಬದಲಾಗಿ ನಮ್ಮ ಬಳಿಗೆ ಅವರು ತಂದ ಸಂದೇಶ ವಿಶ್ವ ಸಾಮ್ರಾಟನ ಸಂದೇಶವೆಂದೂ ಸ್ಪಷ್ಟವಾಗುತ್ತದೆ ಮತ್ತು ನಮಗೆ ಅವರು ಪ್ರಸ್ತುತಪಡಿಸುವ ಶಿಕ್ಷಣದ ಮಾಧ್ಯಮದಿಂದಲೂ ನಮ್ಮ ಅನ್ವೇಷಣೆಯಲ್ಲಿ ತೃಪ್ತಿ ಸಿಗುತ್ತದೆ. ಆ ಶಿಕ್ಷಣದ ಗುಣ ವೈಶಿಷ್ಟ್ಯಗಳು ನೈಸರ್ಗಿಕವಾದುದು ಮತ್ತು ನ್ಯಾಯಯುತವಾದುದೇ. ಅದು ಸಂಪೂರ್ಣ

ಕರುಣೆ ಮತ್ತು ನ್ಯಾಯದಿಂದ ತುಂಬಿರುವುದು. ಈ ಬೋಧನೆಗಳೊಳಗೆ ಸಮಾನತೆ, ಸ್ವಯಮಾಭಿವೃದ್ಧಿ ಹೊಂದುವ ಶಕ್ತಿ ಅಡಕವಾಗಿರುವುದು ಕಂಡು ಬರುತ್ತದೆ. ಬೌದ್ಧಿಕವೂ ಮತ್ತು ಪ್ರಾಯೋಗಿಕವಾಗಿದೆ. ಅದನ್ನು ಪ್ರಸ್ತುತಪಡಿಸುವವರ ಮೂಲಕ ಆ ಶಿಕ್ಷಣ ಜನರ ನಡುವೆ ಸ್ವೀಕಾರಾರ್ಹವಾಗುತ್ತದೆ. ಬೋಧನೆಯು ಜನರಿಗೆ ಉತ್ತಮ ವಾದ ಮತ್ತು ಶಾಂತವಾದ ಜೀವನ ನಡೆಸಲು ಆವಶ್ಯಕವಾಗಿರುವ ಪ್ರಯೋಜನಗಳಿವೆ ಎಂದು ಸ್ವಯಂ ಬಹಿರಂಗಗೊಳ್ಳುತ್ತದೆ.

ಅನ್ವೇಷಣೆಯ ಅಗತ್ಯ ಮತ್ತು ಮಹತ್ವ

ಸಂದೇಶವಾಹಕರು ತಾನು ತಂದ ಸಂದೇಶದಲ್ಲಿ ವಿಶ್ವಾಸ ಇರಿಸಿದರೆ ಮತ್ತು ಇರಿಸದಿದ್ದರೆ ಅದರಿಂದ ಜನರ ಮೇಲೆ ಆಗುವ ವಿಪರೀತ ಪರಿಣಾಮಗಳನ್ನು ವಿವರಿಸುತ್ತಾರೆ. ಆದ್ದರಿಂದ ಅವರು ತಂದ ಸಂದೇಶದ ನಿಜಸ್ಥಿತಿ, ಸತ್ಯಾಸತ್ಯಗಳ ಕುರಿತು ನಾವು ಆಳವಾದ ವಿವರವಾದ ಅನ್ವೇಷಣೆ ನಡೆಸುವುದು ಅಗತ್ಯವೆನಿಸಿಕೊಳ್ಳುತ್ತದೆ.

ಇನ್ನೊಂದೆಡೆ ಪ್ರವಾದಿತ್ವದ ಬಗ್ಗೆ ಅದರ ಯಾವ ಉದ್ಘಾಟನಾ ಕಾರ್ಯಕ್ರಮವೂ ನಡೆಯುವುದಿಲ್ಲವಷ್ಟೇ. ಪ್ರವಾದಿಯ ನೇಮಕಾತಿಯ ಕುರಿತ ಸೃಷ್ಟಿಕರ್ತನ ಯಾವುದೇ ಕಾರ್ಯಕ್ರಮವೂ ಇಲ್ಲ. ಇವೆಲ್ಲ ಸೃಷ್ಟಿಕರ್ತನಿಗೆ ಹೇಳಿಸಿದ ವಿಧಾನವಲ್ಲ. ಹಾಗಿರುವಾಗ ಯಾವುದೇ ಸ್ವಾರ್ಥ ಪರ ವ್ಯಕ್ತಿಯು ಜನರ ಮುಂದೆ ಎದ್ದು ನಿಂತು ಸುಳ್ಳು ಸಂದೇಶ ವನ್ನು ಇರಿಸಿ ತಾನು ದೇವನ ಸಂದೇಶವಾಹಕನೆಂದು ವಾದಿಸಿದರೆ?

ಈ ರೀತಿಯಾಗಿ ಜನರನ್ನು ತೊಂದರೆಯಲ್ಲಿ ಸಿಲುಕಿಸಿದರೆ, ಜನರನ್ನು ತಪ್ಪು ದಾರಿಗೆಳೆದರೆ (ದಾರಿ ತಪ್ಪಿಸಿದರೆ) ತನ್ನ ಹಿಡಿತದಲ್ಲಿ ಜನರನ್ನು ಸಿಲುಕಿಸಿ ಭೌತಿಕ ಲಾಭವೆತ್ತಿದರೆ ಎಂಬ ವಿಚಾರವೂ ಪ್ರಸ್ತುತವಾಗಿದೆ. ಹೀಗೂ ಗಂಭೀರ ಅನ್ವೇಷಣೆ ನಡೆಸುವುದು ಅತೀ ಅಗತ್ಯವಾಗಿದೆ.

ಆದುದರಿಂದ ಸ್ವಂತ ನೆಲೆಯಲ್ಲಿ ಅನ್ವೇಷಣೆಯನ್ನು ನಡೆಸಿಯೇ ತೃಪ್ತರಾಗುವುದು ಮುಖ್ಯ. ಯಾಕೆಂದರೆ ಸ್ವೀಕರಿಸುವುದು ನಿರಾಕರಿಸುವುದು ಎಂಬ ಈ ವಿಚಾರಕ್ಕೆ ಸಂಬಂಧಿಸಿದ ಆಳವಾದ ಪರಿಣಾಮವು ಮನುಷ್ಯ ಜೀವನದ ಮೇಲೆಯೇ ಆಗುತ್ತದೆ ಮತ್ತು ತಮ್ಮ ಸ್ವಂತ ಅಸ್ತಿತ್ವದ ಮೇಲೆಯೂ ಆಗುತ್ತದೆ. ಆದುದರಿಂದ ಇದನ್ನು ನಿರ್ಲಕ್ಷಿಸುವಂತಿಲ್ಲ. ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ಗಂಭೀರವಾಗಿ ಪರಿಗಣಿಸಬೇಕಿದೆ. ವಿಶ್ವಾಸ ಇಡುವುದು ಮತ್ತು ಇಡದಿರುವುದು ಈ ಎರಡೂ ಅವಸ್ಥೆಗಳು ಭೌತಿಕ ಲೋಕದ ಶಾಂತಿ ಮತ್ತು ಕ್ಷೋಭೆಗೆ ಸಂಬಂಧಿಸಿದ್ದು ಮತ್ತು ಮರಣಾನಂತರ ಸ್ವರ್ಗ ಮತ್ತು ನರಕಕ್ಕೆ ಸಂಬಂಧಿಸಿದ್ದಾಗಿದೆ.

ಅನ್ವೇಷಣೆಗೆ ಸಂಬಂಧಿಸಿದ ಸಾಮಾನ್ಯ ಅಂಶಗಳು

ಸಂದೇಶವಾಹಕತ್ವವಾದಿಯ ಮಾತು ಹೇಗಿದೆ ಮತ್ತು ಮಾತಿನಂತೆ ಅವನ ಕರ್ಮ ಮತ್ತು ಜೀವನ ಇವೆಯೇ? ವೈಯಕ್ತಿಕ ಮತ್ತು ಸಾಮಾಜಿಕ ಪರಿಣಾಮ (ಅವಸ್ಥೆ) ಹೇಗಿದೆ? ಸಂದೇಶ ಪ್ರಚಾರ ಆರಂಭಿಸುವ ಮೊದಲು ಸಂದೇಶವಾಹಕರ ಜೀವನ ಹೇಗಿತ್ತು? ಸಮಾಜ ಅವನನ್ನು ಯಾವ ದೃಷ್ಟಿಕೋನದಲ್ಲಿ ನೋಡುತ್ತಿತ್ತು? ಅವರಿಗೆ ಯಾವ ಸ್ಥಾನಮಾನ ಸಮಾಜವು ಕೊಟ್ಟಿತ್ತು? ಸಂದೇಶವಾದಿಯನ್ನು ಸಮಾಜ ಯಾವ ರೀತಿಯಿಂದ ನೆನೆದುಕೊಳ್ಳುತ್ತಿತ್ತು?

ಅವರು ನೀಡುವ ಸಂದೇಶ ಸೃಷ್ಟಿಕರ್ತನ ಸಂದೇಶ ಎಂದು ಮನವರಿಕೆ ಯಾಗುವುದೇ? ಆ ಸಂದೇಶದಲ್ಲಿ ಅಂತಹ ವಿಶ್ವಾಸ ಮೂಡುತ್ತದೆಯೇ ಅಥವಾ ಅದು ಒಬ್ಬ ಮನುಷ್ಯನ ಮಾತುಗಳಂತಿದೆಯೇ? ಈ ಮಗ್ಗುಲುಗಳನ್ನು ಕೂಡಾ ಪರಿಶೀಲಿಸಿ ನೋಡಬೇಕಾಗಿದೆ.

ಅವರ ಮಾತುಗಳ, ಅವರ ಯೋಜನೆ, ಅಸಾಧಾರಣ ಬಹಿರಂಗಪಡಿಸುವಿಕೆಗಳು, ಪ್ರಪಂಚದ ವಾಸ್ತವಿಕತೆ, ಮನುಷ್ಯರನ್ನು ಉದ್ದೇಶಿಸಿ ಹೇಳುವಂತಹ ವಿಷಯಗಳು ಸಮಂಜಸವಾದ ವಿಷಯಗಳೇ ಎಂಬುದರತ್ತ ನಾವು ಗಮನಹರಿಸಬೇಕು ಮತ್ತು ಅವಲೋಕನ ನಡೆಸಿ ಸತ್ಯವೆಂದು ಖಚಿತಪಡಿಸಿಕೊಳ್ಳಬೇಕಾಗಿದೆ.

ಸಂದೇಶ ನೀಡುವ ವ್ಯಕ್ತಿಯ ಮಾತುಗಳಲ್ಲಿ ಯಾವುದೇ ಸ್ವಾರ್ಥ ಅಡಗಿದೆಯೇ. ಇಲ್ಲವೇ? ಮನುಷ್ಯರೊಂದಿಗೆ ಅವನ ಪ್ರೀತಿ, ಅವನ ಸೇವೆ, ಅವರ ಸದ್ಭಾವನೆಗಳೆಲ್ಲ ಅವನ ನಿಸ್ವಾರ್ಥತೆಗೆ ಸಾಕ್ಷ್ಯವಹಿಸುತ್ತಿವೆಯೇ?

ಅವರು ಸ್ಪಷ್ಟವಾಗಿ ಮಾತಾಡುವರೇ ಅಥವಾ ಸುತ್ತು ಬಳಸಿ, ತಿರುಚಿ ಮಾತಾಡುತ್ತಾರೆಯೇ? ಎಲ್ಲಾದರೂ ತನ್ನ ಆಸಕ್ತಿ, ನಿಜಸ್ಥಿತಿ ಬಹಿರಂಗವಾಗುವುದೇ ಎಂದು ಒಳಗೊಳಗೆ ಹೆದರಿಕೊಂಡು ಮಾತಾಡುವರೇ?

ಅವರು (ಸಂದೇಶವಾದಿಯು) ದೈನಂದಿನ ಜೀವನ ಪಾರದರ್ಶಕವಾಗಿದ್ದು ಜನರು ಅದನ್ನು ಅಧ್ಯಯನಿಸಿ, ಶೋಧಿಸಿ ನೋಡಲು ಸಾಧ್ಯವಾಗುವಂತಿದೆಯೇ?

ಜನರು ಅವರನ್ನು ಹತ್ತಿರದಿಂದ ನೋಡಿ, ತಿಳಿದುಕೊಂಡು, ಅವರು ಹೇಳುವುದು ಪ್ರಾಮಾಣಿಕವೇ ಎಂದು ನಿರ್ಧಾರಕ್ಕೆ ಬರಲು ಸಾಧ್ಯವಾಗುವಂತೆ ಜನರ ನಡುವೆ ಅವರು ಬೆರೆಯುತ್ತಾರೆಯೇ? ಜನರೊಂದಿಗೆ ಅನ್ನಪಾನೀಯ ಸೇವಿಸುವರೇ? ಮದುವೆ, ವ್ಯವಹಾರ ಇತ್ಯಾದಿಗಳಲ್ಲಿ ಜನರೊಂದಿಗೆ ಏರ್ಪಟ್ಟಿದ್ದಾರೆಯೇ? ತಾವು ಸತ್ಯವೆಂದು ಪ್ರತಿಪಾದಿಸುವುದನ್ನು ಮೊದಲು ತಾವೇ ಸ್ವತಃ ಅಳವಡಿಸಿಕೊಂಡು ಅದರ ಪ್ರಯೋಜನ

ಪಡೆಯುತ್ತಿದ್ದಾರೆಯೇ? ತಾನು ತಪ್ಪೆಂದ ವಿಚಾರಗಳಿಂದ ಅವರೇ ಮೊದಲು ದೂರವುಳಿದಿದ್ದಾರೆಯೇ? ಈ ವಿಚಾರಗಳ ಪರಿಶೀಲನೆಯಿಂದ ಪ್ರವಾದಿತ್ವವಾದಿ ಸತ್ಯವಾದಿಯೇ, ಸುಳ್ಳುವಾದಿಯೇ ಎಂಬುದನ್ನು ಅಂದಾಜಿಸ ಬಹುದಾಗಿದೆ.

ಈ ರೀತಿಯಾಗಿ, ಪ್ರವಾದಿಯ ಜೀವನ ಮತ್ತು ಬೋಧನೆಗಳೇ ಪವಾಡಗಳಿಗಿಂತ ಹೆಚ್ಚು ಮಹತ್ವದ ಮತ್ತು ವಿಶ್ವಾಸ ಮೂಡಿಸುವ ವಿಷಯಗಳಾಗಿವೆ. ಯಾಕೆಂದರೆ ಅದರತ್ತ ವಿಚಾರ ಮಾಡಿದಾಗ ಅದರಂತೆ ಕರ್ಮವೆಸಗಿದ ಪರಿಣಾಮವು ಮನುಷ್ಯನ ಜೀವನದಲ್ಲಿ ಅನುಗ್ರಹದಂತೆಯೂ ಪ್ರಕಾಶದಂತೆಯೂ ಕಂಡು ಬರುತ್ತದೆ ಅಥವಾ ಅವು ತೊಂದರೆ, ಅಂಧಕಾರದಂತೆ ಮಾನವನ ದೃಷ್ಟಿಗೇ ಗೋಚರವಾಗುತ್ತದೆ. ಮನುಷ್ಯನಿಗೆ ತನ್ನ ಈ ಒಳನೋಟದಿಂದ ಒಂದೋ ತೃಪ್ತಿ ಅಥವಾ ಅತೃಪ್ತಿಯುಂಟಾಗ ಬಹುದು. ಈ ಆಧಾರದಲ್ಲಿ ಸಂದೇಶವಾದಿಯನ್ನು ಒಂದೋ ಸ್ವೀಕರಿಸಬಹುದು ಇಲ್ಲವೇ ನಿರಾಕರಿಸಬಹುದು.

ಇನ್ನು ಪವಾಡವೋ ಅಥವಾ ಸಂದೇಶವಾಹಕರ ನೇಮಕಾತಿಯ ಸಾರ್ವಜನಿಕ ಕಾರ್ಯಕ್ರಮವೋ ಮಾಡುವುದಿದ್ದರೆ ಅದರಿಂದ ಸಂದೇಶವಾಹರಿಗೆ ಮತ್ತು ಅವರು ನೀಡುವ ಸಂದೇಶಕ್ಕೆ ಬೆಂಬಲ ಹಾಗೂ ಸಹಕಾರಿಯಾಗುವುದು ನಿಜವೇ. ಅಭಿಸಂಭೋದಿತ ಜನರಿಗೆ ಪ್ರವಾದಿಯನ್ನು ಇವರು ನಿಜವಾದ ಪ್ರವಾದಿ ಎಂದು ಮನವರಿಕೆ ಮಾಡಿಕೊಡಲು ಕೂಡ ಸಹಾಯಕವಾಗುತ್ತದೆ. ಅದರೆ, ಹೃದಯ ತೃಪ್ತಿಯ ವಿಚಾರದಲ್ಲಿ ಸ್ವಯಂ ಅವಲೋಕನಗಳು, ಅನ್ವೇಷಣೆ, ತಾರ್ಕಿಕ ಪುರಾವೆಗಳು ಮತ್ತು ಬೋಧನೆಯ ಪರಿಣಾಮಗಳು ಇವೆಲ್ಲ ಮಹತ್ವದ್ದಾಗಿರುತ್ತವೆ.

ಸತ್ಯ ಮತ್ತು ಮಿಥ್ಯಗಳ ಕುರಿತು ಪೂರ್ವಾಗ್ರಹಗಳಿಲ್ಲದೆ ಮಾಡುವ ಅನ್ವೇಷಣೆಯಿಂದ ಸತ್ಯ ಬಹಳ ಸುಲಭದಲ್ಲಿ ಖಚಿತಗೊಳ್ಳಬಹುದು. ಈ ತರ್ಕ ಮತ್ತು ನಿರ್ಧಾರಗಳ ಮೇಲೆ ಆಂತರಿಕ ಮತ್ತು ಬಾಹ್ಯ ಪ್ರೇರಕಗಳ ಪರಿಣಾಮವಾಗದಂತೆ ನಮ್ಮ ಅನ್ವೇಷಣೆ ಯಲ್ಲಿ ನೋಡಿಕೊಳ್ಳುವುದು ಅಗತ್ಯವಾಗಿದೆ. ಸುಳ್ಳು ಮತ್ತು ಸತ್ಯಗಳನ್ನು ವಿವೇಚಿಸಲು, ಸ್ವಯಂ ನಾವು ಸತ್ಯದಿಂದ ಪಥಭ್ರಷ್ಟಗೊಳ್ಳದಂತೆ ಪಾರಾಗಲು ಸುಳ್ಳಿನ ಪ್ರಭಾವದಲ್ಲಿ ಸಿಲುಕಿಕೊಳ್ಳದಿರಲು ಇದುವೇ ಅನ್ವೇಷಣೆಗಿರುವ ಸರಿಯಾದ ವಿಧಾನವಾಗಿದೆ.

ಯಾವನೇ ವ್ಯಕ್ತಿ ತನ್ನನ್ನು ದೇವನ ಪ್ರವಾದಿ ಎಂದು ಪ್ರಸ್ತುತಪಡಿಸಿದಾಗ ಮೊದಲು ಅವನ ಜೀವನ ಹೇಗಿದೆಯೆಂದು ನೋಡಬೇಕು. ಸೃಷ್ಟಿಕರ್ತನ ಬೋಧನೆಯೆಂದು ಅವನು ಹೇಳುತ್ತಿರುವುದನ್ನು ಕೂಡ ವಿವೇಚನೆಗೊಡ್ಡಬೇಕು. ಅವನು ಹೇಳಿದ ಆ ಮಿತಿಯಲ್ಲಿರುವನೇ ಅಥವಾ ಮುಂದುವರಿದು ತನ್ನನ್ನೇ ದೇವನೆಂದು ನಂಬಿಸಲು ಹೊರಟು ಬಿಡುತ್ತಾನಾ ಎಂದು ಕೂಡಾ ನೋಡಬೇಕು.

ಅನ್ವೇಷಣೆಗೆ ಸಾಮಾನ್ಯ ಸಲಹೆಗಳು

ಸಂದೇಶದ ಸತ್ಯ ಸ್ಥಿತಿಯನ್ನು ತಿಳಿಯಲು ತಪ್ಪುಕಲ್ಪನೆಗಳಿಂದ ಪಾರಾಗುವುದು ಅತ್ಯಗತ್ಯವಾಗಿದೆ ಮತ್ತು ಮನುಷ್ಯರಿಗೆ ಸಂದೇಶವನ್ನು ಕಳುಹಿಸಲು ಸೃಷ್ಟಿಕರ್ತನು ಯಾವುದೇ ಅಸಾಮಾನ್ಯ ವ್ಯಕ್ತಿಯನ್ನು ಏರ್ಪಾಟು ಮಾಡುತ್ತಾನೆಂದೋ ಈ ಅಸಾಧಾರಣ ಗುಣಗಳ ವ್ಯಕ್ತಿಯಿಂದಲೇ ಜನರಿಗೆ ಸೃಷ್ಟಿಕರ್ತನ ಸಂದೇಶ ತಲುಪುವುದು ಎಂದೂ ನಮ್ಮಲ್ಲಿ ನಿರೀಕ್ಷೆ ಇರಬಾರದು. ಅಸಾಧರಣ ವ್ಯಕ್ತಿಯ ನಿರೀಕ್ಷೆ ಇದ್ದು ಇದಕ್ಕೆ ವಿರುದ್ಧ ವಾಗಿ ಬೇರೆ ಮನುಷ್ಯ ಪ್ರವಾದಿತ್ವವನ್ನು ವಾದಿಸಿದರೆ ಜನರಲ್ಲಿ ಅನಿರೀಕ್ಷಿತ ಘೋಷಣೆ ಯಿಂದ ಆಶ್ಚರ್ಯವಾಗುತ್ತದೆ. ನಂತರ ಆ ವ್ಯಕ್ತಿ ನಿರಾಕರಿಸಲ್ಪಡುತ್ತಾನೆ ಅಥವಾ ಅವನ ಮಾತನ್ನು ಒಪ್ಪಲು ಜನರು ಹಿಂಜರಿಯಬಹುದು.

ಮನುಷ್ಯರಿಗೆ ಸೃಷ್ಟಿಕರ್ತನ ಸಂದೇಶ ತಲುಪಿಸಲು ಮನುಷ್ಯರನ್ನೇ ಉಪಯೋಗಿಸು ವುದು ಸ್ವಾಭಾವಿಕ ಮತ್ತು ಸಮಂಜಸವಾಗಿದೆ ಮತ್ತು ಸಂದೇಶ ತಲುಪಿಸುವ ಮಾಧ್ಯಮವಾಗಲು ಮನುಷ್ಯರಿಗೆ ಸಾಧ್ಯ. ಯಾಕೆಂದರೆ ಮನುಷ್ಯರಿಗೆ ಮನುಷ್ಯನ ಮಾತನ್ನು ಸ್ವೀಕರಿಸಲು ಮತ್ತು ಅದರಂತೆ ಕರ್ಮವೆಸಗುವುದು ಕಷ್ಟವಲ್ಲ ಮತ್ತು ಸಂದೇಶ ತಲುಪಿಸುವ ವ್ಯಕ್ತಿಯು ಅಭಿಸಂಬೋಧಿಸುವ ಸ್ಥಳ ಮತ್ತು ಆ ಸಮುದಾಯದ ವ್ಯಕ್ತಿಯಾಗಿರಬೇಕು. ಹೀಗೆ ಅವನು ಆ ಸಮುದಾಯವು ಅರಿತಿರುವ ಅವರಿಗೆ ಮನವರಿಕೆಯಾಗುವ, ಅವರ ಭಾಷೆಯಲ್ಲಿಯೇ ಅವರನ್ನು ಅಭಿಸಂಬೋಧಿಸುವ ವ್ಯಕ್ತಿಯಾಗಬೇಕು. ಆಗಲೇ ದೈವಿಕ ಸಂದೇಶ ಜನರಿಗೆ ತಲುಪುವುದು ಮತ್ತು ಜನರಿಗೆ ಮನವರಿಕೆ ಮಾಡಿಕೊಳ್ಳಲು ಸುಲಭವಾಗುವುದು.

ನಾವು ನಮ್ಮ ಅನ್ವೇಷಣೆಯ ಸಮಯದಲ್ಲಿ ಈ ಎಲ್ಲ ಅಂಶಗಳು ಗಮನದಲ್ಲಿಟ್ಟು ಕೊಳ್ಳಬೇಕಾಗಿದೆ. ಇಲ್ಲದಿದ್ದರೆ ನೈಜ ಸಂದೇಶವಾಹಕರ ಮೇಲೆ ವಿಶ್ವಾಸ ಇರಿಸುವ ವಿಷಯದಲ್ಲಿ ತಪ್ಪುಕಲ್ಪನೆಗಳು ಮನಸ್ಸಿಗೆ ಅಡಚಣೆಯಾಗುತ್ತವೆ. ಸಂದೇಶ ತಲುಪಿಸುವ ವ್ಯಕ್ತಿ ಮನುಷ್ಯನಾಗಿರುವುದರಿಂದ ಅವನು ಹೇಳುವ ಮಾತುಗಳು ಜನರಿಗೆ ಅರ್ಥ ವಾಗುತ್ತದೆ. ಅದರಿಂದ ಅವನ ಸಂದೇಶದ ಒಪ್ಪು-ತಪ್ಪು ತಿಳಿಯುವುದು ಮತ್ತು ಸಂದೇಶವಾಹಕರು ಹೇಳಿದ ಮಾತುಗಳು ಮನುಷ್ಯರದೋ ಅಥವಾ ಸೃಷ್ಟಿಕರ್ತನದ್ದೋ ಎಂದು ಜನರು ತಿಳಿದುಕೊಳ್ಳಬಹುದು.

ನೈಜ ಮತ್ತು ಸುಳ್ಳು ಸಂದೇಶ ನೀಡುವವರ ನಡುವಿನ ವ್ಯತ್ಯಾಸ

ಯಾಕೆಂದರೆ ಅವನ ನಗರದ ಜನರು ಅವನ ಬಗ್ಗೆ ಸರಿಯಾಗಿ ಅರಿತಿರುತ್ತಾರೆ. ಹುಟ್ಟಿನಿಂದಲೇ ನಗರದ ಜನರು ಸಂದೇಶ ನೀಡುವಾತನನ್ನು ಸರಿಯಾಗಿ ತಿಳಿದಿರುತ್ತಾರೆ.

ಆದುದರಿಂದ ನಗರದ ಜನರೇ ಅವರ ಪ್ರಥಮ ಅಭಿಸಂಬೋಧಿತರಾಗಿದ್ದಾರೆ. ಪ್ರವಾದಿ ತನ್ನ ನಗರದಲ್ಲಿ ಅತ್ಯಂತ ಯಶಸ್ವಿಯಾಗಿ ಸಂದೇಶ ತಲುಪಿಸುವುದರಿಂದ ಅದರ ಪರಿಣಾಮವು ಬಹಿರಂಗವಾಗುತ್ತದೆ. ಅವನ ನಗರದ ಜನರಿಗೆ ಅವನ ವ್ಯಕ್ತಿತ್ವ ಹೆಚ್ಚು ಪರಿಚಿತವಲ್ಲದಿದ್ದರೆ ಅವನು ತಲುಪಿಸುವ ಸಂದೇಶವನ್ನು ಸ್ವೀಕರಿಸುವುದು ಜನರಿಗೆ ಕಷ್ಟವಾಗುತ್ತದೆ. ಆದುದರಿಂದ ಅವನು ತಾನಿದ್ದ ಸ್ಥಳದ ಜನರಿಗೆ ಮೊದಲು ಸೃಷ್ಟಿಕರ್ತನ ಸಂದೇಶವನ್ನು ತಲುಪಿಸುವ ಕೆಲಸ ಮಾಡುತ್ತಾನೆ. ಅಲ್ಲಿಂದ ತನ್ನ ಪರಿಶ್ರಮವನ್ನು ಆರಂಭಿಸುವತ್ತ ಅವನು ಗಮನ ಕೇಂದ್ರೀಕರಿಸುತ್ತಾನೆ. ತಾನಿರುವ ಸ್ಥಳದಲ್ಲಿ ಸಂದೇಶ ತಲುಪಿದ ಬಳಿಕ ಮತ್ತು ಅದರ ಉತ್ತಮ ಪರಿಣಾಮ ಹೊರ ಬಂದ ಮೇಲೆಯೇ ಅವನು ಬೇರೆ ಸ್ಥಳಗಳಿಗೆ ಸಂದೇಶ ತಲುಪಿಸಬೇಕು. ಇದು ಜನರಿಗೆ ಅವನ ಸಂದೇಶ ಸ್ವೀಕರಿಸಲು ತುಲನಾತ್ಮಕವಾಗಿ ಸುಲಭವಾಗುತ್ತದೆ.

ಆದರೆ ತನ್ನ ಕೆಲಸಗಳನ್ನು ಸುಳ್ಳುವಾದಿಯು ತಾನಿರುವಲ್ಲಿಂದಲ್ಲ, ಬೇರೆ ಸ್ಥಳಗಳಿಂದ ಆರಂಭಿಸುವುದು. ಯಾಕೆಂದರೆ ತನ್ನ ಸ್ಥಳದಲ್ಲಿ ಅವನು ಸುಳ್ಳುಗಾರ, ವಂಚಕ ಮತ್ತು ಕೆಟ್ಟ ವ್ಯಕ್ತಿಯೆಂದು ಪರಿಚಿತವಾದವನು. ಇವನು ಒಬ್ಬ ಸ್ವಾರ್ಥಿ, ವಂಚಕ, ಸುಳ್ಳುಗಾರ, ಮೋಸಗಾರ ಎಂಬ ರೀತಿಯಲ್ಲಿ ಜನರೆಡೆಯಲ್ಲಿ ಪರಿಚಿತ ನಾಗಿರುತ್ತಾನೆ. ಒಂದು ವೇಳೆ ತನ್ನ ಕೆಲಸ ತನ್ನ ಊರಿಂದಲೇ ಆರಂಭಿಸಿದರೂ ಅವನ ಜೊತೆ ಸ್ವಾರ್ಥಿಗಳು, ಭೌತಿಕವಾದಿಗಳು ಮತ್ತು ಚಾರಿತ್ರ್ಯಹೀನ ರಾದ ಕಡಿಮೆ ಸಂಖ್ಯೆಯ ಜನರು ಸೇರುತ್ತಾರೆ. ಇದೇ ವೇಳೆ ನಿಜವಾದ ಸಂದೇಶ ವಾಹಕ ಜೊತೆ ಮಾನವೀಯ ಮತ್ತು ಸಚ್ಚರಿತ ಮತ್ತು ಉತ್ತಮ ವ್ಯಕ್ತಿತ್ವದ ಜನರೇ ಸೇರುವುದು. ಆದರೂ ಆರಂಭದಲ್ಲಿ ನೈಜ ಸಂದೇಶವಾದಿಯನ್ನು ಮನಸ್ಸಿನಲ್ಲಿ ಗೊಂದಲದಲ್ಲಿರುವಂತಹ ಸ್ವಾರ್ಥಿಗಳು ಮತ್ತು ಭೌತಿಕವಾದಿಗಳು ಮತ್ತು ಚಾರಿತ್ರ್ಯಹೀನ ಜನರು ವಿರೋಧಿಸುತ್ತಾರೆ. ಇನ್ನು ಆರಂಭದಲ್ಲಿ ಮಧ್ಯಮ ಮನಸ್ಥಿತಿಯ ಜನರು ಕೇವಲ ತಮಾಷೆ ನೋಡಿ ನಿಲ್ಲುವ ವೀಕ್ಷಕರಾಗಿ ಬಿಟ್ಟಿರುತ್ತಾರೆ. ಮೇಲೆ ವಿವರಿಸಿದ ವಿಷಯಗಳು ಮತ್ತು ವಾಸ್ತವಿಕತೆಯು ಒಂದು ಹಂತದವರೆಗೆ ನಿಜವಾದ ಮತ್ತು ಸುಳ್ಳು ಸಂದೇಶವಾಹಕನನ್ನು ಸರಿಯಾಗಿ ಅರಿಯುವ ನಿಟ್ಟಿನಲ್ಲಿ ಉಪಯುಕ್ತ ಎನಿಸಿಕೊಳ್ಳುತ್ತದೆ.

ಸಂದೇಶ ನೀಡುವವ (ವಾದಿಯು) ತಾನಿರುವ ಸ್ಥಳದಲ್ಲಿ ಪ್ರಥಮತಃ ಸಂದೇಶ ವನ್ನು ತಲುಪಿಸುವ ಮೊದಲು ಬೇರೆ ಸ್ಥಳಕ್ಕೆ ಹೋಗಿ ಸಂದೇಶ ತಲುಪಿಸುವುದು ಅಸಹಜ ವಿಧಾನವೂ ಮತ್ತು ಪ್ರಶ್ನಾರ್ಥಕವಾಗಿದೆ. ಯಾಕೆಂದರೆ ಜನರಿಗೆ ಸಂದೇಶವಾದಿ ಸತ್ಯಸಂಧನೇ ಸುಳ್ಳುಗಾರನೇ ಎಂದು ಆತನ ವ್ಯಕ್ತಿತ್ವ ಬಗ್ಗೆ ಗೊತ್ತಿರುವುದಿಲ್ಲ. ಹೀಗಿರುವಾಗ ಅವರು ಅವನ ಮಾತನ್ನು ಯಾವ ರೀತಿ ಸ್ವೀಕರಿಸಿಯಾರು? ಅವನ ವ್ಯಕ್ತಿತ್ವವೇ

ಅವರಿಗೆ ಅಪರಿಚಿತವಾಗಿರುವಾಗ? ಆದುದರಿಂದ ಅವನ ಮಾತನ್ನು ಒಪ್ಪಲಾರರು. ಅವರಿಗೆ ಆ ವ್ಯಕ್ತಿಯ ಬಗ್ಗೆ ಹೃದಯಲ್ಲಿ ಪ್ರೀತಿ ಗೌರವಗಳಿರುವುದಿಲ್ಲ ಮತ್ತು ಈ ವ್ಯಕ್ತಿ ಸ್ವಾರ್ಥಿಯೇ ಸುಳ್ಳುಗಾರನೇ ಸತ್ಯಸಂಧನೆ ಎಂದೂ ಅವರಿಗೆ ಗೊತ್ತಿರುವುದಿಲ್ಲ. ಯಾಕೆಂದರೆ ಈತ ಎಲ್ಲಿಯಾದರೂ ಸುಳ್ಳುವಾದ ಮಾಡಿ ನರಕದ ಬಗ್ಗೆ ಹೆದರಿಸಿ ಸ್ವರ್ಗದ ಆಸೆ ಹುಟ್ಟಿಸಿ ತನ್ನ ಸ್ವಾರ್ಥವನ್ನು ಸಾಧಿಸಲು ಬಯಸುತ್ತಿದ್ದಾನೆಯೇ? ಎಂಬ ಸಂದೇಹ ಅವರಲ್ಲಿ ಇರುತ್ತದೆ.

ಅಭಿಸಂಬೋಧಿತರಿಗೆ ಸಂದೇಶ ವಾದಿಯು ಬೇರೆ ದೇಶ ಅಥವಾ ಬೇರೆ ಜನರೆಡೆಗೆ ಸಂದೇಶ ನೀಡಿದರೆ ತನ್ನ ವಿಷಯದಲ್ಲಿ ಈತ ಸತ್ಯಸಂಧನೇ ಸುಳ್ಳುಗಾರನೇ ಎಂದು ಶಂಕೆ ಮೂಡಬಹುದಾಗಿದೆ. ಒಂದು ವೇಳೆ ಈತ ಸತ್ಯವಾದಿ(ನಿಜವಾದ ಪ್ರವಾದಿ)ಯೇ ಆಗಿದ್ದರೆ ಯಾಕೆ ಅವನು ಮೊದಲು ತನ್ನ ವಾದವನ್ನು ಜನರ ಒಳಿತಿನ, ಜನರ ಲಾಭದ ವಿಷಯವನ್ನು ತನ್ನ ಪರಿಚಯದ ಜನರ ಮುಂದೆ ಮತ್ತು ತನಗೆ ನಿಕಟವಿರುವವರ ಮುಂದೆ ತನ್ನ ನಗರದಲ್ಲಿ ಮತ್ತು ನಾಡಿನಲ್ಲಿ ಪ್ರಸ್ತುತ ಪಡಿಸಲಿಲ್ಲ? ಇದು ಈತ ಸುಳ್ಳುವಾದಿಯಾಗಿದ್ದಾನೆ ಎಂಬ ಹೆಚ್ಚಿನ ಸಾಧ್ಯತೆಯತ್ತ ಬೆರಳು ತೋರಿಸುತ್ತದೆ. ನಿಜ ಬಣ್ಣ ಬಹಿರಂಗಗೊಳಿಸುತ್ತದೆ.

ಇದೇ ಸಮಯದಲ್ಲಿ ತಾನಿರುವ ಸ್ಥಳದಲ್ಲಿ ಸರಿಯಾಗಿ ಪರಿಚಯ ಇರುವವರ ನಡುವೆ, ಯಾವಾಗಲೂ ಅವನನ್ನು ನೋಡುತ್ತಿರುವ ಪರಿಚಿತರ ನಡುವೆ ತನ್ನ ವಾದ ಪ್ರಸ್ತುತ ಪಡಿಸುವುದಾದರೆ ಆತ ಸತ್ಯಸಂಧ ಆಗಿರುವ ಹೆಚ್ಚಿನ ಸಾಧ್ಯತೆಗಳಿರುತ್ತವೆ. ಯಾಕೆಂದರೆ ಪರಿಚಿತರ ಮುಂದೆ ಅವನ ಸುಳ್ಳುವಾದ ನಡೆಯದು. ನಿಜವಾದ ಸಂದೇಶವಾದಿಯ ಮುಂದೆ ವಿಶ್ವಾಸ ಇರಿಸಲು ಮನಸಿಲ್ಲದ ಜನರ ಕಪಟತನ, ನೆಪಗಳು ಘರ್ಷಣೆಗೆ ನಿಲ್ಲುವುದೆಲ್ಲ ಅವರು ವಿಶ್ವಾಸ ಇರಿಸಲು ಸಿದ್ಧವಿಲ್ಲದೆ ಮುಂದಿಡುವ ನೆಪಗಳು ಎಂಬುದೂ ಬಹಿರಂಗಗೊಳ್ಳುತ್ತದೆ. ಒಬ್ಬ ಸತ್ಯಸಂಧನಾದ ಸಂದೇಶ ಪ್ರಚಾರಕ ಮಾತ್ರ ಇಂತಹ ಸೂಕ್ಷ್ಮ ಮತ್ತು ಸವಾಲಿನ ಪರಿಸ್ಥಿತಿಯಲ್ಲಿ ತನ್ನ ಸಂದೇಶವನ್ನು ತಲುಪಿಸಲು ಧೈರ್ಯ ವಹಿಸುತ್ತಾನೆ. ಯಾಕೆಂದರೆ ಸುಳ್ಳುಗಾರನೆಂದು ಸಾಬಿತುಗೊಳ್ಳುವುದರಿಂದ ಅವನು ಕಠಿಣ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

ತಮ್ಮ ಅನ್ವೇಷಣೆಯಲ್ಲಿ ಕಂಡುಕೊಂಡ ಪರಿಣಾಮದ ಬಗ್ಗೆ ನಿರ್ಧಾರ ತಳೆದು ಅದರಂತೆ ಕರ್ಮವೆಸಗುವುದು. ಇದಕ್ಕೆಲ್ಲ ಜನರೇ ಸ್ವಯಂ ಜವಾಬ್ದಾರರು ಎಂಬ ವಿಚಾರವನ್ನು ಗಮನದಲ್ಲಿರಿಸಬೇಕು. ಆಗಲೇ ಅವರಲ್ಲಿ ಗಂಭೀರ ಮತ್ತು ಜವಾಬ್ದಾರಿಯುತವಾದ ಪ್ರಜ್ಞೆ ಬರುವುದು. ಇದು ಸರಿಯಾದ ಅನ್ವೇಷಣೆಗೆ ಮತ್ತು ಸರಿಯಾದ ಪರಿಣಾಮದೆಡೆಗೆ ತಲುಪಲು ಸಹಾಯಕವಾಗುತ್ತದೆ.

ನೈಜ ಪ್ರವಾದಿಯಲ್ಲಿ ಬಹಳ ಉನ್ನತವಾದ ಗುಣವೈಶಿಷ್ಟ್ಯಗಳಿರುತ್ತವೆ. ಅವರು ತಮ್ಮ ಕಾರ್ಯಕ್ಕೆ ಜನರಿಂದ ಯಾವುದೇ ಪ್ರತಿಫಲ ಪಡೆಯುವುದಿಲ್ಲ. ಯಾವುದೇ ಬೆಲೆಬಾಳುವ ವಸ್ತು ಅಂದರೆ ಸೃಷ್ಟಿಕರ್ತನ ಸಂದೇಶ ಜನರಿಗೆ ತಲುಪಿಸುವುದಕ್ಕಾಗಿ ಅವನು ಹಗಲೂ ರಾತ್ರೆ ನಿರಂತರ ಪರಿಶ್ರಮಿಸುತ್ತಾನೆ, ತ್ಯಾಗ ಮಾಡುತ್ತಾನೆ. ಸಂಪೂರ್ಣ ಪ್ರೀತಿ, ಪ್ರಾಮಾಣಿಕತೆ ಮತ್ತು ಹಿತಾಕಾಂಕ್ಷೆಗಳಿಂದ ಜನರು ನರಕದ ಬೆಂಕಿಯಿಂದ ಪಾರಾಗಲಿ ಮತ್ತು ಸ್ವರ್ಗ ಪ್ರವೇಶಿಸುವುದಕ್ಕೆ ಅರ್ಹರಾಗಲಿ ಎಂದು ಅವನು ಬಯಸುತ್ತಾನೆ. ಇದಕ್ಕೆ ಜನರಿಂದ ಅವನು ಯಾವುದೇ ಪ್ರತಿಫಲವನ್ನು ಪಡೆಯುವುದಿಲ್ಲ. ಇದಕ್ಕಾಗಿ ಅವನು ನಿಸ್ವಾರ್ಥವಾಗಿ ಪ್ರಯತ್ನಿಸುತ್ತಿರುತ್ತಾನೆ. ನಗರವಿಡೀ ಅವನ ವಿಶ್ವಸ್ಥತೆ, ಪ್ರಾಮಾಣಿಕತೆ ಪ್ರಸಿದ್ಧವಾಗಿರುತ್ತದೆ. ಅವನು ಎಂದೂ ಸುಳ್ಳಾಡದ ಒಬ್ಬ ಸತ್ಯಸಂಧ ವ್ಯಕ್ತಿಯೆಂಬ ವಿಶ್ವಾಸ ಇಡೀ ನಗರದ ಜನರ ನಡುವೆ ಇರುತ್ತದೆ.

ಪ್ರವಾದಿಯ ಬದುಕೇ ಸೃಷ್ಟಿಕರ್ತನ ದಿವ್ಯ ಸಂದೇಶಗಳ ಕಾರಣದಿಂದ ಸುಂದರ ವಾಗಿರುತ್ತದೆ. ಜೊತೆಗೆ ಅವರು ಇತರ ಜನರ ಜೀವನವನ್ನು ಕೂಡ ಇದೇ ಬೋಧನೆ ಗಳಡಿಯಲ್ಲಿ ಸುಂದರಗೊಳಿಸುತ್ತಾರೆ. ವಿಶ್ವಾಸ ಮತ್ತು ಚಾರಿತ್ರ್ಯದಲ್ಲಿ ಅವರೊಂದು ಸ್ವಯಂ ಪ್ರಕಾಶವಾಗಿದ್ದಾರೆ ಮತ್ತು ಜೊತೆಗೆ ಪರಿಸರವನ್ನೂ ಅವರು ಬೆಳಗಿಸುತ್ತಾರೆ.

ಅವರು ಸ್ಪಷ್ಟ ರೀತಿಯಲ್ಲಿ ಸಂದೇಶವನ್ನು ತಲುಪಿಸಲು ಪ್ರಯತ್ನಿಸುವವರು ಮತ್ತು ಜನರಿಗೆ ಸಂದೇಶವನ್ನು ವಿವರಿಸಿಕೊಡುವವರು. ಜನರನ್ನು ಸಂದೇಶ ಸ್ವೀಕರಿ ಸಲು ಪ್ರೇರೇಪಿಸುವವರು. ವಿಭಿನ್ನ ರೀತಿಯಲ್ಲಿ ವಿಷಯವನ್ನು ಬಹಳ ಪ್ರೀತಿಯಿಂದ ಪ್ರಾಮಾಣಿಕತೆ, ಯುಕ್ತಿಯೊಂದಿಗೆ ಪ್ರಸ್ತುತಪಡಿಸುತ್ತಾರೆ. ವಿಭಿನ್ನ ಸಮಯದಲ್ಲಿ ಯುಕ್ತಿ ಮತ್ತು ಘನತೆಯೊಂದಿಗೆ ಜನರ ಮುಂದೆ ಪ್ರಸ್ತುತಪಡಿಸುತ್ತಾರೆ. ಆದರೆ ತನ್ನ ಸಂದೇಶವನ್ನು ಸ್ವೀಕರಿಸಬೇಕೆಂದು ಅವರು ಯಾರನ್ನೂ ಬಲವಂತಪಡಿಸುವುದಿಲ್ಲ. ಅವರ ಆಯುಧ ಸಹನೆ ಮತ್ತು ಚಾರಿತ್ರ್ಯವಾಗಿದ್ದು ಜನರು ನಿರಾಕರಣೆ, ಉಪಟಳ, ತೊಂದರೆ ನೀಡಿದಾಗ ಅವರ ಮಾತುಗಳನ್ನು ಸ್ವೀಕರಿಸಲಿ, ಜನರ ಒಳಿತು ಅದರಲ್ಲಿ ಅಡಕವಾಗಿದೆ ಎಂದು ಅವರು ಪ್ರಾರ್ಥಿಸುತ್ತಾರೆ.

ನಿಜವಾದ ಪ್ರವಾದಿ ತನ್ನ ಬೋಧನೆಗಳ ಮೂಲಕ ಪರಿಚಿತರಾಗುವುದು. ಅವರ ಬೋಧನೆಗಳಲ್ಲಿರುವ ಕರುಣೆ, ಯುಕ್ತಿ, ಶ್ರೇಷ್ಠತೆ ಮತ್ತು ಘನತೆಗಳೇ ಅವರನ್ನು ಸೃಷ್ಟಿಕರ್ತತನ ಸಂದೇಶವಾಹಕರು ಮತ್ತು ಅವು ಸೃಷ್ಟಿಕರ್ತನ ಕಡೆಯಿಂದಿರುವ ಬೋಧನೆಗಳು ಎಂಬುದನ್ನು ಜನರಿಗೆ ದೃಢಪಡಿಸುವುದು. ನಿಜವಾದ ಪ್ರವಾದಿಯು ತನ್ನ ಜೀವನ ಪರಿಶುದ್ಧತೆಗಳಿಂದಲೂ ಪರಿಚಯಗೊಳ್ಳುತ್ತಾರೆ.

ಸೃಷ್ಟಿಕರ್ತನ ಸಂದೇಶ ಅವನ ದಾಸರಿಗೆ ತಲುಪುವುದು ಅನಿವಾರ್ಯ

ವಾಗಿದ್ದು ಇದು ಸಾಧ್ಯವಾಗದಿದ್ದರೆ ಅದಕ್ಕೆ ಪ್ರವಾದಿ ಹೊಣೆಗಾರರು. ಆದುದರಿಂದ ಸಂದೇಶ ತಲುಪಿಸಲು ಅವರು ಅವಿಶ್ರಾಂತವಾಗಿ ಪರಿಶ್ರಮಿಸುತ್ತಾರೆ. ಇನ್ನು ಪರಿಸ್ಥಿತಿಯು ವ್ಯತಿರಿಕ್ತ ವಿರೋಧದ್ದು ಆದರೂ ಅವರು ಹೆದರುವುದಿಲ್ಲ. ಅವನ್ನೆಲ್ಲ ನಿಭಾಯಿಸುತ್ತಾ ಎಂತಹ ಪರಿಸ್ಥಿತಿಯಲ್ಲೂ ತನ್ನ ಹೊಣೆಗಾರಿಕೆ ನಿರ್ವಹಣೆಯ ಪರಿಶ್ರಮದಲ್ಲಿ ನಿರತರಾಗಿರುತ್ತಾರೆ.

ಪ್ರವಾದಿಯ ಸಂದೇಶದಿಂದಾಗುವ ಪರಿಣಾಮಗಳ ಮೂಲಕ ಪ್ರವಾದಿಯ ನ್ಯಾಯ ಸಮ್ಮತತೆ ಬಹಿರಂಗವಾಗುತ್ತದೆ. ಅವರು ನಿಜವಾದ ಪ್ರವಾದಿಯೇ ಎಂದು ತಿಳಿದು ಬರುತ್ತದೆ. ಅವರ ಸಂದೇಶದ ಪರಿಣಾಮಗಳಲ್ಲಿ ಮಾನವರನ್ನು ಮೃಗೀಯತೆ ಮತ್ತು ಪೈಶಾಚಿಕತೆಯಿಂದ ಮೇಲೆತ್ತಿ ಮಾನವೀಯ ಸ್ಥಾನಕ್ಕೆ ತರುವುದು ಎಲ್ಲಕ್ಕಿಂತ ಮಹತ್ವದ್ದು ಆಗಿದೆ. ಅವರು ಸೃಷ್ಟಿಕರ್ತನ ಕಡೆಯಿಂದ ಬಂದಿರುವ ಪ್ರವಾದಿ ಎಂದು ಸುಲಭವಾಗಿ ಗುರುತಿಸಲು ನಮಗೆ ಸಾಧ್ಯವಾಗುತ್ತದೆ.

ಅವರನ್ನು ಗುರುತಿಸುವ ವಿಧಾನ ಅವರ ಚಾರಿತ್ರ್ಯಕ್ಕೆ ಸಂಬಂಧಿಸಿದ್ದಾಗಿದೆ. ಜನರು ಹತ್ತಿರದಿಂದ ತನ್ನ ಜೀವನವನ್ನು ನೋಡಿ ತಿಳಿಯುವಂತೆ ಮತ್ತು ತನ್ನ ಉನ್ನತ ವ್ಯಕ್ತಿತ್ವವನ್ನು ಗಮನಿಸಲು ಸಾಧ್ಯವಾಗುವಂತೆ ಅವರು ಸಹಜ ರೀತಿಯಲ್ಲಿ ಜನರೊಡನೆ ಬೆರೆಯುವರು.

ಅವರ ಮನುಷ್ಯ ಪ್ರೇಮ, ಸೃಷ್ಟಿಗಳ ಸೇವೆ, ಅವರ ತ್ಯಾಗಗಳೆಲ್ಲವೂ ವಿಶೇಷ ವಾಗಿ ಸಮಾಜದ ದುರ್ಬಲ ವಿಭಾಗಕ್ಕಿರುವುದಾಗಿದೆ ಮತ್ತು ಅವರ ಒಳಿತಿಗಾಗಿರುತ್ತದೆ. ಅವರ ಸ್ಪಷ್ಟ ವ್ಯವಹಾರಗಳು, ಆಹ್ಲಾದಕರ ಸಂಬಂಧಗಳು, ಅವರ ಉನ್ನತ ಚಾರಿತ್ರ್ಯ ಮತ್ತು ಅವರು ವಹಿಸುವ ಪಾತ್ರ ಎಲ್ಲವೂ ಪುಸ್ತಕದಂತೆ ಅಥವಾ ಬೆಳಕಿನಂತೆ ಜನರ ಮುಂದೆ ಬಹಿರಂಗವಾಗಿ ಪ್ರಕಟವಾಗಿರುತ್ತದೆ.

ಹಗಲು, ರಾತ್ರೆಯ ಹೀಗೆ ಅವರ ಸಂಪೂರ್ಣ ಜೀವನ ಜನರ ಮುಂದಿರುವುದು. ಅವರು ಪ್ರಸ್ತುತಪಡಿಸುವ ಸಂದೇಶದಂತೆ ಮೊತ್ತಮೊದಲು ಅವರು ಸ್ವಯಂ ಕರ್ಮ ವೆಸಗುತ್ತಾರೆ. ಜನರು ಅತ್ತಿತ್ತ ನಡೆದಾಡುವಾಗ ಅವರ ಪ್ರಾಯೋಗಿಕ ಜೀವನವನ್ನು, ಜೀವನ ರೀತಿಯನ್ನು ಹತ್ತಿರದಿಂದ ನೋಡಲು ಸಾಧ್ಯವಾಗುವುದು. ತತ್ಪರಿಣಾಮವಾಗಿ ಜನರಿಗೆ ಅವರ ಉನ್ನತ ಚಾರಿತ್ರ್ಯ ಮತ್ತು ವಿಚಾರಗಳು ಅರಿವಾಗಿ. ಸಮಾಜದಲ್ಲಿ ಅವರಂತಿರುವ ಬೇರೆ ಯಾವ ವ್ಯಕ್ತಿಯೂ ಇಲ್ಲ ಎಂದು ಮನವರಿಕೆ ಮತ್ತು ವಿಶ್ವಾಸ ಮೂಡುವಂತಾಗುತ್ತದೆ. ಜನರಿಗೆ ಇದರ ಮೂಲಕ ಅವರ ಬೋಧನೆಯ ಔನತ್ಯವು ಮನವರಿಕೆಯಾಗುತ್ತದೆ. ಈ ರೀತಿ ಸ್ವಾಭಾವಿಕವಾಗಿ ಮತ್ತು ನ್ಯಾಯ ಸಮ್ಮತವಾಗಿ ನಿಜವಾದ ಪ್ರವಾದಿಯನ್ನು ಗುರುತಿಸಲು ಜನರಿಗೆ ಸುಲಭಗೊಳಿಸಲಾಗಿದೆ.

ಜನರು ಪ್ರವಾದಿಯನ್ನು ಗುರುತಿಸುವುದು ಮತ್ತು ಅವರಲ್ಲಿ ವಿಶ್ವಾಸವಿರಿಸುವುದು ಸುಲಭಗೊಂಡ ನಂತರ, ಅವರನ್ನು ಜನರು ತಮ್ಮ ಸ್ವಾರ್ಥ ಮತ್ತು ಭೌತಿಕ ಆಸಕ್ತಿಗಳ ಆಧಾರಲ್ಲಿ ನಿರಾಕರಿಸುವುದಾದರೆ ಅದು ಸೃಷ್ಟಿಕರ್ತನ ತಪ್ಪಾಗುವುದಿಲ್ಲ. ಪ್ರವಾದಿಯ ತಪ್ಪೂ ಆಗುವುದಿಲ್ಲ. ಈ ತಪ್ಪಿಗೆ ಜನರೇ ಜವಾಬ್ದಾರರು. ತಮ್ಮ ಪಥಭ್ರಷ್ಟತೆ ಮತ್ತು ವಿನಾಶಗಳಿಗೆ ಜನರೇ ಹೊಣೆಗಾರರಾಗುತ್ತಾರೆ. ಯಾಕೆಂದರೆ ಅವರು ಪ್ರವಾದಿಯಲ್ಲಿ ವಿಶ್ವಾಸವಿರಿಸಲು ಮತ್ತು ಅವರ ಆಜ್ಞಾದೇಶಗಳನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ. ಆದ್ದರಿಂದ ಪ್ರವಾದಿ ಮತ್ತು ಪ್ರವಾದಿಯ ಸಂದೇಶದ ಅನ್ವೇಷಣೆ ನಡೆಸುವುದು ಮಹತ್ವವನ್ನು ಪಡೆದುಕೊಳ್ಳುತ್ತದೆ. ಅನ್ವೇಷಣೆಯ ಮೂಲಕವೇ ಜನರಿಗೆ ಪ್ರವಾದಿ(ಸ) ಮತ್ತು ಅವರು ತಂದಿರುವ ಸಂದೇಶದಲ್ಲಿ ತೃಪ್ತಿ ಮತ್ತು ವಿಶ್ವಾಸವಾಗುವುದು.

ನಿಜವಾದ ಪ್ರವಾದಿಯ ವಿಶೇಷತೆ ತಮ್ಮ ತಮ್ಮ ಜೀವನವನ್ನು ಸಂತೋಷದಿಂದ ಜನರ ಮುಂದೆ ಪ್ರಸ್ತುತಪಡಿಸುವುದಾಗಿದೆ. ಯಾಕೆಂದರೆ ಕೇವಲ ತನ್ನ ಮಾತಿನ ಮೂಲಕ ಅಲ್ಲ, ತನ್ನ ಕರ್ಮಗಳ ಮೂಲಕ ಪ್ರಾಯೋಗಿಕ ಜೀವನದ ಮೂಲಕ ಅವರು ಸೃಷ್ಟಿಕರ್ತನ ಸಂದೇಶವನ್ನು ಜನರಿಗೆ ತಲುಪಿಸುತ್ತಾರೆ.

ನಿಸ್ವಾರ್ಥ ಪ್ರಯತ್ನ

ಸೃಷ್ಟಿಕರ್ತನ ಸಂದೇಶವನ್ನು ತಲುಪಿಸುವ ನಿಸ್ವಾರ್ಥ ಪ್ರಯತ್ನ– ಅವಿರತ ಪರಿಶ್ರಮ, ಪ್ರವಾದಿಯು ಹಗಲು ರಾತ್ರೆ ಪರಿಶ್ರಮಿಸಿ ಪೂರ್ಣಾವಧಿ ಸಮಯವನ್ನು ವಿನಿಯೋಗಿಸಿ ತ್ಯಾಗ ಸಹಿಸಿ ಎದುರಾಗುವ ಎಲ್ಲ ಉಪಟಳ ಸಂಕಷ್ಟಗಳನ್ನು ಅನುಭವಿಸಿ ಸಂದೇಶವನ್ನು ನಿರಾಕರಿಸುವವರ ದೈಹಿಕವೂ ಮಾನಸಿಕವೂ ಆದ ಉಪಟಳಗಳನ್ನೆಲ್ಲ ತಾಳ್ಮೆಯಿಂದ ಸಹಿಸಿ ದೃಢಚಿತ್ತತೆಯಿಂದ, ಜನರಲ್ಲಿ ಪ್ರೀತಿಯಿಂದ, ಸಂದೇಶ ತಲುಪಿಸಲು ಪರಿಶ್ರಮಿಸುವುದು ಹೊಣೆಗಾರಿಕೆಯನ್ನು ನಿರ್ವಹಿಸಲು ಓರ್ವ ಪ್ರಾಮಾಣಿಕ ಸಜ್ಜನ ಹೊಣೆಗಾರ ವ್ಯಕ್ತಿಯಿಂದ ಮಾತ್ರ ಈ ಕೆಲಸ ಮಾಡಲು ಸಾಧ್ಯವಿದೆ.

ಒಂದೆಡೆ ಆರೋಪ, ನಿಂದನೆ, ಚಾರಿತ್ರ್ಯ ಹರಣ ಮತ್ತು ಇನ್ನೊಂದೆಡೆ ಆಮಿಷ, ಶ್ರೀಮಂತಿಕೆ, ಹೆಣ್ಣು, ಅಧಿಕಾರಗಳನ್ನೆಲ್ಲ ತಿರಸ್ಕರಿಸಿ ತಮ್ಮ ಅಭಿಯಾನದಲ್ಲಿ ದೃಢವಾಗಿ ನಿಲ್ಲುವುದು ಮತ್ತು ಆರ್ಥಿಕ, ಸಾಮಾಜಿಕ ಬಹಿಷ್ಕಾರಗಳ ನಂತರವೂ ಸೃಷ್ಟಿಕರ್ತನು ವಹಿಸಿಕೊಟ್ಟಿರುವ ಸೃಷ್ಟಿಕರ್ತನ ಪರಿಚಯ ಮತ್ತು ಅವನ ಸಂದೇಶವನ್ನು ಅದರಿಂದ ಅಪರಿಚಿತವಾಗಿರುವ ಅವನ ದಾಸರಿಗೆ ತಲುಪಿಸುವುದು. ಅದನ್ನು ನಿರ್ವಹಿಸುವ ವೇಳೆ ಎದುರಾಗುವ ಎಲ್ಲ ಅಡ್ಡಿ–ಆತಂಕಗಳನ್ನು, ಅಡೆತಡೆಗಳನ್ನು ಸಹಿಸಿ ಸಂಪೂರ್ಣ ಮನುಷ್ಯ ಹಿತಾಕಾಂಕ್ಷೆಯಲ್ಲಿ ಪ್ರೀತಿಯಿಂದ ಆ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಪ್ರವಾದಿಯ ನಿಸ್ವಾರ್ಥತೆಗೆ ಸಾಕ್ಷಿಯಾಗಿದೆ ಮತ್ತು ಅವರು ಹೇಳುವುದು ಮತ್ತು

ಮಾಡುವುದೆಲ್ಲವೂ ನಿಸ್ಸಂದೇಹವಾಗಿ ಸತ್ಯವಾಗಿದೆ. ಅವು ಸುಳ್ಳಾಗುವ ಯಾವುದೇ ಸಾಧ್ಯತೆಗಳಿಲ್ಲ.

ನಿಜವಾದ ಸಂದೇಶವಾಹಕರಿಗೆ ವಿರೋಧ ಮತ್ತು ಸಂಕಷ್ಟ ಎದುರಾದ ವೇಳೆ ಅವನು ಸತ್ಯಸಂಧನು ಎಂಬುದು ಹೆಚ್ಚು ಸ್ಫುಟಗೊಂಡು ಹೊರಗೆ ಕಾಣಿಸುತ್ತದೆ. ಆಗ ಅವನು ತನ್ನ ಅಭಿಯಾನದಲ್ಲಿ ತಾಳ್ಮೆಯಿಂದ ಪೂರ್ಣ ಪರಿಶ್ರಮದಿಂದ ಮತ್ತು ಅದೇ ಪ್ರೀತಿ, ಪ್ರಮಾಣಿಕತೆಯೊಂದಿಗೆ ಅಚಲನಾಗಿ ತೊಡಗಿಸಿಕೊಳ್ಳುತ್ತಾನೆ. ಈ ರೀತಿ ಸ್ವಾರ್ಥ ಜನರ ವಿರೋಧ ಮತ್ತು ಅವರು ಕೊಡುವ ದೈಹಿಕ ಮತ್ತು ಮಾನಸಿಕ ಕಿರುಕುಳಗಳನ್ನು ಮೊದಲೇ ಅನುಭವಿಸಿರುತ್ತಾನೆ. ವಿವಿಧ ರೀತಿಯಲ್ಲಿ ಹೋರಾಡುತ್ತಾನೆ.

ಆದರ್ಶ ಸಂದೇಶ

ಪ್ರವಾದಿತ್ವವಾದಿಯ ಸಂದೇಶದ ನೈಜತೆಯನ್ನು ನಾವು ಎರಡು ಪ್ರಮುಖ ಅಂಶಗಳ ಮೂಲಕ ಪರಿಶೀಲಿಸಿ ನೋಡಬಹುದು. ಅವನು ವಿಶ್ವ ಸಾಮ್ರಾಟನ ಪ್ರವಾದಿ ಎನ್ನುತ್ತಾನೆ. ವಿಶ್ವದ ಸಾಮ್ರಾಟ ಎಲ್ಲದರ ಸೃಷ್ಟಿಕರ್ತ. ಅವನಿಗೆ ಎಲ್ಲ ಮನುಷ್ಯರೊಂದಿಗೂ ಸಮಾನ ಪ್ರೀತಿಯಿದೆ. ಅವನ ಸಂದೇಶ ಸಕಲ ಮಾನವರಿಗೂ ಸಮಾನವಾಗಿದೆ. ಗಾಳಿ, ನೀರು ಇತ್ಯಾದಿಗಳಿರುವಂತೆ ಮನುಷ್ಯರಿಗೆ ಯಾವ ವಸ್ತು ಲಾಭದ್ದು ಅಥವಾ ಹಾನಿಕರ. ಹೀಗೆಯೇ ಮನುಷ್ಯರಿಗಾಗಿ ಹಲವು ವಿಷಯಗಳು ಇವೆ. ಪ್ರವಾದಿಯ ಬೋಧನೆಗಳ ಸತ್ಯವನ್ನು ಶೋಧಿಸಲು ನಾವು ಆ ಬೋಧನೆಗಳ ಮೂಲವನ್ನು ಪರಿಶೀಲಿಸಬೇಕು. ಅವರ ಬೋಧನೆಯು ಸಕಲ ಮನುಷ್ಯರಿಗೆ ಆದ್ಯತೆ ನೀಡಿದೆಯೇ, ಮನುಷ್ಯರು ಎಂಬ ಪರಿಗಣನೆ ನೀಡಿದೆಯೇ, ಈ ಸಂದೇಶ ಸಕಲ ಮನುಷ್ಯರನ್ನು ಮನುಷ್ಯರೆಂಬಂತೆ ಸಂಬೋಧಿಸುತ್ತದೆಯೇ ಅಥವಾ ಮನುಷ್ಯರ ನಡುವೆ ವ್ಯತ್ಯಾಸ ಮಾಡಿ ಅಭಿಸಂಬೋಧಿಸುತ್ತದೆಯೇ ಎಂದು ಪರಿಶೀಲಿಸಬೇಕು

ಶ್ರೀಮಂತ, ಬಡವ, ಕರಿಯ, ಬಿಳಿಯ, ಭಾಷೆ, ಸಮಯ, ಮನೆತನಗಳ ವ್ಯತ್ಯಾಸ ಇತ್ಯಾದಿ ತಾರತಮ್ಯ ಮಾಡುವ ಮೂಲಕ ಮನುಷ್ಯರನ್ನು ಸಂಬೋಧಿಸುತ್ತದೆಯೇ ಎಂದು ನೋಡಬೇಕು. ಅದು ಸೃಷ್ಟಿಕರ್ತನನ್ನು ಅರಿತು ಅವನಿಗೆ ವಿಧೇಯನಾಗಿ ಅವನ ಉತ್ಕೃಷ್ಟ ಬೋಧನೆ, ಕಾನೂನಿನಂತೆ ಕರ್ಮವೆಸಗಿ ಉತ್ತಮ ಮನುಷ್ಯನಾಗಿ ದ್ದಾನೆ ಎಂಬ ಆಧಾರದಲ್ಲಿ ಮಾತ್ರ ಅಂತರ ಮಾಡುತ್ತದೆ.

ಪ್ರತಿಯೊಬ್ಬ ಮನುಷ್ಯನಿಗೂ ಉತ್ತಮ ಕೆಲಸವನ್ನು ಮಾಡುವುದಕ್ಕೆ ಸಾಧಿಸಲು ಶ್ರೀಮಂತಿಕೆ, ಬಣ್ಣ, ಭಾಷೆ, ಸಮಯ (ಕಾಲ), ಮನೆತನಗಳ ಅಡಚಣೆ ಎಂಬುದಿರು ವುದಿಲ್ಲ. ಸೃಷ್ಟಿಕರ್ತನ ಉಪದೇಶ ಮತ್ತು ಬೋಧನೆಗಳು ಸಕಲ ಮನುಷ್ಯರಿಗೆ

ಸಮಾನವಾಗಿದೆ. ಯಾಕೆಂದರೆ ಒಬ್ಬನೇ ಸೃಷ್ಟಿಕರ್ತನು ಎಲ್ಲ ಮನುಷ್ಯರನ್ನು ಸೃಷ್ಟಿಸಿದ್ದಾನೆ.

ಎಲ್ಲರ ಪ್ರಕೃತಿ ಒಂದೇ ಆಗಿದೆ. ಆದ್ದರಿಂದ ಎಲ್ಲರಿಗೂ ಒಂದೇ ವಿಷಯ ಲಾಭ ಅಥವಾ ನಷ್ಟದ್ದಾಗಿರುತ್ತದೆ. ಎಲ್ಲ ಮನುಷ್ಯರು ಸೃಷ್ಟಿಸಿದಾತನ ದೃಷ್ಟಿಯಲ್ಲಿ ಸಮಾನರು. ಅವನು ತಾನೇ ಸೃಷ್ಟಿಸಿದವುಗಳಲ್ಲಿ ಬಣ್ಣ, ವಂಶ, ಕುಲಗಳ ಆಧಾರದಲ್ಲಿ ಅಂತರ ಮಾಡುವುದಿಲ್ಲ. ಆದರೆ ಮನುಷ್ಯರು ಕೆಟ್ಟದು ಮತ್ತು ಒಳ್ಳೆಯ ವಿಚಾರಗಳಿಂದು ತಮ್ಮದೇ ಆಧಾರದಲ್ಲಿ ಅಂತರ ಮಾಡುವುದು.

ಕೆಟ್ಟ ಕರ್ಮ ಮತ್ತು ಉತ್ತಮ ಕರ್ಮಗಳ ತಳಹದಿಯಲ್ಲಿ ಒಂದೋ ಅವರನ್ನು ಪ್ರೀತಿಸುತ್ತಾನೆ ಅಥವಾ ಕೋಪಗೊಳ್ಳುತ್ತಾನೆ. ಒಂದೋ ಪ್ರತಿಫಲ ನೀಡುತ್ತಾನೆ ಅಥವಾ ಶಿಕ್ಷೆ ಕೊಡುತ್ತಾನೆ.

ಪ್ರವಾದಿಗೆ ಸಂಬಂಧಿಸಿದ ಈ ತಾತ್ವಿಕ ವಿವರಣೆ ಅಥವಾ ತಾತ್ವಿಕ ವಿಷಯಗಳು ಜನರ ಹೃದಯವನ್ನು ಸ್ಪರ್ಶಿಸುತ್ತವೆ.

ಮನಸ್ಸಿಗೆ ತೃಪ್ತಿ ನೀಡುತ್ತದೆ. ಇದರಲ್ಲಿ ಮೊದಲನೆಯ ವಿಷಯವೆಂದರೆ ಮೇಲೆ ವಿವರಿಸಿದ ಬೋಧನೆಗಳು ಸಾರ್ವತ್ರಿಕವಾದದ್ದು. ಕಾಲ, ಸ್ಥಾನ ಮತ್ತು ಮಾನವ ಜನಾಂಗಕ್ಕೆ ಸಂಬಂಧಿಸಿ ಇನ್ನೊಂದು ಪ್ರಾಮುಖ್ಯ ಅಂಶ. ಪ್ರವಾದಿತ್ವವಾದಿಯ ತಾತ್ವಿಕ ವಿಷಯವೆಂದರೆ ಮಾನವ ಸಮಾನತೆಯಾಗಿದೆ. ಸಕಲ ಮನುಷ್ಯರು ಸಮಾನರು ಎಂಬ ಸಮಾನತೆ ಅದು. ಆದುದರಿಂದ ಸಕಲ ಮನುಷ್ಯರು ಒಬ್ಬರೇ ತಂದೆ-ತಾಯಿಯ ಮಕ್ಕಳು. ಒಬ್ಬನೇ ಸೃಷ್ಟಿಕರ್ತನ ಸೃಷ್ಟಿಗಳು ಎಂಬುದಾಗಿದೆ. ಸಕಲ ಮನುಷ್ಯರನ್ನು ಈ ತಾತ್ವಿಕ ವಾಸ್ತವಿಕತೆಯ ಆಧಾರವು ಜೋಡಿಸುವುದು, ಒಗ್ಗೂಡಿಸುವುದು ಮತ್ತು ಸಕಲ ಮನುಷ್ಯರನ್ನು ಒಂದೇ ಸಮುದಾಯವನ್ನಾಗಿಸುವುದು. ಈ ಎರಡು ವಿಷಯಗಳು ಎಲ್ಲ ವ್ಯತ್ಯಾಸಗಳನ್ನು ಅಳಿಸಿ ಹಾಕುತ್ತದೆ. ಅದು ಭೌಗೋಳಿಕವಾದದ್ದು ಆಗಿರಲಿ. ಕಾಲಾನುಕ್ರಮದ್ದು ಆಗಿರಲಿ. ಅಥವಾ ಜನಾಂಗ, ವರ್ಣ, ವರ್ಗ ಇತ್ಯಾದಿ ವ್ಯತಾಸ್ಯಗಳೇ ಇರಲಿ ಪ್ರವಾದಿಯ ಬೋಧನೆ ಅಳಿಸಿ ಹಾಕುತ್ತದೆ.

ಈ ಎರಡು ತಳಹದಿಯ ಮೇಲೆ ಸಂಪೂರ್ಣ ಬೋಧನೆಯು ಚಲಿಸುತ್ತದೆ ಮತ್ತು ಒಂದೇ ಬೋಧನೆ ಎಲ್ಲರಿಗೂ ಅನ್ವಯ ಆಗಿರುತ್ತದೆ. ಯಾಕೆಂದರೆ ಎಲ್ಲ ಮನುಷ್ಯರ ಪ್ರಕೃತಿ ಒಂದೇ. ಎಲ್ಲ ಮನುಷ್ಯರು ಒಬ್ಬನೇ ಸೃಷ್ಟಿಕರ್ತನಿಂದ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ಸೃಷ್ಟಿಕರ್ತನು ಎಲ್ಲರ ಸೃಷ್ಟಿಕರ್ತನಾಗಿದ್ದಾನೆ. ಅವನು ತಾನೇ ಮಾಡಿದ ವಸ್ತುವಿನಲ್ಲಿ ಯಾವುದೇ ತಾರತಮ್ಯವನ್ನೂ ಮಾಡುವುದಿಲ್ಲ.

ನೈಜ ವಾದಿಯು ಪ್ರಸ್ತುತ ಪಡಿಸುವ ತತ್ವವು ಮಾನವೀಯ ಏಕತೆಯ ಬಲವಾದ ಪರಿಕಲ್ಪನೆಯನ್ನು ನೀಡುತ್ತದೆ. ಆದರ್ಶವಾದಿ ಸಮಾಜವೊಂದರ ಪ್ರಥಮ

ಶರ್ತವೇ ಏಕತೆ ಮತ್ತು ಮಾನವೀಯತೆಯಾಗಿದ್ದು ಏಕತೆ ಮತ್ತು ಮಾನವೀಯ ಪರಿಕಲ್ಪನೆಯಡಿಯಲ್ಲಿ ಸಕಲ ಮನುಷ್ಯರಿಗೆ ಏಕ ಸೃಷ್ಟಿಕರ್ತ ಮತ್ತು ಸಕಲ ಮನುಷ್ಯರು ಒಂದೇ ತಂದೆ–ತಾಯಿ ಮಕ್ಕಳಾಗಿರುವುದು ಆವಶ್ಯಕ.

ನೈಜ ವಾದಿಯ ಮೊದಲ ನೈಜ ತಾತ್ವಿಕ ವಿಷಯದಂತೆ ಕರ್ಮವೆಸಗಿದರೆ ಅವನು ನೀಡುವ ಬೋಧನೆಯ ಮತ್ತು ಕಾನೂನಿನ ಪರಿಣಾಮದಲ್ಲಿ ಸ್ವಯಂ ಜಾರಿಯಾಗುವ ಶಕ್ತಿಯಿದೆ. ಅಂದರೆ ಸಂದೇಶ ನೀಡುವಾತನ ಸಂದೇಶವನ್ನು ಜೀವನದಲ್ಲಿ ಅಳವಡಿಸಿ ಜಾರಿಗೆ ತಂದರೆ ಆ ಬೋಧನೆ ಮತ್ತು ಕಾನೂನುಗಳಲ್ಲಿ ಸ್ವಯಂ ಜಾರಿಗೊಳ್ಳುವ ಶೇ. 90ರಷ್ಟು ಒತ್ತಡ ಮತ್ತು ಶಕ್ತಿಯನ್ನು ಸ್ವತಃ ಅದುವೇ ಹೊಂದಿರುತ್ತದೆ.

1) ಮನುಷ್ಯನ ಜೀವನದಲ್ಲಿ ಅದು ಜಾರಿಗೊಳ್ಳುವುದಕ್ಕೆ ಪ್ರಪಂಚ ಸಾಮ್ರಾಟನ ಕಡೆಯಿಂದಿರುವ ಬೋಧನೆಯಾಗಿರುವುದು ಕಾರಣ. ಈ ಕಾರಣದಿಂದಲೇ ಅದರಲ್ಲಿ ಪಾವಿತ್ರ್ಯ ಮತ್ತು ಭಯ ಬರುವುದು.

2) ಪ್ರಪಂಚ ಸೃಷ್ಟಿಕರ್ತನ ಆದೇಶಗಳು ಮನುಷ್ಯನ ಪ್ರಕೃತಿಗೆ ಪೂರಕವಾಗಿರುತ್ತದೆ. ಅದರಿಂದ ಆಗುವ ಪರಿಣಾಮ ಉಪಯುಕ್ತವೂ ಸರಿಯಾದ ಪರಿಣಾಮವೂ ಆಗಿರುತ್ತದೆ. ಕ್ರೌರ್ಯ ಮತ್ತು ದೌರ್ಜನ್ಯದಿಂದ ಮುಕ್ತವಾಗಿದ್ದು, ಮಧ್ಯಮ, ನ್ಯಾಯಯುತ, ಕರುಣೆ, ಸಹಾನುಭೂತಿಗಳನ್ನೊಳಗೊಂಡಿದ್ದಾಗಿರುತ್ತದೆ. ಮಾನವ ಜೀವನದಲ್ಲಿ ಇದರ ಪರಿಣಾಮವಾಗಿ ಶಾಂತಿ ನೆಮ್ಮದಿ ನೆಲೆಸುತ್ತದೆ.

3) ಪ್ರಪಂಚ ಸಾಮ್ರಾಟನ ವಿಧೇಯತೆಯ ಪರಿಣಾಮವೆಂದರೆ ಅವನ ಸಂಪ್ರೀತಿ ದೊರಕುವುದು ಮತ್ತು ಅವನ ಶಿಕ್ಷೆಯಿಂದ ಪಾರಾಗುವುದು. ಇದಕ್ಕೆ ಬದಲಾಗಿ ಅವನ ಕಾನೂನುಗಳನ್ನು ತಿರಸ್ಕರಿಸಿ ಜನರ ಮೇಲೆ ದೌರ್ಜನ್ಯವೆಸಗುವ ಪರಿಣಾಮವೆಂದರೆ ಶಿಕ್ಷಿಸಲ್ಪಡುವುದು ಆಗಿದೆ. ವಿಶ್ವ ಸಾಮ್ರಾಟನು ತನ್ನ ಕಾನೂನುಗಳ ಪಾಲನೆ ಮತ್ತು ನಿರಾಕರಣೆಗಳ ವಿಧಿಗಳನ್ನು ತನ್ನ ಶಿಕ್ಷೆ ರಕ್ಷೆಯೊಂದಿಗೆ ಜೋಡಿಸಿದ್ದಾನೆ. ಮಾತ್ರವಲ್ಲ ಸ್ವಯಂ ಅನುಷ್ಠಾನಗೊಳ್ಳುವ ಶಕ್ತಿ ಮನುಷ್ಯನೊಳಗೆ ಅಂತರ್ಗತವಾಗಿದ್ದು ಅವು ಜಾರಿಗೊಳ್ಳುವ ಕಾರಣಗಳು ದೇವನ ಬೋಧನೆಯಲ್ಲಿದೆ. ಕೇವಲ ಶೇ. 10ರಷ್ಟು ಹೊರಗಿನ ಶಕ್ತಿಯ ಔಚಿತ್ಯವಿದೆ. ಇಷ್ಟಕ್ಕೆ ಪೊಲೀಸ್ ನ್ಯಾಯಾಂಗ ವ್ಯವಸ್ಥೆಯ ಆವಶ್ಯಕತೆ ಎದುರಾಗುತ್ತದೆ.

❖ ❖ ❖ ❖

ಅಧ್ಯಾಯ 2

ಮುಹಮ್ಮದ್(ಸ)ರ ಪ್ರವಾದಿತ್ವವು ಸತ್ಯವೇ?

ಪ್ರವಾದಿತ್ವವನ್ನು ವಾದಿಸುವ ವ್ಯಕ್ತಿ ಸತ್ಯವನ್ನು ಹೇಳುವವನೇ ಅಥವಾ ಸುಳ್ಳು ಹೇಳುವವನೇ ಎಂಬ ಅನ್ವೇಷಣೆಗೆ ಸಂಬಂಧಿಸಿದ ಸಾಮಾನ್ಯ ಚರ್ಚೆ ಕಳೆದ ಅಧ್ಯಾಯದಲ್ಲಿ ಬಂದಿದೆ. ಈಗ ಇಲ್ಲಿ ನಿರ್ದಿಷ್ಟ ವ್ಯಕ್ತಿಯನ್ನು ತೆಗೆದುಕೊಂಡು ಅವರ ಪ್ರವಾದಿತ್ವವಾದದ ಕುರಿತು ಅನ್ವೇಷಣೆ ನಡೆಯಲಿದೆ. ಇದು ಒಂದು ಸವಾಲು ಎಂಬಂತೆ ನಮ್ಮ ಮುಂದಿದೆ.

ಮುಹಮ್ಮದರ(ಸ) ಪ್ರವಾದಿತ್ವವಾದದ ದೃಢೀಕರಣದ ಅನ್ವೇಷಣೆ

ಈಗ ನಮ್ಮ ಮುಂದಿರುವ ಗುರಿ ಅಥವಾ ಸವಾಲು ನಿಕಟ ಕಾಲದಲ್ಲಿ ಸೃಷ್ಟಿಕರ್ತನು ತನ್ನ ಪರಿಚಯ ಮತ್ತು ತನ್ನ ಸಂದೇಶವನ್ನು ಕೊಟ್ಟು ಬೇರೆ ಬೇರೆ ಮನುಷ್ಯರೆಡೆಗೆ ಯಾವ ವ್ಯಕ್ತಿಯನ್ನು ಕಳುಹಿಸಿದ್ದಾನೆ ಎಂಬುದು. ಹಾಗಿದ್ದರೆ ಹೀಗೆ ಕಳುಹಿಸಲ್ಪಟ್ಟಿರುವ ಆ ವ್ಯಕ್ತಿ ಯಾರು? ಆ ವ್ಯಕ್ತಿ ಜೀವಂತವಾಗಿ ಉಪಸ್ಥಿತನಿರುವವನೇ ಅಥವಾ ಒಂದು ಐತಿಹಾಸಿಕ ಸತ್ಯವಾಗಿರುವನೇ?

ಪ್ರಪಂಚದಾದ್ಯಂತ ಈಗ ಇರುವ ಮನುಷ್ಯರಲ್ಲಿ ಯಾರು ಕೂಡ ಅಂತಹ ಧ್ವನಿಯಿಂದ ತಾನು ಸೃಷ್ಟಿಕರ್ತನ ಕಡೆಯಿಂದ ಕಳುಹಿಸಲ್ಪಟ್ಟಿರುವ ಪ್ರವಾದಿಯಾಗಿದ್ದೇನೆ ಎಂದು ಹೇಳಿಕೊಳ್ಳುವುದು ಕೇಳಿ ಬಂದಿಲ್ಲ. ಆದುದರಿಂದ ನಾವು ಇತಿಹಾಸದಲ್ಲಿ ಹುಡುಕಬೇಕಾಗುವುದು. ಆದರೆ ಪ್ರವಾದಿತ್ವದ ಧ್ವನಿಗಳು ಮಾನವೇತಿಹಾಸದ ವ್ಯಾಪ್ತಿಯಲ್ಲಿ ಬಹಳಷ್ಟು ಕೇಳಿಸಿವೆ. ಪ್ರವಾದಿತ್ವವಾದದೊಂದಿಗೆ ಹಲವರನ್ನು ಸೃಷ್ಟಿಕರ್ತನ ಕಡೆಯಿಂದ ಪ್ರವಾದಿಯನ್ನಾಗಿ ಮಾಡಿ ಕಳುಹಿಸಲಾಗಿತ್ತು. (ಪ್ರವಾದಿ ಮೂಸಾ, ಈಸಾ, ಇಬ್ರಾಹೀಮ್, ದಾವೂದ್, ಸುಲೈಮಾನ್ ಮತ್ತು ಯೂಸುಫ್ ಮುಂತಾದವರು) ಅವರು ತಂತಮ್ಮ ಕಾಲದಲ್ಲಿ ಮನುಷ್ಯರೆಡೆಗೆ ಸೃಷ್ಟಿಕರ್ತನ ಸಂದೇಶವನ್ನು ತಲುಪಿಸಿದರು. ಅತ್ಯಂತ ಕೊನೆಯದಾಗಿ ನಮಗೆ ನಿಕಟ ಕಾಲದಲ್ಲಿ ಪ್ರವಾದಿತ್ವವಾದದ ಧ್ವನಿ ಮುಹಮ್ಮದ್ ಬಿನ್ ಅಬ್ದುಲ್ಲಾ ಬಿನ್ ಅಬ್ದುಲ್ ಮುತ್ತಲಿಬ್‌ರಿಂದ ಅವರ ನಗರ ಮಕ್ಕಾದಿಂದ ಕೇಳಿ ಬಂತು.

ಇಸವಿ 611ರಲ್ಲಿ ಆಗ ಮುಹಮ್ಮದ್(ಸ)ರಿಗೆ ನಲ್ವತ್ತು ವರ್ಷ ವಯಸ್ಸು ಆಗಿತ್ತು. ತಾನು ವಿಶ್ವದ ಸೃಷ್ಟಿಕರ್ತನ ಪ್ರವಾದಿಯೆಂದು ವಾದಿಸಿದರು. ಈಗ ನಾವು ಅವರ ಈ ವಾದವನ್ನು ಪರಿಶೀಲಿಸಬೇಕು, ಅನ್ವೇಷಿಸಬೇಕು. ನಿಜವಾಗಿಯೂ ಅವರ ವಾದ ಸತ್ಯವೇ? ಇದನ್ನು ಸಂಪೂರ್ಣ ಗಂಭೀರವಾಗಿ ಅನ್ವೇಷಿಸುವುದು, ಅವರ ವಾದವನ್ನು ನಂಬುವುದು ಮತ್ತು ನಿರಾಕರಿಸುವುದು ನಮ್ಮ ಜೀವನಕ್ಕೆ ಸಂಬಂಧಿಸಿದ ಒಂದು ಪ್ರಮುಖ ನಿರ್ಧಾರವಾಗಿರುತ್ತದೆ.

ಇದು ನಮ್ಮ ಇಡೀ ಜೀವನ ಮತ್ತು ಜೀವನದ ಪ್ರತಿಯೊಂದು ಮಗ್ಗುಲು ಮತ್ತು ಪಾರ್ಶ್ವಗಳಲ್ಲಿ ಪ್ರಬಲ ಪರಿಣಾಮ ಬೀರುತ್ತದೆ. ಅದರಲ್ಲಿ ನಮಗೆ ಋಣಾತ್ಮಕ ಮತ್ತು ಧನಾತ್ಮಕ ಮಾರ್ಗದರ್ಶನ ಇರುವುದು. ಅನ್ಯಥಾ ಜೀವನ ಮಾರ್ಗದರ್ಶನದಿಂದ ನಾವು ವಂಚಿತರಾಗುವೆವು. ಪ್ರವಾದಿಯ ಮಾರ್ಗದರ್ಶನದ ಮೂಲಕ ಸೃಷ್ಟಿಕರ್ತನ ಅಧಿಕೃತ ಪರಿಚಯ ಪಡೆಯಬಹುದು, ಇಲ್ಲವೇ ಅದರಿಂದ ವಂಚಿತರಾಗುವೆವು. ಒಂದು ವೇಳೆ ವಾದಿಯು (ಪ್ರವಾದಿತ್ವವಾದಿ) ಸುಳ್ಳುಗಾರನಾಗಿದ್ದು ಅವನನ್ನು ನಿಜವಾದ ಪ್ರವಾದಿಯೆಂದು ತಿಳಿದರೂ ನಮಗೆ ವಿನಾಶವಿದೆ.

ಆದುದರಿಂದ ಇತಿಹಾಸದಲ್ಲಿ ಅನ್ವೇಷಣೆ ನಡೆಸುವುದು ಮುಖ್ಯ. ಅಧಿಕೃತ ಐತಿಹಾಸಿಕ ಮೂಲಗಳಿಂದ ಅನ್ವೇಷಿಸಬೇಕು. ಎಲ್ಲಕ್ಕಿಂತ ಹೆಚ್ಚು ಅಧಿಕೃತವಾದ ಮೂಲ ಪ್ರವಾದಿ ಮುಹಮ್ಮದ್‌ರ(ಸ) ನಿಕಟವರ್ತಿಗಳು ಆಗಿದ್ದಾರೆ.

ಅವರ ಮೂಲಕ ಅನ್ವೇಷಣೆ ನಡೆಸಬೇಕಾಗಿದೆ. ಅವರೇ ತೀರಾ ಸಮೀಪದಿಂದ ಮುಹಮ್ಮದರನ್ನು(ಸ) ನೋಡಿದವರು, ಅವರ ಮಾತುಗಳನ್ನು ಆಲಿಸಿದವರು, ಅವರೊಂದಿಗೆ ಸಮಯ ಕಳೆದವರು. ಜೀವನದ ವಿವಿಧ ಹಂತಗಳಲ್ಲಿ ಅವರ ಜೊತೆಗಿದ್ದವರು, ಕಷ್ಟ ಸುಖಗಳಲ್ಲೂ ಅವರ ಜೊತೆಗಿದ್ದವರು, ಅವರನ್ನು ನಿಜವಾಗಿ ಪ್ರೀತಿಸಿದವರು, ಗೌರವಿಸಿದವರು, ತಮ್ಮ ಜೀವಕ್ಕಿಂತ ಮಿಗಿಲಾಗಿ ಪ್ರವಾದಿಯನ್ನು ಪ್ರೀತಿಸಿದವರು ಮತ್ತು ಪ್ರವಾದಿಯ ಪ್ರತಿಯೊಂದು ವಿಷಯ, ಕರ್ಮಗಳನ್ನು ಸುರಕ್ಷಿತಗೊಳಿಸಿ ಇರಿಸಿದವರು. ಪ್ರವಾದಿ ಮಾಡಲು ಅನುಮತಿಸಿದ ಮತ್ತು ಮಾಡದಂತೆ ನಿಷೇಧಿಸಿದ ವಿಷಯಗಳನ್ನು ಕೂಡ ಕಾಪಾಡಿಕೊಂಡು ಬಂದಿದ್ದಾರೆ ಮತ್ತು ವಿವಿಧ ಘಟನೆಗಳ ವೇಳೆ ಅವುಗಳನ್ನು ರಕ್ಷಣೆ ಮಾಡಿದರು. ತಮ್ಮ ಮನೆ ಮಂದಿಗೆ, ತಮ್ಮ ಸಂಗಡಿಗರಿಗೆ ಮತ್ತು ಮುಂಬರುವ ತಲೆಮಾರಿಗೆ ಅವು ತಲುಪುವಂತೆ ನೋಡಿಕೊಂಡರು. ಪ್ರವಾದಿ ಮುಹಮ್ಮದ್‌ರ(ಸ) ಶಿಷ್ಯರು ಪ್ರತಿಯೊಂದು ಕರ್ಮಗಳಲ್ಲಿ ಪ್ರವಾದಿಯನ್ನು ಅನುಸರಿಸಿ ಜಾರಿಗೆ ತಂದರು. ಅದು ಮುಂದುವರಿದು ತಲೆಮಾರಿನಿಂದ ತಲೆಮಾರಿಗೆ ಹಬ್ಬುತ್ತಾ ಹೋಯಿತು. ಇದುವೇ ನಮ್ಮ ಅನ್ವೇಷಣೆಗಿರುವ ಅಧಿಕೃತ ಮೂಲವಾಗಿದೆ.

ಈ ಮೂಲವನ್ನು ಹೊರತುಪಡಿಸಿ ಇತರ ಅನಧಿಕೃತ ಮೂಲಗಳನ್ನು ಅನ್ವೇಷಣೆಗೆ ಆಶ್ರಯಿಸಬಾರದು. ಜ್ಞಾನ ಮತ್ತು ಅರಿವುಗಳಿಲ್ಲದ್ದು, ಅರೆಬರೆ ಜ್ಞಾನದ ಸಂಕುಚಿತ ಮತ್ತು ಪೂರ್ವಗ್ರಹ ಪೀಡಿತ, ಸಂದೇಹಾಸ್ಪದ ಮೂಲಗಳನ್ನು ಅನ್ವೇಷಣೆಗೆ ಉಪಯೊಗಿಸಿದರೆ ಅನ್ವೇಷಕ ಅರ್ಧ ದಾರಿಯಿಂದ ಹಿಂದಿರುಗುವನು. ಅಷ್ಟರಲ್ಲೇ ಅವನ ಪ್ರಯತ್ನಕ್ಕೆ ಅಡಚಣೆಯುಂಟಾಗುತ್ತದೆ. ಜ್ಞಾನದ ಅಭಾವ ಅದಕ್ಕೆ ಕಾರಣವಾಗಿ ರುತ್ತದೆ. ಆದುದರಿಂದ ಅಧಿಕೃತ ಮೂಲಗಳ ಮೂಲಕ ಅನ್ವೇಷಿಸುವುದು ಮುಖ್ಯವಾಗಿದೆ. ಯಾವ ವ್ಯಕ್ತಿ ಪ್ರಾಮಾಣಿಕ ಅನ್ವೇಷಣೆಯನ್ನು ಬಯಸುವನೊ ಅವನು ಅಧಿಕೃತ ಗ್ರಂಥಗಳಿಂದ ಜ್ಞಾನ ಪಡೆದುಕೊಳ್ಳಬೇಕಾಗಿದೆ. ಪ್ರವಾದಿ ಮುಹಮ್ಮದ್‌ರ(ಸ) ಪ್ರವಾದಿತ್ವ ವನ್ನು ನಿರಾಕರಿಸುವವರ ಬರಹಗಳಿಂದ ಮೋಸಕ್ಕೊಳಗಾಗಬಾರದು. ಅವರು ಪ್ರವಾದಿಯೊಂದಿಗೆ ದ್ವೇಷ ಮತ್ತು ಅಸೂಯೆ ಹೊಂದಿರುವವರು. ಅವರ ಬಗ್ಗೆ ಪೂರ್ವಾಗ್ರಹ ಇಟ್ಟುಕೊಂಡಿರುವವರು. ಅನ್ವೇಷಣೆಗೆ ಪ್ರವಾದಿ ಮುಹಮ್ಮದರ(ಸ) ಅಧಿಕೃತ ಜೀವನ ಚರಿತ್ರೆಯನ್ನು ಪರಿಶೀಲಿಸಿರಿ.

ಒಬ್ಬ ಅಧಿಕೃತ ವ್ಯಕ್ತಿ ಅಥವಾ ಅಧಿಕೃತ ಸಂದೇಶದ ಹುಡುಕುವಿಕೆಗೆ ಅಧಿಕೃತ ವಾದುದರ ಆಯ್ಕೆ ಮುಖ್ಯ ಮತ್ತು ಆವಶ್ಯಕವಾಗಿದೆ. ಇಲ್ಲದಿದ್ದರೆ ನಮ್ಮ ಪ್ರಯತ್ನ ನಿಷ್ಪ್ರಯೋಜಕವಾಗುತ್ತದೆ.

ಸೃಷ್ಟಿಕರ್ತನ ಕಡೆಯಿಂದ ಪ್ರವಾದಿ ಮುಹಮ್ಮದರಿಗೆ(ಸ) ಸಂದೇಶ ಬಂದ (ಅವತೀರ್ಣಗೊಂಡಾಗಿನ) ಮೊದಲ ಅನುಭವವನ್ನು ಇತಿಹಾಸ ವಿವರಿಸಿದೆ. ಆಗ ಅವರು ತುಂಬ ಗಾಬರಿಗೊಂಡರು. ತಮ್ಮ ಜೀವಕ್ಕೆ ಅಪಾಯದ ಅನುಭವವಾಯಿತು. ಮನೆಗೆ ಬಂದು ಮಲಗಿಬಿಟ್ಟರು. ಅವರ ಪತ್ನಿ ಹಝ್ರತ್ ಖದೀಜ(ರ) ಚದ್ದರ ಹೊದಿಸಿದರು. ಸಂತೈಸುತ್ತಾ ನೀವು ಅತ್ಯುತ್ತಮ ಕಾರ್ಯ ಮಾಡುವವರು, ನಿಮ್ಮ ಪ್ರಭು ನಿಮ್ಮನ್ನು ನಿರರ್ಥಕಗೊಳಿಸಲಾರನೆಂದು ಧೈರ್ಯ ತುಂಬಿದರು. ನೀವಂತು ತುಂಬ ಉನ್ನತ ಕಾರ್ಯ ಮಾಡುವವರು ಮತ್ತು ನೀವೊಬ್ಬ ಪರಿಶುದ್ಧ ವ್ಯಕ್ತಿ. ಈ ರೀತಿ ಪ್ರವಾದಿಯ ಈ ಗುಣವೈಶಿಷ್ಟ್ಯಗಳಿಗೆ ಅವರ ಪತ್ನಿ ಹಝ್ರತ್ ಖದೀಜ ಸಾಕ್ಷ್ಯ ವಹಿಸಿದರು. ಅವರ ಪತ್ನಿಯಾಗಿ 15 ವರ್ಷಗಳ ವರೆಗೆ ಅವರ ಬಳಿ ಇದ್ದು ಬಹಳ ಹತ್ತಿರದಿಂದ ನೋಡಿದ್ದರು. ಪತಿಯ ಮೇಲಿನ ಸಂಪೂರ್ಣ ಭರವಸೆಯಿಂದ ಈ ರೀತಿ ಧೈರ್ಯ ತುಂಬಿದರು. ನಿಮ್ಮ ಪ್ರಭು ನಿಮ್ಮನ್ನು ಎಂದೂ ಕೈಬಿಡಲಾರನು. ನೀವು ಸಂಬಂಧಿಕರೊಡನೆ ಉತ್ತಮವಾಗಿ ವರ್ತಿಸುವವರು. ಸತ್ಯ ನುಡಿಯುವವರು. ವಿಶ್ವಸ್ಥತೆಯನ್ನು (ಅಮಾನತನ್ನು) ನಿಭಾಯಿಸುವವರು. ಅಸಹಾಯಕರೊಡನೆ ಅನುಕಂಪ ದಿಂದ ವರ್ತಿಸುವವರು. ಬಡ ನಿರ್ಗತಿಕರಿಗೆ ಸಹಾಯ ಮಾಡುವವರು. ಅತಿಥಿಗಳನ್ನು ಸತ್ಕರಿಸುವವರು ಮತ್ತು ಉತ್ತಮ ಕೆಲಸಗಳಿಗೆ ಸಹಕರಿಸುವವರು.

ಜೀವಕ್ಕೆ ಅಪಾಯವಿದೆ ಎಂದು ಪ್ರವಾದಿ(ಸ) ಗಾಬರಿಗೊಂಡ ಘಟನೆಯಿಂದ ನಮಗೆ ದಿವ್ಯ ಸಂದೇಶದ (ವಹ್ಯ್‌ನ) ಹೊಣೆಗಾರಿಕೆಯು ಅವರಿಗೆ(ಸ) ಅನಿರೀಕ್ಷಿತವಾಗಿ ಬಂತು ಮತ್ತು ಪರಿಶುದ್ಧ ಗುಣವೈಶಿಷ್ಟ್ಯಗಳನ್ನು ಹೊಂದಿದ ವ್ಯಕ್ತಿಯನ್ನು ಪ್ರಪಂಚದ ಪ್ರಭು ಅದಕ್ಕಾಗಿ ಆಯ್ದುಕೊಂಡನು ಎಂದು ತಿಳಿದು ಬರುತ್ತದೆ. ಇದಕ್ಕೆ ಸಾಕ್ಷ್ಯ ಅವರ ಪತ್ನಿ ಖದೀಜ(ರ) ವಹಿಸುತ್ತಾರೆ. ಪ್ರವಾದಿಯ(ಸ) ಓರ್ವ ಅತ್ಯಂತ ನಿಕಟ ವರ್ತಿ ವ್ಯಕ್ತಿ ಮತ್ತು ಅವರ ಜೀವನ ಸಂಗಾತಿ. ಅವರ ಜೊತೆ ಹದಿನೈದು ವರ್ಷ ಬಾಳಿ ಬದುಕಿದ್ದವರು. ಪ್ರವಾದಿಯ(ಸ) ಗುಣವೈಶಿಷ್ಟ್ಯಗಳಲ್ಲೇ ಸದಾ ಸತ್ಯ ಹೇಳುವುದು (ಸತ್ಯಸಂಧತೆ), ಅಮಾನತುದಾರಿಕೆ (ವಿಶ್ವಸ್ಥತೆ) ಅತ್ಯಂತ ಪ್ರಮುಖ ಗುಣಗಳಾಗಿದ್ದು ಇವು ಸೃಷ್ಟಿಕರ್ತನ ಸಂದೇಶ ಜನರೆಡೆಗೆ ತಲುಪಿಸಲು ಪ್ರಥಮ ಅಗತ್ಯ ಮತ್ತು ಅತ್ಯಂತ ಮುಖ್ಯವೂ ಆಗಿದೆ.

ಮುಹಮ್ಮದ್‌ರ(ಸ) ಮೊದಲ ಅನುಭವ ದೇವನ ದಿವ್ಯ ಸಂದೇಶ ಸ್ವೀಕರಿಸಿದ್ದು ಮತ್ತು ಅವರನ್ನು ಪ್ರವಾದಿಯನ್ನಾಗಿ ಮಾಡಿದ್ದು ಆಗಿದೆ. ಇದು ಇಲ್ಲಿ ವಿವಿಧ ಕಡೆಗಳಲ್ಲಿ ವಿವರಣೆಗೊಂಡಿದೆ. ಆ ನಂತರ ಜನರಿಗೆ ಸಂದೇಶ ತಲುಪಿಸುವ ಸೂಚನೆ ಸಿಕ್ಕಿತು ಮತ್ತು ತನ್ನ ಹೊಣೆಗಾರಿಕೆಯ ಅನುಭವವಾಯಿತು. ಮತ್ತು ದಿವ್ಯ ಸಂದೇಶ ವನ್ನು ಜನರಿಗೆ ಯಾವ ರೀತಿ ತಲುಪಿಸಬೇಕು ಎಂಬ ಮಾರ್ಗದರ್ಶನ ಸಿಕ್ಕಿತು.

ಇತಿಹಾಸವು ಪ್ರವಾದಿತ್ವಕ್ಕೆ ಮೊದಲೇ ಮುಹಮ್ಮದ್‌ರ(ಸ) ವ್ಯಕ್ತಿತ್ವವನ್ನು ಪರಿಶುದ್ಧವಾದುದು ಎಂದು ಪರಿಚಯಿಸುತ್ತಿದೆ. ಮತ್ತು ಈ ಗುಣವೈಶಿಷ್ಟ್ಯಗಳ ಆಧಾರ ದಲ್ಲಿ ಪ್ರವಾದಿಯ ಸ್ಥಾನಕ್ಕೆ ಅವರನ್ನು ಸೃಷ್ಟಿಕರ್ತನು ಆರಿಸಿರುವನು. ಸಂದೇಶ ತಲುಪಿಸುವ ಹೊಣೆಗಾರಿಕೆಯನ್ನು ನೀಡಿ ಆ ಉನ್ನತ ಸ್ಥಾನದಲ್ಲಿರಿಸಿದನು ಎಂದು ಇತಿಹಾಸ ವಿವರಿಸುತ್ತಿದೆ.

ನಾವಿಲ್ಲಿ, ಮೊದಲು ಪ್ರವಾದಿಯಲ್ಲಿ ಕಂಡು ಬರುವ ಎರಡು ಪ್ರಮುಖ ಗುಣ ಗಳನ್ನು ತೆಗೆದುಕೊಳ್ಳೋಣ– ಇದು ಪ್ರಥಮ ಅಧ್ಯಾಯದ ಅನ್ವೇಷಣೆಯ ಶೀರ್ಷಿಕೆಯಲ್ಲಿ ವಿವರಿಸಲ್ಪಟ್ಟಿದೆ. ಒಂದನೆಯ ಗುಣ, ಪ್ರವಾದಿಯ ಸತ್ಯಸಂಧತೆ. ಇದಕ್ಕೆ ಇಡೀ ಸಮಾಜವೇ ಸಾಕ್ಷ್ಯವನ್ನು ನೀಡುವ ವ್ಯಕ್ತಿಯಾಗಿರಬೇಕು. ಜೀವನದಲ್ಲಿ ಎಂದೂ ಸುಳ್ಳಾಡದವನೆಂದು ಇಡೀ ಸಮಾಜ ಸಾಕ್ಷಿ ನುಡಿಯಬೇಕು. ಎರಡನೆಯ ಗುಣ ಅಮಾನತುದಾರಿಕೆ (ವಿಶ್ವಸ್ಥತೆ). ಯಾವುದೇ ವಸ್ತುವನ್ನು ಅವರ ಬಳಿ ಇರಿಸಲ್ಪಟ್ಟಿದ್ದರೆ ಅದನ್ನು ಅವರ ಬಳಿ ತಂದು ಇಟ್ಟ ವ್ಯಕ್ತಿ ಕೇಳಿದಾಗ ಮರಳಿಸುವುದು.

ಪ್ರವಾದಿ ಸತ್ಯಸಂಧರು ಎಂಬ ಬಗ್ಗೆ ಪ್ರವಾದಿಯವರ(ಸ) ಮೊದಲ ಪತ್ನಿ ಹಝ್ರತ್ ಖದೀಜಾ ಅನುಮೋದಿಸಿದ್ದಾರೆ. ಅವರು ಪ್ರವಾದಿವರ್ಯರೊಡನೆ(ಸ)

ಹದಿನೈದು ವರ್ಷಗಳ ಕಾಲ ಜೊತೆಯಾಗಿ ಬಾಳಿದವರು ಇದಕ್ಕಿಂತ ದೊಡ್ಡ ಬೇರೆ ಸಾಕ್ಷ್ಯಗಳು ಅಗತ್ಯವಿಲ್ಲ. ಅವರ ಸೋದರ ಸಂಬಂಧಿ ಅಲಿ, ನಂತರ ಸೇವಕ ಝೈದ್ ಬಿನ್ ಹಾರಿಸ್, ಆ ಮೇಲೆ ನಿಕಟವರ್ತಿ ಮತ್ತು ಆತ್ಮಮಿತ್ರ ಅಬೂಬಕರ್ ಬಿನ್ ಅಬೀ ಕುಹಾಫ ಈ ಎಲ್ಲರ ಸಾಕ್ಷ್ಯಗಳು ಪ್ರವಾದಿವರ್ಯರು(ಸ) ಸತ್ಯಸಂಧತೆಯನ್ನು ನಿರಾಕರಿಸಲು ಸಾಧ್ಯವಿಲ್ಲದಂತೆ ಎತ್ತಿ ಹಿಡಿಯುವ ಸಾಕ್ಷ್ಯಗಳೇ ಆಗಿವೆ. ಜೊತೆಗೆ ಜನರೂ ಪ್ರವಾದಿ ಮುಹಮ್ಮದ್‌ರು(ಸ) ಸತ್ಯಸಂಧ ವ್ಯಕ್ತಿ ಎಂದು ಸಾಕ್ಷ್ಯವಹಿಸಿರುವರು– ಪ್ರವಾದಿ ಮುಹಮ್ಮದ್‌ರು(ಸ) ಸಫಾ ಬೆಟ್ಟದ ಮೇಲೆ ಏರಿ ಜನರನ್ನು ಏರು ದನಿ ಯಿಂದ ಕೂಗಿ ಕರೆದರು. ಆ ಕೂಡಲೇ ಜನರು ಅಲ್ಲಿ ಬಂದು ನೆರೆದರು. ನೆರೆದವ ರೊಡನೆ ಪ್ರವಾದಿ(ಸ) ಹೀಗೆ ಪ್ರಶ್ನಿಸಿದರು, "ಒಂದು ವೇಳೆ ನಾನು ಬೆಟ್ಟದ ಈ ಬದಿಯಲ್ಲಿ ನಿಮ್ಮ ಮೇಲೆ ದಾಳಿ ಮಾಡಲು ಶತ್ರುಗಳ ಸೇನೆ ಬಂದು ನಿಂತಿದೆ ಎಂದು ಹೇಳಿದರೆ ನನ್ನ ಮಾತನ್ನು ನೀವು ನಂಬುವಿರಾ?" ಎಲ್ಲರೂ ಒಕ್ಕೊರಳಿನಿಂದ ಹೌದು. "ಹೌದೌದು ನೀನು ಎಂದೂ ಸುಳ್ಳಾಡಿರುವುದನ್ನು ನಾವು ಕೇಳಿಲ್ಲ" ಎಂದು ಕೂಗಿ ಹೇಳಿದರು. ಪ್ರವಾದಿಯ(ಸ) ಪ್ರಶ್ನೆಗೆ ಜನರು ನೀಡಿದ ಉತ್ತರ ಹೀಗಿತ್ತು.

ಅಂದರೆ ಇದರರ್ಥ ಪ್ರವಾದಿವರ್ಯರು(ಸ) ಸತ್ಯಸಂಧರಾಗಿದ್ದರೆಂಬ ಬಗ್ಗೆ ಕೇವಲ ನಿರ್ದಿಷ್ಟ ವ್ಯಕ್ತಿಗಳು ಮತ್ತು ನಿಕಟವರ್ತಿ ವ್ಯಕ್ತಿಗಳು ಮಾತ್ರ ಸಾಕ್ಷ್ಯ ವಹಿಸಿದು ದಲ್ಲ. ಇಡೀ ಸಮಾಜವೇ ಪ್ರವಾದಿ(ಸ) ಸತ್ಯಸಂಧರು ಎಂದು ಸಾಕ್ಷ್ಯ ವಹಿಸಿದೆ. ಸಮಾಜದಲ್ಲಿ ವಿವಿಧ ರೀತಿಯ ಜನರಿರುತ್ತಾರೆ. ಶ್ರೀಮಂತರು, ಬಡವರು, ಗುಲಾಮರು, ಮಹಿಳೆಯರು, ಗಂಡಸರು, ಮಕ್ಕಳು, ಮುದುಕರು, ಧಾರ್ಮಿಕ ಜನರು, ರಾಜಕೀಯದ ಜನರು ಮತ್ತು ಸರದಾರರು. ಇವರೆಲ್ಲರೂ ಪ್ರವಾದಿ ಮುಹಮ್ಮದ್‌ರು(ಸ) ಸತ್ಯಸಂಧ ವ್ಯಕ್ತಿಯೆಂಬುದಾಗಿ ಆ ಸಾಕ್ಷ್ಯ ನುಡಿದಿರುವರು.

ಒಂದು ವೇಳೆ ಪ್ರವಾದಿಯ ಬಗ್ಗೆ ಅವರ ನಿಕಟವರ್ತಿಗಳು ಮಾತ್ರ ಅವರನ್ನು ಸತ್ಯಸಂಧ ಎಂದು ಸಾಕ್ಷ್ಯ ವಹಿಸಿದ್ದರೆ ಅವರೆಲ್ಲ ಪ್ರವಾದಿಯವರ(ಸ) ಮೇಲೆ ಪ್ರೀತಿ ಯಿಂದ ಹಾಗೆ ಹೇಳಿದರೆಂಬ ತಪ್ಪು ಸಂದೇಶ ಸಮಾಜಕ್ಕೆ ರವಾನೆಗೊಳ್ಳುತ್ತಿತ್ತು. ಆದರೆ ಪ್ರವಾದಿ ಸತ್ಯಸಂಧ ಎಂಬುದನ್ನು ಜನರ ಸಾಕ್ಷ್ಯವೂ ಸಮರ್ಥಿಸುತ್ತದೆ. ಹೀಗೆ ಪ್ರವಾದಿ ಸತ್ಯಸಂಧ ಎಂಬುದಕ್ಕೆ ಎರಡು ಕಡೆಯ ಸಾಕ್ಷ್ಯಗಳಿವೆ. ನಿಕಟವರ್ತಿಗಳ ಸಾಕ್ಷ್ಯ, ಸಮಾಜದ ಜನರ ಸಾಕ್ಷ್ಯ. ಸಮಾಜದ ಈ ಎರಡೂ ವಿಭಾಗವೂ ಪ್ರವಾದಿಯವರು(ಸ) ಸತ್ಯಸಂಧರು ಎಂದು ಸಾಕ್ಷ್ಯ ವಹಿಸಿದೆ. ಆದುದರಿಂದ ಪ್ರವಾದಿಯ ಸತ್ಯಸಂಧತೆಯಲ್ಲಿ ಯಾವುದೇ ಸಂದೇಹವೂ ಉಳಿಯುವುದಿಲ್ಲ. ಪ್ರವಾದಿ(ಸ) ಎಂದೂ ಸುಳ್ಳಾಡಿಲ್ಲ. ಸತ್ಯವನ್ನೆ ನುಡಿದಿದ್ದಾರೆ. ಸೃಷ್ಟಿಕರ್ತನ ಕುರಿತು ಕೂಡ ಸತ್ಯವನ್ನೇ ನುಡಿದಿದ್ದಾರೆ.

ಅವರು ಸೃಷ್ಟಿಕರ್ತನ ನೈಜ ಪ್ರವಾದಿ ಮತ್ತು ಸೃಷ್ಟಿಕರ್ತನ ದಾಸರಿಗೆ ದೇವನ ಸಂದೇಶ ತಲುಪಿಸಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಅವರು ಬರೇ ಸಂದೇಶವನ್ನು ತಲುಪಿಸಿದ್ದು ಮಾತ್ರವಲ್ಲ. ಅದರಂತೆ ಸ್ವಯಂ ಕರ್ಮವೆಸಗಿದ್ದಾರೆ. ಅವರನ್ನು ಅನುಸರಿಸಿ ಕರ್ಮ ಎಸಗುವುದನ್ನು ಜನರಿಗೆ ಸುಲಭಗೊಳಿಸಿದ್ದಾರೆ.

ಈ ಘಟನೆ ನಡೆಯುವಾಗ ಪ್ರವಾದಿ ಮುಹಮ್ಮದ್‌ರು(ಸ) 38 ವರ್ಷದ ಯುವಕ. ಆಗ ಮಕ್ಕಾದಲ್ಲಿ ಕಅಬಾ ಭವನ ನವೀಕರಣ ಕಾರ್ಯ (ಕಾಮಗಾರಿ) ನಡೆಯುತ್ತಿತ್ತು. ಕಾಮಗಾರಿ ಮುಗಿದು ಹಜರುಲ್ ಅಸ್ವದ್ (ಕಅಬಾದ ಒಂದು ಮೂಲೆಯಲ್ಲಿ ಕಪ್ಪು ಕಲ್ಲು ಇಡುವ ಕಾರ್ಯವಿದು. ಕಪ್ಪು ಕಲ್ಲಿಗೆ ಅರಬಿ ಭಾಷೆಯಲ್ಲಿ 'ಹಜರುಲ್ ಅಸ್ವದ್' ಎಂದು ಹೇಳಲಾಗುತ್ತದೆ) ಮೊದಲಿದ್ದ ಜಾಗದಲ್ಲಿ ಅದನ್ನು ಇರಿಸುವುದು ಎಂದಾದಾಗ ಗೋತ್ರಗಳೊಳಗೆ ವಿವಾದ ಉದ್ಭವಿಸಿತು. ಅದರ ಮೂಲ ಸ್ಥಳದಲ್ಲಿ ಈ ಹಜರುಲ್ ಅಸ್ವದನ್ನು ಯಾರು ಎತ್ತಿಡುವುದು ಎಂಬುವುದು ಅವರೊಳಗೆ ತೀರ್ಮಾನಗೊಳ್ಳದೆ ಉಳಿಯಿತು. ಅದನ್ನು ಯಥಾ ಸ್ಥಳದಲ್ಲಿ ಇರಿಸುವುದು ಯಾವ ಗೋತ್ರದವರು? ಜನರಿಗೆ ಯಾವ ತೀರ್ಮಾನವನ್ನೂ ತೆಗೆದುಕೊಳ್ಳಲಾಗದಿದ್ದಾಗ. ಆಗ ಅಲ್ಲಿದ್ದವರಲ್ಲಿ ಒಬ್ಬ ವ್ಯಕ್ತಿ ಹೇಳಿದರು- ನಾಳೆ ಬೆಳಗ್ಗೆ ಯಾವ ವ್ಯಕ್ತಿ ಎಲ್ಲರಿಗಿಂತ ಮೊದಲು ಮಸೀದಿಯ(ಕಅಬಾದ) ಬಾಗಿಲಿನ ಮೂಲಕ ಇತ್ತ ಬರುತ್ತಾನೆ ಆ ವ್ಯಕ್ತಿಯ ತೀರ್ಮಾನ ಎಲ್ಲರೂ ಒಪ್ಪೋಣ. ಎಲ್ಲರೂ ಅವನ ಅಭಿಪ್ರಾಯಕ್ಕೆ ಸಮ್ಮತಿ ಸೂಚಿಸಿದರು.

ಮರುದಿನ ಬೆಳಗ್ಗೆ ಎಲ್ಲರಿಗಿಂತ ಮೊದಲು ಮುಹಮ್ಮದ್(ಸ)ರವರು ಕಅಬಾದ ಬಾಗಿಲ ಮೂಲಕ ಪ್ರವೇಶಿಸಿದರು. ಮುಹಮ್ಮದರು ಬಂದುದರಿಂದ ಎಲ್ಲರಲೂ ಸಂತಸದಿಂದ ಚೀತ್ಕರಿಸಿದರು. ಸಾದಿಕ್ (ಸತ್ಯಸಂಧ) ಮತ್ತು ಅಮೀನ್ (ವಿಶ್ವಸ್ಥ)! ನಾವು ಇವರ ತೀರ್ಮಾನ ಒಪ್ಪುತ್ತೇವೆ. ಆಗ ಜನರಿಗಾದ ಸಂಭ್ರಮ ಎಷ್ಟಿತ್ತೆಂದರೆ ಅವರು ಪ್ರವಾದಿವರ್ಯರನ್ನು(ಸ) ಹೆಸರೆತ್ತಿ ಕೂಡ ಅಭಿಸಂಬೋಧಿಸಲಿಲ್ಲ. ಮುಹಮ್ಮದ್ ಎಂದು ಹೆಸರು ಕೂಗಿ ಕರೆಯುವ ಬದಲು ಅವರ ಉನ್ನತ ಗುಣಗಳನ್ನು ಎತ್ತಿ ಹೇಳಿದರು. ಈ ಘಟನೆ ಪ್ರವಾದಿಯ(ಸ) ಗುಣಗಳು ಜನರೊಳಗೆ ಎಷ್ಟು ಪ್ರಭಾವಿ ಮತ್ತು ಮಾದರಿಯಾಗಿತ್ತೆಂಬುದನ್ನು ಸಾಂಕೇತಿಸುತ್ತಿದೆ. ಮುಹಮ್ಮದ್‌ರಲ್ಲಿ(ಸ) ಜನರಿಗೆ ನಂಬಿಕೆ ಗೌರವಗಳಿದ್ದುದನ್ನು ಇದು ಸೂಚಿಸುತ್ತಿದೆ. ಸಮಾಜದಲ್ಲಿ ಇಷ್ಟು ಉನ್ನತ ಸ್ಥಾನ ಪಡೆಯುವುದು ಸಾಮಾನ್ಯ ವಲ್ಲ. ಮುಹಮ್ಮದ್(ಸ) ಪಾಪರಹಿತರು. ಪರಿಶುದ್ಧರು. ಮತ್ತು ಮುಹಮ್ಮದ್‌ರ(ಸ) ಜೀವನದ ಕರ್ಮಗಳನ್ನು ಹತ್ತಿರದಿಂದ ವೀಕ್ಷಿಸಿದ ಜನರಿಗೆ ಅವರಲ್ಲಿರುವ ಸದ್ಗುಣ ವೈಶಿಷ್ಯ ಅರಿವಿದೆ. ಪ್ರವಾದಿಯ ಸತ್ಯಸಂಧತೆಗೆ ಈ ಸಾಕ್ಷ್ಯಗಳಿಗಿಂತ ಮಿಗಿಲಿನ ಬೇರೆ ಯಾವ ಸಾಕ್ಷ್ಯವಿದೆ.

ಇದು ಐತಿಹಾಸಿಕ ಸತ್ಯ- ಪ್ರವಾದಿಯ(ಸ) ಸದ್ಗುಣಗಳನ್ನು ಚರ್ಚಿಸುತ್ತಿದ್ದುದು ಒಬ್ಬಿಬ್ಬರಲ್ಲ. ನಗರದ ಬಹುತೇಕರು, ಬಹುಸಂಖ್ಯಾತರು, ಸುತ್ತಮುತ್ತಲಿನ ನಿವಾಸಿಗಳು ನಿಕಟ ಜನರು, ಆತ್ಮೀಯರು, ಸ್ನೇಹಿತರು. ಪರಿಚಯಸ್ಥರು. ಆಗಿನ ಇತಿಹಾಸಕಾರರು ಇವನ್ನೆಲ್ಲ ಬರೆದು ದಾಖಲಿಸಿಕೊಂಡಿರುವರು. ವಿಷಯಗಳನ್ನು ಉತ್ತಮವಾಗಿ ನಿಭಾಯಿಸುವ ಶಕ್ತಿ, ಸಾಮರ್ಥ್ಯ ಮುಹಮ್ಮದ್(ಸ)ರಿಗಿತ್ತು ಯಾವುದೇ ಗೋತ್ರದ ಜನರ ಕ್ರೋಧಕ್ಕೆ ಕಾರಣವಾಗದ ರೀತಿಯಲ್ಲಿ ತನ್ನ ಘನತೆಯಿಂದ ಆ (ಹಜರುಲ್ ಅಸ್ವದ್‌ನ) ವಿವಾದ ಬಗೆಹರಿಸಿಕೊಟ್ಟರು. ಎಲ್ಲರಿಗೂ ಅವರ ತೀರ್ಮಾನದಲ್ಲಿ ಖುಶಿ ಮತ್ತು ಸಂತೃಪ್ತಿಯಾಯಿತು. ಪ್ರವಾದಿ(ಸ) ಒಂದು ಚಾದರವನ್ನು ತರಿಸಿದರು ಮತ್ತು ಹಜರುಲ್ ಅಸ್ವದನ್ನು ಅದರಲ್ಲಿ ಎತ್ತಿಟ್ಟರು. ಎಲ್ಲ ಗೋತ್ರಗಳ ಸರದಾರರನ್ನು ಕರೆದು ಚಾದರವನ್ನು ಹಿಡಿದುಕೊಂಡು ಅದನ್ನು ಇಡುವ ಸ್ಥಳಕ್ಕೆ ತರಲು ಸೂಚಿಸಿದರು. ನಂತರ ಆ ಕಲ್ಲನ್ನು ಪ್ರವಾದಿಯೇ(ಸ) ಎತ್ತಿ ಅದರ ಮೂಲ ಸ್ಥಳದಲ್ಲಿರಿಸಿದರು. ಹೀಗೆ ಸಮಸ್ಯೆ ಬಗೆಹರಿಯಿತು.

ಪ್ರವಾದಿ ಮುಹಮ್ಮದ್(ಸ) ಇಡೀ ಸಮಾಜದಲ್ಲಿ ವಿಶ್ವಸ್ಥತೆಗೆ ಪ್ರಸಿದ್ಧರು. ವಿಶ್ವಸ್ಥ ಎಂಬ ಹೆಸರಿನಿಂದಲೇ ಇಡೀ ಸಮಾಜಕ್ಕೆ ಅವರು ಪರಿಚಿತರಾಗಿದ್ದರು. ಕೆಲವೊಮ್ಮೆ ಜನರು ಪ್ರವಾದಿ ಮುಹಮ್ಮದ್‌ರ(ಸ) ಬಳಿಗೆ ತಮ್ಮ ಧನ, ಸಂಪತ್ತುಗಳನ್ನು ತಂದು ಅಮಾನತ್ ರೂಪದಲ್ಲಿ ಇರಿಸುತ್ತಿದ್ದರು. ಅವು ಇವರ ಬಳಿ ಸುರಕ್ಷಿತವೂ ತಮಗೆ ಮರಳಿ ಸಿಗುವುದು ಎಂಬ ಸಂಪೂರ್ಣ ಭರವಸೆ ಈ ಜನರಿಗಿತ್ತು. ಓದು ಬರಹ ರೂಢಿಯಲ್ಲಿಲ್ಲದ ಕಾಲ ಅದು ಕೆಲವೇ ಕೆಲವು ಜನರನ್ನು ಹೊರತುಪಡಿಸಿ ಬರವಣಿಗೆ ಮತ್ತು ಓದುವುದು ಆ ಸಮಾಜದ ಜನರಿಗೆ ಗೊತ್ತಿರಲಿಲ್ಲ. ಪ್ರವಾದಿಯವರೂ(ಸ) ಓದಲು, ಬರೆಯಲು ಕಲಿತಿರಲಿಲ್ಲ. ಹಾಗಿದ್ದರೂ ತಮ್ಮ ಬಳಿಯಿರಿಸಲಾದ ಅಮಾನತು ವಸ್ತುಗಳನ್ನು ಅವರವರಿಗೆ ಸರಿಯಾಗಿ ಮರಳಿ ನೀಡುತ್ತಿದ್ದರು.

ಇತಿಹಾಸದ ಈ ಘಟನೆ ಪ್ರವಾದಿಯ(ಸ) ಸತ್ಯಸಂಧತೆಗೆ ಸ್ಪಷ್ಟ ಸಾಕ್ಷ್ಯವಾಗಿದೆ. ಇನ್ನೊಂದು ಘಟನೆ ಹೀಗಿದೆ-

ಅಂದು ಪ್ರವಾದಿ ಮುಹಮ್ಮದ್‌ರ(ಸ) ಮನೆ ಮುಂದೆ ಶತ್ರುಗಳು ಮುತ್ತಿಗೆ ಹಾಕಿ ನಿಂತಿದ್ದರು. ಏಕ ಸಮಯದಲ್ಲಿ ಎಲ್ಲರೂ ಸೇರಿ ಪ್ರವಾದಿವರ್ಯರ(ಸ) ಮೇಲೆ ಮುಗಿಬಿದ್ದು ಅವರ ಕಥೆಯನ್ನು ಶಾಸ್ವತವಾಗಿ ಮುಗಿಸುವುದು ಎಂಬ ಉದ್ದೇಶ ಶತ್ರುಗಳದ್ದಾಗಿತ್ತು. ಯಾಕೆಂದರೆ ಮುಹಮ್ಮದ್‌ರು(ಸ) ಸೃಷ್ಟಿಕರ್ತನ ಪ್ರವಾದಿತ್ವ ಎಂದು ವಾದಿಸುತ್ತಿದ್ದರು. ನಾಡಿನ ಸರದಾರರ ಸರದಾರತ್ವವನ್ನು ಸೃಷ್ಟಿಕರ್ತನ ದಾಸ್ಯವಾಗಿ ಪರಿವರ್ತಿಸಲು ಆ ಸಂದೇಶದ ಮೂಲಕ ಬಯಸಿದ್ದರು. ಜನರ ನಡುವೆ

ಸಮಾನತೆಯನ್ನು ಮತ್ತು ಆ ಮೂಲಕ ಅಂದು ಜನರ ನಡುವೆ ಹಾಸುಹೊಕ್ಕಾಗಿದ್ದ ಅಸಮಾನತೆಯನ್ನು ನಿರ್ಮೂಲನೆ ಮಾಡುವುದು, ಗುಲಾಮ ಜನರನ್ನು ಮನುಷ್ಯರ ಗುಲಾಮತನದಿಂದ ಬಿಡಿಸುವುದು, ಸ್ವತಂತ್ರಗೊಳಿಸಿ ಕೇವಲ ಸೃಷ್ಟಿಕರ್ತನ ದಾಸ್ಯಕ್ಕೆ ತರಲು ಅವರು ಬಯಸುತ್ತಿದ್ದರು. ಜನರು ಭೌತಿಕ, ಸ್ವಾರ್ಥ, ನೀಚತೆಯ ವಾದದೆಡೆಗೆ ಸರಿಯದಂತೆ ತಡೆಯಲು ಅವರು ಇಚ್ಛಿಸುತ್ತಿದ್ದರು.

ಜನರನ್ನು ಪೈಶಾಚಿಕತೆ, ಮೃಗೀಯತೆಯಿಂದ ಮೇಲೆತ್ತಿ ಮನುಷ್ಯತ್ವದ ಉನ್ನತ ಸ್ಥಾನಕ್ಕೆ ಕರೆತರಲು ಪ್ರವಾದಿ(ಸ) ಹೋರಾಟ ನಡೆಸುತ್ತಿದ್ದರು. ಅವರ ಈ ಉನ್ನತ ಕಾರ್ಯವು ಕುರೈಶಿ ಸರದಾರರಿಗೆ ಸಹಿಸಲು ಆಗುತ್ತಿರಲಿಲ್ಲ. ಆದುದರಿಂದ ಎಲ್ಲ ಗೋತ್ರದ ಸರದಾರರು ಜೊತೆಗೂಡಿದರು. ಏಕ ಕಾಲದಲ್ಲಿ ಪ್ರವಾದಿವರ್ಯರನ್ನು(ಸ) ಮುಗಿಸಿ ಬಿಡುವುದು ಅವರ ಯೋಜನೆಯಾಗಿತ್ತು. ಬನೂ ಹಾಶಿಂ ಮನೆತನದ ಮುಹಮ್ಮದ್‌ರನ್ನು(ಸ) ಎಲ್ಲರೂ ಸೇರಿ ಕೊಲೆ ಮಾಡಿದಾಗ ಮುಹಮ್ಮದ್‌ರ(ಸ) ರಕ್ತಕ್ಕೆ ಪ್ರತೀಕಾರ ಪಡೆಯುವುದು ಬನೂ ಹಾಶಿಮ್ ಮನೆತನಕ್ಕೆ ಕಷ್ಟ ಎಂಬುದು ಕುರೈಶಿಗಳ ಲೆಕ್ಕಾಚಾರವಾಗಿತ್ತು. ಹೀಗೆ ಸಂಪೂರ್ಣ ಸಿದ್ಧತೆಯೊಂದಿಗೆ ಅವರು ಪ್ರವಾದಿವರ್ಯರ(ಸ) ಮನೆಗೆ ಮುತ್ತಿಗೆ ಹಾಕಿದ್ದರು. ಇಂಥ ಗಂಭೀರ, ಸೂಕ್ಷ್ಮ ಮತ್ತು ಅಪಾಯಕಾರಿ ಸನ್ನಿವೇಶದಲ್ಲಿ ಕೂಡ ಪ್ರವಾದಿವರ್ಯರು(ಸ) ಅಮಾನತು ಮರಳಿಸುವು ದರ ಬಗ್ಗೆ ಚಿಂತಿಸಿದರು. ತನ್ನ ಬಳಿ ಇರಿಸಲಾದ 'ಅಮಾನತ್'ಗಳು ಯಾರು ಯಾರೆಂದು ತನ್ನ ಚಿಕ್ಕಪ್ಪನ ಪುತ್ರ ಅಲಿ ಬಿನ್ ಅಬೀತಾಲಿಬ್‌ರಿಗೆ ತೋರಿಸಿಕೊಟ್ಟರು ಮತ್ತು ಆಯಾ ವ್ಯಕ್ತಿಗಳಿಗೆ ಅದನ್ನು ಮರಳಿಸುವಂತೆ ವಹಿಸಿಕೊಟ್ಟರು ಆ ನಂತರ ಸೃಷ್ಟಿಕರ್ತನ ಪವಾಡದಿಂದ ವೈರಿಗಳಿಗೆ ಹೆದರದೆ ನಿರ್ಭೀತವಾಗಿ ತನ್ನ ಮನೆಯಿಂದ ಹೊರಟು ಹೋಗಿದ್ದರು. ಇಂತಹ ಕಠಿಣ ಸಂದರ್ಭದಲ್ಲಿ ಕೂಡ ಅವರು, ವಿಶ್ವಸ್ಥತೆ, ಸತ್ಯಸಂಧತೆಯನ್ನು ನಿಭಾಯಿಸಿದರು. ಹೊರಗೆ ಅವರ ಶತ್ರುಗಳು ಅವರನ್ನು ಕೊಲ್ಲಲು ಕಾದು ನಿಂತಿದ್ದಾರೆ. ಆದರೆ ಅವರು ಈ ಶತ್ರುಗಳಲ್ಲಿ ಪ್ರತಿಯೊಬ್ಬರ ಅಮಾನತ್ತನ್ನು (ವಿಶ್ವಸ್ಥ ನಿಧಿಯನ್ನು) ಅವರವರಿಗೆ ಒಪ್ಪಿಸುವ ವ್ಯವಸ್ಥೆ ಮಾಡಿದ ನಂತರವೇ ತನ್ನ ಮನೆಯಿಂದ ಹೊರಟಿರುವುದು.

ಇದು ವಿಶ್ವಸ್ಥತೆಗೆ ಅಪೂರ್ವವಾದ ಉದಾಹರಣೆಯಾಗಿದೆ. ಪ್ರವಾದಿ ಅಮೀನ್ ವಿಶ್ವಾಸಾರ್ಹರು ಆಗಿದ್ದುದರಿಂದ ಸೃಷ್ಟಿಕರ್ತನು ಅವರಿಗೆ ತನ್ನ ಅನುಗ್ರಹೀತ ಸಂದೇಶ ವನ್ನು ಜನರಿಗೆ ತಲುಪಿಸುವ ಅಮಾನತು (ಹೊಣೆಗಾರಿಕೆ) ನೀಡಲು ನಿರ್ಧರಿಸಿದ್ದು. ನಿಸ್ಸಂದೇಹವಾಗಿಯೂ ಸೃಷ್ಟಿಕರ್ತನು ಸಂದೇಶ ಎಂಬ ಅಮಾನತನ್ನು (ಹೊಣೆಗಾರಿಕೆ) ವಿಶ್ವಸಾರ್ಹ ವ್ಯಕ್ತಿಗೆ ವಹಿಸಿಕೊಡುತ್ತಾನೆ. ತಮ್ಮ ಹೊಣೆಗಾರಿಕೆಯಲ್ಲಿ ಯಾವ

ಬದಲಾವಣೆಯನ್ನೂ ಮಾಡದೆ ಯಥಾರೀತಿ ಅವರು ಸಂದೇಶವನ್ನು ಜನರಿಗೆ ತಲುಪಿಸುವರು– ಹೀಗೆ ಪ್ರವಾದಿ(ಸ) ಎಂತಹ ಕಷ್ಟ ಪರಿಸ್ಥಿತಿಯಲ್ಲಿಯೂ ಜೀವಕ್ಕೆ ಅಪಾಯ ಇದ್ದರೂ ತನ್ನ ಬಳಿ ಇಟ್ಟ ಅಮಾನತುಗಳನ್ನು ಜನರಿಗೆ ತಲುಪಿಸಿದರು. ಸಂದೇಶ ತಲುಪಿಸುವ ವೇಳೆ ಶತ್ರುಗಳ ಕೊಲೆ ಸಂಚುಗಳನ್ನು ಅವರು ಲೆಕ್ಕಿಸಲಿಲ್ಲ. ಜನರಿಗೆ ಸಂದೇಶವನ್ನು ಪ್ರೀತಿಯಿಂದ ನಿಸ್ವಾರ್ಥವಾಗಿ ಸಂಪೂರ್ಣ ಸಹನೆ, ಯುಕ್ತಿಯಿಂದ ಮತ್ತು ಸಮಗ್ರವಾಗಿ ಮತ್ತು ಸ್ವತಂತ್ರವಾಗಿ ತಲುಪಿಸಿದರು.

ಬೀಬಿ ಖದೀಜ ಮಕ್ಕದ ಓರ್ವ ಶ್ರೀಮಂತ ಮಹಿಳಾ ವ್ಯಾಪಾರಿ ಆಗಿದ್ದರು. ಅವರು ವಿಧವೆಯಾಗಿದ್ದು ತನ್ನ ವ್ಯಾಪಾರ ನಿರ್ವಹಿಸಲಿಕ್ಕಾಗಿ ಉತ್ತಮ ಮತ್ತು ವಿಶ್ವಸ್ಥ ವ್ಯಕ್ತಿಯನ್ನು ಹುಡುಕುತ್ತಿದ್ದರು. ಅಂತಿಮವಾಗಿ ತನ್ನ ವ್ಯಾಪಾರವನ್ನು ಮುನ್ನಡೆಸಲು ಮುಹಮ್ಮದ್‌ರನ್ನು ಅವರು ಆಯ್ದುಕೊಂಡರು. ಈ ವೇಳೆ ಮುಹಮ್ಮದ್‌ರಿಗೆ ವಯಸ್ಸು 20–25 ವರ್ಷವಾಗಿತ್ತು. ವ್ಯಾಪಾರ ಚೆನ್ನಾಗಿ ನಡೆದು ಲಾಭವಾಯಿತು. ವ್ಯಾಪಾರದ ಎಲ್ಲ ಲೆಕ್ಕವನ್ನು ಖದೀಜರಿಗೆ ಅವರು ಒಪ್ಪಿಸಿದರು ಮತ್ತು ವ್ಯಾಪಾರಿ ಸರಕುಗಳನ್ನು ಕೂಡಾ ಕೊಟ್ಟರು. ಎರಡನೆ ಸಲವು ತನ್ನ ವ್ಯಾಪಾರಕ್ಕೆ ಮುಹಮ್ಮದ್‌ರನ್ನೇ ಖದೀಜಾ ಆಯ್ಕೆ ಮಾಡಿದರು. ಮುಹಮ್ಮದ್‌ರ(ಸ) ಸತ್ಯಸಂಧತೆ ವಿಶ್ವಸ್ಥತೆಯಲ್ಲಿ ಖದೀಜಾರಿಗೆ ಸಂತೃಪ್ತಿಯಿತ್ತು.

ಪ್ರವಾದಿ(ಸ) ಅಂದು ಬಡವರು. ಚಿಕ್ಕಪ್ಪ ಅಬೂತಾಲಿಬರ ಆಶ್ರಯದಲ್ಲಿದ್ದರು. ಜೀವನ ನಿರ್ವಹಣೆಗೆ ಹಣದ ಆವಶ್ಯಕತೆಯಿತ್ತು. ಆದರೂ ಅವರು ಪ್ರಾಮಾಣಿಕವಾಗಿ ವ್ಯಾಪಾರ ಮಾಡಿದರು. ಆದುದರಿಂದ ವ್ಯಾಪಾರಿಯಾಗಿ ಕೂಡ ಪ್ರಸಿದ್ಧರಾದರು. ಇದೇ ವೇಳೆ ತಾಹಿರಾ (ಪರಿಶುದ್ಧ ಮಹಿಳೆ) ಎಂದು ಕರೆಯಲ್ಪಡುತ್ತಿದ್ದ ಖದೀಜಾರು ಪ್ರವಾದಿಯೊಂದಿಗೆ ವಿವಾಹ ಪ್ರಸ್ತಾಪವನ್ನು ಕಳುಹಿಸಿದ್ದರು.

ವಿಶ್ವಸ್ಥತೆ, ಪ್ರಾಮಾಣಿಕತೆಯ ಹಲವು ಘಟನೆಗಳು ಮುಹಮ್ಮದ್‌ರ(ಸ) ಜೀವನ ಚರಿತ್ರೆಯಲ್ಲಿ ದಾಖಲುಗೊಂಡಿದೆ.

ಸತ್ಯಸಂಧತೆಗೆ ಜನರ ಸಾಕ್ಷ್ಯ:

ಅದೊಂದು ದಿನ ಬೆಳಗ್ಗೆ ಪ್ರವಾದಿ ಮುಹಮ್ಮದ್‌ರು(ಸ) ಸಫಾ (ಮಕ್ಕಾದಲ್ಲಿರುವ ಒಂದು) ಬೆಟ್ಟದ ಅತ್ಯಂತ ಎತ್ತರಕ್ಕೆ ಏರಿ ನಿಂತು ಜೋರಾದ ಧ್ವನಿಯಲ್ಲಿ "ಯಾ ಸ್ವಬಾಹಾ" (ಓಹ್ ಮುಂಜಾನೆಯ ಒಂದು ಅಪಾಯವೇ) ಎಂದು ಕೂಗಿದರು. ಮುಂಜಾನೆ ವೇಳೆ ಯಾವುದೇ ಅನಿರೀಕ್ಷಿತ ದಾಳಿಯ ಅಪಾಯ ಯಾವುದೇ ವ್ಯಕ್ತಿಗೆ ಅರಿವಾದರೆ ಈ ರೀತಿ ಬೆಟ್ಟದ ತುದಿಗೆ ಹತ್ತಿ ಜನರನ್ನು ಆತ ಕರೆಯಲು ಶುರು ಮಾಡುತ್ತಿದ್ದ. ಇದು ಅರೇಬಿಯದಲ್ಲಿ ಅಂದಿದ್ದ ಕ್ರಮ ಮತ್ತು ಅವನ ಧ್ವನಿ ಕೇಳಿದ

ಕೂಡಲೇ ಜನರು ನಾಲ್ದೆಸೆಯಿಂದಲೂ ಓಡೋಡಿ ಬಂದು ಬೆಟ್ಟದ ಕೆಳಗೆ ಸೇರುತ್ತಿದ್ದರು. ಪ್ರವಾದಿಯವರ(ಸ) ಧ್ವನಿ ಕೇಳಿದೊಡನೆ ಜನರು ತಮ್ಮ ಮನೆಗಳಿಂದ ಓಡೋಡಿ ಬಂದು ಬೆಟ್ಟದ ತಪ್ಪಲಲ್ಲಿ ಸೇರಿದರು.

ಪ್ರವಾದಿ(ಸ) ಹೇಳಿದರು– ಜನರೇ, ಒಂದು ವೇಳೆ ನಾನು ಬೆಟ್ಟದ ಈ ಬದಿಯಲ್ಲಿ ಒಂದು ದೊಡ್ಡ ಸೈನ್ಯ ನಿಮ್ಮ ಮೇಲೆ ದಾಳಿ ಮಾಡಲು ಕಾದು ನಿಂತಿದೆ ಎಂದು ಹೇಳಿದರೆ ನನ್ನ ಮಾತನ್ನು ಸತ್ಯವೆಂದು ನಂಬುವಿರಾ?

ಎಲ್ಲರೂ ಹೇಳಿದರು– ಹಾಂ! ನಮ್ಮ ಅನುಭವದಲ್ಲಿ ಎಂದೂ ನೀವು ಸುಳ್ಳು ಹೇಳುವ ವ್ಯಕ್ತಿಯಲ್ಲ.

ಆಗ ಪ್ರವಾದಿವರ್ಯರು(ಸ) ಹೇಳಿದರು– ಹಾಗಾದರೆ, ನಾನು ಅಲ್ಲಾಹನ ಕಠಿಣ ಶಿಕ್ಷೆ ಬಂದೆರಗುವ ಮೊದಲೇ ನಿಮ್ಮನ್ನು ಎಚ್ಚರಿಸುತ್ತಿದ್ದೇನೆ. ಈ ಶಿಕ್ಷೆಯ ಹಿಡಿತದಿಂದ ನಿಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವ ಬಗ್ಗೆ ಚಿಂತಿಸಿರಿ. ಅಲ್ಲಾಹನ ಮುಂದೆ ನಾನು ನಿಮಗೆ ಯಾವ ಪ್ರಯೋಜನಕ್ಕೂ ಆಗುವವನಲ್ಲ. ಲೋಕಾಂತ್ಯದಿನ ನನ್ನ ಸಂಬಂಧಿಕರು ಕೇವಲ ಮಕ್ಕಾದ ಜನರಾಗಿರುವಿರಿ. ಆದರೆ ಅಂದು ಬೇರೆ ಜನರು ಒಳಿತು ಕರ್ಮಗಳೊಂದಿಗೂ ಮತ್ತು ನೀವು ಕೇವಲ ಭೌತಿಕ ಜಗತ್ತಿಗೆ ಅಂಟಿಕೊಂಡಿರುವವರಾಗಿಯೂ ಹಾಜರಾಗಬಾರದು.

ಯಾ ಮುಹಮ್ಮದ್ ಎಂದು ನೀವು ಸಹಾಯಕ್ಕಾಗಿ ಅಂದು ಕರೆಯುವಿರಿ. ಆದರೆ ಅಂದು ನಾನು ನಿಮ್ಮ ಕಡೆಯಿಂದ ಮುಖ ತಿರುಗಿಸಲು ನಿರ್ಬಂಧಿತನಾಗಿರುವೆನು. ಜಗತ್ತಿನಲ್ಲಿ ನನ್ನ ಮತ್ತು ನಿಮ್ಮ ನಡುವೆ ರಕ್ತ ಸಂಬಂಧ ಇದ್ದರೂ ಸಕಲ ಕರುಣೆಗಳೊಂದಿಗೆ ಇಲ್ಲಿ ನಿಮ್ಮೊಂದಿಗೆ ವರ್ತಿಸಿದರೂ ಖಂಡಿತ ಅಲ್ಲಿ ನಾನು ಅಸಹಾಯಕನಾಗಿರುವೆನು.

ಪ್ರವಾದಿಯವರು(ಸ) ನಂತರ ಸಫಾ ಬೆಟ್ಟದಲ್ಲಿ ನಿಂತು ಜನರನ್ನು ಉದ್ದೇಶಿಸಿ ಹೇಳಿದರು– ಅಲ್ಲಾಹನು ನಿಕಟವರ್ತಿಗಳನ್ನು ಎಚ್ಚರಿಸಲು ನನಗೆ ಆಜ್ಞಾಪಿಸಿರುವನು. ನೀವು ನನಗೆ ನಿಕಟ ಇರುವವರು, ಕುರೈಶಿ ಜನರು ಆಗಿದ್ದೀರಿ. ನಾನು ನಿಮಗೆ ಪರಲೋಕದಲ್ಲಿ ಅಲ್ಲಾಹನಿಂದ ಏನಾದರೂ ಕೊಡಿಸುವ ಮತ್ತು ಅಲ್ಲಿ ನಿಮ್ಮ ಯಾವುದೇ ವಿಷಯವನ್ನು ಆಲಿಸುವ ಅಧಿಕಾರವನ್ನು ನಾನು ಹೊಂದಿಲ್ಲ. ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನಲ್ಲದೆ ಅನ್ಯ ಆರಾಧ್ಯನಿಲ್ಲ) ಎಂದು ಹೇಳುವುದರ ಹೊರತು. ಆಗ(ಹಾಗೆ ಹೇಳಿದರೆ) ನಿಮ್ಮ ಪ್ರಭುವಿನ ಮುಂದೆ ನಿಮ್ಮ ಪರವಾಗಿ ಅದಕ್ಕೆ ಸಾಕ್ಷ್ಯ ವಹಿಸುವೆನು ಮತ್ತು ನೀವು ಈ ವಚನದ ಹೇಳಿದರೆ ನಿಮ್ಮನ್ನು ಸಕಲ ಅರಬರು ಅನುಸರಿಸುವರು ಮತ್ತು ನಿಮ್ಮ ಆಜ್ಞೆಯನ್ನು ಪಾಲಿಸುವರು.

ಈ ಘಟನೆಯಿಂದ ಪ್ರವಾದಿವರ್ಯರು(ಸ) ಆಯ್ದುಕೊಂಡ ಸಂದೇಶ ನೀಡುವ ವಿಧಾನವು ಜನರನ್ನು ಯಾವುದೋ ಅಪಾಯದಿಂದ ಜಾಗೃತಗೊಳಿಸುವ ಅಂಶವನ್ನು ಆ ಕಾಲದ ಅಭಿಸಂಬೋಧಿತರಿಗೂ ಮತ್ತು ಆನಂತರ ಅಧ್ಯಯನ ನಡೆಸುವವರಿಗೂ ತೋರಿಸುತ್ತಿದೆ.

1) ಬೆಟ್ಟದ ತುತ್ತತುದಿಗೆ ಹತ್ತಿ 'ಯಾ ಸಬಾಹಾ' ಎಂದು ಕೂಗುವುದು ಅಪಾಯದ ಕುರಿತು ಜನರನ್ನು ಎಚ್ಚರಿಸುವ ಅಂದಿನ ಒಂದು ವಿಧಾನವಾಗಿತ್ತು. ಆದುದರಿಂದ ಪ್ರವಾದಿವರ್ಯರು(ಸ) ಈ ವಿಧಾನವನ್ನು ಉಪಯೋಗಿಸಿದರು ಮತ್ತು ಜನರಿಗೆ ಪುನರುತ್ಥಾನದ ಮತ್ತು ನರಕದ ಅಪಾಯದ ಕುರಿತು ತಿಳಿ ಹೇಳಿದರು ಮತ್ತು ನರಕದ ಬೆಂಕಿಯಿಂದ ಪಾರಾಗಲು ಸಿದ್ಧತೆ ನಡೆಸಿರಿ ಎಂದು ಜನರನ್ನು ಜಾಗರೂಕಗೊಳಿಸಿದರು.

2) ಬೆಟ್ಟದ ಮೇಲಿನಿಂದ ಕೂಗಿ ಕರೆಯುವುದು ಏಕೆಂದರೆ ಬೆಟ್ಟದ ತುದಿಯಲ್ಲಿದ್ದ ವ್ಯಕ್ತಿಗೆ ಬೆಟ್ಟದ ಎರಡೂ ಕಡೆ ನೋಡಲು ಸಾಧ್ಯವಿತ್ತು. ಅರಬರಲ್ಲಿ ಚಾಲ್ತಿಯಲ್ಲಿದ್ದ ಈ ವಿಧಾನವನ್ನು ಉಪಯೋಗಿಸಿ ಪ್ರವಾದಿ(ಸ) ತನ್ನನ್ನು ವಿಶ್ವ ಸಾಮ್ರಾಟನು (ಸೃಷ್ಟಿಕರ್ತನು) ತನ್ನ ಪ್ರವಾದಿಯನ್ನಾಗಿ ಮಾಡಿದ್ದಾನೆ ಎಂಬುದನ್ನು ಜನರ ಮುಂದೆ ಘೋಷಣೆ ಮಾಡಬೇಕಿತ್ತು ಮತ್ತು ಜನರಿಗೆ ತನ್ನ ಪ್ರವಾದಿತ್ವದ ಸ್ಥಾನದ ಆಧಾರದಲ್ಲಿ ಇಹ ಜೀವನ ಮತ್ತು ಮರಣಾನಂತರದ ಜೀವನ ಎರಡೂ ಜೀವನಗಳನ್ನು ಅರಿಯುವೆನು ಎಂಬ ಸಂದೇಶವನ್ನು ನೀಡಬೇಕಿತ್ತು. ಜನರನ್ನು ಉದ್ದೇಶಿಸಿ ಅವರು ಹೇಳಿದರು– ಜನರೇ ಸಾವು ಮತ್ತು ಸಾವಿನಾಚೆಗಿರುವ ಪರಲೋಕ ಮತ್ತು ನರಕದ ಕುರಿತು ನಾನು ಎಚ್ಚರಿಸುವೆನು. ನಿಮಗೆ ಈವರೆಗೂ ಅರಿವಿಲ್ಲದ ಸಾವಿನ ನಂತರ ನ್ಯಾಯದಾನದ ದಿನ. ಅದು ಇಹಜೀವನದ ಲೆಕ್ಕಾಚಾರ ದಿನವಾಗಿದೆ ಎಂದು ನಿಮ್ಮನ್ನು ಎಚ್ಚರಿಸುತ್ತಿರುವೆನು. ಆದುದರಿಂದ ಅಂದು ನಿಮ್ಮ ಇಹಜೀವನದ ಕರ್ಮಗಳ ಕುರಿತು ಪರೋಕ್ಷ ಜ್ಞಾನಿ ನ್ಯಾಯಾಧೀಶನ ಮುಂದೆ ನೀವು ಉತ್ತರಿಸಲಿಕ್ಕಿದೆ ಮತ್ತು ಅದಕ್ಕೆ ನೀವು ಸಿದ್ಧರಾಗಿ ಎಂದು ಪ್ರವಾದಿ ಜನರನ್ನು ಜಾಗರೂಕಗೊಳಿಸಿದರು.

3) ಬೆಟ್ಟದ ತಪ್ಪಲಿನಲ್ಲಿ ನೆರೆದಿದ್ದ ಜನರೊಂದಿಗೆ ಅವರು ಪಡೆದುಕೊಂಡ ದೃಢೀಕರಣವು ತಾನು ಸತ್ಯವನ್ನೇ ಆಡುವವನು ಎಂಬುದಾಗಿತ್ತು. ಪ್ರವಾದಿ ಜನರನ್ನು ಉದ್ದೇಶಿಸಿ ಹೇಳಿದರು– "ಜನರೇ, ಒಂದು ವೇಳೆ ನಿಮಗೆ ಈ ಬೆಟ್ಟದ ಈ ಬದಿಯಲ್ಲಿ ದೊಡ್ಡ ಸೇನೆ ನಿಮ್ಮ ಮೇಲೆ ಮುಗಿಬೀಳಲು ಹೊಂಚು ಹಾಕಿ ಕಾದಿದೆ ಎಂದರೆ ನಂಬುವಿರಾ?" ಪ್ರವಾದಿಯವರ(ಸ) ಈ ಪ್ರಶ್ನೆಗೆ ಎಲ್ಲರೂ ಹೌದು ನಂಬುವೆವು ಎಂದು ಸಮ್ಮತಿಸಿದರು. ಇದು ಪ್ರವಾದಿ(ಸ) ಸುಳ್ಳು ಆಡುವುದಿಲ್ಲ ಮತ್ತು ನಿಮ್ಮ

ಮಾತಿನಲ್ಲಿ ನಮಗೆ ವಿಶ್ವಾಸ ಇದೆ ಎಂಬ ದೃಢೀಕರಣವಾಗಿತ್ತು. ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ ಸೃಷ್ಟಿಕರ್ತನ ನೈಜ ಪ್ರವಾದಿಯಾಗಿದ್ದೇನೆ ಎಂಬ ದೃಢೀಕರಣವೂ ಇದರಲ್ಲಿ ಸೇರಿದೆ. ಪ್ರವಾದಿ(ಸ) ಸತ್ಯವನ್ನು ಆಡುವವರು ಎಂದು ಅಲ್ಲಿದ್ದ ಎಲ್ಲರೂ ಒಕ್ಕೊರಲಿನಿಂದ ಸಮ್ಮತಿಸಿದರು.

4) ಪ್ರವಾದಿ ಮುಂದುವರಿದು ನಿಜವಾದ ಮಾತನ್ನೇ ಹೇಳುತ್ತಾರೆ. ಜೊತೆಗೆ ಪ್ರವಾದಿ ಹೇಳುವ ವಿಷಯ ಸತ್ಯವಾದುದು, ಸತ್ಯವಲ್ಲದೆ ಬೇರೇನೂ ಹೇಳುವುದಿಲ್ಲ ಎಂಬ ದೃಢೀಕರಣ ಕೂಡಾ ಆಗಿದೆ. ತಾನು ಪ್ರಸ್ತುತಪಡಿಸುವ ವಿಷಯವನ್ನು ಜನರು ಗಂಭೀರವಾಗಿ ಪರಿಗಣಿಸಬೇಕು. ನರಕದ ಅಪಾಯದ ಬಗ್ಗೆ ಜನರು ನಿರ್ಲಕ್ಷ್ಯವಹಿಸ ಬಾರದು. ತಾನು ಪ್ರಸ್ತಾಪಿಸಿದ ವಿಷಯಕ್ಕೆ ಪ್ರಾಮುಖ್ಯ ನೀಡುವ ಮೂಲಕ ತಮ್ಮನ್ನು ಸ್ವಯಂ ಆ ನರಕದ ಬೆಂಕಿಯಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸಬೇಕು. ಇವೆಲ್ಲವನ್ನು ಅವರು ಜನರಿಂದ ತಾನು ಸತ್ಯವನ್ನೇ ಹೇಳುವ ವ್ಯಕ್ತಿ ಎಂದು ದೃಢೀಕರಣ ಪಡೆದು ಕೊಂಡ ನಂತರ ಹೇಳಿದರು. ಜನರು ತಾನು ಸತ್ಯವನ್ನು ಆಡುವ ವ್ಯಕ್ತಿಯೆಂದು ಸಮ್ಮತಿಸಿದ ಬಳಿಕವೇ ಅವರ ಮುಂದೆ ಈ ವಿಷಯಗಳನ್ನು ಪ್ರಸ್ತಾಪಿಸಿದ್ದು. ಅಂದರೆ ಇದರರ್ಥ ಸತ್ಯವನ್ನೇ ಹೇಳುವವನೆಂದು ನಂಬಿರುವ ನೀವು ತಾನು ಈಗ ಹೇಳುವ ವಿಷಯದ ಮೇಲೆಯೂ ವಿಶ್ವಾಸವಿಡಿರಿ ಎಂದು ಅವರು ಬಯಸಿದ್ದು. ಬೆಟ್ಟದ ಕೆಳಗೆ ಸೇರಿದ ಎಲ್ಲ ಜನರು ಅವರನ್ನು ಒಕ್ಕೊರಳಿನಿಂದ(ಸ) ಒಬ್ಬ ಸತ್ಯಸಂಧ ವ್ಯಕ್ತಿ ಎಂದುದು ಮತ್ತು ಮುಹಮ್ಮದ್‌ರು(ಸ) ಎಂದೂ ಸುಳ್ಳಾಡಿದ ಅನುಭವವು ತಮಗಿಲ್ಲ ಎಂದುದು. ಇವೆಲ್ಲ ಪ್ರವಾದಿತ್ವವಾದಿಯಲ್ಲಿರಬೇಕಾದ ಮೊತ್ತ ಮೊದಲ ಪ್ರಮುಖ ಗುಣವೈಶಿಷ್ಟ್ಯವಾಗಿದೆ. ಈ ಗುಣವೈಶಿಷ್ಟ್ಯಗಳೇ ಜನರಿಗೆ ನೈಜ ಪ್ರವಾದಿಯನ್ನು ಗುರುತಿಸುವುದಕ್ಕೆ ಮತ್ತು ಅವರಲ್ಲಿ ವಿಶ್ವಾಸ ಇರಿಸುವುದಕ್ಕೆ ಸೂಕ್ತ ಗುಣಗಳಾಗಿವೆ.

5) ಪ್ರವಾದಿತ್ವದ ಉನ್ನತ ಸ್ಥಾನವನ್ನೇರಿ ಇಹಲೋಕ ಮತ್ತು ಪರಲೋಕವನ್ನು ವೀಕ್ಷಿಸಿ ಮತ್ತು ಮುಂಬರುವ ಅಪಾಯಗಳ ಕುರಿತು ಜನರನ್ನು ಪೂರ್ವಭಾವಿಯಾಗಿ ಎಚ್ಚರಿಸುವ ಪ್ರವಾದಿ ಕಾರ್ಯ ಜನರ ಒಳಿತನ್ನೇ ಅವರು ಬಯಸಿದ್ದಾರೆ ಎಂಬುದಕ್ಕೆ ಪ್ರಬಲ ಸಾಕ್ಷ್ಯವಾಗಿದೆ. ಈ ರೀತಿ ಪ್ರವಾದಿ ಮುಹಮ್ಮದ್‌ರು(ಸ) ಮರಣಾನಂತರ ಉತ್ತರಿಸಬೇಕಿದೆ ಮತ್ತು ಪರಲೋಕದ ನರಕದ ಅಪಾಯಗಳ ವಾಸ್ತವಿಕತೆಯ ಕುರಿತು ಜನರಿಗೆ ಎಚ್ಚರಿಸಿದರು. ಈ ರೀತಿ ಪ್ರವಾದಿ ಜನರ ಒಳಿತನ್ನೇ ಬಯಸಿದರು ಮತ್ತು ಜನರ ಮೇಲೆ ಕರುಣೆ ತೋರಿಸಿದರು. ನರಕದ ಯಾತನೆಯಿಂದ ಪಾರಾಗಲು ಪೂರ್ವ ಸಿದ್ಧತೆ ಮಾಡುವಂತೆ ಜನರಿಗೆ ಕರೆ ನೀಡಿದರು.

6) ಮತ್ತು ಒಬ್ಬನೇ ಸೃಷ್ಟಿಕರ್ತ ಮತ್ತು ಆರಾಧ್ಯನಾಗಿರುವನು, ಅವನ ಹೊರತು

ಅನ್ಯ ಆರಾಧ್ಯನಿಲ್ಲ ಮತ್ತು ಅವನ ಹೊರತು ಬೇರೆ ಯಾರು ಆರಾಧನೆಗೆ ಅರ್ಹರಲ್ಲ ಎಂದೂ ಅಲ್ಲಿ ಪ್ರವಾದಿ(ಸ) ಘೋಷಣೆ ಮಾಡಿದರು. ಎಲ್ಲ ಆರಾಧನೆಗಳು ಅವನೊಬ್ಬನಿಗೆ ಮಾತ್ರ ಮೀಸಲಾಗಿದೆ. ನಿಮ್ಮ ಇತರ ಎಲ್ಲ ಆರಾಧ್ಯರುಗಳನ್ನು ನಿರಾಕರಿಸಿರಿ ಮತ್ತು ನಿಜವಾದ ಆರಾಧ್ಯನೆಂದು ಅವನೊಬ್ಬನಲ್ಲಿ ಮಾತ್ರ ವಿಶ್ವಾಸವಿರಿಸಿರಿ. ಹೀಗೆ ನೀವು ಮಾಡಿದರೆ ಸತ್ತ ನಂತರ ಸಿಗಬಹುದಾದ ಕಠಿಣ ನರಕದ ಬೆಂಕಿಯಿಂದ ಪಾರಾಗುವಿರಿ ಮತ್ತು ಇಹಲೋಕದಲ್ಲಿ ನೀವು ಘನತೆಯಿಂದ ತಲೆ ಎತ್ತಿ ನಿಲ್ಲುವಿರಿ. ಪ್ರಪಂಚದ ಅಧಿಕಾರ ನಿಮ್ಮದಾಗುವುದು. ಏಕೈಕನಾದ ಸೃಷ್ಟಿಕರ್ತನು ಅವನ ಪ್ರವಾದಿಯಾಗಿ ನನ್ನನ್ನು ಮಾಡಿ ಈ ನೈಜ ಸಂದೇಶವನ್ನು ನಿಮಗೆ ತಲುಪಿಸುವ ಹೊಣೆಗಾರಿಕೆ ನೀಡಿರುವನು. ಇದು ಸತ್ಯವಾಗಿದೆ ಮತ್ತು ವಸ್ತುಸ್ಥಿತಿಯಾಗಿದೆ ಎಂದು ಅಲ್ಲಿ ಘೋಷಣೆ ಮಾಡಿದರು.

ಆರಂಭಿಕ ಮೂರು ವರ್ಷಗಳಲ್ಲಿ ಪ್ರವಾದಿತ್ವ ಘೋಷಣೆಯ ವಿಧಾನ

ಮೊದಲ ಮೂರು ವರ್ಷಗಳಲ್ಲಿ ತನ್ನ ಪ್ರವಾದಿತ್ವದ ಸಂದೇಶವನ್ನು ವೈಯಕ್ತಿಕ ನೆಲೆಯಲ್ಲಿ ಅವರು(ಸ) ನೀಡತೊಡಗಿದರು. ಉತ್ತಮ ವ್ಯಕ್ತಿತ್ವದವರಿಗೆ, ನಿಕಟವರ್ತಿಗಳಿಗೆ ಮತ್ತು ಅವರಲ್ಲಿ ಸಂಪೂರ್ಣ ನಂಬಿಕೆ ಇದ್ದವರಿಗೆ, ಅವರ ಮೇಲೆ ಸತ್ಯಸಂಧನೆಂದು ವಿಶ್ವಾಸ ಇರಿಸಿದ್ದವರಿಗೆ ಮತ್ತು ಅವರ ಮಾತುಗಳಲ್ಲಿ ನಂಬಿಕೆಯಿರುವ ಗಂಭೀರ ವ್ಯಕ್ತಿಗಳಿಗೆ, ವೈಯಕ್ತಿಕ ನೆಲೆಯಲ್ಲಿ ಒಬ್ಬೊಬ್ಬರ ಮುಂದೆ ಸೃಷ್ಟಿಕರ್ತನು ತನ್ನನ್ನು ಅವನ ಪ್ರವಾದಿಯನ್ನಾಗಿ ಮಾಡಿರುವನೆಂಬ ಸಂದೇಶವನ್ನು ವ್ಯಕ್ತಿಗಳಿಂದ ವ್ಯಕ್ತಿಗಳಿಗೆ ನೀಡುತ್ತಾ ಹೋದರು. ತನಗೆ ಸೃಷ್ಟಿಕರ್ತನು ಪ್ರವಾದಿಯೆಂಬ ನೆಲೆಯಲ್ಲಿ ಅವನ ಸಂದೇಶವನ್ನು ಅವನ ದಾಸರಿಗೆ ತಲುಪಿಸುವ ಭಾರೀ ದೊಡ್ಡ ಹೊಣೆಗಾರಿಕೆಯನ್ನು ನೀಡಿರುವನು ಎಂದು ತಿಳಿಸಿದರು. ಈ ರೀತಿ ಅವರು ಪೂರ್ಣ ಎಚ್ಚರಿಕೆ ಮತ್ತು ಯುಕ್ತಿಯಿಂದ ತನ್ನ ಪ್ರವಾದಿತ್ವವನ್ನು ಅವರು ಜನರ ಮುಂದೆ ಘೋಷಿಸಿದರು. ಪ್ರವಾದಿತ್ವದ ಮೂರು ವರ್ಷಗಳಲ್ಲಿ ಪ್ರವಾದಿತ್ವ ಹೊಣೆಗಾರಿಕೆಯನ್ನು ನಿರ್ವಹಿಸಲು ಈ ವಿಧಾನವನ್ನು ಆಯ್ದುಕೊಂಡರು. ಈ ರೀತಿ ಅವರು ಯಾವುದೇ ಸಹಭಾಗಿಗಳಿಲ್ಲದ ಏಕೈಕನಾದ ಪ್ರಪಂಚದ ನೈಜ ಸೃಷ್ಟಿಕರ್ತನನ್ನು ಅವನ ಎಲ್ಲ ಗುಣವೈಶಿಷ್ಟ್ಯಗಳ ಸಹಿತವಾಗಿ ಜನರಿಗೆ ಪರಿಚಯಿಸಿದರು.

ಮೂರು ವರ್ಷಗಳ ನಂತರ ಸಂದೇಶ ನೀಡಿದ ವಿಧಾನಗಳು

ಜನರ ಮುಂದೆ ಪ್ರವಾದಿ(ಸ) ಮಾತುಗಳಲ್ಲಿ ಮಾತ್ರವಲ್ಲ ಆರಾಧನೆಯ ಮೂಲಕವೂ ಪ್ರವಾದಿತ್ವಕ್ಕೆ ತಾನು ಆಯ್ಕೆಯಾಗಿರುವುದನ್ನು ಘೋಷಿಸಿದರು. ಕಅಬದ ಸಮೀಪ ಆರಾಧನೆಯ ಹೊಸ ವಿಧಾನವನ್ನು ಆರಂಭಿಸುವ ಮೂಲಕ ಅವರು(ಸ)

ಸೃಷ್ಟಿಕರ್ತ ಒಬ್ಬನೆಂದು ಸಾಕ್ಷ್ಯವಹಿಸಿದರು. ಅಂದು ಪ್ರಚಲಿತವಾಗಿದ್ದ ಆರಾಧನೆಯ ವಿಧಾನಕ್ಕಿಂತ ಅವರ ಆರಾಧನಾ ವಿಧಾನ ಭಿನ್ನವಾದುದಾಗಿತ್ತು. ತನ್ನ ಆರಾಧನೆಯ ಹೊಸ ವಿಧಾನದ ಮೂಲಕವೇ ಜನರ ಗಮನವನ್ನು ತನ್ನತ್ತ ಸೆಳೆದರು. ಜನರಲ್ಲಿ ಅವರ ಈ ಆರಾಧನಾ ವಿಧಾನ ಆಶ್ಚರ್ಯದ ಚಿಹ್ನೆಯೆನಿಸಿಕೊಂಡಿತು. ಈ ರೀತಿ ಅವರು ಜನರ ನೈಜ ಸೃಷ್ಟಿಕರ್ತನನ್ನು ಆರಾಧಿಸುವ ಹೊಸ ವಿಧಾನವನ್ನು ಜನರಿಗೆ ತೋರಿಸಿಕೊಟ್ಟರು. ಆ ಮೂಲಕ ತನ್ನ ಪ್ರವಾದಿತ್ವವನ್ನು ಬಹಿರಂಗವಾಗಿ ಘೋಷಿಸಿದರು. ಒಬ್ಬನೇ ಸೃಷ್ಟಿಕರ್ತನಿರುವುದು ಎಂಬ ಸರಿಯಾದ ಅರಿವು ಜನರಿಗೆ ನೀಡಿದರು.

ಜನರು ವಿಶ್ವದ ನೈಜ ಸೃಷ್ಟಿಕರ್ತನನ್ನು ಬಿಟ್ಟು ಇತರರನ್ನು ಆರಾಧ್ಯರನ್ನಾಗಿ ಮಾಡಿಕೊಳ್ಳುವುದನ್ನು ಅವರು ನಿಷೇಧಿಸಿದರು ಮತ್ತು ಮರಣಾ ನಂತರದ ಜೀವನದ ಕುರಿತು ಜನರಿಗೆ ವಿವರಿಸಿದರು. ಈ ಇಹಲೋಕದ ಜೀವನದ ಕುರಿತು ಮರಣಾ ನಂತರ ವಿಚಾರಣೆ ನಡೆಯುತ್ತದೆ. ಅಲ್ಲಿ ಸ್ವರ್ಗ ಮತ್ತು ನರಕಗಳಿವೆ. ಒಬ್ಬನೇ ಸೃಷ್ಟಿಕರ್ತನಿರುವುದು ಎಂದು ವಿಶ್ವಾಸವಿರಿಸಿ ಆ ಏಕೈಕ ಆರಾಧ್ಯನನ್ನು ಆರಾಧಿಸಿದರೆ ನೀವು ಸ್ವರ್ಗ ಪಡೆಯುವಿರಿ. ನಿರಾಕರಿಸಿದರೆ ನರಕದ ಬೆಂಕಿಯ ಪಾಲಾಗುವಿರಿ ಎಂದು ಜನರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರು.

ಒಂದು ಕಾರ್ಯಕ್ರಮ ರೂಪಿಸಿ ಅಲ್ಲಿ ಇವೆಲ್ಲವನ್ನು ಘೋಷಣೆ ಮಾಡುವ ವ್ಯವಸ್ಥೆಯಾಗಲಿ ಕ್ರಮವಾಗಲಿ ಸೃಷ್ಟಿಕರ್ತನ ಕಡೆಯಿಂದಿರಲಿಲ್ಲ. ಪ್ರತಿಯೊಂದು ಸಂದರ್ಭದಲ್ಲಿಯೂ ಸ್ವತಃ ಪ್ರವಾದಿಯವರು(ಸ) ವಿವಿಧ ವಿಧಾನಗಳನ್ನು ಬಳಸಿಕೊಂಡು ಈ ಘೋಷಣೆ ಮಾಡಬೇಕಾಗುತ್ತಿತ್ತು. ಆ ನಂತರ ಮುಹಮ್ಮದ್(ಸ)ರ ಪ್ರವಾದಿತ್ವದಲ್ಲಿ ವಿಶ್ವಾಸವಿರಿಸಿದವರು ಮತ್ತು ಅವರನ್ನು ಅನುಸರಿಸಿದವರು ಸೃಷ್ಟಿಕರ್ತನಿಂದ ಅವರಿಗೆ ಸಿಕ್ಕಿರುವ ಪ್ರವಾದಿತ್ವದ ಕುರಿತು ಜನರಿಗೆ ಪರಿಚಯಿಸಿದರು. ಮೊದಲು ತಮ್ಮ ಹತ್ತಿರದ ಸಂಬಂಧಿಕರಲ್ಲಿ ಮತ್ತು ಗೆಳೆಯರ ನಡುವೆ ಅವರು ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಪರಿಚಯಿಸಲು ಆರಂಭಿಸಿದರು. ಪ್ರವಾದಿತ್ವದ ಘೋಷಣೆಯ ಈ ವಿಧಾನವಂತೂ ತೀವ್ರಗತಿಯಲ್ಲಿ ಅಲ್ಲಿ ವ್ಯಾಪಿಸಿತು. ಮುಹಮ್ಮದ್(ಸ) ರನ್ನು ಪ್ರವಾದಿ ಎಂದು ಜನರಿಗೆ ಪರಿಚಯಿಸುವ ಕಾರ್ಯ ಗುಪ್ತ ರೀತಿಯಲ್ಲಿ ಮತ್ತು ಪರಿಣಾಮಕಾರಿಯಾಗಿ ನಡೆಯಿತು. ಇದೊಂದು ಪ್ರಬಲ ಮತ್ತು ಬಹು ಆಯಾಮದ, ಬಹು ನಿರ್ದೇಶದ ಕಾರ್ಯ ವಿಧಾನವೆಂದೂ ಸಾಬೀತಾಯಿತು.

ಆದುದರಿಂದ ಬಹಳ ಬೇಗನೆ ಪ್ರವಾದಿಯ ಕರೆಗೆ ಮುಕ್ತ ಮನಸ್ಸಿನ, ಗಂಭೀರ ವ್ಯಕ್ತಿತ್ವದ ಜನರು ಓಗೊಟ್ಟು ವಿಶ್ವಾಸ ಇರಿಸಿದರು. ಯಾಕೆಂದರೆ, ಸಂದೇಹಾತೀತವಾಗಿ ಅವರ ನಡುವೆ ಮುಹಮ್ಮದ್‌ರ(ಸ) ವ್ಯಕ್ತಿತ್ವವು ಸತ್ಯಸಂಧತೆಗೆ ಮತ್ತು ವಿಶ್ವಸ್ಥತೆಗೆ

ಪ್ರಸಿದ್ಧವಾಗಿತ್ತು. ಹೀಗೆ ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ತೊರೆದ ಜನರೆಲ್ಲರೂ ಪ್ರವಾದಿ ಮುಹಮ್ಮದ್‌ರಲ್ಲಿ(ಸ) ವಿಶ್ವಾಸ ಇರಿಸಿದರು. ಸ್ವಯಂ ಪ್ರೇರಿತವಾಗಿ ಪ್ರವಾದಿ ಮುಹಮ್ಮದ್‌ರ(ಸ) ಆಜ್ಞೆ ಪಾಲಿಸಿ ವಿಧೇಯರಾದರು. ಇದೇ ವೇಳೆ ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಒಪ್ಪಲು ನಿರಾಕರಿಸುತ್ತಿದ್ದ ಜನರು ನಾನಾ ನೆಪಗಳನ್ನು ಮುಂದಿಟ್ಟರು. ಈ ರೀತಿ ತಮ್ಮನ್ನು ತಾವೇ ಸ್ವಯಂ ಅವರು ವಂಚನೆಗೊಳಪಡಿಸಿಕೊಂಡರಲ್ಲದೆ ಇತರರನ್ನು ಮುಹಮ್ಮದ್‌ರ(ಸ) ಸಂದೇಶ ಸ್ವೀಕರಿಸದಂತೆ ತಡೆದರು.

ಪ್ರವಾದಿತ್ವದ ಘೋಷಣೆಯ ಈ ವಿಧಾನದಲ್ಲಿ (ಕಅಬದ ಸಮೀಪದಲ್ಲಿ ಹೊಸ ವಿಧಾನದ ಆರಾಧನೆ ರೀತಿ ಈ ಅಂಶಗಳುಗಳು ಕೂಡ ಪ್ರಕಟಗೊಂಡವು ಅಂದರೆ ಪ್ರವಾದಿವರ್ಯರ(ಸ) ಏಕದೇವನೆಡೆಗೆ ನೀಡುವ ಕರೆಯೂ ಈಗ ಬಹಿರಂಗ ಪ್ರಕಟ ವಾಗಿತ್ತು. ಅದು ಸತ್ಯವೆಂದೂ ಧ್ವನಿಸುತ್ತಿತ್ತು. ಪ್ರವಾದಿ(ಸ) ಅದನ್ನು ಸ್ವಯಂ ಕರ್ಮ ಗಳ ಮೂಲಕ ಪ್ರಾಯೋಗಿಕಗೊಳಿಸಿದರು. ಅವರು ಸತ್ಯಸಂಧ ಎಂಬ ಸಾಕ್ಷಾತ್ಕಾರ ಇದಾಗಿತ್ತು. ಮೊತ್ತ ಮೊದಲು ಅವರು ಜನರಿಗೆ ಹೇಳುತ್ತಿದ್ದುದನ್ನು ತಾನೇ ಕರ್ಮವೆಸಗಿ ಜನರ ಮುಂದೆ ತೆರೆದಿಟ್ಟರು. ಪ್ರವಾದಿ(ಸ) ಜನರ ಬಳಿಗೆ ತಂದ ಸಂದೇಶವು ಸತ್ಯವಾದುದು ಎಂದು ಇದು ಕೂಡ ಸಾಕ್ಷ್ಯವಹಿಸುತ್ತಿತ್ತು.

ಪ್ರವಾದಿತ್ವದ ಘೋಷಣೆಯ ವಿಧಾನದ ಯುಕ್ತಿ

ಸೃಷ್ಟಿಕರ್ತನು ಸರಕಾರದ ಕಾರ್ಯಕ್ರಮಗಳು ಇರುವಂತೆ ಮುಹಮ್ಮದ್‌ರನ್ನು(ಸ) ಪ್ರವಾದಿಯನ್ನಾಗಿ ಆಯ್ದುಕೊಂಡಿದ್ದೇನೆ. ಜನರೇ ನೀವು ಅವರಿಂದ ಸಂದೇಶವನ್ನು ಸ್ವೀಕರಿಸಿರಿ. ಅದನ್ನು ಅವರು ವಿವರಿಸಿ ನಿಮಗೆ ಅರ್ಥಮಾಡಿಸುತ್ತಾರೆ. ಅವರಿಗೆ ವಿಧೇಯರಾಗಿರಿ. ಅವರನ್ನು ಅನುಸರಿಸಿ, ಅವರನ್ನು ಮಾದರಿಯಾಗಿಟ್ಟು ಕರ್ಮವೆಸಗಿರಿ ಎಂದು ತಿಳಿಸುವಂತಹ ಯಾವುದೇ ಕಾರ್ಯಕ್ರಮ ಮಾಡಿರಲಿಲ್ಲ.

ಒಂದು ವೇಳೆ ಮುಹಮ್ಮದ್(ಸ)ರ ಪ್ರವಾದಿತ್ವವನ್ನು ಕಾರ್ಯಕ್ರಮಗಳ ಮೂಲಕ ಘೋಷಿಸುತ್ತಿದ್ದರೂ ಅದು ಪ್ರಾಯೋಗಿಕವಾಗಿ ಒಂದು ಬಾರಿ ಮಾತ್ರ ನಡೆಯಬಹುದು. ಆಗಾಗ ಎಲ್ಲ ಕಡೆ ಇಂತಹ ಘೋಷಣಾ ಕಾರ್ಯ ನಡೆಸುವುದು ಪ್ರಾಯೋಗಿಕವಾಗಿರಲಿಲ್ಲ. ಒಂದು ವೇಳೆ ಹಾಗೆ ಘೋಷಿಸುವ ವ್ಯವಸ್ಥೆ ಇದ್ದಿದ್ದರೆ ಪ್ರವಾದಿಯವರ(ಸ) ಜೊತೆಯಲ್ಲೇ ಅದನ್ನು ಘೋಷಿಸುವವನು ಬೇರೆ ಬೇರೆ ಸ್ಥಳಗಳಿಗೆ ಬರಬೇಕಿತ್ತು. ಅವರ ಜೊತೆಯೇ ಇರಬೇಕಾಗುತ್ತಿತ್ತು. ಇದು ಅಸಹಜವೂ ಅನೈಸರ್ಗಿಕ ಮತ್ತು ಅಪ್ರಾಯೋಗಿಕ ವಿಧಾನವಾಗಿದೆ. ಆದ್ದರಿಂದ ಸೃಷ್ಟಿಕರ್ತನು ಇಂತಹ ಕಾರ್ಯ ವಿಧಾನವನ್ನು ಆಯ್ದುಕೊಂಡಿಲ್ಲ.

ಜನರ ಮುಂದೆ ತನ್ನ ಪರಿಚಯವನ್ನು ಮಾಡುವ ಸಂದರ್ಭದಲ್ಲಿ ತನ್ನ

ಕರ್ಮಗಳ ಮೂಲಕ, ತನ್ನ ಹೊಣೆಗಾರಿಕೆಯ ನಿಭಾವಣೆಯ ರೀತಿಯನ್ನು ಪ್ರವಾದಿ(ಸ) ಸ್ವಯಂ ಅಭಿಸಂಬೋಧಿತರಿಗೆ ಪರಿಚಯಿಸಿದರು. ಓರ್ವ ಪ್ರವಾದಿಯ ದೃಢೀಕರಣವನ್ನು ಕೂಡ ಈ ವಿಧಾನ ಸೂಚಿಸುತ್ತಿದೆ ಮತ್ತು ತನ್ನ ಪ್ರಭುವಿನಲ್ಲಿ ಓರ್ವ ದಾಸನಿಗಿರುವ ಪ್ರೀತಿ ಮತ್ತು ಪ್ರಭುವಿನೊಂದಿಗೆ ಇರುವ ದಾಸನ ದಾಸ್ಯತನವನ್ನು ಕೂಡ ಇದು ಬಹಿರಂಗವಾಗಿ ವ್ಯಕ್ತಪಡಿಸುತ್ತಿದೆ.

ಯಾವುದೇ ಹಿಂಜರಿಕೆಯಿಲ್ಲದೆ ತನ್ನನ್ನು ಜನರಿಗೆ ಪರಿಚಯಿಸುವುದು ಆ ಸಮಯದ ಆವಶ್ಯಕತೆಯಾಗಿತ್ತು. ಅವರ ನಡವಳಿಕೆಗಳು ಜನರ ಮುಂದೆ ನೇರವಾಗಿ ಮತ್ತು ಬಹಿರಂಗವಾಗಿ ವ್ಯಕ್ತವಾಯಿತು. ಪ್ರವಾದಿಯ ಪರಿಚಯ ಕಾರ್ಯಕ್ರಮವನ್ನು ಮಾಡಿದರೆ ಅದರಲ್ಲಿ ಅದ್ದೂರಿತನ ಇರುತ್ತದೆ. ವೈಭವ ಇರುತ್ತದೆ. ಜನರು ಮತ್ತು ಪ್ರವಾದಿಯ(ಸ) ನಡುವೆ ಅಂತರವು ಉಂಟಾಗುತ್ತಿತ್ತು. ಈ ವಿಧಾನವು ಜನರೆಡೆಗೆ ಸತ್ಯಸಂದೇಶವನ್ನು ಅಥವಾ ಜನರಿಗೆ ಸೃಷ್ಟಿಕರ್ತನನ್ನು ಪರಿಚಯಿಸುವ ಸಂದೇಶವನ್ನು ತಲುಪಿಸುವುದಕ್ಕೆ ಒಂದು ಅಡೆತಡೆಯಂತಾಗಿ ಬಿಡುತ್ತಿತ್ತು.

ಜೊತೆಗೆ ಪ್ರವಾದಿಯ ಘನತೆ, ವಿನಯ, ಪ್ರೀತಿ, ಪ್ರಾಮಾಣಿಕತೆ, ಸತ್ಯಸಂಧತೆ, ಧೈರ್ಯ, ಒಳಿತುಗಳೆಲ್ಲವೂ ಜನರಿಗೆ ಮನವರಿಕೆಯಾಗಬೇಕಿತ್ತು. ಸೃಷ್ಟಿಕರ್ತನ ಸಂದೇಶ ತಲುಪಿಸುವ ನಿಟ್ಟಿನಲ್ಲಿ ಇವೆಲ್ಲವೂ ಜನರು ತಿಳಿಯುವುದು ಆವಶ್ಯಕವಾಗಿತ್ತು. ಅವರು ಸ್ವಯಂ ಜನರ ಬಳಿ ತೆರಳಿ ಜನರಿಗೆ ಸಂದೇಶವನ್ನು ತಲುಪಿಸುವ ವೇಳೆ ಮಾತ್ರ ಪ್ರವಾದಿಯ(ಸ) ಈ ಗುಣವೈಶಿಷ್ಟ್ಯಗಳು ಜನರಿಗೆ ಅನುಭವವಾಗಲು ಸಾಧ್ಯವಿತ್ತು. ಆದುದರಿಂದ ಸ್ವಯಂ ತನ್ನ ಪ್ರವಾದಿತ್ವವನ್ನು ಜನರಿಗೆ ಪರಿಚಯಿಸುವ ಸ್ವಾಭಾವಿಕವಾದ ವಿಧಾನ ಅಗತ್ಯವಿತ್ತು.

ಆದರೆ ಪ್ರವಾದಿಯ ವ್ಯಕ್ತಿತ್ವದ ಈ ಎಲ್ಲ ಗುಣವೈಶಿಷ್ಟ್ಯಗಳು ಒಂದು ವೇಳೆ, ಪ್ರವಾದಿತ್ವ ಘೋಷಣೆಯ ಕಾರ್ಯಕ್ರಮವನ್ನು ಮಾಡುತ್ತಿದ್ದರೆ ಜನರ ಮುಂದೆ ಪ್ರಕಟ ವಾಗುತ್ತಿರಲಿಲ್ಲ. ಆದುದರಿಂದ ಸೃಷ್ಟಿಕರ್ತನು ಪ್ರವಾದಿಯೇ(ಸ) ಸ್ವಯಂ ತನ್ನ ಪ್ರವಾದಿತ್ವವನ್ನು ಜನರ ಮುಂದೆ ಘೋಷಿಸುವ ಮತ್ತು ಸಂದೇಶವನ್ನು ನೀಡುವಂತಹ ಸ್ವಾಭಾವಿಕ ವಿಧಾನವನ್ನೇ ತನ್ನ ಪ್ರವಾದಿಯ ಸಂದೇಶ ಪ್ರಚಾರ ವಿಧಾನವಾಗಿ ಆಯ್ದುಕೊಂಡನು. ಇದು ಸೃಷ್ಟಿಕರ್ತನ ಯುಕ್ತಿಯಾಗಿದ್ದು ಅವನೇ ಹೆಚ್ಚು ಅರಿತವನು.

ವಿರೋಧಿಗಳೂ ಪ್ರವಾದಿಯ(ಸ) ಸತ್ಯಸಂಧತೆಗೆ ಕೃತಜ್ಞರಾಗಿದ್ದರು

ಮುಹಮ್ಮದ್‌ರ(ಸ) ವಿರೋಧಿಗಳು ಅಂತರಂಗದಲ್ಲಿ ಕೂಡಾ ಪ್ರವಾದಿ(ಸ) ಸತ್ಯವನ್ನು ಹೇಳುವವರೆಂದು ಒಪ್ಪಿಕೊಂಡಿದ್ದರು. ತಮ್ಮದು ತಪ್ಪು ಮಾರ್ಗವೆಂದು ತಿಳಿದಿದ್ದರೂ ಈ ಅಜ್ಞಾನಿಗಳ ಗುಂಪು ತಮ್ಮ ಪೂರ್ವಿಕರ ಧರ್ಮ ಮತ್ತು ತಮ್ಮ

ಸ್ವಂತ ದುರುದ್ದೇಶದಿಂದ ಪ್ರವಾದಿಯವರನ್ನು(ಸ) ವಿರೋಧಿಸುತ್ತಿತ್ತು. ಅವರಿಗೆ ಮುಹಮ್ಮದ್‌ರು ಸತ್ಯಸಂಧ ಮತ್ತು ಅವರು ಸುಳ್ಳುಗಾರರೆಂದು ತಿಳಿದುದ್ದರಿಂದ ಪ್ರವಾದಿ ಮುಹಮ್ಮದ್‌ರನ್ನು(ಸ) ಎದುರಿಸುವ ಸಾಮರ್ಥ್ಯ ಅವರಲ್ಲಿ ಇರಲಿಲ್ಲ.

ಪ್ರವಾದಿವರ್ಯರ(ಸ) ಬದ್ಧ ಶತ್ರು ಅಬೂ ಜಹಲ್ ಸ್ವತಃ ಪ್ರವಾದಿವರ್ಯರ(ಸ) ಸತ್ಯಸಂಧತೆಯನ್ನು ಹಲವು ಸಲ ದೃಢೀಕರಿಸಿದ್ದಾನೆ ಮತ್ತು ತನ್ನ ವಿರೋಧಕ್ಕೆ ಇರುವ ನೈಜ ಕಾರಣವನ್ನು ಗೆಳೆಯರ ಮುಂದೆ ಅವನು ಹೇಳಿಕೊಂಡಿದ್ದ. ಅವನ ವಿರೋಧಗಳಿಗೆ ಕೇವಲ ಅಸೂಯೆ ಕಾರಣವಾಗಿತ್ತು. ಆದರೆ ಮುಹಮ್ಮದ್(ಸ) ನಿಜವಾದ ಪ್ರವಾದಿ ಎಂಬ ಬಗ್ಗೆ ಅವನಿಗೆ ದೃಢ ವಿಶ್ವಾಸವಿತ್ತು. ಇದನ್ನು ತನ್ನ ಮಿತ್ರ ಮುಗೀರ ಬಿನ್ ಸುಹೈಬ್‌ನಿಗೆ ತಿಳಿಸಿದ್ದಾನೆ. ಸುಹೈಬ್ ಕೂಡ ಪ್ರವಾದಿಯ ಪ್ರವಾದಿತ್ವವನ್ನು ನಿರಾಕರಿಸಿದ್ದನು.

ಒಮ್ಮೆ ಅಬೂಜಹಲ್ ಸುಹೈಬ್‌ರಲ್ಲಿ ಪ್ರವಾದಿವರ್ಯರ(ಸ) ಕುರಿತು ಹೀಗೆಂದ– "ನಮ್ಮ ಗೋತ್ರದಲ್ಲಿ ಪ್ರವಾದಿ ಬಂದಿಲ್ಲ. ಆ ಗೋತ್ರದಲ್ಲಿ ಪ್ರವಾದಿ ಬಂದಿದ್ದಾನೆ. ಇದೊಂದನ್ನು ಬಿಟ್ಟರೆ ನಮಗೂ ಪ್ರವಾದಿಯ ಗೊತ್ರಕ್ಕೂ ಎಲ್ಲ ವಿಷಯದಲ್ಲಿಯೂ ಸಮಾನತೆಯಿದೆ. ಹಾಜಿಗಳಿಗೆ (ಹಜ್ ನಿರ್ವಹಿಸುವವರಿಗೆ) ಅವರು ನೀರು ಕುಡಿಸಿದರು ಮತ್ತು ಸೇವೆ ಮಾಡಿದರು. ಅದನ್ನು ನಾವು ಕೂಡ ಮಾಡಿದೆವು. ನಮಗೆ ಬನೂ ಅಬ್ದುಮನಾಫ್ ಗೋತ್ರದೊಂದಿಗೆ ಘನತೆಯ ವಿಚಾರದಲ್ಲಿ ಸ್ಪರ್ಧೆ ಇದೆ. ಈಗ ಅವರು ಹೇಳುತ್ತಿದ್ದಾರೆ. ನಮ್ಮಲ್ಲೊಬ್ಬ ಪ್ರವಾದಿ ಇದ್ದಾನೆ. ಅವನ ಬಳಿಗೆ ಆಕಾಶದಿಂದ ವಹ್ಯ್ (ದೈವಿಕ ಸಂದೇಶ) ಬರುತ್ತಿದೆ. ನಾವು ಅದನ್ನು ಎಲ್ಲಿಂದ ಪಡೆಯಬಲ್ಲೆವು. ನಾವು ದೇವನಾಣೆಗೂ ವಿಶ್ವಾಸ ಇರಿಸುವುದಿಲ್ಲ (ವಿಶ್ವಾಸ ಇರಿಸಿದರೆ ಸತ್ಯವೆಂದು ಒಪ್ಪಿಂದಂತಾಗುತ್ತಿತ್ತು) ಮತ್ತು ದೃಢೀಕರಿಸುವುದಿಲ್ಲ. ಇದೇ ಜಿದ್ದು ಮತ್ತು ಹಟ ಅಬೂಜಹಲನ ಅಸೂಯೆಗೆ ಕಾರಣವಾಗಿತ್ತು.

ಅವನು ಮುಹಮ್ಮದ್‌ರ(ಸ) ಸತ್ಯಸಂಧತೆಯ ಕುರಿತು ಹೀಗೆ ಹೇಳುತ್ತಾನೆ, "ನನಗೆ ಗೊತ್ತಿದೆ ಈ ವ್ಯಕ್ತಿ ಏನು ಹೇಳುತ್ತಾನೊ ಅವೆಲ್ಲವೂ ಸತ್ಯವಾಗಿವೆ. ಕೇವಲ ಒಂದು ವಿಷಯವು ನನ್ನನ್ನು ತಡೆಯುತ್ತಿದೆ."

ಆ ವಿಷಯವನ್ನು ಈಗಾಗಲೇ ವಿವರಿಸಲಾಗಿದೆ. ಇನ್ನೊಂದು ಸಂದರ್ಭದಲ್ಲಿ ಅಬೂಜಹಲ್ ತನ್ನ ಇನ್ನೋರ್ವ ಸಂಗಡಿಗನಲ್ಲಿ ಹೇಳುತ್ತಾನೆ, "ದೇವನಾಣೆಗೂ ಈ ವ್ಯಕ್ತಿ ನಿಜವಾದ ಪ್ರವಾದಿ ಎಂದು ನನಗೆ ತಿಳಿದಿದೆ. ಆದರೆ ನಾವು (ನಮ್ಮ ಗೋತ್ರ) ಮತ್ತು ಅಬ್ದುಮನಾಫ್‌ಗೆ [ಪ್ರವಾದಿಯವರ(ಸ) ಗೋತ್ರ] ಎಂದು ಸರಿಸಮಾನವಾಗಬಲ್ಲೆವು?"

ಇನ್ನೊಂದು ಸಂದರ್ಭದಲ್ಲಿ ಅಬೂಜಹಲನು ಪ್ರವಾದಿವರ್ಯ(ಸ)ರನ್ನು ಅಭಿಸಂಬೋಧಿಸಿ ಹೇಳಿದ, "ನಾವು ನಿನ್ನನ್ನು ಸುಳ್ಳುಗಾರನೆಂದು ಹೇಳುವುದಿಲ್ಲ. ಆದರೆ ಸುಳ್ಳು ಎಂದು ನಾವು ನೀನು ತಂದಿರುವ ವಿಷಯವನ್ನು ಹೇಳುತ್ತಿದ್ದೇವೆ."

ಬದ್ರ್ ಯುದ್ಧದ ಸಂದರ್ಭದಲ್ಲಿ ಅಖ್ನಿಸ್ ಅಬೂಜಹಲನೊಡನೆ ಹೀಗೆ ಹೇಳಿದ, "ನನ್ನನ್ನು ಮತ್ತು ನಿನ್ನನ್ನು ಬಿಟ್ಟರೆ ಇಲ್ಲಿ ಮೂರನೆಯವರಾಗಿ ಯಾರೂ ಇಲ್ಲ. ನನಗೆ ಮುಹಮ್ಮದ್(ಸ) ಸತ್ಯಸಂಧನೇ ಅಥವಾ ಸುಳ್ಳುಗಾರನೇ ಎಂದು ಸ್ಪಷ್ಟವಾಗಿ ಹೇಳು." ಅದಕ್ಕೆ ಅಬೂಜಹಲ್ ಹೀಗೆ ಉತ್ತರಿಸಿದ, "ದೇವನಾಣೆಗೂ ಮುಹಮ್ಮದ್ ಸತ್ಯಸಂಧ. ಅವನೆಂದೂ ಸುಳ್ಳಾಡಿಲ್ಲ."

ಹತ್ತಿರದ ಕುಟುಂಬದವರ ಮುಂದೆ ಪ್ರವಾದಿತ್ವದ ಪ್ರಕಟಣೆ

ಮುಹಮ್ಮದ್(ಸ)ರು ತನ್ನ ಕುಟುಂಬದ ಹತ್ತಿರದ ಸಂಬಂಧಿಕರನ್ನು ಔತಣಕ್ಕೆ ಕರೆದು ದೇವನ ಏಕತ್ವದ ಸಾಕ್ಷ್ಯವಚನವನ್ನು ಅವರ ಮುಂದಿಟ್ಟರು. ಸಾಕ್ಷ್ಯವಚನವನ್ನು ಸ್ವೀಕರಿಸಿದರೆ ನಿಮಗೆ ಇಹ-ಪರಗಳಲ್ಲಿ ಒಳಿತಾಗುವುದು ಮತ್ತು ಅರಬರು ಮತ್ತು ಅರಬೇತರರ ಮೇಲೆ ನೀವು ಅಧಿಕಾರ ಚಲಾಯಿಸುವಿರಿ ಎಂದರು. ತಮ್ಮ ಕುಟುಂಬದ ಜನರ ಮುಂದೆ ಪ್ರವಾದಿತ್ವ ಘೋಷಣೆಗೆ ಈ ವಿಧಾನವನ್ನು ಬಳಸಿ ಕೊಂಡರು. ಸೃಷ್ಟಿಕರ್ತನ ಸಂದೇಶವನ್ನು ಕುಟುಂಬದವರಿಗೆ ತಿಳಿಸಿ ಅದನ್ನು ಸ್ವೀಕರಿಸಲು ಕರೆ ನೀಡಿದರು.

ಇವರೆಲ್ಲ ಕುರೈಶಿ ಸರದಾರರು. ಪ್ರವಾದಿಯ(ಸ) ಆಹ್ವಾನ ಸ್ವೀಕರಿಸುವುದರಿಂದ ಅವರ ಸರದಾರಿಕೆ ಮತ್ತು ನಾಯಕತ್ವ ಮುಗಿದು ಬಿಡುವಂತೆ ಮತ್ತು ತಮ್ಮ ಪೂರ್ವಜರ ಧರ್ಮಕ್ಕೆ ಹಾನಿಯಾಗಲಿರುವಂತೆ ಅನಿಸಿತು. ಜೊತೆಗೆ ಅರಬರ ವಿರೋಧ ಕಟ್ಟಿಕೊಳ್ಳಬೇಕಾಗಬಹುದು ಮತ್ತು ಅರಬರ ಶತ್ರುತ್ವದ ಸಾಧ್ಯತೆಗಳೂ ಅವರಿಗೆ ಗೋಚರಿಸಿದವು. ಆದ್ದರಿಂದ ಮುಹಮ್ಮದ್‌ರ ಪ್ರವಾದಿತ್ವ ಮತ್ತು ಸಂದೇಶವನ್ನು ಕುಟುಂಬದವರು ನಿರಾಕರಿಸಿದರು. ಆದರೆ ಮುಹಮ್ಮದ್‌ರ(ಸ)ನ್ನು ಯಾರೂ ಕೂಡ ಸುಳ್ಳುಗಾರನೆಂದಾಗಲಿ ಅವರ ಪ್ರವಾದಿತ್ವವಾದವನ್ನಾಗಲಿ ಅವರು ತಂದ ಸಂದೇಶವನ್ನಾಗಲಿ ಸುಳ್ಳೆನ್ನಲಿಲ್ಲ.

ನಿರಾಕರಣೆ ಮತ್ತು ವಿರೋಧಗಳಿಂದ ಪ್ರವಾದಿತ್ವವಾದದ ನಿಜ ಸ್ಥಿತಿ ಹೆಚ್ಚು ಬಹಿರಂಗವಾಯಿತು. ಪ್ರವಾದಿ ಮತ್ತು ಪ್ರವಾದಿತ್ವ ಘೋಷಣೆಯ ಬಗ್ಗೆ ಜನರ ನಡುವೆ ಚರ್ಚೆ ಹೆಚ್ಚು ವ್ಯಾಪಿಸುತ್ತದೆ.

ಪ್ರವಾದಿತ್ವವಾದಿಯ ನಿರಾಕರಣೆ ಮತ್ತು ಅವರನ್ನು ವಿರೋಧದಿಂದ ಪ್ರವಾದಿತ್ವದ

ನಿಜ ಸ್ಥಿತಿ ಮತ್ತು ಅವರ ವ್ಯಕ್ತಿತ್ವವು ಇನ್ನಷ್ಟು ಹೆಚ್ಚು ಹೊಳಪಿನಿಂದ ಹೊರಹೊಮ್ಮಿ ಬಂತು. ವಿರೋಧಿಗಳ ಮುಂದೆ ಪ್ರವಾದಿ ಸಹನೆ ಮತ್ತು ಸಹಿಷ್ಣುತೆಯಿಂದ ವರ್ತಿಸಿದರು. ಮೃದುವಾಗಿ ಮತ್ತು ಪ್ರೀತಿ ಪ್ರಾಮಾಣಿಕತೆಯಿಂದ ತನ್ನ ಸಂದೇಶ ಸ್ವೀಕಾರಕ್ಕೆ ಕರೆ ನೀಡುವರು. ಈ ರೀತಿ ಪ್ರವಾದಿ ಸಂದೇಶ ನೀಡಲು ಆರಂಭಿಸಿದ್ದು. ಆದರೆ, ವಿರೋಧಿಸುತ್ತಿರುವ ಸ್ವಾರ್ಥಿಗಳಿಗೆ ಪ್ರವಾದಿತ್ವವಾದಿಯು ಸತ್ಯಸಂಧನೆಂದೂ ಅವರು ಪ್ರಸ್ತುತಪಡಿಸುವ ವಿಷಯಗಳು ನಿಜವಾದುದು ಎಂದೂ ಮತ್ತು ಅದು ಸೃಷ್ಟಿಕರ್ತನ ಕಡೆಯಿಂದಿರುವುದು ಎಂದೂ ಅರಿವಿತ್ತು. ಅವರು ನಿರಾಕರಿಸಲೆಂದೇ ತರತರದ ನೆಪಗಳನ್ನು ಮುಂದಿಡುತ್ತಿದ್ದರು ಮತ್ತು ಆರೋಪಗಳನ್ನು ಹೊರಿಸಿದರು. ಇದು ವಿರೋಧ, ದೌರ್ಜನ್ಯವೆಸಗುವ ವರೆಗೂ ತಲುಪಿತು.

ಆದರೆ ಪ್ರವಾದಿ(ಸ) ತನ್ನ ಮೇಲಾಗಲಿ, ತಾನು ತಂದ ಸಂದೇಶದ ಮೇಲಾಗಲಿ ವಿಶ್ವಾಸವಿರಿಸುವಂತೆ ಯಾರನ್ನೂ ಬಲವಂತಪಡಿಸಿರಲಿಲ್ಲ. ಅದಕ್ಕೆ ಸೃಷ್ಟಿಕರ್ತನ ಅನುಮತಿ ಕೂಡ ಇರಲಿಲ್ಲ. ಸೃಷ್ಟಿಕರ್ತನು ಜನರನ್ನು ಬಲವಂತದಿಂದ ಅಂಗೀಕರಿಸುವಂತೆ ಮಾಡುವ ಹೊಣೆಗಾರಿಕೆಯನ್ನು ಅವರಿಗೆ ವಹಿಸಿಕೊಟ್ಟಿರಲಿಲ್ಲ. ಆದುದರಿಂದ ಅವರು ವಿಶ್ವಾಸ ಇರಿಸುವಂತೆ ಯಾರನ್ನೂ ಒತ್ತಾಯಿಸಲಿಲ್ಲ. ಆಮಿಷ ತೋರಿಸಲಿಲ್ಲ. ವಿಶ್ವಾಸವಿರಿಸಿದರೆ ಆಗುವ ಲಾಭ ಮತ್ತು ವಿಶ್ವಾಸ ಇಡಲು ನಿರಾಕರಿಸಿದರೆ ಆಗುವ ಹಾನಿಯನ್ನು ಅವರು ಜನರಿಗೆ ಮನವರಿಕೆ ಮಾಡಿಕೊಟ್ಟು ವಿಶ್ವಾಸ ಇರಿಸುವಂತೆ ಪ್ರೋತ್ಸಾಹಿಸಿದರು. ಇನ್ನೊಂದು ಜೀವನವಿದೆ. ಸ್ವರ್ಗ ನರಕ ಅಲ್ಲಿ ನಿರ್ಣಯಿಸಲ್ಪಡುತ್ತದೆ. ಅಲ್ಲಿಗೂ ನಿಮ್ಮ ಕರ್ಮದ ಪರಿಣಾಮ ಮುಂದುವರಿಯುತ್ತದೆ ಎಂದು ತಿಳಿ ಹೇಳಿದರು. ತನ್ನ ಅಧಿಕೃತ ಹೊಣೆಗಾರಿಕೆಯಲ್ಲಿದ್ದಂತಹ ಎಲ್ಲ ವಿಷಯಗಳನ್ನು ಅಂದರೆ ಸಂದೇಶವನ್ನು ಮೊದಲು ತನ್ನ ಕುಟುಂಬದವರ ಮುಂದಿಟ್ಟರು. ಇಷ್ಟೇ ತನಗಿರುವ ಅಧಿಕೃತ ಹೊಣೆಗಾರಿಕೆ ಎಂಬ ಅರಿವು ಅವರಲ್ಲಿತ್ತು.

ಆದುದರಿಂದ ಜನರಿಗೆ ಅರ್ಥವಾಗುವಂತೆ ನೈತಿಕ ಮಾನದಂಡಗಳ ಅಡಿಯಲ್ಲೇ ಸಂದೇಶ ಪ್ರಚಾರ ಮಾಡಿದರು. ಆದರೂ ಪ್ರವಾದಿಯ ಮೇಲೆ ವಿರೋಧಿಗಳು ದೌರ್ಜನ್ಯಕ್ಕೆ ಮುಂದಾದರು. ನೈತಿಕ ಮಾನದಂಡದಂತೆ ಸಂದೇಶ ಪ್ರಚಾರದಲ್ಲಿ ವಾದಿಯ(ಪ್ರವಾದಿಯ) ಮಾನವೀಯ ಮತ್ತು ನೈತಿಕ ಗುಣಗಳು ಹೊರಹೊಮ್ಮಿದವು. ಪ್ರವಾದಿತ್ವದ ಗುಣವೈಶಿಷ್ಟ್ಯ, ಅವರ ಪರಿಶುದ್ಧ ವೈಯಕ್ತಿಕ ಜೀವನ, ಒಳಿತುಗಳು ಜನರ ಮುಂದೆ ಸ್ಪಷ್ಟ ಮತ್ತು ದೃಢವಾಗಿ ಪ್ರಕಟಗೊಂಡಿತು.

ಆದರೆ ಶತ್ರುಗಳ ಧೂರ್ತತನದಿಂದಾಗಿ ಪ್ರಚಾರಕ ಅಥವಾ ಅವರನ್ನು ವಿರೋಧಿಸುವ ಸರದಾರರಲ್ಲಿ ಯಾರು ಸತ್ಯ ಹೇಳುತ್ತಿದ್ದಾರೆ, ಯಾರು ಕಪಟಿಗಳು

ಸುಳ್ಳು ಹೇಳುತ್ತಿದ್ದಾರೆ ಗೊಂದಲವಾಯಿತು. ಜನರಲ್ಲಿ ನಿರ್ಧರಿಸುವ ಸಾಮರ್ಥ್ಯ ಇಲ್ಲದಾಯಿತು. ಆದರೂ ಜನರು ನೈತಿಕತೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಯಾಕೆಂದರೆ ಮನುಷ್ಯರೊಳಗಿರುವ ಆತ್ಮಸಾಕ್ಷಿ ಅವರನ್ನು ಪ್ರೇರೇಪಿಸುತ್ತದೆ. ಯಾರು ಸತ್ಯವನ್ನಾಡುವವರು, ಯಾರು ಸುಳ್ಳಾಡುವವರು ಎಂದು ಅದು ಜನರಿಗೆ ಸೂಚಿಸುತ್ತದೆ ಮತ್ತು ಜನರಲ್ಲಿ ಸ್ವಾರ್ಥಿಗಳಲ್ಲದ ಹಿರಿಯರಿಗೆ ಹೆದರದ ಕೆಲವು ಜನರಿಗೆ ಪ್ರವಾದಿಯು ಸತ್ಯಸಂಧನೆಂದು ಅರಿವಾಗುತ್ತದೆ. ಆ ನಂತರ ಅವರು ಪ್ರವಾದಿತ್ವವಾದಿಯ ಬೆಂಬಲಕ್ಕೆ ಸಂಪೂರ್ಣ ತೃಪ್ತಿಯಿಂದ ಮುಂದೆ ಬರುತ್ತಾರೆ.

ಸಮಾಜದಲ್ಲಿ ನೆಲೆಸಿದ ಸಂಘರ್ಷಭರಿತ ಪರಿಸ್ಥಿತಿಯ ನಡುವೆಯೂ ಪ್ರವಾದಿ(ಸ) ಮತ್ತು ಅವರು ತಂದ ಸಂದೇಶ ಮತ್ತಷ್ಟು ಪ್ರಖರವಾಗಿ ಬಹಿರಂಗಗೊಳ್ಳುತ್ತದೆ. ಈ ರೀತಿ ಪ್ರವಾದಿತ್ವದ ಘೋಷಣೆ ಹಾಗೂ ಇದರ ಚರ್ಚೆ ಸಮಾಜದಲ್ಲಿ ವ್ಯಾಪಿಸಿತು ಮತ್ತು ಸರಿಯಾದ ರೀತಿಯಲ್ಲಿ ಪ್ರಕಟಗೊಂಡಿತು.

ವಿರೋಧಿಗಳೇ ಸ್ವಯಂ ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಮತ್ತು ಪ್ರವಾದಿತ್ವದ ಘೋಷಣೆ ಬಗ್ಗೆ ಚರ್ಚಿಸಲಾರಂಭಿಸಿದರು. ಅವರು ಹೆದರಿ, ಆತಂಕಗೊಂಡು ಪ್ರವಾದಿ ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ತಿರಸ್ಕರಿಸುತ್ತಾ ಋಣಾತ್ಮಕ ರೀತಿಯಲ್ಲಿ ತಮಗೆ ಹತ್ತಿರದ ಜನರಲ್ಲಿ ಅಪಪ್ರಚಾರ ಮಾಡಲು ತೊಡಗಿದರು. ಆದರೆ ಇದು ಜನರಲ್ಲಿ ಕುತೂಹಲ ಮೂಡಲು ಕಾರಣವಾಯಿತು. ಈ ವ್ಯಕ್ತಿ ಯಾರು ಮತ್ತು ಅವರೊಡನೆ ಒಮ್ಮೆ ಮಾತಾಡಬೇಕೆಂದು ಕುತೂಹಲಗೊಂಡು ದೂರ ದೂರದಿಂದ ಬರತೊಡಗಿದರು. ಹೀಗೆ ಬಂದವರು ಮುಹಮ್ಮದ್‌ರನ್ನು(ಸ) ಭೇಟಿಯಾದರು. ಈ ರೀತಿಯಲ್ಲೂ ಸ್ವಾಭಾವಿಕವಾಗಿ ಮುಹಮ್ಮದ್(ಸ)ರ ಪ್ರವಾದಿತ್ವ ಮತ್ತು ಸೃಷ್ಟಿಕರ್ತನ ಸಂದೇಶದ ಘೋಷಣೆ ನಡೆಯಿತು.

ಪ್ರವಾದಿತ್ವ ಘೋಷಣೆ ಮತ್ತು ಸಂದೇಶ ಪ್ರಚಾರದ ಸಾಮಾನ್ಯ ವಿಧಾನ

ತಮ್ಮ ಕುಟುಂಬ ಮತ್ತು ಗೋತ್ರದ ಜನರಿಗೆ ಸಂದೇಶ ನೀಡುವ ಕಾರ್ಯ ಮುಗಿಯಿತು. ಆ ಮೇಲೆ ಮುಹಮ್ಮದ್‌ರು(ಸ) ಮಕ್ಕಾ ಮತ್ತು ಅರೇಬಿಯದ ಜನರಿಗೆ ಸಂದೇಶ ತಲುಪಿಸುವ ಕಾರ್ಯ ಆರಂಭಿಸಿದರು. ಹತ್ತು ವರ್ಷ ಮುಂದುವರಿಯಿತು. ಸಭೆ ನಡೆಯುವಲ್ಲಿ ಹೋಗಿ, ಸಾರ್ವಜನಿಕವಾಗಿಯೂ ಮತ್ತು ಹರಮ್‌ನಲ್ಲಿ (ಕಅಬಾ ಪರಿಸರದಲ್ಲಿ) ಜನರಿಗೆ ಸೃಷ್ಟಿಕರ್ತನ ಸಂದೇಶವನ್ನು ತಲುಪಿಸುವ ಕಾರ್ಯ ಆರಂಭಿಸಿದರು. ಮಕ್ಕಾಗೆ ವ್ಯಾಪಾರಕ್ಕೆ ಬಂದವರು, ಉಮ್ರ ಮತ್ತು ತೀರ್ಥಯಾತ್ರೆಗೆ ಬಂದ ಜನರ ಬಳಿ ಹೋಗಿ ಅವರನ್ನು ಪ್ರವಾದಿ(ಸ) ಭೇಟಿಯಾದರು. ಹಜ್ಜ್‌ನ ವೇಳೆ ಜನರು ಉಳಿದುಕೊಳ್ಳುತ್ತಿದ್ದ ಬೇರೆ ಬೇರೆ ಡೇರೆಗಳಿಗೆ ಹೋಗಿ ಜನರನ್ನು

ಭೇಟಿಯಾದರು. ಮತ್ತು ಇಷ್ಟೆಲ್ಲ ಗ್ರಾಮಗಳಿಗೂ ಹೋಗಿ ಅಲ್ಲಿನ ಜನರಿಗೆ ತನ್ನ ಪ್ರವಾದಿತ್ವವನ್ನು, ತೌಹೀದನ್ನು (ದೇವನು ಒಬ್ಬನೇ ಎಂದು) ಮತ್ತು ಸೃಷ್ಟಿಕರ್ತನ ಕಡೆಯಿಂದ ಅವನ ದಾಸರಿಗೆ ಬಂದಿರುವ ದಿವ್ಯ ಸಂದೇಶವಾದ ಪವಿತ್ರ ಕುರ್‌ಆನನ್ನು ಉಪದೇಶಿಸುತ್ತಿದ್ದರು. ಜನರು ಅವರು ಮುಂದೆ ಎತ್ತಿದ ಪ್ರಶ್ನೆ ಮತ್ತು ಅನುಮಾನಗಳಿಗೆ ಪವಿತ್ರ ಕುರ್‌ಆನ್‌ನಿಂದಲೇ ಉತ್ತರಿಸಿದರು ಮತ್ತು ಪರಿಹಾರ ಸೂಚಿಸುತ್ತಿದ್ದರು. ಪವಿತ್ರ ಕುರ್‌ಆನನ್ನು ಎಲ್ಲ ಸ್ಥಳ ಮತ್ತು ಎಲ್ಲ ಸಂದರ್ಭಗಳಲ್ಲಿ ಜನರ ಮುಂದೆ ವಾಚಿಸಿದರು. ಜನರೇ, ತಮ್ಮ ಸೃಷ್ಟಿಕರ್ತ ಪ್ರಭುವಿನ ವಿಧೇಯತ್ವವನ್ನು ಸ್ವೀಕರಿಸಿರಿ ಎಂದು ಕರೆ ನೀಡಿದರು.

ಆ ಮೇಲೆ ಸೃಷ್ಟಿಕರ್ತನ ಸಂದೇಶವನ್ನು ಜನರು ಸ್ವೀಕರಿಸಲಿ, ಸ್ವೀಕರಿಸದಿರಲಿ. ಮೌನವಾಗಿ ಆಲಿಸಲಿ, ಆಲಿಸದಿರಲಿ, ಕಟುವಾಗಿ ಉತ್ತರ ನೀಡಲಿ ಅಥವಾ ಒರಟಾಗಿ ವರ್ತಿಸಲಿ, ಇಷ್ಟು ಮಾತ್ರವಲ್ಲ ಅವರ ಬದ್ಧ ವಿರೋಧಿಗಳಾದ ಕುರೈಶಿ ಜನರು ಅವರಿಗೆ ಕಿರುಕುಳವನ್ನೇ ಕೊಡಲಿ ತಮ್ಮ ಹೊಣೆಗಾರಿಕೆಯಲ್ಲಿ ಅವರು ಯಾವುದೇ ವಿಧದ ಲೋಪವೆಸಗಲಿಲ್ಲ.

ಪ್ರವಾದಿ(ಸ) ಪ್ರತಿಯೊಂದೂ ಗೋತ್ರದ ಬಳಿಗೆ ಹೋಗಿ ಹೇಳುತ್ತಿದ್ದರು, "ಓ ಜನರೇ ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿರಿ, ವಿಜಯ ಹೊಂದುವಿರಿ ಮತ್ತು ಈ ಸಾಕ್ಷ್ಯ ವಚನದ ಕಾರಣವಾಗಿ ನೀವು ಅರೇಬಿಯದ ಆಡಳಿತಗಾರ ರಾಗುವಿರಿ. ಮತ್ತು ಈ ಸಾಕ್ಷ್ಯ ವಚನದ ಮೂಲಕ ಅರಬೇತರರು ನಿಮ್ಮ ಅಧೀನ ವಾಗುವರು. ನೀವು ಸತ್ಯವಿಶ್ವಾಸವನ್ನು ಸ್ವೀಕರಿಸಿದರೆ ಸ್ವರ್ಗ ಪಡೆಯುವಿರಿ." ಈ ರೀತಿ ಪ್ರವಾದಿವರ್ಯರು(ಸ) ಜನರಿಗೆ ತೌಹೀದ್‌ನ (ಏಕದೇವತ್ವದ) ಸಂದೇಶ ನೀಡಿದರು. "ಲಾ ಇಲಾಹ ಇಲ್ಲಲ್ಲಾಹ್" ಅನ್ನು ನೀವು ಸ್ವೀಕರಿಸಿ ವಿಶ್ವಾಸ ಇರಿಸುವಿರಾದರೆ ವಿಜಯ ಗಳಿಸುವಿರಿ ಎಂದು ಪ್ರವಾದಿ(ಸ) ಕರೆ ನೀಡಿದರು.

ಕೆಲವು ಜನರು ಪ್ರವಾದಿಯವರ(ಸ) ಮಾತಿಗೆ ಗೌರವ ನೀಡಿದರು, ಕೆಲವರು ಪ್ರವಾದಿಗೆ(ಸ) ನಿಂದಿಸಿದರು, ಕೆಲವರು ಮಣ್ಣು ಎರಚಿದರು. ಆದರೆ ಪ್ರವಾದಿ(ಸ) ಇನ್ನ್ಯಾವುದಕ್ಕೂ ಹಿಂಜರಿಯದೆ ಪ್ರವಾದಿತ್ವದ ಆರಂಭದ ಮೂರು ವರ್ಷ ಗುಪ್ತ ರೀತಿಯಿಂದ ಜನರಿಗೆ ಸೃಷ್ಟಿಕರ್ತನ ಸಂದೇಶವನ್ನು ಹಗಲು ರಾತ್ರೆ ಅವಿಶ್ರಾಂತವಾಗಿ ತಲುಪಿಸುತ್ತಿದ್ದರು. ಪ್ರವಾದಿಯ(ಸ) ಅಭಿಸಂಬೋಧಿತರಲ್ಲಿ ಸ್ವತಂತ್ರರು, ದುರ್ಬಲರು, ಬಲಿಷ್ಠರು, ಬಡವರು, ಶ್ರೀಮಂತರು ಈ ರೀತಿ ಎಲ್ಲ ವರ್ಗದ ಜನರು ಇದ್ದರು.

ಪ್ರವಾದಿಯವರು(ಸ) ಈ ಸಂದರ್ಭದಲ್ಲಿ ರಹಸ್ಯ ಸಂದೇಶ ಪ್ರಚಾರ ನಡೆಸಿ ದರು. ರಹಸ್ಯ ರೀತಿಯ ಸಂದೇಶ ಪ್ರಚಾರ ಕಾರ್ಯಕ್ಕೆ ಕಾರಣವಿತ್ತು. ಯಾರಾದರೂ

ಸಂದೇಶ ಸ್ವೀಕರಿಸುವುದಾದರೆ ಅವರ ಮನಸ್ಸನ್ನು ವಿರೋಧಿಗಳು ಕೆಡಿಸಿ ಸತ್ಯ ಸ್ವೀಕಾರಕ್ಕೆ ಅಡಚಣೆ ಉಂಟುಮಾಡಬಾರದು ಎಂಬುದು ಅದಕ್ಕೆ ಕಾರಣವಾಗಿತ್ತು ಮತ್ತು ಅವರಿಂದಾಗಿ ಅಮೂಲ್ಯವಾದ ವಿಷಯದಿಂದ ಜನರು ವಂಚಿತರಾಗಬಾರದು. ಜನರ ಒಳಿತಿನ ವಿಷಯ ಜನರಿಗೆ ಮನವರಿಕೆಯಾಗದಂತೆ ಮತ್ತು ಸ್ವೀಕರಿಸದಂತೆ ಅವರಿಂದಾಗಿ ದೂರವುಳಿಯಬಾರದು. ಹೀಗೆ ಆರಂಭದ ಮೂರು ವರ್ಷಗಳಲ್ಲಿ ವೈಯಕ್ತಿಕ ನೆಲೆಯಲ್ಲಿ ಒಬ್ಬೊಬ್ಬ ವ್ಯಕ್ತಿಗೆ ರಹಸ್ಯ ವಿಧಾನದಿಂದ ತನ್ನ ಪ್ರವಾದಿತ್ವವನ್ನು ತಲುಪಿಸಿದರು ಮತ್ತು ದೇವನ ಏಕತ್ವದ ಸಂದೇಶ ತಲುಪಿಸಿದರು. ವ್ಯಕ್ತಿಗಳನ್ನು ಆಯ್ಕೆ ಮಾಡಿ ತಲುಪಿಸುವುದರಿಂದ ಅವರು ಸಂದೇಶವನ್ನು ಸ್ವೀಕರಿಸಿದರೆ ಇತರರಿಗೆ ಸಂದೇಶ ತಲುಪಿಸುವಾಗ ಅವರ ಸಹಕಾರವೂ ದೊರೆಯುತ್ತಿತ್ತು.

ಜನರಿಗೆ ಸಂದೇಶವನ್ನು ನೀಡುವ ಮುಹಮ್ಮದ್‌ರ ಈ ವಿಧಾನದಲ್ಲಿ ಪ್ರವಾದಿತ್ವದ ಸಂದೇಶ ಮತ್ತು ತೌಹೀದ್‌ನ (ದೇವನ ಏಕತ್ವ) ಎರಡೂ ಸಂದೇಶವೂ ಇತ್ತು. ಸಂದೇಶ ಸ್ವೀಕರಿಸಿ ವಿಶ್ವಾಸ ಇರಿಸಿದರೂ ಇರಿಸದಿದ್ದರೂ ಅದಕ್ಕೆ ಪರಿಣಾಮ ಕೂಡ ಇತ್ತು. ಅದರ ಪರಿಣಾಮ ಭೌತಿಕ ಮತ್ತು ಮರಣಾನಂತರ ಜೀವನದಲ್ಲಿ ಆಗುತ್ತಿತ್ತು. ಆದರೆ, ಪ್ರವಾದಿಯ(ಸ) ಸಂದೇಶಕ್ಕೆ ಜನರು ಕಿವಿಕೊಡದಂತೆ ತಡೆಯಲು ಮುಹಮ್ಮದ್‌ರ(ಸ) ಬದ್ಧ ಶತ್ರುಗಳಾದ ಕುರೈಶಿ ಸರದಾರರು ಮಾನಹಾನಿಗಿಳಿದರು. ಮುಹಮ್ಮದ್‌ರನ್ನು ಜಾದುಗಾರ, ಮಂತ್ರವಾದಿ ಮತ್ತು ಮಾನಸಿಕ ಅಸ್ವಸ್ಥ ಎಂದು ಅಪಪ್ರಚಾರ ಮಾಡಿದರು.

ಆದರೂ ಪ್ರವಾದಿವರ್ಯರನ್ನು(ಸ) ಸುಳ್ಳುಗಾರನೆನ್ನುವ ಧೈರ್ಯ ಅವರಿಗಿರಲ್ಲಿಲ್ಲ. ಅವರ ವ್ಯಕ್ತಿತ್ವದ ಮೇಲೆ ದಾಳಿ ಮಾಡಲು ಅವರಿಂದ ಸಾಧ್ಯವಿರಲಿಲ್ಲ. ಅಷ್ಟು ಪರಿಶುದ್ಧ ವ್ಯಕ್ತಿತ್ವ. ಮುಹಮ್ಮದರ ತುಟಿಗಳು ಸತ್ಯವನ್ನೇ ನುಡಿದಿರುವುದು. ಅವರು ಸತ್ಯಸಂಧ ಮತ್ತು ವಿಶ್ವಸ್ಥರು. ಇಂತಹ ಘನವೆತ್ತ ವ್ಯಕ್ತಿತ್ವ ಮುಹಮ್ಮದ್(ಸ)ರದ್ದಾಗಿತ್ತು.

ಸೃಷ್ಟಿಕರ್ತನ ಸಂದೇಶ ಮತ್ತು ಮುಹಮ್ಮದ್‌ರ(ಸ) ಸತ್ಯಸಂಧತೆ: ವಿರೋಧಿಗಳ ಮಾತುಗಳಲ್ಲಿ

ಪ್ರವಾದಿ ಮುಹಮ್ಮದ್‌ರ(ಸ) ಅಸಾಮಾನ್ಯ ವ್ಯಕ್ತಿತ್ವ ಮತ್ತು ಪವಿತ್ರ ಕುರ್‌ಆನ್‌ನ ಅನಂತ ಪರಿಣಾಮಗಳನ್ನು ವಿರೋಧಿಗಳು ಅರಿತಿದ್ದರು. ಆದ್ದರಿಂದ ಅವರು ಪದೇ ಪದೇ ಮಾತುಕತೆಗೆ ಪ್ರಯತ್ನಿಸಿದರು. ಧರ್ಮದ ವಿಷಯದಲ್ಲಿರುವ ಯಾವುದೇ ಸಮಸ್ಯೆ ಗಳನ್ನು ಪ್ರವಾದಿಯವರೊಡನೆ(ಸ) ಚರ್ಚಿಸಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಿದರು. ಆದುದರಿಂದ ವಿರೋಧಿಗಳು ಮುಹಮ್ಮದ್‌ರೊಡನೆ(ಸ) ಮಾತುಕತೆ ನಡೆಸಲು ಅತೀಬ್ ಬಿನ್ ರಬೀಆನನ್ನು ಕಳುಹಿಸಿದರು.

ರಬೀಆ ಭೇಟಿಯಾಗಲು ಬಂದ ಸಮಯದಲ್ಲಿ ಪ್ರವಾದಿ(ಸ) ಹರಮ್‌ನ (ಕಅಬಾ ಪರಿಸರದ) ಇನ್ನೊಂದು ಕಡೆ ಅಸೀನರಾಗಿದ್ದರು. ರಬೀಆ ಮುಹಮ್ಮದ್‌ರ(ಸ) ಮುಂದೆ ಕೆಲವು ಪ್ರಸ್ತಾಪಗಳನ್ನು ಎತ್ತಿದರು. "ನಿಮ್ಮನ್ನು ಮಕ್ಕಾದಲ್ಲಿ ಎಲ್ಲರಿಗಿಂತ ದೊಡ್ಡ ಶ್ರೀಮಂತರಾಗಿ ಮಾಡುವೆವು ಅಥವಾ ರಾಜನಾಗಿಸುವೆವು. ಒಂದು ವೇಳೆ ನಿಮ್ಮ ಮೇಲೆ ಜಿನ್ನ್‌ನ ಹಾವಳಿ ಆಗಿದ್ದರೆ ಅದಕ್ಕೂ ಚಿಕಿತ್ಸೆ ಕೊಡಿಸುವೆವು. ಮಕ್ಕಾದ ಅಪ್ರತಿಮ ಸುಂದರಿಯೊಂದಿಗೆ ಮದುವೆ ಮಾಡಿಸುವೆವು. ನೀವು ನಿಮ್ಮ ಈ ಕೆಲಸವನ್ನು (ಸಂದೇಶ ಪ್ರಚಾರ ಕಾರ್ಯ) ನಿಲ್ಲಿಸಿರಿ, ನಿಮ್ಮ ಈ ಕಾರ್ಯ ನಮ್ಮ ದೇವಂದಿರನ್ನು ಮತ್ತು ನಮ್ಮ ನಡುವೆ ಆಗಿ ಹೋದ ಪೂರ್ವಜರನ್ನು ಅಪಮಾನಿಸುತ್ತಿದೆ ಮತ್ತು ಕುಟುಂಬಗಳಿಗೆ ಹಾನಿ ಸಂಭವಿಸುತ್ತಿದೆ."

ರಬೀಅನ ಮಾತು ಮುಗಿಯಿತು. ನಂತರ ಮುಹಮ್ಮದ್‌ರು(ಸ) ಅವನಿಗೆ ಸೃಷ್ಟಿಕರ್ತನ ವಚನಗಳು ಮತ್ತು ಸಂದೇಶವನ್ನು ಕೇಳಿಸಿದರು. ಆ ವಚನದಲ್ಲಿ ಆದೇಶ ವಿದ್ದಂತೆ ಅವರು ಪ್ರಪಂಚದ ಮತ್ತು ಮನುಷ್ಯನ ಸೃಷ್ಟಿಕರ್ತನಿಗೆ ಸಾಷ್ಟಾಂಗವೆರಗಿದರು. ನಂತರ ತಲೆ ಎತ್ತಿ ರಬೀಆರನ್ನು ಉದ್ದೇಶಿಸಿ ಹೇಳಿದರು. "ಇದುವೇ ನನ್ನ ಉತ್ತರ ವಾಗಿದೆ. ನಿಮಗೂ ಮತ್ತು ಎಲ್ಲರಿಗೂ ಸೃಷ್ಟಿಕರ್ತನ ಸಂದೇಶವನ್ನು ಅವನ ದಾಸರಿಗೆ ತಲುಪಿಸುವುದು ನನ್ನ ಹೊಣೆಗಾರಿಕೆಯಾಗಿದೆ ಮತ್ತು ನಾನು ಇದನ್ನೇ ಮಾಡುತ್ತಿರುವೆನು."

ಮುಹಮ್ಮದ್‌ರ(ಸ) ದೃಢವಾದ ಉತ್ತರವನ್ನು ಕೇಳಿ ತಿಳಿದುಕೊಂಡ ಮೇಲೆ ಅತೀಬ್ ಬಿನ್ ರಬೀಆ ಅಲ್ಲಿಂದ ಹೊರಟು, ತನ್ನ ಮಿತ್ರರಾದ ಕುರೈಶಿ ಸರದಾರರ ಸಭೆಗೆ ಮರಳಿ ಬಂದರು. ಅದು ಹರಮ್‌ನ (ಕಅಬಾದ) ಸಮೀಪದಲ್ಲೇ, ಇನ್ನೊಂದು ಬದಿಯಲ್ಲಿ ನಡೆಯುತ್ತಿತ್ತು. ರಬೀಆ ಮರಳಿ ಬಂದುದು ಕಂಡೊಡನೆ ಸಭೆಯಲ್ಲಿದ್ದವರು ವಿಚಾರಿಸಿದರು. ಮುಹಮ್ಮದ್‌ರಿಂದ(ಸ) ಏನು ಸಮಾಚಾರ ತಂದಿರಿ? ರಬೀಆ ಹೇಳತೊಡಗಿದ...

"ದೇವನಾಣೆಗೂ ನಾನು ಯಾವ ವಚನಗಳನ್ನು ಕೇಳಿದೆನೋ ಅದಕ್ಕಿಂತ ಮೊದಲು ನಾನು ಎಂದೂ ಅಂತಹ ವಚನಗಳನ್ನು ಕೇಳಿಲ್ಲ." ದೇವನಾಣೆಗೂ ಮುಹಮ್ಮದ್ ಕವಿ ಅಲ್ಲ. ಅದು ಕವನವೂ ಅಲ್ಲ. ಮಂತ್ರವಾದವೂ ಅಲ್ಲ. ಜಾದು ಕೂಡ ಅಲ್ಲ. ಓ ಕುರೈಶಿ ಜನರೇ ನನ್ನ ಮಾತನ್ನು ನಂಬಿರಿ. ಈ ವ್ಯಕ್ತಿಯನ್ನು ಅವನಷ್ಟಕ್ಕೆ ಬಿಟ್ಟುಬಿಡಿರಿ. ಈ ವಚನವು ಉನ್ನತಗೊಳ್ಳು ವಂತಹದ್ದಾಗಿದೆ ಎಂದು ನನಗೆ ಅನಿಸುತ್ತಿದೆ. ನೀವೇ ಊಹಿಸಿ...

ಒಂದು ವೇಳೆ ಅರೇಬಿಯದ ಜನರು ಈ ವಚನಗಳ ವಿರುದ್ಧ ಪ್ರಬಲಗೊಂಡ ರೆಂದಾದರೆ ನೀವು ನಿಮ್ಮದೇ ಸಹೋದರನ ವಿರುದ್ಧ ಕೈಯೆತ್ತುವುದು ಇಲ್ಲವಾಗುತ್ತದೆ

ಮತ್ತು ಅವರೇ ಆ ವಚನಗಳನ್ನು ನೋಡಿಕೊಳ್ಳುತ್ತಾರೆ. ಇದಲ್ಲವಾದರೆ, ಒಂದು ವೇಳೆ ಅರಬ್ ಜನರ ಮೇಲೆ ಆ ವಚನಗಳು ಪ್ರಾಬಲ್ಯ ಪಡೆದುಕೊಂಡಿತೆಂದಾದರೆ ಅದರ ಆಧಿಪತ್ಯ ನಿಮ್ಮ ಆಧಿಪತ್ಯವು ಆಗಿ ಬಿಡುತ್ತದೆ ಮತ್ತು ಅದರ ಗೌರವ ನಿಮ್ಮ ಗೌರವವೂ ಆಗಿ ಬಿಡುತ್ತದೆ.

ರಬೀಅರ ಮಾತು ಆಲಿಸಿದ ಬಳಿಕ ಕುರೈಶಿ ಸರದಾರರು ಅಂದರು: ಓ ವಲೀದ್‌ನ ತಂದೆ! ಕೊನೆಗೂ ನಿಮ್ಮ ಮೇಲೆಯೂ ಅವನ ಜಾದು ಪ್ರಭಾವ ಬೀರಿತೆ?

ರಬೀಅ ತನ್ನನ್ನು ಭೇಟಿಯಾಗಲು ಬಂದಾಗ ಮುಹಮ್ಮದ್‌ರು(ಸ) ಪವಿತ್ರ ಕುರ್‌ಆನಿನ ಹಾಮೀಮ್ ಅಸ್ಸಜ್ದದ 13ನೇ ವಚನವನ್ನು ಪಠಿಸಿದ್ದರು. ಅದರ ಅನುವಾದ ಈ ರೀತಿಯಾಗಿದೆ– ಇವರೀಗ ವಿಮುಖರಾಗುತ್ತಾರೆಂದಾದರೆ ಇವರೊಡನೆ ಹೇಳಿರಿ, "ನಾನು ನಿಮ್ಮನ್ನು ಆದ್ ಮತ್ತು ಸಮೂದರ ಮೇಲೆ ಎರಗಿದ್ದಂತಹ, ಹಠಾತ್ತನೆ ಸಿಡಿದು ಬೀಳುವ ಒಂದು ಯಾತನೆಯ ಬಗ್ಗೆ ಎಚ್ಚರಿಸುತ್ತೇನೆ."

ಈ ವಚನವನ್ನು ಮುಹಮ್ಮದರು(ಸ) ಪಠಿಸುತ್ತಿದ್ದಾಗ ರಬೀಅ ಅಸಹಾಯಕನಾಗಿ ಮುಹಮ್ಮದ್‌ರ(ಸ) ಬಾಯಿಗೆ ತನ್ನ ಕೈ ಅಡ್ಡ ಹಿಡಿದು ತಮ್ಮ ಸಂಬಂಧವನ್ನು ಹೇಳತೊಡಗಿದ. "ಹಾಗೆ ಹೇಳಬೇಡ" ಮತ್ತು ತನ್ನ ಈ ವರ್ತನೆಗೆ ಕಾರಣವನ್ನು ಜನರ ಮುಂದೆ ಅವನೇ ಹೇಳಿದ್ದಾನೆ. "ನಿಮಗೂ ಗೊತ್ತು ಮುಹಮ್ಮದ್(ಸ) ಹೇಳುವ ಯಾವುದೂ ಸುಳ್ಳಾಗುವುದಿಲ್ಲ, ಆದುದರಿಂದ ನನಗೆ ಯಾತನೆಯ ಹೆದರಿಕೆಯಾಯಿತು."

ಪವಿತ್ರ ಕುರ್‌ಆನ್ ಆಲಿಸಿ ಬಂದು ಕುರೈಶಿ ಸರದಾರರ ಮುಂದೆ ರಬೀಅ ಹೇಳಿದ ಮಾತುಗಳು, ಪವಿತ್ರ ಕುರ್‌ಆನ್ ಮಾನವ ವಚನ ಅಲ್ಲ ಮತ್ತು ಪ್ರವಾದಿ ವರ್ಯರು(ಸ) ಕವಿ, ಜಾದುಗಾರ, ಮಂತ್ರವಾದಿಯೂ ಅಲ್ಲ ಎಂದಾಗಿದೆ. ಆದ್ದರಿಂದ ಅವರ ಮಾತನ್ನು ಮತ್ತು ಅವರು ತಂದಿರುವ ಸಂದೇಶವನ್ನು ಸ್ವೀಕರಿಸುವುದಿಲ್ಲವಾದರೆ ನೀವು ಅವರನ್ನು ಅವರಷ್ಟಕ್ಕೆ ಬಿಟ್ಟು ಬಿಡುವುದರಲ್ಲೇ ನಮ್ಮ ಒಳಿತಿದೆ ಎಂಬುದು ಅವರ ಮಾತಾಗಿತ್ತು.

ಪ್ರವಾದಿಯವರಿಂದ(ಸ) ಯಾತನೆಯ ವಚನಗಳನ್ನು ರಬೀಅ ಕೇಳಿದ್ದನಷ್ಟೇ. ಪ್ರವಾದಿವರ್ಯರ(ಸ) ಬಾಯಿಯಿಂದ ಹೊರ ಬರುವ ಮಾತುಗಳು ಸತ್ಯವಾಗುತ್ತದೆ ಎಂಬುದಕ್ಕಾಗಿ ಅವರ ಬಾಯಿಗೆ ಕೈ ಅಡ್ಡವಿಟ್ಟೆ ಎಂದು ತನ್ನ ಗೆಳೆಯರಿಗೆ ಹೇಳುತ್ತಾನೆ. ಇದು ಮುಹಮ್ಮದ್(ಸ) ಸತ್ಯಸಂಧ ವ್ಯಕ್ತಿಯಾಗಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ. ವೈರಿಗಳು ಹೀಗೂ ತಮ್ಮ ಮಾತು ಮತ್ತು ವರ್ತನೆಗಳ ಮೂಲಕ ಅದನ್ನು ವ್ಯಕ್ತಪಡಿಸಿ ದರು. ಈ ರೀತಿ ಸತ್ಯವು ವಿರೋಧಿಗಳ ಮೂಲಕವೇ ಸುತ್ತಮುತ್ತಲೂ ವ್ಯಾಪಿಸಿತು ಮತ್ತು ಅವರ ಸಭೆಗಳಲ್ಲೂ ವ್ಯಕ್ತವಾಯಿತು. ಪ್ರವಾದಿವರ್ಯರು(ಸ) ದೇವನ

ಸಂದೇಶದ ಜೊತೆಗೆ ಯಾವುದೇ ಹೊಂದಾಣಿಕೆ ಸಾಧ್ಯವಿಲ್ಲ ಎಂದು ರಬೀಆನ ಮುಂದೆ ಸ್ಪಷ್ಟವಾಗಿ ಪ್ರವಾದಿ(ಸ) ಸಾರಿದರು. ಮುಹಮ್ಮದ್‌ರು ಮತ್ತು ಅವರು ತಂದ ಸಂದೇಶವನ್ನು ಹೃದಯದಿಂದ ಸ್ವೀಕರಿಸಿ ನಾಲಿಗೆ ಮೂಲಕ ಉಚ್ಚರಿಸುವುದೊಂದೇ ನಿಮಗಿರುವ ದಾರಿ ಅದು ಬಿಟ್ಟು ಬೇರೆ ಯಾವುದೇ ಸಾಧ್ಯತೆಯಿಲ್ಲ. ರಾಜಿಯ ಪ್ರಶ್ನೆ ಇಲ್ಲ. ಯಾಕೆಂದರೆ ಇದು ಸೃಷ್ಟಿಕರ್ತನ ವಚನಗಳು. ಮುಹಮ್ಮದ್‌ರು(ಸ) ಸೃಷ್ಟಿಕರ್ತನ ಪ್ರವಾದಿ. ಆದುದರಿಂದ ಮುಹಮ್ಮದ್‌ರನ್ನು(ಸ) ಪ್ರವಾದಿಯೆಂದೂ ಕುರ್‌ಆನನ್ನು ಸೃಷ್ಟಿಕರ್ತನ ವಚನವೆಂದೂ ಒಪ್ಪಿಕೊಂಡು ನೀವು ಸ್ವೀಕರಿಸಬೇಕು. ಸ್ವಯಂ ನೀವು ಪ್ರವಾದಿಯ(ಸ) ಮಾರ್ಗದರ್ಶನಕ್ಕೆ ಮತ್ತು ಗ್ರಂಥದ ಮಾರ್ಗದರ್ಶನಕ್ಕೆ ತಮ್ಮನ್ನು ಅರ್ಪಿಸಿಕೊಳ್ಳಬೇಕು. ಇದುವೇ ನೈಜ ಪ್ರೀತಿಯ ಅಭಿವ್ಯಕ್ತಿ. ಈ ನಿರ್ಧಾರ ದಲ್ಲಿ ಸ್ವಯಂ ನಿಮ್ಮ ಅಸ್ತಿತ್ವದ ಒಳಿತು ಅಡಕವಾಗಿದೆ ಎಂದು ಪ್ರವಾದಿ(ಸ) ಸ್ಪಷ್ಟ ಪಡಿಸಿದರು. ಇನ್ನು ನೀವು ಇದರಲ್ಲಿ ವಿಶ್ವಾಸವಿಡದೆ ಹಟತೊಟ್ಟರೆ ಅದಕ್ಕೆ ಯಾವ ಮದ್ದೂ ಇಲ್ಲ ಎಂದು ರಬೀಆನ ಮುಂದೆ ಸ್ಪಷ್ಟಪಡಿಸಿದರು.

ಇತರ ಬಹಳಷ್ಟು ಕುರೈಶಿ ಸರದಾರರು ಇದೇ ಉದ್ದೇಶದೊಂದಿಗೆ ಪ್ರವಾದಿಯವರನ್ನು(ಸ) ಭೇಟಿಯಾದರು. ಆಮಿಷ ಒಡ್ಡಿದರು. ಜನರಿಗೆ ಸೃಷ್ಟಿಕರ್ತನ ಸಂದೇಶ ತಲುಪಿಸುವ ಕಾರ್ಯದಿಂದ ಅವರನ್ನು ಹಿಂದೆ ಸರಿಸಲು ಪ್ರಯತ್ನಿಸಿ ನೋಡಿದರು. ಆ ಸಂದರ್ಭದಲ್ಲೆಲ್ಲಾ ಪ್ರವಾದಿಯು(ಸ) ಸೃಷ್ಟಿಕರ್ತನು ತನ್ನನ್ನು ಪ್ರವಾದಿಯಾಗಿಸಿರುವ ಸತ್ಯವನ್ನು ಅವರ ಮುಂದೆ ಬಹಳ ಸ್ಪಷ್ಟವಾಗಿ ಘೋಷಿಸಿದರು ಮತ್ತು ಸೃಷ್ಟಿಕರ್ತನೇ ತನ್ನ ಕಡೆಯಿಂದ (ಗ್ರಂಥದ ಮೂಲಕ) ಸಂದೇಶವನ್ನು ತನಗೆ ಕಳುಹಿಸುತ್ತಿದ್ದಾನೆ ಎಂಬುದನ್ನು ಘೋಷಿಸಿದರು ಮತ್ತು ಸ್ಪಷ್ಟವಾಗಿ ಅವರಿಗೆ ತಿಳಿಹೇಳಿದರು. ಪ್ರವಾದಿ(ಸ) ಹೇಳಿದರು: ನನಗೆ ನಿಮ್ಮ ಮೇಲೆ ಬಶೀರ್ (ಸುವಾರ್ತೆ ನೀಡುವವನು) ಆಗಲು ಮತ್ತು ನದೀರ್ (ಎಚ್ಚರಿಸುವವನು) ಆಗಲು ಆಜ್ಞಾಪಿಸಲಾಗಿದೆ ಮತ್ತು ನಾನು ನಿಮಗೆ ಪ್ರಭುವಿನ ಸಂದೇಶವನ್ನು ತಲುಪಿಸುವುದಕ್ಕೆ ಮತ್ತು ನಿಮಗೆ ಉಪದೇಶಿಸುವಂತಾಗುವುದಕ್ಕಾಗಿದೆ ಎಂದು ಘೋಷಿಸಿದರು. ನಾನು ನಿಮ್ಮ ಬಳಿಗೆ ತಂದಿರುವುದನ್ನು ಮತ್ತು ನಿಮಗೆ ತಲುಪಿಸುತ್ತಿರುವುದನ್ನು ಒಂದು ವೇಳೆ ನೀವು ಸ್ವೀಕರಿಸಿದರೆ ನಿಮ್ಮ ಇಹಲೋಕ ಮತ್ತು ಪರಲೋಕ ಅದೃಷ್ಟದಿಂದ ಕೂಡಿರುತ್ತದೆ. ಇಲ್ಲ ಒಂದು ವೇಳೆ ತಿರಸ್ಕರಿಸುವಿರಾದರೆ ನಾನು ಅಲ್ಲಾಹನ ಮುಂದಿನ ಆಜ್ಞೆಗೆ ಕಾಯುವೆನು. ನಮ್ಮ ಮತ್ತು ನಿಮ್ಮ ನಡುವೆ ಅಲ್ಲಾಹನು ನಿರ್ಧರಿಸುವವರೆಗೂ ಸಹನೆ ವಹಿಸುವೆನು.

ಹೀಗೆ ವಿವಿಧ ಸಮಯದಲ್ಲಿ ವಿವಿಧ ರೀತಿಯಿಂದ ಪ್ರವಾದಿ ಮುಹಮ್ಮದ್‌ರು(ಸ) ತನ್ನ ಪ್ರವಾದಿತ್ವದ ವಾದ ಮಂಡಿಸಿದರು ಮತ್ತು ಘೋಷಣೆ ಮಾಡಿದರು. ಏಕೆಂದರೆ

ಹೀಗೆ ಸಂದೇಶ ನೀಡುವುದು ಜನರು ಅವರ ಸತ್ಯಸಂಧತೆ ಪರಿಶೀಲಿಸಲಿ ಮತ್ತು ವಾಸ್ತವವನ್ನು ಸ್ವೀಕರಿಸಲಿ ಎಂಬುದಕ್ಕೆ ಆಗಿತ್ತು.

ಬೆಟ್ಟದ ಕೆಳಭಾಗದಲ್ಲಿ ಕೂಡ ಪ್ರವಾದಿ(ಸ) ತನ್ನ ಅಭಿಯಾನದಲ್ಲಿ ಜನರ ಮುಂದೆ ಅಚಲವಾಗಿ ನಿಂತರು. ಆ ಮೇಲೆಯೂ ತನ್ನನ್ನು ಪ್ರವಾದಿ ಮಾಡಲಾಗಿರುವುದನ್ನು ಮತ್ತು ತನಗೆ ಗ್ರಂಥ ಅತೀರ್ಣಗೊಳ್ಳುತ್ತಿರುವುದನ್ನು ಹಾಗೂ ಜನರ ಮೇಲೆ ತನ್ನನ್ನು ಬಶೀರ್ ಮತ್ತು ನದ್ದೀರ್ ಮಾಡಿರುವುದನ್ನು ಬಹಿರಂಗವಾಗಿ ಘೋಷಿಸಿದರು.

ಹತಾಶರಾದ ಕುರೈಶಿ ಸರದಾರರು ಪ್ರವಾದಿವಯರೊಡನೆ(ಸ) ಉಪಾಯ ಹೂಡಿದರು. ಮಾತುಕತೆ ಮತ್ತು ಆಮಿಷ, ಪ್ರಲೋಭನೆಗಳಿಂದ ಕೆಲಸ ನಡೆಯದ್ದನ್ನು ನೋಡಿ ಅವರು ಹತಾಶರಾಗಿದ್ದರು. ಪ್ರವಾದಿ(ಸ) ನಿರ್ಧಾರದಲ್ಲಿ ಸ್ವಲ್ಪವೂ ಕದಲದೆ ತನ್ನ ಅಭಿಯಾನವನ್ನು ಮುಂದುವರಿಸುತ್ತಿದ್ದಾರೆ. ಅದುದರಿಂದ ಅವರು ಹೊಸ ತಂತ್ರದ ಪ್ರಯೋಗಕ್ಕೆ ಇಳಿದರು. ಪ್ರವಾದಿಯವರ(ಸ) ಮುಂದೆ ಸಮಸ್ಯೆಗಳಲ್ಲಿ ರಾಜಿ ಮಾಡಿಕೊಳ್ಳುವುದು. ಆ ಮೂಲಕ ಅವರ ಅಭಿಯಾನಕ್ಕೆ ಅಡಚಣೆ ಉಂಟು ಮಾಡುವುದು.

ಆದುದರಿಂದ ಕುರೈಶಿ ಸರದಾರು ಪ್ರವಾದಿವರ್ಯರನ್ನು(ಸ) ಸಂಧಿಸಿ ಹೇಳಿದರು– ಒಂದು ವರ್ಷ ನೀವು ನಮ್ಮ ದೇವರಾದ ಲಾತ, ಉಝ್ಝದ ಆರಾಧನೆ ಮಾಡಿರಿ ಮತ್ತು ಒಂದು ವರ್ಷ ನಾವು ನಿಮ್ಮ ಆರಾಧ್ಯನ ಆರಾಧನೆ ಮಾಡುತ್ತೇವೆ.

ಇದಕ್ಕೆ ಉತ್ತರವಾಗಿ ಅವರ ಮುಂದೆ ಪ್ರವಾದಿ(ಸ) ಸೃಷ್ಟಿಕರ್ತನ ಆದೇಶ, ಪವಿತ್ರ ಕುರ್‌ಆನಿನ ಸೂರ ಕಾಫಿರೂನ್ ಪಠಿಸಿ, ಧರ್ಮದ ವಿಷಯದಲ್ಲಿ ಯಾವುದೇ ರಾಜಿಯಿಲ್ಲ ಎಂದರು. ಯಾಕೆಂದರೆ ಅವರು ಸತ್ಯಸಂಧ ಪ್ರವಾದಿಯಾಗಿದ್ದಾರೆ. ಆದುದರಿಂದ ಸರದಾರರು ಮುಂದಿರಿಸಿದ ಅವರ ಪ್ರಸ್ತಾಪಗಳಿಗೆ ಮಣಿಯಲೂ ಇಲ್ಲ. ಒಪ್ಪಲೂ ಇಲ್ಲ. ತನಗೆ ಸೃಷ್ಟಿಕರ್ತನು ಒಪ್ಪಿಸಿದ ಅಭಿಯಾನದ ಹೊಣೆಗಾರಿಯಲ್ಲಿ ರಾಜಿ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ಸಂದೇಶ ತಲುಪಿಸುವ ವಿಷಯದಲ್ಲಾಗಿರಲಿ, ಭೌತಿಕವಾದ ವಿಷಯಕ್ಕೆ ಸಂಬಂಧಿಸಿದ್ದೇ ಆಗಿರಲಿ ಯಾವುದೇ ರಾಜಿಗೆ ಪ್ರವಾದಿ(ಸ) ಸಿದ್ಧರಿರಲಿಲ್ಲ.

ಕುರೈಶಿ ಸರದಾರರು ಆರಂಭದಲ್ಲಿ ಪ್ರವಾದಿಯವರ(ಸ) ಆಶ್ರಯದಾತರಾಗಿದ್ದ ಅವರ ಚಿಕ್ಕಪ್ಪ ಅಬೂತಾಲಿಬ್‌ರ ಮೂಲಕ ಒತ್ತಡ ಹಾಕಲು ಯತ್ನಿಸಿದರು. ತಮ್ಮ ಸಹೋದರ ಪುತ್ರನನ್ನು ಅವನು ಮಾಡುತ್ತಿರುವ ಈ ಕೆಲಸದಿಂದ ನೀವು ತಡೆಯಬೇಕೆಂದು ವಿನಂತಿಸಿಕೊಂಡರು. ಕುರೈಶಿಗಳ ಒತ್ತಾಯ ಪ್ರಕಾರ ಅಬೂತಾಲಿಬರು ಪ್ರವಾದಿವರ್ಯರನ್ನು(ಸ) ಕರೆದು ಹೀಗೆ ಹೇಳಿದರು– ಮುಹಮ್ಮದ್! ನೀನು ನನಗೆ

ಮತ್ತು ನಿನಗೆ ಜೀವಿಸಲು ಕೆಲವಷ್ಟು ಸಾಧ್ಯತೆ ಉಳಿಯಲಿ ಮತ್ತು ನನ್ನ ಮೇಲೆ ನನಗೂ ನಿನಗೂ ಹೊರಲಾಗದಷ್ಟು ಹೊರೆಯನ್ನು ಹಾಕಬೇಡ... "ಅಂದರೆ ಜನರಿಗೆ ಅರಿವಿಲ್ಲದ ಮಾತು ಹೇಳುವುದನ್ನು ನೀನು ನಿಲ್ಲಿಸು" ಎಂದರು.

ಚಿಕ್ಕಪ್ಪನಿಗೆ ಪ್ರವಾದಿ(ಸ) ಹೀಗೆ ಹೇಳಿದರು. "ಚಿಕ್ಕಪ್ಪಾ, ಒಂದು ವೇಳೆ ಸೂರ್ಯನನ್ನು ನನ್ನ ಬಲಗೈಯಲ್ಲಿ ತಂದಿಟ್ಟರೂ ಮತ್ತು ಚಂದ್ರನನ್ನು ನನ್ನ ಎಡಗೈಯಲ್ಲಿ ತಂದಿಟ್ಟರೂ ನಾನು ಈ ಕಾರ್ಯವನ್ನು (ಸಂದೇಶ ನೀಡುವ ಕೆಲಸ) ನಿಲ್ಲಿಸಲಾರೆನು. ಅಲ್ಲಾಹನು ಇದರಲ್ಲಿ ಒಂದೋ ನನಗೆ ಯಶಸ್ಸು ಕೊಡುವನು ಅಥವಾ ಇದೇ ದಾರಿಯಲ್ಲಿ ನಶಿಸಿ ಹೋಗುವೆನು ಅಲ್ಲಿಯ ವರೆಗೂ ಈ ಕೆಲಸ ಮುಂದುವರಿಸುವೆನು. ಪ್ರವಾದಿ ಮುಹಮ್ಮದ್‌ರು(ಸ) ಸತ್ಯಸಂಧರು ಎನ್ನುವುದಕ್ಕೆ ಇದು ಕೂಡಾ ಸಾಕ್ಷ್ಯವಾಗಿದೆ. ಸತ್ಯಸಂಧ ಪ್ರವಾದಿ ಕಠಿಣ ಪರಿಸ್ಥಿತಿಯಲ್ಲೂ ಅವರ ಮುಂದೆ ಬರುವ ಸಂಕಷ್ಟಗಳಿಗೂ ಹೆದರಿಕೊಳ್ಳುವರಲ್ಲ ಎಂಬುದಕ್ಕೆ ತನ್ನ ಚಿಕ್ಕಪ್ಪನ ಪ್ರಸ್ತಾಪಕ್ಕೆ ಉತ್ತರವಾಗಿ ಪ್ರವಾದಿ(ಸ) ಆಡಿದ ಮಾತು ಮತ್ತು ತನ್ನ ಅಭಿಯಾನವನ್ನು ಮುಂದುವರಿಸುವ ಅವರ ನಿರ್ಧಾರ. ಇವೆಲ್ಲ ಪ್ರವಾದಿಯವರ(ಸ) ದೃಢ ನಿಲುವನ್ನು ಜನರ ಮುಂದೆ ಅನಾವರಣಗೊಳಿಸುತ್ತದೆ.

ಸತ್ಯಸಂಧ ಪ್ರವಾದಿಯು ಶತ್ರುಗಳಿಗೂ ಕೂಡ ಅವರ ಒಳಿತನ್ನೇ ಬಯಸುತ್ತಾರೆ ಮತ್ತು ಯುಕ್ತಿಯುತವಾಗಿ ಸೃಷ್ಟಿಕರ್ತನ ಸಂದೇಶವನ್ನೂ ಅವರಿಗೆ ತಲುಪಿಸಲು ಪ್ರಯತ್ನಿಸುತ್ತಾರೆ ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ.

ಅಬೂತಾಲಿಬರ ಬಳಿಗೆ ಕುರೈಶಿ ಸರದಾರರ ಒಂದು ನಿಯೋಗವು ಬಂದು ರಾಜಿ ಮಾತುಕತೆ ಬಯಸಿ ಬಂದಿತ್ತು. ಅವನ (ಮುಹಮ್ಮದ್‌ರ) ಆರಾಧ್ಯನ ವಿಷಯದಲ್ಲಿ ನಾವು ಘರ್ಷಣೆಗಿಳಿಯಲಾರೆವು ಮತ್ತು ಮುಹಮ್ಮದ್(ಸ) ಕೂಡಾ ನಮ್ಮ ಆರಾಧ್ಯರೊಂದಿಗೆ ಘರ್ಷಣೆಗಿಳಿಯಬಾರದು ಎಂದಿತು. ಅದಕ್ಕೆ ಉತ್ತರವಾಗಿ ಪ್ರವಾದಿವರ್ಯರು(ಸ) ಹೇಳಿದರು, "ಒಂದು ವೇಳೆ ಅವರಿಗೆ ಮನವರಿಕೆಯಾಗುವುದಾದರೆ ನಾನು ಅವರಿಗೆ ಕರೆ ನೀಡುತ್ತಿರುವ ವಚನವು ಇಡೀ ಅರೇಬಿಯಾದ ಅಧಿಕಾರವನ್ನೇ ಅವರಿಗೆ ದೊರಕಿಸಿಕೊಡುವುದು ಮತ್ತು ಅರಬೇತರರು ಅವರ ಅಧೀನರಾಗುವರು."

ಕೂಡಲೇ ಅಬೂಜಹಲ್ ಹೇಳಿದನು, "ಇದು ದೊಡ್ಡ ಲಾಭದ ವ್ಯವಹಾರವಾಗಿದೆ. ನಿನ್ನ ಪಿತನಾಣೆ! ಒಂದಲ್ಲ ನಾವು ಹತ್ತು ಅಂತಹ ವಚನಗಳನ್ನು ಹೇಳಲು ಸಿದ್ಧರಿದ್ದೇವೆ."

ಆಗ ಪ್ರವಾದಿ(ಸ) ಹೇಳಿದರು– ಹೇಳಿರಿ, "ಲಾ ಇಲಾಹ ಇಲ್ಲಲ್ಲಾಹ್" (ಹೇಳಿರಿ, ಅಲ್ಲಾಹನಲ್ಲದೆ ಅನ್ಯ ಆರಾಧ್ಯನಿಲ್ಲ).

ಪ್ರವಾದಿಯವರ(ಸ) ಮಾತು ಕೇಳಿ ಅವರೆಲ್ಲರೂ ಮೂಕ ವಿಸ್ಮಿತರಾದರು. ಈ ಸಾಕ್ಷ್ಯವಚನ ಕೇಳುವುದರೊಂದಿಗೆ ಅವರು ದ್ವೇಷಕಾರುತ್ತಾ ತಮ್ಮವರೊಡನೆ ಹೇಳತೊಡಗಿದರು.

ಬನ್ನಿ.. ಇನ್ನು ಮೇಲೆ ನೀವು ನಿಮ್ಮ ಆರಾಧ್ಯನ ಆರಾಧನೆಯಲ್ಲಿ ಇನ್ನಷ್ಟು ಅಚಲಗೊಳ್ಳಿರಿ.

ಪವಿತ್ರ ಕುರ್‌ಆನ್ ಈ ಘಟನೆಯನ್ನು ಹೀಗೆ ವಿವರಿಸುತ್ತಿದೆ, "ಜನಾಂಗದ ಸರದಾರರು ಹೀಗೆ ಹೇಳುತ್ತಾ ಹೊರ ನಡೆದು ಬಿಟ್ಟರು: ಹೊರಡಿರಿ ಮತ್ತು ನಿಮ್ಮ ಆರಾಧ್ಯರ ಆರಾಧನೆಯಲ್ಲೇ ಸ್ಥಿರವಾಗಿ ನಿಲ್ಲಿರಿ. ಈ ಮಾತನ್ನು ಯಾವುದೋ ಬೇರೆಯೇ ಉದ್ದೇಶದಿಂದ ಹೇಳಲಾಗುತ್ತಿದೆ." (ಸ್ವಾದ್: 6)

ನಿಜವಾದ ಸಂದೇಶವಾಹಕನ ಮನಸ್ಸಿನಲ್ಲಿ ಹೊಣೆಗಾರಿಕೆ ನಿರ್ವಹಣೆಯೇ ಆವರಿಸಿಕೊಂಡಿರುತ್ತದೆ. ಅವನು ಎಂತಹ ಪರಿಸ್ಥಿತಿಯಲ್ಲಿಯೂ ತನ್ನ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುತ್ತಾನೆ. ಪ್ರತಿಯೊಂದು ಸಂದರ್ಭವನ್ನು ಸಂದೇಶ ತಲುಪಿಸಲು ಸಂದೇಶವಾಹಕ ಉಪಯೋಗಿಸುತ್ತಾನೆ. ಅದರಿಂದ ಪ್ರಯೋಜನ ಪಡೆಯುತ್ತಾನೆ. ಎಂತಹ ವಿಷಮ ಪರಿಸ್ಥಿತಿಯಿದ್ದರೂ ಗಾಬರಿಗೊಳ್ಳುವುದೂ ಇಲ್ಲ. ಅರಚಾಟ ನಡೆಸುವುದೂ ಇಲ್ಲ. ಬದಲಾಗಿ ತನ್ನ ಹೊಣೆಗಾರಿಕೆ ನಿರ್ವಹಣೆಗೆ ಸಹನೆ, ಯುಕ್ತಿ ಮತ್ತು ಮೃದುವಾಗಿ ಸಂದೇಶ ತಲುಪಿಸುತ್ತಾನೆ. ಅಂದರೆ ಎಂತಹ ಪರಿಸ್ಥಿತಿಯಲ್ಲೂ ತನಗಾಗಿ ಅವಕಾಶ ಸೃಷ್ಟಿಸಿಕೊಳ್ಳುವಷ್ಟು ಅವನ ದೃಷ್ಟಿಗಳು ತೀಕ್ಷ್ಣತೆಯದು. ಕುರೈಶಿ ಪ್ರತಿನಿಧಿಗಳ ಮುಂದೆ ಪ್ರವಾದಿವರ್ಯರು(ಸ) ಸತ್ಯವನ್ನೇ ಹೇಳಿದ್ದರು. ಲಾಇಲಾಹ ಇಲ್ಲಲ್ಲಾಹ್ ಮತ್ತು ಅದರ ಬೇಡಿಕೆಯಂತೆ ಕರ್ಮವೆಸಗುವುದು ಜಗತ್ತನ್ನೇ ಪಾದ ತಳಕ್ಕೆ ತಂದಿಡುತ್ತದೆ.

ಕುರೈಶಿ ಸರದಾರರ ನಡುವೆ ಎದ್ದ ಸಾಕ್ಷ್ಯವಚನದ ಕುರಿತ ಕೋಲಾಹಲವು ಪ್ರವಾದಿ ಮುಹಮ್ಮದ್‌ರು(ಸ) ತಂದಿರುವಂತಹ ಸಂದೇಶದ ಸತ್ಯಾವಸ್ಥೆ ಮತ್ತು ವಸ್ತುಸ್ಥಿತಿಯನ್ನು ಬಹಿರಂಗಗೊಳಿಸುತ್ತಿದೆ. ಇದೇ ವೇಳೆ ಕಪಟಿಗಳು ಎಂದು ಕುರೈಶಿ ಸರದಾರರನ್ನು ದೃಢೀಕರಿಸುತ್ತಿದೆ.

ಸಾರ್ವಜನಿಕವಾಗಿ ಬಹಿರಂಗ ಪ್ರವಾದಿತ್ವದ ಮತ್ತು ಸಂದೇಶ ಪ್ರಚಾರದ ನಂತರ ಬಂದ ಮೊದಲ ಹಜ್ಜ್ ಸಂದರ್ಭ ಅದು. ಹಜ್‌ಗೆ ಯಾತ್ರಾರ್ಥಿಗಳು ಬರುವ ಸಮಯ ಸಮೀಪಿಸಿದಂತೆ ಕುರೈಶಿ ಸರದಾರರಲ್ಲಿ ಚಿಂತೆಯು ಆವರಿಸಿಕೊಂಡಿತು.

ಅಂದರೆ ಪ್ರವಾದಿ ಮುಹಮ್ಮದ್‌ರು(ಸ) ಪ್ರತಿಯೊಂದು ಗೋತ್ರಗಳ ಶಿಬಿರಗಳಿಗೆ ಹೋದರೇ, ತನ್ನ ಜಾದುಗಾರಿಕೆಯ ವಚನಗಳನ್ನು ಅವರಲ್ಲಿ ಹೇಳಿದರೇ, ಜನರು

ಅದಕ್ಕೆ ಆಕರ್ಷಿತರಾದರೆ, ಪ್ರಭಾವಿತರಾದರೆ. ಆ ರೀತಿ ಮುಹಮ್ಮದ್‌ರ(ಸ) ಸಂದೇಶ ಇಡೀ ಅರೇಬಿಯಕ್ಕೆ ತಲುಪುವುದು. ಆದ್ದರಿಂದ ಇದನ್ನು ತಡೆಯಬೇಕೆಂದು ಕುರೈಶಿಗಳು ಯೋಚಿಸಿದರು. ಹೀಗೆ ಪ್ರವಾದಿ ಮುಹಮ್ಮದ್‌ರು(ಸ) ಹೋಗುವ ಮೊದಲೇ ಹಜ್ಜ್‌ಗೆ ಬಂದವರ ಶಿಬಿರಕ್ಕೆ ಹೋಗುವುದು ಮತ್ತು ಜನರಿಗೆ ತಮ್ಮ ಸುಳ್ಳು ಮತ್ತು ಧೂರ್ತ ಕುತರ್ಕಗಳನ್ನು ಹೇಳಿ ಅವರಲ್ಲಿ ಹೆದರಿಕೆ ಹುಟ್ಟಿಸುವುದು. ಈ ರೀತಿ ಹಜ್ಜ್‌ಗೆ ಬಂದ ಯತ್ರಾರ್ಥಿಗಳು ಪ್ರವಾದಿ ಮುಹಮ್ಮದ್‌ರ(ಸ) ಮಾತಿಗೆ ಕಿವಿಕೊಡದಿರುವಂತೆ ಮಾಡುವುದೆಂದು ಕುರೈಶಿಗಳು ನಿರ್ಧರಿಸಿದರು.

ಆಗ ಅಲ್ಲಿದ್ದ ವಲೀದ್ ಬಿನ್ ಮುಗೀರರು ಸಭೆಯ ಗಮನ ತನ್ನತ್ತ ಸೆಳೆಯುತ್ತ ಹೇಳಿದನು. ಒಂದು ವೇಳೆ ನೀವು ಅವರ ಬಳಿಗೆ ಹೋಗಿ ಮುಹಮ್ಮದ್‌ರ(ಸ) ಕುರಿತು ಮಾತನಾಡುವುದು ಬೇರೆ ಬೇರೆ ರೀತಿಯಾದರೆ ಜನರಲ್ಲಿ ನಮಗೆ ಇರುವ ಮನ್ನಣೆ ಹೊರಟು ಹೋಗಬಹುದು. ಆದುದರಿಂದ ಜನರ ಮುಂದೆ ಎಲ್ಲರೂ ಒಂದೇ ರೀತಿ ಮಾತಾಡಬೇಕಾಗಿದೆ. ಏನು ಹೇಳಬೇಕೆಂಬುದನ್ನು ನಿರ್ಧರಿಸಬೇಕಾಗಿದೆ.

ವಲೀದರು ಹೀಗೆಂದಾಗ ಕೆಲವರು ನಾವು ಮುಹಮ್ಮದ್‌ರನ್ನು(ಸ) ಕಾಹಿನ್ (ಮಂತ್ರವಾದಿ) ಎಂದು ಹೇಳೋಣ ಎಂದರು. ಅದಕ್ಕೆ ವಲೀದ್ ದೇವನಾಣೆಗೂ ಅವನು ಮಾಂತ್ರಿಕನಲ್ಲ. ನಾವು ಮಾಂತ್ರಿಕರನ್ನು ನೋಡಿದ್ದೇವೆ. ಮಾಂತ್ರಿಕರು ಪಠಿಸುವುದಕ್ಕೂ ಕುರ್‌ಆನಿನ ವಚನಕ್ಕೂ ದೂರ ದೂರದ ಸಂಬಂಧವೂ ಇಲ್ಲ ಎಂದ.

ಇನ್ನು ಕೆಲವರು, ಮುಹಮ್ಮದ್‌ರನ್ನು(ಸ) ಹುಚ್ಚ ಎಂದು ಹೇಳೋಣ ಎಂದಾಗ, ವಲೀದ್ ಅವನು ಹುಚ್ಚನಲ್ಲ. ನಾವು ಮತಿಭ್ರಾಂತರನ್ನು ಮತ್ತು ಹುಚ್ಚರನ್ನೂ ನೋಡಿದ್ದೇವೆ. ಅವರು ಮಾತುಗಳು ಅಸಂಬದ್ಧವಾಗಿರುತ್ತವೆ. ಅವರು ಹುಚ್ಚುಚ್ಚಾಗಿ ವರ್ತಿಸುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಹುಚ್ಚನೆಂದರೆ ಯಾರೂ ನಂಬಲಾರರು ಮತ್ತು ಹುಚ್ಚುತನ ಅನ್ನಿಸುವಂತಹ ಯಾವ ಮಾತುಗಳನ್ನೂ ಮುಹಮ್ಮದ್ ಆಡುವುದಿಲ್ಲ. ಅಂತಹ ಸತ್ಯವಾದ ಮತ್ತು ಯುಕ್ತಿಯುತ ಪದಗಳನ್ನು ಹುಚ್ಚರು ಆಡುವುದಿಲ್ಲ.

ಆಗ ಸಭೆಯಲ್ಲಿದ್ದವರು ಹೇಳಿದರು. ಹಾಗಿದ್ದರೆ ನಾವು ಕವಿ ಎಂದು ಹೇಳಿದರೇ? ಅದಕ್ಕೂ ವಲೀದ್ 'ಅವನು ಕವಿಯಲ್ಲ.' ಕವಿಗಳ ಬಗ್ಗೆ ನಮಗೆ ತಿಳಿದಿದೆ. ಅವನ ಮಾತುಗಳು ಕವನಗಳಿಗೆ ಯಾವುದೇ ರೀತಿ ಅನ್ವಯಿಸುವುದಿಲ್ಲ.

ಹಾಗಿದ್ದರೆ ಜಾದುಗಾರ ಎಂದು ಹೇಳೋಣ ಎಂದು ಆ ಸಭೆಯಲ್ಲಿದ್ದ ಕೆಲವು ಜನರು ಅಭಿಪ್ರಾಯ ಪ್ರಕಟಿಸಿದರು. ಅದನ್ನೂ ವಲೀದ್ ಒಪ್ಪಲಿಲ್ಲ. ಅವನು ಜಾದುಗಾರನಲ್ಲ. ಜಾದೂಗಾರರನ್ನು ನಾವು ನೋಡಿದವರು. ಯಾವ ವಿಧಾನದಿಂದ

ಜಾದುಗಾರಿಕೆ ಮಾಡುತ್ತಾರೆ ಎಂದು ನಮಗೆ ಗೊತ್ತಿದೆ. ಇದ್ಯಾವುದೂ ಕೂಡ ಮುಹಮ್ಮದ್‌ರಿಗೆ(ಸ) ಹೋಲುವುದಿಲ್ಲ ಎಂದ.

ಆನಂತರ ತಾನೇ ವಲೀದ್ ಹೀಗೆಂದ– ನೀವು ಹೇಳುವ ಎಲ್ಲ ಮಾತುಗಳನ್ನು ಕೇಳಿಸಿಕೊಳ್ಳುವ ಜನರು ಇದನ್ನು ಬರೇ ಆರೋಪವಾಗಿದೆ ಎಂದು ತಿಳಿದಾರು. ದೇವನಾಣೆಗೂ ಅವನ ಮಾತುಗಳು ತುಂಬ ಆಸ್ವಾದಕರವಾದುದು. ಬಹಳ ಆಳದಲ್ಲಿ ಅದರ ಬೇರಿದೆ ಮತ್ತು ಸ್ವಾದಿಷ್ಟವಾಗಿದೆ.

ಆಗ ಅಬೂಜಹಲ್ ಹೇಳಿದನು– ನೀವು ಮುಹಮ್ಮದ್‌ರ(ಸ) ಕುರಿತು ಏನಾದರೂ ಹೇಳದಿರುವ ವರೆಗೆ ನಿಮ್ಮ ಜನರು ರಾಜಿಯಾಗುವುದಿಲ್ಲ.

ಅದಕ್ಕೆ ವಲೀದ್ ಹೀಗೆಂದ: "ಓಹೋ, ಹೌದಾ. ಹಾಗಿದ್ದರೆ ನಾನು ಯೋಚಿಸುವೆನು."

ಹೀಗೆ ಅವನು ಯೋಚಿಸುತ್ತಾ ಯೋಚಿಸುತ್ತಾ. ಬಹಳ ಹೊತ್ತು ಯೋಚಿಸಿದ ಬಳಿಕ ವಲೀದ್, ಬಹುತೇಕ ನೀವು ಈ ವ್ಯಕ್ತಿ ಜಾದುಗಾರ ಎಂದು ಅರಬರೊಡನೆ ಹೇಳಬಹುದು ಎಂದು ತೀರ್ಪು ನೀಡುವನಂತೆ ವಲೀದ್ ಹೇಳಿದ.

ಅವನು ಹೇಳುವ ಸಂದೇಶಗಳು ತಮ್ಮ ತಂದೆ, ತಾಯಿ, ಸಹೋದರರು, ಮಕ್ಕಳು ಮತ್ತು ಸಂಪೂರ್ಣವಾಗಿ ಇಡೀ ಕುಟುಬಂದಿಂದಲೇ ನಿಮ್ಮನ್ನು ದೂರ ಮಾಡುತ್ತದೆ ಎಂದು ಹಜ್ಜ್‌ಗೆ ಬಂದವರಿಗೆ ಹೇಳಿರಿ. ಕುರೈಶರ ಸಭೆಯಲ್ಲಿ ವಲೀದನ ಈ ಮಾತುಗಳಿಗೆ ಅಂಗೀಕಾರದ ಮುದ್ರೆ ಬಿತ್ತು. ಎಲ್ಲರೂ ಒಪ್ಪಿಕೊಂಡರು. ನಂತರ ಇದಕ್ಕಾಗಿ ಯೋಜನೆ ರೂಪಿಸಿದರು. ತಮ್ಮ ಯೋಜನೆಯಂತೆ ಹಜ್ಜ್ ಸಂದರ್ಭದಲ್ಲಿ ಕುರೈಶರು ಇದಕ್ಕಾಗಿಯೇ ತಂಡವನ್ನು ರಚಿಸಿದರು ತಮ್ಮ ಕುತಂತ್ರಗಳನ್ನು ಕಾರ್ಯ ರೂಪಕ್ಕೆ ತರುವ ಸಲುವಾಗಿ ಹಜ್ಜ್ ನಿರ್ವಹಿಸಲು ಮಕ್ಕಾಗೆ ಬಂದವರ ನಡುವೆ ತಂಡ ಹರಡಿಕೊಂಡಿತು.

ಪ್ರವಾದಿಯವರ(ಸ) ಮಾತುಗಳು ದೈವಿಕ ವಚನಗಳಾಗಿವೆ ಎಂಬುದನ್ನು ಆಗಲೇ ವಲೀದ್ ಬಿನ್ ಮುಗೀರ ಅರಿತಿದ್ದ ಎಂಬುದು ಅವನ ಮಾತುಗಳು ಮತ್ತು ಕುರೈಶರ ಸಭೆಯಲ್ಲಿ ಅವನು ಆಡಿದ ಸಂಭಾಷಣೆಗಳಿಂದ ನಮಗೆ ಸ್ಪಷ್ಟಗೊಳ್ಳುತ್ತಿದೆ. ಆದರೆ ಕುರೈಶಿ ಸರದಾರರ ನಡುವೆ ತನ್ನ ಖ್ಯಾತಿಯನ್ನು ರಕ್ಷಿಸುವ ಸಲುವಾಗಿ ಆತ ಸುಳ್ಳಾಡಿದನು ಮತ್ತು ಪ್ರವಾದಿಯ(ಸ) ವಚನಗಳನ್ನು ಮನುಷ್ಯನ ಮಾತುಗಳೆಂದನು. ಯಾವುದೇ ಸ್ವಾರ್ಥ, ಸ್ವಹಿತಾಸಕ್ತ ವ್ಯಕ್ತಿಗಳು ಹೀಗಾಡಲು ಸಾಧ್ಯ. ಅವರು ತಮ್ಮ ಆತ್ಮಸಾಕ್ಷಿಯ ವಿರುದ್ಧವಾಗಿ ಹೀಗೆ ಸುಳ್ಳಾಡುತ್ತಾರೆ. ಕುರೈಶಿಗಳ ಸಭೆಯಲ್ಲಿ ಮುಗೀರ ಮಾಡಿದ್ದೂ ಅದನ್ನೇ ಆಗಿತ್ತು. ಆದರೂ ಪ್ರವಾದಿ(ಸ) ಜಾದೂಗಾರ ಎಂಬುದನ್ನು

ವಲೀದ್ ಬಿನ್ ಮುಗೀರ ಮತ್ತು ಕುರೈಶಿಗಳ ನಡುವೆ ನಡೆದ ಸಮಾಲೋಚನೆಯು ಸ್ಪಷ್ಟವಾಗಿ ನಿರಾಕರಿಸುತ್ತಿದೆ. ಪ್ರವಾದಿ ಮುಹಮ್ಮದ್‌ರನ್ನು(ಸ) ಜಾದುಗಾರ ಎನ್ನಿರಿ ಎಂದು ಸುಳ್ಳನ್ನು ಹೇಳಿಕೊಡುತ್ತಾನೆ. ಹೀಗೆ ವಲೀದ್ ಬಿನ್ ಮುಗೀರ ಜಾದೂಗಾರ ಎಂಬ ಪದವನ್ನು ಕುರೈಶಿಗಳು ಮುಹಮ್ಮದ್‌ರ(ಸ) ವಿರುದ್ಧ ತಮ್ಮ ಅಪಪ್ರಚಾರಕ್ಕೆ ಉಪಯೋಗಿಸುವಂತೆ ಸಲಹೆ ಕೊಟ್ಟನು.

ಈ ಇತಿಹಾಸದ ಘಟನೆಯಿಂದ ಅಂದಿನ ತಮ್ಮ ಸಭೆಗಳು ಮತ್ತು ಚರ್ಚೆಯೇ ಜನರು ಪ್ರವಾದಿಯ ಕುರಿತು ನಿಜವಾದ ಮಾತುಗಳನ್ನು ಹೇಳುತ್ತಿದ್ದರು ಎಂಬುದು ಸ್ಪಷ್ಟವಾಗುತ್ತಿದೆ. ಆದುದರಿಂದ ಅಂದಿನ ಪರಿಸ್ಥಿತಿಯ ಮತ್ತು ವ್ಯಕ್ತಿಯ ಕುರಿತು (ಪ್ರವಾದಿಯ ಕುರಿತು) ಮತ್ತು ಅವರ ಮಾತುಗಳ ಕುರಿತು ಸರಿಯಾದ ಅವಲೋಕನ ಅಗತ್ಯವೆನಿಸಿಕೊಳ್ಳುತ್ತದೆ. ಹೀಗೆ ಮಾಡುವುದರಿಂದ ತಮ್ಮ ಉದ್ದೇಶ ಮತ್ತು ಗುರಿಯನ್ನು ತಲುಪಬಹುದು ಮತ್ತು ಸರಿಯಾದ ಅವಲೋಕನದಿಂದ ಮಾತ್ರ ಸರಿಯಾದ ಪರಿಣಾಮ ಮತ್ತು ಪರಿಹಾರ ಕಂಡುಕೊಳ್ಳಬಹುದು.

ಕುರೈಶಿ ಸರದಾರರು ನಡೆಸಿದ ಈ ಸಭೆ ಕೂಡ ಪ್ರವಾದಿ ಸತ್ಯ ಎಂಬುದನ್ನು ಮತ್ತು ಅವರೇ ಸುಳ್ಳುಗಾರರು ಎಂದು ಸ್ಪಷ್ಟವಾದ ವಿಧಾನದಲ್ಲಿ ಬಹಿರಂಗಗೊಳಿಸುತ್ತಿದೆ. ಈ ಸಭೆಯಲ್ಲಿ ಪ್ರವಾದಿಯನ್ನು ನೈಜ ಪ್ರವಾದಿ ಎಂದು ಹೇಳಲಾಯಿತು ಮತ್ತು ಸಭೆ ಕೂಡ ಅದನ್ನು ಸತ್ಯವೆಂದೇ ಅಂಗೀಕರಿಸಿತು. ಈ ಸಭೆಯಲ್ಲಿ ಆ ನಗರದ ನಾಯಕರಿದ್ದರು. ಉನ್ನತ ವ್ಯಕ್ತಿಗಳು ಅಲ್ಲಿ ಸೇರಿದ್ದರು. ಅದು ಜನಸಾಮಾನ್ಯರ ಸಭೆಯಾಗಿರಲಿಲ್ಲ. ಪ್ರವಾದಿ ಮುಹಮ್ಮದ್‌ರು(ಸ) ಮತ್ತು ಅವರು ತಂದಿರುವ ಸಂದೇಶದ ಕುರಿತು ಸಭೆಯ ಹೊರಗಡೆ ಸುಳ್ಳು ಹೇಳಲು ಅವರು ಅಲ್ಲಿ ನಿರ್ಧರಿಸಿದರು. ಅದಕ್ಕಾಗಿ ವಿವಿಧ ವಿಷಯಗಳನ್ನೆತ್ತಿ ಸುಳ್ಳು ಪ್ರಚಾರ ಮಾಡಿದರು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ ಮತ್ತು ಇತಿಹಾಸದಲ್ಲಿ ಮೊಹರು ಒತ್ತಲ್ಪಟ್ಟಿದೆ.

ಅವರು ತಮ್ಮ ಸುಳ್ಳುಗಳೊಂದಿಗೆ ಪ್ರವಾದಿ ಮುಹಮ್ಮದ್‌ರ(ಸ) ಸತ್ಯಸಂಧತೆ, ಪ್ರಾಮಾಣಿಕತೆಯನ್ನು ಮತ್ತು ಪವಿತ್ರ ಕುರ್‌ಆನಿನ ಸತ್ಯವನ್ನು ಎದುರಿಸಲು ಪ್ರಯತ್ನಿಸಿದರು. ಆದರೆ ಪ್ರವಾದಿ(ಸ) ಮಕ್ಕಾ ನಗರದ ಹೊರಗಿನ ವ್ಯಕ್ತಿಯಾಗಿರಲಿಲ್ಲ. ಆದುದರಿಂದ ಅವರು ನಿಜವಾದ ಪ್ರವಾದಿ ಎಂಬುದರ ಬಗ್ಗೆ ಕುರೈಶಿಗಳ ನಡುವೆ ಯಾವುದೇ ಸಂದೇಹವಿರಲಿಲ್ಲ. ಇದಕ್ಕಾಗಿ ಅವರಿಗೆ ಅನ್ವೇಷಣೆ ನಡೆಸುವ ಅಗತ್ಯ ಅವರಿಗಿರಲಿಲ್ಲ. ಪ್ರವಾದಿಯ(ಸ) ಸತ್ಯಸಂಧತೆ ಮತ್ತು ವಿಶ್ವಸ್ಥತೆಗಳು ಅಷ್ಟು ವಿಶ್ವಾಸಾರ್ಹತೆಯನ್ನು ಅವರ ನಡುವೆ ಪಡೆದುಕೊಂಡುದು ಆಗಿತ್ತು. ಕುರೈಶಿ ಸರದಾರರು ಈ ಸತ್ಯವನ್ನು ಸುಳ್ಳು ಆಗಿಸಲು ಮತ್ತು ಸತ್ಯ ನಿರಾಕರಿಸಲು ಹಲವು ವಿಧದ ಕಸರತ್ತುಗಳನ್ನು

ನಡೆಸಿದರು ಮತ್ತು ಹಲವು ನೆಪಗಳನ್ನು ಸತ್ಯದ ಮೇಲೆ ಪರದೆ ಹಾಕುವ ಸಲುವಾಗಿ ಅವರು ಜನರ ಮುಂದಿಟ್ಟರು. ಆದರೆ ಅವರ ಭಾವನಾ ವಿಲಾಸ ಮತ್ತು ತಿಳುವಳಿಕೆ ಯಾವುದೇ ತೂಕವಿದ್ದುದಲ್ಲ. ತಮ್ಮ ಬೆಂಬಲಿಗರಾಗುವಂತೆ ಜನರ ಮುಂದೆ ವಿವರಿಸುವ ಸಲುವಾಗಿ ಸರಿಯಾದ ವಿಚಾರಗಳೇ ಅವರಲ್ಲಿ ಇರಲಿಲ್ಲ.

ಆದುದರಿಂದ ಪ್ರವಾದಿ ಮುಹಮ್ಮದ್‌ರನ್ನು(ಸ) ಪ್ರವಾದಿಯೇ ಅಲ್ಲ ಎಂದು ಜನರಿಗೆ ತಿಳಿಹೇಳಲು ಅವರಲ್ಲಿ ಸರಿಯಾದ ಕಾರಣಗಳಾಗಲಿ, ಪುರಾವೆಗಳಾಗಲಿ ಇರಲಿಲ್ಲ. ಆದ್ದರಿಂದ ಅವರು ಜನರನ್ನು ದಾರಿತಪ್ಪಿಸಲು ಸುಳ್ಳಿನ ಪರದೆ ಹಾಸಿದರು. ಸುಳ್ಳಾರೋಪ ಹೊರಿಸಿದರು. ಪ್ರವಾದಿಯವರು(ಸ) ಹೇಳುವುದನ್ನು ಯಾರೂ ಆಲಿಸಬಾರದು, ಅವರಿಗೆ ಯಾರೂ ಮಹತ್ವ ನೀಡಬಾರದು, ಅವರ ಹತ್ತಿರ ಯಾರೂ ಹೋಗಬಾರದೆಂದು ಪ್ರವಾದಿಯ(ಸ) ವ್ಯಕ್ತಿತ್ವದ ಮೇಲೆ ದೋಷಾರೋಪ ಅವರು ಹೊರಿಸಬೇಕಾಯಿತು.

ಅವರ ಸಭೆಯಿಂದ ಮತ್ತು ಅವರ ಈ ಸಂಚಿನಿಂದ ಪ್ರವಾದಿ ಮುಹಮ್ಮದ್‌ರು(ಸ) ಮತ್ತು ಪವಿತ್ರ ಕುರ್‌ಆನಿನ ಸತ್ಯ ಮತ್ತು ದೃಢೀಕರಣಗಳು ಅವರ ಮೇಲೆ ಎಷ್ಟು ಆಳವಾಗಿ ಪ್ರಭಾವಿಯಾಗಿತ್ತು ಮತ್ತು ಅವರ ಸತ್ಯದ ನಿರಾಕರಣೆಯಿಂದ ಅವರನ್ನು ಯಾವ ಹಂತದ ವರೆಗೆ ಅದು ಅವರನ್ನು ವಿಚಲಿತಗೊಳಿಸಿತು ಎಂಬುದು ಸಾಬೀತಾಗುತ್ತದೆ. ಅವರ ಈ ಭಯದಿಂದಲೇ ಪ್ರವಾದಿ(ಸ) ಮತ್ತು ಅವರಿಗೆ ಅವತೀರ್ಣಗೊಂಡ ಪವಿತ್ರ ಗ್ರಂಥವು ಸತ್ಯವಾದುದು ಮತ್ತು ವಾಸ್ತವಿಕವಾದು ಎಂದೂ ಸಾಬೀತುಗೊಳ್ಳುತ್ತಿದೆ.

ಮಕ್ಕಾ ಮತ್ತು ಸುತ್ತಮುತ್ತ ಅವರ ಈ ಸುಳ್ಳು ಪ್ರಚಾರದ ಕಾರಣದಿಂದಲೇ ಪ್ರವಾದಿ ಮುಹಮ್ಮದ್‌ರು(ಸ) ಮತ್ತು ಪವಿತ್ರ ಕುರ್‌ಆನ್‌ನ ಚರ್ಚೆಗೆ ನಾಂದಿಯಾಯಿತು. ಹೀಗೆ ಇದು ಕೂಡ ದೇವನ ಸಂದೇಶ ಮತ್ತು ಮುಹಮ್ಮದ್‌ರ ಪ್ರವಾದಿತ್ವವು ಜನರ ಮುಂದೆ ಘೋಷಿಸಲ್ಪಟ್ಟ ಮತ್ತು ಪರಿಚಯಗೊಂಡಿರುವ ಸ್ವಾಭಾವಿಕ ರೀತಿಯಾಗಿದೆ.

ಈ ರೀತಿಯಲ್ಲಿಯೂ ದೇವನ ಸಂದೇಶ ಜನರೆಡೆಗೆ ತಲುಪುತ್ತಿತ್ತು. ಜನರಲ್ಲಿ ಮನವರಿಕೆಯಾದ ಮತ್ತು ಉತ್ತಮ ಗುಣನಡತೆ ಜನರು ಸತ್ಯ ಸಂದೇಶವನ್ನು ಸ್ವೀಕರಿಸುತ್ತಿದ್ದರು. ನಂತರ ಅವರು ತಮ್ಮ ಸಂಬಂಧಿಕರಿಗೆ ತಮ್ಮ ಗೋತ್ರಗಳಿಗೆ ಸಂದೇಶವನ್ನು ತಲುಪಿಸಿದರು. ಜನರು ಆ ತಕ್ಷಣ ಸಂದೇಶವನ್ನು ಸ್ವೀಕರಿಸುತ್ತಿರಲಿಲ್ಲ. ಅದರ ಬಗ್ಗೆ ಅವಲೋಕನ ನಡೆಸಿದ ಮೇಲೆ ಸ್ವೀಕರಿಸುತ್ತಿದ್ದರು. ಸಂದೇಹದ ಪರಿಸ್ಥಿತಿಯಿದ್ದಾಗ ಕೂಡ ಅವರು ಸತ್ಯವಚನಗಳನ್ನು ಗುರುತಿಸಲು ಯಶಸ್ವಿಯಾದರೆ ಇದೇ ಜನರು ಮುಂದೆ ಜನತೆಗೆ ಸರಿಯಾದ ಮಾರ್ಗದರ್ಶನ ನೀಡಿದರು. ತಮ್ಮ ನಂಬಿಕಸ್ಥರ

ಮತ್ತು ಪ್ರಭಾ ವಲಯದಲ್ಲಿ ಸಾಹಸಿಕವಾಗಿ ಸತ್ಯ ಸಂದೇಶ ಮತ್ತು ಪ್ರವಾದಿಯನ್ನು ಜನತೆಗೆ ಪರಿಚಯಿಸುವ ಅಸಾಧಾರಣ ಕಾರ್ಯ ಮಾಡುತ್ತಿದ್ದರು. ಆರಂಭದಲ್ಲಿ ಜನತೆ ಸುಳ್ಳು ಪ್ರಚಾರಕ್ಕೆ ಮಾರು ಹೋಗಿ ವಂಚಿಸಲ್ಪಟ್ಟರು ಅಥವಾ ಜನರು ಸುಳ್ಳಿನ ಪ್ರಭಾವಕ್ಕೆ ಸಿಲುಕಿ ಅದರ ಜೊತೆಗೂಡಿದ್ದರು. ಆದರೆ ಸುಳ್ಳಿನ ಶಕ್ತಿ ಕ್ಷಯಿಸಿ ದುರ್ಬಲ ಗೊಂಡೊಡನೆ ಸತ್ಯ ಪ್ರವರ್ಧಮಾನಕ್ಕೆ ಬಂತು. ಹೀಗಾದಾಗ ಅದು ತನ್ನತ್ತ ಬರಲು ಜನರನ್ನು ಪ್ರೇರೇಪಿಸುತ್ತದೆ.

ಮುಹಮ್ಮದ್‌ರನ್ನು ತನ್ನ ಪ್ರವಾದಿಯಾಗಿ ನಿಯುಕ್ತಿ ಮಾಡಿರುವುದಕ್ಕಾಗಲಿ ಅವರಿಗೆ ಸಂದೇಶ ಕೊಟ್ಟು ಜನರೆಡೆಗೆ ಕಳುಹಿಸಿರುವುದುನ್ನು ಘೋಷಿಸಲಿಕ್ಕಾಗಲಿ ಸೃಷ್ಟಿಕರ್ತನು ಯಾವ ಕಾಯಕ್ರಮವನ್ನೂ ಆಯೋಜಿಸಿರಲಿಲ್ಲ.

ಆದರೆ ಪ್ರವಾದಿ ಮುಹಮ್ಮದ್‌ರು(ಸ) ಸೃಷ್ಟಿಕರ್ತನ ನಿಜವಾದ ಪ್ರವಾದಿ ಎಂದು ಮನವರಿಕೆಯಾದ ಜನರೇ ಅವರ(ಸ) ಮೇಲೆ ತಮ್ಮ ಭೌತಿಕ ಸ್ವಾರ್ಥ ಹಿತಾಸಕ್ತಿಯ ಸಲುವಾಗಿಯೇ ವಿಶ್ವಾಸ ಇರಿಸಲು ನಿರಾಕರಿಸಿದರು. ಪ್ರವಾದಿ ಮುಹಮ್ಮದ್(ಸ) ಮತ್ತು ಅವರು ತಂದ ಸೃಷ್ಟಿಕರ್ತನ ಸಂದೇಶದ ಅಪಕೀರ್ತಿಗೆ ಜನಸಾಮಾನ್ಯ ಮನಸ್ಸಿನಲ್ಲಿ ಅನುಮಾನ ಹುಟ್ಟು ಹಾಕಲು ಇವರು ಯತ್ನಿಸಿದರು. ಅದಕ್ಕೆಂದೇ ತಮ್ಮ ಜನರು ಅಂದರೆ ತಮ್ಮ ಮಾಧ್ಯಮಗಳನ್ನೆಲ್ಲ (ಮ್ಯಾನ್, ಮೀನ್ಸ್ ಆಂಡ್ ಮೀಡಿಯ) ಅವರು ಬಳಸಿಕೊಂಡರು.

ಒಂದು ರೀತಿಯಿಂದ ಇದೇ ಜನರು ಪ್ರವಾದಿ ಮುಹಮ್ಮದ್(ಸ) ಮತ್ತು ಅವರು ತಂದ ದೈವಿಕ ಸಂದೇಶವನ್ನು ಜನತೆಗೆ ತಲುಪಿಸಲು ಸಹಾಯಕರೆಂದು ಸಾಬೀತಾದರು. ಅವರ ಅಪಪ್ರಚಾರಕ್ಕೆ ಜನರು ಇದನ್ನು ಸ್ವೀಕರಿಸುವಲ್ಲಿ ಆವಶ್ಯಕವಾಗಿ ಸ್ವಲ್ಪ ವಿಳಂಬವಾಯಿತು. ಆದರೆ ಇದುವೇ ಮಹತ್ವದ ಹಂತವೆನಿಸಿಕೊಂಡು ಸಮಾಜದ ಪ್ರಮುಖರು ಮತ್ತು ಪ್ರಾಮಾಣಿಕ ವ್ಯಕ್ತಿಗಳು ಪ್ರವಾದಿಯನ್ನು(ಸ) ಭೇಟಿಯಾದರು ಮತ್ತು ಸಂದೇಶವನ್ನು ಇತರರವರೆಗೆ ತಲುಪಿಸಿದರು. ಇದು ಪ್ರವಾದಿ ಮತ್ತು ಸಂದೇಶವು ಜನರ ವರೆಗೆ ತಲುಪಿಸುವ ಸೃಷ್ಟಿಕರ್ತನ ಸ್ಥಿರ ಮತ್ತು ನಿರಂತರವಾದ ಯುಕ್ತಿ ಕಾರ್ಯವಾಗಿದೆ. ಈ ರೀತಿ ಭೌತಿಕ ಜಗತ್ತು ಇರುವವರೆಗೆ ಪ್ರವಾದಿ ಮತ್ತು ಸಂದೇಶದ ಘೋಷಣೆ ಪರಿಚಯಗಳು ಮುಂದುವರಿಯುತ್ತಿರುತ್ತವೆ.

ಈ ಪ್ರಚಾರಾಂದೋಲನದಿಂದಾಗಿ ವಿವಿಧ ಪ್ರದೇಶದ ಮತ್ತು ಗೋತ್ರಗಳ ಜನರು ಸತ್ಯವನ್ನು ಮನಗಂಡು ಪ್ರವಾದಿ(ಸ) ಕಡೆ ಆಕರ್ಷಿರಾದರು. ಮಕ್ಕಾದ ಹೊರಭಾಗಕ್ಕೂ ಅಲ್ಲಿನ ಗೋತ್ರಗಳಿಗೂ ಪ್ರವಾದಿ ಮುಹಮ್ಮದ್(ಸ) ಮತ್ತು ಅವರು ತಂದ ಸಂದೇಶ ತಲುಪಲು ಇದುವೇ ದಾರಿಯಾಯಿತು. ಇದನ್ನೇ ಪವಿತ್ರ

ಕುರ್‌ಆನ್‌ನ ಇನ್‌ಶಿರಾಹ್ ಅಧ್ಯಾಯದಲ್ಲಿ ವಿವರಿಸಿದ್ದು: ವರಫಅ್‌ನಾ ಲಕ ದಿಕ್‌ರಕ್.

ಅಂದರೆ ನೀವು ಈ ಸುಳ್ಳು ಪ್ರಚಾರಗಳಿಗೆ ಹೃದಯವನ್ನು ಯಾಕೆ ಕಠಿಣ ಗೊಳಿಸುತ್ತೀರಿ ಮತ್ತು ನಿಮಗಾಗಿ ನಿಮ್ಮ ಖ್ಯಾತಿಯ ಪ್ರಸ್ತಾಪವನ್ನು ಎತ್ತರಕ್ಕೇರಿಸಲಿಲ್ಲವೇ? ವಾಸ್ತವದಲ್ಲಿ ಸಂಕೀರ್ಣತೆಯೊಂದಿಗೆ ವೈಶಾಲ್ಯವೂ ಇದೆ.

ಶತ್ರುಗಳ ಅಪಪ್ರಚಾರದಿಂದ ಆಗಿರುವ ಸಕಾರಾತ್ಮಕ ಪರಿಣಾಮಗಳು

1) ತುಫೈಲ್ ಬಿನ್ ಅಮ್ರ್ ದೌಸಿ: ಇವರು ದೌಸ್ ಗೋತ್ರದ ಓರ್ವ ದೊಡ್ಡ ಸರದಾರ ಮತ್ತು ಗಣ್ಯ ವ್ಯಕ್ತಿಯಾಗಿದ್ದರು. ಆರಂಭದಲ್ಲಿ ಇವರು ಕುರೈಶಿಗಳ ಅಪಪ್ರಚಾರದ ಪ್ರಭಾವಕ್ಕೆ ಸಿಲುಕಿದರು. ಆದರೆ ಕೂಡಲೇ ಅವರು ತನ್ನ ವ್ಯಕ್ತಿತ್ವವನ್ನು ಗುರುತಿಸಿದರು, ಮನಸ್ಸಿಗೆ ಆಘಾತವಾಗಿ ಪ್ರವಾದಿ ಮುಹಮ್ಮದ್‌ರ(ಸ) ಬಳಿಗೆ ತೆರಳಿ ಅವರನ್ನು ಭೇಟಿಯಾಗಿ, ಸತ್ಯ ಮತ್ತು ವಾಸ್ತವವನ್ನು ಮನವರಿಕೆ ಮಾಡಿಕೊಂಡು ಸತ್ಯವಿಶ್ವಾಸ ಸ್ವೀಕರಿಸಿದರು ಮತ್ತು ಮನೆಗೆ ಹೋಗಿ ತನ್ನ ತಂದೆ, ಮನೆಯವರಿಗೆ ಮತ್ತು ಗೋತ್ರದ ಜನರನ್ನು ಇಸ್ಲಾಮಿನೆಡೆಗೆ ಆಹ್ವಾನಿಸಿದರು. ತತ್ಪರಿಣಾಮ ಸುಮಾರು ಎಂಬತ್ತು ಕುಟುಂಬಗಳು ಸತ್ಯವಿಶ್ವಾಸ ಸ್ವೀಕರಿಸಿತು.

2) ಅಬೂದರ್ ಗಿಫಾರಿ: ಇವರು ಬನೂ ಗಿಫ್ಫಾರ್ ಗೋತ್ರದವರು. ದರೋಡೆಗೆ ಪ್ರಸಿದ್ಧವಾದ ಗೋತ್ರ ಇದಾಗಿತ್ತು. ಇಸ್ಲಾಮ್‌ಗೆ ಸ್ವೀಕಾರಕ್ಕಿಂತ ಮೂರು ವರ್ಷದ ಮೊದಲು ಅದು ಈ ವ್ಯಕ್ತಿಯನ್ನು ತೊರೆದಿದ್ದು, ಪ್ರವಾದಿ ಮುಹ್ಮದ್‌ರ(ಸ) ಕುರಿತು ಅಪಪ್ರಚಾರ ಕೇಳಿದಾಗ ಅಬೂದರ್ ಗಿಫಾರಿ ತನ್ನ ಸಹೋದರ ಅನೀಸ್‌ರನ್ನು ಪ್ರವಾದಿಯೆಂದು ಹೇಳಿಕೊಳ್ಳುವ ವ್ಯಕ್ತಿಯ ಬಗ್ಗೆ ತಿಳಿದುಕೊಂಡು ಬರಲು ಕಳುಹಿಸಿದ್ದರು. ವಿವರ ತಿಳಿದ ಮೇಲೆ ಸ್ವತಃ ಅಬೂದರ್ ಗಿಫಾರಿ ಪ್ರವಾದಿವರ್ಯರ(ಸ) ಬಳಿಗೆ ಬಂದು ಭೇಟಿಯಾಗಿ ಪ್ರವಾದಿಯವರಿಂದ(ಸ) ವಚನಗಳನ್ನು ಆಲಿಸಿದರು ಮತ್ತು ಅವರು ಮುಸ್ಲಿಮರಾದರು. ಪ್ರವಾದಿ ಮುಹಮ್ಮದ್‌ರು(ಸ) ಹೇಳಿದರು, "ಈಗ ನೀವು ನಿಮ್ಮ ಗೋತ್ರದೆಡೆಗೆ ಮರಳಿರಿ ಮತ್ತು ಜನರಿಗೆ ಇಸ್ಲಾಮಿನ ಕುರಿತು ಹೇಳುತ್ತಿರಿ. ನನ್ನಿಂದ ಸೂಚನೆ ಸಿಗುವ ವರೆಗೆ."

3) ಅಮ್ರ್ ಇಬ್ನು ಅಬೂ ಸಲ್ಮಿ: ಇವರು ಬನೂ ಸುಲೈಮ್ ಗೋತ್ರದವರು. ಪ್ರವಾದಿಯವರಿಂದ(ಸ) ಸೃಷ್ಟಿಕರ್ತನ ಸಂದೇಶ ಸಾಮಾನ್ಯ ರೀತಿಯಲ್ಲೂ ವ್ಯಾಪಿಸಿದ ಬಳಿಕ ಇವರು ಇಸ್ಲಾಮ್ ಸ್ವೀಕರಿಸಿದರು. ಉಕ್ಕಾಝು ಸಂತೆಯಲ್ಲಿ ಪ್ರವಾದಿವರ್ಯರನ್ನು(ಸ) ಭೇಟಿಯಾದರು ಮತ್ತು ಅಲ್ಲಿಯೇ ಅವರು ಮುಸ್ಲಿಮರಾದರು. ಯಾಕೆಂದರೆ ಅವರು ಮಕ್ಕಾದಲ್ಲಿ ಒಬ್ಬ ವ್ಯಕ್ತಿ ಇದ್ದಾರೆ. ಅವರು ಕೆಲವು ವಿಷಯಗಳನ್ನು ಹೇಳಿ ವಿವರಿಸು

ತ್ತಾರೆ ಎನ್ನುತ್ತಿರುವುದನ್ನು ಇತರರಿಂದ ಕೇಳಿಸಿಕೊಂಡಿದ್ದರು. ಅಮ್ರ್ ಹೇಳುತ್ತಾರೆ– "ನಾನು ಪ್ರವಾದಿ(ಸ)ಯವರನ್ನು ಕೇಳಿದೆ: ತಮ್ಮನ್ನು ಯಾವ ಶಿಕ್ಷಣದೊಂದಿಗೆ ಕಳುಹಿಸಲಾಗಿದೆ. ಪ್ರವಾದಿ(ಸ) ಹೇಳಿದರು: ಕೇವಲ ಅಲ್ಲಾಹನಲ್ಲಿ ಮಾತ್ರ ಆರಾಧ್ಯನೆಂದು ವಿಶ್ವಾಸ ಇರಿಸುವುದು ಮತ್ತು ಅವನೊಂದಿಗೆ ಯಾರನ್ನೂ ಭಾಗಿದಾರರನ್ನಾಗಿ ಮಾಡದಿರುವುದು."

4) ಝುಮಾದುಲ್ ಅಝ್ದಿ: ಇವರು ಆಝ್ದ್ ದಶ್ನೂನ್ ಗೋತ್ರದವರು. ಇವರು ಮಕ್ಕಾಗೆ ಬಂದಾಗ ಮುಹಮ್ಮದ್‌ರ(ಸ) ಶತ್ರುಗಳು ಹೇಳಿದರು. ಮುಹಮ್ಮದ್‌ಗೆ(ಸ) ಹುಚ್ಚು ಹಿಡಿದಿದೆ. ಅವರು ಈಗ ಎಲ್ಲಿದ್ದಾರೆ. ಒಂದು ವೇಳೆ ಅಲ್ಲಾಹನು ನನ್ನ ಮಾತುಗಳಿಂದ ಅವರನ್ನು ಗುಣಪಡಿಸಬಹುದು. ನಂತರ ಅವರು ಪ್ರವಾದಿ(ಸ) ಭೇಟಿಯಾಗಿ ಅವರ ವಚನಗಳನ್ನು ಕೇಳಿದ ಮೇಲೆ ಹೇಳಿದರು. ನಾನು ಎಂದೂ ಇಂತಹ ಮಾತುಗಳನ್ನು ಆಲಿಸಿಲ್ಲ. ನಾನು ಜಾದುಗಾರರ ಮಾತುಗಳನ್ನೂ ಕವಿಗಳ ಕಾವ್ಯವನ್ನೂ ಆಲಿಸಿರುವೆನು. ಆದರೆ ಇಂತಹ ವಚನಗಳನ್ನು ಎಂದೂ ಆಲಿಸಿಲ್ಲ. ಇದು ಸಮುದ್ರ ತಳದವರೆಗೆ ನಮ್ಮನ್ನು ತಲುಪಿಸುತ್ತಿದೆ. ಆ ನಂತರ ಅವರು ಇಸ್ಲಾಮ್ ಸ್ವೀಕರಿಸಿದರು ಮತ್ತು ಪ್ರವಾದಿವರ್ಯರೊಡನೆ ತಾನು ಮತ್ತು ತನ್ನ ಗೋತ್ರದ (ಸಮುದಾಯದ) ಬೈಅತ್ (ಅನುಸರಣಾ ಪ್ರತಿಜ್ಞೆ) ಮಾಡಿಸಿದರು.

ವಿಶ್ವಾಸ ಇರಿಸಿದವರ ಜೀವನದಲ್ಲಿ ಅಹ್ಲಾದಕ, ಕ್ರಾಂತಿಕಾರಿ ಬದಲಾವಣೆಯ ಮೂಲಕ ಪ್ರವಾದಿ ಮುಹಮ್ಮದ್‌ರ(ಸ) ಪ್ರವಾದಿತ್ವ ಮತ್ತು ಅವರ ಸಂದೇಶದ ದೃಢೀಕರಣ:

ಪ್ರವಾದಿಯವರಲ್ಲಿ(ಸ) ವಿಶ್ವಾಸ ಇರಿಸಿ ಮತ್ತು ಅವರು ತಂದಿರುವ ಸಂದೇಶ ಸ್ವೀಕರಿಸಿ ಅದರಂತೆ ಕರ್ಮವೆಸಗಿದವರ ಪೂರ್ಣ ಜೀವನದಲ್ಲಿ ಅಸಾಮಾನ್ಯವೂ ಕ್ರಾಂತಿಕಾರಿಯೂ ಆದ ಬದಲಾವಣೆ ಬಹಿರಂಗವಾಗಿ ವ್ಯಕ್ತವಾಗುತ್ತಿತ್ತು ಮತ್ತು ಮನುಷ್ಯ ಸ್ವಭಾವು ಇದನ್ನೇ ಇಷ್ಟಪಡುತ್ತಿತ್ತು.

ವಿಶ್ವಾಸ ತಂದವರ ಜೀವನದೊಳಗೆ ನಡೆದ ಕೆಲವು ಅದ್ಭುತ ಬದಲಾವಣೆಗಳ ಉದಾಹರಣೆಗಳು:

ಅ) ಹೆಣ್ಣು ಶಿಶು ಹತ್ಯೆಯ ನಿರ್ಮೂಲನೆ:

ಅರೇಬಿಯದ ಸಮಾಜದಲ್ಲಿ ಪರಾಕಾಷ್ಠೆಗೆ ತಲುಪಿದ್ದ ಅಜ್ಞಾನ ಜನ್ಯ ಮತ್ತು ಅಮಾನವೀಯ ಸಂಪ್ರದಾಯಗಳನ್ನು ಕಲ್ಪಿಸಿಕೊಳ್ಳುವಾಗಲೇ ಕಣ್ಣೀರ ಕೋಡಿ ಹರಿಯುತ್ತದೆ. ತಂದೆ ತಾಯಿಗಳೇ ಮೂರು ಕಾರಣಗಳಿಗಾಗಿ ತಮ್ಮ ಹೆಣ್ಣು ಮಕ್ಕಳನ್ನು ಕೊಲ್ಲುತ್ತಿದರು.

1) ಹೆಣ್ಣುಮಕ್ಕಳ ಹತ್ಯೆಯನ್ನು ಅವರನ್ನು ಮದುವೆ ಮಾಡಿಕೊಡುವ ಮೂಲಕ ಅಳಿಯಂದಿರು ಇರಬಾರದು ಎನ್ನುವುದಕ್ಕಾಗಿ ಮಾಡಲಾಗಿತ್ತು. ಇದನ್ನು ಆ ಸಮಾಜ ದಲ್ಲಿ ಅಪಮಾನ ಎಂದು ತಿಳಿಯಲಾಗುತ್ತಿತ್ತು ಹಾಗೂ ಗೋತ್ರಗಳ ಮಧ್ಯೆ ನಡೆಯುತ್ತಿದ್ದ ಘರ್ಷಣೆಗಳ ವೇಳೆ ವೈರಿಗಳ ಕೈಯಲ್ಲಿ ತಮ್ಮ ಹೆಣ್ಣುಮಕ್ಕಳು ಸಿಲುಕಿ ಕೊಳ್ಳಬಾರದೆಂಬ ಕಾರಣವೂ ಇತ್ತು.

2) ಜೀವನೋಪಾಯದ ಕಾರಣದಿಂದ ಹೆಣ್ಣು ಮಕ್ಕಳನ್ನು ಆ ಸಮಾಜ ಹೊರೆಯೆಂದು ತಿಳಿದುಕೊಂಡಿತ್ತು.

3) ತಮ್ಮ ಆರಾಧ್ಯರುಗಳನ್ನು ಮೆಚ್ಚಿಸಲು ಮಕ್ಕಳನ್ನು ಬಲಿ ಅರ್ಪಿಸಲಾಗುತ್ತಿತ್ತು.

ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಬೋಧನೆ-ತರಬೇತಿಯ ಕಾರಣ ಈ ದುಷ್ಕೃತ್ಯಗಳನ್ನು ಈ ಜನರು ತೊರೆದುಬಿಟ್ಟರು. ನಂತರ ಇವೆಲ್ಲವೂ ಅಪರಾಧ ಕಾರ್ಯವೆಂದು ಮನಗಂಡರು ಮತ್ತು ಅವರನ್ನು ವಿಚಾರಣೆಯ ದಿನದ ಭೀತಿ ಆವರಿಸಿತು. (ಆದರೆ ಆ ಮೊದಲು ಇವೆಲ್ಲ ಅಪರಾಧವಾಗಿದೆ ಎಂದು ಅವರು ಭಾವಿಸುತ್ತಿರಲಿಲ್ಲ). ವಿಶ್ವಾಸ ಸ್ವೀಕರಿಸಿದ ಬಳಿಕ ಮಕ್ಕಳನ್ನು ಹೆಚ್ಚು ಪ್ರೀತಿ, ಮಮತೆ ಯಿಂದ ಪೋಷಿಸಿದರು ಮತ್ತು ಹೆಣ್ಣಮಕ್ಕಳ ಪೋಷಣೆ ಪಾಲನೆ ಕಾರ್ಯವು ಆರಾಧನೆಯಾಗಿದೆ ಎಂದು ಮನಗಂಡರು. ಅಲ್ಲಾಹನ ಸಂಪ್ರೀತಿಗಳಿಸುವ ಉದ್ದೇಶ ದಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ತರಬೇತಿ ಕೊಡಿಸಿದರು. ಪ್ರವಾದಿಯವರ(ಸ) ತರಬೇತಿಯ ನಂತರ ಹೆಣ್ಣು ಮಕ್ಕಳ ಜೀವ ಉಳಿಯಿತು. ಜೊತೆಗೆ ಅವರಿಗೆ ಸಮಾಜದಲ್ಲಿ ಗೌರವ, ಪ್ರೀತಿ ಸಮಾನತೆಗಳನ್ನೊಳಗೊಂಡ ಸ್ಥಾನಮಾನ ದೊರೆಯಿತು. ಇದು ಸಾಧ್ಯವಾದುದು ಪ್ರವಾದಿವರ್ಯರ(ಸ) ತರಬೇತಿಯಿಂದಾಗಿತ್ತು.

ಸೃಷ್ಟಿಕರ್ತನು ಈ ಬಗ್ಗೆ ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ವಿವರಿ ಸಿದ್ದಾನೆ, "ಜೀವಂತ ಹೂಳಲ್ಪಟ್ಟ ಹೆಣ್ಣು ಮಗುವಿನೊಡನೆ ಕೇಳಲಾಗುವಾಗ ಯಾವ ತಪ್ಪಿಗಾಗಿ ಅವಳನ್ನು ಕೊಲ್ಲಾಯಿತೆಂದು." **(ಅತ್ತಕ್ವೀರ್: 8-9)**

"ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿಗೂ ಆಹಾರ ನೀಡುವೆವು ನಿಮಗೂ ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಂದು ಘೋರ ಅಪರಾಧವಾಗಿದೆ." **(ಬನೀ ಇಸ್ರಾಯೀಲ್: 31)**

ಇಲ್ಲಿ ಇದಕ್ಕೆ ಸಂಬಂಧಿಸಿದ ಕೆಲವು ಪ್ರವಾದಿ(ಸ) ವಚನಗಳನ್ನು ಉದ್ಧರಿಸುವೆವು:

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡಿದ್ದಾರೆ. ಪ್ರವಾದಿವರ್ಯರು(ಸ) ಹೇಳಿದರು– "ಒಬ್ಬ ವ್ಯಕ್ತಿಯ ಮನೆಯಲ್ಲಿ ಒಂದು ಹೆಣ್ಣು ಮಗು ಜನಿಸಿ ಅವನು

ಆ ಮಗುವನ್ನು ಜೀವಂತ ಹೂಳದೆ, ತಾತ್ಸಾರದಿಂದ ಕಾಣದೆ ಅದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಗಂಡು ಮಕ್ಕಳಿಗೆ ನೀಡದೆ ಅದನ್ನು ಪೋಷಿಸಿದರೆ, ಅಲ್ಲಾಹನು ಆತನಿಗೆ ಸ್ವರ್ಗ ಪ್ರವೇಶ ನೀಡುವನು."

ಪ್ರವಾದಿವರ್ಯರ(ಸ) ಇನ್ನೊಂದು ವಚನ ಹೀಗಿದೆ: ಹರ್ರುತ್ ಅಬೂ ಬಿನ್ಮೂಸಾ ತನ್ನ ತಂದೆ ಮತ್ತು ಅವರು ಅಯ್ಯೂಬ್‌ರ ಅಜ್ಜ (ಹರ್ರುತ್ ಇಬ್ನು ಸಅದ್)ರಿಂದ ವರದಿ ಮಾಡಿದ್ದಾರೆ ಪ್ರವಾದಿವರ್ಯರು(ಸ) ಹೇಳಿದರು, "ಯಾವ ತಂದೆಯೂ ತನ್ನ ಮಕ್ಕಳಿಗೆ ಒಳ್ಳೆಯ ನಡತೆಗಿಂತ ಯಾವುದೇ ಉತ್ತಮ ಉಡುಗೊರೆಯನ್ನು ನೀಡಲಾರ." (ತಿರ್ಮಿದಿ)

ಬಿ) ಗುಲಾಮಗಿರಿ:

ಆ ಕಾಲದಲ್ಲಿ ಮೂರು ರೀತಿಯ ಗುಲಾಮರಿದ್ದರು. ಒಂದು ಯುದ್ಧ ಕೈದಿಗಳು, ಎರಡು, ಯಾವುದೇ ಸ್ವತಂತ್ರ ವ್ಯಕ್ತಿಯನ್ನು ಹಿಡಿದು ಗುಲಾಮ ಮಾಡುವುದು. ಮತ್ತು ಮಾರಾಟ ಮಾಡುವುದು. ಮೂರನೆಯ ವಿಭಾಗದ ತಲೆ ತಲಾಂತರದಿಂದ ಗುಲಾಮರಾಗಿರುವವರು.

ಸಮಾಜದಲ್ಲಿ ಮುಹಮ್ಮದ್‌ರ(ಸ) ಪ್ರವಾದಿತ್ವದ ವೇಳೆ ಈ ಎಲ್ಲ ರೀತಿಯ ಗುಲಾಮ ಪದ್ಧತಿಗಳು ಆಚರಣೆಯಲ್ಲಿದ್ದವು. ಗುಲಾಮರನ್ನು ಅವಲಂಬಿಸಿ ಇಡೀ ಸಮಾಜದ ವ್ಯವಸ್ಥೆ ನಡೆಯುತ್ತಿತ್ತು. ಜನರು ಗುಲಾಮರನ್ನು ಹೆಚ್ಚು ದುಡಿಸುತ್ತಿದ್ದರು. ಅವರಲ್ಲಿ ಹೆಚ್ಚು ಕೆಲಸ ಮಾಡಿಸುತ್ತಿದ್ದರು ಮತ್ತು ಗುಲಾಮರ ಮೇಲೆ ದೌರ್ಜನ್ಯ ವೆಸಗುತ್ತಿದ್ದರು. ಈ ರೀತಿ ಪ್ರವಾದಿ ಮುಹಮ್ಮದ್‌ರ(ಸ) ಶಿಕ್ಷಣವು ಗುಲಾಮರಲ್ಲಿ ಕಡಿಮೆ ಕೆಲಸ ಮಾಡಿಸುವುದು, ದೌರ್ಜನ್ಯ ಮಾಡದಿರುವುದು ಮತ್ತು ಅವರನ್ನು ಸ್ವತಂತ್ರಗೊಳಿಸುವುದು ಇವೆಲ್ಲ ಆರಾಧನೆಯಾಗಿದೆ ಎಂದು ಜನರಿಗೆ ಕಲಿಸಿಕೊಟ್ಟಿತು. ಮರಣಾನಂತರ ಸ್ವರ್ಗ ಸಿಗುವ ಮತ್ತು ಸೃಷ್ಟಿಕರ್ತನ ಸಂಪ್ರೀತಿ ಗಳಿಸಲು ಕಾರಣ ವಾಗುತ್ತದೆಂದು ತಿಳಿಸಿತು. ಸ್ವಲ್ಪ ಹಣ ಕೊಟ್ಟು ಗುಲಾಮನೊಬ್ಬ ಸ್ವತಂತ್ರಗೊಳ್ಳಲು ಬಯಸಿದರೆ ಅವನನ್ನು ಸ್ವತಂತ್ರಗೊಳಿಸು ವುದು. ವ್ಯಕ್ತಿಗೆ ಸ್ವತಂತ್ರನಾಗಲು ಅನುಕೂಲತೆ ಒದಗಿಸುವುದು ಮತ್ತು ಅವನು ತೆರಬೇಕಾದ ಹಣದಲ್ಲಿ ಸ್ವಲ್ಪಂಶ ಹಣವನ್ನು ಮನ್ನಿಸು ವುದು ಅಥವಾ ತಾವೇ ಸ್ವಯಂ ತೃಪ್ತಿಯಲ್ಲಿ ಗುಲಾಮರನ್ನು ಸ್ವತಂತ್ರಗೊಳಿಸುವುದು. ಅಲ್ಲಾಹನ ಬಳಿ ಈ ಕಾರ್ಯಕ್ಕೆ ಉನ್ನತ ಪ್ರತಿಫಲ ಸಿಗುವುದು ಎಂದು ಕಲಿಸಿತು. ಇದರ ಪರಿಣಾಮವಾಗಿ ಪ್ರವಾದಿ ಮುಹಮ್ಮದ್‌ರಲ್ಲಿ(ಸ) ವಿಶ್ವಾಸ ಇರಿಸಿದ ಕೆಲವರು ಸಾವಿರಾರು ಗುಲಾಮರನ್ನು ಸ್ವತಃ ಹಣತೆತ್ತು ಖರೀದಿಸಿ ಸ್ವತಂತ್ರಗೊಳಿಸಿದರು. ಹೀಗೆ ಪ್ರವಾದಿವರ್ಯರ(ಸ) ಮೂಲಕ ಬಂದ ಶಿಕ್ಷಣವು ಬಹು ವರ್ಷಗಳಿಂದ ಸಮಾಜದಲ್ಲಿ

ಮನುಷ್ಯರನ್ನು ಮನುಷ್ಯರದೇ ಗುಲಾಮತ್ವದಿಂದ ಬಿಡಿಸಿ ಸ್ವತಂತ್ರಗೊಳಿಸುವುದು ಆರಾಧನಾ ಕರ್ಮವಾಗಿದೆ ಎಂದೂ ಮತ್ತು ಈ ಕಾರ್ಯ ಮಾಡುವವರಿಗೆ ಉತ್ತಮ ಪ್ರತಿಫಲ ಸೃಷ್ಟಿಕರ್ತನ ಬಳಿ ಇದೆ ಎಂದೂ ಕಲಿಸಿಕೊಟ್ಟಿತು.

ಇದರಿಂದಾಗಿ ಮನುಷ್ಯ ಮನುಷ್ಯನನ್ನು ಗುಲಾಮರನ್ನಾಗಿ ಇಟ್ಟುಕೊಳ್ಳುವ ಸಂಪ್ರದಾಯ ಮತ್ತು ಸಂಕಲ್ಪಗಳು ಕೊನೆಗೊಂಡವು. ಇದು ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ಬಂದ ಶಿಕ್ಷಣದ ಮೂಲಕ ಮಾನವೀಯತೆಗೆ ಸಂದ ಮಹದುಪಕಾರವಾಗಿದೆ.

ಪವಿತ್ರ ಕುರ್‌ಆನ್ ಹೇಳುತ್ತದೆ, "ನಿಮ್ಮ ದಾಸರ ಪೈಕಿ ವಿಮೋಚನಾ ಕರಾರಿಗಾಗಿ ನಿವೇದಿಸಿಕೊಳ್ಳುವವರಲ್ಲಿ ಒಳಿತಿದೆ ಎಂದು ನಿಮಗೆ ತಿಳಿದು ಬಂದರೆ ಅವರೊಡನೆ ವಿಮೋಚನಾ ಕರಾರು ಮಾಡಿಕೊಳ್ಳಿರಿ." **(ಅನ್ನೂರ್- 33)**

ಅಂದರೆ ಮುಹಮ್ಮದ್‌ರು(ಸ) ಗುಲಾಮರಿಗೆ ಏನಾದರೂ ಕೊಟ್ಟು ನಗದು ಅಥವಾ ಸೇವೆಯ ರೂಪದಲ್ಲಿ ಸ್ವತಂತ್ರಗೊಳ್ಳಲು ಅವಕಾಶ ಮಾಡಿಕೊಟ್ಟರು ಮತ್ತು ಗುಲಾಮರೊಡನೆ ಉತ್ತಮವಾಗಿ ವರ್ತಿಸಲು ಮತ್ತು ಅವರನ್ನು ಸ್ವತಂತ್ರಗೊಳಿಸಲು ಪ್ರೇರೇಪಿಸಿದರು. ಗುಲಾಮರ ಬಗ್ಗೆ ಪ್ರವಾದಿ(ಸ)ಯವರ ಕೆಲವು ವಚನಗಳನ್ನು ಇಲ್ಲಿ ಕೆಳಗೆ ಕೊಡಲಾಗಿದೆ.

ಪ್ರವಾದಿ ಮುಹಮ್ಮದ್(ಸ) ಹೇಳಿದರು: "ಗುಲಾಮರು ನಿಮ್ಮ ಸಹೋದರರು. ಅವರನ್ನು ಸದ್ಯ ಅಲ್ಲಾಹನು ನಿಮ್ಮ ಅಧೀನಕ್ಕೆ ಕೊಟ್ಟಿರುವನು. ಅಲ್ಲಾಹನು ಒಬ್ಬ ಸಹೋದರನನ್ನು ನಿಯಂತ್ರಣಕ್ಕೆ ಕೊಟ್ಟಿದ್ದರೆ ಆತನು ತಾನು ಉಣ್ಣುವುದನ್ನೇ ಆ ಸಹೋದರನಿಗೆ ಉಣಿಸಬೇಕು. ತಾನು ಉಡುವುದನ್ನೇ ಅವನಿಗೆ ಉಡಿಸಬೇಕು. ಅವನಿಗೆ ಸಾಧ್ಯವಿಲ್ಲದ ಯಾವುದೇ ಕೆಲಸವನ್ನು ಅವನಿಂದ ಮಾಡಿಸಬಾರದು. ಎಂದಾದರೂ ಒಂದು ಕಷ್ಟದ ಕೆಲಸವನ್ನು ಅವನಿಗೆ ವಹಿಸಿಕೊಡುವುದಾದಲ್ಲಿ ಆ ಕೆಲಸದಲ್ಲಿ ಅವನಿಗೆ ಸಹಾಯ ಮಾಡಬೇಕು."

[ಬುಖಾರಿ, ಮುಸ್ಲಿಮ್, ವರದಿ- ಅಬೂ ಹುರೈರಾ(ರ)]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೀಗೆ ಹೇಳಿರುವುದಾಗಿ ಹಝ್ರತ್ ಅಬೂ ಹುರೈರಾ(ರ) ವರದಿ ಮಾಡಿರುವರು: ಓರ್ವನು ಯಾವನೇ ಮುಸ್ಲಿಮ್ ಗುಲಾಮನನ್ನು ಸ್ವತಂತ್ರಗೊಳಿಸಿದರೆ ಅಲ್ಲಾಹನು ಗುಲಾಮನ ಪ್ರತಿಯೊಂದು ಅಂಗಾಗಳ ಪ್ರತಿಯಾಗಿ ಅವನ ಅಂಗಾಂಗಳನ್ನು ನರಕಾಗ್ನಿಯಿಂದ ರಕ್ಷಿಸುವನು.

ಹಝ್ರತ್ ಅಬೂ ಮೂಸಾರಿಂದ ವರದಿಯಾಗಿದೆ. ಪ್ರವಾದಿವರ್ಯರು(ಸ) ಹೇಳಿದರು: "ಯಾರ ಬಳಿ ದಾಸಿಯರಿದ್ದು ಅವನು ಅವಳನ್ನು ಉತ್ತಮ ರೀತಿಯಲ್ಲಿ

ಸಾಕಿ ಸಲಹಿ, ನಂತರ ಸ್ವತಂತ್ರಗೊಳಿಸಿ ಅವಳನ್ನು ನಿಕಾಹ್ ಆದರೆ, ಅವನಿಗೆ ಇಮ್ಮಡಿ ಪ್ರತಿಫಲ ಮತ್ತು ಪುಣ್ಯ ಇದೆ." (ಬುಖಾರಿ)

ಈ ರೀತಿ ದಾಸಿಯರನ್ನು ಕೂಡ ಸ್ವತಂತ್ರಗೊಳಿಸಲಾಯಿತು ಮತ್ತು ಗೌರವವನ್ನು ಕೊಡಲಾಯಿತು.

ಪ್ರವಾದಿ(ಸ) ತಂದಿರುವ ಶಿಕ್ಷಣವು ಸಮಾಜವನ್ನು ನೈತಿಕವಾಗಿಯೂ ಮಾನವೀಯ ವಾಗಿಯೂ ಯಾವ ರೀತಿ ಮತ್ತು ಎಷ್ಟರ ವರೆಗೆ ಮೇಲೆತ್ತಿತ್ತು ಎಂಬುದಕ್ಕೆ ಈ ಕ್ರಾಂತಿಕಾರಿ ಬದಲಾವಣೆಯು ಅತ್ಯುತ್ತಮ ಉದಾಹರಣೆಯಾಗಿದೆ ಮತ್ತು ಸಮಾಜದಲ್ಲಿ ಆದ ಈ ಬದಲಾವಣೆ ಪ್ರವಾದಿ ಮುಹಮ್ಮದ್‌ರ(ಸ) ಪ್ರವಾದಿತ್ವ ಮತ್ತು ಕುರ್‌ಆನ್ ವಚನಗಳು ಸತ್ಯವಾದುದು ಎಂಬುದಕ್ಕೆ ಸಾಕ್ಷ್ಯವಹಿಸುತ್ತಿದೆ.

ಸಮಾಜದ ದುರ್ಬಲ ವರ್ಗಗಳೊಂದಿಗೆ ಉತ್ತಮ ವರ್ತನೆ, ಅವರೊಂದಿಗೆ ಪ್ರೀತಿ, ಅವರ ಸೇವೆ ಮತ್ತು ಅವರು ದುಃಖ ಸುಖಗಳಲ್ಲಿ ಪಾಲ್ಗೊಳ್ಳುವಿಕೆ:

ಪ್ರವಾದಿ(ಸ) ಸಮಾಜದ ದುರ್ಬಲ ಮತ್ತು ತುಳಿತಕ್ಕೊಳಗಾದ ಹಾಗೂ ಮಾನವ ಹಕ್ಕು ತಿರಸ್ಕರಿಸಲ್ಪಟ್ಟ ವಿಭಾಗದ ಜನರನ್ನು ಆಲಿಂಗಿಸಿದರು. ಸೃಷ್ಟಿಕರ್ತನ ಶಿಕ್ಷಣವು ಅವರಿಗೆ ಮನುಷ್ಯ ಸಮಾನತೆಯ ಸ್ಥಾನಮಾನವನ್ನು ನೀಡಿತು. ಸೃಷ್ಟಿಕರ್ತನಿಗೆ ಪ್ರತಿಯೊಬ್ಬ ಮನುಷ್ಯನೂ ಸಮಾನ. ಅವನು ಸಕಲ ಮನುಷ್ಯರನ್ನು ಪ್ರೀತಿಸುವನು. ಜನರೊಡನೆ ಉತ್ತಮವಾಗಿ ವರ್ತಿಸುವವರನ್ನು ಸೃಷ್ಟಿಕರ್ತನು ಇಷ್ಟಪಡುವನು. ಅದರಲ್ಲೂ ಸಮಾಜದ ದುರ್ಬಲ ವಿಭಾಗದೊಂದಿಗೆ ಉತ್ತಮವಾಗಿ ವರ್ತಿಸುವವರನ್ನು ಇಷ್ಟಪಡುವನು. ಅವನೊಡನೆ ಸಂಪ್ರೀತನಾಗುವನು ಮತ್ತು ಪವಿತ್ರ ಕುರ್‌ಆನ್‌ನಲ್ಲಿ ಸೃಷ್ಟಿಕರ್ತನು ತನ್ನ ಇಷ್ಟಪಾತ್ರರು ಹೇಗಿರುತ್ತಾರೆ ಎಂದು ವಿವರಿಸಿರುವನು.

"ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಊಟ ಕೊಡುತ್ತಾರೆ. (ಮತ್ತು ಅವರೊಡನೆ ಹೇಳುತ್ತಾರೆ) ನಾವು ನಿಮಗೆ ಕೇವಲ ಅಲ್ಲಾಹನಿಗಾಗಿ ಉಣಿಸುತ್ತೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸುವುದಿಲ್ಲ." (ಅದ್ದಹ್ರ್: 8–9)

"ಅವರ ಸಂಪತ್ತುಗಳಲ್ಲಿ ಒಂದು ನಿಶ್ಚಿತ ಹಕ್ಕಿದೆ. ಬೇಡುವವನಿಗೆ ಮತ್ತು ವಂಚಿತನಿಗೆ, ಅವರು ಪ್ರತಿಫಲ ಸಿಗಲಿರುವ ದಿನವನ್ನು ಸತ್ಯವೆಂದು ನಂಬುತ್ತಾರೆ. ಅವರು ತಮ್ಮ ಪ್ರಭುವಿನ ಯಾತನೆಗೆ ಭಯಪಡುತ್ತಾರೆ. ಏಕೆಂದರೆ ಅವರ ಪ್ರಭುವಿನ ಯಾತನೆಯು ನಿರ್ಭಯವಾಗಿರತಕ್ಕ ವಸ್ತುವಲ್ಲ." (ಅಲ್ ಮಆರಿಜ್: 25–29)

"ಆದುದರಿಂದ ಅನಾಥನ ಮೇಲೆ ಕಾಠಿಣ್ಯ ತೋರಬೇಡಿರಿ ಮತ್ತು ಯಾಚಕನನ್ನು

ಜರೆಯಬೇಡಿರಿ ಮತ್ತು ನಿಮ್ಮ ಪ್ರಭುವಿನ ಅನುಗ್ರಹವನ್ನು ಪ್ರಕಟಪಡಿಸಿರಿ."

(ಅದ್ದುಹಾ: 9, 10, 11)

"ಅವರ ಸಂಪತ್ತಿನಲ್ಲಿ ಬೇಡುವವರಿಗೂ ವಂಚಿತರಿಗೂ ಹಕ್ಕಿತ್ತು."

(ಅದ್ದಾರಿಯಾತ್: 19)

ಪ್ರವಾದಿವರ್ಯರು(ಸ) ಸತ್ಯವಿಶ್ವಾಸಿಗಳಿಗೆ ಅನಾಥರ ರಕ್ಷಣೆ ಮತ್ತು ಪೋಷಣೆ, ಆಹಾರ ಸೇವಿಸುವಾಗ ಅವರನ್ನು ತಮ್ಮ ಜೊತೆ ಸೇರಿಸಲು, ಅವರೊಂದಿಗೆ ಉತ್ತಮವಾಗಿ ವರ್ತಿಸಲು, ಕೆಟ್ಟದಾಗಿ ವರ್ತಿಸದಿರಲು ಸೂಚಿಸಿದರು.

ಹ. ಅಬೂ ಹುರೈರಾರಿಂದ ವರದಿಯಾಗಿದೆ ಪ್ರವಾದಿವರ್ಯರು(ಸ) ಹೇಳಿದರು: ಮುಸ್ಲಿಮರ ಮನೆಯಲ್ಲಿ ಅತ್ಯುತ್ತಮ ಮನೆ ಯಾವುದೆಂದರೆ ಅನಾಥರೊಂದಿಗೆ ಉತ್ತಮಮವಾಗಿ ವರ್ತಿಸುವ ಮನೆಯಾಗಿದೆ ಮತ್ತು ಮುಸ್ಲಿಮರಲ್ಲಿ ಅತ್ಯಂತ ಕೆಟ್ಟ ಮನೆ ಆ ಮನೆಯಲ್ಲಿ ಅನಾಥರಿದ್ದು ಅವರೊಡನೆ ಕೆಟ್ಟದಾಗಿ ವರ್ತಿಸುವ ಮನೆಯಾಗಿದೆ. (ಇಬ್ನುಮಾಜಃ)

ಪ್ರವಾದಿರ್ಯರು(ಸ) ಬಡವರ ನಿರ್ಗತಿಕ ಹಕ್ಕುಗಳತ್ತ ಗಮನ ಸೆಳೆದರು. ಅವರ ಆಹಾರ, ವಸ್ತ್ರಗಳ ವ್ಯವಸ್ಥೆ ಮಾಡುವುದು ಮತ್ತು ಅವರನ್ನು ಭೇಟಿಯಾಗುವುದು ಚಿಕಿತ್ಸೆ ಕೊಡಿಸುವುದು ಇತ್ಯಾದಿ.

ಹ. ಅಬೂ ಸಈದುಲ್ ಖುದ್ರಿಯವರಿಂದ ವರದಿಯಾಗಿದೆ– ಪ್ರವಾದಿ ವರ್ಯರು(ಸ) ಹೇಳಿದರು: ಯಾರಾದರೂ ಸತ್ಯವಿಶ್ವಾಸಿ ಯಾವನೇ ಹಸಿದ ವಿಶ್ವಾಸಿಗೆ ಊಟ ಕೊಟ್ಟರೆ ಅಲ್ಲಾಹನು ಲೋಕಾಂತ್ಯದ ದಿನ ಸ್ವರ್ಗದ ಫಲ ತಿನ್ನಿಸುವನು ಮತ್ತು ಯಾವನೇ ಸತ್ಯವಿಶ್ವಾಸಿ ದಾಹಗೊಂಡ ವಿಶ್ವಾಸಿಗೆ ನೀರು ಕುಡಿಸಿದರೆ ಅಲ್ಲಾಹನು ಅವನಿಗೆ ಲೋಕಾಂತ್ಯದ ದಿನ ಶುದ್ಧ, ಅತ್ಯುತ್ತಮ ಮುದ್ರೆ ಹಾಕಿದ ದ್ರಾಕ್ಷೆ ರಸ ಕುಡಿಸುವನು. ಮತ್ತು ಯಾವನೇ ಸತ್ಯವಿಶ್ವಾಸಿಯು ನಗ್ನ ವಿಶ್ವಾಸಿಗೆ ಉಡುಪು ಉಡಿಸಿದರೆ ಅಲ್ಲಾಹನು ಲೋಕಾಂತ್ಯದ ದಿನ ಅವನಿಗೆ ಸ್ವರ್ಗದ ಉಡುಪು ಉಡಿಸುವನು. (ತಿರ್ಮಿದಿ)

ಯಾಕೆಂದರೆ ಸೃಷ್ಟಿಕರ್ತನು ಸಕಲ ಮಾನವರನ್ನು ಪ್ರೀತಿಸುವನು. ಅವನು ಪ್ರತಿಯೊಬ್ಬರ ಹಕ್ಕುಗಳ ರಕ್ಷಣೆ ಮತ್ತು ಹಕ್ಕು ಸಂದಾಯಗಳನ್ನು ತನ್ನ ಸಂಪ್ರೀತಿ ಯೊಂದಿಗೆ ಜೋಡಿಸಿರುವನು. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಹಕ್ಕನ್ನು ಯಾವ ಉದ್ದೇಶದಿಂದ ಸಂದಾಯ ಮಾಡುವನೊ ಅದರಂತೆ ಸೃಷ್ಟಿಕರ್ತನ ಸಂಬಂಧ ಅವನೊಂದಿಗಿರುವುದು. ಇಂತಹ ಕೆಲವು ಹಕ್ಕುಗಳನ್ನು ಪವಿತ್ರ ಕುರ್‌ಆನ್ ಮತ್ತು

ಹದೀಸ್‌ಗಳು ವಿವರಿಸಿವೆ. ಈ ಹಕ್ಕುಗಳ ಸಂದಾಯದೊಂದಿಗೆ ಒಬ್ಬ ವ್ಯಕ್ತಿಯು ಸೃಷ್ಟಿಕರ್ತನ ಬಳಿ ಉತ್ತಮನೂ ಮತ್ತು ಪ್ರಿಯ ವ್ಯಕ್ತಿಯೂ ಆಗುವನು ಮತ್ತು ಪರಿಸರವು ಶಾಂತವೂ ಆಹ್ಲಾದಕವೂ ಆಗಿರುತ್ತದೆ. ಈ ಶಿಕ್ಷಣಗಳನ್ನು ಕಾರ್ಯರೂಪಕ್ಕೆ ತರುವ ಮೂಲಕವಾಗಿ ಸಮಾಜದ ಸ್ವರೂಪವು ನೈತಿಕ ಉನ್ನತಿಯೆಡೆಗೆ ತಲುಪಿತು.

ಇನ್ನು ಪವಿತ್ರ ಕುರ್‌ಆನ್, ತಂದೆ-ತಾಯಿಯರ ಹಕ್ಕುಗಳನ್ನು ಹೀಗೆ ವಿವರಿಸುತ್ತಿದೆ: "ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧರಾಗಿ ನಿಮ್ಮ ಬಳಿಯಲ್ಲಿದ್ದರೆ, ಅವರ ಬಗ್ಗೆ ಚಕಾರವೆತ್ತಬೇಡಿರಿ ಮತ್ತು ಅವರನ್ನು ಜರೆಯಬೇಡಿರಿ. ಅವರೊಂದಿಗೆ ಗೌರವಪೂರ್ವಕವಾಗಿ ಮಾತಾಡಿರಿ. ನಯ-ವಿನಯ ಮತ್ತು ಕರುಣೆಯೊಂದಿಗೆ ಅವರ ಮುಂದೆ ಬಾಗಿಕೊಂಡಿರಿ. ಓ ನನ್ನ ಪ್ರಭೂ! ನನ್ನ ಚಿಕ್ಕಂದಿನಲ್ಲಿ ದಯಾ ವಾತ್ಸಲ್ಯಗಳಿಂದ ನನ್ನನ್ನು ಸಾಕಿದಂತೆಯೇ ನೀನು ಅವರ ಮೇಲೆ ಕೃಪೆ ತೋರು ಎಂದು ಪ್ರಾರ್ಥಿಸಿರಿ." (ಬನೀ ಇಸ್ರಾಯೀಲ್: 23-24)

"ಸಂಬಂಧಿಕರಿಗೆ ಅವರ ಹಕ್ಕು ಕೊಡಿ, ಪ್ರಯಾಣಿಕರಿಗೂ ಅವರ ಹಕ್ಕುಗಳನ್ನು."

(ಬನೀ ಇಸ್ರಾಯೀಲ್: 34)

"ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯ ವಿಮೋಚನೆಗಾಗಿಯೂ ವ್ಯಯಿಸುವುದು, ನಮಾಝ್ ಸಂಸ್ಥಾಪಿಸುವುದು, ಝಕಾತ್ (ಕಡ್ಡಾಯದಾನ) ನೀಡು ವುದು, ವಾಗ್ದಾನ ಮಾಡಿದ್ದರೆ ಪೂರೈಸುವುದು ಕಷ್ಟ ಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯ ಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದು ಧರ್ಮ ಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು. (ಅಲ್ ಬಕರ: 177)

"ನೀವೆಲ್ಲರೂ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ. ಸಂಬಂಧಿಕರೊಂದಿಗೆ, ಅನಾಥರೊಂದಿಗೆ, ನಿರ್ಗತಿಕರೊಂದಿಗೆ, ಆಪ್ತರಾದ ನೆರೆಹೊರೆ ಯವರೊಂದಿಗೆ, ಅಪರಿಚಿತ ನೆರೆಹೊರೆಯವರೊಂದಿಗೆ, ಸಹಚರರೊಂದಿಗೆ, ಪ್ರಯಾಣಿಕರೊಂದಿಗೆ, ನಿಮ್ಮ ಅಧೀನದಲ್ಲಿರುವ ದಾಸ ದಾಸಿಯರೊಂದಿಗೆ, ಉತ್ತಮ ರೀತಿಯಿಂದ ವರ್ತಿಸಿರಿ. ದುರಹಂಕಾರ ಹೊಂದಿರುವ ಗರ್ವಿಷ್ಠನನ್ನು ಮತ್ತು ಆತ್ಮಸ್ತುತಿಗೈಯ್ಯುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ." (ಅನ್ನಿಸಾ: 36)

ಈ ವಚನಗಳ ಮೂಲಕ ಸಕಲ ಮನುಷ್ಯರೊಡನೆ ಸೃಷ್ಟಿಕರ್ತನಿಗೆ ಪ್ರೀತಿಯಿದೆ, ಪ್ರತಿಯೊಬ್ಬ ಮನುಷ್ಯರೂ ಅವನ ದೃಷ್ಟಿಯಲ್ಲಿ ಸಮಾನರು ಮತ್ತು ತಾನೇ ಸೃಷ್ಟಿಸಿದ ಮನುಷ್ಯರೊಡನೆ ಅವನು ಅ ಭೇದಭಾವ ಮಾಡುವುದಿಲ್ಲ ಎಂಬ ಶಿಕ್ಷಣ ಸತ್ಯವಿಶ್ವಾಸಿ

ಗಳಿಗೆ ದೊರೆಯಿತು. ಈ ಶಿಕ್ಷಣದ ಪರಿಣಾಮವಾಗಿಯೇ ವಿಶ್ವಾಸಿಗಳಲ್ಲಿ ಸಕಲರನ್ನೂ ಪ್ರೀತಿಸಬೇಕು, ಗೌರವಿಸಬೇಕು; ಅವರ ಸುಖ-ದುಃಖಗಳಲ್ಲಿ ಭಾಗಿಯಾಗಬೇಕು, ಸೃಷ್ಟಿಕರ್ತನ ಸಂಪ್ರೀತಿಯ ಸಲುವಾಗಿ ಸಹಾಯ-ಸೇವೆ ಮಾಡಬೇಕು. ಅವನ ಬಳಿಗೆ ಮರಳಲಿಕ್ಕಿದೆ ಎಂಬ ಅರಿವುಂಟಾಯಿತು. ಜೊತೆಗೆ ಸೃಷ್ಟಿಕರ್ತನ ಶಿಕ್ಷಣ ಮತ್ತು ಪ್ರವಾದಿವರ್ಯರ(ಸ) ಚರ್ಯೆ ಮತ್ತು ಮಾರ್ಗದರ್ಶನಗಳು ಸತ್ಯವಿಶ್ವಾಸಿಗಳ ಮುಂದಿದ್ದವು. ಈ ಪರಿಣಾಮವಾಗಿ ಅವರು (ವಿಶ್ವಾಸಿಗಳು) ಸತ್ಯವಂತರು ಮತ್ತು ಪ್ರೀತಿಪಾತ್ರ ಮನುಷ್ಯರಾಗಿ ಪ್ರಗತಿ ಹೊಂದಿದರು.

ರಕ್ತಪಾತ, ಮೃಗೀಯತೆಗಳಿಂದ ಮುಕ್ತ ಅವರ ಜೀವನ

ಅವರಲ್ಲಿ ಎಷ್ಟರ ವರೆಗೆ ಅಜ್ಞಾನ ಮತ್ತು ಮೃಗೀಯತೆ ಇತ್ತೆಂದರೆ ಸಣ್ಣಪುಟ್ಟ ಸಂಗತಿ, ಕ್ಷುಲ್ಲಕ ವಿಚಾರಗಳಲ್ಲಿ ಪರಸ್ಪರ ಅವರ ಗೋತ್ರಗಳ ನಡುವೆ ಯುದ್ಧ ನಡೆದವು ಮತ್ತು ಅದು ಕೊನೆಗೊಳ್ಳುವ ಖಾತರಿಯೇ ಅವರಲ್ಲಿರಲಿಲ್ಲ. ತಲೆ ತಲಾಂತರಗಳಿಂದ ಅದು ಮುಂದುವರಿದುಕೊಂಡು ಬಂದಿದ್ದವು. ಬಣ್ಣ, ಜನಾಂಗ, ಭಾಷೆ, ನಾಡು, ಅರಬ-ಅರಬೇತರ, ಕರಿಯ-ಬಿಳಿಯರೆಂಬ ತಾರತಮ್ಯವು ಅವರ ಮನೆ-ಮನಗಳಲ್ಲಿ ಹಾಸುಹೊಕ್ಕಾಗಿ ಅವರಲ್ಲಿ ಪೂರ್ವಗ್ರಹ, ದುರಭಿಮಾನ ಮತ್ತು ದ್ವೇಷದಿಂದ ಒಬ್ಬರು ಇನ್ನೊಬ್ಬರನ್ನು ಸಹಿಸದ ಪರಿಸ್ಥಿತಿ ನೆಲೆಸಿತ್ತು ಹಾಗೂ ಅವರ ಇಂತಹ ಮಾಮೂಲಿ ವಿಷಯಗಳು ಅವರನ್ನು ಸುದೀರ್ಘ ಕಾಲದ ವರೆಗಿನ ಯುದ್ಧ ಗಳಿಗೆ ಕಾರಣವಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಈ ವಿಷಯವೇ ಮನುಷ್ಯರನ್ನು ನಾಶ ಪಡಿಸುತ್ತದೆ. ಮನುಷ್ಯ ನಡುವೆ ಇರುವ ವ್ಯತ್ಯಾಸಗಳು ಸ್ಥಿರವಾಗಿರುವುದಾಗಿದೆ.

ಈ ವಿನಾಶದಿಂದ ಪಾರುಗೊಳಿಸಲು ಪ್ರವಾದಿವರ್ಯರು(ಸ) ಅನುಸರಿಸಿದ ರೀತಿ ಹೇಗಿತ್ತೆಂದು ನೋಡೋಣ: ಪ್ರವಾದಿವರ್ಯರು(ಸ) ಮತ್ತು ಅವರ ಶಿಕ್ಷಣವು ಪ್ರತಿಯೊಬ್ಬ ಮನುಷ್ಯನನ್ನು ಮನುಷ್ಯನಾಗಿಯೇ ಸಂಬೋಧಿಸುತ್ತದೆ. ಮನುಷ್ಯರು ಎಂಬ ನೆಲೆಯಲ್ಲಿ ಅವರನ್ನೂ ಗೌರವಿಸುತ್ತದೆ ಮತ್ತು ಎಲ್ಲ ಮನುಷ್ಯರು ಒಬ್ಬನೇ ಸೃಷ್ಟಿಕರ್ತನ ಸೃಷ್ಟಿಗಳಾಗಿದ್ದಾರೆ ಮತ್ತು ಅವರೆಲ್ಲ ಒಂದೇ ತಂದೆ ತಾಯಿ ಆದಮ್(ಅ) ಹವ್ವಾ(ರ) ಸಂತಾನವಾಗಿದ್ದಾರೆಂಬ ಏಕತೆಯ ದೃಷ್ಟಿಕೋನವನ್ನು ನೀಡಿತು. ಆ ಮೂಲಕ ಎಲ್ಲ ಅತಿರೇಕಗಳನ್ನು ನಿವಾರಿಸಿ ಕೊಂಡು ಮನುಷ್ಯರಲ್ಲಿ ಅದು ಒಗ್ಗಟ್ಟನ್ನು ಉಂಟು ಮಾಡುತ್ತದೆ.

ಮನುಷ್ಯರಲ್ಲಿರುವ ದೊಡ್ಡವನು ಸಣ್ಣವನು (ಕೀಳು-ಮೇಲು) ಭಾವನೆ ಮತ್ತು ಅಹಂಕಾರಗಳಿಗೆ ಆದಮ್(ಮನುಷ್ಯ) ಮಣ್ಣಿನಿಂದ ಮಾಡಲ್ಪಟ್ಟಿದ್ದಾನೆ ಎಂಬ ಸತ್ಯ ವನ್ನು ನೆನಪಿಸಿ ಲಗಾಮು ಹಾಕುತ್ತದೆ.

ಪವಿತ್ರ ಕುರ್‌ಆನ್ ಹೀಗೆನ್ನುತ್ತದೆ. "ನಾವು ಮನುಷ್ಯರನ್ನು ಕೊಳೆತ ಮಣ್ಣಿನ ಗಾರೆಯಿಂದ ಸೃಷ್ಟಿಸಿದೆವು." (ಅಲ್‌ಹಜ್ಜ್: 27)

ನಂತರ ಮನುಷ್ಯ ಜನಾಂಗದ ಸರಣಿಯು ಒಂದು ನುತ್ಫ್‌ನಿಂದ (ವೀರ್ಯದಿಂದ) ಮುಂದುವರಿಯುವ ವ್ಯವಸ್ಥೆಯನ್ನು ಮಾಡಿದನು. ಹೀಗಿರುವಾಗ ಸಕಲ ಮನುಷ್ಯರು ವೀರ್ಯದಿಂದ ಹುಟ್ಟಿದ್ದು ಮತ್ತು ಒಂದೇ ವಿಧಾನದಿಂದ ಸೃಷ್ಟಿಯಾಗಿರುವುದರಿಂದ ಹೇಗೆ ಮನುಷ್ಯರಲ್ಲಿ ದೊಡ್ಡವನು ಸಣ್ಣವನು ಎಂಬ ಅಂತರ ಉಂಟಾಗುವುದು ಎಂದು ಇದರ ಅರ್ಥವಾಗಿದೆ. "ನಾವು ಮಾನವನನ್ನು ಒಂದು ಸಮ್ಮಿಶ್ರ ವೀರ್ಯದಿಂದ ಸೃಷ್ಟಿಸಿದೆವು." (ಅದ್ದಹ್ರ್: 2)

ಸೃಷ್ಟಿಕರ್ತನು ಪವಿತ್ರ ಕುರ್‌ಆನ್ ಗ್ರಂಥದಲ್ಲಿ ಯಾರು ತನಗೆ ಎಲ್ಲರಿಗಿಂತ ಹೆಚ್ಚು ಪ್ರಿಯರು ಎಂಬುದನ್ನು ಕೂಡ ಸ್ಪಷ್ಟವಾಗಿ ವಿವರಿಸುತ್ತಾನೆ–

"ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತೀ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ." (ಅಲ್ ಹುಜುರಾತ್: 13)

ಸೃಷ್ಟಿಕರ್ತನ ಕೋಪಕ್ಕೆ ತುತ್ತಾಗಬಾರದು. ಅವನ ಶಿಕ್ಷೆಗೆ ಹೆದರಿ ಅವನಿಗೆ ಅತ್ಯಂತ ಹೆಚ್ಚು ಭಯಭಕ್ತಿಯಿಂದ ವಿಧೇಯನಾಗುವವನು ಮತ್ತು ಅವಿಧೇಯತೆಯಿಂದ ಸುರಕ್ಷಿತನಾಗಿರುವವನೇ ಸೃಷ್ಟಿಕರ್ತನ ಬಳಿ ಅತ್ಯುತ್ತಮ ವ್ಯಕ್ತಿಯಾಗಿರುವನು.

ಒಳ್ಳೆಯವನಾಗುವುದು ಮತ್ತು ಒಳ್ಳೆಯವನಾಗದಿರುವುದು ಕೂಡ ಮನುಷ್ಯನದೇ ಆಯ್ಕೆಯಾಗಿದೆ. ಅವನನ್ನು ಅವನ ಆಯ್ಕೆಯೇ ಉತ್ತಮನೊ ಕೆಟ್ಟವನೊ ಎಂದು ನಿರ್ಧರಿಸುತ್ತದೆ. ಸೃಷ್ಟಿಕರ್ತನು ಮನುಷ್ಯನಿಗೆ ತಕ್ವಾದ (ದೇವಭಕ್ತಿಯ) ಶರ್ತದೊಂದಿಗೆ ಮನುಷ್ಯನ್ನು ಮನುಷ್ಯತ್ವದ ಉತ್ತುಂಗಕ್ಕೆ ತಲುಪಿಸುವ ಅತ್ಯುತ್ತಮವೂ ಮತ್ತು ಸುಂದರವೂ ಆದ ವಿಧಾನವನ್ನು ತನ್ನ ಸಂತೃಪ್ತಿಗೆ ಜೋಡಿಸಿರುವುದನ್ನು ವಾಚಕರು ಅರ್ಥ ಮಾಡಿಕೊಳ್ಳಬಹುದಾಗಿದೆ. ಈ ಶರ್ತದಂತೆ ಜನರು ಮುಹಮ್ಮದ್‌ರಲ್ಲಿ(ಸ) ಅವರು ಪ್ರವಾದಿ ಎಂದು ವಿಶ್ವಾಸ ಇರಿಸಿದರೆಂದೂ ಮತ್ತು ಅವರ ಮೂಲಕ ಬಂದ ಶಿಕ್ಷಣದಂತೆ ಕರ್ಮವೆಸಗುವ ಮೂಲಕ ಮಾನವೀಯತೆಯ ಉನ್ನತ ದರ್ಜೆ ಸಾಧಿಸುತ್ತಾ ಹೋದರು ಎಂದೂ ಇತಿಹಾಸವು ದಾಖಲಿಸಿದೆ. ಉಳಿದೆಲ್ಲ ವ್ಯಾಖ್ಯಾನಗಳು ಭಿನ್ನಾಭಿಪ್ರಾಯ ಮತ್ತು ಜಗಳಗಳಿಗಾಗಿರುವುದಲ್ಲ ಎಂಬುದನ್ನೂ ವಾಚಕರು ಅರ್ಥ ಮಾಡಿಕೊಳ್ಳಬಹುದಾಗಿದೆ.

ಶಕ್ತಿಯ ಜಾರಿ

ಮುಹಮ್ಮದ್‌ರು(ಸ) ತಂದ ಸಂದೇಶ ಮತ್ತು ಬೋಧನೆಯ ಆಂತರ್ಯದಲ್ಲಿ ಅದರಂತೆ ಕರ್ಮವೆಸಗಲು ಮನುಷ್ಯನನ್ನು ಪ್ರೇರೇಪಿಸುವ ಶಕ್ತಿ ಇದೆ ಎಂಬ ವಿಶ್ವಾಸ ಮತ್ತು ಅರಿವನ್ನು ನೀಡುವುದು ಅವರು ತಂದ ಸಂದೇಶ ಮತ್ತು ಶಿಕ್ಷಣಗಳ ಗುಣವೈಶಿಷ್ಟ್ಯವಾಗಿದೆ. ಅಂದರೆ ಮನುಷ್ಯನು ಮಾಡುವ ಪ್ರತಿಯೊಂದು ಕರ್ಮಗಳನ್ನು ಸೃಷ್ಟಿಕರ್ತನು ವೀಕ್ಷಿಸುತ್ತಾನೆ. ಕರ್ಮಗಳು ಉತ್ತಮವಾದುದೇ ಅಥವಾ ಕೆಟ್ಟ ಕರ್ಮಗಳನ್ನು ಮಾಡುತ್ತಾನೆಯೇ ಅವನು ಸೃಷ್ಟಿಕರ್ತನಿಗೆ ವಿಧೇಯನಾಗಿರುವನೇ ಅಥವಾ ನಿರ್ಲಕ್ಷ್ಯವಹಿಸುತ್ತಾನೆಯೇ? ಮನುಷ್ಯನ ಸಂಕಲ್ಪಗಳನ್ನು ಸೃಷ್ಟಿಕರ್ತನು ಅರಿಯುವನು. ಆತನ ಕರ್ಮಗಳು ತೋರಿಕೆಗಾಗಿವೆಯೋ ಅಥವಾ ಸೃಷ್ಟಿಕರ್ತನ ಸಂಪ್ರೀತಿ ಗಳಿಸುವ ಉದ್ದೇಶದಿಂದಿರುವುದೇ. ಸೃಷ್ಟಿಕರ್ತನ ಶಿಕ್ಷೆಯ ಭಯದಿಂದ ಅಥವಾ ಸಮಾಜಕ್ಕೆ ಹೆದರಿ ಆತ ಕರ್ಮಗಳನ್ನೆಸುಗುವನೇ ಎಂಬುದೆಲ್ಲವೂ ಸೃಷ್ಟಿಕರ್ತನ ವೀಕ್ಷಣೆಯಲ್ಲಿವೆ. ಇದು ಮುಹಮ್ಮದ್‌ರು(ಸ) ತಂದ ಬೋಧನೆ ಮತ್ತು ಸಂದೇಶದ ಗುಣವೈಶಿಷ್ಟ್ಯವಾಗಿದೆ.

ಇನ್ನೊಂದು ಕಡೆ, ಕರ್ಮಗಳು ಬಹಿರಂಗಗೊಳ್ಳುವ ಲೋಕಾವಸಾನದ ದಿನದಂದು ಇಹಲೋಕ ಜೀವನದ ಪ್ರತಿಯೊಂದು ಕರ್ಮಗಳ ಬಗ್ಗೆ ಸೃಷ್ಟಿಕರ್ತನ ಮುಂದೆ ಉತ್ತರಿಸಲಿಕ್ಕಿದೆ. ಉತ್ತಮ ಕರ್ಮ ಮಾಡಿದವರಿಗೆ ಶಾಸ್ವತ ಸ್ವರ್ಗವೂ ಕೆಟ್ಟ ಕರ್ಮಗಳನ್ನು ಮಾಡಿದವರಿಗೆ ಶಾಸ್ವತ ನರಕಗಳ ಪ್ರತಿಫಲವಿದೆ ಎಂಬ ವಿಶ್ವಾಸವನ್ನು ಮೂಡಿಸುವ ಮೂಲಕ ಜನರಲ್ಲಿ ಪ್ರವಾದಿಯವರ(ಸ) ಬೋಧನೆಯು ಸರಿಯಾದ ಕರ್ಮವನ್ನು ಸರಿಯಾದ ರೀತಿಯಲ್ಲಿ ಮಾಡಿಸುತ್ತದೆ.

ಈ ಸಂದೇಶದ ಮೂಲಕ ಮುಹಮ್ಮದ್‌ರು(ಸ) ಉತ್ತಮ ಮನುಷ್ಯರನ್ನು ರೂಪಿಸಲು ಯಶಸ್ವಿಯಾದರು ಎಂದು ಇತಿಹಾಸವು ದಾಖಲಿಸಿದೆ. ಸಂದೇಶ ಮತ್ತು ಪ್ರವಾದಿಯವರಲ್ಲಿ ವಿಶ್ವಾಸವಿರಿಸಿದ ಜನರು ಮನುಷ್ಯತ್ವದ ಉನ್ನತ ಸ್ಥಾನದಲ್ಲಿ ವಿರಾಜಮಾನರಾದುದು ಪ್ರವಾದಿಯ ಸತ್ಯಸಂಧತೆಗೆ ಪ್ರಮಾಣವೂ ಆಗಿದೆ.

ವಿಶ್ವಾಸ ತಂದವರ ಮೇಲೆ ಎಸಗಲ್ಪಟ್ಟ ದಬ್ಬಾಳಿಕೆಗಳೇ ಪ್ರವಾದಿ ಮುಹಮ್ಮದರು(ಸ) ಸತ್ಯಸಂಧರು ಎಂಬುದನ್ನು ಘೋಷಿಸುತ್ತದೆ: ವಿಶ್ವಾಸ ತಂದವರ ಮೇಲೆ ವಿಶ್ವಾಸ ಇರಿಸಲು ನಿರಾಕರಿಸಿದ ವಿರೋಧಿಗಳು ದೌರ್ಜನ್ಯ, ಹಿಂಸೆಗಳನ್ನು ಎಸಗುತ್ತಿದ್ದರು. ತಮ್ಮ ಭೌತಿಕ ಸ್ವಾರ್ಥಕ್ಕೆ ಮತ್ತು ತಮ್ಮ ಆಧ್ಯಾತ್ಮಿಕತೆಯ ಅಸ್ತಿತ್ವ ಉಳಿವಿಗಾಗಿ ಅಥವಾ ಪೂರ್ವಜರ ಧರ್ಮದ ಮೇಲೆ ಅವರಿಗಿದ್ದ ಪ್ರೀತಿಯಿಂದಾಗಿ. ಹಾಗೂ ಸರದಾರರು ಜನರು ತಮ್ಮ ಅಧೀನದಲ್ಲಿ ಉಳಿಯಬೇಕೆಂದು ಬಯಸುತ್ತಿದ್ದುದರಿಂದ ವಿಶ್ವಾಸ ಇರಿಸಿದ ಜನರ ಮೇಲೆ ಕ್ರೌರ್ಯಕ್ಕಿಳಿಯುತ್ತಿದ್ದರು. ಈ ರೀತಿ ವಿಶ್ವಾಸಿಗಳ ಮೇಲೆ

ನಡೆಯುತ್ತಿದ್ದ ಹಿಂಸೆ–ದೌರ್ಜನ್ಯಗಳೆಲ್ಲವೂ ಸಂಪೂರ್ಣವಾಗಿ ಸಮಾಜದ ಮುಂದೆಯೇ ನಡೆಯುತ್ತಿತ್ತು. ಇವೆಲ್ಲವೂ ಸ್ಪಷ್ಟ ಕ್ರೌರ್ಯವಾಗಿದೆ ಎಂದು ಜನರಿಗೆ ಅರಿವಾಗುತ್ತಿತ್ತು. ಮುಸ್ಲಿಮರು ಹಿಂಸೆಗೊಳಗಾಗುತ್ತಿದ್ದುದು ಪೂರ್ವಜರ ದೇವ ಸಹಭಾಗಿತ್ವ ಪರಿಕಲ್ಪನೆ ಯಲ್ಲಿದ್ದ ಅವರ ಪೂರ್ವ ಧರ್ಮವನ್ನು ತೊರೆದು ಏಕದೇವತ್ವದ ಶಿಕ್ಷಣಗಳನ್ನೊಳಗೊಂಡ ಏಕದೇವತ್ವದ ಧರ್ಮವನ್ನು ಸ್ವೀಕರಿಸಿದ್ದು ತಪ್ಪಾಗಿತ್ತು. ಇದುವೇ ವಿರೋಧಿಗಳ ಹಿಂಸೆ ದೌರ್ಜನ್ಯಗಳಿಗೆ ಕಾರಣವಾಗಿತ್ತು. ತೌಹೀದ್ (ಏಕದೇವತ್ವ) ವಿಶ್ವಾಸದಂತೆ ಒಂದೇ ಅಸ್ತಿತ್ವದಲ್ಲಿ ಸಕಲ ದೈವಿಕ ಗುಣವೈಶಿಷ್ಟ್ಯಗಳು ಅಡಕವಾಗಿತ್ತು. ಆ ಏಕ ಅಸ್ತಿತ್ವಕ್ಕೆ ಸಾಷ್ಟಾಂಗ, ವಿಧೇಯತೆಗಳು ಸಲ್ಲುತ್ತವೆ. ಅದು ಆ ಏಕೈಕ ಅಸ್ತಿತ್ವದ ಹಕ್ಕಾಗಿತ್ತು. ಭರವಸೆ, ನಿರೀಕ್ಷೆ, ಪ್ರಾರ್ಥಿಸುವುದು, ಪ್ರೀತಿಸುವುದೆಲ್ಲವೂ ಆ ಏಕೈಕ ಅಸ್ತಿತ್ವಕ್ಕೆ ಮಾತ್ರ ಸೀಮಿತವಾಗಿ ಸಲ್ಲಲ್ಪಡುವುದಾಗಿದೆ.

ಪ್ರತಿಯೊಬ್ಬ ವ್ಯಕ್ತಿಗೂ ತನಗೆ ಯಾವ ಧರ್ಮ ಉತ್ತಮ, ಉಪಯುಕ್ತ ಮತ್ತು ಸರಿಯಾದುದು ಎಂದು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮತ್ತು ಹಕ್ಕಿದೆ. ಕ್ರೌರ್ಯವು ಈ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುತ್ತದೆ. ಈ ಹಕ್ಕುಗಳನ್ನು ಉಪಯೋಗಿಸ ಲಾಗದಂತೆ ಯಾರನ್ನೂ ತಡೆಯು ವುದು ಅಕ್ರಮವಾಗಿದೆ ಮತ್ತು ಯಾರದೇ ಮೇಲೆ ಮಾನಸಿಕ, ದೈಹಿಕವಾದ ಹಾಗೂ ಆರ್ಥಿಕ, ಸಾಮಾಜಿಕವಾದ ಸಂಕಷ್ಟಗಳನ್ನೊಡ್ಡುವುದು ಎಲ್ಲವೂ ಬಹುದೊಡ್ಡ ಕ್ರೌರ್ಯವಾಗಿದೆ.

ಹೀಗೆ, ಸ್ಪಷ್ಟವೂ ಪಾರದರ್ಶಕವೂ ಆದ ತೌಹೀದಿ (ಏಕದೇವತ್ವ) ಧರ್ಮದ ಮೇಲೆ ವಿಶ್ವಾಸ ಇರಿಸಿದವರ ಮೇಲೆ ಅಕಾರಣವಾಗಿ ಸತ್ಯನಿಷೇಧಿಗಳು ನಡೆಸುತ್ತಿರುವ ಕ್ರೌರ್ಯಗಳೆಲ್ಲವೂ ಸಮಾಜದೊಳಗಿದ್ದ ಗಂಭೀರವೂ ಮತ್ತು ಸಂವೇದನಾಶೀಲರೂ ಆದ ಜನರಲ್ಲಿ ಆ ಧರ್ಮದ ಬಗ್ಗೆ ಆಸಕ್ತಿ ಹುಟ್ಟಲು ಕಾರಣವಾಯಿತು. ಅವರು ಈ ಧರ್ಮದಲ್ಲಿ ಮನುಷ್ಯನ ಉನ್ನತಿಯಿದೆ ಮತ್ತು ಮನುಷ್ಯತ್ವವನ್ನು ಉನ್ನತ ಸ್ಥಿತಿಗೆ ತಲುಪಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ಮನಗಂಡರು. ಯಾಕೆಂದರೆ ಈ ಗುಣಗಳು ಅವರ ಇತರ ದೈವಿಕ, ಧಾರ್ಮಿಕ ಪರಿಕಲ್ಪನೆಗಳಿಗಿರಲಿಲ್ಲ ಮತ್ತು ಅವು ಮನುಷ್ಯನನ್ನು ಮನುಷ್ಯತ್ವದಿಂದ ಕೆಳಗೆ ಕುಸಿಯುವಂತೆ ಮಾಡುತ್ತಿತ್ತು. ಅದು ಕ್ರೌರ್ಯ, ಬರ್ಬರತೆ, ಮೃಗೀಯತೆಯೆಡೆಗೆ ತಲುಪಿಸುತ್ತಿತ್ತು.

ಅದೇ ವೇಳೆ, ಪ್ರವಾದಿ ಮತ್ತು ಪ್ರವಾದಿ ತಂದ ಸಂದೇಶವು ಹಗಲು ಬೆಳಕಿನಷ್ಟು ಸ್ಪಷ್ಟವಾಗಿ ಈ ಜನರ ಮುಂದಿದೆ. ಜೊತೆಗೆ ಅದನ್ನು ಸ್ವೀಕರಿಸಿ ವಿಶ್ವಾಸ ಇಟ್ಟವರ ಸ್ಪಷ್ಟವೂ ಪಾರದರ್ಶಕವಾದ ಜೀವನವೂ ಅವರ ಮುಂದಿತ್ತು. ಜೊತೆಗೆ ಈ ಅಮಾಯಕ ವಿಶ್ವಾಸಿಗಳ ಮೇಲೆ ದೌರ್ಜನ್ಯ ನಡೆದಾಗ ಈ ವಿಶ್ವಾಸಿ ವರ್ಗ

ವಹಿಸುತ್ತಿದ್ದ. ಸಹನೆ, ಪರಿಶ್ರಮ; ಮುಂದೆ ಪ್ರವಾದಿ ಮತ್ತು ಪ್ರವಾದಿಯ ಶಿಕ್ಷಣದ ಸತ್ಯಸಂಧತೆ ಸ್ಪಷ್ಟವಾಗಿ ಇವೆಲ್ಲವೂ ಹಗಲು ಬೆಳಕಿನಂತೆ ಸಮಾಜದಲ್ಲಿ ಸಾದರಪಡಿಸುವ ಮೂಲಕ ಪ್ರಶಂಸೆಗೆ ಪಾತ್ರವಾಯಿತು.

ಇನ್ನು ವಿಶ್ವಾಸಿಗಳು ಇಂತಹ ಕಠಿಣ ಶಿಕ್ಷೆಯನ್ನು ಸಹಿಸಿಯೂ ಪ್ರವಾದಿಯವರು(ಸ) ತಂದಿರುವ ಸಂದೇಶದಲ್ಲಿ ದೃಢವಾಗಿರುವುದು ಮನುಷ್ಯರ ಹೊರ ಕಣ್ಣು ಮಾತ್ರವಲ್ಲ ಒಳಕಣ್ಣು ಕೂಡ ವೀಕ್ಷಿಸುತ್ತಿತ್ತು. ವಿಶ್ವಾಸಿಗಳು ತಮ್ಮ ನಿಲುವಿನಲ್ಲಿ ಗಟ್ಟಿಯಾಗಿದ್ದು ಮಾತ್ರವಲ್ಲ ಯಾವ ಜೀವತ್ಯಾಗಕ್ಕೂ ತಯಾರಿದ್ದರು. ಪ್ರವಾದಿ ಮುಹಮ್ಮದ್‌ರು(ಸ) ಸತ್ಯಸಂಧರು ಎಂಬುದಕ್ಕೂ ಅವರು ತಂದ ಸಂದೇಶ ಸತ್ಯವಾದುದು ಎಂಬುದಕ್ಕೂ ಆ ಸಂದೇಶ ಅಧಿಕೃತವೆಂದೂ ಮತ್ತು ಮುಹಮ್ಮದ್‌ರು ಪ್ರಪಂಚ ಸೃಷ್ಟಿಕರ್ತನ ಪ್ರವಾದಿ ಆಗಿದ್ದಾರೆ ಎಂಬುದಕ್ಕೂ ಸಾಕ್ಷ್ಯ ಇವೆ. ವಿರೋಧಿಗಳ ಕಟು ಕ್ರೌರ್ಯದ ನಡುವೆಯೇ ಜನರು ಸಹನೆ ಮತ್ತು ಪರಿಶ್ರಮಪಟ್ಟು ವಿಶ್ವಾಸ ಇರಿಸಿದ್ದಾರೆ. ಪ್ರವಾದಿ ಯವರ(ಸ) ಮತ್ತು ಅವರು ತಂದಿರುವ ಸಂದೇಶ, 'ಲಾ ಇಲಾಹ ಇಲ್ಲಲ್ಲಾಹ್'ನ ಸತ್ಯಸಂಧತೆಗೆ ಇವೆಲ್ಲವೂ ಬಹಿರಂಗ ಸಾಕ್ಷ್ಯವಾಗಿತ್ತು.

ಮುಹಮ್ಮದ್(ಸ)ರನ್ನು ಮತ್ತು ಅವರ ಸಂದೇಶವನ್ನು ವಿರೋಧಿಸುತ್ತಿದ್ದವರಿಗೂ ಇವರು ನಿಜವಾದ ಪ್ರವಾದಿಯಾಗಿದ್ದು, ಅವರು ತಂದ ಸಂದೇಶವು ಸೃಷ್ಟಿಕರ್ತನ ಸಂದೇಶವಾಗಿದೆ ಮತ್ತು ಆದ್ದರಿಂದಲೇ ಜನರು ಅದರ ಪ್ರಭಾವಕ್ಕೊಳಗಾಗುತ್ತಿದ್ದಾರೆ ಎಂದೂ ಗೊತ್ತಿತ್ತು.

ಒಂದೆಡೆ ಜನರು, ಪ್ರವಾದಿಯವರನ್ನು(ಸ) ಮತ್ತು ಅವರು ತಂದ ಸಂದೇಶವನ್ನು ಸ್ವೀಕರಿಸುತ್ತಾ ಹೋಗುತ್ತಿದ್ದಾರೆ ಆದರೆ ವಿರೋಧಿಗಳಲ್ಲಿ ಪ್ರವಾದಿ ಮತ್ತು ಅವರು ತಂದ ಸಂದೇಶವನ್ನು ಸುಳ್ಳು ಎಂದು ಸಾಬೀತು ಪಡಿಸಲು ಯಾವುದೇ ಬೌದ್ಧಿಕ ಪುರಾವೆ ಗಳಿರಲಿಲ್ಲ ಮತ್ತು ಕನಿಷ್ಠ ನೈತಿಕವಾಗಿ ವಿರೋಧಿಸಲಿಕ್ಕೂ ಅವರಲ್ಲಿ ಆ ನೈತಿಕತೆಗೆ ಸಾಕ್ಷ್ಯ ವಹಿಸುವಂತಹವು ಇರಲಿಲ್ಲ. ಆದ್ದರಿಂದ ವಿರೋಧಿಗಳು ಹಿಂಸೆ ಮತ್ತು ಬರ್ಬರತೆಯ ದಾರಿಯನ್ನು ಆಯ್ದುಕೊಂಡರು. ಪ್ರವಾದಿಯವರ(ಸ) ಮಾತು ಗಳಿಂದ ಮತ್ತು ಅವರು ನೀಡುವ ಸಂದೇಶ ಸ್ವೀಕರಿಸದಂತೆ ಜನರನ್ನು ತಡೆಹಿಡಿಯುವುದು ಮತ್ತು ಪುನಃ ತಮ್ಮ ಪೂರ್ವಜರ ಧರ್ಮದೆಡೆಗೆ ಮರಳುವಂತೆ ಮಾಡುವುದು. ಹೊಸದಾಗಿ ಜನರು ವಿಶ್ವಾಸ ಇರಿಸದಂತೆ ನೋಡಿಕೊಳ್ಳುವುದು ಅವರಿಗೆ ಬೇಕಿತ್ತು. ಇತಿಹಾಸದಲ್ಲಿ ದಾಖಲಾಗಿರುವ ಇದಕ್ಕಾಗಿ ಅವರು ಎಸಗಿದ ತೀವ್ರ ಹಿಂಸೆ, ದೌರ್ಜನ್ಯಗಳು ಮತ್ತು ಕ್ರೌರ್ಯಗಳನ್ನು ಅಧ್ಯಯನಿಸುವ ವೇಳೆ ಓದುಗನ ಮೈ ಜುಮ್ಮೆನ್ನುತ್ತದೆ ಮತ್ತು ಮನಸ್ಸು ಕರಗುತ್ತದೆ.

ಇಲ್ಲಿ ಓದುಗರಿಗೆ ತಿಳಿವಳಿಕೆಗಾಗಿ ಕೆಲವು ಘಟನೆಗಳನ್ನು ವಿವರಿಸಿದ್ದೇವೆ. ಇಂತಹ ಪ್ರಾಣ ಹಂತಕವಾದ ದೌರ್ಜನ್ಯಗಳು ನಡೆದ ನಂತರವೂ ಪ್ರವಾದಿಯಲ್ಲಿ(ಸ) ಪ್ರಥಮವಾಗಿ ವಿಶ್ವಾಸ ತಂದ ಜನರು ತಮ್ಮ ವಿಶ್ವಾಸವನ್ನು ತೊರೆಯಲಿಲ್ಲ. ಬದಲಾಗಿ ತಮ್ಮ ವಿಶ್ವಾಸದಲ್ಲಿ ಅಚಲವಾಗಿ ನಿಂತುದು ಪ್ರವಾದಿ ಮತ್ತು ಅವರು ತಂದಿರುವ ಸಂದೇಶವು ಸತ್ಯ ಎಂಬುದನ್ನು ಈ ಘಟನೆಗಳು ಸಾರುತ್ತದೆ. ಮತ್ತು ಸತ್ಯಸಂಧವಾದುದು ಎಂದು ಸಾಕ್ಷ್ಯವಹಿಸುತ್ತದೆ.

ಸತ್ಯದರಿವಿಗಾಗಿ ದೌರ್ಜನ್ಯಗಳ ಕೆಲವು ಘಟನೆಗಳು:

1) ಹಝ್ರತ್ ಬಿಲಾಲ್: ಹಝ್ರತ್ ಬಿಲಾಲ್ ಬಿನ್ ರಬಾಹ್ ಮಕ್ಕಾದಲ್ಲಿ ಗುಲಾಮರಾಗಿ ಜೀವನ ನಡೆಸುತ್ತಿದ್ದ ವ್ಯಕ್ತಿಯಾಗಿದ್ದರು. ಮೂಲತಃ ಹಬ್ಶೀ (ಅಬಿಸೀನಿಯ ಮೂಲದ ವ್ಯಕ್ತಿ) ಆಗಿದ್ದರು. ಒಬ್ಬನೇ ಸೃಷ್ಟಿಕರ್ತ, ಒಡೆಯ, ಆಡಳಿತಗಾರ ಮತ್ತು ಪ್ರಭು ಎಲ್ಲವೂ ಅವನೊಬ್ಬನೇ ಆಗಿರುವನೆಂದು ಪ್ರವಾದಿವರ್ಯರು(ಸ) ಕರೆ ನೀಡುತ್ತಿದ್ದುದು ಅವರ ಕಿವಿಗೂ ಬಿತ್ತು. ಪ್ರವಾದಿಯ(ಸ) ಮಾತುಗಳು ತನ್ನ ಹೃದಯದ ಅಂತರಾಳದಲ್ಲಿರುವ ಧ್ವನಿಯಂತೆ ಬಿಲಾಲ್‌ರಿಗೆ ಅನಿಸಿತು. ಆದುದರಿಂದ ಅವರು ಕುರೈಶಿಗಳಲ್ಲಿ ರೂಢಿಯಲ್ಲಿದ್ದ ಸಕಲ ವಿಗ್ರಹಗಳ ಆರಾಧನೆಯನ್ನು ತೊರೆದರು. ಅವರನ್ನು ಇದಕ್ಕಾಗಿ ಕುರೈಶಿಗಳು ಕಠಿಣವಾಗಿ ಹಿಂಸಿಸಿದರು. ತನಗೆ ನೀಡಲಾಗುತ್ತಿದ್ದ ಈ ಹಿಂಸೆಯ ವೇಳೆ ಬಿಲಾಲ್ 'ಅಹದ್, ಅಹದ್' (ಏಕನು, ಏಕನು) ಎಂದೇ ಹೇಳಿದರು. ಎಂತಹ ಶಿಕ್ಷೆಯನ್ನು ಅವರಿಗೆ ನೀಡಲಾಗುತ್ತಿತ್ತೆಂದರೆ ಅವರನ್ನು ಮಧ್ಯಾಹ್ನದ ಸುಡು ಬಿಸಿಲಿಗೆ ಮಕ್ಕಾದ ಬಿಸಿಯಾದ ಮರಳಿನ ಮೇಲೆ ಮಲಗಿಸಲಾಗುತ್ತಿತ್ತು. ನಂತರ ಅವರ ಎದೆಯ ಮೇಲೆ ಭಾರವಾದ ಕಲ್ಲನ್ನು ಇರಿಸಲಾಗುತ್ತಿತ್ತು. ಇನ್ನೊಂದು ದಿನ ಬೇರೆ ರೀತಿಯ ಶಿಕ್ಷೆ ಅವರಿಗೆ ನೀಡಲಾಗುತ್ತಿತ್ತು. ಅವರ ಕೊರಳಿಗೆ ಹಗ್ಗ ಕಟ್ಟಿ ಊರಿನ ಪಡ್ಡೆ ಹುಡಗರ ಕೈಗೆ ನೀಡಲಾಯಿತು. ಈ ಹುಡುಗರು ಅವರ ಕೊರಳಿಗೆ ಕಟ್ಟಿದ ಹಗ್ಗವನ್ನು ಹಿಡಿದು ಎಳೆಯುತ್ತಾ ಮಕ್ಕಾದ ಕಣಿವೆಯಾದ್ಯಂತ ಸುತ್ತಾಡಿಸುತ್ತಿದ್ದರು. ಕುರೈಶಿಗಳು ನೀಡಿದ ಇಂತಹ ಶಿಕ್ಷೆಗಳಿಗೂ ಬಿಲಾಲ್ ಜಗ್ಗಲಿಲ್ಲ. ತಮ್ಮ ಏಕದೇವ ವಿಶ್ವಾಸದಿಂದ ವಿಚಲಿತರಾಗಲಿಲ್ಲ. ಮಾತ್ರವಲ್ಲ ಈ ಹಿಂಸೆಯ ವೇಳೆಯೂ ಅಹದ್, ಅಹದ್ ಎಂದು ಘೋಷಿಸಿದರು.

2) ಹಝ್ರತ್ ಅಮ್ಮಾರ್: ಹಝ್ರತ್ ಅಮ್ಮಾರ್‌ರ ತಂದೆ-ತಾಯಿ ಮತ್ತು ಅವರ ಚಿಕ್ಕಪ್ಪ ಸತ್ಯನಿಷೇಧಿಗಳಾದ ಕುರೈಶಿಗಳು ನೀಡಿದ ಕಠಿಣ ಹಿಂಸೆಗಳಿಗೆ ತುತ್ತಾಗಿ ಹುತಾತ್ಮರಾದರು. ಆದರೂ ಅವರು ತಾವು ಕಂಡುಕೊಂಡ ಮತ್ತು ಸತ್ಯವೆಂದು ನಂಬಿದ ಏಕದೇವ ವಿಶ್ವಾಸವನ್ನು ಎಂತಹ ಸನ್ನಿವೇಶದಲ್ಲಿಯೂ ತೊರೆಯಲಿಲ್ಲ.

ಸತ್ಯವಿಶ್ವಾಸ ಸ್ವೀಕರಿಸಿದವರ ಮೂಲಕ ಈ ರೀತಿ ಸತ್ಯದ ವಸ್ತುಸ್ಥಿತಿ ಬಹಿರಂಗಗೊಂಡಿತು. ಬೆಂಕಿ ಕೆಂಡದಿಂದ ಅಮ್ಮಾರ್‌ರಿಗೆ ಬರೆ ಎಳೆಯಲಾಯಿತು. ಅವರನ್ನು ನೀರಿನಲ್ಲಿ ಮುಳುಗಿಸಿದರು. ಈ ರೀತಿಯೆಲ್ಲ ಅವರನ್ನು ಕಠಿಣವಾಗಿ ಹಿಂಸಿಸಲಾಗಿತ್ತು.

3) ಹರ್‍ಬ್ರುತ್ ಖಬ್ಬಾಬ್: ಹರ್‍ಬ್ರುತ್ ಖಬ್ಬಾಬ್ ಬಿನ್ ಅರತ್ ಇರಾಕ್ ಮೂಲದ ವ್ಯಕ್ತಿಯಾಗಿದ್ದರು. ಅವರನ್ನು ಬಲವಂತವಾಗಿ ಹಿಡಿದು ತಂದು ಗುಲಾಮರನ್ನಾಗಿ ಮಾಡಲಾಗಿತ್ತು. ಕಮ್ಮಾರ ವೃತ್ತಿಯ ಇವರು ಖಡ್ಗಗಳನ್ನು ತಯಾರಿಸುತ್ತಿದ್ದರು. ಸತ್ಯ ನಿಷೇಧಿಗಳು ಕಬ್ಬಾಬ್ ಸತ್ಯವಿಶ್ವಾಸ ಸ್ವೀಕರಿಸಿದರೆಂಬ ಕಾರಣಕ್ಕಾಗಿ ಅವರ ದುಡಿಮೆಗೆ ಸಂಬಳ ಕೊಡಲಿಲ್ಲ. ಅವರನ್ನು ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿಸಿ ಕಿರುಕುಳ ನೀಡಿದರು. ಬೆಂಕಿಯ ಕೆಂಡದ ಮೇಲೆ ಇವರನ್ನು ಕೂರಿಸಲಾಗುತ್ತಿತ್ತು ಮತ್ತು ಅದರ ಮೇಲೆ ಅಂಗಾತ ಮಲಗಿಸಿ ಅವರ ಎದೆಯ ಮೇಲೆ ಭಾರವಾದ ಕಲ್ಲನ್ನು ಇಡಲಾಗುತ್ತಿತು. ದೇಹದ ಕೊಬ್ಬು ಕರಗಿ ಅಗ್ನಿ ಆರಿ ಹೋಗುವ ವರೆಗೂ ವಿರೋಧಿಗಳು ಹಿಂಸಿಸು ವುದನ್ನು ನಿಲ್ಲಿಸಲಿಲ್ಲ.

ಪ್ರವಾದಿ(ಸ) ಮತ್ತು ಪ್ರವಾದಿಯವರ ಸಂದೇಶ ಸ್ವೀಕರಿಸಿದ್ದಕ್ಕಾಗಿ ತಮ್ಮ ಮಕ್ಕಳನ್ನೇ ಆಹಾರ ಕೊಡದೆ ಕೆಲವರು ಉಪವಾಸಕ್ಕೆ ದೂಡಿದರು. ಕೊರಡೆ(ಚಾಟಿ)ಯಿಂದ ಹೊಡೆದರು. ಹೀಗೆ ಹೊಡೆದೂ ಹೊಡೆದೂ ದಣಿದರೆ ನಿಲ್ಲಿಸುತ್ತಿದ್ದರು. ಸ್ವಲ್ಪ ವಿರಾಮದ ಬಳಿಕ ಪುನಃ ಹೊಡೆಯುತ್ತಿದ್ದರು. ಕೆಲವರಂತೂ ಸ್ವಂತ ಮಕ್ಕಳ ತಲೆಗೆ ಬೆತ್ತದಿಂದ ಹೊಡೆಯುವುದು ಮತ್ತು ಆಯಾಸವಾದರೆ ನಿಲ್ಲಿಸಿ, ಪುನಃ ಹೊಡೆಯುತ್ತಿದ್ದರು. ಸತ್ಯವಿಶ್ವಾಸ ಸ್ವೀಕರಿಸಿದ ಒಂದೇ ಒಂದು ಕಾರಣಕ್ಕಾಗಿ ಈ ರೀತಿಯಾಗಿ ಹಿಂಸಿಸ ಲಾಗುತ್ತಿತ್ತು. ಅವರು ಎಂತಹ ದುಷ್ಟರೆಂದರೆ ಮಹಿಳೆಯರನ್ನು ಕೂಡ ಬಿಡಲಿಲ್ಲ, ದಾಸಿಯರ ಮೇಲೂ ಇದೇ ರೀತಿ ದೌರ್ಜನ್ಯ ಎಸಗಿದರು.

ಅದರೆ, ಈ ಎಲ್ಲ ಘೋರ ದೌರ್ಜನ್ಯಗಳು ಆ ಸಮಾಜದೊಳಗಿದ್ದ ವಿವೇಕ ವಂತರು ಮತ್ತು ಉತ್ತಮ ಸ್ವಭಾವದ ವ್ಯಕ್ತಿಗಳು ಜಾಗೃತರಾಗಲು ಕಾರಣವಾಯಿತು. ಸತ್ಯದ ಪ್ರಬಲಾವಸ್ಥೆ ಅವರಿಗೆ ಮನವರಿಕೆಯಾಗಿ ಅವರೂ ಸತ್ಯಸ್ವೀಕಾರ ಮಾಡಿದುದಲ್ಲದೆ ಕೆಲವು ಜನರು ಬಹಿರಂಗವಾಗಿ ಅದನ್ನು ಘೋಷಿಸಿದರು. ಇನ್ನು ಕೆಲವರು ತಾವು ವಿಶ್ವಾಸ ಸ್ವೀಕರಿಸಿರುವುದನ್ನು ಬಹಿರಂಗಪಡಿಸದೆ ಮನಸ್ಸಿನೊಳಗೆ ಬಚ್ಚಿಟ್ಟುಕೊಂಡರು.

ವಿರೋಧಿಗಳ ದೌರ್ಜನ್ಯದ ನಗ್ನ ನರ್ತನವು ಆ ಸಮಾಜದಲ್ಲಿ ಈ ರೀತಿ ದಮನಿತರ ಹಕ್ಕುಗಳನ್ನು ದೃಢಪಡಿಸಿತು ಮತ್ತು ಜನರಿಗೆ ಸತ್ಯದ ಸಂದೇಶವನ್ನು ನೀಡಿತು. ಈ ದಬ್ಬಾಳಿಕೆಯ ವಾತಾವರಣದಲ್ಲಿಯೇ ಸತ್ಯವನ್ನು ಮನಗಂಡವರು ಸತ್ಯಸ್ವೀಕಾರ ಮಾಡಿದರು. ಖಂಡಿತವಾಗಿಯೂ ಮನುಷ್ಯರಲ್ಲಿ ಗೌರವಾನ್ವಿತರು

ಪ್ರವಾದಿ ತಂದ ಸತ್ಯಕ್ಕೆ ಸಾಕ್ಷ್ಯವಹಿಸಿದರು. ಹೀಗೆ ಕೂಡ ಪ್ರವಾದಿಯವರ ಸಂದೇಶವು ಸಮಾಜದ ನಡುವೆ ಸತ್ಯವೆಂದು ಘೋಷಿಸಲ್ಪಟ್ಟಿತು. ಇವೆಲ್ಲವೂ ಒಂದು ವೇದಿಕೆಯಿಂದ ಸಾಕ್ಷಾತ್ಕರಗೊಳ್ಳಬಹುದಾದ ವಿಷಯವಾಗಿರಲಿಲ್ಲ. ಇದಂತೂ ಸೃಷ್ಟಿಕರ್ತನು ಮುಹಮ್ಮದ್‌ರನ್ನು(ಸ) ಪ್ರವಾದಿಯನ್ನಾಗಿ ಮಾಡಿದ್ದಾನೆಂಬ ಬಹಿರಂಗ ಘೋಷಣೆಯ ವಿಧಾನವಾಗಿತ್ತು.

ಪವಿತ್ರ ಕುರ್‌ಆನ್ ಸೃಷ್ಟಿಕರ್ತನ ವಚನ ಆಗಿರುವುದು ಅಸಾಮಾನ್ಯ ವಚನ ಎಂಬುದಕ್ಕೆ ಸಾಕ್ಷ್ಯವಾಗಿದೆ: ಹೃದಯ ಯಾವತ್ತೂ ಸತ್ಯವನ್ನು ಸತ್ಯವೆಂದೇ ಅಂಗೀಕರಿಸಿ ಸಾಕ್ಷ್ಯ ವಹಿಸುತ್ತದೆ. ಕೇವಲ ಹೃದಯ ಮಾತ್ರವಲ್ಲ ಕರ್ಮವು ಕೂಡ ಸತ್ಯವನ್ನೇ ಸಾಕ್ಷ್ಯ ವಹಿಸುವುದು. ಇದು ಯಾವುದೇ ತಟಸ್ಥ ವ್ಯಕ್ತಿಗಳ ವಿಷಯವಲ್ಲ, ಸತ್ಯನಿಷೇಧಿಗಳ ಹೃದಯ ಮತ್ತು ಕರ್ಮಗಳು ಕೂಡ ಸತ್ಯಕ್ಕೆ ಸಾಕ್ಷ್ಯವಹಿಸಿರುವುದನ್ನು ಕಾಣುತ್ತೇವೆ. ಆದರೆ ಮಾತ್ರ ಅವರು ಸತ್ಯವನ್ನು ಬಾಯಿಯಲ್ಲಿ ಸತ್ಯವೆನ್ನುವುದಿಲ್ಲ ಎಂದೂ ತಿಳಿದೆವು. ಇದಕ್ಕೆ ಸಂಬಂಧಿಸಿದ ಕೆಲವು ಘಟನೆಗಳು ಇತಿಹಾಸದಲ್ಲಿ ದಾಖಲಾಗಿವೆ. ಸತ್ಯವನ್ನು ಅವರು ಮನಗಂಡಿದ್ದರೂ ಅವರ ವಿರೊಧ ದಣಿವಿಲ್ಲದೆ ಮುಂದುವರಿಯುತ್ತದೆ. ಆದರೂ ಸತ್ಯ ಮನುಷ್ಯನನ್ನು ತನ್ನೆಡೆಗೆ ಖಂಡಿತ ಸೆಳೆಯುತ್ತದೆ. ಮನುಷ್ಯನ ಸ್ವಭಾವ, ಪ್ರಕೃತಿ ಸತ್ಯದೆಡೆಗೆ ಆಕರ್ಷಿತವಾಗುವುದಾಗಿದೆ. ಮನುಷ್ಯನು ಒಂದು ವೇಳೆ ತನ್ನ ಹಿತಾಸಕ್ತಿ ಉಳಿಸಿಕೊಳ್ಳುವ ಸಲುವಾಗಿ ಸತ್ಯವನ್ನು ನಿರಾಕರಿಸಿದರೂ ಅವನ ಅನುಚಿತ ಮತ್ತು ಅನ್ಯಾಯದ ಆಶೆಗಳ ಈಡೇರಿಕೆಗೆ ಅದು ಅಡಚಣೆಯಾಗಿಯೇ ನಿಲ್ಲುತ್ತದೆ.

ಮನುಷ್ಯನಿಗೆ ಮರಣಾನಂತರ ಪುನರುತ್ಥಾನ ಇದೆ. ಅವನು ಇಲ್ಲಿ ಮಾಡಿದ ಕರ್ಮಗಳಿಗೆ ಉತ್ತರಿಸಬೇಕಾಗುವುದು ಮತ್ತು ಅಂದು ನ್ಯಾಯದಾನ ನಡೆದು ಸತ್ಯವನ್ನು ನಿರಾಕರಿಸಿದವರಿಗೆ ನರಕದ ಶಿಕ್ಷೆ ಸಿಗುತ್ತದೆ ಎಂಬ ಮುನ್ನೆಚ್ಚರಿಕೆಯನ್ನು ಅದು ನೀಡುತ್ತದೆ. ಹೀಗೆ ಸತ್ಯದ ಮೇಲಿನ ಅಸತ್ಯದ ಪರದೆಯು ಸರಿದಿರುವುದು ಇತಿಹಾಸದಲ್ಲಿ ದಾಖಲಾಗಿರುವ ಕೆಲವು ಘಟನೆಗಳಿಂದ ಗುರುತಿಸಬಹುದು. ಇದಕ್ಕೆ ಸಂಬಂಧಿಸಿದಂತೆ ಇತಿಹಾಸದಿಂದಲೇ ಪ್ರವಾದಿ ಮುಹಮ್ಮದ್‌ರು(ಸ) ತಂದಿರುವ ವಚನವು ಸತ್ಯವಚನ ವೆಂದು ಮೂರು ವ್ಯಕ್ತಿಗಳ ಹೃದಯ ಮತ್ತು ಕರ್ಮ ಸಾಕ್ಷ್ಯ ವಹಿಸಿರುವುದನ್ನು ಅರಿತುಕೊಳ್ಳ ಬಹುದಾಗಿದೆ.

ಅದು, ಪ್ರವಾದಿವರ್ಯರ(ಸ) ಸಂದೇಶ ಪ್ರಚಾರದ ಆರಂಭದ ಕಾಲ. ಒಂದು ರಾತ್ರೆಯಲ್ಲಿ ಇಸ್ಲಾಮಿನ ಬದ್ಧಶತ್ರುಗಳಾದ ಅಬೂಜಹಲ್, ಅಬೂ ಸುಫಿಯಾನ್ ಮತ್ತು ಅಖ್ನಸ್ ಬಿನ್ ಶರೀಕ್ ತಮ್ಮ ತಮ್ಮ ಮನೆಗಳಿಂದ ಹೊರಟರು. ಪ್ರವಾದಿ(ಸ) ರಾತ್ರೆ ನಮಾಝ್ ನಿರ್ವಹಿಸುವಾಗ ಓದುವ ಪವಿತ್ರ ಕುರ್‌ಆನ್ ಆಲಿಸುವುದು ಅವರ ಉದ್ದೇಶವಾಗಿತ್ತು. ಪವಿತ್ರ ಕುರ್‌ಆನಿನ ಆಕರ್ಷಣೆ ಮತ್ತು ಅನುಗ್ರಹ ಅದು. ಮನೆ

ಯಿಂದ ಅವರನ್ನು ಸೆಳೆಯುತ್ತಿತ್ತು. ಹೀಗೆ ಮೂವರು ಹೊರಟು ಬಂದಿದ್ದರು. ಆದರೆ ಅವರು ಹೀಗೆ ಕುರ್‌ಆನ್ ಆಲಿಸಲು ಕದ್ದು ಮುಚ್ಚಿ ಬರುವುದು ಪರಸ್ಪರರಿಗೆ ಗೊತ್ತಿರಲಿಲ್ಲ. ಆದರೆ ಬೆಳಗಾಗುವ ವೇಳೆಯಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಭೇಟಿ ಆದರು ಮತ್ತು ತಮ್ಮ ವರ್ತನೆಗೆ ಪರಸ್ಪರ ಹಳಿದುಕೊಂಡರು. ಇನ್ನೊಮ್ಮೆ ಹೀಗೆ ಮಾಡುವುದಿಲ್ಲ ಎಂದು ಮಾತು ಕೊಟ್ಟರು. ಯಾಕೆಂದರೆ ಇವರು ಕದ್ದುಮುಚ್ಚಿ ಪವಿತ್ರ ಕುರ್‌ಆನ್ ಆಲಿಸುತ್ತಿರುವುದನ್ನು ಒಂದು ವೇಳೆ ಜನರು ನೋಡಿದರೆ ಜನರ ಹೃದಯಲ್ಲಿ ಇವರು ಹೀಗೇಕೆ ಮಾಡುತ್ತಾರೆ ಎಂಬ ಪ್ರಶ್ನೆ ಉದ್ಭವಿಸಬಹುದಾಗಿತ್ತು.

ಆದರೆ ಮಾರನೇ ದಿವಸವೂ ಮೂವರೂ ಪ್ರವಾದಿವರ್ಯರಿಂದ(ಸ) ಪವಿತ್ರ ಕುರ್‌ಆನ್ ಆಲಿಸುವ ಸಲುವಾಗಿ ಮನೆಯಿಂದ ಹೊರಟು ಬಂದರು ಮತ್ತು ಹಿಂದಿನ ದಿನದಂತೆ ಬೆಳಗಾದಾಗ ಪರಸ್ಪರ ನೋಡಿದರು. ಆಗಲೂ ಪರಸ್ಪರ ಹಳಿದುಕೊಂಡು ಇನ್ನೊಮ್ಮೆ ಹೀಗೆ ಮಾಡುವುದಿಲ್ಲ ಎಂದು ತೀರ್ಮಾನಿಸಿ ಹೊರಟು ಹೋದರು. ಆದರೆ ಮೂರನೆ ದಿನವೂ ಅದೇ ರೀತಿ ಹಿಂದಿನ ಎರಡು ದಿನಗಳು ನಡೆದಂತೆ ನಡೆಯಬೇಕೇ? ಪವಿತ್ರ ಕುರ್‌ಆನಿನ ಆಕರ್ಷಣೆ ಮತ್ತು ಅನುಗ್ರಹ ಅಂತಹದು. ಅವರು ಮೂವರೂ ಇನ್ನು ಹೀಗೆ ಮಾಡುವುದಿಲ್ಲ ಎಂದು ಹೇಳಿದ್ದನ್ನೇ ಮೂರನೇ ದಿನವೂ ಮಾಡಿದ್ದರು. ಅವರಿಗೆ ಪವಿತ್ರ ಕುರ್‌ಆನಿನ ಸೆಳೆತದಿಂದ ತಮ್ಮನ್ನು ತಡೆದಿರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಈ ಘಟನೆಯಿಂದ ತಿಳಿದು ಬರುವುದೇನೆಂದರೆ, ಪ್ರವಾದಿ ಮುಹಮ್ಮದ್‌ರು(ಸ) ಪಠಿಸುತ್ತಿದ್ದ ವಚನಗಳು ಅಸಾಧಾರಣ ವಚನವಾಗಿತ್ತು ಎಂದಾಗಿದೆ. ವಚನಗಳು ಏನು ಹೇಳುತ್ತಿದ್ದವೋ ಮುಹಮ್ಮದ್‌ರ(ಸ) ಸಂದೇಶ ಪ್ರಚಾರವೂ ಅದರಂತಿತ್ತು ಎಂದಾಗಿದೆ. ಯಾಕೆಂದರೆ ಅದು ಮನುಷ್ಯರಿಗಾಗಿರುವ ಸೃಷ್ಟಿಕರ್ತನ ವಚನ ಮತ್ತು ಸಂದೇಶವಾಗಿತ್ತೇ ಹೊರತು ಯಾವುದೇ ವ್ಯಕ್ತಿಯ ವಚನ ಅದಲ್ಲ. ಕಾರಣದಿಂದಲೇ ಪ್ರವಾದಿ ಮುಹಮ್ಮದ್‌ರನ್ನು(ಸ) ಹಗಲಲ್ಲಿ ನಿರಾಕರಿಸಿ ಕಿರುಕುಳ ಕೊಡುತ್ತಿದ್ದ ಅದೇ ಶತ್ರುಗಳು ರಾತ್ರೆ ವೇಳೆಯಲ್ಲಿ ಯಾರಿಗೂ ಗೊತ್ತಾಗದಂತೆ ಕದ್ದುಮುಚ್ಚಿ ಪವಿತ್ರ ಕುರ್‌ಆನ್‌ನ ಪಠಣವನ್ನು ಆಲಿಸುತ್ತಿದ್ದುದು ವಿಶೇಷವಾಗಿತ್ತು.

ಒಬ್ಬರೇನು? ಅಲ್ಲ, ಮೂವರು ಶತ್ರುಗಳು! ಪರಸ್ಪರರ ಮುಂದೆ ತಮ್ಮ ಗುಟ್ಟು ರಟ್ಟಾದಾಗ ಇನ್ನು ಹೀಗೆ ಮಾಡುವುದಿಲ್ಲ ಎಂದು ಪರಸ್ಪರ ಪಣ ತೊಟ್ಟರು. ಆದರೆ ಮರುದಿನವೂ ಸೂಜಿಗಲ್ಲಿನಂತೆ ಅವರನ್ನು ಪವಿತ್ರ ಕುರ್‌ಆನ್ ವಚನ ಸೆಳೆಯಿತು. ಮೂರು ಮೂರು ರಾತ್ರೆಗಳಲ್ಲಿ ಅವರು ಹೀಗೆ ಮಾಡಿದ್ದಾರೆ. ಗುಟ್ಟಾಗಿ ಅದನ್ನು ಆಲಿಸಲು ಮನೆಯಿಂದ ಹೊರಬಂದು ಪರಸ್ಪರ ಮುಂದೆ ಸಿಕ್ಕಿಬಿದ್ದಿದ್ದಾರೆ. ತಮ್ಮ

ತಮ್ಮ ಈ ಕೆಲಸದಲ್ಲಿ ಅವರಿಗೆ ಹೆದರಿಕೆ ಇತ್ತು. ಯಾಕೆಂದರೆ ತಾವು ರಾತ್ರೆಯ ಹೊತ್ತು ಕದ್ದು ಆಲಿಸುತ್ತಿದ್ದೇವೆಂದು ಜನರು ತಿಳಿದುಕೊಂಡರೆ ತಮ್ಮ ಮಾತು ಮತ್ತು ಪ್ರವಾದಿ(ಸ) ವಿರುದ್ಧ ಪ್ರಚಾರಗಳ್ಯಾವುದೂ ಜನರ ಮುಂದೆ ಪರಿಣಾಮಕಾರಿಯಾಗದು. ಜನರು ಬಹಳ ಬೇಗನೆ ಮುಹಮ್ಮದ್‌ರ(ಸ) ಹತ್ತಿರ ಬಂದಾರು ಮತ್ತು ಸತ್ಯ ಸಂದೇಶ ವನ್ನು ಸ್ವೀಕರಿಸುತ್ತಾ ಹೋದಾರು. ಆ ವಚನಗಳಿಗೆ ಅಂತಹ ಸ್ವಾದವಿದೆ. ವಚನಗಳಲ್ಲಿ ದಟ್ಟ ಆಕರ್ಷಣೆಯಿದೆ. ಜನರ ಹೃದಯವನ್ನು ಅದರ ಉನ್ನತ ಗುರಿಯು ಸ್ಪರ್ಶಿಸು ತ್ತದೆ. ಆದುದರಿಂದ ಆ ಮೂವರು ಹೆದರಿಕೊಂಡರು. ಹೀಗೆ ಸಂದೇಶದಲ್ಲಿಯೇ ಪ್ರವಾದಿಯವರು(ಸ) ತಂದಿರುವ ಸಂದೇಶ ಸತ್ಯ ಮತ್ತು ಅಧಿಕೃತವಾದುದು ಎಂಬ ಸಾಕ್ಷ್ಯವಿತ್ತು. ತಮ್ಮ ಜೀವನದಲ್ಲಿ ಮುಹಮ್ಮದ್‌ರು(ಸ) ಸತ್ಯಸಂಧರು ಮತ್ತು ವಿಶ್ವಸ್ಥ ರಾಗಿರುವಂತೆ ಅವರಿಗೆ ಅವತೀರ್ಣಗೊಂಡ ವಚನವು ಸತ್ಯ ಮತ್ತು ದೃಢವಾದುದು ಎಂದು ಪವಿತ್ರ ಕುರ್‌ಆನಿನ ಎಲ್ಲ ವಚನಗಳಲ್ಲಿಯೂ ಸಾಕ್ಷ್ಯವಿರುವುದನ್ನು ನಾವು ಗಮನಿಸಬಹುದಾಗಿದೆ.

ಸೃಷ್ಟಿಕರ್ತನ ವಚನಗಳು ಸತ್ಯ ಎಂಬುದಕ್ಕೆ ಸಾಕ್ಷ್ಯ ಮತ್ತು ಪುರಾವೆಗಳನ್ನು ಪ್ರಸ್ತುತಪಡಿಸುತ್ತದೆ.

1) ತಾಯಿ ಗರ್ಭದಲ್ಲಿ ಮಗುವಿನ ಬೆಳವಣಿಗೆ: ಇದಕ್ಕೆ ಸಂಬಂಧಿಸಿದಂತೆ ಮುಹಮ್ಮದ್‌ರು(ಸ) ತಂದಿರುವ ದೇವನ ಸಂದೇಶವು ಏನೆನ್ನುತ್ತದೆ, ಏನನ್ನು ಬಹಿರಂಗಪಡಿಸಿದೆ ನೋಡೋಣ–

"ನಾವು ಮಾನವನನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು. ಆನಂತರ ಆ ಹನಿಗೆ ಮಾಂಸ ಪಿಂಡದ ರೂಪ ಕೊಟ್ಟೆವು. ಬಳಿಕ ಮಾಂಸ ಪಿಂಡವನ್ನು ಮಾಂಸ ಖಂಡವನ್ನಾಗಿ ಮಾಡಿದೆವು. ಆ ಮೇಲೆ ಮಾಂಸ ಖಂಡವನ್ನು ಎಲುಬುಗಳಾಗಿ ಮಾಡಿದೆವು ತರುವಾಯ ಎಲುಬುಗಳ ಮೇಲೆ ಮಾಂಸ ತೊಡಿಸಿದೆವು. ಆ ಬಳಿಕ ಅದನ್ನೊಂದು ಬೇರೇಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು. ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ." (ಅಲ್ಮೂ಼ಅ್ಮಿನೂನ್: 12–14)

ಈ ರೀತಿಯಾಗಿ ಮನುಷ್ಯನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಅದಕ್ಕೆ ಒಂದು ವ್ಯವಸ್ಥೆಯಿದೆ ಎಂದು ಪ್ರವಾದಿ ಮುಹಮ್ಮದ್‌ರು(ಸ) ತಂದ ಸಂದೇಶವು ಬಹಿರಂಗ ಪಡಿಸುತ್ತಿದೆ.

ಮನುಷ್ಯನ ಜನನವು ತಾಯಿಯ ಗರ್ಭದಲ್ಲಿ ವಿವಿಧ ಹಂತಗಳನ್ನು ದಾಟುವ ಮೂಲಕ ಆಯಿತು. ಆ ಕಾಲದ ಜನರಿಗೆ ಅಪಚರಿತವಾಗಿದ್ದ ವಿಷಯವನ್ನು ಪವಿತ್ರ

ಕುರ್‌ಆನ್ ಮೂಲಕ ಪ್ರವಾದಿ(ಸ) ಬಹಿರಂಗಪಡಿಸಿದರು. ಅದು ವಿಜ್ಞಾನ ಪ್ರಗತಿ ಸಾಧಿಸಿದ ಕಾಲವಲ್ಲ. ತಾಯಿ ಗರ್ಭದಲ್ಲಿ ಮನುಷ್ಯ ಬೆಳವಣಿಗೆಯ ಕುರಿತು ಅಧ್ಯಯನ ನಡೆದಿರಲಿಲ್ಲ. ಜೊತೆಗೆ ಅಂತಹ ಅಧ್ಯಯನಕ್ಕೆ ಅಗತ್ಯವಾದ ವ್ಯವಸ್ಥೆ (ಸಲಕರಣೆಗಳು) ಇರಲಿಲ್ಲ. ತಾಯಿ ಗರ್ಭದಲ್ಲಿ ಮಗುವಿನ ಬೆಳವಣಿಗೆಯ ವಿವಧ ಹಂತಗಳು. ಅದರಲ್ಲಿ ಮಗುವಿನ ಬೆಳವಣಿಗೆ ಹಂತಹಂತವಾಗಿ ನಡೆಯುವ ಬೆಳವಣಿಗೆಗಳನ್ನು ವಿವರಿಸುವುದು ಒಬ್ಬ ಮುಹಮ್ಮದ್‌ರಂತಹ(ಸ) ಉಮ್ಮಿ ಅರ್ಥಾತ್ ಅನಕ್ಷಸ್ಥ ವ್ಯಕ್ತಿಗೆ ಅಸಾಧ್ಯ ಕಾರ್ಯವಾಗಿತ್ತು.

ಇದರಿಂದ ಒಂದು ಮಗುವಿನ ಬೆಳವಣಿಗೆಯ ಕುರಿತು ಅವರು(ಸ) ನೀಡಿದ ಈ ವಿವರಗಳು ಅವರ ಜ್ಞಾನದಿಂದಿರುವುದಲ್ಲ ಎಂದು ತಿಳಿದು ಬರುತ್ತದೆ. ಬದಲಾಗಿ ಮನುಷ್ಯನ್ನು ಸೃಷ್ಟಿಸಿದ ಸೃಷ್ಟಿಕರ್ತನ ಕಡೆಯಿಂದಿರುವುದು ಆಗಿದೆ ಎಂದು ತಿಳಿದು ಬರುತ್ತದೆ. ಈ ವಿವರಗಳು ಮತ್ತು ಜ್ಞಾನವನ್ನು ಸೃಷ್ಟಿಕರ್ತನ ಕಡೆಯಿಂದ ನೀಡಿದುದರಿಂದ ಅವರು(ಸ) ಗ್ರಂಥದ ಮೂಲಕ ಪ್ರಸ್ತುತಪಡಿಸುವ ಪ್ರತಿಯೊಂದು ವಚನಗಳು ಸೃಷ್ಟಿಕರ್ತನ ಕಡೆಯಿಂದಿರುವುದಾಗಿದೆ ಎಂದು ಸ್ಪಷ್ಟವಾಗುತ್ತದೆ. ಆದುದರಿಂದ ಇವೆಲ್ಲವೂ ಪ್ರವಾದಿ ಮುಹಮ್ಮದ್‌ರು(ಸ) ಸೃಷ್ಟಿಕರ್ತನು ಕಳುಹಿಸಿದ ಪ್ರವಾದಿ ಎನ್ನುವುದಕ್ಕೆ ಸಾಕ್ಷ್ಯವೂ ಆಗಿದೆ ಮತ್ತು ಅವರು ನೀಡುತ್ತಿರುವುದು ಸೃಷ್ಟಿಕರ್ತನ ಸಂದೇಶ. ಮನುಷ್ಯರ ಮುಂದೆ ಅವರು ಪ್ರಸ್ತುತಪಡಿಸುತ್ತಿರುವ ಎಲ್ಲವೂ ಅಧಿಕೃತವಾದ ದೈವಿಕ ಸಂದೇಶವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

2) ಸಮುದ್ರದಲ್ಲಿ ಪರಸ್ಪರ ಬೆರೆಯದ ಎರಡು ವಿಧದ ನೀರು ಅಧಿಕೃತ ಸಂದೇಶಕ್ಕೆ ಇನ್ನೊಂದು ಉದಾಹರಣೆಯಾಗಿದೆ: ಪ್ರವಾದಿ ಮುಹಮ್ಮದ್‌ರು(ಸ) ತಂದಿರುವ ಸಂದೇಶವು ಅಧಿಕೃತ ಎಂಬುದಕ್ಕೆ ಪುರಾವೆಯನ್ನು ಆ ಸಂದೇಶದಿಂದಲೇ ಅಥವಾ ಪವಿತ್ರ ಕುರ್‌ಆನ್‌ನಿಂದಲೇ ಪಡೆಯಬಹುದಾಗಿದೆ ಎಂಬುದು ವಿಶೇಷತೆಯಾಗಿದೆ. ಸಮುದ್ರದ ಮಧ್ಯದಲ್ಲಿರುವ ಸಿಹಿ ನೀರು ಮತ್ತು ಹೊರಗೆ ಇರುವ ನೀರಿಗೆ (ಉಪ್ಪು ನೀರು) ಪರಸ್ಪರ ಮಿಶ್ರಣಗೊಳ್ಳದೆ ಮತ್ತು ಸರಿಯಾಗಿ ಸಿಹಿ ನೀರಿನ ಅಂಶಗಳು ಮತ್ತು ಉಪ್ಪು ನೀರಿನ ಅಂಶಗಳು ಪ್ರತ್ಯೇಕವಾಗಿಯೇ ಸುರಕ್ಷಿತವಾಗಿರುವುದು ಜೊತೆಗೆ ಇದರಿಂದಾಗಿ ಕುಡಿಯಲು ನೀರನ್ನು ಪ್ರಯಾಣಿಕರು ಬಳಸಬಹುದೆಂದು ಪ್ರವಾದಿ ಮುಹಮ್ಮದ್‌ರು ಕುರ್‌ಆನಿನ ಮೂಲಕ ಪ್ರಸ್ತುತಪಡಿಸಿದರು.

ಮುಹಮ್ಮದ್‌ರು(ಸ) ಇದನ್ನು ಹೇಳಿದ ಸಂದರ್ಭದಲ್ಲಾಗಲಿ ಮತ್ತು ಅದರ ನಂತರವಾಗಲಿ ಮತ್ತು ಜೀವನದಲ್ಲೆಂದೂ ಸಮುದ್ರ ಯಾನವನ್ನು ನಡೆಸಿರಲಿಲ್ಲ. ಆದರೆ ಅವರು ಇದನ್ನು ಪವಿತ್ರ ಕುರ್‌ಆನಿನ ವಚನಗಳ ಮೂಲಕ ಜನರ ಮುಂದೆ

ಪ್ರಸ್ತುತಪಡಿಸಿದ್ದರು. ಅಂದಿನ ಅರಬ್ ಜನರಿಗೆ ಈ ಸತ್ಯಸಂಗತಿ ತಿಳಿದಿರಲಿಲ್ಲ. ಆದುದರಿಂದ ಮುಹಮ್ಮದ್‌ರು(ಸ) ಪ್ರಸ್ತುತಪಡಿಸಿದ ಈ ಸಂದೇಶದ ಮೂಲವು ಖಂಡಿತ ಆಲಿಮುಲ್ ಗೈಬ್ (ಅದೃಶ್ಯ ಜ್ಞಾನಿ) ಆಗಿರುವ ಪ್ರಪಂಚ ಸೃಷ್ಟಿಕರ್ತ ಆಗಿದ್ದಾನೆ. ಪ್ರವಾದಿ(ಸ) ಈ ಜ್ಞಾನವನ್ನು ಅವನು ನೀಡಿದ್ದಾನೆ ಎಂದು ಸ್ಪಷ್ಟವಾಗುತ್ತಿದೆ. ಅಂದರೆ ಈ ಅರಿವು ಪ್ರವಾದಿ ಮುಹಮ್ಮದರಿಗಿರಲಿಲ್ಲ(ಸ). ಪ್ರಪಂಚ ಸಾಮ್ರಾಟ ನೀಡಿದ ಜ್ಞಾನ ಅದಾಗಿತ್ತು.

ಪ್ರವಾದಿ ಮುಹಮ್ಮದ್‌ರು(ಸ) ತಂದಿರುವ ಸೃಷ್ಟಿಕರ್ತನ ಸಂದೇಶವು ವಾಸ್ತವಿಕತೆಯನ್ನು ಈ ರೀತಿ ವಿವರಿಸಿದೆ– "ಎರಡು ಸಮುದ್ರಗಳನ್ನು ಸೇರಿಸಿಟ್ಟಿರುವವನು ಅವನೇ. ಒಂದು ರುಚಿಕರವೂ ಸಿಹಿಯೂ ಆಗಿದೆ. ಇನ್ನೊಂದು ಉಪ್ಪೂ ಕಹಿಯೂ ಆಗಿದೆ. ಇವರೆಡರ ಮಧ್ಯೆ ಒಂದು ತೆರೆ ಇದೆ. ಅವು ಪರಸ್ಪರ ಬೆರೆಯದಂತೆ ಮಾಡುವ ಒಂದು ತಡೆ ಇದೆ." **(ಅಲ್ ಫುರ್ಕಾನ್: 53)**

"ಅವನು ಎರಡು ಸಮುದ್ರಗಳನ್ನು ಪರಸ್ಪರ ಒಟ್ಟು ಸೇರಲು ಬಿಟ್ಟನು. ಆದರೂ ಅವುಗಳ ನಡುವೆ ಒಂದು ಪರದೆ ಅಡ್ಡವಾಗಿದ್ದು ಅದನ್ನು ಅವು ಮೀರುವುದಿಲ್ಲ. ಯಕ್ಷಗಳೇ ಮತ್ತು ಮಾನವರೇ ನೀವಿನ್ನು ನಿಮ್ಮ ಪ್ರಭುವಿನ ಮಹಿಮೆಯ ಯಾವ ಯಾವ ಪವಾಡಗಳನ್ನು ಸುಳ್ಳಾಗಿಸುವಿರಿ." **(ಅರ್ರಹ್ಮಾನ್: 19–21)**

ಪ್ರವಾದಿ ಮುಹಮ್ಮದ್(ಸ) ಮತ್ತು ಅವರು ತಂದ ಸಂದೇಶದಲ್ಲಿ ಸಂತೃಪ್ತಿ

ನಮ್ಮ ಸುದೀರ್ಘವಾದ ಈ ಚರ್ಚೆಯಲ್ಲಿ ಈವರೆಗಿನ ವಿವರಣೆಯಿಂದ ಪ್ರವಾದಿ ಮುಹಮ್ಮದ್‌ರು(ಸ) ಓರ್ವ ನೈಜ ಪ್ರವಾದಿಯಾಗಿದ್ದಾರೆ ಮತ್ತು ಅಧಿಕೃತ ಪ್ರವಾದಿ ಆಗಿದ್ದಾರೆ. ಅವರು ತಂದಿರುವ ಸಂದೇಶವು ಸತ್ಯವಾದುದು ಮತ್ತು ಅಧಿಕೃತವಾದುದು ಎಂದು ನಮ್ಮ ಮುಂದೆ ದೃಢಪಡುತ್ತದೆ ಮತ್ತು ಪ್ರವಾದಿ ಮತ್ತು ಸಂದೇಶ ಇವೆರಡೂ ಸೃಷ್ಟಿಕರ್ತನಾದ ಪ್ರಪಂಚ ಸಾಮ್ರಾಟನ ಕಡೆಯಿಂದಿರುವುದು ಎಂದು ಸ್ಪಷ್ಟವಾಗುತ್ತದೆ. ಹೀಗಾಗಿ ಪ್ರವಾದಿಯ(ಸ) ವಚನಗಳು (ಹೇಳುವ ಮಾತುಗಳು) ಕೂಡ ಸೃಷ್ಟಿಕರ್ತನ ಅಧೀನದಿಂದ ಬಂದಿರುವ ಅಧಿಕೃತ ದೈವಿಕ ವಚನ ಗಳಾಗಿವೆ ಎಂದು ನಾವು ತೃಪ್ತರಾದೆವು.

ಈ ಸಂದೇಶವು ಸೃಷ್ಟಿಕರ್ತನಿಂದ ಅವನ ಸಂದೇಶವಾಹಕರ ಕಡೆಗೆ ಹೇಗೆ ತಲುಪಿತು ಮತ್ತು ಅದರ ಕೊಂಡಿ (ಲಿಂಕ್) ಯಾವುದಾಗಿತ್ತು ಎಂಬ ಕುರಿತು ಅರಿತುಕೊಳ್ಳೋಣ– ನಮಗೆ ಸುಲಭವಾಗಿ ಅಧಿಕೃತ ಗ್ರಂಥದಲ್ಲಿ ದೇವನ ಸಂದೇಶವು ಉಪಸ್ಥಿತವಿರುವುದರಿಂದ ಮನವರಿಕೆಯಾಗುತ್ತಿದೆ. ಪವಿತ್ರ ಕುರ್‌ಆನ್ ದೈವಿಕ

ಸಂದೇಶದ ಗ್ರಂಥವಾಗಿದೆ. ಅದನ್ನು ನಾವು ಓದಿದರೆ ಪ್ರವಾದಿ ಮುಹಮ್ಮದ್‌ರಿಗೆ(ಸ) ಸಂದೇಶವನ್ನು ಕಳುಹಿಸಲು ಸೃಷ್ಟಿಕರ್ತನು ಆಯ್ದುಕೊಂಡ ವಿಧಾನ ಕೂಡಾ ಅದರಿಂದಲೇ ತಿಳಿದು ಬರುತ್ತದೆ. ಯಾಕೆಂದರೆ ಸೃಷ್ಟಿಕರ್ತನು ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿಯೇ ಅದನ್ನು ಹೀಗೆ ವಿವರಿಸಿದ್ದಾನೆ–

"ನಿಮ್ಮ ಸಂಗಾತಿ ದಾರಿಗೆಡಲೂ ಇಲ್ಲ. ವಂಚಿಸಲ್ಪಡಲೂ ಇಲ್ಲ. ಅವರು ತಮ್ಮ ಸ್ವಚಿತ್ತದಿಂದ ನುಡಿಯುವುದಿಲ್ಲ. ಇದು ಅವರಿಗೆ ಅವತೀರ್ಣಗೊಳ್ಳುವಂತಹ ಒಂದು ದಿವ್ಯವಾಣಿ ಆಗಿದೆ. ಅವರಿಗೆ ಮಹಾಶಕ್ತಿಶಾಲಿಯಾದವನು ಕಲಿಸಿರುತ್ತಾನೆ. ಅವನು ಬಹಳ ಯುಕ್ತಿವಂತ. ಅವನು ಪ್ರತ್ಯಕ್ಷನಾದನು. ಅವನು ಉನ್ನತ ದಿಗಂತದಲ್ಲಿದ್ದಾಗ. ತರುವಾಯ ಅವನು ಹತ್ತಿರ ಬಂದನು ಮತ್ತು ಮೇಲೆ ತೇಲತೊಡಗಿದನು. ಎರಡು ಬಿಲ್ಲುಗಳಷ್ಟು ಅಥವಾ ಅದಕ್ಕಿಂತ ತುಸು ಕಡಿಮೆ ಅಂತರ ಇರುವ ತನಕ. ಆಗ ಅವನು ಅಲ್ಲಾಹನ ದಾಸನಿಗೆ ತಾನು ತಲುಪಿಸಬೇಕಾಗಿದ್ದ ದಿವ್ಯವಾಣಿಯನ್ನು ತಲುಪಿಸಿದನು. ಆ ಕಣ್ಣು ಯಾವುದನ್ನು ಕಂಡಿತೋ, ಮನಸ್ಸು ಅದಕ್ಕೆ ಸುಳ್ಳನ್ನು ಸೇರಿಸಲಿಲ್ಲ. ನೀವಿಗ ಅವರು ಕಣ್ಣಾರೆ ಕಾಣುತ್ತಿರುವಂತಹ ವಿಷಯದ ಬಗ್ಗೆ ಅವರ ಜೊತೆ ಜಗಳಾಡುತ್ತೀರಾ? ಇನ್ನೊಮ್ಮೆ ಅವರು, ಆತನು ಇಳಿಯುತ್ತಿರುವುದನ್ನು ಕಂಡರು." **(ಅನ್ನಜ್ಮ್: 2–13)**

ಪ್ರವಾದಿಯವರ(ಸ) ಮಾತುಗಳು ಅವರ ಸೃಷ್ಟಿಯಲ್ಲ ಬದಲಾಗಿ ಅವರ ಬಳಿಗೆ ವಹ್ಯ್ (ದಿವ್ಯ ಸಂದೇಶ) ಅವತೀರ್ಣವಾಗುತ್ತದೆ. ವಹ್ಯ್‌ನ ಮೂಲಕ ತಿಳಿಸಿಕೊಡುವುದನ್ನು ಅವರು ಮಾತನ್ನಾಡುತ್ತಾರೆ. ಆದುದರಿಂದ ಅದು ಅಪ್ಪಟ ಸತ್ಯಮಾತು. ಅವರು ತಮ್ಮ ಮಾತುಗಳ ರಚನಾಕಾರರೂ ಅಲ್ಲ, ಬರಹಗಾರರೂ ಅಲ್ಲ. ಪವಿತ್ರ ಕುರ್‌ಆನ್ ಗ್ರಂಥವನ್ನು ಓದುವಾಗಲೇ ಅದು ಮನುಷ್ಯರಚಿತ ಗ್ರಂಥವಲ್ಲ ಎಂದು ಸ್ಪಷ್ಟವಾಗುತ್ತದೆ. ಮನುಷ್ಯನು ರಚಿಸುವ ಗ್ರಂಥಕ್ಕೂ ದೈವಿಕ ಗ್ರಂಥಕ್ಕೂ ಆಕಾಶ–ಭೂಮಿಗಳಷ್ಟು ಅಂತರ ಗಳಿವೆ ಎಂದು ಗೊತ್ತಾಗುತ್ತದೆ.

ಮಾತ್ರವಲ್ಲ ಸ್ವಯಂ ಪ್ರವಾದಿರವರೇ(ಸ) ಈ ಗ್ರಂಥವನ್ನು (ಪವಿತ್ರ ಕುರ್‌ಆನ್) ಸೃಷ್ಟಿಕರ್ತನ ಗ್ರಂಥವಾಗಿದೆ ಇದು ತನ್ನ ಗ್ರಂಥವಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ ಅಂಬಿಯಾ ಅಧ್ಯಾಯದ ಏಳನೇ ವಚನದಲ್ಲಿ ಸಾದರಪಡಿಸುತ್ತದೆ. ಪ್ರವಾದಿ ಯವರ(ಸ) ಬಳಿಗೆ ಕಳುಹಿಸಿದ ಸಂದೇಶದ ಬಗ್ಗೆ ವಿವರಣೆಯು ದೊರೆಯುತ್ತದೆ.

"ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಮನುಷ್ಯರನ್ನೇ ಸಂದೇಶವಾಹಕರಾಗಿ ರವಾನಿಸಿದ್ದೆವು. ಅವರ ಮೇಲೆ ನಾವು ದಿವ್ಯವಾಣಿ ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ಗ್ರಂಥದವರೊಡನೆ ಕೇಳಿರಿ."

ಇದೇ ರೀತಿಯ ವಿವರಣೆ ಅನ್ನಹ್ಲ್ ಅಧ್ಯಾಯದಲ್ಲಿದೆ. ಗ್ರಂಥ ಅವತೀರ್ಣದ ಕುರಿತು ಅನ್ನಹ್ಲ್‌ನ 43, 44ನೆಯ ವಚನಗಳು ಹೀಗೆ ವಿವರಿಸುತ್ತದೆ–

"ಓ ಪೈಗಂಬರರೇ. ನಾವು ನಿಮಗಿಂತ ಮುಂಚೆಯೂ ಸಂದೇಶವಾಹಕರನ್ನು ಕಳುಹಿಸಿದಾಗಲೆಲ್ಲ ಪುರುಷರನ್ನೇ ಕಳುಹಿಸಿದ್ದೇವೆ. ನಾವು ಅವರಿಗೆ ನಮ್ಮ ಸಂದೇಶ ಗಳನ್ನು ಅವತೀರ್ಣಗೊಳಿಸುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ವಿದ್ವಾಂಸರೊಡನೆ ವಿಚಾರಿಸಿರಿ. ಗತ ಸಂದೇಶವಾಹಕರಿಗೂ ನಾವು ಪ್ರತ್ಯಕ್ಷ ಪ್ರಮಾಣಗಳನ್ನೂ ಗ್ರಂಥ ಗಳನ್ನೂ ಕೊಟ್ಟು ಕಳುಹಿಸಿದೆವು ಮತ್ತು ಈಗ ಈ ಸ್ಮರಣೆಯನ್ನು ನಿಮಗೆ ಅವತೀರ್ಣ ಗೊಳಿಸಿ, ನೀವು ಜನತೆಯ ಮುಂದೆ, ಅವರಿಗಾಗಿ ಅವತೀರ್ಣಗೊಳಿಸಲ್ಪಟ್ಟಿರುವ ಬೋಧನೆಯನ್ನು ವಿವರಿಸುವಂತೆಯೂ ಸ್ಪಷ್ಟೀಕರಿಸುವಂತೆಯೂ ಜನರು (ಸ್ವಯಂ) ವಿಚೇಚಿಸುವಂತೆಯೂ ಮಾಡಿದೆವು."

ಸಂದೇಶ ರವಾನೆಯ ದೈವಿಕ ವಿಧಾನದ ಅಂತಸ್ತು ಇದು. ರಾಜನೊಬ್ಬ ತನ್ನ ಸೇವಕರ ಮೂಲಕ ತನ್ನ ಆದೇಶಗಳನ್ನು ನಗರದ ಆಡಳಿತಾಧಿಕಾರಿಯ ಬಳಿಗೆ ಕಳುಹಿಸುವಂತೆ. ಇದೇ ರೀತಿ (ಹೋಲುವಂತೆ) ಸೃಷ್ಟಿಕರ್ತನು ತಾನು ಆಯ್ಕೆ ಮಾಡಿದ ಮನುಷ್ಯನಿಗೆ ತನ್ನ ಸಂದೇಶವನ್ನು ತಲುಪಿಸಲು ದೇವಚರನನ್ನು ನಿಯೋಜಿ ಸುತ್ತಾನೆ. ನಂತರ ಸೃಷ್ಟಿಕರ್ತನ ಮೂಲಕ ಆಯ್ಕೆಗೊಂಡ ವ್ಯಕ್ತಿ(ಪ್ರವಾದಿ)ಗೆ ಇತರ ಮನುಷ್ಯರಿಗೆ (ಸಕಲ ಜನರಿಗೆ) ಸಂದೇಶವನ್ನು ತಲುಪಿಸುವ ಹೊಣೆಗಾರಿಕೆಯನ್ನು ಸೃಷ್ಟಿಕರ್ತನೇ ವಹಿಸಿಕೊಡುತ್ತಾನೆ. ಇದುವೇ ದೇವನ ಆದೇಶ, ಸಂದೇಶಗಳನ್ನು ಪ್ರವಾದಿಯೆಡೆಗೆ ತಲುಪಿಸುವ ಸಹಜ ವಿಧಾನವಾಗಿದೆ.

ಈ ಪ್ರಕ್ರಿಯೆಯಲ್ಲಿ ಸೃಷ್ಟಿಕರ್ತನು ಆಯ್ದುಕೊಂಡ ವ್ಯಕ್ತಿಯಾಗಲಿ ಮತ್ತು ಅವರ ಬಳಿಗೆ ಸಂದೇಶವನ್ನು ತಂದ ದೇವಚರನಾಗಲಿ ಉನ್ನತರಲ್ಲ. ಯಾವ ಕಾರಣಕ್ಕೂ ಅವರು ಸೃಷಿಕರ್ತನ ದೇವತ್ವದಲ್ಲಿ ಭಾಗೀದಾರರಲ್ಲ ಅಥವಾ ಸೃಷ್ಟಿಕರ್ತನು ಆಯ್ಕೆ ಮಾಡಿದವರಲ್ಲದೆ ಇತರರು– ಸೃಷ್ಟಿಕರ್ತನ ಸಂದೇಶವನ್ನು ಮನುಷ್ಯರಿಗೆ ತಲುಪಿಸಲಾರರು. ಇವರಿಗಲ್ಲದೆ ಇನ್ನಾರಿಗೂ ಸಂದೇಶ ನೀಡಲು ಸಾಧ್ಯವಿಲ್ಲ ಮತ್ತು ಸೃಷ್ಟಿಕರ್ತನ ದೈವಿಕತೆಯಲ್ಲಿ ಯಾರೂ ಭಾಗಿದಾರರಿಲ್ಲ. ಸೃಷ್ಟಿಕರ್ತನಲ್ಲದೆ ಬೇರೆ ಯಾರೂ ಮನುಷ್ಯರ ಭೌತಿಕ ಅಗತ್ಯಕ್ಕೂ ಪ್ರಯೋಜನಕ್ಕೂ ಸಿಗಲಾರರು. ಅವನನ್ನೇ ಪ್ರಾರ್ಥಿಸ ಬೇಕು ತಮ್ಮ ಆವಶ್ಯಕತೆಗಳನ್ನು ಅವನದೇ ಮುಂದಿಡಬೇಕು.

"ಅಲ್ಲಾಹನು (ತನ್ನ ಆದೇಶಗಳನ್ನು ರವಾನಿಸಲಿಕ್ಕಾಗಿ) ದೇವಚರರಿಂದಲೂ ಮನುಷ್ಯರಿಂದಲೂ ಸಂದೇಶವಾಹಕರನ್ನು ಆಯ್ದುಕೊಳ್ಳುತ್ತಾನೆ. ಅವನು ಸರ್ವಶ್ರುತನೂ ಸರ್ವ ವೀಕ್ಷಕನೂ ಆಗಿರುತ್ತಾನೆ." (ಅಲ್ ಹಜ್ಜ್: 75)

ದೇವಚರರು ಅಲ್ಲಾಹನ ಸಂದೇಶವನ್ನು ಅಲ್ಲಾಹನಿಂದ ಪ್ರವಾದಿಯಾಗಿ ಆಯ್ಕೆ ಗೊಂಡ ವ್ಯಕ್ತಿಗೆ ತಲುಪಿಸುತ್ತಾರೆ. ಅಲ್ಲಾಹನು ಪ್ರವಾದಿಯಾಗಿ ನೇಮಕಗೊಳಿಸಿ ಜನರ ಕಡೆಗೆ ನಿಯೋಜಿಸಿದ ವ್ಯಕ್ತಿಗೆ ಅವರು ಸಂದೇಶ ತಲುಪಿಸುತ್ತಾರೆ. ಆ ನಂತರ ಪ್ರವಾದಿ ತನ್ನ ಮಾತು ಕೃತಿಗಳ ಮೂಲಕ ಅರ್ಥಾತ್ ಜೀವನ ಚರ್ಯೆ(ಕರ್ಮ)ಗಳ ಮೂಲಕ ದೇವನ ಸಂದೇಶವನ್ನು ದೇವನ ದಾಸರಿಗೆ (ಜನರಿಗೆ) ತಿಳಿಸಿ ವಿವರಿಸಿ ಮನವರಿಕೆ ಮಾಡಿಕೊಡುತ್ತಾರೆ.

ತನ್ನ ದಾಸರಿಗೆ ತನ್ನ ಸಂದೇಶವನ್ನು ತಲುಪಿಸುವುದಕ್ಕೂ ತನ್ನದೇ ವಿಧಾನವನ್ನು ಅಲ್ಲಾಹನೇ ಕೂಡ ಆಯ್ದುಕೊಂಡಿದ್ದಾನೆ ಜನರ ಬಳಿಗೆ ಸಂದೇಶ ತಲುಪಿಸಲು ತಾನು ಆಯ್ಕೆ ಮಾಡಿದ ದಾಸನಿಗೆ (ವ್ಯಕ್ತಿಗೆ) ವಹ್ಯ್ ಮೂಲಕ ತನ್ನ ಸಂದೇಶವನ್ನು ತಲುಪಿಸುವುದು ಆ ವಿಧಾನವಾಗಿದೆ. ಅವರ ಬಳಿಗೆ 'ವಹೀ'(ದಿವ್ಯವಾಣಿ)ಯನ್ನು ಅಲ್ಲಾಹನು ಆಯ್ದುಕೊಂಡ ದೇವಚರರವು ತರುತ್ತದೆ.

"ಮಹಾ ಪ್ರಬಲನೂ ಮಹಾಯುಕ್ತಿವಂತನೂ ಆಗಿರುವ ಅಲ್ಲಾಹನು ನಿಮ್ಮ ಕಡೆಗೂ ನಿಮಗಿಂತ ಮುಂಚೆ ಗತಿಸಿ ಹೋದವರ (ಸಂದೇಶವಾಹಕರ) ಕಡೆಗೂ ಇದೇ ರೀತಿಯಲ್ಲಿ ದಿವ್ಯವಾಣಿ ಕಳುಹಿಸುತ್ತಲಿದ್ದಾನೆ." (ಅಶ್ಶೂರ: 3)

"ಸಂದೇಶವಾಹಕರೇ, ಇದೇ ರೀತಿಯಲ್ಲಿ ಈ ಅರಬೀ ಕುರ್‌ಆನನ್ನು ನಾವು ನಿಮ್ಮ ಕಡೆಗೆ ದಿವ್ಯವಾಣಿ ಮಾಡಿರುತ್ತೇವೆ. (ಇದು) ನಾಡುಗಳ ಕೇಂದ್ರ (ಮಕ್ಕಾ ಪಟ್ಟಣ) ಹಾಗೂ ಅದರ ಸುತ್ತಮುತ್ತ ಇರುವವರನ್ನು ನೀವು ಎಚ್ಚರಿಸುವಂತಾಗಲು ಮತ್ತು ನಿಸ್ಸಂದೇಹವಾಗಿ ಬರಲಿರುವ, ಸಮಾವೇಶದ ದಿನದ ಬಗ್ಗೆ ಎಚ್ಚರಿಕೆ ನೀಡುವಂತಾಗಲು, ಒಂದು ಕೂಟವು ಸ್ವರ್ಗಕ್ಕೆ ಇನ್ನೊಂದು ಕೂಟವು ನರಕಕ್ಕೆ ಹೋಗಲಿಕ್ಕಿದೆ." (ಅಶ್ಶೂರ: 7)

ಮೇಲಿನ ವಚನಗಳಿಂದ ಪ್ರವಾದಿ ಮುಹಮ್ಮದ್(ಸ)ರಿಗೂ ಅಲ್ಲಾಹನು ಇತರ ಪ್ರವಾದಿಗಳಿಗೆ ಸಂದೇಶ ರವಾನಿಸಿದ ವಿಧಾನವನ್ನೇ ಆಯ್ಕೆ ಮಾಡಿದ್ದಾನೆ ಎಂದು ತಿಳಿದು ಬರುತ್ತದೆ.

ಇದೇ ವಚನಗಳ ಮೂಲಕ ಎಲ್ಲ ಮನುಷ್ಯರು ಪ್ರವಾದಿಯ ಮಾತುಗಳಲ್ಲಿ ವಿಶ್ವಾಸವಿರಿಸುವುದಿಲ್ಲ. ಕೆಲವರು ವಿಶ್ವಾಸವಿರಿಸುತ್ತಾರೆ ಎಂದು ತಿಳಿದು ಬರುತ್ತದೆ ಮತ್ತು ವಿಶ್ವಾವಿರಿಸಿದವರು ಸ್ವರ್ಗಕ್ಕೂ ಮತ್ತು ನಿರಾಕರಿಸುವವರು ನರಕಕ್ಕೂ ಹೋಗುವವರೆಂದು ತಿಳಿದು ಬರುತ್ತದೆ. ಆದುದರಿಂದ ಯಾರು ವಿಶ್ವಾಸವಿರಿಸದವರು ಅವರು ತಮ್ಮ ಭವಿಷ್ಯದ ಅವಸ್ಥೆಯ ಕುರಿತು ಯೋಚಿಸಬೇಕೆಂದು ವಚನಗಳು ಈ ಎಚ್ಚರಿಸುತ್ತಿದೆ.

ಪ್ರವಾದಿ(ಸ) ಪವಿತ್ರ ಕುರ್‌ಆನ್ ಮೂಲಕ ತನ್ನ ಪರಿಚಯವನ್ನು ಸ್ವಯಂ

ಮಾಡುವರು. ಅರ್ಥಾತ್ ಅವರೂ ಒಬ್ಬ ಮನುಷ್ಯ. ಅವರ ಬಳಿಗೆ ವಹ್ಯ್ (ದಿವ್ಯ ಸಂದೇಶ) ಬರುವುದು ವಿಶೇಷವಾಗಿದೆ. ಹೀಗೆ ಬರುವ ಆ ವ್ಯಹ್ಯ್ ಅವರಿಗೆ ಸೃಷ್ಟಿಕರ್ತ ಮತ್ತು ಆರಾಧ್ಯ ಒಬ್ಬನೇ ಆಗಿರುವನೆಂದು ತಿಳಿಸುತ್ತದೆ.

"ಓ ಪೈಗಂಬರರೇ, ಹೇಳಿರಿ– ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ. ನಿಮ್ಮ ದೇವನು ಏಕ ಮಾತ್ರ ದೇವನೆಂದು ನನ್ನ ಕಡೆಗೆ ದಿವ್ಯವಾಣಿ ಮಾಡಲಾಗುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ." (ಅಲ್ ಕಹ್ಫ್: 11)

ಈ ವಚನಗಳು ಪ್ರವಾದಿ ಕೂಡ ಮನುಷ್ಯರೇ ಆಗಿದ್ದಾರೆ, ಅವರ ಬಳಿಗೆ ವಹ್ಯ್ ಮಾಡಲಾಗುತ್ತದೆ ಎಂದು ತಿಳಿಸುತ್ತಿದೆ. ಅಂದರೆ ಆ ಮೂಲಕ ಅವರಿಗೆ ಒಂದು ಹೊಣೆಗಾರಿಕೆಯನ್ನು ವಹಿಸಿಕೊಡಲಾಗುತ್ತಿದೆ. ತನ್ನ ದಾಸನನ್ನು ಅಲ್ಲಾಹನು ನೇರವಾಗಿ ಅಭಿಸಂಬೋಧಿಸುವುದಿಲ್ಲ. ಅದಕ್ಕೆ ಬದಲಾಗಿ ಅವನು ಆಯ್ಕೆ ಮಾಡಿಕೊಂಡಿರುವ ಸಂದೇಶ ರವಾನೆಯ ಇನ್ನೊಂದು ವಿಧಾನದಲ್ಲಿ ಯುಕ್ತಿ ಅಡಗಿದೆ.

ಸಂದೇಶ ರವಾನೆಯ ಮೂರು ವಿವಿಧ ವಿಧಾನಗಳನ್ನು ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ವಿವರಿಸಿದ್ದಾನೆ– "ಯಾವ ದಾಸನೂ ಅಲ್ಲಾಹನು ಅವನ ಜೊತೆ ಮುಖಾಮುಖಿ ಮಾತನಾಡುವಷ್ಟು ಸ್ಥಾನಮಾನವುಳ್ಳವನಲ್ಲ. ಅವನ ಮಾತು ವಹ್ಯ್‌ನ (ಸೂಚನೆ) ರೂಪದಲ್ಲಿರುತ್ತದೆ ಅಥವಾ ತೆರೆಯಮರೆಯಿಂದಾಗಿರುತ್ತದೆ ಅಥವಾ ಅವನು ಯಾರಾದರೂ ದೂತ (ದೇವಚರ)ನನ್ನು ಕಳುಹಿಸುತ್ತಾನೆ ಮತ್ತು ಆ ದೂತನು ಅವನ ಆದೇಶದಂತೆ ಅವನು ಬಯಸಿದ್ದನ್ನು ವಹ್ಯ್ ಮಾಡುತ್ತಾನೆ. ಅವನು ಮಹೋನ್ನತನೂ ಮಹಾಯುಕ್ತಿವಂತನೂ ಆಗಿರುತ್ತಾನೆ." (ಅಶ್ಶೂರ: 51)

ಹೀಗೆ ದಾಸರೊಂದಿಗೆ ಪ್ರವಾದಿಯ ಸಂಪರ್ಕದ ಕೊಂಡಿ ವಹ್ಯ್ ಆಗಿದೆ. ದೇವಚರರು ಪ್ರವಾದಿಗೆ ವಹ್ಯ್ ತರುತ್ತಾರೆ. ಯಾಕೆಂದರೆ ಸಂದೇಶವಾಹಕನು ಬಶರ್ (ಮನುಷ್ಯ) ಆಗಿರುವುದು ಕಾರಣವಾಗಿದೆ. ಪ್ರವಾದಿಯನ್ನು ಸೃಷ್ಟಿಕರ್ತನೂ ಒಡೆಯನೂ ವಿಶ್ವ ಸಾಮ್ರಾಟನೂ ಆಗಿರುವ ಅಲ್ಲಾಹನು ವಹ್ಯ್‌ನ ಮೂಲಕ ಅಥವಾ ತೆರೆಮರೆಯಿಂದ ರಹಸ್ಯ ವಿಧಾನದಲ್ಲಿ ಅಭಿಸಂಬೋಧಿಸುತ್ತಾನೆ.

ವಹ್ಯ್ ಸ್ವೀಕರಿಸುವ ಸಂದರ್ಭ:

ಹಿರಾ ಗುಹೆಯಲ್ಲಿ ಧ್ಯಾನಾಸಕ್ತರಾಗಿದ್ದ ಪ್ರವಾದಿ ಮುಹಮ್ಮದ್‌ರಿಗೆ(ಸ) ಮೊದಲ ಬಾರಿ ವಹ್ಯ್ ಅವತೀರ್ಣಗೊಂಡಾಗ ಅವರು ಹೆದರಿದರು. ವಹ್ಯ್‌ನೊಂದಿಗೆ ಬಂದ

ದೇವಚರ ಜಿಬ್ರೀಲ್‌ರನ್ನು ಪ್ರವಾದಿ ಮುಹಮ್ಮದ್‌ರು ನೋಡಿ ಹೆದರಿಕೊಂಡಿರುವುದನ್ನು ಇತಿಹಾಸವು ದಾಖಲಿಸಿದೆ. ಜಿಬ್ರೀಲ್‌ರು ಸೃಷ್ಟಿಕರ್ತನ ವಚನವನ್ನು ಮುಹಮ್ಮದ್‌ರಿಗೆ(ಸ) ಓದಿರಿ ಎಂದು ಹೇಳಿದರು. ಇದು ಮುಹಮ್ಮದ್‌ರಿಗೆ ಅವರ ಬಳಿಗೆ ವಹ್ಯ್ ತಲುಪಿದ ಪ್ರಥಮ ಸಂದರ್ಭವಾಗಿತ್ತು. ಪವಿತ್ರ ಕುರ್‌ಆನ್ ಅಲಕ್ ಅಧ್ಯಾಯದಲ್ಲಿ ವಹ್ಯ್ ಅವತೀರ್ಣಗೊಳ್ಳುವುದಕ್ಕೆ ಆರಂಭವಾದ ಸಂದರ್ಭದ ಐದು ವಚನಗಳಿವೆ.

ವಹ್ಯ್ ಅವತೀರ್ಣದಿಂದ ಹೆದರಿಕೊಂಡಿದ್ದ ಮುಹಮ್ಮದ್‌ರು(ಸ) ಹಿರಾ ಗುಹೆಯಿಂದ ನೇರವಾಗಿ ಮನೆಗೆ ಬಂದರು. ಪ್ರಾಣಭಯದಿಂದ ಕಂಪಿಸುತ್ತಿದ್ದ ಅವರು ತಮ್ಮ ಪತ್ನಿ ಖದೀಜಾರೊಡನೆ ನಡೆದ ಘಟನೆಗಳನ್ನು ವಿವರಿಸಿದರು. ತನಗೆ ಹೊದಿಕೆಯನ್ನು ಹೊದಿಸಲು ಹೇಳಿದರು. ಆವರೆಗೂ ವಹ್ಯ್ ಅವತೀರ್ಣಗೊಳ್ಳುವುದು ಹೇಗೆ ಎಂಬುದು ಮುಹಮ್ಮದ್‌ರಿಗೆ(ಸ) ಗೊತ್ತಿರಲಿಲ್ಲ. ವಹ್ಯ್ ಎಂದರೆ ಏನೆಂದು ಅವರಿಗೆ ತಿಳಿದಿಲ್ಲ ಮತ್ತು ಆ ಮೊದಲು ಎಂದೂ ದೇವಚರನನ್ನು ಅವರು ನೋಡಿಲ್ಲ. ಆದ್ದರಿಂದ ವಹ್ಯ್ ಅವರಿಗೆ ಅವತೀರ್ಣಗೊಳ್ಳುವುದು ಪ್ರಥಮ ಅನುಭವವಾಗಿತ್ತು. ಆ ವೇಳೆ ಹೀಗಾಗುವುದು ಸಹಜವಾಗಿತ್ತು.

ಆ ನಂತರ ಹೀಗೂ ಸಂಭವಿಸಿತ್ತು– ಆರಂಭಿಕ ಕಾಲದಲ್ಲಿ ಜಿಬ್ರೀಲ್‌ರು ಅಲ್ಲಾಹನ ದಿವ್ಯವಾಣಿಯನ್ನು ತಲುಪಿಸಿದಾಗ ತಾನು ಮರೆತು ಬಿಡಬಹುದೆಂದು ಪ್ರವಾದಿವರ್ಯರು(ಸ) ನೆನಪಿಟ್ಟುಕೊಳ್ಳುವ ಸಲುವಾಗಿ ಬೇಗಬೇಗನೆ ಉಚ್ಚರಿಸುತ್ತಿದ್ದರು. ಆಗ ಸೃಷ್ಟಿಕರ್ತನು ಪ್ರವಾದಿವರ್ಯರನ್ನು(ಸ) ನಿಮ್ಮಲ್ಲಿ ಸ್ಮರಣೆಯುಂಟು ಮಾಡುವುದು ಮತ್ತು ನಿಮಗೆ ಮನವರಿಕೆ ಮಾಡಿಕೊಡುವುದು ನಮ್ಮದೇ ಹೊಣೆಗಾರಿಕೆಯಾಗಿದೆ. ಆದ್ದರಿಂದ ನೀವು ಗಮನವಿಟ್ಟು ವಹ್ಯ್ ಅನ್ನು ಆಲಿಸಿರಿ ಎಂದು ಅಲ್ಲಾಹನು ಸಂತೈಸಿದನು. ಪವಿತ್ರ ಕುರ್‌ಆನ್ ಈ ಘಟನೆಯನ್ನು ಉದ್ಧರಿಸಿದೆ– "ಸಂದೇಶವಾಹಕರೇ, ಈ ದಿವ್ಯವಾಣಿಯನ್ನು ಬೇಗ ಬೇಗನೆ ಕಂಠಪಾಠ ಮಾಡಿಕೊಳ್ಳಲಿಕ್ಕಾಗಿ ನಿಮ್ಮ ನಾಲಗೆಯನ್ನು ಚಲಿಸಬೇಡರಿ. ಇದನ್ನು ಕಂಠಪಾಠ ಮಾಡಿಸುವ ಮತ್ತು ಓದಿಸುವ ಹೊಣೆ ನಮ್ಮ ಮೇಲಿದೆ. ಆದುದರಿಂದ ನಾವು ಇದನ್ನು ಓದುತ್ತಿರುವಾಗ ನೀವು ಇದರ ಪಠಣವನ್ನು ಗಮನವಿಟ್ಟು ಆಲಿಸುತ್ತಿರಿ. ಆನಂತರ ಇದರ ತಾತ್ಪರ್ಯವನ್ನು ವಿವರಿಸುವ ಹೊಣೆಯೂ ನಮ್ಮ ಮೇಲೆಯೇ ಇದೆ." **(ಅಲ್ ಕಿಯಾಮ: 16–19)**

ಇನ್ನು ಅಲ್ ಅಅ್‌ಲಾ ಅಧ್ಯಾಯದಲ್ಲಿ "ನಾವು ನಿಮಗೆ ಓದಿಸಿ ಬಿಡುವೆವು. ಆಮೇಲೆ ನೀವು ಮರೆತುಬಿಡಲಾರಿರಿ" ಎಂದೂ ಉದ್ಧರಿಸಲ್ಪಟ್ಟಿದೆ.

ಇನ್ನು ಇತಿಹಾಸದಲ್ಲಿ ಪವಿತ್ರ ಕುರ್‌ಆನ್ ಅವತೀರ್ಣಗೊಳ್ಳುವ ಸಂದರ್ಭದಲ್ಲಿ ವ್ಯಕ್ತವಾಗುತ್ತಿದ್ದ ಕುರುಹುಗಳ ಕುರಿತು ಕೂಡ ಇತಿಹಾಸ ಉದ್ಧರಿಸುತ್ತಿದೆ. ಪ್ರವಾದಿಗೆ

ವಹ್ಯ್ ಅವತೀರ್ಣಗೊಳ್ಳುತ್ತಿದೆ ಎಂದು ಜನರಿಗೆ ಅನುಭವವಾಗುತ್ತಿತ್ತು. ವಹ್ಯ್ ಅವತೀರ್ಣದ ವೇಳೆ ಪ್ರವಾದಿವರ್ಯರ(ಸ) ಮುಖದಲ್ಲಿ ಬದಲಾವಣೆಗಳು ಕಾಣಿಸಿ ಕೊಳ್ಳುತ್ತಿದ್ದವು. ಚಳಿಯ ದಿನಗಳಲ್ಲಿ ವಹ್ಯ್ ಅವತೀರ್ಣಗೊಳ್ಳುವುದಾದರೆ ಮುಖ ಬೆವರುತ್ತಿತ್ತು. ಪವಿತ್ರ ಕುರ್‌ಆನ್ ಅವತೀರ್ಣಗೊಳ್ಳುವ ವೇಳೆ ಪ್ರವಾದಿವರ್ಯರು(ಸ) ಒಂಟೆಯ ಮೇಲೆ ಕುಳಿತುಕೊಂಡಿದ್ದರೂ ವಹ್ಯ್‌ನ ಭಾರದಿಂದಾಗಿ ಒಂಟೆ ನೆಲದಲ್ಲಿ ಮಂಡಿಯೂರಿ ಕುಳಿತುಕೊಳ್ಳುತ್ತಿತ್ತು.

ಮಹತ್ವದ ಇನ್ನೊಂದು ಘಟನೆ ಕೂಡ ಪವಿತ್ರ ಕುರ್‌ಆನ್‌ನಲ್ಲಿ ವಿವರಣೆಗೊಂಡಿದ್ದು 'ವಹ್ಯ್' ಅಲ್ಲಾಹನ ಕಡೆಯಿಂದ ಬರುತ್ತಿದೆ ಎಂಬುದಕ್ಕೆ ಅದು ಕೂಡಾ ಸ್ಪಷ್ಟ ಸಾಕ್ಷ್ಯವಾಗಿದೆ.

ಸೃಷ್ಟಿಕರ್ತನು ಬಯಸಿದಾಗ 'ವಹ್ಯ್' ಅನ್ನು ಪ್ರವಾದಿ(ಸ) ಬಳಿಗೆ ಕಳುಹಿಸುತ್ತಿದ್ದನು. ಅವರಿಗೆ ವಹ್ಯ್ ಅವತೀರ್ಣಗೊಳ್ಳುತ್ತಿತ್ತು ಮತ್ತು ಅವನು ವಹ್ಯ್ ಕಳುಹಿಸುವುದನ್ನು ನಿಲ್ಲಿಸಲು ಬಯಸಿದಾಗ ನಿಲ್ಲಿಸುತ್ತಿದ್ದನು. ಅಲ್ಲಾಹನ ಕಡೆಯಿಂದ ವಹ್ಯ್ ಬರುವುದು ನಿಂತಾಗ ಅವರು ಅಸಹಾಯಕರಾಗಿ ಬಿಡುತ್ತಿದ್ದರು.

ವಹ್ಯ್‌ಗೆ ಸಂಬಂಧಿಸಿದ ಒಂದು ಘಟನೆ ಹೀಗಿದೆ: ಪ್ರವಾದಿ(ಸ) ಹೇಳುವುದು ನಿಜವೇ? ಅದು ನಿಜಕ್ಕೂ ಸೃಷ್ಟಿಕರ್ತನ ಸಂದೇಶ ಆಗಿದೆಯೇ ಅಥವಾ ಅವರೇ ಸ್ವಯಂ ಸೃಷ್ಟಿಸಿ ಹೇಳುತ್ತಿದ್ದಾರೆಯೇ ಎಂದು ಪರೀಕ್ಷಿಸಿ ನೋಡುವ ಸಲುವಾಗಿ ಕುರೈಶಿ ಸರದಾರರು ಪ್ರವಾದಿಯವರ(ಸ) ಬಳಿಗೆ ಬಂದರು. ವಹ್ಯ್‌ನ ಬಗ್ಗೆ ಮಕ್ಕಾದ ಜನರಿಗೆ ಅರಿವು ಇರಲಿಲ್ಲ. ಅವರ ಇತಿಹಾಸದಲ್ಲಿ ವಹ್ಯ್‌ನ ಉಲ್ಲೇಖವೇ ಇಲ್ಲ. ಆದರೆ ವಹ್ಯ್ ಬಗ್ಗೆ ಕ್ರೈಸ್ತರು ಮತ್ತು ಯಹೂದಿಗಳ ಇತಿಹಾಸದಲ್ಲಿತ್ತು.

ಪ್ರವಾದಿ(ಸ)ರವರನ್ನು ಪರೀಕ್ಷಿಸಲು ಬಂದ ಕುರೈಶಿ ಸರದಾರರು ಪ್ರವಾದಿಯವರಲ್ಲಿ ಕೆಲವು ಪ್ರಶ್ನೆ ಎತ್ತಿದರು. ಪ್ರವಾದಿವರ್ಯರು(ಸ) ನಾಳೆ ಉತ್ತರಿಸುತ್ತೇನೆ ಎಂದರು. ಆದರೆ ಸರದಾರರ ಪ್ರಶ್ನೆಗೆ ಅಲ್ಲಾಹನ ಕಡೆಯಿಂದ ವಹ್ಯ್ ಬಂದರೆ ಮಾತ್ರ ಅವರಿಗೆ ಉತ್ತರಿಸಲು ಸಾಧ್ಯವಿತ್ತು.

ಆದರೆ ಕೆಲವು ದಿನಗಳ ವರೆಗೆ ವಿಶ್ವ ಸಾಮ್ರಾಟನಿಂದ ವಹ್ಯ್ ಬರಲಿಲ್ಲ ಮತ್ತು ಪ್ರವಾದಿವರ್ಯರು(ಸ) ಬೇಸರಗೊಂಡರು. ಚಿತ್ತ ಅಶಾಂತವಾಯಿತು. ಅತ್ತ ಇಸ್ಲಾಮಿನ ಶತ್ರುಗಳು ಪ್ರವಾದಿಯವರ(ಸ) ಅಪಹಾಸ್ಯಕ್ಕೆ ತೊಡಗಿದರು. ಆದರೆ ಕೆಲವು ಸಮಯ ಕಳೆದ ನಂತರ ಪ್ರವಾದಿಗೆ(ಸ) ವಹ್ಯ್ ಅವತೀರ್ಣವಾಯಿತು. ಸರದಾರರಿಗೆ ಉತ್ತರಿಸಿದರು.

ಇತಿಹಾಸದಲ್ಲಿ ಪ್ರವಾದಿವರ್ಯರನ್ನು(ಸ) ಶತ್ರುಗಳು ಪ್ರಶ್ನಿಸಿದ ಇಂತಹ

ಮೂರು ಘಟನೆಗಳು ಉದ್ಧರಿಸಲ್ಪಟ್ಟಿವೆ ಮತ್ತು ಮೂರು ಘಟನೆಗಳಲ್ಲಿಯೂ ಪ್ರವಾದಿ(ಸ) ಶತ್ರುಗಳಿಗೆ ಉತ್ತರವನ್ನೂ ಪೂರ್ಣ ವಿವರಣೆಯನ್ನೂ ನೀಡಿದರು. ಈ ವಹ್ಯ್‌ನ ಮೂಲಕವೇ ಯಾರಿಗಾದರೂ ಮಾತು ಕೊಡುವುದಾದರೆ 'ಇನ್‌ಶಾ ಅಲ್ಲಾಹ್' ಎಂದು ಹೇಳಬೇಕೆಂದು ಪ್ರವಾದಿವರ್ಯರಿಗೆ(ಸ) ಉಪದೇಶಿಸಲಾಯಿತು. 'ಇನ್‌ಶಾ ಅಲ್ಲಾಹ್' ಅಂದರೆ ಅಲ್ಲಾಹನಿಚ್ಛಿಸಿದರೆ ಎಂದಾಗಿದೆ. ಅಲ್ಲಾಹನು ಇಚ್ಛಿಸ ದಿದ್ದರೆ ಮನುಷ್ಯನಲ್ಲಿ ಏನಿಲ್ಲ. ಅವನು ಅಸಹಾಯಕನಾಗುವನು. ಬಹುಶಃ ವಹ್ಯ್ ತಡವಾಗಿ ಅವತೀರ್ಣಗೊಂಡುದು ಬಹುಶಃ ಈ ಅರಿವು ಮಾಡಿಸಕ್ಕಾಗಿರಬಹುದು.

ಪ್ರವಾದಿವರ್ಯರಿಗೆ(ಸ) ಸೃಷ್ಟಿಕರ್ತನು ನೀಡಿದ ಉಪದೇಶವನ್ನು ಪವಿತ್ರ ಕುರ್‌ಆನ್ ಉದ್ಧರಿಸಿದೆ–

"ಮತ್ತು ಗಮನಿಸಿರಿ, ಯಾವ ವಿಷಯದ ಬಗೆಗೂ ನಾನು ನಾಳೆ ಈ ಕೆಲಸವನ್ನು ಮಾಡಿಬಿಡುವೆನು ಎನ್ನಬೇಡಿರಿ. ಅಲ್ಲಾಹನು ಇಚ್ಛಿಸುವ ಹೊರತು (ನೀವೇನನ್ನೂ ಮಾಡಲಾರಿರಿ). ಮರೆವೆಯಿಂದ ಇಂತಹ ಮಾತು ನಿಮ್ಮ ಬಾಯಿಯಿಂದ ಬಂದು ಬಿಟ್ಟರೆ ಕೂಡಲೇ ನಿಮ್ಮ ಪ್ರಭುವನ್ನು ಸ್ಮರಿಸಿಕೊಳ್ಳಿರಿ ಮತ್ತು ನನ್ನ ಪ್ರಭು ಈ ವಿಷಯದಲ್ಲಿ ಸತ್ಯಕ್ಕೆ ಸಮೀಪವಾದುದರ ಕಡೆಗೆ ನನಗೆ ಮಾರ್ಗದರ್ಶನ ಮಾಡುವನೆಂದು ನಾನು ನಿರೀಕ್ಷಿಸುತ್ತೇನೆನ್ನಿರಿ." **(ಅಲ್ ಕಹ್ಫ್: 23–24)**

ಈ ವಚನದಿಂದ ನಮ್ಮ ಚರ್ಚೆಗಳಿಂದ ಪ್ರವಾದಿ ಮುಹಮ್ಮದ್‌ರು(ಸ) ಪ್ರಪಂಚ ಸಾಮ್ರಾಟನಿಂದ ಆಯ್ಕೆಗೊಂಡ ಪ್ರವಾದಿಯಾಗಿದ್ದಾರೆ ಎಂಬ ವಿಚಾರ ಅಸಂದಿಗ್ಧವಾಗಿ ಸ್ಪಷ್ಟವಾಗುತ್ತದೆ ಮತ್ತು ಅವರು ಸೃಷ್ಟಿಕರ್ತನ ಗ್ರಂಥ ಪವಿತ್ರ ಕುರ್‌ಆನನ್ನು ಪ್ರಸ್ತುತಪಡಿಸಿದರು. ಆ ಗ್ರಂಥವು ಸೃಷ್ಟಿಕರ್ತನ ಕಡೆಯಿಂದ ಅವತೀರ್ಣಗೊಂಡುದಾಗಿದೆ. ಪ್ರವಾದಿ ಮತ್ತು ಗ್ರಂಥವು ನೈಜ ಜ್ಞಾನದ ಮೂಲವಾಗಿದೆ ಮತ್ತು ಅಧಿಕೃತ ಮಾಧ್ಯಮ ವಾಗಿದೆ ಎಂದು ಸಂದೇಹಾತೀತವಾಗಿ ನಮ್ಮಲ್ಲಿ ತೃಪ್ತಿ ಮತ್ತು ವಿಶ್ವಾಸ ಮೂಡುತ್ತದೆ.

❖ ❖ ❖ ❖

ಅಧ್ಯಾಯ 3

ಪವಿತ್ರ ಕುರ್‌ಆನ್: ಸೃಷ್ಟಿಕರ್ತನ ಗ್ರಂಥ

ಕುರ್‌ಆನ್‌ನಿಂದ ಸ್ವಪರಿಚಯ

ಗ್ರಂಥವು ತನ್ನನ್ನು ಈ ರೀತಿ ಪರಿಚಯಿಸುತ್ತದೆ: ಗತ ಅಧ್ಯಾಯದಲ್ಲಿ ತರ್ಕಬದ್ಧ, ಐತಿಹಾಸಿಕ ಪುರಾವೆಗಳ ಮೂಲಕ ವಿಶ್ವಸನೀಯ ನೆಲೆಯಲ್ಲಿ ಪ್ರವಾದಿ ಮುಹಮ್ಮದ್‌ರು(ಸ) ಪ್ರಸ್ತುತಪಡಿಸಿದ ಸಂದೇಶ ಮತ್ತು ಗ್ರಂಥವು ವಿಶ್ವ ಸೃಷ್ಟಿಕರ್ತನದ್ದಾಗಿದೆ ಎಂಬ ತೀರ್ಮಾನಕ್ಕೆ ಬಂದೆವು. ಅದನ್ನು ಮನುಷ್ಯನ ಮಾರ್ಗದರ್ಶನಕ್ಕೆ ಕಳಹಿಸಲಾಗಿದೆ ಮತ್ತು ಸೃಷ್ಟಿಕರ್ತನು ತನ್ನ ಪರಿಚಯವನ್ನು ಈ ಗ್ರಂಥದಲ್ಲಿ ಮಾಡಿದ್ದು ಇದು ಈ ಗ್ರಂಥ ಸತ್ಯವಾದುದು ಎಂದು ತೃಪ್ತರಾದೆವು. ಇನ್ನೂ ಹೆಚ್ಚು ತೃಪ್ತಿ ಸಾಧಿಸುವ ಸಲುವಾಗಿ ಗ್ರಂಥದ ಕಡೆಗೆ ತೆರಳೋಣ–

ಈ ಗ್ರಂಥವೇ ತನ್ನನ್ನು ಮತ್ತಷ್ಟು ಹೆಚ್ಚು ಪರಿಚಯಿಸುತ್ತದೆ: ಪವಿತ್ರ ಕುರ್‌ಆನ್ ಸ್ವಯಂ ತನ್ನ ಕುರಿತು ಪರಿಚಯಿಸಿದೆ. ಅಪರಿಚಿತ ವ್ಯಕ್ತಿಯನ್ನು ಯಾರಾದರೂ ಭೇಟಿ ಯಾದರೆ ಸಾಮಾನ್ಯವಾಗಿ ತಮ್ಮನ್ನು ಮೊದಲು ಆ ವ್ಯಕ್ತಿಗೆ ಪರಿಚಯಿಸುತ್ತಾರಷ್ಟೇ. ಆನಂತರ ಭೇಟಿಯ ಕಾರಣವನ್ನು ಆ ವ್ಯಕ್ತಿಗೆ ವಿವರಿಸುತ್ತಾರೆ. ಇದಾದ ಮೇಲೆಯೂ ಬಹಳಷ್ಟು ವಿಷಯಗಳನ್ನು ಪರಸ್ಪರ ಅವರು ಚರ್ಚಿಸುತ್ತಾರೆ. ಇದು ಅಪರಿಚಿತರೊಂದಿಗೆ ಭೇಟಿಯ ವೇಳೆ ನಡೆಯುವ ಸಾಮಾನ್ಯ ಮತ್ತು ಸಹಜ ವಿಧಾನ.

ಇದೇ ವಿಧಾನವನ್ನು ತನ್ನ ಪರಿಚಯಕ್ಕಾಗಿ ಈ ಗ್ರಂಥ ಕೂಡ ಉಪಯೋಗಿಸಿದೆ. ಪ್ರಪಂಚ ಸೃಷ್ಟಿಕರ್ತನ ಗ್ರಂಥವೆಂದು ಅದು ಜನರ ಮುಂದೆ ಪ್ರಸ್ತುತಪಡಿಸುತ್ತಿದೆ. ಯಾಕೆಂದರೆ ಈ ಗ್ರಂಥ (ಪವಿತ್ರ ಕುರ್‌ಆನ್) ಯಾರದು? ಈ ಗ್ರಂಥದ ರಚನಾಕರ್ತೃ ಯಾರು ಮತ್ತು ಇದರ ಒಡೆಯನು ಯಾರು (ಪವಿತ್ರ ಕುರ್‌ಆನ್‌ನಲ್ಲಿ ರಚನಾಕಾರನ ಹೆಸರಿಲ್ಲ.) ಇದ್ಯಾವುದೂ ಪ್ರವಾದಿ ಬರುವ ಮೊದಲು ಜನರಿಗೆ ಅಪರಿಚಿತವಾಗಿತ್ತು.

ಆದುದರಿಂದ ಕುರ್‌ಆನ್ ತನ್ನ ಪರಿಚಯವನ್ನು ಸ್ವಯಂ ಜನರ ಮುಂದಿಡುತ್ತದೆ. ಸೃಷ್ಟಿಕರ್ತ, ಸರ್ವಜ್ಞ, ಯುಕ್ತಿಜ್ಞನಾದ ಅಲ್ಲಾಹನ ಗ್ರಂಥ ಇದು ಮತ್ತು ಈ

ಗ್ರಂಥವನ್ನು ಅಲ್ಲಾಹನ ಕಡೆಯಿಂದ ತಂದ ವ್ಯಕ್ತಿ ಮುಹಮ್ಮದ್(ಸ). ಅವರು ಅಲ್ಲಾಹನ ಪ್ರವಾದಿಯಾಗಿದ್ದಾರೆ ಎಂದೂ ಸ್ಪಷ್ಟಪಡಿಸುವುದು. ಈ ಗ್ರಂಥದ ಮೂಲಕ ಜನರೆಡೆಗೆ ಅವರು(ಸ) ಅಲ್ಲಾಹನ ಸಂದೇಶವನ್ನು ತಲುಪಿಸುವರು. ಅವರು ತಮ್ಮ ಮಾತು–ಕೃತಿಯ ಮೂಲಕ ಜನರಿಗೆ ಈ ಗ್ರಂಥವನ್ನು ಮನವರಿಕೆ ಮಾಡಿಸುವರು.

ಈ ಗ್ರಂಥವು (ಪವಿತ್ರ ಕುರ್‌ಆನ್) ತನ್ನನ್ನೂ ತನ್ನನ್ನು ತಂದಿರುವ ವ್ಯಕ್ತಿಯನ್ನೂ ತನ್ನನ್ನು ಅವತೀರ್ಣಗೊಳಿಸಿದವನನ್ನೂ ಪರಿಚಯಿಸುತ್ತದೆ. ಜೊತೆಗೆ ಮನುಷ್ಯರಿಗೆ ಯಾವ ಮಾರ್ಗದರ್ಶನವಿದೆ ಎಂದು ಬಹಿರಂಗ ಮತ್ತು ಸ್ಪಷ್ಟ ಶೈಲಿಯಲ್ಲಿ ತಿಳಿಸಿ ಕೊಡುತ್ತದೆ.

"ಈ ಗ್ರಂಥ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದಾಗಿರುತ್ತದೆ. (ಸಂದೇಶವಾಹಕರೇ) ಈ ಗ್ರಂಥವನ್ನು ನಾವು ನಿಮ್ಮ ಕಡೆಗೆ ಪರಮ ಸತ್ಯವಾಗಿ ಅವತೀಣಗೊಳಿಸಿರುತ್ತೇವೆ. ಆದುದರಿಂದ ನೀವು ಧರ್ಮವನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತ ಅವನ ದಾಸ್ಯವನ್ನೇ ಮಾಡಿರಿ. ಎಚ್ಚರಿಕೆ! ಧರ್ಮವು ನಿಷ್ಕಳಂಕವಾಗಿ ಕೇವಲ ಅಲ್ಲಾಹನ ಹಕ್ಕಾಗಿದೆ." **(ಅಝ್ಝುಮರ್: 1–3)**

ಮೂರು ವಿಷಯಗಳು ಮೇಲಿನ ವಚನಗಳಲ್ಲಿ ಚರ್ಚಿತವಾಗಿದೆ. ಈ ಗ್ರಂಥ ಅಲ್ಲಾಹನ ಗ್ರಂಥವಾಗಿದೆ. ಅವನು ಸರ್ವಜ್ಞ ಮತ್ತು ಸರ್ವಶಕ್ತ, ಪ್ರವಾದಿ ಮುಹಮ್ಮದ್‌ರು(ಸ) ಈ ಗ್ರಂಥವನ್ನು ಜನರಿಗೆ ತಲುಪಿಸುವುದು ಮತ್ತು ನಿಷ್ಕಳಂಕವಾಗಿ ಜನರು ಅಲ್ಲಾಹನ ದಾಸ್ಯ ಮಾಡಬೇಕು ಎಂಬ ಉದ್ದೇಶದಿಂದ ಜನರೆಡೆಗೆ ಈ ಗ್ರಂಥವನ್ನು ಕಳುಹಿಸಲಾಗಿದೆ ಎಂಬ ವಿಷಯಗಳು ಚರ್ಚಿತವಾದುವು.

ಪವಿತ್ರ ಕುರ್‌ಆನ್ ಸೃಷ್ಟಿಕರ್ತನ ಗ್ರಂಥ: ಪುರಾವೆ ಮತ್ತು ಸಾಕ್ಷ್ಯಗಳು

ಪವಿತ್ರ ಕುರ್‌ಆನ್ ಸ್ವಯಂ ತಾನು ಸೃಷ್ಟಿಕರ್ತನ ಗ್ರಂಥ ಎಂದು ವಾದಿಸುತ್ತದೆ. ನನ್ನ ಅಭಿಸಂಬೋಧಿತರು ಮನುಷ್ಯರು ಎಂದು ಸಾರಿದೆ. ಮನುಷ್ಯರ ಪ್ರಗತಿ ಮತ್ತು ಉತ್ತಮ ಮನುಷ್ಯರನ್ನಾಗಿ ರೂಪಿಸುವುದು ತನ್ನ ಇಚ್ಛೆ ಎಂದಿದೆ. ಇತಿಹಾಸವನ್ನು ನಿಷ್ಪಕ್ಷಪಾತವೂ ಮತ್ತು ಪೂರ್ವಗ್ರಹ ರಹಿತವಾಗಿ ಯಾರಾದರೂ ಅಧ್ಯಯನಿಸಿದರೆ ಮನುಷ್ಯರನ್ನು ತಾನು ಉತ್ತಮರನ್ನಾಗಿ ರೂಪಿಸಿರುವುದು ಅರಿವಾಗುತ್ತದೆ ಎನ್ನುತ್ತದೆ. ಅಂದು ಅರೇಬಿಯದಲ್ಲಿ ಅಲ್ಲಿನ ಸಮಾಜ ರಕ್ತಪಾತ ಮತ್ತು ಅಶ್ಲೀಲತೆಯಲ್ಲಿ ಸಂಪೂರ್ಣ ವ್ಯಸ್ತವಾಗಿತ್ತು. ಅದು ಅವ್ಯವಸ್ಥೆ, ಅರಾಜಕತೆಗಳ ಆಗರವಾಗಿತ್ತು. ಅಲ್ಲಿ ಅಮಾಯಕ ಹೆಣ್ಣು ಮಕ್ಕಳು ಮತ್ತು ಅಸಹಾಯಕರಾದ ದುರ್ಬಲರ ಮೇಲೆ ದೌರ್ಜನ್ಯ ಎಸಗಲಾಗುತ್ತಿತ್ತು. ಇಂತಹ ಅರಾಜಕ ವರ್ತನೆಯ ಜನರನ್ನು ಈ

ಸ್ಥಿತಿಯಿಂದ ಮೇಲೆತ್ತಿ ತಾನು ಮಾನವೀಯತೆಯ ಉತ್ತುಂಗಕ್ಕೆ ತಲುಪಿಸಿರುವೆನು. ಈಗಲೂ ಈ ಸಾಮರ್ಥ್ಯ, ಈ ಗುಣವೈಶಿಷ್ಟ್ಯಗಳು ತನ್ನಲ್ಲಿದೆ ಎಂದು ಪವಿತ್ರ ಕುರ್‌ಆನ್ ವಾದಿಸುತ್ತಿದೆ. ನನ್ನ ಶಿಕ್ಷಣಗಳು ಇಂದಿಗೂ ಯಾವುದೇ ಬದಲಾವಣೆಗಳು ಮತ್ತು ಮಿಶ್ರಣಗಳಿಲ್ಲದೆ ಸುರಕ್ಷಿತವಾಗಿದೆ. ಸಂಪೂರ್ಣ ನಂಬಿಕೆಯಿಂದ ಈ ಶಿಕ್ಷಣಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ಕರ್ಮವೆಸಗಿದರೆ ಉತ್ತಮ ಪ್ರತಿಫಲವನ್ನು ನೀವು ಪಡೆಯುವಿರಿ ಎಂದು ಕರೆ ನೀಡುತ್ತದೆ.

ವಿವಿಧ ದೇಶಗಳಲ್ಲಿ ಅಲ್ಲಿನ ಜನರು ಸ್ವಯಂ ಕಾನೂನು ಮತ್ತು ನಿಯಮ-ನಿಬಂಧನೆಗಳು ಮತ್ತು ಸಂವಿಧಾನವನ್ನು ರಚಿಸಿ ಜಾರಿಗೆ ತಂದಿದ್ದಾರೆ. ಆದರೆ ಅವ್ಯಾವುದರಿಂದಲೂ ಮನುಷ್ಯನನ್ನು ತನ್ನಂತೆ ರೂಪಿಸಲು ಸಾಧ್ಯವಾಗಿಲ್ಲ ಎಂದು ಪವಿತ್ರ ಕುರ್‌ಆನ್ ಹಕ್ಕು ವಾದ ಮಂಡಿಸುತ್ತಿದೆ. ಅತ್ಯುತ್ತಮ ಮತ್ತು ಶಾಂತಿ ಸೌಹಾರ್ದದ ಸಮಾಜವನ್ನು ಅಸ್ತಿತ್ವಕ್ಕೆ ತರಲು ಅವರ ಕಾಯಿದೆ ಸಂವಿಧಾನಗಳಿಂದ ಸಾಧ್ಯವಾಗಿಲ್ಲ. ಆದರೆ ತನ್ನ ಶಿಕ್ಷಣ, ತತ್ವಗಳು ಮತ್ತು ಕಾನೂನುಗಳು ಉತ್ಕೃಷ್ಟವಾದುದು. ಅನನ್ಯವಾದುದು ಸರಿಸಾಟಿಯಿಲ್ಲದ್ದು ಮತ್ತು ಜನರೊಳಗೆ ಒಗ್ಗಟ್ಟನ್ನು ತಂದು ಕೊಡುವಂತದ್ದು ಮತ್ತು ಮನುಷ್ಯನ ಪ್ರಕೃತಿಗೆ ಅನುಗುಣವಾಗಿ ತನ್ನ ಪ್ರತಿಪಾದನೆಗಳಿವೆ. ಇವೆಲ್ಲವೂ ಪಕೃತಿಯ ನಿರ್ಮಾತೃವಿನ ಕೊಡುಗೆಯಾಗಿದೆ. ಆದ್ದರಿಂದಲೇ ಅತ್ಯುತ್ತಮ ಜನರನ್ನು ತನ್ನಿಂದ ರೂಪಿಸಲು ಸಾಧ್ಯವಾದುದು. ಪ್ರಕೃತಿ ನಿರ್ಮಾಪಕನಿಗೆ ಮಾತ್ರ ಹೀಗೆ ಮಾಡುವ ಶಕ್ತಿ ಸಾಮರ್ಥ್ಯ ಇರುವುದು. ಆದ್ದರಿಂದ ಯಾವ ಬದಲಾವಣೆಗಳು ಮನುಷ್ಯನ ಪ್ರಕೃತಿಯಲ್ಲಿ ನಡೆಸಲಿಕ್ಕಾಗದು. ತನ್ನಲ್ಲೂ ಯಾವ ಬದಲಾವಣೆಗಳೂ ಸಾಧ್ಯವಿಲ್ಲವೆಂದು ಪವಿತ್ರ ಕುರ್‌ಆನ್ ಹೇಳಿಕೊಂಡಿದೆ.

ಜೊತೆಗೆ ಪವಿತ್ರ ಕುರ್‌ಆನ್ ಪಂಥಾಹ್ವಾನವನ್ನೂ ನೀಡುತ್ತಿದೆ. ತನ್ನಂತಹ ತತ್ವ-ಶಿಕ್ಷಣ-ಕಾನೂನುಗಳನ್ನು ತನ್ನಿ. ಅದರ ಮೂಲಕ ತನಗಿಂತಲೂ ಉತ್ತಮವಾದ ಮನುಷ್ಯರನ್ನು ಮತ್ತು ಸಮಾಜವನ್ನು ರೂಪಿಸಿ ತೋರಿಸಿ ಕೊಡಿ ಎಂಬ ಸವಾಲು ಅದು. ಈವರೆಗೂ ಈ ಸವಾಲನ್ನು ಯಾರಿಗೂ ಸ್ವೀಕರಿಸಲು ಸಾಧ್ಯವಾಗಿಲ್ಲ. ಉತ್ತರಿಸಲು ಸಾಧ್ಯವಾಗಿಲ್ಲ. ಉತ್ತರ ನೀಡಲು ಸಾಧ್ಯವಿಲ್ಲ ಎಂದು ಪವಿತ್ರ ಕುರ್‌ಆನ್ ಹೇಳಿದ್ದು ಅದಕ್ಕೆ ತಾನು ಸತ್ಯವಾಗಿರುವುದು ಕಾರಣವೆಂದು ಹೇಳಿದೆ. ಪವಿತ್ರ ಕುರ್‌ಆನ್ ಸೃಷ್ಟಿಕರ್ತನ ಗ್ರಂಥ. ಅದರಲ್ಲಿರುವ ಕಾನೂನುಗಳು ಸೃಷ್ಟಿಕರ್ತನ ಕಾನೂನುಗಳಾಗಿವೆ. ಅವನು ಮನುಷ್ಯರ ಪ್ರಭು. ಪವಿತ್ರ ಕುರ್‌ಆನ್‌ನ ತತ್ವ ಕಾನೂನುಗಳಂತೆ ಕರ್ಮವೆಸಗುವ ಶಕ್ತಿಯು ಅದರೊಳಗೆಯೆ ಸಂಚಾಲಿತವಾಗಿದೆ. ಅಡಕವಾಗಿದೆ. ಇದು ಪವಿತ್ರ ಕುರ್‌ಆನ್ ಸೃಷ್ಟಿಕರ್ತನ ಕಾನೂನು ಎಂಬುದಕ್ಕೆ

ಪ್ರಮಾಣ ಮತ್ತು ಸಾಕ್ಷ್ಯವೂ ಆಗಿದೆ ಎಂದು ಪವಿತ್ರ ಕುರ್‌ಆನ್ ಪ್ರತಿಪಾದಿಸುತ್ತಿದ್ದು. ನಾನು ಏನು ಹೇಳುವೆನೋ ಅದು ಅಲ್ಲಾಹನ ಕಡೆಯಿಂದಿರುವುದಾಗಿದೆ ಮತ್ತು ನನ್ನ ಮೂಲಕ ಅಲ್ಲಾಹನೇ ಸ್ವಯಂ ತನ್ನ ಪರಿಚಯವನ್ನು ಸ್ಪಷ್ಟವಾಗಿ ಮಾಡಿರುವುದು ಮತ್ತು ಇದು ಮುಂದಕ್ಕೆ ಪ್ರಪಂಚ ಸಾಮ್ರಾಟನೇ ನಿಜವಾದ ಆರಾಧ್ಯ ಎಂಬ ಅಧ್ಯಾಯದಲ್ಲಿ ವಿವರಿಸಲ್ಪಡುವುದು.

ಮನುಷ್ಯ ಸ್ವಭಾವದಲ್ಲಿ ಹುದುಗಿಕೊಂಡಿರುವ ಒಳಿತು ಮತ್ತು ಕೆಡುಕಿನ ಪ್ರಜ್ಞೆಗಳನ್ನು ಹೆಚ್ಚು ಸೂಕ್ಷ್ಮ ಮತ್ತು ಪ್ರಬುದ್ಧವಾಗಿ ಮತ್ತು ಅತ್ಯಂತ ಎಳೆಎಳೆಯಾಗಿ ತಿಳಿಸುವ ಮೂಲಕ ಹಾಗೂ ಒಳಿತುಗಳು ಯಾವುವು ಮತ್ತು ಕೆಡುಕುಗಳು ಯಾವುವು ಎಂಬುದನ್ನು ಸ್ಪಷ್ಟವಾಗಿ ವಿವರಿಸುವ ಹೃದಯವನ್ನು ಪ್ರಕಾಶಮಾನಗೊಳಿಸುವೆನು ಎಂದು ಪವಿತ್ರ ಕುರ್‌ಆನ್ ವಾದಿಸುತ್ತಿದೆ. ಯಾಕೆಂದರೆ ಅದರ ತತ್ವ ಮತ್ತು ಅದರ ಉನ್ನತ ಶಿಕ್ಷಣಗಳು ಮನುಷ್ಯನನ್ನು ಮನುಷ್ಯತ್ವದ ಪರಾಕಾಷ್ಠೆಯ ಸ್ಥಿತಿಗೆ ತಲುಪಿಸುತ್ತದೆ. ಇದು ಪವಿತ್ರ ಕುರ್‌ಆನಿನ ಪವಾಡ ಮತ್ತು ಗುಣವೈಶಿಷ್ಟ್ಯಗಳಾಗಿವೆ.

ಗ್ರಂಥದ ಕರ್ತೃವಿನ ಪರಿಚಯ

ಪವಿತ್ರ ಕುರ್‌ಆನ್ ತನ್ನ ಲೇಖಕನನ್ನು ಪರಿಚಯಿಸುತ್ತದೆ: ಜೀವನದ ಸತ್ಯ ಮತ್ತು ಪ್ರಪಂಚದ ಸತ್ಯವನ್ನು ಜನರ ನಡುವೆ ನವೀಕರಣಗೊಳಿಸುವ ಸಲುವಾಗಿ ಮತ್ತು ಜನರಲ್ಲಿ ಅದರ ಬಗ್ಗೆ ಸ್ಮರಣೆ ಹುಟ್ಟಿಸುವ ಸಲುವಾಗಿ ಪ್ರಪಂಚ ಸೃಷ್ಟಿಕರ್ತನು ಮತ್ತೊಮ್ಮೆ ಜನರ ಬಳಿಗೆ ತನ್ನ ಬಳಿಯಿಂದ ಒಂದು ಗ್ರಂಥವನ್ನು ತನ್ನ ಓರ್ವ ದಾಸನ ಮೂಲಕ ಕಳುಹಿಸಿದನು. ಹೀಗೆ ನೆನಪಿಸಿದ ನಂತರ ಜನರು ತಪ್ಪೆಸಗದಂತೆ ಎಚ್ಚರವಹಿಸಲಿ ಮತ್ತು ಪ್ರಮಾದಗಳಿಂದ ಸುರಕ್ಷಿತವಾಗಲಿ ಎಂಬ ಉದ್ದೇಶದಿಂದ ಈ ವ್ಯವಸ್ಥೆಯನ್ನು ಸೃಷ್ಟಿಕರ್ತನು ಮಾಡಿದನು.

ವಿವೇಕ ಯಾವುದೆಂದರೆ ಪ್ರಪಂಚ ಮತ್ತು ಪ್ರಪಂಚದ ಪ್ರತಿಯೊಂದು ವಸ್ತು ವಸ್ತುವಿನ ಸೃಷ್ಟಿಕರ್ತನಾದ, ಮಾಲಕ, ಪಾಲಕ ಮತ್ತು ಅಧಿಕಾರಿಯಾದ ಪ್ರತಿಯೊಂದು ವಸ್ತುವಿನ ಮತ್ತು ಪ್ರತಿಯೊಂದು ರಹಸ್ಯಗಳ ಜ್ಞಾನಿ (ಸರ್ವಜ್ಞ) ಯುಕ್ತಿಜ್ಞನಾದ ಅಸ್ತಿತ್ವವನ್ನು ದಾಸ್ಯ ಮಾಡುವುದು ಆಗಿದೆ. ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ತನ್ನ ಪರಿಚಯವನ್ನು ತಿಳಿಸುತ್ತಾನೆ ಮತ್ತು ತನ್ನ ಗ್ರಂಥವಾದ ಕುರ್‌ಆನ್ ಕಳುಹಿಸಿದುದರ ಉದ್ದೇಶವನ್ನು ತಿಳಿಸುತ್ತಾನೆ. ಯಾಕೆಂದರೆ ಇದು ಜನರು ಈ ಗ್ರಂಥವನ್ನು ಸಂಪೂರ್ಣ ಆದರದಿಂದ ತೃಪ್ತಿ, ಆಸಕ್ತಿ, ಮತ್ತು ಗಂಭೀರತೆಗಳೊಂದಿಗೆ ಪರಿಗಣಿಸುವ ಮೂಲಕ ತಮ್ಮ ಜೀವನಕ್ಕೆ ಅದರಿಂದ ಪ್ರಯೋಜನ ಪಡೆಯಲಿ ಎಂಬುದಕ್ಕಾಗಿದೆ.

"ಇದು ಭಯವಿರಿಸುವ ಪ್ರತಿಯೊಬ್ಬನಿಗೆ ನೆನಪಿಸುವ ಒಂದು ಸಾಧನವಾಗಿದೆ.

ಭೂಮಿಯನ್ನೂ ಉನ್ನತ ಆಕಾಶಗಳನ್ನೂ ಸೃಷ್ಟಿಸಿದವನ ಕಡೆಯಿಂದ ಇದು ಅವತೀರ್ಣ ಗೊಂಡಿದೆ. ಆ ದಯಾಮಯನು (ವಿಶ್ವ) ಸಿಂಹಾಸನದ ಮೇಲೆ ವಿರಾಜಿಸುತ್ತಿದ್ದಾನೆ. ಅವನು ಆಕಾಶಗಳಲ್ಲೂ ಭೂಮಿಯಲ್ಲೂ ಅವೆರಡರ ನಡುವೆಯೂ ಹಾಗೂ ಮಣ್ಣಿನಡಿ ಯಲ್ಲಿಯೂ ಇರುವ ಸಕಲ ವಸ್ತುಗಳ ಮಾಲಿಕನಾಗಿರುತ್ತಾನೆ" (ತಾಹಾ: 3–6) ಎಂದು.

ಸ್ವಯಂ ಅಲ್ಲಾಹನೇ ತನ್ನ ಈ ಗ್ರಂಥದ ಮೂಲಕ ತನ್ನನ್ನು ಪರಿಚಯಿಸುತ್ತಾನೆ: ಸೃಷ್ಟಿಕರ್ತನು ಸರ್ವಜ್ಞ, ಅವನೇ ಸ್ವಯಂ ತನ್ನ ಬಗ್ಗೆ ಅರಿತವನು. ಸೃಷ್ಟಿಕರ್ತನೇ ಸ್ವಯಂ ತನ್ನ ಕುರಿತು ಸರಿಯಾಗಿ ಅರಿತಿದ್ದಾನೆ. ಆದುದರಿಂದ ಅವನಿಂದಲೇ ಸ್ವಯಂ ತನ್ನ ಪರಿಚಯವನ್ನು ಸರಿಯಾಗಿ ಮತ್ತು ಉತ್ತಮವಾಗಿ ಮತ್ತು ಸುಲಭ ವಿಧಾನದಲ್ಲಿ ಮಾಡಲು ಸಾಧ್ಯವಿದೆ. ಆದುದರಿಂದಲೇ ಸ್ವತಃ ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ತನ್ನನ್ನು ಜನರಿಗೆ ಪರಿಚಯಿಸಿದನು, ಪವಿತ್ರ ಕುರ್‌ಆನ್ ಸೃಷ್ಟಿಕರ್ತನ ಕುರಿತು ಹೀಗೆ ಹೇಳಿದೆ, "ನಿಮ್ಮ ದೇವ ಏಕೈಕ ದೇವ. ಆ ದಯಾಮಯನೂ ಕರುಣಾನಿಧಿಯೂ ಆಗಿರುವವನ ಹೊರತು ಇನ್ನೊಬ್ಬ ದೇವನಿಲ್ಲ." (ಅಲ್‌ಬಕರ: 163)

ಇಲ್ಲಿನ ಪರಿಚಯದಲ್ಲಿ ಕೇವಲ ಎರಡು ಮಾತುಗಳನ್ನು ಹೇಳಲಾಗಿದೆ. ಆದರೆ ಅದು ಬಹಳ ಸ್ಪಷ್ಟವಾಗಿ ಪೂರ್ಣ ಪ್ರಬಲತೆಗೆ ಒತ್ತು ನೀಡಿರುವುದು ಮತ್ತು ತುಂಬ ಪ್ರಾಮುಖ್ಯತೆಯೊಂದಿಗೆ ಹೇಳಲಾಗಿದೆ. ಒಂದು ಅವನ ಏಕತ್ವ ಆಗಿದೆ ಮತ್ತು ಇನ್ನೊಂದು ಅವನ ಕರುಣೆಯಾಗಿದೆ.

ಗ್ರಂಥದ ಪರಿಚಯ

ವಿಶ್ವ ಸಾಮ್ರಾಟನು ತನ್ನ ಗ್ರಂಥದವರನ್ನು ತನ್ನ ಗ್ರಂಥದ ಮೂಲಕ ಪರಿಚಯಿಸುತ್ತಾನೆ: "ಇದು (ದೈವಿಕ) ಗ್ರಂಥ; ಸಂದೇಹಾತೀತವಿದು. ಭಯ ಭಕ್ತಿಯುಳ್ಳವರಿಗೆ ಇದು ಮಾರ್ಗದರ್ಶಿ." (ಅಲ್‌ಬಕರ: 2)

ಗ್ರಂಥದ ಪ್ರಾರಂಭದಲ್ಲಿ ಗ್ರಂಥದ ಒಡೆಯ ಅಲ್ಲಾಹ್ ತನ್ನ ಗ್ರಂಥವನ್ನು ಹೀಗೆ ಪರಿಚಯಿಸುವನು: ಇದು ನನ್ನ ಗ್ರಂಥವಾಗಿದೆ ಮತ್ತು ನನ್ನ ಗ್ರಂಥವೆಂಬುದರಲ್ಲಿ ಯಾರಿಗೂ ಯಾವುದೇ ಸಂದೇಹ ಇರಬಾರದು. ವಿಚಾರ ಮಾಡಿ, ಅನ್ವೇಷಿಸಿ ನೋಡಿರಿ ಮತ್ತು ಯಾಕೆಂದರೆ ಈ ಗ್ರಂಥ ತಮ್ಮದು ಮತ್ತು ಇದರಲ್ಲಿ ಯಾವುದೇ ಸಂದೇಹಕ್ಕೆ ಯಾವುದೇ ಅವಕಾಶವೇ ಇಲ್ಲ. ಇದರಲ್ಲಿರುವ ಪ್ರತಿಯೊಂದು ವಚನಗಳು ನೂರಕ್ಕೆ ನೂರರಷ್ಟು ಸತ್ಯವಾದುದು. ಯಾವುದೇ ತಪ್ಪು ವಚನಗಳಿಲ್ಲ. ಸತ್ಯಕ್ಕೆ ವಿರುದ್ಧವಾಗಿಲ್ಲ. ಪ್ರತಿಯೊಂದು ವಚನಗಳು ಸರಿಯಾದುದು ಮತ್ತು ಸತ್ಯವಾಗಿದೆ.

ಇದರಲ್ಲಿರುವ ಸಕಲ ಘಟನೆಗಳು ಜ್ಞಾನಾಧಾರಿತವಾದುದು. ಅವುಗಳಲ್ಲಿ ಬರೇ

ಅಂದಾಜು ಕಲ್ಪನೆ ಊಹನಾಧಾರಿತವಾಗಿರುವುದಿಲ್ಲ. ನಿಶ್ಚಯವಾಗಿಯೂ ಪ್ರಪಂಚ ಸೃಷ್ಟಿಕರ್ತನು ಸಕಲ ವಿಷಯಗಳ ಜ್ಞಾನಿಯಾಗಿದ್ದಾನೆ. ಘಟನೆಗಳು ಮನುಷ್ಯನ ಮುಂದೆ ಬಹಿರಂಗವಾದುದು ಅಥವಾ ರಹಸ್ಯವಾದುದೇ ಆಗಿರಲಿ. ಅವುಗಳ ಜ್ಞಾನ ಅಲ್ಲಾಹನಿಗಿದೆ. ಮೇಲಿನ ಇದೇ ವಚನದಲ್ಲಿ ಈ ಗ್ರಂಥವನ್ನು ಅವತೀರ್ಣಗೊಳಿಸಿದ ಉದ್ದೇಶವನ್ನು ಕೂಡಾ ತಿಳಿಸಲಾಗಿದೆ. ಮನುಷ್ಯನ ಮಾರ್ಗದರ್ಶನಕ್ಕಾಗಿ ಮತ್ತು ಮನುಷ್ಯನ ಸಂಪೂರ್ಣ ಜೀವನಕ್ಕೆ ಅಂದರೆ, ಮನುಷ್ಯನ ಹುಟ್ಟಿನಿಂದ ಸಾಯುವ ವರೆಗಿನ ಮಾರ್ಗದರ್ಶಕವಾಗಿ ಈ ಗ್ರಂಥ ಅವತೀರ್ಣಗೊಂಡಿದೆ.

ಇದರ ಪ್ರತಿಯೊಂದು ವಿಷಯವೂ ವೈಯಕ್ತಿಕ ಮತ್ತು ಸಾಮೂಹಿಕ ಮತ್ತು ವಿಷಯದ ಸಕಲ ಮಗ್ಗುಲುಗಳು ಮನುಷ್ಯನ ಮಾರ್ಗದರ್ಶನಕ್ಕಾಗಿದೆ. ಮನುಷ್ಯ ಜೀವನದಲ್ಲಿ ಮಾರ್ಗದರ್ಶನ ಎಂಬುದು ಅವನ ಮೂಲಭೂತ ಆವಶ್ಯಕತೆಯಾಗಿದೆ. ಪವಿತ್ರ ಕುರ್‌ಆನ್‌ನ ಮಾರ್ಗದರ್ಶನ ಉದ್ದೇಶವು ಮನುಷ್ಯನು ತನ್ನ ಜೀವನವನ್ನು ಅತ್ಯುತ್ತಮವಾಗಿ ಶಾಂತಿ–ನೆಮ್ಮದಿ–ಸೌಮ್ಯತೆಯಿಂದ ನಡೆಸಬೇಕು ಎಂದಾಗಿದೆ. ಅವನು ಮಧ್ಯಮ ವಿಧಾನದಲ್ಲಿ ಮತ್ತು ಸದುದ್ದೇಶಪೂರ್ಣವಾಗಿ ಜೀವನ ನಡೆಸುವಂತಾಗಬೇಕು ಎಂಬುದಾಗಿದೆ. ಜೊತೆಗೆ ಇದರ ಮಾರ್ಗದರ್ಶನ–ಶಿಕ್ಷಣಗಳು ಸಕಲ ಮನುಷ್ಯರಿಗೂ ಮುಕ್ತವಾಗಿ ಲಭಿಸುತ್ತದೆ. ಈ ಗ್ರಂಥದಿಂದ ಜ್ಞಾನ ಸಂಪಾದಿಸಲು ಇರುವ ಪ್ರಥಮ ಶರ್ತ ಪೂರ್ವಾಗ್ರಹ ರಹಿತವಾಗಿರುವುದು ಮತ್ತು ನಿಷ್ಪಕ್ಷಮತಿಯಾಗಿರುವುದು ಆಗಿದೆ. ಯಾವುದು ಸರಿ ಮತ್ತು ಯಾವುದು ತಪ್ಪು ಎಂಬ ವಿಷಯಗಳು ಮುಂದೆ ಬಂದಾಗ ಇದರಲ್ಲಿ ಸರಿ ಎಂದಿರುವುದನ್ನು ಸ್ವೀಕರಿಸಬೇಕು. ತಪ್ಪು ಎಂದಿರುವುದನ್ನು ತೊರೆಯಬೇಕು. ಮಾತ್ರವಲ್ಲ ಅದರಿಂದ ಸುರಕ್ಷಿತವಾಗಿರಬೇಕು. ಜೀವನದಲ್ಲಿ ಸರಿಯಾದದ್ದನ್ನೇ ಆಯ್ಕೆ ಮಾಡಿಕೊಳ್ಳಲು ಗರಿಷ್ಠವಾಗಿ ಪ್ರಯತ್ನಿಸಬೇಕು ಎಂದು ಪವಿತ್ರ ಕುರ್‌ಆನ್ ಮಾರ್ಗದರ್ಶನ ಮಾಡುತ್ತಿದೆ. ಇದನ್ನು ಸ್ವೀಕರಿಸಿ ಅದರಂತೆ ಜೀವನ ನಡೆಸುವ ಮತ್ತು ಅದರಂತೆ ಕರ್ಮವೆಸಗುವ ವ್ಯಕ್ತಿಯ ಜೀವನ ನೇರ ಮಾರ್ಗದಲ್ಲಿರುವುದು. ಇದು ಪವಿತ್ರ ಕುರ್‌ಆನಿನ ಶಿಕ್ಷಣ ಮತ್ತು ಮಾರ್ಗದರ್ಶನವಾಗಿದೆ.

ತನ್ನ ಆರಾಧ್ಯ ಗುಣಲಕ್ಷಣಗಳ ಸಹಿತ ಗ್ರಂಥದ ಒಡೆಯನಿಂದ ಪವಿತ್ರ ಕುರ್‌ಆನ್‌ನ ಪರಿಚಯ: ಪ್ರಪಂಚ ಸಾಮ್ರಾಟನಾದ ಅಲ್ಲಾಹನು ಇದು ತನ್ನ ಗ್ರಂಥ ವೆಂದೂ ಇದನ್ನು ಕ್ಷುಲ್ಲಕವೆಂದು ಪರಿಗಣಿಸಬಾರದೆಂದು ಪವಿತ್ರ ಕುರ್‌ಆನ್‌ನಲ್ಲಿ ಘೋಷಿಸಿರುವನು. ಆದ್ದರಿಂದ ಪವಿತ್ರ ಕುರ್‌ಆನನ್ನು ನಿರ್ಲಕ್ಷಿಸಬಾರದೆಂದು ಎಚ್ಚರಿಸಿರುವನು. ಪ್ರಪಂಚ ಸಾಮ್ರಾಟನ ಗ್ರಂಥವೆಂದು ಪರಿಚಯಿಸುವ ಜೊತೆಗೆ ತನ್ನ ಕೆಲವು ಪ್ರೀತಿ ಪಾತ್ರ ಗುಣವಿಶೇಷತೆಗಳಲ್ಲಿ ಆರಾಧ್ಯ ಎನ್ನುವ ಗುಣವೂ ಸೇರಿದೆ ಎಂದು ತಿಳಿಸಿರುವನು.

ಆರಾಧ್ಯನ ಮಧ್ಯಮ ಚಿತ್ರಣ ಕೂಡ ಸಿಗುತ್ತದೆ. ಇದು ಮನುಷ್ಯನ ಪ್ರಕೃತಿಯನ್ನು ತನ್ನ ನಿಜವಾದ ಆರಾಧ್ಯನಾದ ಅಲ್ಲಾಹನೆಡೆಗೆ ಸೆಳೆದುಕೊಂಡು ಹೋಗುವಂತಹ ವೈಶಿಷ್ಟ್ಯವಾಗಿದೆ. ಇದರ ಹೊರತು ಕರುಣಾಮಯಿ ನೈಜ ಆರಾಧ್ಯನ ಪರಿಚಿತನಾಗಿಯೂ ಮನುಷ್ಯನು ಸ್ವಾರ್ಥ, ಅಜ್ಞಾನ, ದೌರ್ಜನ್ಯದಲ್ಲಿ, ವಿನಾಶದಲ್ಲಿ ತೊಡಗಿದರೆ ಕಠಿಣ ಶಿಕ್ಷೆ ಅನುಭವಿಸಲು ಸಿದ್ಧನಿರಬೇಕು ಎಂದು ಪವಿತ್ರ ಕುರ್‌ಆನ್ ಎಚ್ಚರಿಸುತ್ತದೆ. ಏಕೆಂದರೆ ಆರಾಧ್ಯನ ಏಕತ್ವದ ಘೋಷಣೆ ಸತ್ಯವಾದುದು. ಅವನೇ ಗ್ರಂಥದ ಒಡೆಯ. ಇದನ್ನು ಅವನೇ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಘೋಷಿಸಿದ್ದಾನೆ, "ಈ ಗ್ರಂಥದ ಆವತೀರ್ಣವು ಅಲ್ಲಾಹನ ಕಡೆಯಿಂದಾಗಿರುತ್ತದೆ. ಅವನು ಪ್ರಬಲನೂ ಸರ್ವಜ್ಞನೂ ಪಾಪಗಳನ್ನು ಕ್ಷಮಿಸುವವನೂ ಪಶ್ಚಾತ್ತಾಪ ಸ್ವೀಕರಿಸುವವನೂ ಕಠಿಣ ಶಿಕ್ಷೆ ಕೊಡುವವನೂ ಮಹಾ ಅನುಗ್ರಹಿಯೂ ಆಗಿರುತ್ತಾನೆ. ಅವನ ಹೊರತು ಬೇರೆ ಆರಾಧ್ಯರಿಲ್ಲ. ಸರ್ವರಿಗೂ ಅವನ ಕಡೆಗೇ ಮರಳಬೇಕಾಗಿದೆ." (ಅಲ್ ಮೂಮಿನ್: 2–3)

ವಿಶ್ವಾಸವಿಟ್ಟರೂ ಇಡದಿದ್ದರೂ ನೀವು ಶಿಕ್ಷೆ, ಪ್ರತಿಫಲಗಳಿಗೆ ನಮ್ಮ ಬಳಿಗೆ ಮರಳಬೇಕಾಗಿದೆ ಎಂದು ಎಚ್ಚರಿಸುತ್ತಾನೆ.

ಕುರ್‌ಆನ್‌ನ ಒಡೆಯನಿಂದ ಅದರ ಸಮಗ್ರ ಪರಿಚಯ– ಜ್ಞಾನ ಮತ್ತು ಯುಕ್ತಿಯ ಗುಣವೈಶಿಷ್ಟ್ಯಗಳೊಂದಿಗೆ: ಸಂಪೂರ್ಣ ಜ್ಞಾನ ಮತ್ತು ಯುಕ್ತಿ ತುಂಬಿರುವುದು ಸೃಷ್ಟಿಕರ್ತನ ಕಡೆಯಿಂದ ಬಂದಿರುವ ಗ್ರಂಥದ ವಿಶೇಷತೆಯಾಗಿದೆ. ಅದರಲ್ಲಿ ಯಾವುದೇ ತಪ್ಪುಗಳಿರಲು ಸಾಧ್ಯವಿಲ್ಲ. ಯಾವುದೇ ಅನಗತ್ಯ ವಿಷಯಗಳಿರುವುದಿಲ್ಲ. ದಾಸರಿಗೆ ಯಾವುದೇ ವಿಧದಲ್ಲಿ ಹಾನಿಕರವಾಗುವುದಿಲ್ಲ. ಅನುಗ್ರಹಗಳೇ ತುಂಬಿವೆ. ಸ್ವಯಂ ಅಲ್ಲಾಹನೇ ತನ್ನ ಗ್ರಂಥವನ್ನು ಹೀಗೆ ಪರಿಚಯಿಸುತ್ತಾನೆ, "ಇವು ಯುಕ್ತಿ ಪೂರ್ಣವೂ ನೀತಿ ಬೋಧಕವೂ ಆಗಿರುವ ಗ್ರಂಥದ ಸೂಕ್ತಗಳು." (ಯೂನುಸ್: 1)

ಪವಿತ್ರ ಕುರ್‌ಆನ್ ಮನುಷ್ಯ ರಚಿತ ಗ್ರಂಥವಲ್ಲ

ಪವಿತ್ರ ಕುರ್‌ಆನ್ ಇದು ಯಾವುದೇ ಮನುಷ್ಯನು ರಚಿಸಿದ ಗ್ರಂಥವಲ್ಲ, ಅದು ಅಲ್ಲಾಹನ ಗ್ರಂಥವಾಗಿದೆ: ಈ ಗ್ರಂಥವು ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ಮಾನವ ಸಮುದಾಯಕ್ಕೆ ಲಭಿಸಿತು. ಆದರೆ ಈ ಗ್ರಂಥ ಪ್ರವಾದಿ ಮುಹಮ್ಮದ್‌ರು(ಸ) ರಚಿಸಿದ ಗ್ರಂಥವಲ್ಲ. ಇದು ಅಲ್ಲಾಹನ ಗ್ರಂಥ. ಮತ್ತು ಅವನಿಗೇ ಮಾತ್ರ ಇಂತಹ ಗ್ರಂಥವನ್ನು ರವಾನಿಸುವ ಸಾಮರ್ಥ್ಯವಿದೆ. ಈ ಗ್ರಂಥವನ್ನು ಅರ್ಥಮಾಡಿಕೊಳ್ಳುವುದು ವಿವೇಕವಾಗಿದೆ. ಯುಕ್ತಿಯುತವಾದ ವಚನಗಳು ಈ ಗ್ರಂಥದಲ್ಲಿ ತುಂಬಿದೆ.

"ಈ ಗ್ರಂಥದ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದ ಆಗಿರುತ್ತದೆ." (ಅಲ್ ಜಾಸಿಯ: 2)

ಯುಕ್ತಿ ಅಂದರೆ ಲಾಭವೇ? ಲಾಭವಾಗಿದೆ. ಮತ್ತು ವಿವಿಧ ಆಯಾಮಗಳ ಲಾಭವದು. ಆದೇಶದ ವಚನಗಳಲ್ಲಿ ನ್ಯಾಯ ಮತ್ತು ಸಂಯಮಗಳಿವೆ.

ಗ್ರಂಥದ ಒಡೆಯ ಅಲ್ಲಾಹ್ ಆಗಿದ್ದಾನೆ– ನಿಷ್ಕಳಂಕ ಅರಾಧನೆ ಅಲ್ಲಾಹನಿಗೇ ಸಲ್ಲುತ್ತದೆ: ಯಾವುದಾದರೊಂದು ಪುಸ್ತಕವನ್ನು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಉಡುಗೊರೆ ಕೊಟ್ಟರೆ ಅದರರ್ಥ ಅವನು ಆ ಪುಸ್ತಕದ ಕರ್ತೃ ಎಂದಾಗುವುದಿಲ್ಲ. ಇದರಂತೆ ಪವಿತ್ರ ಕುರ್‌ಆನನ್ನು ಪ್ರವಾದಿ ಮುಹಮ್ಮದ್‌ರು(ಸ) ಜನರಿಗೆ ತಲುಪಿಸಿದ್ದು ಮಾತ್ರ, ಖಂಡಿತ ಆ ಗ್ರಂಥ ಅವರು ಬರೆದುದಲ್ಲ. ಅದರ ಲೇಖಕ ತಾನಲ್ಲವೆಂದೂ ತಾನು ಅದನ್ನು ಬರೆದಿಲ್ಲವೆಂದೂ ಅದನ್ನು ಜಗತ್ತಿನ ಸೃಷ್ಟಿಕರ್ತ, ಪ್ರಭು ಮತ್ತು ಆಜ್ಞಾಧಿಕಾರಿ ಅದನ್ನು ಬರೆದಿರುವನೆಂದೂ ಅವನೇ ಅದರ ಲೇಖಕನೆಂದೂ ಸ್ವತಃ ಪ್ರವಾದಿ(ಸ) ಘೋಷಿಸಿದರು. ಇದನ್ನು ಬಹಳ ಸ್ಪಷ್ಟವಾಗಿ ಪವಿತ್ರ ಕುರ್‌ಆನ್ ವಿವರಿಸುತ್ತದೆ. ಪವಿತ್ರ ಕುರ್‌ಆನಿನಲ್ಲಿ ಈ ಗ್ರಂಥವು (ಅಲ್ಲಾಹನದ್ದು) ತನ್ನದೆಂದು ಅದರ ನೈಜ ರಚನಾಕಾರನೇ ಬಹಿರಂಗಪಡಿಸಿದನು. ಮಾನವರ ಮಾರ್ಗದರ್ಶನದ ಸಲುವಾಗಿ ಈ ಗ್ರಂಥವನ್ನು ವಿಶ್ವಸ್ಥರಾದ ಪ್ರವಾದಿ(ಸ) ಮೂಲಕ ಜನರೆಡೆಗೆ ಕಳುಹಿಸಿ ಕೊಟ್ಟಿರುವುದು ಎಂದು ವಿಶ್ವ ಸಾಮ್ರಾಟನು ತಿಳಿಸಿದನು ಮತ್ತು ಜನರ ದಾಸ್ಯತ್ವವು ತನಗಿರುವುದಾಗಿದೆ ಎಂದು ಒತ್ತು ನೀಡಿ ತಿಳಿಸಿರುವನು ಮತ್ತು ಮನುಷ್ಯರು ತನ್ನ ದಾಸ್ಯತ್ವವನ್ನು ಮಾತ್ರ ಮಾಡಬೇಕೆಂದೂ ಎಚ್ಚರಿಸಿರುವನು.

"ಈ ಗ್ರಂಥದ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದಾಗಿರುತ್ತದೆ. (ಸಂದೇಶವಾಹಕರೇ) ಈ ಗ್ರಂಥವನ್ನು ನಾವು ನಿಮ್ಮ ಕಡೆಗೆ ಪರಮ ಸತ್ಯವಾಗಿ ಅವತೀರ್ಣಗೊಳಿಸಿರುತ್ತೇವೆ. ಆದುದರಿಂದ ನೀವು ಧರ್ಮವನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತಾ ಅವನ ದಾಸ್ಯವನ್ನೇ ಮಾಡಿರಿ. ಎಚ್ಚರಿಕೆ! ಧರ್ಮವು ನಿಷ್ಕಳಂಕವಾಗಿ ಕೇವಲ ಅಲ್ಲಾಹನ ಹಕ್ಕಾಗಿದೆ. ಇನ್ನು ಅವನ ಹೊರತು ಇತರರನ್ನು ರಕ್ಷಕ ಮಿತ್ರರಾಗಿ ಮಾಡಿಕೊಂಡವರ ವಿಷಯ ಅವರು ನಮ್ಮನ್ನು ಅಲ್ಲಾಹನಿಗೆ ನಿಕಟಗೊಳಿಸಲಿಕ್ಕಾಗಿ ಮಾತ್ರ ನಾವು ಅವರ ಆರಾಧನೆ ಮಾಡುತ್ತೇವೆ (ಎಂದು ಅವರು ವಾದಿಸುತ್ತಾರೆ). ಖಂಡಿತವಾಗಿಯೂ ಅಲ್ಲಾಹನು ಅವರು ಭಿನ್ನತೆ ತೋರಿದ ಎಲ್ಲ ವಿಷಯಗಳ ತೀರ್ಮಾನ ಮಾಡಿ ಬಿಡುವನು. ಸುಳ್ಳುಗಾರನೂ ಸತ್ಯ ನಿಷೇಧಿಯೂ ಆಗಿರುವಂತಹವನಿಗೆ ಅಲ್ಲಾಹನು ಸನ್ಮಾರ್ಗದರ್ಶನವೀಯುವುದಿಲ್ಲ."

(ಅಝ್ಝುಮರ್: 1–3)

ಕುರ್‌ಆನ್ ಸೃಷ್ಟಿಕರ್ತನ ವಚನ, ಮನುಷ್ಯರದ್ದಲ್ಲ: ಪವಿತ್ರ ಕುರ್‌ಆನ್ ಮನುಷ್ಯನ ಮಾತುಗಳಲ್ಲ. ಜನರ ಮುಂದೆ ಪ್ರಸ್ತುತ ಪಡಿಸಿದ ವ್ಯಕ್ತಿಯ ವಚನಗಳೂ ಅವಲ್ಲ.

ಬದಲಾಗಿ ಪ್ರಪಂಚ ಸೃಷ್ಟಿಕರ್ತ, ಮನುಷ್ಯರ ಸೃಷ್ಟಿಕರ್ತನ ವಚನಗಳಾಗಿವೆ. ಯಾವುದೇ ವ್ಯಕ್ತಿಯಿಂದ ಇದುವರೆಗೂ ಪವಿತ್ರ ಕುರ್‌ಆನಿನಂತಹದೇ ವಚನಗಳನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಇನ್ನು ಮುಂದೆಯೂ ಸೃಷ್ಟಿಸುವುದಕ್ಕೂ ಸಾಧ್ಯವಲ್ಲ. ಸ್ವತಃ ಪವಿತ್ರ ಕುರ್‌ಆನ್ ಈ ಕುರಿತು ಸವಾಲು ನೀಡಿದೆ. ಒಂದು ವೇಳೆ ತಾನು ದೈವಿಕ ವಚನಗಳಲ್ಲವಾದರೆ ಇಂತಹ ವಚನಗಳನ್ನು ರಚಿಸಿ ತನ್ನಿರಿ ಎಂಬುದಾಗಿ ಅದನ್ನು ನಿರಾಕರಿಸುತ್ತಿದ್ದವರ ಮುಂದೆಯೇ ಸವಾಲು ಒಡ್ಡಿತು. ಇದನ್ನು ಪೈಂಗಬರರು ಸ್ವತಃ ರಚಿಸಿಕೊಂಡರೆಂದು ಇವರು ಹೇಳುತ್ತಾರೆಯೇ? ಹೇಳಿರಿ, "ನೀವು ನಿಮ್ಮ ಈ ಆಪಾದನೆಯ ಬಗ್ಗೆ ಸತ್ಯವಾದಿಗಳಾಗಿದ್ದರೆ ಇದರಂತಿರುವ ಒಂದು ಅಧ್ಯಾಯವನ್ನು ರಚಿಸಿ ತನ್ನಿರಿ ಮತ್ತು ಅಲ್ಲಾಹನೋರ್ವನನ್ನು ಬಿಟ್ಟು ಯಾರನ್ನೆಲ್ಲ ಸಹಾಯಕ್ಕಾಗಿ ಕರೆಯಲು ಸಾಧ್ಯವಿದೆಯೋ ಅವರನ್ನೆಲ್ಲ ಕರೆದುಕೊಳ್ಳಿರಿ." **(ಯೂನುಸ್: 38)**

ಪವಿತ್ರ ಕುರ್‌ಆನನ್ನು ವಿರೋಧಿಗಳು ಪ್ರವಾದಿ ರಚಿಸಿದ ಗ್ರಂಥ ಎನ್ನುವುದು ಕೇವಲ ಒಂದು ಆರೋಪವಾಗಿದೆ. ಪವಿತ್ರ ಕುರ್‌ಆನ್ ಸ್ವತಃ ಪ್ರವಾದಿಯವರನ್ನೇ(ಸ) ಉದ್ದೇಶಿಸಿ ಈ ಗ್ರಂಥ ಅಲ್ಲಾಹನ ಗ್ರಂಥವಾಗಿದೆ, ಪ್ರಪಂಚ ಸಾಮ್ರಾಟನ ಗ್ರಂಥ ವಾಗಿದೆ ಎಂದು ಹೇಳಿತು. ಆದುದರಿಂದ ಪವಿತ್ರ ಕುರ್‌ಆನ್ ಪ್ರವಾದಿ ರಚಿಸಿರುವ ಗ್ರಂಥ ಅಲ್ಲ ದೈವಿಕ ಗ್ರಂಥ ಎಂದು ಸಂದೇಹಾತೀತವಾಗಿ ಸಾಬೀತುಗೊಳ್ಳುತ್ತಿದೆ..

ಪವಿತ್ರ ಕುರ್‌ಆನ್‌ನ ವೈಶಿಷ್ಟ್ಯತೆ, ಎಚ್ಚರಿಕೆ ಮತ್ತು ಮಾರ್ಗದರ್ಶನ:

ಪವಿತ್ರ ಕುರ್‌ಆನ್ ಯಾವುದೋ ಪವಿತ್ರ ಅಸ್ತಿತ್ವದ ಗ್ರಂಥವೆಂದು ತನ್ನನ್ನು ಪರಿಚಯಿಸಿತು. ಆದರೆ ಜಗತ್ತಿನ ಮುಂದೆ ಒಬ್ಬ ಮನುಷ್ಯನ ಮೂಲಕ ಪ್ರಸ್ತುತ ಗೊಳ್ಳುತ್ತಿದೆ ಎಂದಿತು. ಇದರ ಜೊತೆಯಲ್ಲೇ ತನ್ನ ಅವತೀರ್ಣತೆಯ (ಬಂದಿರುವ) ಉದ್ದೇಶವನ್ನೂ ತಿಳಿಸಿತು. ಅದರಲ್ಲಿ ಯಾವ ಸಂದೇಶವಿದೆ ಎಂದೂ ಅದರಲ್ಲಿ ಮನುಷ್ಯರಿಗೆ ಯಾವೆಲ್ಲ ಅನುಗ್ರಹಗಳಿವೆಯೆಂದೂ ಮತ್ತು ಯಾವ ರೀತಿ ಸರಿ ಮತ್ತು ತಪ್ಪುಗಳ ಅಂತರವನ್ನು ಮಾಡುತ್ತದೆ ಎಂದೂ ಜನರನ್ನು ಯಾವ ರೀತಿ ನರಕದ ಬೆಂಕಿಯಿಂದ ರಕ್ಷಿಸುವುದು ಎಂದೂ ಈ ಪ್ರಾಪಂಚಿಕ ಜೀವನದ ವಾಸ್ತವಿಕತೆಗಳೇನು ಎಂದೂ ತಿಳಿಸಿ ಮನುಷ್ಯರ ಜೀವನಕ್ಕೆ ಮಾರ್ಗದರ್ಶನ ನೀಡುತ್ತಿದೆ.

"ಈ ಗ್ರಂಥದ ಅವತೀರ್ಣವು ನಿಸ್ಸಂದೇಹವಾಗಿಯೂ ಸರ್ವಲೋಕಗಳ ಪಾಲಕ ಪ್ರಭುವಿನ ಕಡೆಯಿಂದಾಗಿರುತ್ತದೆ. ಇದನ್ನು ಈ ವ್ಯಕ್ತಿಯು ಸ್ವತಃ ಸೃಷ್ಟಿಸಿ ಕೊಂಡಿದ್ದಾನೆಂದು ಇವರು ಹೇಳುತ್ತಾರೆಯೇ? ಅಲ್ಲ; ನಿಮಗಿಂತ ಮುಂಚೆ ಎಚ್ಚರಿಕೆ ನೀಡುವವರಾರೂ ಬಂದಿಲ್ಲದಂತಹ ಒಂದು ಜನಾಂಗಕ್ಕೆ ನೀವು ಎಚ್ಚರಿಕೆ ನೀಡಲಿಕ್ಕಾಗಿದೆ. ತನ್ಮೂಲಕ ಅವರು ಸನ್ಮಾರ್ಗ ಪಡೆಯಲೂಬಹುದು." **(ಅಸ್ಸಜ್ದ: 2–3)**

ಮೇಲಿನ ವಚನಗಳ ಮೂಲಕ ಪವಿತ್ರ ಕುರ್‌ಆನ್ ಜನರೆಡೆಗೆ ತನ್ನನ್ನು ತಂದವರ ಮೇಲೆ ಹೊರಿಸಲಾಗುವ ಆರೋಪಗಳನ್ನು ಸ್ವಯಂ ನಿವಾರಿಸಿತು. ಕೇವಲ ಆರೋಪಗಳ ಮೂಲಕ ಸೃಷ್ಟಿಯಾದ ತಪ್ಪುಕಲ್ಪನೆಗಳು ಎಲ್ಲವನ್ನೂ ಗ್ರಂಥದ ಕರ್ತೃ ಹಾಗೂ ಒಡೆಯನಾದ ಅಲ್ಲಾಹನೇ ನಿರಾಕರಿಸುವ ಮೂಲಕ ದೂರಗೊಳಿಸುತ್ತಾನೆ. ಅಂದರೆ ಸ್ವಯಂ ತಾನು ಯಾರ ಗ್ರಂಥ ಎಂದು ಗ್ರಂಥವೇ ತಿಳಿಸಿತು. ಸಕಲ ಲೋಕಗಳ ಒಡೆಯನ ಗ್ರಂಥವೇ ಅದು ಆಗಿದ್ದರೂ ಮನುಷ್ಯನ ಮೂಲಕವೇ ಜನರ ಮುಂದೆ ಪ್ರಸ್ತುತಗೊಳ್ಳುತ್ತಿದೆಯೆಂದೂ ಅದಕ್ಕಿರುವ ಉದ್ದೇಶವನ್ನೂ ಅದು ತಿಳಿಸಿತು. ಮಾತ್ರವಲ್ಲ ಮನುಷ್ಯನಿಗೆ ಇಹಲೋಕ ಜೀವನ ಅಂತಿಮವಲ್ಲ. ಆನಂತರವೂ ಇನ್ನೊಂದು ಜೀವನವಿದ್ದು ಮನುಷ್ಯರ ಇಲ್ಲಿನ ಕರ್ಮಗಳ ಲೆಕ್ಕಾಚಾರ ಅದರಲ್ಲಿ ನಡೆಯುತ್ತದೆ ಎಂದೂ ತಿಳಿಸಿತು.

ಅಲ್ಲಾಹನ ಗ್ರಂಥ ಮತ್ತು ಅಲ್ಲಾಹನ ಸಂದೇಶವಾಹಕರು

ಗ್ರಂಥ ಮತ್ತು ಪ್ರವಾದಿ(ಸ) ಅಲ್ಲಾಹನ ಕಡೆಯಿಂದಿರುವವರು: ಗ್ರಂಥ ಅಲ್ಲಾಹನದ್ದಾಗಿರುವಾಗ ಸಹಜವಾಗಿ ಅದನ್ನು ತಂದಿರುವವರು ಕೂಡ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಅಧಿಕೃತ ಪ್ರವಾದಿ(ಸ) ಎಂದು ದೃಢಪಡುತ್ತದೆ. ಆದ್ದರಿಂದ ಈ ಗ್ರಂಥ ಮತ್ತು ಪ್ರವಾದಿ ಸಂದೇಶವಾಹಕರು(ಸ) ಸತ್ಯಸಂಧರು ಎಂದು ದೃಢಪಡುತ್ತದೆ. ಗ್ರಂಥ ಮತ್ತು ಸಂದೇಶವಾಹಕರ(ಸ) ಕಾರ್ಯ ಅಲ್ಲಾಹನ ವಚನಗಳನ್ನು ಜನರಿಗೆ ತಲುಪಿಸುವುದಾಗಿದೆ. ಪ್ರವಾದಿ(ಸ) ಅಲ್ಲಾಹನ ವಚನಗಳನ್ನು ಬಹಿರಂಗವಾಗಿ ಮನವರಿಕೆ ಮಾಡಿಕೊಡುವರು. ಜೊತೆಗೆ ಇದರ ಆಜ್ಞೆಗಳನ್ನು ಜೀವನದಲ್ಲಿ ಅಳವಡಿಸುವವರು ಜೀವಂತ ಮಾದರಿಯಾಗುವರು. ಅವರನ್ನು ನೋಡಿ ಕರ್ಮವೆಸಗುವುದು ಜನರಿಗೆ ಸುಲಭವಾಗಲಿ ಎಂದು ಚರ್ಚೆಯ ಮೂಲಕ ಮಾದರಿಯುತ ಜೀವನವನ್ನು ಜನರ ಮುಂದಿಡುತ್ತಾರೆ. ಪ್ರವಾದಿಯವರ(ಸ) ಮಾದರಿ ಜೀವನವನ್ನು ಅಲ್ಲಾಹನು ತನ್ನ ಗ್ರಂಥದಲ್ಲಿ ಈ ರೀತಿ ದೃಢೀಕರಿಸಿರುವನು... "ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಉತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ." **(ಅಲ್ ಅಹ್ಝಾಬ್: 21)**

"ಇವು ದೇವಗ್ರಂಥದ ಸೂಕ್ತಗಳು. ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಅವತೀರ್ಣಗೊಳಿಸಲ್ಪಟ್ಟುದೆಲ್ಲವೂ ಪರಮ ಸತ್ಯ, ಆದರೆ, (ನಿಮ್ಮ ಜನಾಂಗದ) ಹೆಚ್ಚಿನವರು ವಿಶ್ವಾಸವಿರಿಸುತ್ತಿಲ್ಲ." **(ಅರ್ರಅದ್: 1)**

ಪವಿತ್ರ ಕುರ್‌ಆನ್ ಮತ್ತು ಸಂದೇಶವಾಹಕರು(ಸ) ದೈವಿಕ ಸಂದೇಶದ ಮಾಧ್ಯಮ: ಸೃಷ್ಟಿಕರ್ತನ ಸಂದೇಶ ಅವನ ದಾಸರ ಕಡೆಗೆ ತಲುಪಿಸಲು ಕೇವಲ ಮೂರು

ಮಾಧ್ಯಮಗಳು ಇರಲು ಸಾಧ್ಯ. ಪ್ರತಿಯೊಬ್ಬ ಮನುಷ್ಯನನ್ನು ತಮ್ಮ ಬಳಿಗೆ ಕರೆದು ಸಂದೇಶ ನೀಡುವುದು. ಅಥವಾ ಪ್ರತ್ಯಪ್ರತ್ಯೇಕವಾಗಿ ಪ್ರತಿಯೊಬ್ಬ ವ್ಯಕ್ತಿಯನ್ನು ಭೇಟಿಯಾಗಿ ಸಂದೇಶ ತಲುಪಿಸುವುದು. ಈ ಎರಡು ವಿಧಾನಗಳು ಪ್ರಪಂಚ ಸಾಮ್ರಾಟನ ಘನತೆಗೆ ತಕ್ಕುದಲ್ಲ. ಆದುದರಿಂದ ಅಳವಡಿಸಿಕೊಂಡಿರುವ ಮೂರನೇ ವಿಧಾನವೇ ಸರಿಯಾದುದು ಮತ್ತು ವ್ಯವಸ್ಥಿತವಾದುದು ಮತ್ತು ಪ್ರಪಂಚ ಸಾಮ್ರಾಟನ ಘನತೆಗೆ ತಕ್ಕುದಾಗಿದೆ ಎನ್ನಬಹುದು. ಓರ್ವ ಸಮರ್ಥ, ಜವಾಬ್ದಾರ, ಸತ್ಯಸಂಧ ವಿಶ್ವಸ್ಥ ವ್ಯಕ್ತಿಯ ಬಳಿಗೆ ಸಂದೇಶವನ್ನು ತಲುಪಿಸುವ ವ್ಯವಸ್ಥೆ ಮಾಡುವುದು ಅವನು ಅದನ್ನು ಇತರ ಜನರೆಡೆಗೆ ತಲುಪಿಸುವುದು ಮತ್ತು ಕೇವಲ ತಲುಪಿಸುವುದು ಮಾತ್ರವಲ್ಲ ಸ್ಪಷ್ಟವಾದ ವಿಧಾನದಲ್ಲಿ ಬಹಿರಂಗವಾಗಿ ತಲುಪಿಸುವುದು ಮತ್ತು ಜೀವನ ಚರ್ಯೆಯ ಮಾದರಿ ಯನ್ನು ತನ್ನ ಜೀವನದಲ್ಲಿ ಪ್ರಸ್ತುತಪಡಿಸುವುದು. ಈ ಶಿಕ್ಷಣದಂತೆ ಸುಲಭವಾಗಿ ಕರ್ಮವೆಸಗಲು ಜನರು ಪ್ರವಾದಿಯ(ಸ) ಜೀವನವನ್ನು ಅನುಸರಿಸುವುದು ಸೃಷ್ಟಿಕರ್ತನ ಸಂದೇಶ ಅವನ ದಾಸರೆಡೆಗೆ ತಲುಪುವ ಮೂರನೇ ವಿಧಾನ ಮತ್ತು ಮಾಧ್ಯಮವಾಗಿದೆ.

ಆದುದರಿಂದ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯನ್ನು(ಸ) ಕಳುಹಿಸಿದ ಉದ್ದೇಶವನ್ನು ಸೃಷ್ಟಿಕರ್ತನು ಸ್ಪಷ್ಟವಾಗಿ ತಿಳಿಸಿದ್ದಾನೆ, "ಇದು ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟಿರುವ ಗ್ರಂಥ. ಆದುದರಿಂದ ಓ ಮುಹಮ್ಮದರೇ, ಇದರಿಂದ ನಿಮ್ಮ ಹೃದಯದಲ್ಲಿ ಅಳುಕುಂಟಾಗದಿರಲಿ. ಇದನ್ನು ಅವತೀರ್ಣಗೊಳಿಸುವ ಉದ್ದೇಶವು ನೀವು ಇದರ ಮೂಲಕ (ನಿಷೇಧಿಗಳಿಗೆ) ಎಚ್ಚರಿಕೆ ನೀಡಬೇಕು ಮತ್ತು ವಿಶ್ವಾಸಿಗಳಿಗೆ ಉಪದೇಶ ನೀಡಬೇಕು ಎಂಬುದಾಗಿರುತ್ತದೆ." (ಅಲ್ ಅಅ್‌ರಾಫ್: 2)

ಈ ವಚನಗಳಿಂದ ಪ್ರಭು (ಸೃಷ್ಟಿಕರ್ತನು) ತನ್ನ ದಾಸರ ವರೆಗೆ ತನ್ನ ಸಂದೇಶ ವನ್ನು ತಲುಪಿಸುವ ವ್ಯವಸ್ಥೆಯ ಮಾಧ್ಯಮವಾಗಿ ಪ್ರವಾದಿ ಮತ್ತು ಗ್ರಂಥವನ್ನು ಬಳಸಿ ದನು ಎಂದು ತಿಳಿದು ಬರುತ್ತದೆ. ಆದುದರಿಂದ ಅಲ್ಲಾಹನೇ ಪ್ರಪಂಚ ಸಾಮ್ರಾಟ ನಾಗಿದ್ದು ಈ ಸಂದೇಶವನ್ನು ಅರಿತು ಮನವರಿಕೆ ಮಾಡಿಕೊಂಡು ಅಲ್ಲಾಹನ ಗ್ರಂಥ ಮತ್ತು ಅಲ್ಲಾಹನ ಪ್ರವಾದಿಯ(ಸ) ವಚನಗಳು ಮತ್ತು ಚರ್ಯೆಯನ್ನು ಅನುಸರಿಸ ಬೇಕೆಂದು ಮೇಲಿನ ವಚನಗಳಿಂದ ತಿಳಿದು ಬರುತ್ತದೆ.

ಪವಿತ್ರ ಕುರ್‌ಆನ್ ಮತ್ತು ಪ್ರವಾದಿ:

ಗ್ರಂಥ ಯಾರದೋ ಅವನದೇ ಸಂದೇಶವಾಹಕರು: ಮೊದಲು ಗ್ರಂಥದಲ್ಲಿ ಕಣ್ಣೋಡಿಸುವಾಗಲೇ ಇದನ್ನು ತಂದವರು ಸತ್ಯಸಂಧ ವ್ಯಕ್ತಿ ಎಂದು ತಿಳಿಯುತ್ತದೆ. ಮತ್ತು ಗ್ರಂಥವನ್ನು ತಂದ ವ್ಯಕ್ತಿ(ಸಂದೇಶವಾಹಕರ)ಯತ್ತ ಮೊದಲ ನೋಟ ಹರಿಸಿದಾಗಲೇ ಈ ಗ್ರಂಥ ಸತ್ಯವಾದುದು ಎಂದೂ ಇದು ಮನುಷ್ಯನನ್ನು

ಸೃಷ್ಟಿಸಿರುವ ಸೃಷ್ಟಿಕರ್ತನ ಗ್ರಂಥವೆಂದೂ ಮನವರಿಕೆಯಾಗುತ್ತದೆ. ಅದರಂತೆ ಗ್ರಂಥ ಮತ್ತು ಪ್ರವಾದಿ ಎರಡೂ ಪರಸ್ಪರರನ್ನು ಪುರಾವೆ ಸಹಿತ ದೃಢೀಕರಿಸುತ್ತಾರೆ. ಅಂದರೆ ಗ್ರಂಥವು ಮುಹಮ್ಮದ್‌ರನ್ನು(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆಂದೂ ಮುಹಮ್ಮದ್‌ರು(ಸ) ಅಲ್ಲಾಹನ ಗ್ರಂಥ ಪವಿತ್ರ ಕುರ್‌ಆನ್ ಇದೆಂದೂ ಸತ್ಯವನ್ನೇ ಹೇಳುತ್ತಾರೆ. ಆದುದರಿಂದ ನಮಗೆ ಇವೆರಡೂ ಅಲ್ಲಾಹನಿಂದ ನಿಯೋಜಿಸಲ್ಪಟ್ಟುದು ಎಂಬ ನಂಬಿಕೆ ಮೂಡುತ್ತದೆ.

"ಯುಕ್ತಿಪೂರ್ಣ ಕುರ್‌ಆನಿನಾಣೆ! ನಿಶ್ಚಯವಾಗಿಯೂ ನೀವು ಅಲ್ಲಾಹನ ಸಂದೇಶವಾಹಕರಲ್ಲಾಗಿರುತ್ತೀರಿ. ನೇರ ಮಾರ್ಗದಲ್ಲಿದ್ದೀರಿ. (ಈ ಕುರ್‌ಆನ್) ಅತ್ಯಂತ ಪ್ರಬಲನೂ ಕರುಣಾನಿಧಿಯೂ ಆದವನಿಂದ ಅವತೀರ್ಣಗೊಂಡುದಾಗಿದೆ. (ಇದು) ಪೂರ್ವಿಕರು ಎಚ್ಚರಿಸಲ್ಪಟ್ಟಿರದ ಕಾರಣದಿಂದ ಪ್ರಜ್ಞಾಹೀನರಾಗಿ ಬಿಟ್ಟಿರುವಂತಹ ಒಂದು ಜನಾಂಗಕ್ಕೆ ನೀವು ಎಚ್ಚರಿಕೆ ಕೊಡುವಂತಾಗಲು." **(ಯಾಸೀನ್: 2-6)**

ಮೇಲಿನ ವಚನಗಳಿಂದ ಯುಕ್ತಿಪೂರ್ಣವಾದ ಕುರ್‌ಆನ್ ಆಣೆಯನ್ನೇ ಹಾಕಿ ಈ ಗ್ರಂಥ ಕುರ್‌ಆನ್‌ನ ಕುರಿತು ನೀವು ಪ್ರಬುದ್ಧವಾಗಿ ವಿವೇಚಿಸುವುದರಿಂದ ಇದನ್ನು ತಂದವರು ಸತ್ಯಸಂಧ ಸಂದೇಶವಾಹಕರು (ಪ್ರವಾದಿ) ಎಂದು ತಿಳಿಯುತ್ತದೆ ಎನ್ನಲಾಗಿದೆ. ಅದು ಅಲ್ಲಾಹನ ಗ್ರಂಥವಾಗಿದೆ ಎಂದೂ ಮನವರಿಕೆಯಾಗುತ್ತದೆ. ಎಚ್ಚರಿಸುವವನು (ಪ್ರವಾದಿ) ಕುರ್‌ಆನ್‌ನ ಮೂಲಕ ಜನರನ್ನು ಎಚ್ಚರಿಸುವ ಕಾರ್ಯ ಮಾಡುವನು. ಆದರೆ ಜನರು ಎಚ್ಚರಿಸದ(ಜಾಗೃತಗೊಳಿಸಿದ) ಕಾರಣದಿಂದಲೇ ಅನಾಸ್ಥೆಯಲ್ಲಿ ಬಿದ್ದುಕೊಂಡಿರುವುದು ಎಂದು ಮೇಲಿನ ವಚನಗಳು ತಿಳಿಸುತ್ತಿವೆ.

ಸಂದೇಶವಾಹಕರು ಮತ್ತು ಗ್ರಂಥ ಪ್ರಮುಖವಾದ ಒಂದು ವಿಷಯವನ್ನು ತಂದಿರುವರು: ಸೃಷ್ಟಿಕರ್ತನು ಸಕಲ ಮನುಷ್ಯರಿಗಾಗಿ ಸಂದೇಶವಾಹಕರ ಮೂಲಕ ಪವಿತ್ರ ಕುರ್‌ಆನ್‌ನ ರೂಪದಲ್ಲಿ ಬಹು ಪ್ರಮುಖವಾದ ಒಂದು ವಿಷಯವನ್ನು ಕಳುಹಿಸಿ ಕೊಟ್ಟಿರುವನು. ಅದು ಸಂಪೂರ್ಣ ಜೀವನಕ್ಕೆ ದೀವಟಿಗೆ (ಪ್ರಕಾಶ) ಮತ್ತು ಮಾರ್ಗದರ್ಶಿಯಾಗಿದೆ ಮತ್ತು ಈ ಗ್ರಂಥ ಪವಿತ್ರ ಕುರ್‌ಆನ್ ಮೇಲಾಗಲಿ ಮತ್ತು ಇದನ್ನು ತಂದಿರುವ ಪ್ರವಾದಿ ಮುಹಮ್ಮದ್‌ರ(ಸ) ಮೇಲಾಗಲಿ ಯಾವ ಸಂದೇಹ ಇರಬಾರದು. ಪವಿತ್ರ ಕುರ್‌ಆನ್ ಮತ್ತು ಸಂದೇಶವಾಹಕರು ಇಬ್ಬರೂ ಸೃಷ್ಟಿಕರ್ತನ ಕಡೆಯಿಂದಿರುವವರು. ಇಬ್ಬರೂ ಸೃಷ್ಟಿಕರ್ತನ ಕರುಣೆ ಮತ್ತು ಅನುಗ್ರಹದ ರೂಪದಲ್ಲಿ ಮನುಷ್ಯರೆಡೆಗೆ ಬಂದಿರುವುದು. ಮನುಷ್ಯರನ್ನು ಸಂದೇಹಮುಕ್ತಗೊಳಿಸಲು ಮತ್ತು ಸುರಕ್ಷಿತವಾಗಿರಿಸುವ ಸಲುವಾಗಿ ಆಂತರಿಕ ಹಾಗೂ ಬಹಿರಂಗ ನಿದರ್ಶನಗಳ ಸಹಿತ ಸೃಷ್ಟಿಕರ್ತನು ತನ್ನ ಪ್ರವಾದಿಯನ್ನು ಮತ್ತು ಗ್ರಂಥವನ್ನು ಕಳುಹಿಸಿರುವನು.

ಮುಹಮ್ಮದ್‌ರ(ಸ) ಜೀವನ ಚರ್ಯೆಯಲ್ಲಿ ಮತ್ತು ಪವಿತ್ರ ಕುರ್‌ಆನ್‌ನ ಶಿಕ್ಷಣಗಳಲ್ಲಿ ಈ ಆಂತರಿಕ ನಿದರ್ಶನ ಅಡಕವಾಗಿದೆ. ಪ್ರವಾದಿ ಮತ್ತು ಪವಿತ್ರ ಕುರ್‌ಆನ್ ಶಿಕ್ಷಣದಂತೆ ಜೀವನದಲ್ಲಿ ಕರ್ಮವೆಸಗುವುದು ಬಾಹ್ಯ ನಿದರ್ಶನವಾಗಿದೆ. ಮನುಷ್ಯನನ್ನು ಪೈಶಾಚಿಕತೆಯಿಂದ ಉನ್ನತ ಮಟ್ಟಕ್ಕೇರಿಸಿ ನೈಜ ಮನುಷ್ಯನಾಗಿ ಇವು ರೂಪಿಸುತ್ತವೆ ಮತ್ತು ಸಂಪೂರ್ಣ ಮಾನವೀಯ ಸಮಾಜಕ್ಕೆ ಅಡಿಪಾಯ ಹಾಕುತ್ತವೆ. ಈ ಸಮಾಜದಲ್ಲಿ ಅಸ್ತಿತ್ವಕ್ಕೆ ಬರುವ ಆಡಳಿತ ವ್ಯವಸ್ಥೆಯು ನ್ಯಾಯಪೂರ್ಣ, ಪ್ರಾಯೋಗಿಕ, ಕುರುಣೆ ಮತ್ತು ಅನುಗ್ರಹಗಳನ್ನು ತುಂಬಿದುದಾಗಿ ರುವುದು. ಅಲ್ಲಾಹನ ಗ್ರಂಥವಾದ ಪವಿತ್ರ ಕುರ್‌ಆನ್ ಸೆಲ್ಫ್ ಇಂಟ್ರುಡಕ್ಷನ್ ಅಂದರೆ ಸ್ವತಃ ತನ್ನನ್ನು ಅಲ್ಲಾಹನ ಗ್ರಂಥ ಎಂದು ಸ್ವಯಂ ಪರಿಚಯಿಸಿತು. ಸಂದೇಶವಾಹಕರನ್ನು ಕೂಡ ಪರಿಚಯಿಸಿತು. ಆದುದರಿಂದ ನಿಷ್ಪಕ್ಷಮತಿಯಾದ ಮತ್ತು ಮಾನವೀಯತೆಯುಳ್ಳ ದಕ್ಷ ಮನುಷ್ಯರಲ್ಲಿ ಯಾವುದೇ ಸಂದೇಹಗಳಿಗೆ ಆಸ್ಪದವಾಗದಂತಹ ನಿರ್ದಶನಗಳನ್ನು ಪ್ರವಾದಿ ಮತ್ತು ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಇರಿಸಿದನು.

ಕೇವಲ ಸ್ವಾರ್ಥಿಗಳು ಮತ್ತು ಲೌಕಿಕವಾದಿ ಮನುಷ್ಯರು ಮಾತ್ರ ತಮ್ಮ ಆತ್ಮ ಪ್ರಜ್ಞೆ ಮತ್ತು ಸಹಜ ಸ್ವಭಾವದ ವಿರುದ್ಧವೇ ಬಲಪ್ರಯೋಗಿಸುತ್ತಾರೆ. ಘರ್ಷಣೆ, ಗುದ್ದಾಟ ನಡೆಸಿ ಈ ಎಲ್ಲ ನಿದರ್ಶನಗಳನ್ನು ಅವರು ನಿರಾಕರಿಸುತ್ತಾರೆ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯನ್ನು ಸುಳ್ಳುವಾದಿ ಎಂದು ಅವರು ಘೋಷಿಸುವರು. ತಮ್ಮ ಪ್ರತಿ ಯೊಂದು ಆಶೆ–ಆಕಾಂಕ್ಷೆಗಳನ್ನು ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯ ಶಿಕ್ಷಣಕ್ಕೆ ವಿರುದ್ಧವಾಗಿ ಅಕ್ರಮ ವಿಧಾನದಿಂದ ಅವರಿಗೆ ಸಾಧಿಸಿಕೊಳ್ಳಬೇಕಿತ್ತು. ಅದಕ್ಕಾಗಿ ಜನರ ಮೇಲೆ ದಬ್ಬಾಳಿಕೆ, ಕ್ರೌರ್ಯಗಳನ್ನೆಸುಗುತ್ತಾರೆ. ಜನರ ಹಕ್ಕುಗಳನ್ನು ಕಬಳಿಸಿ ತಮ್ಮ ಇಷ್ಟವನ್ನು ಪೂರ್ತಿಗೊಳಿಸುತ್ತಾರೆ. ಮರಣಾನಂತರ ಎದ್ದೇಳಿಸುವ ಕುರಿತು, ಆ ನಂತರ ಇರುವ ವಿಚಾರಣೆಯ ಕುರಿತು, ಅಲ್ಲಿ ನ್ಯಾಯದಾನವಾಗುವ ಕುರಿತು, ಅಕ್ರಮಿಗಳು ನರಕಕ್ಕೆ ಪ್ರವೇಶಿಸಬೇಕಾಗುವುದು ಎಂಬುದರ ಕುರಿತಾದ ಭಯ ಮತ್ತು ನಂಬಿಕೆಗಳಿಂದ ತಮ್ಮನ್ನು ಇಂತಹವರು ಬೇರ್ಪಡಿಸುತ್ತಾರೆ. ತಮ್ಮಿಂದ ದೂರ ಇರಿಸುತ್ತಾರೆ.

ಆದರೆ ಅಲ್ಲಾಹನು ಈ ರೀತಿ ಹೇಳುತ್ತಾನೆ, "ನಾವು ನಮ್ಮ ಸಂದೇಶವಾಹಕರನ್ನು ಸುವ್ಯಕ್ತ ನಿದರ್ಶನಗಳು ಮತ್ತು ಸನ್ಮಾರ್ಗ ದರ್ಶನದೊಂದಿಗೆ ಕಳುಹಿಸಿದೆವು. ಜನರು ನ್ಯಾಯದಲ್ಲಿ ಸ್ಥಿರವಾಗಿ ನಿಲ್ಲಲೆಂದು. ಅವರ ಜೊತೆ ಗ್ರಂಥ ಮತ್ತು ತಕ್ಕಡಿಯನ್ನು ಅವತೀರ್ಣಗೊಳಿಸಿದೆವು." (ಅಲ್‌ಹದೀದ್: 25 ಆರಂಭಿಕ ಸೂಕ್ತಗಳು)

ಅಂದರೆ, ಅಲ್ಲಾಹನ ಶಿಕ್ಷಣಗಳು ನ್ಯಾಯದ ತಳಹದಿಯಲ್ಲಿದ್ದು ಈ ಶಿಕ್ಷಣಗಳನ್ನು ಸಮಾಜದಲ್ಲಿ ಜಾರಿಗೆ ತರುವ ಮೂಲಕ (ಆ ಶಿಕ್ಷಣಗಳಂತೆ ಕರ್ಮವೆಸಗುವ

ಮೂಲಕ) ಮನುಷ್ಯರ ಜೀವನ ಮತ್ತು ಸಮಾಜದಲ್ಲಿ ನ್ಯಾಯ ಮತ್ತು ಸಮಾನತೆ ಸ್ಥಿರಗೊಳ್ಳಬೇಕಾಗಿದೆ.

ಪವಿತ್ರ ಕುರ್‌ಆನ್ ಚರ್ಚೆಯ ಮೂಲ ವಿಷಯ: ಮನುಷ್ಯ

ಈ ಗ್ರಂಥ ಸಕಲ ಮನುಷ್ಯರಿಗಾಗಿದೆ: ಪವಿತ್ರ ಕುರ್‌ಆನ್ ಎಂತಹ ಗ್ರಂಥವೆಂದರೆ, ಎಲ್ಲ ತರದ ಮನುಷ್ಯರು ಮತ್ತು ವಿವಿಧ ಸಾಮರ್ಥ್ಯದ ವ್ಯಕ್ತಿಗಳು ಇದರ ಪ್ರತಿಯೊಂದು ಮೂಲ ಶಿಕ್ಷಣಗಳನ್ನು ಸರಿಯಾಗಿ ಸುಲಭವಾಗಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದಾದಂತಹ ಗ್ರಂಥವಾಗಿದೆ. ಮತ್ತು ಅದರ ಶಿಕ್ಷಣಗಳಂತೆ ಕರ್ಮವೆಸಗಬಹುದಾಗಿದೆ ಮತ್ತು ಈ ಗ್ರಂಥ ಸಾಮಾನ್ಯ ಮನುಷ್ಯರಿಗೂ ಸುಲಭವಾಗಿ ಅರ್ಥವಾಗುವುದು. ಅರ್ಥಮಾಡಿಕೊಳ್ಳಲು ಕಷ್ಟವಾಗುವ ಯಾವುದೇ ಅಸ್ಪಷ್ಟತೆ, ಕ್ಲಿಷ್ಟತೆ ಇದರಲ್ಲಿಲ್ಲ. ಒಂದು ವೇಳೆ ಹಾಗೆಂದಾದರೆ ಅದನ್ನು ಕಳುಹಿಸಿದ ಉದ್ದೇಶವೇ ಈಡೇರಲು ಸಾಧ್ಯವಿರಲಿಲ್ಲ. ಮತ್ತು ಪವಿತ್ರ ಕುರ್‌ಆನ್ ಗ್ರಂಥ ಸುಸ್ಪಷ್ಟವೂ ಬಹಿರಂಗವೂ ಮುಕ್ತವೂ ಎಲ್ಲರ ಕೈಗೆಟುಕುವಂತಹದ್ದೂ ಆದ ಗ್ರಂಥ. ಮತ್ತು ಈ ಗ್ರಂಥವು ಸ್ಪಷ್ಟವೂ ಪ್ರಕಾಶ ಪೂರ್ಣವೂ ಆಗಿರಬೇಕಾದುದು ಆವಶ್ಯಕವಾಗಿತ್ತು.

ಪವಿತ್ರ ಕುರ್‌ಆನ್ ಪ್ರಪಂಚ ಸಾಮ್ರಾಟನ ಗ್ರಂಥ ಮತ್ತು ಸಕಲ ಮಾನವರಿಗಾಗಿದೆ:

ಯಾಕೆಂದರೆ ಪ್ರಪಂಚದ ಸೃಷ್ಟಿಕರ್ತನು ಸಕಲ ಮನುಷ್ಯರ ಸೃಷ್ಟಿಕರ್ತನಾಗಿದ್ದಾನೆ. ತನ್ನ ಗ್ರಂಥವನ್ನು ಕೆಲವು ಖಾಸಗಿ ವ್ಯಕ್ತಿಗಳಿಗಾಗಿ ಮಾತ್ರ ಕಳುಹಿಸಿಲ್ಲ ಬದಲಾಗಿ ಸಕಲ ಮನುಷ್ಯರು ಅದರಿಂದ ಪ್ರಯೋಜನ ಪಡೆಯಲಿ ಎಂಬ ಸಲುವಾಗಿ ಅವರ ಮಾರ್ಗದರ್ಶನಕ್ಕಾಗಿ ಅವರ ಬಳಿಗೆ ಕಳುಹಿಸಿದನು ಮತ್ತು ಈ ಪವಿತ್ರ ಕುರ್‌ಆನ್ ಗ್ರಂಥವನ್ನು ಕೆಲವೇ ಕೆಲವು ಗೋತ್ರಗಳಿಗಾಗಿ ಮಾತ್ರ ಅಥವಾ ಕೆಲವೇ ಕೆಲವು ನಾಡುಗಳ ಒಳಿತಿನ ವಿಷಯವಾಗಿಸಿ ಕಳುಹಿಸಲಾಗಿಲ್ಲ. ಸಕಲರೂ ಈ ಗ್ರಂಥದಿಂದ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಈ ಗ್ರಂಥದ ಕರ್ತೃ ಮತ್ತು ಒಡೆಯ ಸಾಮಾನ್ಯನಲ್ಲ. ಅತ್ಯಂತ ಪ್ರಬಲ ಅಸ್ತಿತ್ವ ಎಷ್ಟು ಪ್ರಬಲನೆಂದರೆ ಅವನಿಗೆ ಜನರು ಅಜ್ಞಾನಿಗಳು ಎಂಬುದು ಗೊತ್ತಿದೆ. ಅವರು ಎಂತಹ ಗೊಂದಲದಲ್ಲಿರುವರು ಎಂಬುದೂ ಗೊತ್ತಿದೆ. ಅವರು ಯಾವ ರೀತಿ ಎಷ್ಟು ಪಥಭ್ರಷ್ಟರಾಗಿದ್ದಾರೆ ಎಂಬುದನ್ನೂ ಅವನು ಅರಿತವನು. ಈ ಬಗ್ಗೆ ಸೃಷ್ಟಿಕರ್ತನ ಉವಾಚ ಹೀಗಿದೆ, "ಈ ಫುರ್ಕಾನನ್ನು ಸಮಸ್ತ ಜಗತ್ತಿನವರಿಗೆ ಎಚ್ಚರಿಕೆ ಯಾಗಲಿಕ್ಕಾಗಿ ತನ್ನ ದಾಸನ ಮೇಲೆ ಅವತೀರ್ಣಗೊಳಿಸಿದವನು ಪರಮ ಸುಮಂಗಲನು. ಅವನು ಭೂಮಿ-ಆಕಾಶಗಳ ಪ್ರಭುತ್ವದ ಒಡೆಯನು. ಅವನು ಯಾರನ್ನೂ ಪುತ್ರ ನಾಗಿಸಿಕೊಂಡಿಲ್ಲ. ಅವನ ಜೊತೆ ಪ್ರಭುತ್ವದಲ್ಲಿ ಯಾರೂ ಸಹಭಾಗಿಗಳಿಲ್ಲ. ಅವನು

ಪ್ರತಿಯೊಂದು ವಸ್ತುವನ್ನೂ ಸೃಷ್ಟಿಸಿದನು. ನಂತರ ಅದಕ್ಕೊಂದು ವಿಧಿ ನಿಯಮವನ್ನು ನಿಶ್ಚಯಿಸಿದನು. ಜನರು ಅವನನ್ನು ಬಿಟ್ಟು ಯಾವ ವಸ್ತುವನ್ನೂ ಸೃಷ್ಟಿಸದ ಮತ್ತು ಸ್ವತಃ ಸೃಷ್ಟಿಸಲ್ಪಟ್ಟಂತಹ ವಸ್ತುಗಳನ್ನು ಆರಾಧ್ಯರನ್ನಾಗಿ ಮಾಡಿಕೊಂಡರು. ಅವು ಸ್ವತಃ ತಮಗೂ ಯಾವುದೇ ಲಾಭ ಅಥವಾ ಹಾನಿಯನ್ನುಂಟು ಮಾಡುವ ಅಧಿಕಾರ ಹೊಂದಿಲ್ಲ. ಅವು ಕೊಲ್ಲಲಾರವು, ಜೀವಂತಗೊಳಿಸಲಾರವು ಮತ್ತು ಸತ್ತವನನ್ನು ಪುನಃ ಎಬ್ಬಿಸಲಾರವು." (ಅಲ್ ಫುರ್ಕಾನ್: 1–3)

"ಇದಂತು ಸಮಸ್ತ ಲೋಕದವರಿಗೊಂದು ಉಪದೇಶವಾಗಿರುತ್ತದೆ. ನಿಮ್ಮ ಪೈಕಿ ಸನ್ಮಾರ್ಗದಲ್ಲಿ ನಡೆಯಲಿಚ್ಛಿಸುವ ಪ್ರತಿಯೊಬ್ಬನಿಗೆ. ಸರ್ವಲೋಕಗಳ ಪಾಲಕ ಪ್ರಭುವಾದ ಅಲ್ಲಾಹನು ಇಚ್ಛಿಸದೆ. ನಿಮ್ಮ ಇಚ್ಛೆಯಿಂದ ಏನೂ ಆಗುವುದಿಲ್ಲ." (ಅತ್ತಕ್ವೀರ್: 27–29)

ಮನುಷ್ಯರೇ ಪವಿತ್ರ ಕುರ್‌ಆನಿನ ಮೂಲ ವಿಷಯ

ಪವಿತ್ರ ಕುರ್‌ಆನ್ ಮನುಷ್ಯನಿಗೆ ಮನುಷ್ಯನದೇ ವಾಸ್ತವಿಕತೆಯ ಪರಿಚಯಿಸಿ ಕೊಡುವ ಗ್ರಂಥವಾಗಿದೆ. ಯಾಕೆಂದರೆ ಸ್ವಯಂ ತನ್ನನ್ನೇ ಅವನು ಸರಿಯಾಗಿ ಅರಿತುಕೊಳ್ಳಬೇಕಿದೆ. ಸರಿಯಾದ ಮತ್ತು ಸತ್ಯಸಂಧವಾಗಿ ಜೀವನವನ್ನು ನಡೆಸಬೇಕಿದೆ. ಆದುದರಿಂದ ಮನುಷ್ಯನಿಗಿರುವ ಉದ್ದೇಶವನ್ನು ಮತ್ತು ಅವನ ಅಸ್ತಿತ್ವದ ಉದ್ದೇಶವನ್ನು ಪವಿತ್ರ ಕುರ್‌ಆನ್ ಮುಕ್ತ ಮತ್ತು ಬಹಿರಂಗವಾಗಿ ವಿಶದಪಡಿಸುತ್ತಿದೆ. ಪ್ರಪಂಚದಲ್ಲಿ ಮನುಷ್ಯನಿಗಿರುವ ಸ್ಥಾನಮಾನ, ಅವನ ಆರಂಭ, ಅಂತ್ಯ, ಅವನಿಗೆ ಯಾವುದು ಲಾಭಕರ, ಯಾವುದು ನಷ್ಟದಾಯಕ, ಯಾವ ವಿಷಯದಲ್ಲಿ ಅವನಿಗೆ ಯಶಸ್ಸಿದೆ ಮತ್ತು ಸೋಲಿದೆ. ಅವನ ಸರಿಯಾದ ಜೀವನ ಕ್ರಮ, ಅದಕ್ಕಿರುವ ಸರಿಯಾದ ವಿಧಿ ವಿಧಾನಗಳು ಯಾವುವು, ಮನುಷ್ಯರ ನಡುವಿನ ಪರಸ್ಪರ ಸಂಬಂಧಗಳು ಹೇಗಿರಬೇಕು ಮತ್ತು ಪ್ರಪಂಚದ ವಸ್ತುಗಳಿಗೂ ಮನುಷ್ಯನಿಗೂ ಇರುವ ಸಂಬಂಧ ವೇನು? ಮತ್ತು ಇನ್ನೂ ಹಲವಾರು ಮನುಷ್ಯನ ಜೀವನಕ್ಕೆ ಸಂಬಂಧಿಸಿದ ವಿಷಯ ಗಳನ್ನು ಪವಿತ್ರ ಕುರ್‌ಆನ್ ವಿವರಿಸುತ್ತದೆ.

ಈ ರೀತಿ ಪವಿತ್ರ ಕುರ್‌ಆನ್‌ನಲ್ಲಿ ಮನುಷ್ಯನಿಗೆ ಮನುಷ್ಯನ ಕುರಿತು ಸೃಷ್ಟಿಕರ್ತನು ತನ್ನ ಗ್ರಂಥದಲ್ಲಿ ಮನುಷ್ಯನು ತನ್ನನ್ನು ಸ್ವಯಂ ಗುರುತಿಸಲು ಮತ್ತು ತಿಳಿದುಕೊಳ್ಳುವ ಸಲುವಾಗಿ ಪರಿಚಯಿಸುತ್ತಾನೆ, "ಜನರೇ, ನಾವು ನಿಮ್ಮದೇ ಪ್ರಸ್ತಾಪವಿರುವಂತಹ ಒಂದು ಗ್ರಂಥವನ್ನು ತಮ್ಮ ಕಡೆಗೆ ಕಳುಹಿಸಿರುವೆವು. ನೀವು ವಿವೇಚಿಸುವುದಿಲ್ಲವೇ?" (ಅಲ್ ಅಂಬಿಯ: 10)

ಈ ವಚನದಲ್ಲಿ ತನ್ನ ಗ್ರಂಥ ಪವಿತ್ರ ಕುರ್‌ಆನನ್ನು ಕಳುಹಿಸುವ ಮೂಲಕ ನಿಮ್ಮ ಜೀವನದ ಮುಖ್ಯ ಆವಶ್ಯಕತೆಯನ್ನು ಈಡೇರಿಸಿಕೊಡಲಾಯಿತು ಅಥವಾ

ಜೀವನದ ಮಾರ್ಗದರ್ಶನವನ್ನು ನಿಮಗೆ ಪೂರೈಸಿಕೊಡಲಾಗಿದೆ ಎಂದು ಸೃಷ್ಟಿಕರ್ತನು ತಿಳಿಸುತ್ತಾನೆ. ಮನುಷ್ಯರು ಈ ಮಾರ್ಗದರ್ಶಕ ಗ್ರಂಥ ತಮಗೆ ದೊರಕಿದುದಕ್ಕಾಗಿ ಸಂತಸ ಪಡಬೇಕು. ಅದನ್ನು ನೀಡಿದ ಸೃಷ್ಟಿಕರ್ತನೂ ಒಡೆಯನೂ ಆದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕಾಗಿದೆ.

ಕುರ್‌ಆನ್ ಮತ್ತು ಜ್ಞಾನ:

ಒಡೆಯನು ತನ್ನ ದಾಸರ ತಿಳುವಳಿಕೆ ಮತ್ತು ಅವರಿಗೆ ನೇರಮಾರ್ಗವನ್ನು ತೋರಿಸುವ ಸಂಪೂರ್ಣ ವ್ಯವಸ್ಥೆ ಮಾಡಿದ್ದಾನೆ. ವಿಶ್ವ ಮತ್ತು ಆತ್ಮದಲ್ಲಿ ಪ್ರತಿಯೊಂದು ವಿಷಯಗಳ ಮಾರ್ಗದರ್ಶನಕ್ಕಾಗಿ ನಿದರ್ಶನಗಳಿವೆ. ಪವಿತ್ರ ಕುರ್‌ಆನಿನಲ್ಲಿ ಸತ್ಯ ಮತ್ತು ವಾಸ್ತವಿಕತೆಯನ್ನು ಸಕಲ ರೀತಿಯಲ್ಲಿ ಮನವರಿಕೆ ಮಾಡಿಕೊಡಲಾಗಿದೆ.

"ಜನರು ಪ್ರಜ್ಞಾವಂತರಾಗಲೆಂದು ನಾವು ಈ ಕುರ್‌ಆನ್‌ನಲ್ಲಿ ಅವರಿಗೆ ತರತರದ ಉದಾಹರಣೆಗಳನ್ನು ನೀಡಿದ್ದೇವೆ." (ಅಝ್ಝುಮರ್: 27)

ಅಂದರೆ, ಪವಿತ್ರ ಕುರ್‌ಆನಿನ ವಚನಗಳು ಮತ್ತು ಸಂದೇಶದ ಮೂಲಕ ಎಲ್ಲ ಮನೋ ಧರ್ಮವರು ಮತ್ತು ಸಕಲ ಸಾಮರ್ಥ್ಯದವರು ಮತ್ತು ಎಲ್ಲ ರೀತಿಯ ವೃತ್ತಿಯ ಜನರಿಗೆ ಮನಮುಟ್ಟುವ ಶೈಲಿಯಲ್ಲಿ ಉದಾಹರಣೆಗಳನ್ನು ನೀಡಲಾಗಿದೆ.

ಪವಿತ್ರ ಕುರ್‌ಆನಿನ ಗುಣವೈಶಿಷ್ಟ್ಯಗಳು:

ಸಂಪೂರ್ಣ ಮಾರ್ಗದರ್ಶನ ನೀಡುವಿಕೆಯು ಪವಿತ್ರ ಕುರ್‌ಆನ್‌ನ ವೈಶಿಷ್ಟ್ಯವಾಗಿದೆ. ಅದನ್ನು ಮಾರ್ಗದರ್ಶನ ಪಡೆಯುವ ದೃಷ್ಟಿಯಲ್ಲಿ ವಿವೇಕದೊಂದಿಗೆ ಪೂರ್ವಗ್ರಹ ಇಲ್ಲದೆ ವಾಚಿಸುವುದಾದರೆ ಯಾರಿಗೂ ಶ್ರೇಷ್ಠ ಅನುಗ್ರಹಗಳು ದೊರೆಯುತ್ತವೆ. ಅವರು ಪಥಭ್ರಷ್ಟರಾಗುವುದಿಲ್ಲ ಮತ್ತು ದಾರಿತಪ್ಪುವುದೂ ಇಲ್ಲ. "ಕುರ್‌ಆನ್ ಸಂಪೂರ್ಣ ಮಾರ್ಗದರ್ಶನವಾಗಿದೆ." (ಅಲ್ ಜಾಸಿಅ: 11ರ ಆರಂಭಿಕ ವಚನ)

ಪವಿತ್ರ ಕುರ್‌ಆನ್ ಅಲ್ಲಾಹನಿಂದ ಮನುಷ್ಯನಿಗೆ ಲಭ್ಯ:

ಗಂಭೀರವಾಗಿ, ಮುಕ್ತ ಮನಸಿನಿಂದ ಚಿಂತಿಸುವ ವ್ಯಕ್ತಿಗೆ ಈ ಕುರ್‌ಆನ್ ವಾಸ್ತವದಲ್ಲಿ ಮನುಷ್ಯನಿಗೆ ಅವನ ಸೃಷ್ಟಿಕರ್ತನೂ ಒಡೆಯನೂ ಮತ್ತು ಆರಾಧ್ಯನೂ ಆಗಿರುವವನ ಕಡೆಯಿಂದ ಬಂದಿರುವ ಮಾರ್ಗದರ್ಶನ ಎಂದು ಮನವರಿಕೆಯಾಗು ವುದು. ಮನುಷ್ಯನು ಸ್ವೇಚ್ಛೆಯಿಂದ ಜೀವಿಸುವನು. ಆದುದರಿಂದ ಪವಿತ್ರ ಕುರ್‌ಆನ್ ತನ್ನ ರಚನಕಾರನಾದ ಅಲ್ಲಾಹನು ಏನು ಹೇಳುವನೆಂಬುದನ್ನು ಜನರ ಮುಂದೆ ಪ್ರಸ್ತುತಗೊಳಿಸುತ್ತಿದೆ.

"ನಿಮ್ಮ ದೇಹದ ಪ್ರತಿಯೊಂದು ಕಣಕವೂ ಚೆಲ್ಲಾಪಿಲ್ಲಿಯಾಗಿ ಹೋಗಿ ಬಿಟ್ಟ

ಬಳಿಕ ನೀವು ಪುನಃ ಹೊಸತಾಗಿ ಸೃಷ್ಟಿಸಲ್ಪಡುವಿರೆಂಬ ಸುದ್ದಿಯನ್ನು ತಿಳಿಸುವಂತಹ ಒಬ್ಬ ವ್ಯಕ್ತಿಯನ್ನು ನಾವು ನಿಮಗೆ ತೋರಿಸಿ ಕೊಡಲೇ." (ಸಬಾ: 7)

ಜನರು ಸಾಕ್ಷ್ಯ ಮತ್ತು ದೃಢೀಕರಿಸುವ ಸಂದರ್ಭ ಸೃಷ್ಟಿಯಾದಾಗಲೆಲ್ಲ ಅಜ್ಞಾನಿಯನ್ನು, ಅಲ್ಪಜ್ಞಾನಿಯನ್ನು ಸಂಕುಚಿತ ದೃಷ್ಟಿಯವರನ್ನು, ಸಂಕುಚಿತ ಮನಸ್ಸಿನ ಸ್ವಾರ್ಥಿಗಳನ್ನು ಆಯ್ಕೆ ಮಾಡುವುದಿಲ್ಲ. ಜ್ಞಾನ, ತಿಳುವಳಿಕೆ ಇರುವವರನ್ನು ಆಯ್ಕೆ ಮಾಡುವುದು. ಪವಿತ್ರ ಕುರ್‌ಆನ್ ಜನರೆಡೆಗೆ ಬಂದಿರುವ ಉದ್ದೇಶವೇ ಅಲ್ಲಾಹನ ದಾಸರನ್ನು ಅಲ್ಲಾಹನೊಂದಿಗೆ ಭೇಟಿ ಮಾಡಿಸುವುದು ಆಗಿದೆ. ಆದ್ದರಿಂದ ಈ ವಾಸ್ತವಿಕತೆಯನ್ನು ಗಂಭೀರವಾಗಿ ಪರಿಗಣಿಸುವವರಿಗೆ ಇದು ಕೇವಲ ಭಾವನೆ, ಅನುಭವಗಳನ್ನಷ್ಟೇ ನೀಡುವುದಿಲ್ಲ, ಅವರಿಗೆ ಸಂತೃಪ್ತಿಯನ್ನೂ ನೀಡುತ್ತದೆ.

ಸೃಷ್ಟಿಕರ್ತ ತನ್ನ ಗ್ರಂಥದ ಮೂಲಕ ಮನುಷ್ಯರಿಗೆ ಮಾರ್ಗದರ್ಶನ ಮಾಡುತ್ತಾನೆ: ಸಕಲ ಪ್ರಶಂಸೆಗಳಿಗೆ ಸೃಷ್ಟಿಕರ್ತನೇ ಅರ್ಹನು. ತನ್ನ ಪ್ರವಾದಿಯ ಮೂಲಕ ತನ್ನ ಗ್ರಂಥವನ್ನು ಜನರೆಡೆಗೆ ಅವನು ಕಳುಹಿಸಿದನು ಮತ್ತು ಜನರಿಗೆ ಅದರ ಮೂಲಕ ವಾಸ್ತವಿಕ ಸಂಗತಿಗಳನ್ನು ವಿವರಿಸಿದನು. ಅದೇವೇಳೆ ಜನರು ಇದನ್ನು ನಿರಾಕರಿಸಿದರೆ ಅದರಿಂದಾಗುವ ಪರಿಣಾಮಗಳ ಕುರಿತು ವಿವರಿಸಿದನು. ಜಗತ್ತಿನೊಳಗೆ ತಪ್ಪಾದ ಚಿಂತನೆ, ತಪ್ಪಾದ ದೃಷ್ಟಿಕೋನಗಳನ್ನು ಹೊಂದಿರುವವರನ್ನು ಅದರ ಮೂಲಕ ಎಚ್ಚರಿಸಿದನು. ಅದರಿಂದಾಗುವ ಪರಿಣಾಮಗಳನ್ನೂ ಪವಿತ್ರ ಕುರ್‌ಆನಿನಲ್ಲಿ ವಿವರಿಸಿದನು.

"ಸರ್ವಸ್ತುತಿ ಅಲ್ಲಾಹನಿಗೆ. ಅವನು ತನ್ನ ದಾಸನ ಮೇಲೆ ಈ ಗ್ರಂಥವನ್ನು ಅವತೀರ್ಣಗೊಳಿಸಿದನು ಮತ್ತು ಅದರಲ್ಲೇನೂ ವಕ್ರತೆಯನ್ನಿರಿಸಿಲ್ಲ. ನಿಖರವಾದ ನೇರ ಮಾತನ್ನಾಡುವಂತಹ ಗ್ರಂಥ. ಇದು ಜನರಿಗೆ ಅಲ್ಲಾಹನ ಘೋರ ಯಾತನೆಯ ಎಚ್ಚರಿಕೆ ನೀಡಲಿಕ್ಕಾಗಿ ಮತ್ತು ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗುವವರಿಗೆ ಉತ್ತಮ ಪ್ರತಿಫಲ ಸಿಗಲಿದ್ದು, ಅವರು ಅದರಲ್ಲಿ ಸದಾ ಕಾಲ ವಾಸಿಸುವರೆಂದು ಸುವಾರ್ತೆ ನೀಡಲಿಕ್ಕಾಗಿದೆ; ಅಲ್ಲಾಹನು ಯಾರನ್ನಾದರೂ ತನ್ನ ಪುತ್ರರನ್ನಾಗಿಸಿದ್ದಾನೆಂದು ಹೇಳುವವರನ್ನು ಎಚ್ಚರಿಸುವುದಕ್ಕಾಗಿದೆ. ಇದರ ಬಗ್ಗೆ ಅವರಿಗೆ ಜ್ಞಾನವೇನೂ ಇಲ್ಲ. ಅವರ ಪೂರ್ವಿಕರಿಗೂ ಇರಲಿಲ್ಲ. ಅವರ ಬಾಯಿಯಿಂದ ಹೊರಡುವ ಈ ಮಾತು ಬಹಳ ಘೋರವಾದುದು. ಅವರು ಕೇವಲ ಹುಸಿಯನ್ನಾಡುತ್ತಿದ್ದಾರೆ." (ಅಲ್‌ಕಹ್ಫ್: 1–5)

ಕುರ್‌ಆನ್ ಮೀಝಾನ್ (ತಕ್ಕಡಿ) ಆಗಿದೆ:

ಕುರ್‌ಅನ್‌ನನ್ನು ಅವತೀರ್ಣಗೊಳಿಸಿರುವ ಮುಖ್ಯ ಕಾರಣಗಳಲ್ಲೊಂದು ಕಾರಣ ಅದು. ಮೀಝಾನ್ (ತಕ್ಕಡಿ) ಆಗಿರುವುದು. ಅದು ಇಹಲೋಕದಲ್ಲಿ ಸತ್ಯ ಮತ್ತು

ಮಿಥ್ಯಗಳನ್ನು ವಿವರಿಸುವ ತಕ್ಕಡಿಯಾಗಿದೆ. ಅಂದರೆ ಆಖಿರತ್‌ನಲ್ಲಿ (ಲೋಕಾಂತ್ಯದಲ್ಲಿ) ನ್ಯಾಯದ ಅಳತೆಗಾಗಿ ಇರುವ ಮೀಝಾನ್ ಇದಾಗಿದೆ ಅಥವಾ ಪರಿಣಾಮ, ಫಲಿತಾಂಶಗಳನ್ನುಳಿಸಿಕೊಡುವ ತಕ್ಕಡಿ ಇದಾಗಿದೆ. ಯಾರು ವಿಜಯಿಗಳು (ಯಶಸ್ವಿಯಾಗಿದ್ದಾರೆ) ಯಾರು ಸೋತವರು (ವಿಫಲರಾಗಿದ್ದಾರೆ) ಎಂದು ಲೋಕಾಂತ್ಯದ ದಿನ ಈ ಗ್ರಂಥದ ಮೂಲಕ ತೂಗಿ ನೋಡಲಾಗುವುದು.

ಈ ಗ್ರಂಥದಲ್ಲಿ ವಿಶ್ವಾಸ ಇರಿಸಿದವರು ಮತ್ತು ವಿರುದ್ಧ ಕರ್ಮವೆಸಗಿದವರು ಈ ಗ್ರಂಥದ ಆಧಾರದಲ್ಲೇ ನಿರ್ಣಯಿಸಲ್ಪಡುತ್ತಾರೆ.

ಪವಿತ್ರ ಕುರ್‌ಆನ್ ಈ ಬಗ್ಗೆ ಹೀಗೆಂದಿದೆ, "ಈ ಗ್ರಂಥವನ್ನೂ ನ್ಯಾಯದ ತಕ್ಕಡಿಯನ್ನೂ ಸತ್ಯದೊಂದಿಗೆ ಇಳಿಸಿದವನು ಅಲ್ಲಾಹನೇ. ನಿಮಗೇನು ತೊತ್ತು? ತೀರ್ಮಾನದ ಘಳಿಗೆಯು ಹತ್ತಿರವೇ ಬಂದಿರಲೂ ಬಹುದು." **(ಅಶ್ಶೂರ: 17–19)**

ಕುರ್‌ಆನ್ ಅವತೀರ್ಣದ ಉದ್ದೇಶ:

ಈ ಗ್ರಂಥವನ್ನು ಕಳುಹಿಸಿದವನು ಅದನ್ನು ಕಳುಹಿಸಿದ ಉದ್ದೇಶವನ್ನು ವಿವರಿಸಿದ್ದಾನೆ. ಗ್ರಂಥವನ್ನು ಜನರ ಬಳಿಗೆ ಯಾರ ಮೂಲಕ ಕಳುಹಿಸಿರುವುದು ಮತ್ತು ಅದನ್ನು ಯಾಕೆ ಕಳುಹಿಸಿರುವುದು ಎಂದು ಆ ಗ್ರಂಥದಲ್ಲಿಯೇ ವಿವರಿಸಿದ್ದಾನೆ. ಹೀಗೆ ತಾನು ಬಂದ ಉದ್ದೇಶವನ್ನು ಅಭಿಸಂಬೋಧಿತರ ಮುಂದೆ ಪವಿತ್ರ ಕುರ್‌ಆನ್ ಸ್ವತಃ ಪರಿಚಯಿಸುತ್ತದೆ, "ಓ ಮುಹಮ್ಮದರೇ, ಇದೊಂದು ಗ್ರಂಥ ನೀವು ಜನರನ್ನು ಅವರ ಪ್ರಭುವಿನ ಅನುಜ್ಞೆಯಂತೆ ಅಂಧಕಾರಗಳಿಂದ ಹೊರತೆಗೆದು ಪ್ರಕಾಶದ ಕಡೆಗೆ ತರಲಿಕ್ಕಾಗಿ ನಾವು ಇದನ್ನು ನಿಮಗೆ ಅವತೀರ್ಣಗೊಳಿಸಿರುತ್ತೇವೆ. ಅವನು ಮಹಾ ಪ್ರತಾಪಿಯೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ ಮತ್ತು ಆಕಾಶಗಳ ಹಾಗೂ ಭೂಮಿಯ ಸಕಲ ಸೃಷ್ಟಿಗಳ ಮಾಲಕ ಆಗಿರುತ್ತಾನೆ. ಸತ್ಯನಿಷೇಧಿಗಳಿಗೆ ಅತ್ಯಂತ ವಿನಾಶಕಾರಿ ಶಿಕ್ಷೆಯಿದೆ." **(ಇಬ್ರಾಹೀಮ್: 1–2)**

ಕುರ್‌ಆನ್‌ನ ಪರಿಚಯ:

ಅಲ್ಲಾಹನು ಈ ಗ್ರಂಥ ಮನುಷ್ಯರಿಗೆ ಎಷ್ಟು ಉಪಯುಕ್ತವಾದುದು ಮತ್ತು ಮೌಲ್ಯಯುತವಾದದ್ದೆಂದು ಈ ಗ್ರಂಥದ ಮೂಲಕವೇ ಪರಿಚಯಿಸಿದ್ದಾನೆ, "ಮಾನವರಿಗೆ ಸಾದ್ಯಂತ ಸನ್ಮಾರ್ಗ, ಮಾರ್ಗದರ್ಶನ ಮತ್ತು ಸತ್ಯಾಸತ್ಯತೆಗಳಲ್ಲಿರುವ ಅಂತರವನ್ನು ಸುವ್ಯಕ್ತವಾಗಿ ತಿಳಿಸುವ ಶಿಕ್ಷಣಗಳನ್ನೊಳಗೊಂಡಿರುವ ಕುರ್‌ಆನ್ ಅವತೀರ್ಣಗೊಂಡ ತಿಂಗಳು ರಮಝಾನ್ ಆಗಿರುತ್ತದೆ." **(ಅಲ್‌ಬಕರ: 185)**

ಈ ರೀತಿ ಮೇಲಿನ ವಚನಗಳಲ್ಲಿ ಪವಿತ್ರ ಕುರ್‌ಆನ್ ಅವತೀರ್ಣಗೊಂಡ

ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಅಂದರೆ, ಮನುಷ್ಯರ ಸನ್ಮಾರ್ಗ, ಮಾರ್ಗ ದರ್ಶನಕ್ಕಾಗಿ ಈ ಗ್ರಂಥವು ಬಂತು. ಜನರು ನೇರಮಾರ್ಗದಲ್ಲಿ ಜೀವನ ನಡೆಸಬೇಕು ಎಂಬುದು ಗ್ರಂಥ ಅವತೀರ್ಣಗೊಂಡಿರುವ ಉದ್ದೇಶವಾಗಿದೆ. ಅಂದರೆ ಜನರಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಪವಿತ್ರ ಕುರ್‌ಆನ್ ಅವತೀರ್ಣಗೊಂಡಿತು. ಪವಿತ್ರ ಕುರ್‌ಆನ್ ಸತ್ಯ ಮಿಥ್ಯಗಳ ನಡುವೆ ಅಂತರವನ್ನು ಮಾಡಿ ಜನರ ಮುಂದೆ ನೇರ ಮಾರ್ಗವನ್ನು ತಿಳಿಸುವುದು.

ಸ್ಪಷ್ಟವಾದ ಉಪದೇಶ ಮತ್ತು ಸಂದೇಶದ ಗ್ರಂಥ

ಪವಿತ್ರ ಕುರ್‌ಆನ್, ಸ್ಪಷ್ಟ ಮತ್ತು ಸರಳ ಶೈಲಿಯಲ್ಲಿ ಮಾರ್ಗದರ್ಶನ ನೀಡುವ ಗ್ರಂಥವಾಗಿದೆ: ರಹ್ಮಾನನ (ಕರುಣಾನಿಧಿಯ) ಕಡೆಯಿಂದ ಆಗಮಿಸುವ ಯಾವುದೇ ವಿಷಯವೂ ಅನುಗ್ರಹೀತವಾಗಿರುತ್ತದೆ. ಅದರಂತೆ ಅವನ ಕಡೆಯಿಂದ ಈ ಗ್ರಂಥವು ಮನುಷ್ಯನಿಗೆ ಸಂಪೂರ್ಣ ಅನುಗ್ರಹವಾಗಿ ಬಂದಿದೆ ಮತ್ತು ಮನುಷ್ಯನಿಗೆ ಅನುಗ್ರಹ ವಾಗಿ ಅವನ ಮಾರ್ಗದರ್ಶನಕ್ಕೆ ಬರುವ ಗ್ರಂಥ ಖಂಡಿತ ಸರಳ ಮತ್ತು ಸ್ಪಷ್ಟವಾಗಿರ ಬೇಕಾಗಿರುವುದು ಆವಶ್ಯಕವಾಗಿದೆ. ಆದ್ದರಿಂದ ಇದು ಜನರಿಗೆ ಮಾರ್ಗದರ್ಶನ ನೀಡುವ ಸರಳ ಮಾರ್ಗದರ್ಶಿ ಗ್ರಂಥ. ಸುಲಭ, ಸರಳ ಮತ್ತು ಸ್ಪಷ್ಟವಾದ ರೀತಿಯಲ್ಲಿ ಮಾರ್ಗದರ್ಶನವನ್ನು ನೀಡುವುದಾದರೂ ಸಂವೇದನಾಶೀಲ ತಿಳುವಳಿಕೆಯುಳ್ಳ ಜನರು ಮಾತ್ರ ಇದರಿಂದ ಪ್ರಯೋಜನ ಮತ್ತು ಲಾಭ ಪಡೆಯುತ್ತಾರೆ. ಅವರು ಜ್ಞಾನಗಳಿಕೆಗೆ ತಮ್ಮ ವಿವೇಕವನ್ನು ಉಪಯೋಗಿಸುವರು. ಸಾಕ್ಷ್ಯ ಪ್ರಮಾಣಗಳ ಮೂಲಕ ಮನವರಿಕೆ ಮಾಡಿಕೊಂಡು ಸರಿಯಾದ ಪರಿಣಾಮದೆಡೆಗೆ (ಸರಿಯಾದ ತೀರ್ಮಾನಕ್ಕೆ) ಬಂದು ತಲುಪಲು ಈ ಜನರಿಗೆ ಸಾಧ್ಯವಾಗುತ್ತದೆ ಮತ್ತು ಯಾವುದೇ ಗ್ರಂಥದಿಂದಲೂ ಲಾಭವೆತ್ತುವುದಕ್ಕೆ ಮತ್ತು ಅದರಿಂದ ಪ್ರಯೋಜನಕ್ಕೆ ಪಡೆಯುವುದಕ್ಕೆ ಪೂರ್ವಾಗ್ರಹ ರಹಿತ, ಮುಕ್ತ ಮನಸ್ಸಿನಿಂದ ಗ್ರಂಥವನ್ನು ಅಧ್ಯಯನಿಸುವುದು ಮೊದಲ ಆವಶ್ಯಕತೆಯಾಗಿದೆ.

ಕರುಣಾಮಯಿಯ ಈ ಗ್ರಂಥದಲ್ಲಿ ವಿಶ್ವಾಸ ಇರಿಸಿದವರು ಅತ್ಯುತ್ತಮ ಮತ್ತು ದೊಡ್ಡ ಮಟ್ಟದ ಯಶಸ್ಸು ಪಡೆಯುತ್ತಾರೆ. ವಿಶ್ವಾಸವಿರಿಸಲು ನಿರಾಕರಿಸುವ ವ್ಯಕ್ತಿ ಖಂಡಿತ ವಿನಾಶಕ್ಕೆ ತುತ್ತಾಗುವನು ಎಂದು ಪವಿತ್ರ ಕುರ್‌ಆನ್ ಬಹಳ ಸ್ಪಷ್ಟವಾದವನ್ನು ವಚನಗಳ ಮೂಲಕ ತಿಳಿಯಪಡಿಸುತ್ತದೆ.

ಅಲ್ಲಾಹನು ತನ್ನ ಮಾರ್ಗದರ್ಶಕ ಗ್ರಂಥವನ್ನು ಹೀಗೆ ಪರಿಚಯಿಸುತ್ತಾನೆ, "ಇದು ಪರಮ ದಯಾಮಯನೂ ಕರುಣಾನಿಧಿಯೂ ಆದವನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟುದಾಗಿದೆ. ಸೂಕ್ತಗಳು ಸುಸ್ಪಷ್ಟವಾಗಿ ವಿವರಿಸಲ್ಪಟ್ಟಿರುವ ಗ್ರಂಥವಿದು.

ಜ್ಞಾನವುಳ್ಳವರಿಗಾಗಿ ಅರಬೀ ಭಾಷೆಯ ಕುರ್‌ಆನ್. ಸುವಾರ್ತೆ ಹಾಗೂ ಎಚ್ಚರಿಕೆ ನೀಡುವಂತಹದು. ಆದರೆ ಇವರಲ್ಲಿ ಹೆಚ್ಚಿನವರು ಇದರಿಂದ ವಿಮುಖರಾದರು ಮತ್ತು ಅವರು ಕಿವಿಗೊಡುವುದಿಲ್ಲ." (ಹಾಮೀಮ್ ಅಸ್ಸಜ್ದ: 1-3)

ಪ್ರಭುವಿನ ಸಂದೇಶದ ಗುಣವೈಶಿಷ್ಟ್ಯ:

ಸ್ಪಷ್ಟ, ಸುಲಭ ಮತ್ತು ಎಚ್ಚರಿಕೆ ನೀಡುವುದು: ಪ್ರಭುವಿನ ವತಿಯಿಂದ ಅವತೀರ್ಣ ಗೊಂಡ ಯಾವುದೇ ವಚನವು ಅದನ್ನು ಯಾಕೆ ಕಳುಹಿಸಲಾಯಿತು ಎಂಬ ಬಗ್ಗೆ ಸ್ಪಷ್ಟ ಮತ್ತು ಸರಳವಾಗಿ ತಿಳಿಸುತ್ತದೆ.

ಅದನ್ನು ಕಳುಹಿಸಿದುದರ ಉದ್ದೇಶವನ್ನು ಸ್ಪಷ್ಟಪಡಿಸುವುದರ ಜೊತೆಗೇ ಜನರಿಗೆ ಎಚ್ಚರಿಕೆಯನ್ನೂ ನೀಡುತ್ತಿದೆ. ಮರಣಾನಂತರ ಏನೆಲ್ಲ ಆಗಲಿಕ್ಕಿದೆ ಎಂದೂ ಮತ್ತು ಯಾಕೆ, ಯಾವ ಕಾರಣದಿಂದ ಹಾಗೆ ಅಗುವುದೆಂಬುದನ್ನು ಬಹಳ ಸ್ಪಷ್ಟವಾಗಿ ಸಂದೇಶ ಜನರ ಮುಂದಿಟ್ಟಿದೆ. ಅದು ಜನರಿಗೆ ಒಂದು ಉಪಯುಕ್ತವಾದ ವಿಷಯ ವನ್ನು ಕಳೆದುಕೊಳ್ಳದಂತೆ ಅಥವಾ ಜನರು ದೊಡ್ಡ ಸಂಕಷ್ಟಕ್ಕೆ ಬೀಳದಂತೆ ಸಂರಕ್ಷಿ ಸುವ ಸಲುವಾಗಿಯೇ ಜನರನ್ನು ಎಚ್ಚರಿಸುತ್ತದೆ ಮತ್ತು ಅದನ್ನು ಕಳಕೊಳ್ಳುವ ಮೂಲಕ ಅವರು ನಷ್ಟಕ್ಕೊಳಗಾದೆವೆಂದು ಪಶ್ಚಾತ್ತಾಪಿಸಬಾರದು ಎಂದು ಎಚ್ಚರಿಸುತ್ತದೆ. ಆದರೆ ಅದರ ಎಚ್ಚರಿಕೆಯು ಪ್ರೀತಿಯುತ, ಕರುಣೆಪೂರಿತ ಮತ್ತು ಅನುಗ್ರಹೀತ ರೂಪದಲ್ಲಿ ರುವುದು ಪವಿತ್ರ ಕುರ್‌ಆನಿನ ಇನ್ನೊಂದು ವೈಶಿಷ್ಟ್ಯವಾಗಿದೆ.

ಅಲ್ಲಾಹನು ತನ್ನ ಗ್ರಂಥದ ಮೂಲಕ ದಾಸರನ್ನು ಈ ರೀತಿ ಎಚ್ಚರಿಸಿರುವನು, "ಈ ಸುವ್ಯಕ್ತ ಗ್ರಂಥದಾಣೆ, ನಿಶ್ಚಯವಾಗಿಯೂ ನಾವು ಇದನ್ನು ಒಂದು ಮಹಾ ಸಮೃದ್ಧ ರಾತ್ರೆಯಲ್ಲಿ ಅವತೀರ್ಣಗೊಳಿಸಿದೆವು. ಏಕೆಂದರೆ ನಾವು ಜನರಿಗೆ ಎಚ್ಚರಿಕೆ ನೀಡಲಿಚ್ಛಿಸಿದೆವು." (ಅದ್ದುಖಾನ್: 2-3)

ಪ್ರಭುವಿನ ಸಂದೇಶದ ಇನ್ನೊಂದು ವೈಶಿಷ್ಟ್ಯವೇ. ಅದರ ಉಪದೇಶವು ಜನರು ಆಡುವ ಭಾಷೆಯಲ್ಲಿರುವುದಾಗಿದೆ: ಜನರು ಸುಲಭವಾಗಿ ಅರಿತು ಮನವರಿಕೆ ಮಾಡಿ ಕೊಳ್ಳಲು ಸಾಧ್ಯವಿರುವಂತಹ ಭಾಷೆಯಲ್ಲಿ ಉಪದೇಶಿಸಿದರೆ ಮಾತ್ರ ಗ್ರಂಥವನ್ನು ಕಳುಹಿಸಿದ ಉದ್ದೇಶ ಪೂರ್ಣಗೊಳ್ಳುವುದು. ಆದುದರಿಂದ ಜನರಾಡುವ ಭಾಷೆಯಲ್ಲಿ ಗ್ರಂಥ ಅಭಿಸಂಬೋಧಿಸುತ್ತಿದೆ, "ಸಂದೇಶವಾಹಕರೇ, ಇವರು ಉಪದೇಶ ಪಡೆಯಲೆಂದು ನಾವು ಈ ಗ್ರಂಥವನ್ನು ನಿಮ್ಮ ಭಾಷೆಯಲ್ಲಿ ಸರಳಗೊಳಿಸಿದ್ದೇವೆ." (ಅದ್ದುಖಾನ್: 58)

ಯಾರದು ಸರಿಯಾದ ಮಾತು:

ಅರಿವುಳ್ಳವನು ಮತ್ತು ಜ್ಞಾನಿಯ ಮಾತೇ ಸರಿಯಾದುದು: "ಓ ಪೈಂಗಬರರೇ,

ಅವರಿಗೆ ಹೇಳಿ: ಆಕಾಶ ಮತ್ತು ಭೂಮಿಯ ರಹಸ್ಯಗಳನ್ನು ಬಲ್ಲವನು ಇದನ್ನು ಅವತೀರ್ಣಗೊಳಿಸಿದ್ದಾನೆ." (ಅಲ್‌ಫುರ್ಕಾನ್, 21ರಲ್ಲಿ ಆರಂಭಿಕ ವಚನಗಳು)

ಅರಿವುಳ್ಳ, ಜ್ಞಾನಿಯ ಕಡೆಯಿಂದ ಸಿಗುವ ಮಾರ್ಗದರ್ಶನ ನಮಗೆ ಸಂತೃಪ್ತಿ ಮತ್ತು ವಿಶ್ವಾಸ ಮೂಡುತ್ತದೆ: ಸೃಷ್ಟಿಕರ್ತನು ಸರಳ ಸಾಮಾನ್ಯ ವಿಧಾನದಲ್ಲಿ ವಿಷಯಗಳನ್ನು ಜನರಿಗೆ ಮನವರಿಕೆ ಮಾಡಿಸುವನು ಮತ್ತು ಪ್ರತಿಯೊಬ್ಬರಿಗೆ ಆಸ್ವಾದಕರವೂ ಮತ್ತು ಎಲ್ಲ ರೀತಿಯ ಜನರಿಗೆ ಮನವರಿಕೆಯಾಗುವಂತಹ ಉದಾಹರಣೆಗಳನ್ನು ನೀಡುತ್ತಾನೆ ಮತ್ತು ಇತಿಹಾಸದ ಪ್ರತಿಯೊಂದು ಉದಾಹರಣೆಗಳನ್ನು ವಿವರಿಸುತ್ತಾನೆ. ಭ್ರೂಣ ಶಾಸ್ತ್ರ, ಖಗೋಳ ಶಾಸ್ತ್ರ, ಭೂಶಾಸ್ತ್ರ, ಭೂಮಿಜ್ಞಾನ, ಶರೀರ ಶಾಸ್ತ್ರದಿಂದ ಹಿಡಿದು, ಸಾಗರ ಶಾಸ್ತ್ರ, ಸಮುದ್ರ, ಸಸ್ಯ ಶಾಸ್ತ್ರ, ಪ್ರಾಣಿ ಶಾಸ್ತ್ರ ಮುಂತಾದೆಲ್ಲ ಉದಾಹರಣೆಗಳನ್ನು ನೀಡುವನು. ಜನರಲ್ಲಿ ಅವರವರಿಗೆ ಇರುವ ಜ್ಞಾನ, ತಿಳುವಳಿಕೆ, ಅನುಭವಗಳ ಪ್ರಕಾರವೇ ಮತ್ತು ಅವುಗಳ ಮೂಲಕವೇ ಜನರು ಅವುಗಳನ್ನು ಮನವರಿಕೆ ಮಾಡಿಕೊಳ್ಳಲಿ ಮತ್ತು ಸತ್ಯದೆಡೆಗೆ ತಲುಪಲಿ ಎಂದು ಸೃಷ್ಟಿಕರ್ತನು ಇಂತಹ ಉದಾಹರಣೆಗಳನ್ನು ನೀಡಿದ್ದಾನೆ.

ಪವಿತ್ರ ಕುರ್‌ಆನ್ ಮಾತ್ರ ಈ ರೀತಿಯ ಉದಾಹರಣೆಗಳನ್ನೊಳಗೊಂಡಿದೆ. ಈ ಗ್ರಂಥದಲ್ಲಿ ಸಕಲ ವಿಧದ ಉದಾಹರಣೆಗಳನ್ನು ನಾವು ಕಾಣಬಹುದು. ಸಾಮಾನ್ಯ, ಸಂವೇದನೆಯ ಮತ್ತು ಸಾಮಾನ್ಯ ಜ್ಞಾನದ ಜನರಿಗೂ, ಹೆಚ್ಚು ಅರಿವಿಲ್ಲದ ವ್ಯಕ್ತಿಗಳಿಗೂ ಮನವರಿಕೆಯಾಗುವಂತಹ ಮತ್ತು ಅವರಿಗೆ ಸಂಬಂಧಿಸಿದ ಉದಾಹರಣೆಗಳೂ ಈ ಗ್ರಂಥದಲ್ಲಿವೆ. ಆದುದರಿಂದ ಪ್ರತಿಯೊಬ್ಬರಿಗೂ ದೈವಿಕ ಸಂದೇಶ ಬಹಳ ಸುಲಭವಾಗಿ ಮನವರಿಕೆಯಾಗುವುದು.

ಒಂದು ಸುರಕ್ಷಿತ ಗ್ರಂಥ:

ಪವಿತ್ರ ಕುರ್‌ಆನ್ ಸಕಲ ವಿರೂಪಗಳಿಂದ ಸುರಕ್ಷಿತ: ಪವಿತ್ರ ಕುರ್‌ಆನ್ ದೈವಿಕ ಗ್ರಂಥ. ಆದುದರಿಂದ ಯಾವುದೇ ವಿಧದ ಬದಲಾವಣೆಗಳಿಲ್ಲದೆ ಸುರಕ್ಷಿತವಾಗಿದೆ. ಗ್ರಂಥವನ್ನು ಅದರ ಮೂಲ ರೂಪದಲ್ಲಿ ಪ್ರವಾದಿವರ್ಯರು(ಸ) ಜನರೆಡೆಗೆ ತಲುಪಿಸಿದರು. ಅಂದರೆ ಅವರು ಅಲ್ಲಾಹನ ದಾಸರಿಗೆ ಅಲ್ಲಾಹನ ವಚನಗಳನ್ನು ಅದರ ಮೂಲ ರೂಪದಲ್ಲಿ ತಲುಪಿಸಿದ್ದಾರೆ.

ಯಾರದೇ ಇಷ್ಟದಂತೆ ಅದರಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ. ಅದರ ವಚನಗಳು ಯಾರಿಂದಲೂ ರದ್ದುಪಡಿಸಲಾಗಿಲ್ಲ. ಹಾಗೆ ಮಾಡುವ ಅಧಿಕಾರ-ಹಕ್ಕುಗಳು ಯಾರಿಗೂ ಇಲ್ಲ. ಈ ಆಜ್ಞೆಯನ್ನು ಅಲ್ಲಾಹನು ಈ ಗ್ರಂಥದಲ್ಲಿಯೇ

ನೀಡಿರುವನು. ಪ್ರಭುವಿನ ಕಡೆಯಿಂದ ಅವತೀರ್ಣಗೊಂಡ ಈ ಗ್ರಂಥ ಶೇ. 100ರಷ್ಟು ದೈವಿಕ ಗ್ರಂಥ ಮತ್ತು ಈಗಲೂ ದೈವಿಕವಾಗಿಯೇ ಉಳಿದಿದೆ–

"ಓ ಪೈಂಗಂಬರರೇ, ನಿಮ್ಮ ಮೇಲೆ ನಿಮ್ಮ ಪ್ರಭುವಿನ ಗ್ರಂಥದಿಂದ ದೇವವಾಣಿ ಮಾಡಲಾಗಿರುವುದನ್ನು (ಇದ್ದಕ್ಕಿದ್ದಂತೆ) ಓದಿ ಹೇಳಿರಿ. ಅದರ ವಚನಗಳನ್ನು ಬದಲಾಯಿಸುವ ಅಧಿಕಾರ ಯಾರಿಗೂ ಇಲ್ಲ. (ನೀವು ಯಾರಿಗಾಗಿಯಾದರು ಅದರಲ್ಲಿ ಬದಲಾವಣೆಗಳನ್ನು ಮಾಡಿದರೆ) ಅವನಿಂದ ತಪ್ಪಿಸಿಕೊಂಡು ಓಡಿ ಹೋಗತಕ್ಕ, ಯಾವ ಅಭಯ ಸ್ಥಾನವನ್ನೂ ಪಡೆಯಲಾರಿರಿ." (ಅಲ್ ಕಹ್ಫ್–27)

ಸೃಷ್ಟಿಕರ್ತನು ಪ್ರವಾದಿಗೆ(ಸ) ಇಂತಹ ಬಲವಾದ ಎಚ್ಚರಿಕೆ ನೀಡಿದ್ದಾನೆ. ಅಂದ ಮೇಲೆ ಪ್ರವಾದಿಯವರಿಗೆ(ಸ) ಈ ಗ್ರಂಥದಲ್ಲಿ ಹೇಗೆ ಬದಲಾವಣೆ ಮಾಡಲು ಸಾಧ್ಯವಿದೆ? ಇದರ ಅರ್ಥ, ಇದು ಪ್ರಪಂಚ ಸೃಷ್ಟಿಕರ್ತನ ಗ್ರಂಥವಾಗಿದೆ ಮತ್ತು ಅದು ಮೂಲರೂಪದಲ್ಲಿ ಮತ್ತು ಮೂಲ ಸ್ಥಿತಿಯಲ್ಲಿ ಅಲ್ಲಾಹನ ದಾಸರ ಕಡೆಗೆ ತಲುಪಿದೆ ಎಂದಾಗಿದೆ. ಈ ವಿಶ್ವಾಸದಿಂದ ಸಂಪೂರ್ಣ ಸಂತೃಪ್ತಿಯಲ್ಲಿ ಗ್ರಂಥವನ್ನು ನಾವು ಸ್ವೀಕರಿಸಬಹುದು ಎಂದಾಗಿದೆ.

ದೈವಿಕ ಗ್ರಂಥವನ್ನು ಯಥಾವತ್ತಾಗಿ ಜನರೆಡೆಗೆ ತಲುಪಿಸುವುದು ಅತ್ಯವಶ್ಯಕ: ಪ್ರವಾದಿವರ್ಯರಿಗೆ(ಸ) ದೈವಿಕ ಗ್ರಂಥವನ್ನು ಜನರೆಡೆಗೆ ಯಥಾರೂಪದಲ್ಲಿ ತಲುಪಿಸುವ ಬಹುದೊಡ್ಡ ಜವಾಬ್ದಾರಿಯಿತ್ತು. ಜನರ ಸನ್ಮಾರ್ಗಕ್ಕಾಗಿ ಗ್ರಂಥದ ಮಾರ್ಗದರ್ಶನವನ್ನು ಯಥಾವತ್ತಾಗಿ ತಲುಪಿಸುವುದು ಮಾತ್ರವಲ್ಲ ಗ್ರಂಥವನ್ನು ಸುರಕ್ಷಿತವಾಗಿರಿಸುವ ದೊಡ್ಡ ಜವಾಬ್ದಾರಿ ಕೂಡಾ ಪ್ರವಾದಿವರ್ಯರ(ಸ) ಮೇಲಿತ್ತು.

ಓ ಪೈಗಂಬರರೇ, ಅವರೊಡನೆ(ಹೀಗೆ) ಹೇಳಿರಿ, "ನನ್ನ ಕಡೆಯಿಂದ ಇದರಲ್ಲೇನಾದರೂ ಮಾರ್ಪಾಟು ಮಾಡುವುದು ನನ್ನ ಕೆಲಸವಲ್ಲ. ನಾನಂತೂ ನನಗೆ ಕಳುಹಿಸಲ್ಪಡುವ 'ದಿವ್ಯವಾಣಿ'ಯನ್ನು ಅನುಸರಿಸುವವನಾಗಿರುತ್ತೇನೆ. ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ನನಗೆ ಒಂದು ಭಯಾನಕ ಯಾತನೆಯ ಭಯವಿದೆ." (ಯೂನುಸ್: 15)

ಇದರ ಅರ್ಥ ಈ ಗ್ರಂಥದಲ್ಲಿ ಯಾವುದೇ ಮಾರ್ಪಾಟು ಸಾಧ್ಯವಿಲ್ಲ ಮತ್ತು ಗ್ರಂಥ ಹೇಗಿತ್ತೋ ಹಾಗೆಯೇ ಯಥಾರೂಪದಲ್ಲಿ ಜನರೆಡೆಗೆ ಪ್ರಮಾಣಿಕವಾಗಿ ಮತ್ತು ಅಮಾನತ್ತು ಎಂಬ ರೂಪದಲ್ಲಿ ತಲುಪಿಸಲಾಗಿದೆ ಎಂದಾಗಿದೆ.

ನಂಬಿಕೆ ಮತ್ತು ತೃಪ್ತಿ

ಜನರು ಪವಿತ್ರ ಕುರ್‌ಆನ್‌ನಲ್ಲಿ ಸಂಪೂರ್ಣ ತೃಪ್ತಿ ಮತ್ತು ನಂಬಿಕೆ ಇರಿಸಬೇಕು.

ಇದರಲ್ಲಿ ಹೇಳಲಾದವುಗಳೆಲ್ಲವೂ ಜ್ಞಾನ ಮತ್ತು ಯುಕ್ತಿಯ ಆಧಾರದಲ್ಲಿದ್ದು ಅವುಗಳನ್ನು ಸುರಕ್ಷಿತಗೊಳಿಸಲಾಗಿದೆ. ಈ ಕುರಿತು ಈ ಹಿಂದೆಯೆ ಚರ್ಚಿಸಲಾಗಿದೆ.

"(ಪ್ರೈಗಂಬರರೇ), ನಿಶ್ಚಯವಾಗಿಯೂ ನೀವು ಈ ಕುರ್‌ಆನನ್ನು ಓರ್ವ ಸರ್ವಜ್ಞನೂ ಧೀಮಂತನೂ ಆಗಿರುವವನ ಕಡೆಯಿಂದ ಪಡೆಯುತ್ತಿರುವಿರಿ." (ಅನ್ನಮ್ಲ್: 6)

ಪವಿತ್ರ ಕುರ್‌ಆನ್ ಸಂರಕ್ಷಿತ:

ಪವಿತ್ರ ಕುರ್‌ಆನನ್ನು ಸುರಕ್ಷಿತಗೊಳಿಸಲಾಗಿದೆ. ತದ ನಂತರ ಬರುವ ಪ್ರತಿಯೊರ್ವ ವ್ಯಕ್ತಿಯೂ ಮತ್ತು ಪ್ರತಿಯೊಂದು ಪೀಳಿಗೆ ಮತ್ತು ಸಮುದಾಯವು ಈ ಗ್ರಂಥದಿಂದ ಲಾಭವೆತ್ತಬೇಕು ಮತ್ತು ಮಾರ್ಗದರ್ಶನ ಮತ್ತು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎಂಬುದಕ್ಕಾಗಿ ಅದನ್ನು ಸುರಕ್ಷಿತವಾಗಿರಿಸಲಾಗಿದೆ.

"ಈ ಉಪದೇಶವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರಾಗಿರುತ್ತೇವೆ." (ಅಲ್‌ಹಿಜ್ರ್: 9)

ಪವಿತ್ರ ಕುರ್‌ಆನ್ ಸುರಕ್ಷಿತವಾಗಿರುವುದು ಅತ್ಯಂತ ಆವಶ್ಯಕ:

ಪವಿತ್ರ ಕುರ್‌ಆನ್ ದೈವಿಕ ಮಾರ್ಗದರ್ಶನವೂ ದೈವಿಕ ಶಿಕ್ಷಣವೂ ಮಾನವ ಜೀವನದ ದೈವಿಕ ಸಂವಿಧಾನಗಳ ಕೊನೆಯ ಆವೃತ್ತಿಯೂ ಆಗಿದೆ. ಆದ್ದರಿಂದ ಯಾವುದೇ ಬದಲಾವಣೆ ಸಾಧ್ಯವಿಲ್ಲದ ರೀತಿಯಲ್ಲಿ ಅದನ್ನು ಸುರಕ್ಷಿತಗೊಳಿಸಲಾಗಿದೆ. ಜಗತ್ತಿನಲ್ಲಿ ಜನ್ಮವೆತ್ತುವ ಕೊನೆಯ ಮನುಷ್ಯನ ವರೆಗೆ ಅದು ತಲುಪಬೇಕಾದ್ದರಿಂದ ಈ ಜನರ ದೈವಿಕ ಶಿಕ್ಷಣ ಮತ್ತು ಮಾರ್ಗದರ್ಶನದ ವ್ಯವಸ್ಥೆಯನ್ನು ಈ ಗ್ರಂಥದ ಮೂಲಕ ಮುಂದುವರಿಸಲಾಯಿತು.

ಗ್ರಂಥದಲ್ಲಿ ಜನರು ಬಯಸುವಂತೆ, ಅವರ ಇಚ್ಛೆಯಂತೆ ಯಾವ ಬದಲಾವಣೆ, ತಿದ್ದುಪಡಿಗಳನ್ನು ಮಾಡುವ ಅಧಿಕಾರ ಸ್ವತಃ ಪ್ರವಾದಿಗೂ(ಸ) ಇಲ್ಲ ಅದನ್ನು ಜನರೆಡೆಗೆ ತಲುಪಿಸುವುದು ಮಾತ್ರ ಪ್ರವಾದಿಗಿರುವ ಕೆಲಸ ಮತ್ತು ಹೊಣೆಗಾರಿಕೆ. ಅರ್ಥಾತ್ ತನ್ನ ಸಂದೇಶವನ್ನು ಜನರಿಗೆ ತಲುಪಿಸುವ ಹೊಣೆಯನ್ನು ಮಾತ್ರ ಪ್ರವಾದಿಗೆ ಅಲ್ಲಾಹನು ವಹಿಸಿದ್ದನು. ಒಂದು ವೇಳೆ ಸಂದೇಶವನ್ನು ಜನರು ಸ್ವೀಕರಿಸುವುದು ಅಥವಾ ಸ್ವೀಕರಿಸದಿರುವುದು ಅವರಿಚ್ಛೆಗೆ ಬಿಟ್ಟ ವಿಚಾರವಾಗಿದೆ. ಅದಕ್ಕಾಗಿ ಯಾವುದೇ ಒತ್ತಾಯ ಬಲವಂತವನ್ನು ಜನರ ಮೇಲೆ ಹೇರುವಂತಿರಲಿಲ್ಲ.

ಆದರೆ, ಜ್ಞಾನವು ಮನುಷ್ಯನ ಮೂಲಭೂತ ಆವಶ್ಯಕತೆಯಾಗಿದೆ. ಅದು ಪ್ರಪಂಚದ ಕೊನೆಯ ಮನುಷ್ಯರ ವರೆಗೂ ಪೂರೈಸಲ್ಪಡುವುದು ಅತ್ಯಂತ ಆವಶ್ಯಕವಾಗಿದೆ.

ದೈವಿಕ ಗ್ರಂಥದ ಸಂಚಿಕೆಗಳು:

ದೈವಿಕ ಗ್ರಂಥದ ನವೀನ ಸಂಚಿಕೆ: ಅಲ್ಲಾಹನು ಪ್ರತಿಯೊಂದು ಸ್ಥಳ ಮತ್ತು ಪ್ರತಿಯೊಂದು ಸಮಯದಲ್ಲಿ ಮನುಷ್ಯರ ಮಾರ್ಗದರ್ಶನಕ್ಕೆ ಪ್ರವಾದಿಗಳನ್ನು ಮತ್ತು ಗ್ರಂಥವನ್ನು ಕಳುಹಿಸಿರುವನು. ಉದಾಹರಣೆಗೆ ಮೂಸಾ ಈಸಾ, ಇಬ್ರಾಹೀಮ್, ಯೂಸುಫ್ ಮುಂತಾದ ಪ್ರವಾದಿಗಳನ್ನು ಅಲ್ಲಾಹನು ಮನುಷ್ಯರ ಮಾರ್ಗದರ್ಶನಕ್ಕೆ ಆಯಾ ಕಾಲ, ಆಯಾ ಸ್ಥಳಗಳಿಗೆ ನಿಯೋಜಿಸಿದನು ಮತ್ತು ಅಲ್ಲಾಹನು ಅವತೀರ್ಣ ಗೊಳಿಸಿದ ಗ್ರಂಥಗಳಲ್ಲಿ ತೌರಾತ್ ಮತ್ತು ಇಂಜೀಲ್ ಮುಂತಾದ ಗ್ರಂಥಗಳೂ ಸೇರಿವೆ. ಆದರೆ ಈ ಎಲ್ಲ ಗ್ರಂಥಗಳ ನವೀನ ಎಡಿಶನ್ (ಕೊನೆಯ ಗ್ರಂಥ) ಪವಿತ್ರ ಕುರ್‌ಆನ್ ಆಗಿದೆ.

ಅಲ್ಲಾಹನು ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ಈ ವಿಚಾರವನ್ನು ಬಹಳ ಸ್ಪಷ್ಟವಾಗಿ ವಿವರಿಸಿರುವನು, "ಅಲ್ಲಾಹನು ತನಗಿಷ್ಟ ಬಂದುದನ್ನು ಅಳಿಸಿಬಿಡುತ್ತಾನೆ ಮತ್ತು ತನಗಿಷ್ಟವಿದ್ದುದನ್ನು ಉಳಿಸುತ್ತಾನೆ. ಉಮ್ಮುಲ್ ಕಿತಾಬ್(ಮಾತೃ ಗ್ರಂಥ) ಅವನ ಬಳಿಯಲ್ಲೇ ಇದೆ." (ಅರ್ರಅದ್: 39)

ಪವಿತ್ರ ಕುರ್‌ಆನ್ ಇತರ ದೈವಿಕ ಗ್ರಂಥಗಳನ್ನು ದೃಢಪಡಿಸುತ್ತದೆ: ದೈವಿಕ ಗ್ರಂಥಗಳಲ್ಲೇ ಹೊಚ್ಚ ಹೊಸದು ಮತ್ತು ದೈವಿಕ ಗ್ರಂಥಗಳಲ್ಲೇ ಕೊನೆಯ ಸಂಚಿಕೆ ಪವಿತ್ರ ಕುರ್‌ಆನ್ ಆಗಿದ್ದು ಪೂರ್ವ ಗ್ರಂಥಗಳ ಸಂಚಿಕೆಗಳನ್ನು ಅದು ದೃಢಪಡಿಸುವುದು ಮತ್ತು ಅದರ ಜೊತೆಯಲ್ಲೇ ಹಿಂದಿನ ದೈವಿಕ ಗ್ರಂಥಗಳನ್ನು ರದ್ದುಪಡಿಸುವುದು ಪವಿತ್ರ ಕುರ್‌ಆನ್‌ನ ವಿಶೇಷತೆಯಾಗಿದೆ.

ಆದರೆ ಅದು ಹಿಂದಿನ ದೈವಿಕ ಗ್ರಂಥಗಳನ್ನು ಸೃಷ್ಟಿಕರ್ತನ ಗ್ರಂಥಗಳಲ್ಲವೆಂದು ಅಲ್ಲಗಳೆಯುವುದಿಲ್ಲ ಅಥವಾ ಅವುಗಳು ಬೇರೆ ಮೂಲಗಳಿಂದ ಅವತೀರ್ಣಗೊಂಡಿವೆ ಎನ್ನುವುದಿಲ್ಲ. ಎಲ್ಲವೂ ಒಂದೇ ಮೂಲದಿಂದ, ಒಬ್ಬನೇ ದೇವನ ಕಡೆಯಿಂದ ಬಂದಿದೆ ಎನ್ನುತ್ತದೆ ಮತ್ತು ಎಲ್ಲ ಗ್ರಂಥಗಳೂ ಮೂಲತಃ ಒಂದೇ ಸಂದೇಶವನ್ನು ತಂದಿದ್ದವು ಎಂದು ತಿಳಿಸುತ್ತದೆ. ಅಂದರೆ ನಮ್ಮೆಡೆಗೆ ಪವಿತ್ರ ಕುರ್‌ಆನ್ ಬಂದಿರುವಂತೆ ದೇವನ ಕಡೆಯಿಂದಲೇ ಆ ಗ್ರಂಥಗಳೂ ಬಂದವು ಎಂದು ಪವಿತ್ರ ಕುರ್‌ಆನ್ ದೃಢಪಡಿಸುತ್ತಿದೆ. ಯಾಕೆಂದರೆ ದೇವನು ಒಬ್ಬನೇ ಮತ್ತು ಅವನು ಏಕೈಕನು. ಯಾವುದೇ ಸಂಗಾತಿ, ಜೊತೆಗಾರರು ಅವನಿಗಿಲ್ಲ ಮತ್ತು ಅವನಿಗೆ ಯಾರೂ ಭಾಗಿದಾರರಿಲ್ಲ. ಅವನು ಮಾತ್ರ ಏಕೈಕ ಆರಾಧ್ಯನು. ಸಕಲ ಮನುಷ್ಯರು ಅವನ ಸನ್ನಿಧಿಗೆ ಮರಳಬೇಕಾಗಿದೆ. ಅವನ ಮುಂದೆಯೇ ನಾವು ನಮ್ಮ ಜೀವನದ ಸಂಪೂರ್ಣ ಲೆಕ್ಕ ಸಮರ್ಪಿಸಬೇಕಾಗಿದೆ. ಆದ್ದರಿಂದ ಅಲ್ಲಾಹನು ಹೇಳುತ್ತಾನೆ–

"(ಪೈಗಂಬರರೇ) ನಾವು ನಿಮ್ಮ ಕಡೆಗೆ ದಿವ್ಯವಾಣಿಯ ಮೂಲಕ ಕಳುಹಿಸಿದ ಗ್ರಂಥವೇ ಸತ್ಯವಾಗಿದ್ದು ಈ ಮುಂಚೆ ಬಂದಿದ್ದ ಗ್ರಂಥಗಳನ್ನು ದೃಢೀಕರಿಸಲು ಬಂದಿದೆ. ನಿಶ್ಚಯವಾಗಿಯೂ ಅಲ್ಲಾಹನು ತನ್ನ ದಾಸರ ಬಗ್ಗೆ ವಿವರ ಪೂರ್ಣನೂ ಪ್ರತಿಯೊಂದರ ಮೇಲೆ ನಿಗಾ ಇರಿಸುವವನೂ ಆಗಿರುತ್ತಾನೆ." (ಫಾತಿರ್: 31)

ಪವಿತ್ರ ಕುರ್‌ಆನ್ ಸೃಷ್ಟಿಕರ್ತನ ವಚನವಾಗಿದ್ದು ಪೂರ್ವ ಗ್ರಂಥಗಳನ್ನು ಅದು ದೃಢೀಕರಿಸುತ್ತದೆ: ಪವಿತ್ರ ಕುರ್‌ಆನ್‌ನ ವಚನಗಳು ದೈವಿಕ ವಚನಗಳಾಗಿವೆ ಎಂಬುದ ರಲ್ಲಿ ಯಾವುದೇ ಸಂದೇಹಗಳಿಲ್ಲ. ಪವಿತ್ರ ಕುರ್‌ಆನಿನಲ್ಲಿ, ಅದರ ಇತಿಹಾಸವನ್ನು ಮತ್ತು ಅದನ್ನು ಪ್ರಸ್ತುಪಡಿಸಿದ [ಪ್ರವಾದಿಯ(ಸ)] ವ್ಯಕ್ತಿಯ ಜೀವನದ ಮೇಲೆ ಗಂಭೀರವಾಗಿ ಗಮನಿಸಿದಾಗ ಅವೆಲ್ಲವೂ ದೈವಿಕ ವಚನಗಳವು ಎಂದು ವಿಶ್ವಾಸ ಮೂಡುತ್ತದೆ. ಅದರ ಶಿಕ್ಷಣದ ಪ್ರಕಾರ ಕರ್ಮವೆಸಗುವುದರಿಂದ ಅಗುವ ಪರಿಣಾಮದಿಂದಲೂ ಅದು ದೈವಿಕ ವಚನಗಳೇ ಎಂದು ನಮ್ಮಲ್ಲಿ ನಂಬಿಕೆ ಮೂಡುತ್ತದೆ ಮತ್ತು ಈಗ ರದ್ದುಗೊಂಡಿರುವ ಹಿಂದಿನ ದೈವಿಕ ಗ್ರಂಥಗಳನ್ನು ಪವಿತ್ರ ಕುರ್‌ಆನ್ ಅವುಗಳನ್ನು ದೃಢಪಡಿಸುವುದು. ಅಂದರೆ ಆ ಪೂರ್ವಗ್ರಂಥಗಳು ಕೂಡ ಸೃಷ್ಟಿಕರ್ತನ ಕಡೆಯಿಂದಲೇ ಅವತೀರ್ಣಗೊಂಡಿರುವ ಗ್ರಂಥಗಳಾಗಿವೆ ಎಂದು ಪವಿತ್ರ ಕುರ್‌ಆನ್ ದೃಢಪಡಿಸುತ್ತದೆ. ಜೊತೆಗೆ ಅವುಗಳು ಅವತೀರ್ಣಗೊಂಡಿದ್ದ (ಅವುಗಳನ್ನು ತಂದ) ಪ್ರವಾದಿಗಳನ್ನು ಕೂಡ ದೃಢಪಡಿಸುತ್ತದೆ. ಅವರೆಲ್ಲರೂ ಅಲ್ಲಾಹನಿಂದ ಪ್ರವಾದಿ ಯಾಗಿ ಆಯ್ಕೆಯಾಗಿದ್ದ ಮನುಷ್ಯರೇ ಮತ್ತು ಅಲ್ಲಾಹನಿಂದ ಪ್ರವಾದಿಗಳಾಗಿ ನಿಯೋಜಿಸಲ್ಪಟ್ಟವರು ಎಂದು ತಿಳಿಸುತ್ತದೆ.

ಅಲ್ಲಾಹನು ಹೀಗೆ ಹೇಳುತ್ತಾನೆ, "ಈ ಕುರ್‌ಆನ್ ಅಲ್ಲಾಹನ ದಿವ್ಯವಾಣಿ ಮತ್ತು ಬೋಧನೆಯ ಹೊರತು ರಚಿಸಲ್ಪಡುವಂತಹ ವಸ್ತುವಲ್ಲ. ನಿಜವಾಗಿ ಇದು ಹಿಂದೆ ಬಂದಿದ್ದುದರ ದೃಢೀಕರಣವೂ ಪರಮ ಗ್ರಂಥದ ವಿವರಣೆಯೂ ಆಗಿರುತ್ತದೆ. ಇದು ಸರ್ವಲೋಕಾಧಿಪತಿಯ ಕಡೆಯಿಂದ ಬಂದಿರುವುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ." (ಯೂನುಸ್: 37)

ಇತರ ಧರ್ಮಗಳ ಶಿಕ್ಷಣಗಳಲ್ಲಿ ಸಾಮ್ಯತೆ: ಯಾವುದೇ ಗ್ರಂಥದ ರಚನಾಕಾರ ಒಬ್ಬನಾಗಿದ್ದು ಸಮಯ ಸಮಯಕ್ಕೆ ಅವನು ಹೊರ ತರುವ ಸಂಚಿಕೆಗಳ ಮೂಲ ವಿಷಯಗಳಲ್ಲಿ ಏಕರೂಪತೆ ಇರುವುದನ್ನು ಕಾಣಬಹುದು. ಅಂದರೆ ಆ ಸಂಚಿಕೆಗಳ ವಿಷಯಗಳಲ್ಲಿ ಇರುವ ಬಹಳಷ್ಟು ವಿಷಯಗಳು ಒಂದೇ ರೀತಿಯಲ್ಲಿ ಇರುವುದು. ಜೊತೆಗೆ ಕೆಲವು ವಿಷಯಗಳಲ್ಲಿ ಮೂಲಭೂತ ಅಂತರ ಇರುವುದು ಕೂಡ ವ್ಯಕ್ತ ವಾಗುತ್ತದೆ. ಅಂದರೆ ಮುಸ್ಲಿಮರು ಕಅಬದ ತವಾಫ್ (ಪ್ರದಕ್ಷಿಣೆ) ನಡೆಸುವಂತೆ

ಬೇರೆ ಧರ್ಮಗಳಲ್ಲಿ ಮೂರ್ತಿಗಳಿಗೆ ಪ್ರದಕ್ಷಿಣೆ ಮಾಡುತ್ತಾರೆ ಎನ್ನಲಾಗುತ್ತಿದೆ. ಕಲ್ಲುಗಳಿಂದ ಕಟ್ಟಲಾದ ಕಅಬ ಭವನದತ್ತ ಅಭಿಮುಖವಾಗಿ ಮುಸ್ಲಿಮರು ಸಜ್ದಾ (ನಮಾಝ್‌ನ ವೇಳೆ ಸಾಷ್ಟಾಂಗ) ಮಾಡುತ್ತಾರೆ. ಬೇರೆ ಧರ್ಮಗಳಲ್ಲಿ ಮೂರ್ತಿಗಳಿಗೆ ಸಾಷ್ಟಾಂಗ ಮಾಡಲಾಗುತ್ತದೆ. ಅದೇ ರೀತಿ ಹಜ್ಜ್ ಯಾತ್ರೆಯ ವೇಳೆ ಮುಸ್ಲಿಮರು ಧರಿಸುವ ಇಹ್ರಾಮ್ ಉಡುಪಿಗೆ ಹೋಲುವಂತಹ ಉಡುಪಿನಲ್ಲಿ ತಮ್ಮ ಪವಿತ್ರ ಸ್ಥಳಕ್ಕೆ ಅವರು ತೀರ್ಥಯಾತ್ರೆ ಮಾಡುತ್ತಾರೆ ಎಂದು ಹೇಳಲಾಗುತ್ತದೆ.

ಸೃಷ್ಟಿಕರ್ತನ ಕಡೆಯಿಂದ ಬೇರೆ ಬೇರೆ ಭಾಷೆಗಳಲ್ಲಿ ಬಂದ ಎಲ್ಲ ದೈವಿಕ ಗ್ರಂಥಗಳು ಮೂಲ ತಳಹದಿಯ ಒಂದೇ ವಿಷಯವನ್ನು ಹೇಳುತ್ತವೆ. ಉಳಿದಂತೆ ಅದರ ಇತರ ವಚನಗಳಲ್ಲಿ ಸಾಮ್ಯತೆಗಳೂ ಇವೆ, ವ್ಯತ್ಯಾಸಗಳೂ ಇವೆ.

ಪ್ರತಿಯೊಬ್ಬ ಮನುಷ್ಯನ ಮತ್ತು ಪ್ರತಿ ಯುಗಗಳ ಜನರ ಮೂಲಭೂತ ಅಗತ್ಯ ಮತ್ತು ಮಾರ್ಗದರ್ಶನವು ಒಂದೇ ಆಗಿತ್ತು. ಮುಂದೆಯೂ ಅದುವೇ ಆಗಿರುತ್ತದೆ. ಆದುದರಿಂದ ಮನುಷ್ಯರ ಮೂಲಭೂತ ಮಾರ್ಗದರ್ಶನದಲ್ಲಿ ಯಾವುದೇ ವ್ಯತ್ಯಾಸವನ್ನು ಸೃಷ್ಟಿಕರ್ತನು ಇರಿಸಲಿಲ್ಲ. ಆದರೆ ಹಿಂದಿನ ಮಾರ್ಗದರ್ಶಕ ಗ್ರಂಥಗಳ ಮತ್ತು ಹೊಸ ಗ್ರಂಥವಾದ ಪವಿತ್ರ ಕುರ್‌ಆನ್‌ನ ಮೂಲಭೂತ ವಿಷಯಗಳಲ್ಲಿ ಕಂಡು ಬರುವ ವ್ಯತ್ಯಾಸಗಳಿಗೆ ವಿಭಿನ್ನ ಕಾರಣಗಳಿವೆ.

ಒಂದನೆಯದಾಗಿ ಹಿಂದಿನ ಯುಗದಲ್ಲಿ ಜನರಿಗೆ ಓದು ಬರಹಗಳು ತಿಳಿದಿರಲಿಲ್ಲ. ಆಗ ಸಂದೇಶಗಳನ್ನು ಜನರಿಗೆ ಮಾತುಗಳ ರೂಪದಲ್ಲಿ (ಹೃದಯದಿಂದ ಹೃದಯಕ್ಕೆ) ತಲುಪಿಸಲಾಗುತ್ತಿತ್ತು. ಆ ನಂತರವೂ ಬಂದ ಶಿಕ್ಷಣವು ಹೆಚ್ಚು ಜನರನ್ನು ತಲುಪುತ್ತಿರಲಿಲ್ಲ. ಬಹುಶಃ ಕೆಲವು ವಚನಗಳು ಜನರಿಗೆ ಮರೆತು ಹೋಗಿರುವುದು ಅಥವಾ ಕೆಲವು ವಿಷಯಗಳು ಸೇರಿಸಲ್ಪಟ್ಟಿರುವುದು ಕಾರಣವಾಗಿರಬಹುದು. ಧರ್ಮದ ವಕ್ತಾರಿಕೆ ಇದ್ದವರಿಂದ ಹೀಗೆ ಸಂಭವಿಸಿರಬಹುದು. ತಮ್ಮ ಸ್ವಾರ್ಥ ಹಿತಾಸಕ್ತಿಯಿಂದ ದೈವಿಕ ಗ್ರಂಥದ ಮೂಲ ವಚನಗಳಲ್ಲಿ ಬದಲಾವಣೆ ಮಾಡಿರಬಹುದು. ತಮ್ಮ ಚಿಂತನೆಗಳನ್ನು ಸೇರ್ಪಡೆಗೊಳಿಸಿರಬಹುದು.

ಆದುದರಿಂದ ಗ್ರಂಥದ ಮೂಲ ತತ್ವದಲ್ಲಿ ಅವರು ಬದಲಾವಣೆ ತಂದುದರಿಂದ ಪೂರ್ವಿಕ ಗ್ರಂಥಗಳ ಮೂಲಭೂತ ವಿಷಯದಲ್ಲಿ ಅಂತರವಾಗಿತ್ತು. ಇಂತಹವರು ಮೂಲಭೂತ ವಿಷಯ ವನ್ನು ಬದಲಿಸಿದರು. ಆದ್ದರಿಂದ ಪೂರ್ವ ದೈವಿಕ ಗ್ರಂಥಗಳು ಮೂಲ ರೂಪದಲ್ಲಿ ಲಭ್ಯವಿಲ್ಲ. ಒಂದು ವೇಳೆ, ಅಸಲಿ ರೂಪದಲ್ಲಿ ಹಿಂದಿನ ದೈವಿಕ ಗ್ರಂಥಗಳು ಇರುತ್ತಿದ್ದರೆ ನವೀನ ಆವೃತ್ತಿಯಾದ ಪವಿತ್ರ ಕುರ್‌ಆನಿನಲ್ಲಿ ವಿಶ್ವಾಸ ಇರಿಸುವುದು ಜನರಿಗೆ ಹೆಚ್ಚು ಸುಲಭವಾಗುತ್ತಿತ್ತು.

ಪವಿತ್ರ ಕುರ್‌ಆನ್ ಮಾರ್ಗದರ್ಶಿ, ಅನುಗ್ರಹೀತ ಗ್ರಂಥ:

ಪವಿತ್ರ ಕುರ್‌ಆನ್ ಒಂದು ಉಡುಗೊರೆ: ಈ ಗ್ರಂಥ ತನ್ನ ದಾಸರಿಗೆ ಸೃಷ್ಟಿಕರ್ತನ ಒಂದು ಉಡುಗೊರೆಯಾಗಿದೆ. ಮತ್ತು ಅವನ ಮಾರ್ಗದರ್ಶನವಾಗಿದೆ. "ರಹ್ಮಾನನು (ಪರಮದಯಾಮಯನು) ಈ ಕುರ್‌ಆನನ್ನು ಕಲಿಸಿರುವನು." (ಅರ್‍ರಹ್ಮಾನ್: 1–2)

ನೇರಮಾರ್ಗಕ್ಕೆ ವಿವೇಕದ ಬಳಕೆ: ಯಾರು ತಮ್ಮ ವಿವೇಕ ಉಪಯೋಗಿಸಿ ಈ ಗ್ರಂಥವನ್ನು ಓದುವರೋ ಅವರಿಗೆ ಇದು ಪಾಠದಾಯಕವೂ ಮತ್ತು ಮಾರ್ಗದರ್ಶಕವೂ ಆಗಿದೆ. ಅವರು ಇದರಿಂದ ಪಾಠ ಮತ್ತು ಮಾರ್ಗದರ್ಶನವನ್ನು ಪಡೆಯುವರು. "(ಪೈಗಂಬರರೇ), ಇದೊಂದು ಅತೀ ಸಮೃದ್ಧವಾದ ಗ್ರಂಥವಾಗಿದ್ದು ಇವರು ಇದರ ಸೂಕ್ತಗಳ ಕುರಿತು ಚಿಂತನೆ ನಡೆಸಲೆಂದು ಮತ್ತು ಬುದ್ಧಿ ಜೀವಿಗಳು ಇದರಿಂದ ಉದೇಶ ಪಡೆಯುವಂತಾಗಲೆಂದು ನಾವು ಇದನ್ನು ನಿಮಗೆ ಅವತೀರ್ಣಗೊಳಿಸಿದ್ದೇವೆ." (ಸ್ವಾದ್: 29)

ಮೇಲಿನ ವಚನಗಳಿಂದ ಗ್ರಂಥ ಮತ್ತು ಪ್ರವಾದಿ ಇಬ್ಬರು ಅಲ್ಲಾಹನ ಕಡೆ ಯಿಂದ ಇರುವವರು ಎಂದು ವ್ಯಕ್ತವಾಗುತ್ತದೆ. ಬುದ್ಧಿಯನ್ನು ಉಪಯೋಗಿಸಬೇಕು. ಪ್ರವಾದಿ ಮತ್ತು ಗ್ರಂಥದ ಶಿಕ್ಷಣ ಮಾರ್ಗದರ್ಶನಗಳಿಂದ ಪ್ರಯೋಜನ ಪಡೆದುಕೊಳ್ಳಲು ನಿಮ್ಮ ವಿವೇಕವನ್ನು ಉಪಯೋಗಿಸಬೇಕಿರುವುದು ಅತ್ಯವಶ್ಯಕವಾಗಿದೆ. ವಿವೇಕದ ಮೇಲೆ ಅಹಂಕಾರದ ಪ್ರಭಾವ ಆಗದಿರುವಂತೆ ಸಕಲ ಪೂರ್ವಗ್ರಹಗಳನ್ನು ಸ್ವಪ್ರಶಂಸೆಗಳನ್ನು ತೊರೆಯುವುದಾದರೆ ಮಾರ್ಗದರ್ಶನವನ್ನು ಪಡೆಯಬಹುದಾಗಿದೆ.

ಪವಿತ್ರ ಕುರ್‌ಆನಿನ ಪಂಥಾಹ್ವಾನ(ಸವಾಲು): ತನ್ನನ್ನು ನಿರಾಕರಿಸುವವರ ಮುಂದೆ ಪವಿತ್ರ ಕುರ್‌ಆನ್ ಪಂಥಾಹ್ವಾನ(ಸವಾಲು) ವನ್ನಿರಿಸಿದೆ. ಒಂದು ವೇಳೆ ತಾನು ಮುಂದಿಟ್ಟ ಸವಾಲನ್ನು ನಿಮಗೆ ಸ್ವೀಕರಿಸಲು ಅಸಾಧ್ಯವಾಗುವುದಿದ್ದರೆ ನೀವು ಮಾಡಿಕೊಂಡ ನಿಮ್ಮ ಆರಾಧ್ಯರ ಸಹಾಯವನ್ನೂ ಪಡೆಯಿರಿ ಮತ್ತು ಇಂತಹ ವಚನ ಗಳನ್ನು ಸೃಷ್ಟಿಸಿ ತನ್ನಿರಿ ಎಂದು ಪಂಥಾಹ್ವಾನ ನೀಡುತ್ತದೆ. ನಿಮ್ಮಿಂದ ಸಾಧ್ಯವಿಲ್ಲ. ಯಾಕೆಂದರೆ ಈ ಗ್ರಂಥ ನಿಮ್ಮನ್ನು ಸಕಲ ಮನುಷ್ಯರನ್ನು ಸೃಷ್ಟಿಸಿದ ಸೃಷ್ಟಿಕರ್ತನ ಗ್ರಂಥವಾಗಿರುವುದು ಕಾರಣವಾಗಿದೆ ಎಂದೂ ತಿಳಿಸುತ್ತಿದೆ. ಪವಿತ್ರ ಕುರ್‌ಆನ್ ಮಾನವ ಕೃತ ಗ್ರಂಥವಲ್ಲ ಎಂಬುದನ್ನು ಅದುವೇ ಬಹಳ ಸ್ಪಷ್ಟವಾಗಿ ಅಭಿಸಂಬೋಧಿತರ ಮುಂದಿಟ್ಟಿದೆ. ಜೊತೆಗೆ ಮನುಷ್ಯರನ್ನು ಸೃಷ್ಟಿಸಿದ ಸೃಷ್ಟಿಕರ್ತನ ಹೊರತು ಬೇರೆ ಆರಾಧ್ಯರಿಲ್ಲ ಎಂದೂ ಸ್ಪಷ್ಟಪಡಿಸುತ್ತಿದೆ...

"ಅವರು (ನಿಮ್ಮ ಪೂಜ್ಯರು) ನಿಮ್ಮ ನೆರವಿಗೆ ಬಾರದಿದ್ದರೆ ಇದು ಅಲ್ಲಾಹನ

ದಿವ್ಯಜ್ಞಾನದಿಂದ ಅವತೀರ್ಣಗೊಂಡಿದೆ ಮತ್ತು ಅವನ ಹೊರತು ಅನ್ಯ ದೇವನಿಲ್ಲ ವೆಂದು ಚೆನ್ನಾಗಿ ಅರಿತುಕೊಳ್ಳಿರಿ. ಇನ್ನಾದರೂ (ಈ ಪರಮಾರ್ಥದ ಮುಂದೆ) ಶರಣಾಗತರಾಗುತ್ತೀರಾ?." (ಸೂರ ಹೂದ್: 14)

ಪವಿತ್ರ ಕುರ್‌ಆನ್‌ನ ದೂರಗಾಮಿ ಪರಿಣಾಮಗಳು: ದೈವಿಕ ಗ್ರಂಥದ ನಿರಾಕರಣೆಯ ಪರಿಣಾಮಗಳು ತುಂಬ ದೂರದವರೆಗೂ ವ್ಯಾಪಿಸುವುದು. ಆ ಪರಿಣಾಮ ಕೇವಲ ಒಂದು ತಪ್ಪೊಪ್ಪಿಗೆಗೆ ಅಥವಾ ನಿರಾಕರಣೆ ಯಲ್ಲಿಗೆ ಮುಗಿದು ಬಿಡುವಂತಹದ್ದೂ ಅಲ್ಲ. ಇನ್ನು ಕೆಲವನ್ನು ಸ್ವೀಕರಿಸಿ ಇನ್ನು ಕೆಲವನ್ನು ನಿರಾಕರಿಸಿದರೂ ಅದರ ಪರಿಣಾಮ ಮುಗಿಯುವುದಿಲ್ಲ. ಆ ಪರಿಣಾಮ ಎಷ್ಟು ದೂರಗಾಮಿಯಾಗಿದೆ ಎಂದರೆ ಇಹಲೋಕ ಜೀವನದಿಂದ ಹಿಡಿದು ಮರಣಾನಂತರ ಜೀವನದ ವರೆಗೆ ವ್ಯಾಪಿಸಿರುವುದು. ಅಂದರೆ ಮರಣಾನಂತರ ಜೀವನ ಅಂದರೆ ಪರಲೋಕ ಜೀವನ ವಾಗಿದೆ. ಹೀಗೆ ನಿರಾಕರಣೆಯ ದೂರಗಾಮಿ ಪರಿಣಾಮಗಳು ಅಲ್ಲಿಯ ವರೆಗೂ ಮುಂದುವರಿಯುತ್ತವೆ.

ದೈವಿಕ ಗ್ರಂಥದಲ್ಲಿ ವಿಶ್ವಾಸ ಇರಿಸುವ ಮೂಲಕ, ಅದರ ಪ್ರತಿಯೊಂದು ವಚನಗಳು ಸತ್ಯವಾಗಿದೆ ಎಂಬ ನಂಬಿಕೆಯಿಂದ ಆ ವಚನಗಳು ಸೂಚಿಸಿದಂತೆ ಕರ್ಮ ಎಸಗಿದರೆ ಜೀವನದಲ್ಲಿ ಉತ್ತಮ ಪರಿಣಾಮವನ್ನು ಕಾಣುವಿರಿ. ಪರಲೋಕದಲ್ಲಿಯೂ ಉತ್ತಮ ಜೀವನ ಲಭಿಸುವುದು ಅಂದರೆ ಮರಣಾನಂತರ ನಿಮ್ಮ ಜೀವನ ಉತ್ತಮವಾಗಿರುತ್ತದೆ ಎಂದು ಪವಿತ್ರ ಕುರ್‌ಆನ್ ವಿವರಿಸಿದೆ.

"ಸಂದೇಶವಾಹಕರೇ, ಇವರೊಡನೆ ಹೇಳಿರಿ, ನಿಜಕ್ಕೂ ಈ ಕುರ್‌ಆನ್ ಅಲ್ಲಾಹನ ಕಡೆಯಿಂದಲೇ ಬಂದಿದ್ದರೆ, ಮತ್ತು ನೀವು ಇದನ್ನು ನಿರಾಕರಿಸುತ್ತಲೇ ಇದ್ದರೆ, ಇದನ್ನು ವಿರೋಧಿಸುವುದರಲ್ಲಿ ಬಹುದೂರ ಹೋಗಿಬಿಟ್ಟವನಿಗಿಂತ ದೊಡ್ಡ ಪಥಭ್ರಷ್ಟನು ಇನ್ನಾರಿರಬಹುದೆಂದು ನೀವೇಂದಾದರೂ ಆಲೋಚಿಸಿದ್ದೀರಾ?"

(ಹಾಮೀಮ್ ಅಸ್ಸಜ್ದ– 52)

ಪವಿತ್ರ ಕುರ್‌ಆನ್, ಗೌರವಾನ್ವಿತ ಮತ್ತು ವಿಶ್ವಾಸಾರ್ಹ ಮತ್ತು ಕರ್ಮಯೋಗ್ಯ ವಾಗಿದೆ: ಪ್ರಪಂಚದೊಡೆಯನಾದ ಲೋಕ ಪರಿಪಾಲಕನ ಕಡೆಯಿಂದ ತಲುಪುವ ಯಾವ ವಿಷಯವೂ ಗೌರವಾನ್ವಿತವೂ ವಿಶ್ವಾಸಾರ್ಹವಾಗಿರುತ್ತದೆ. ಜೊತೆಗೆ ಕರ್ಮ ವೆಸಗಲು ಯೋಗ್ಯವೂ ಆಗಿರುತ್ತದೆ. ಪವಿತ್ರ ಕುರ್‌ಆನ್ ಪ್ರಪಂಚದ ಪಾಲಕ ಪ್ರಭುವಿನ ಕಡೆಯಿಂದ ಬಂದಿರುವ ಗ್ರಂಥವಾಗಿದೆ, "ಇದು ಸಕಲ ಲೋಕಪಾಲಕನಿಂದ ಅವತೀರ್ಣಗೊಂಡುದಾಗಿದೆ." **(ಅಲ್ ವಾಕಿಅಃ– 80)**

ಕುರ್‌ಆನ್ ಒಂದು ಉಡುಗೊರೆಯಾಗಿದ್ದು ಈ ಉಡುಗೊರೆಯು ಜನರಿಗೆ

ಸೃಷ್ಟಿಕರ್ತನ ಕಡೆಯಿಂದ ಸಿಕ್ಕಿರುವ ಒಂದು ಅನುಗ್ರವಾಗಿದೆ. ಅದು ಸಂಪೂರ್ಣ ಅನುಗ್ರಹಭರಿತವೂ ಪ್ರೀತಿಪೂರ್ವಕವೂ ಆದ ಕೊಡುಗೆ. ಈ ಕೊಡುಗೆ ಯನ್ನು ಪವಿತ್ರ ಕುರ್‌ಆನ್‌ನ ರೂಪದಲ್ಲಿ ಜನರಿಗೆ ತಲುಪಿಸಲಾಯಿತು. ಇದನ್ನು ಜನರು ಸ್ವೀಕರಿಸದೇ ನಿರಾಕರಿಸುವುದಾದರೆ ಅದು ಎಂತಹಾ ಹೀನ ಕಾರ್ಯವಾದೀತು? ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ಸಂಬೋಧಿಸುತ್ತದೆ, "ಹೀಗಿರುತ್ತ ನೀವು ಈ ವಾಣಿಯ ಕುರಿತು ನಿರ್ಲಕ್ಷ್ಯ ತೋರುತ್ತೀರಾ? ಮತ್ತು ಈ ಅನುಗ್ರಹದಲ್ಲಿ ಇದನ್ನು ತಿರಸ್ಕರಿಸುವುದನ್ನೇ ನಿಮ್ಮ ಪಾಲನ್ನಾಗಿ ಮಾಡಿ ಕೊಂಡಿರುವಿರಾ?" (ಅಲ್ ವಾಕಿಅ: 81–82)

ಮೇಲಿನ ವಚನವು ನಿಮ್ಮದೇ ಸೃಷ್ಟಿಕರ್ತನ ಕಡೆಯಿಂದ ನೀಡಲ್ಪಟ್ಟ ಈ ಅನುಗ್ರಹಗಳನ್ನು ಪಡೆದುಕೊಳ್ಳುವ ಬದಲು ನಿಷೇಧಿಸುವುದು ಎಂತಹ ಒರಟುತನ ಮತ್ತು ಎಂತಹ ವಂಚನೆಯೆಂದು ಅಭಿಸಂಭೋದಿತರನ್ನು ಪ್ರಶ್ನಿಸುತ್ತಿದೆ.

ಜ್ಞಾನ ಸಂಪಾದಿಸುವ ಉದ್ದೇಶದಿಂದ ಗ್ರಂಥವನ್ನು ಓದಿದರೆ ಮಾರ್ಗದರ್ಶನ ಮತ್ತು ಅನುಗ್ರಹಗಳ ಲಭಿಸುತ್ತದೆ: ಪವಿತ್ರ ಕುರ್‌ಆನ್, ಜ್ಞಾನ ಮತ್ತು ಯುಕ್ತಿಭರಿತ ಗ್ರಂಥವಾಗಿದ್ದು ಮನುಷ್ಯನಿಗೆ ಜ್ಞಾನ, ಮಾರ್ಗದರ್ಶನಗಳು ಅದರಿಂದ ದೊರೆಯುತ್ತದೆ. ಒಂದು ವೇಳೆ ಸರಿಯಾದ ಪ್ರಯೋಜನವನ್ನು ಪಡೆಯುವ ಸಂಕಲ್ಪದಿಂದ ಅದನ್ನು ಅಭ್ಯಸಿಸುವುದಾದರೆ ಅದರಿಂದ ಜ್ಞಾನ ಮಾರ್ಗದರ್ಶನಗಳನ್ನು ಮನುಷ್ಯನು ಪಡೆದು ಕೊಳ್ಳಬಹುದು. ಯಾವುದೇ ವಸ್ತುವೂ ಉತ್ತಮವೂ ಉಪಯುಕ್ತವಾಗಿದ್ದರಷ್ಟೇ ಸಾಲು ವುದಿಲ್ಲ. ಅದು ಮನುಷ್ಯನಿಗೆ ಉಪಯುಕ್ತವಾಗಬೇಕಾದರೆ ಅದನ್ನು ಸರಿಯಾಗಿ ಉಪಯೋಗಿಸುವ ಸಂಕಲ್ಪ ಮತ್ತು ಇರಾದೆಗಳು ಮನುಷ್ಯನಲ್ಲಿರುವುದು ಅತ್ಯವಶ್ಯಕವಾಗಿದೆ.

ತನ್ನ ಕುರಿತು ಪವಿತ್ರ ಕುರ್‌ಆನ್ ಹೀಗೆನ್ನುತ್ತದೆ, "ಇವು ಯುಕ್ತಿಪೂರ್ಣ ಗ್ರಂಥದ ಸೂಕ್ತಗಳು. ಸದ್ಭಕ್ತರಿಗೆ ಮಾರ್ಗದರ್ಶನವೂ ಅನುಗ್ರಹವೂ ಆಗಿವೆ." (ಲುಕ್ಮಾನ್: 2–3)

ಜ್ಞಾನ ಮತ್ತು ಯುಕ್ತಿಯ ಆಧಾರಿತ ವಚನಗಳಲ್ಲಿ ಮನುಷ್ಯರಿಗೆ ವಿಶ್ವಾಸ, ಸಂತೃಪ್ತಿ ದೊರೆಯುವುದು. ಜೊತೆಗೆ ಈ ವಚನಗಳು ಮಾರ್ಗದರ್ಶಕವೂ ಜ್ಞಾನ ಸಂಪನ್ನವೂ ಆಗಿದೆ.

ಪ್ರೀತಿಯ ಬುನಾದಿಯಲ್ಲಿ (ಆಧಾರದಲ್ಲಿ) ಹೇಳಲಾದ ಪವಿತ್ರ ಕುರ್‌ಆನಿನ ಮಾತುಗಳಿಂದ ಮನುಷ್ಯನಲ್ಲಿ ಕೃತಜ್ಞತಾ ಭಾವ ಸ್ಫುರಿಸುತ್ತದೆ. ಆದುದರಿಂದ ಅಭಿಸಂಬೋಧಿತ ಇದು ತನಗೆ ಲಾಭದಾಯಕವೆಂದು ತಿಳಿದು ಅದನ್ನು ಸ್ವೀಕರಿಸುವನು.

ಪವಿತ್ರ ಕುರ್‌ಆನಿನ ಆಜ್ಞಾದೇಶ ನೀಡುವ ವಚನಗಳು ಕೂಡ, ಖಂಡಿತಾ ನ್ಯಾಯಯುತವೂ ಮತ್ತು ಸಂಯಮಪೂರ್ಣವಾದುದು. ಅವುಗಳಿಂದಲೂ ಮಾನವರ ಜೀವನದಲ್ಲಿ ಅತ್ಯುತ್ತಮವಾದ ಪರಿಣಾಮವು ಹೊರಗೆ ವ್ಯಕ್ತವಾಗುವುದು.

ಅತ್ಯುತ್ತಮ ಗ್ರಂಥ: ಯಾಕೆಂದರೆ ಪವಿತ್ರ ಕುರ್‌ಆನ್ ಒಬ್ಬ ಜ್ಞಾನಿ-ಸರ್ವಜ್ಞ, ಯುಕ್ತಿಪೂರ್ಣನ ಅಸ್ತಿತ್ವದಿಂದ ಅವತೀರ್ಣಗೊಂಡಿದೆ. ಆದ್ದರಿಂದಲೇ ಈ ಗ್ರಂಥ ಜ್ಞಾನ ಮತ್ತು ಯುಕ್ತಿಯಿಂದ ಪರಿಪೂರ್ಣಗೊಂಡಿದೆ. ಗ್ರಂಥದಲ್ಲಿರುವ ಯಾವುದೇ ವಚನಗಳನ್ನೂ ತಪ್ಪಾದುದು ಎಂದು ಯಾರಿಗೂ ಸಾಬೀತು ಪಡಿಸಲು ಸಾಧ್ಯವಾಗಿಲ್ಲ ಮತ್ತು ಇಂದಿನ ಹೊಸ ಹೊಸ ಸಂಶೋಧನೆಗಳ ಮೂಲಕವೂ ಪವಿತ್ರ ಕುರ್‌ಆನಿನ ವಚನಗಳನ್ನು ತಪ್ಪಾದುದು ಎಂದು ಸಾಬೀತು ಪಡಿಸಲು ಸಾಧ್ಯವಿಲ್ಲ. ಇದಕ್ಕೆ ಬದಲಾಗಿ ಶೋಧದ ಮೂಲಕ ಪವಿತ್ರ ಕುರ್‌ಅನ್ ಪ್ರತಿಪಾದಿಸುವ ಸಾವಿರಾರು ವರ್ಷಗಳ ಹಿಂದಿನ ವಿಷಯಗಳು ಸತ್ಯವೆಂದು ಸಾಬೀತುಗೊಂಡು ಪವಿತ್ರ ಕುರ್‌ಆನ್‌ನ ಮೇಲೆ ವಿಶ್ವಾಸ ಹೆಚ್ಚು ದೃಢಪಟ್ಟಿದೆ.

"ಇವರ ಬೋಧನೆಯು ಇವರ ಮುಂದೆ ಬಂದಾಗ ಅದನ್ನು ತಿರಸ್ಕರಿಸಿದವರಾಗಿದ್ದಾರೆ. ಆದರೆ ಇದೊಂದು ಪ್ರತಾಪವುಳ್ಳ ಗ್ರಂಥವೆಂಬುದೇ ವಾಸ್ತವಿಕತೆ. ಮಿಥ್ಯವು ಇದರ ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಇದರೊಳಗೆ ಬರಲಾರದು. ಇದು ಯುಕ್ತಿಪೂರ್ಣನೂ ಪ್ರಶಂಸಾರ್ಹನೂ ಆದವನಿಂದ ಅವತೀರ್ಣಗೊಂಡುದಾಗಿದೆ." **(ಹಾಮೀಮ್ ಅಸ್ಸಜ್ದ: 41-42)**

❖ ❖ ❖ ❖

ಅಧ್ಯಾಯ 4

ಸೃಷ್ಟಿಕರ್ತನ ಗ್ರಂಥದಿಂದ ಪ್ರವಾದಿ ಮುಹಮ್ಮದ್(ಸ)ರ ಪರಿಚಯ

ವಿಶ್ವ ಸೃಷ್ಟಿಕರ್ತನ ಪ್ರವಾದಿಯ ಕುರಿತು ಸಾಮಾನ್ಯ ಪರಿಚಯ:

ಪ್ರಪಂಚವನ್ನು ಸೃಷ್ಟಿಸಿದ ಸೃಷ್ಟಿಕರ್ತನ ಪ್ರವಾದಿ ಎಂದು ಸ್ವಯಂ ತನ್ನನ್ನು ಪರಿಚಯಿಸುವ ಗುರಿ ಮತ್ತು ಸವಾಲುಗಳು ಸಂದೇಶವಾಹಕರ ಮುಂದಿತ್ತು. ಜನರು ಮತ್ತು ಸಮಾಜಕ್ಕೆ ಮನವರಿಕೆಯಾಗುವ ರೀತಿಯಲ್ಲಿ ಜನರು ಸಂತೃಪ್ತವಾಗುವಂತೆ ಮತ್ತು ಅವರಲ್ಲಿ ವಿಶ್ವಾಸ ಮೂಡುವಂತೆ ಪರಿಚಯಿಸುವ ಬಹುದೊಡ್ಡ ಗುರಿ ಮತ್ತು ಸವಾಲದು. ಅದರ ಜೊತೆಗೆ ಸೃಷ್ಟಿಕರ್ತನ ಪರಿಚಯವನ್ನು ಅವರು ಮಾಡಿಸಬೇಕಿತ್ತು. ಸಮಾಜದಲ್ಲಿ ವ್ಯಾಪಿಸಿಕೊಂಡಿದ್ದ ತಪ್ಪುಕಲ್ಪನೆ, ಸಂದೇಹಗಳನ್ನು ದೂರ ಮಾಡುವ ಹೊಣೆಗಾರಿಕೆ ಸಂದೇಶವಾಹಕರಿಗಿತ್ತು. ಜೊತೆಗೆ ಈ ಎಲ್ಲ ವಿಷಯಗಳನ್ನು ಜನರು ತೃಪ್ತರಾಗುವಂತೆಯೂ ಜನರಲ್ಲಿ ವಿಶ್ವಾಸ ಮೂಡುವಂತೆಯೂ ಜನರ ಮುಂದಿಡಬೇಕಿತ್ತು ಮತ್ತು ಆನಂತರ ಸೃಷ್ಟಿಕರ್ತನ ಪ್ರವಾದಿಯೆಂಬ ನೆಲೆಯಲ್ಲಿ ತಾನು ತಂದ ಸಂದೇಶ ಗಳಿಂದ ಜನರು ಲಾಭಪಡೆಯುವ ಸಲುವಾಗಿ ಜನರಲ್ಲಿ ವಿಶ್ವಾಸ ಆಗುವಂತೆ ಮತ್ತು ಜನರು ತೃಪ್ತರಾಗುವಂತೆ ನಿರಂತರ ವಿವರಿಸುತ್ತಲೇ ಇರಬೇಕಾಗಿತ್ತು.

ಅವರೊಬ್ಬರೇ ಈ ಗುರಿಯನ್ನು ಸಂದೇಶ ಪ್ರಚಾರದ ಮೂಲಕ ಆರಂಭಿಸುವುದು ಮತ್ತು ಸಂದೇಶವನ್ನು ಸಾಬೀತು ಪಡಿಸುವ ಮೂಲಕ ಪೂರ್ತಿಗೊಳಿಸಬೇಕಾಗಿತ್ತು.

ಈ ಟಾಸ್ಕ್ ಅನ್ನು ಅರ್ಥಾತ್ ಈ ಗುರಿಯನ್ನು ಅವರು ಒಬ್ಬರೇ ಪೂರ್ತಿ ಮಾಡಬೇಕಾಗಿತ್ತು. ಸಂದೇಶ ನೀಡುವ ಮೂಲಕ ಈ ಕಾರ್ಯವನ್ನು ಆರಂಭಿಸುವರು ಮತ್ತು ನಂತರ ಆ ಸಂದೇಶವನ್ನು ತನ್ನ ಮಾತುಗಳು, ಜೀವನ ಚರ್ಯೆ ಮತ್ತು ತಾನು ತಂದಿರುವ ಸಂದೇಶದ ಮೂಲಕ ಅವರು ಸಾಬೀತುಪಡಿಸುವರು. ತಾನು ನೀಡುತ್ತಿರುವ ಸಂದೇಶಗಳು ತನ್ನ ಮಾತುಗಳಲ್ಲವೆಂದೂ ಬದಲಾಗಿ ಅದು ವಿಶ್ವದ ಒಡೆಯನ ವಚನಗಳು ಮತ್ತು ಅವನ ದಾಸರಿಗಿರುವ ಸಂದೇಶವಾಗಿದೆಯೆಂದೂ

ಅವರು ಸಾಬೀತುಗೊಳಿಸುವರು. ಇದಲ್ಲದೆ ಪ್ರಪಂಚದ ಒಡೆಯನ ಕುರಿತು ಜನರೆಡೆಯಲ್ಲಿ ಹಾಸುಹೊಕ್ಕಾಗಿ ಅವರ ಮನಪಟಳದಲ್ಲಿ ನೆಲೆ ಸಿದ್ದ ತಪ್ಪುಕಲ್ಪನೆಗಳನ್ನು ದೂರ ಮಾಡುವರು. ಈ ರೀತಿ ಪ್ರವಾದಿ ತನ್ನ ಮುಂದೆ ಪ್ರತಿಕೂಲ ಪರಿಸ್ಥಿತಿಯಿದ್ದರೂ ಒಬ್ಬೊಬ್ಬರಿಗೆ ತಮ್ಮನ್ನು ಪರಿಚಯಿಸುತ್ತಾ, ಪರಸ್ಪರ ಸಹಕರಿಸುತ್ತಾ ಈ ಮೂರು ಆಯಾಮದಲ್ಲಿರುವ ಕೆಲಸಗಳನ್ನು ಪ್ರವಾದಿ ನಿರ್ವಹಿಸುತ್ತಾರೆ. ಯಾಕೆಂದರೆ ಜನರೊಳಗೆ ಸಂತೃಪ್ತಿ ಮತ್ತು ವಿಶ್ವಾಸ ಮೂಡಬೇಕು. ಅವರು ತಮ್ಮ ಜೀವನಕ್ಕೆ ಮಾರ್ಗದರ್ಶನವನ್ನು ಪಡೆದುಕೊಂಡು ಅದನ್ನು ಜೀವನದಲ್ಲಿ ಅಳವಡಿಸಬೇಕು. ಸರಿಯಾದ ದಿಶೆಯಲ್ಲಿ ಅವರು ಜೀವನ ನಡೆಸಬೇಕು ಎನ್ನುವ ಕಾರಣದಿಂದ ಈ ಮೂರು ಆಯಾಮಗಳಲ್ಲಿ ಪ್ರವಾದಿ(ಸ) ಸಂದೇಶ ಪ್ರಚಾರ ಕಾರ್ಯವನ್ನು ನಿರ್ವಹಿಸಿದರು.

ದೈವಿಕ ಜ್ಞಾನವು ಪ್ರತಿಯೊಬ್ಬ ಮನುಷ್ಯರಿಗಾಗಿದೆ. ಪ್ರತಿಯೊಬ್ಬ ಮನುಷ್ಯನೂ ತನ್ನ ಸೃಷ್ಟಿಕರ್ತನನ್ನೂ ಸೃಷ್ಟಿಯ ವಾಸ್ತವಿಕತೆಗಳನ್ನೂ ತಮಗೆ ಜೀವ ನೀಡಿದ್ದು ಯಾರು ಎಂಬ ಬಗ್ಗೆಯೂ ಪರಿಚಿತನಾಗಿರುವುದು ಆವಶ್ಯಕವಾಗಿದೆ. ಈ ಜ್ಞಾನ ಗಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಜನ್ಮ ಸಿದ್ಧ ಹಕ್ಕು. ಯಾಕೆಂದರೆ ಇದು ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಅರಿಕೆ, ಆಗ್ರಹ, ಪ್ರಾರ್ಥನೆಗಳಿಂದ ಸೃಷ್ಟಿಕರ್ತನನ್ನು ಸಮೀಪಿಸಲು ಮತ್ತು ಆ ಮೂಲಕ ಸೃಷ್ಟಿಕರ್ತನ ಸಂತೃಪ್ತಿಯನ್ನು ಗಳಿಸಲು ಈ ಜ್ಞಾನವು ಸುಲಭಗೊಳಿಸುತ್ತದೆ.

ಹಿಂದಿನ ಇನ್ನೊಂದು ಪುಟದಲ್ಲಿ ವಿವರಿಸಲಾದಂತೆ ಸೃಷ್ಟಿಕರ್ತ ತನ್ನ ಸಂದೇಶ ವನ್ನು ತುಂಬ ಸ್ಪಷ್ಟ ಶೈಲಿಯಲ್ಲಿ ಜನರಿಗೆ ತಲುಪಿಸುವ ವ್ಯವಸ್ಥೆ ಮಾಡಿದ್ದಾನೆ. ಜನರ ಕಡೆಗೆ ಅತ್ಯುತ್ತಮನೂ ಸತ್ಯಸಂಧನೂ ವಿಶ್ವಸ್ಥನೂ ಆದ ವ್ಯಕ್ತಿಯನ್ನು ತನ್ನ ಸಂದೇಶ ತಲುಪಿಸಲು ನಿಯೋಜಿಸುವನು. ಆ ವ್ಯಕ್ತಿ ಈ ಸಂದೇಶವನ್ನು ಬಹಿರಂಗವಾಗಿ ಮತ್ತು ಸ್ಪಷ್ಟವಾಗಿ ಸುಲಭ ವಿಧಾನದಲ್ಲಿ ಜನರಿಗೆ ಮನವರಿಕೆ ಮಾಡಿ ಕೊಡುವರು. ಸ್ವಯಂ ಜೀವನದಲ್ಲಿ ಅಳವಡಿಸಿಕೊಂಡು ಅದರ ಬಗ್ಗೆ ಜನರಲ್ಲಿ ಯಾವುದೇ ಆತಂಕ ಮತ್ತು ಸಂದೇಹ ಇರದಂತೆ ಜ್ವಲಂತ ಮಾದರಿಯಾಗುವರು. ಅವರ ಜೀವನ ಚರ್ಯೆಯು ಪ್ರತಿಯೊಬ್ಬ ಮನುಷ್ಯರಿಗೆ ಸ್ವೀಕಾರಾರ್ಹವಾಗಿದೆ ಮತ್ತು ಅನುಸರಣಾರ್ಹವಾಗಿದೆಯೆಂದು ಜನರಿಗೆ ಮನವರಿಕೆಯಾಗುತ್ತದೆ. ಅವರ ಜೀವನವು ಜನರ ಮುಂದೆ ಉದಾಹರಣೆ ಮತ್ತು ಪುರಾವೆಯಾಗಿ ಇರುತ್ತದೆ. ಇತರರು ತಮ್ಮ ಜೀವನವನ್ನು ಆ ಆಧಾರದಲ್ಲಿ ಅವಲೋಕನ ನಡೆಸಬಹುದಾಗಿದೆ ಮತ್ತು ಅವರಂತೆ ಜೀವಿಸಿ ಸೃಷ್ಟಿಕರ್ತನ ಬಳಿ ಪುರಸ್ಕೃತಗೊಳ್ಳಬಹುದು. ಸೃಷ್ಟಿಕರ್ತನ ಪ್ರವಾದಿಯ ಜೀವನದ ಪ್ರಕಾರ ಜೀವಿಸಿದರೆ ಮಾತ್ರ ಅದು ಸೃಷ್ಟಿಕರ್ತನ ಬಳಿ ಸ್ವೀಕಾರಾರ್ಹ ವಾಗುವುದು. ಆದ್ದರಿಂದ ಈ ಉದ್ದೇಶಕ್ಕಾಗಿ ನಿಯೋಜಿಸಲಾದ ವ್ಯಕ್ತಿ ಸಂದೇಶದ ಪ್ರತಿನಿಧಿಯಾಗಿದ್ದಾನೆ.

ಇದೇ ವೇಳೆ, ಒಬ್ಬ ವ್ಯಕ್ತಿಯು ತಾನು ಪ್ರಪಂಚ ಸೃಷ್ಟಿಕರ್ತನ ಪ್ರವಾದಿಯಾಗಿರುವೆನೆಂದು ಹಕ್ಕುವಾದ ಮುಂದಿಡುವುದು ಮನುಷ್ಯರ ಮುಂದಿರುವ ಮತ್ತೊಂದು ಪರೀಕ್ಷೆಯಾಗಿದೆ. ಮೊದಲ ಪರೀಕ್ಷೆ ಸೃಷ್ಟಿಕರ್ತ ಸ್ವಯಂ ಮರೆಯಲ್ಲಿರುವುದು ಮತ್ತು ಅವನನ್ನು ಗುರುತಿಸುವುದು ಮತ್ತು ಅವನಲ್ಲಿ ವಿಶ್ವಾಸ ಇರಿಸುವುದು ಆಗಿದೆ. ಆ ಮೇಲೆ ಸೃಷ್ಟಿಕರ್ತ ತನ್ನ ಸಂದೇಶವನ್ನು ಜನರಿಗೆ ತಲುಪಿಸಲು ಮನುಷ್ಯನನ್ನೇ ಉಪಯೋಗಿಸುತ್ತಾನೆ. ಆದರೆ ಸೃಷ್ಟಿಕರ್ತನು ಸಂದೇಶವಾಹಕನಾಗಿ ಈ ವ್ಯಕ್ತಿಯನ್ನು ಪ್ರವಾದಿಯನ್ನಾಗಿ ಮಾಡಿರುವನೆಂದು ಪ್ರಕಟಿಸುವುದಿಲ್ಲ. ಘೋಷಿಸಿರುವುದಿಲ್ಲ. ಬದಲಾಗಿ ತಾನು ಸೃಷ್ಟಿಕರ್ತನ ಪ್ರವಾದಿಯೆಂದು ಸ್ವಯಂ ಆ ವ್ಯಕ್ತಿಯೇ ಪರಿಚಯಿಸುತ್ತಾನೆ. ಆ ವ್ಯಕ್ತಿಯಲ್ಲಿ ಸೃಷ್ಟಿಕರ್ತನ ಪ್ರವಾದಿಯೆಂದು, ಜನರು ತೃಪ್ತಿಪಡುವ ಮತ್ತು ವಿಶ್ವಾಸ ವಿರಿಸುವ ಈ ವಿಚಾರವನ್ನು ಮನುಷ್ಯನಿಗೆ ಬಿಟ್ಟುಕೊಡುವ ಮೂಲಕ ಮನುಷ್ಯರನ್ನೂ ಸೃಷ್ಟಿಕರ್ತನು ಪರೀಕ್ಷಿಸುವನು. (ಆದುದರಿಂದ ಈ ಬಗ್ಗೆ ವಿಶೇಷ ಗಮನಹರಿಸುವುದು ಮತ್ತು ಅನ್ವೇಷಣೆ ನಡೆಸುವುದು ಆವಶ್ಯಕವಾಗುತ್ತದೆ.)

ಸೃಷ್ಟಿಕರ್ತನನ್ನು ನೋಡದೆಯೇ ಗುರುತಿಸುವುದು, ವಿಶ್ವಾಸವಿರಿಸುವುದು ಮತ್ತು ಅವರನ್ನು ಖಚಿತ ಪಡಿಸಿಕೊಳ್ಳುವುದು ಮೊದಲನೆಯ ಈ ಪರೀಕ್ಷೆಯೇ ಜನರ ಮುಂದಿರುವ ಬಹಳ ದೊಡ್ಡ ಪರೀಕ್ಷೆಯಾಗಿದೆ. ಆನಂತರ ಜನರು ಈ ವ್ಯಕ್ತಿಯನ್ನು ಸೃಷ್ಟಿಕರ್ತನ ಕಡೆಯಿಂದ ಬಂದಿರುವ ಪ್ರವಾದಿ ಎಂದು ಗುರುತಿಸುವುದು, ಅವರಲ್ಲಿ ವಿಶ್ವಾಸ ಇರಿಸುವುದು ಮತ್ತು ಪ್ರವಾದಿಯೆಂದು ಖಚಿತಪಡಿಸಿಕೊಂಡು ಅವರ ವಿಧೇಯತೆ, ಅನುಸರಣೆ ಮಾಡಬೇಕು. ಜೊತೆಗೆ ಅವರು ತಂದಿರುವ ಸಂದೇಶವು ಅಲ್ಲಾಹನ ಸಂದೇಶವಾಗಿದೆ ಎಂದು ವಿಶ್ವಾಸವಿರಿಸಬೇಕು. ಇವೆಲ್ಲವೂ ಕಠಿಣ ಜನರ ಮುಂದಿರುವ ಬಹಳ ದೊಡ್ಡದಾದ ಹಂತವಾಗಿದೆ. ಒಂದು ವೇಳೆ ಆ ವ್ಯಕ್ತಿ ಪ್ರವಾದಿ ಅಲ್ಲದಿದ್ದರೆ. ಜನರ ಸುಳ್ಳನ್ನು ನಂಬಿದಂತಾಗುವುದು ಮತ್ತು ಮಿಥ್ಯವಾದಿಯನ್ನು ಅನುಸರಿಸಿ ಕಾರ್ಯವೆಸಗಿದಂತಾಗುತ್ತದೆ.

ಪವಿತ್ರ ಕುರ್‌ಆನ್ ತನ್ನನ್ನು ತಂದಿರುವ ವ್ಯಕ್ತಿಯು ಯಾವ ರೀತಿ ಮಾತಾಡುತ್ತಾನೆ ಎಂದು ವಿವರಿಸುತ್ತಿದೆ. ಅವನು ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ನಿರರ್ಗಳವಾಗಿ ಮಾತುಗಳಾಡುವನು. ಸ್ವಾರ್ಥ ರಹಿತವಾಗಿ ತನ್ನ ಜೀವನವನ್ನು ಜನರ ಮುಂದೆ ಪ್ರಸ್ತುತಪಡಿಸುವನು– ಜನರೇ, ನಾನು ಯಾವ ರೀತಿಯ ವ್ಯಕ್ತಿಯಾಗಿರುವೆನು ಎಂದು ನೋಡಿರಿ. ನಿಮ್ಮೊಂದಿಗೆ ಬೆರೆಯುತ್ತೇನೆ. ಹಗಲು ರಾತ್ರೆ (ಯಾವಾಗಲೂ) ನಿಮ್ಮ ಜೊತೆಯೇ ಇರುತ್ತೇನೆ. ನನ್ನ ವಯಸ್ಸಿನಲ್ಲಿ ಒಂದು ದೀರ್ಘ ಅವಧಿಯನ್ನು ನಿಮ್ಮ ಜೊತೆ ಇದ್ದು ಜೊತೆಯಾಗಿ ಜೀವಿಸಿರುವೆನು. ನೀವು ನನ್ನ ಬಗ್ಗೆ ಈ ವ್ಯಕ್ತಿ ಒಬ್ಬ

ಸತ್ಯಸಂಧ ಮತ್ತು ವಿಶ್ವಸ್ಥ ವ್ಯಕ್ತಿ ಎಂದು ಮನಸಾರೆ ಹೇಳುತ್ತಾ ಚರ್ಚಿಸುತ್ತಾ ತಿರುಗುತ್ತೀರಿ. ನಾನು ಸತ್ಯಸಂಧನೆಂದು ನೀವೇ ಹೇಳುತ್ತಿರುವಿರಿ. ಆದುದರಿಂದ ಹೇಳುವೆನು– ಅಲ್ಲಾಹನು ನಿಮ್ಮ ಮತ್ತು ನನ್ನ ಪ್ರಭು, ಒಡೆಯ, ಯುಕ್ತಿಜ್ಞ, ಪಾಲಕ ಪ್ರಭು ಆಗಿರುವನು. ನನ್ನನ್ನು ನಿಮ್ಮ ಬಳಿಗೆ ತನ್ನ ಸಂದೇಶವಾಹಕನನ್ನಾಗಿ ಮಾಡಿ ತನ್ನ ಸಂದೇಶದೊಂದಿಗೆ ಕಳುಹಿಸಿರುವನು. ನೀವೇ ನನ್ನನ್ನು ವಿಶ್ವಸ್ಥ ಎಂದು ಹೇಳುವಿರಿ. ನನ್ನ ಕಡೆಗೆ ಕಳುಹಿಸಲ್ಪಡುವ ದೇವನ ಅಮಾನತಾಗಿರುವ ಸಂದೇಶವನ್ನು ಯಥಾವತ್ತಾಗಿ ಯಾವುದೇ ಬದಲಾವಣೆಗಳಿಲ್ಲದೆ ನಿಮಗೆ ತಲುಪಿಸುತ್ತಿದ್ದೇನೆ. ನೀವು ವಿಶ್ವಾಸ ಇರಿಸಿರಿ. ಸಂಪೂರ್ಣ ಖಚಿತವಾಗಿರುವ ಸ್ವರ್ಗದ ಶುಭವಾರ್ತೆ ನೀಡುತ್ತಿರುವೆನು. ನನ್ನ ಮಾತಿನಲ್ಲಿ ವಿಶ್ವಾಸವಿರಿಸದಿದ್ದರೆ ಅಲ್ಲಾಹನ ಯಾತನೆಗೆ ತುತ್ತಾಗುವಿರಿ ಎಂದು ಎಚ್ಚರಿಸುವೆನು. ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಮತ್ತು ನಾನು ಪ್ರಸ್ತುತ ಪಡಿಸುತ್ತಿರುವುದು ಅಲ್ಲಾಹನ ಸಂದೇಶವಾಗಿದೆ.

ಜನರ ನಡುವೆ ಹಗಲು ರಾತ್ರೆ ಇರುವ ಯಾವುದೇ ವ್ಯಕ್ತಿಯ ಜೀವನ ನೋಡಿದರೆ, ಇವನು ಸತ್ಯಸಂಧ ವ್ಯಕ್ತಿಯೇ ಅಥವಾ ಸುಳ್ಳುಗಾರನೇ ಎಂದು ಅರಿವಾಗುತ್ತದೆ. ಜನರ ಮುಂದಿಡುವ ವಚನಗಳನ್ನು ಆಲಿಸಿದಾಗ ಈ ವ್ಯಕ್ತಿ ಸತ್ಯಸಂಧನೇ ಅಥವಾ ಸುಳ್ಳಾಡುವ ವ್ಯಕ್ತಿಯೇ, ಇವನು ದೈವಿಕ ವಚನಗಳನ್ನಾಡುವ ವ್ಯಕ್ತಿಯೇ ಎಂದು ಸುಲಭದಲ್ಲಿ ಗುರುತಿಸಬಹುದು. ಅವನು ಹೇಳುತ್ತಿರುವ ಮಾತುಗಳು ಸರಿಯಾಗಿದೆಯೇ? ಅಥವಾ ಅದರಲ್ಲಿ ಸ್ವಾರ್ಥವಿದೆಯೇ. ಅಥವಾ ಅವು ಹಾನಿಕರವೇ ಎಂದು ಜನರಿಗೆ ಗೊತ್ತಾಗುವುದು. ಇನ್ನು ಈ ವ್ಯಕ್ತಿಯ ಮಾತು ಮತ್ತು ಕರ್ಮದಿಂದಲೂ ಆತ ಸ್ವಾರ್ಥಿಯೇ ಅಥವಾ ನಿಸ್ವಾರ್ಥಿಯೇ ಎಂದು ಕೂಡ ತಿಳಿಯಬಹುದು. ಪವಿತ್ರ ಕುರ್‌ಆನ್‌ನ ಶಿಕ್ಷಣಕ್ಕೂ ಅವನ ನಿಜ ಜೀವನಕ್ಕೂ ಹೋಲಿಕೆಗಳಿವೆಯೇ, ಇಲ್ಲವೇ ಎಂದೂ ಸ್ಪಷ್ಟವಾಗುವುದು ಮತ್ತು ಕುರ್‌ಆನ್ ಶಿಕ್ಷಣದ ಒಳಿತುಗಳನ್ನು ಮೊದಲು ಅವನೇ ಸ್ವಯಂ ಅಳವಡಿಸಿಕೊಳ್ಳುವನು. ಅವನೇ ಅದರಂತೆ ಮೊದಲು ಕರ್ಮವೆಸಗಬೇಕು. ಅವನು ಹಾಗೆ ಮಾಡುವನೇ ಇಲ್ಲವೇ ಎಂದು ತಿಳಿಯುತ್ತದೆ. ಆದುದರಿಂದ ಅದನ್ನು ಸ್ವೀಕರಿಸಿ ಕರ್ಮವೆಸಗಿದರೆ ಏನು ಪರಿಣಾಮವಾಗಬಹುದು ಎಂದೂ ಜನರಿಗೆ ಅರಿವಾಗುತ್ತದೆ.

ಪ್ರವಾದಿ ಮುಹಮ್ಮದ್‌ರು(ಸ) ತನ್ನ ಪ್ರವಾದಿ ಎಂದು ತನ್ನ ಗ್ರಂಥದಲ್ಲಿ ವಿಶ್ವ ಸಾಮ್ರಾಟನು ಸಾಕ್ಷ್ಯ ವಹಿಸುವನು ಮತ್ತು ಘೋಷಿಸುವನು:

ಸೃಷ್ಟಿಕರ್ತನು ಇವರು ತನ್ನ ಸಂದೇಶವಾಹಕ ಎಂದು ಪವಿತ್ರ ಕುರ್‌ಆನಿನಲ್ಲಿ ಸಾಕ್ಷ್ಯ ವಹಿಸಿದ್ದಾನೆ. ಜನರಿಗೆ ತನ್ನ ಕೊಡುಗೆಯಾಗಿರುವ ಸಂದೇಶವನ್ನು ಅವರು

ಸ್ವೀಕರಿಸಲಿ ಮತ್ತು ಅನುಸರಿಸಲಿ ಎಂಬುದಕ್ಕಾಗಿ ಸ್ವಯಂ ಸೃಷ್ಟಿಕರ್ತನೇ ಪ್ರವಾದಿಯ ಬಗ್ಗೆ ಸಾಕ್ಷ್ಯ ವಹಿಸಿದ್ದಾನೆ ಮತ್ತು ಅವರನ್ನು ತನ್ನ ಪ್ರವಾದಿ ಎಂದು ಘೋಷಿಸಿದ್ದಾನೆ. ಆದರೆ ಜನರು ಅವರನ್ನು ನಿರ್ಲಕ್ಷಿಸಿದರೆ, ಆ ವ್ಯಕ್ತಿ (ಪ್ರವಾದಿ) ನೀಡಿದ ಕರೆಯನ್ನು ನಿರಾಕರಿಸಿದರೆ ಅರ್ಥಾತ್ ಸೃಷ್ಟಿಕರ್ತನ ಸಾಕ್ಷ್ಯವನ್ನು ನಿರಾಕರಿಸುವುದರಿಂದ ನೀವು ಯಾವ್ಯಾವ ಪರಿಣಾಮಗಳನ್ನು ಆಹ್ವಾನಿಸುವಿರಿ ಎಂಬ ಮುನ್ನೆಚ್ಚರಿಕೆಯನ್ನು ಪವಿತ್ರ ಕುರ್‌ಆನ್ ನೀಡುತ್ತದೆ. ಈ ಸಂದೇಶವನ್ನು ಸ್ವೀಕರಿಸಬೇಕೆಂಬ ಬಲವಂತವಿಲ್ಲ. ಆದರೆ ಈ ವ್ಯಕ್ತಿ ತನ್ನ ಸಂದೇಶವಾಹಕರು ಎಂದು ಸೃಷ್ಟಿಕರ್ತನು ತಿಳಿಸುವನು. ಈ ವ್ಯಕ್ತಿಯನ್ನು ಅನುಸರಿಸಿದವನು ನನ್ನನ್ನು ಅನುಸರಿಸಿದಂತೆ ಎಂದು ತಿಳಿಸಿರುವನು. ಸಂದೇಶವಾಹಕರ(ಸ) ಕುರಿತು ತನ್ನ ಗ್ರಂಥದಲ್ಲಿ ಹೀಗೆ ಹೇಳಿದ್ದಾನೆ.

"ಸಂದೇಶವಾಹಕರನ್ನು ಅನುಸರಿಸಿದವನು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸಿದನು. ಯಾವನಾದರೂ ವಿಮುಖನಾಗಿ ಬಿಟ್ಟರೆ, ನಾವು ನಿಮ್ಮನ್ನು ಅವರ ಮೇಲೆ ರಕ್ಷಕರನ್ನಾಗಿ ಮಾಡಿಯಂತು ಕಳುಹಿಸಿರುವುದಿಲ್ಲ." (ಅನ್ನಿಸಾಅ್: 80)

ಪ್ರವಾದಿವರ್ಯರನ್ನು(ಸ) ಅಲ್ಲಾಹನು ಲೋಕಾನುಗ್ರಹಿ ಆಗಿ ನಿಯೋಜಿಸಿದ್ದಾನೆ:

ಅಲ್ಲಾಹನ ಕಾರ್ಯವು ಸಂಪೂರ್ಣ ಅನುಗ್ರಹದಿಂದ ತುಂಬಿದುದಾಗಿದೆ ಮತ್ತು ಸಮಯ ಮತ್ತು ಸ್ಥಳದ ಸಂಕೋಲೆಯಿಂದ ಮುಕ್ತವಾದುದು ಆಗಿದೆ. ಆದರೂ ಸಕಲ ಮಾನವರಿಗೆ ಅನುಗ್ರಹವಾಗಿ ಮುಹಮ್ಮದ್‌ರನ್ನು(ಸ) ಪ್ರವಾದಿಯನ್ನಾಗಿ ಮಾಡಿ ಅಲ್ಲಾಹನು ಕಳುಹಿಸಿದನು. ಅವರು ಎಲ್ಲ ಕಾಲದಲ್ಲಿ ಮತ್ತು ಎಲ್ಲ ಸ್ಥಳಗಳ ಮನುಷ್ಯರಿಗೆ ಅನುಗ್ರಹವಾಗಿದ್ದಾರೆ.

ಅವರ ಆಗಮನವು ಬರುವುದರೊಂದಿಗೆ ಮನುಷ್ಯರನ್ನು ಮೃಗೀಯತೆ ಮತ್ತು ಪೈಶಾಚಿಕತೆಯಿಂದ ಬಿಡಿಸಿ ಪುನಃ ಮನುಷ್ಯತ್ವದ ಉನ್ನತ ಸ್ಥಾನಕ್ಕೆ ತಂದಿತು. ಅವರು ಕ್ರೌರ್ಯ ಮತ್ತು ಬರ್ಬರತೆಯಿಂದ ಜನರನ್ನು ಮುಕ್ತಗೊಳಿಸಿ ಮತ್ತು ಅನ್ಯಾಯವಾಗಿ ಹಕ್ಕು ಕಬಳಿಕೆ, ಭೂಮಿಯ ಮೇಲಿದ್ದ ಅಶ್ಲೀಲತೆ ಮತ್ತು ಭ್ರಷ್ಟಾಚಾರವನ್ನು ನಿವಾರಿಸಿದರು. ಪ್ರೀತಿ, ಕರುಣೆ, ಗೌರವ, ಮತ್ತು ಲಜ್ಜೆಯ ವಾತಾವರಣವು ನಿರ್ಮಾಣವಾಯಿತು. ಅವರು ನ್ಯಾಯ ವ್ಯವಸ್ಥೆಯನ್ನು ಸಂಸ್ಥಾಪಿಸಿದರು. ಶಾಂತಿ ನೆಮ್ಮದಿಯ ಜೀವನ ಸ್ಥಾಪಿಸಲ್ಪಟ್ಟಿತು. ಅವರು ನೀಡಿದ ಈ ಶಿಕ್ಷಣ ಇಂದೂ ಉಪಸ್ಥಿತವಿದೆ. ಮನುಷ್ಯನಿಗೆ ಮನುಷ್ಯತ್ವವನ್ನು, ಪರಿಶುದ್ಧವೂ ಸ್ವಚ್ಛವೂ ಮತ್ತು ಶಾಂತಿಯ ಜೀವನ ಕೊಡಮಾಡುವುದು. ಆದುದರಿಂದ ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ಈ ಪ್ರವಾದಿಯ ಆಗಮನದ ಶುಭವಾರ್ತೆ ನೀಡಿರುವನು. "ಪೈಂಗಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಮಾಡಿ ಕಳುಹಿಸಿರುತ್ತೇವೆ" (ಅಲ್ ಅಂಬಿಯ: 107)

ಅಲ್ಲಾಹನು ನಿಮ್ಮನ್ನು ನೈಜ ಪ್ರವಾದಿಯಾಗಿಸಿ ಕಳುಹಿಸಲಾಗಿದೆ ಎಂದು ಮುಹಮ್ಮದ್‌ರಿಗೆ(ಸ) ಭರವಸೆ ನೀಡುವನು:

ಮುಹಮ್ಮದ್‌ರು(ಸ) ನೈಜ ಪ್ರವಾದಿ ಆಗಿದ್ದಾರೆ ಎಂಬುದನ್ನು ಅತ್ಯುತ್ತಮ ಮತ್ತು ಯುಕ್ತಿಯುತ ರೀತಿಯಲ್ಲಿ ಅಭಿಸಂಬೋಧಿತರ ಮುಂದೆ ಸಾಕ್ಷ್ಯ ಪ್ರಮಾಣಗಳ ಸಹಿತ ವಿವರಿಸಲಾಗಿದೆ. (ಅವರ ಬಳಿಯಿರುವ ದೈವಿಕ ಗ್ರಂಥವಾದ ತೌರಾತ್, ಇಂಜೀಲ್ ಗ್ರಂಥದ ಮೂಲಕವೂ ಮುಹಮ್ಮದ್‌ರು ನೈಜ ಪ್ರವಾದಿ ಎಂದು ತಿಳಿದು ಬರುವುದು) ಮತ್ತು ಪ್ರವಾದಿ ಮುಹಮ್ಮದ್‌ರಲ್ಲಿ(ಸ) ವಿಶ್ವಾಸವಿರಿಸಲು ನಿರಾಕರಿಸುವವರು ನಷ್ಟದಲ್ಲಿರುವವರು ಎಂದೂ ತಿಳಿಸಲಾಗಿದೆ.

"ನಾವು ನಿಮಗೆ ಅವತೀರ್ಣಗೊಳಿಸಿದ ಸನ್ಮಾರ್ಗದರ್ಶನದ ಬಗೆಗೆ ನಿಮಗೆ ಕಿಂಚಿತ್ತಾದರೂ ಸಂಶಯವಿದ್ದರೆ, ನಿಮಗಿಂತ ಮುಂಚೆಯೇ ಗ್ರಂಥವನ್ನೋದುತ್ತಿರುವವರನ್ನು ವಿಚಾರಿಸಿರಿ. ವಾಸ್ತವದಲ್ಲಿ ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಸತ್ಯವೇ ಬಂದಿರುತ್ತದೆ. ಆದುದರಿಂದ ಸಂಶಯಗ್ರಸ್ತರಲ್ಲಾಗಬೇಡಿರಿ ಮತ್ತು ಅಲ್ಲಾಹನ ವಚನಗಳನ್ನು ಸುಳ್ಳಾಗಿಸುವವರಲ್ಲಾಗಬೇಡಿರಿ. ಅನ್ಯಥಾ ನೀವು ನಷ್ಟ ಹೊಂದುವವರಲ್ಲಾಗುವಿರಿ." **(ಯೂನುಸ್: 94–95)**

ಮುಹಮ್ಮದ್‌ರು(ಸ) ಓರ್ವ ನೈಜ ಸಂದೇಶವಾಹಕರು; ಅವರು ಪ್ರಸ್ತುತಪಡಿಸುವುದು ಕೂಡ ಸತ್ಯವಾಗಿದೆ:

ಸಂದೇಶವಾಹಕರು ತಮ್ಮ ಕಡೆಯಿಂದ ಸಂದೇಶ ನೀಡುವುದಿಲ್ಲ. ಅವರ ಬಳಿಗೆ ವಹ್ಯ್ (ದೈವಿಕ ಸಂದೇಶ) ಅವತೀರ್ಣವಾಗುತ್ತದೆ. ಅಲ್ಲಾಹನು ಸಂದೇಶವಾಹಕರಿಗೆ ಯಾರ ಮೂಲಕ ವಹ್ಯ್ ಅನ್ನು ತಲುಪಿಸುವನು ಮತ್ತು ಅವರು ಯಾವುದೇ ಮಿಶ್ರಣವಿಲ್ಲದೆ ಅದನ್ನು ಸ್ವೀಕರಿಸುವರು ಎಂದು ತನ್ನ ಗ್ರಂಥದಲ್ಲಿ ಅಲ್ಲಾಹನು ವಿವರಿಸಿದ್ದಾನೆ.

"ನಿಮ್ಮ ಸಂಗಾತಿ ದಾರಿಗೆಡಲೂ ಇಲ್ಲ. ವಂಚಿಸಲ್ಪಡಲೂ ಇಲ್ಲ. ಅವರು ತಮ್ಮ ಸ್ವಚಿತ್ತದಿಂದ ನುಡಿಯುವುದಿಲ್ಲ. ಇದು ಅವರಿಗೆ ಅವತೀರ್ಣಗೊಳ್ಳುವಂತಹ ಒಂದು ದಿವ್ಯವಾಣಿ ಆಗಿದೆ. ಅವರಿಗೆ ಮಹಾ ಶಕ್ತಿಶಾಲಿಯಾದವನು ಕಲಿಸಿರುತ್ತಾನೆ. ಅವನು ಬಹಳ ಯುಕ್ತಿವಂತ. ಅವನು ಪ್ರತ್ಯಕ್ಷನಾದನು. ಅವನು ಉನ್ನತ ದಿಗಂತದಲ್ಲಿದ್ದಾಗ ತರುವಾಯ ಅವನು ಹತ್ತಿರ ಬಂದನು ಮತ್ತು ಮೇಲೆ ತೇಲತೊಡಗಿದನು. ಎರಡು ಬಿಲ್ಲುಗಳಷ್ಟು ಅಥವಾ ಅದಕ್ಕಿಂತ ತುಸು ಕಡಿಮೆ ಅಂತರ ಇರುವ ತನಕ. ಅಗ ಅವನು ಅಲ್ಲಾಹನ ದಾಸನಿಗೆ ತಾನು ತಲುಪಿಸಬೇಕಾಗಿದ್ದ ದಿವ್ಯವಾಣಿಯನ್ನು ತಲುಪಿಸಿದನು. ಕಣ್ಣು ಯಾವುದನ್ನು ಕಂಡಿತೋ, ಮನಸ್ಸು ಅದಕ್ಕೆ ಸುಳ್ಳನ್ನು

ಸೇರಸಲಿಲ್ಲ. ನೀವೀಗ ಅವರು ಕಣ್ಣಾರೆ ಕಾಣುತ್ತಿರುವಂತಹ ವಿಷಯದ ಬಗ್ಗೆ ಅವರೊಡನೆ ಜಗಳಾಡುತ್ತೀರಾ? ಇನ್ನೊಮ್ಮೆ ಅವರು, ಆತನು ಇಳಿಯುತ್ತಿರುವುದನ್ನು ಕಂಡರು. ಸಿದ್ರತುಲ್ ಮುಂತಹಾದ ಬಳಿ. ಜನ್ನತುಲ್ ಮಅ್ವಾ (ಸ್ವರ್ಗದ ನೆಲೆ) ಅದರ ಹತ್ತಿರದಲ್ಲೇ ಇದೆ. ಆಗ 'ಸಿದ್'ರವನ್ನು ಕವಿದುಕೊಂಡಿದ್ದು ಕವಿದುಕೊಂಡಿತ್ತು. ದೃಷ್ಟಿ ಕೋರೈಸಲೂ ಇಲ್ಲ. ಅತಿಕ್ರಮಿಸಲೂ ಇಲ್ಲ. ಮತ್ತು ಅವರು ತಮ್ಮ ಪ್ರಭುವಿನ ದೊಡ್ಡ ದೊಡ್ಡ ನಿದರ್ಶನಗಳನ್ನು ಕಂಡರು. ಈಗ ಹೇಳಿರಿ ನೀವು ಲಾತ್, ಉಝ್ಝಾ ಮತ್ತು ಮೂರನೆಯ ದೇವಿ ಮನಾತ್‌ನ ವಾಸ್ತವಿಕತೆಯ ಕುರಿತು ಸ್ವಲ್ಪವಾದರೂ ವಿವೇಚಿಸಿದ್ದೀರಾ? ಏನು! ನಿಮಗೆ ಪುತ್ರರು ಮತ್ತು ಅಲ್ಲಾಹನಿಗೆ ಪುತ್ರಿಯರೇ? ಇದಂತೂ ದೊಡ್ಡ ದಾಂಧಲೆಯ ವಿತರಣೆಯೇ ಸರಿ. ನಿಜವಾಗಿ ಇವೆಲ್ಲ ನೀವು ಮತ್ತು ನಿಮ್ಮ ಪೂರ್ವಜರು ಇಟ್ಟುಕೊಂಡಿರುವ ಕೆಲವು ಹೆಸರುಗಳೇ ಹೊರತು ಇನ್ನೇನೂ ಅಲ್ಲ. ಅಲ್ಲಾಹನು ಇವುಗಳ ಪರವಾಗಿ ಯಾವ ಆಧಾರವನ್ನೂ ಇಳಿಸಿಲ್ಲ. ವಾಸ್ತವದಲ್ಲಿ ಜನರು ಕೇವಲ ಊಹೆಯನ್ನು ಅನುಸರಿಸುತ್ತಾರೆ ಮತ್ತು ಸ್ವೇಚ್ಛೆಗಳ ದಾಸರಾಗಿ ಬಿಟ್ಟಿದ್ದಾರೆ. ವಸ್ತುತಃ ಅವರ ಪ್ರಭುವಿನ ಕಡೆಯಿಂದ ಅವರ ಬಳಿಗೆ ಮಾರ್ಗದರ್ಶನ ಬಂದಿದೆ. ಮನುಷ್ಯನ ಪಾಲಿಗೆ ತಾನಿಚ್ಛಿಸಿದುದೇ ಸತ್ಯವೇ? ಈ ಲೋಕ ಹಾಗೂ ಪರಲೋಕದ ಒಡೆಯನಂತು ಅಲ್ಲಾಹನೇ ಆಗಿರುತ್ತಾನೆ. ಆಕಾಶಗಳಲ್ಲಿ ಎಷ್ಟೋ ದೇವಚರರಿದ್ದಾರೆ. ಅವರ ಶಿಫಾರಸು ಸ್ವಲ್ಪವೂ ಉಪಯುಕ್ತವಾಗಲಾರದು. ಅಲ್ಲಾಹನೇ ಯಾವುದಾದರೂ ವ್ಯಕ್ತಿಯ ಪರವಾಗಿ ಮನವಿ ಕೇಳಲು ಬಯಸಿ, ಅವನ ವಿಷಯದಲ್ಲಿ ಅದನ್ನು ಅನುಮತಿಸುವ ಮತ್ತು ಅದನ್ನು ಮೆಚ್ಚಿಕೊಳ್ಳುವ ವರೆಗೆ. ಆದರೆ ಪರಲೋಕವನ್ನು ನಂಬದವರು ದೇವಚರರಿಗೆ ದೇವಿಯರ ಹೆಸರುಗಳನ್ನಿಡುತ್ತಾರೆ. ವಸ್ತುತಃ ಈ ಕುರಿತಾದ ಯಾವ ಜ್ಞಾನವೂ ಅವರಿಗೆ ಪ್ರಾಪ್ತವಿಲ್ಲ. ಅವರು ಕೇವಲ ಊಹೆಯನ್ನು ಅನುಸರಿಸುತ್ತಾರೆ. ಊಹೆಯು ಸತ್ಯದ ಸ್ಥಾನದಲ್ಲಿ ಯಾವ ಕೆಲಸಕ್ಕೂ ಬಾರದು. ಆದುದರಿಂದ ಸಂದೇಶವಾಹಕರೇ, ನಮ್ಮ ಸ್ಮರಣೆಯಿಂದ ವಿಮುಖನಾಗು ವವನನ್ನು ಹಾಗೂ ಲೌಕಿಕ ಜೀವನದ ಹೊರತು ಇನ್ನೇನನ್ನೂ ಬಯಸದವನನ್ನು ಅವನ ಪಾಡಿಗೆ ಬಿಟ್ಟುಬಿಡಿರಿ. ಇವರ ಜ್ಞಾನ ಬಂಡವಾಳವಿಷ್ಟೇ. ಅವನ ಮಾರ್ಗದಿಂದ ಯಾರು ತಪ್ಪಿದ್ದಾನೆ ಮತ್ತು ಯಾರು ಸನ್ಮಾರ್ಗದಲ್ಲಿದ್ದಾನೆ ಎಂಬುದನ್ನು ನಿಮ್ಮ ಪ್ರಭುವೇ ಚೆನ್ನಾಗಿ ಬಲ್ಲನು. ಅಲ್ಲಾಹನೇ ಭೂಮಿ–ಆಕಾಶಗಳ ಸಕಲ ವಸ್ತುಗಳ ಒಡೆಯನು (ಇದು) ದುಷ್ಕರ್ಮಿಗಳಿಗೆ ಅಲ್ಲಾಹನು ಅವರ ಕರ್ಮಗಳ ಪ್ರತಿಫಲ ನೀಡುವಂತಾಗಲಿಕ್ಕಾಗಿ. ಮತ್ತು ಉತ್ತಮ ಧೋರಣೆ ಅನುಸರಿಸಿದವರಿಗೆ ಉತ್ತಮ ಪ್ರತಿಫಲ ದಯಪಾಲಿಸುವಂತಾಗಲಿಕ್ಕಾಗಿ." (ಅನ್ನಜ್ಮ್, 2–31)

"ಓ ಗ್ರಂಥದವರೇ, ನಮ್ಮ ಬಳಿಗೆ ಸುವಾರ್ತೆ ಕೊಡವವನು ಮತ್ತು ಎಚ್ಚರಿಕೆ

ನೀಡುವವನು ಯಾರೂ ಬರಲಿಲ್ಲ" ಎಂದು ನೀವು ಹೇಳದಂತಾಗಲು ಸಂದೇಶವಾಹಕರ ಆಗಮನದ ವ್ಯವಸ್ಥೆಯು ದೀರ್ಘ ಕಾಲದಿಂದ ಸ್ಥಗಿತಗೊಂಡಿದ್ದ ಕಾಲದಲ್ಲಿ ನಮ್ಮ ಈ ಸಂದೇಶವಾಹಕರು ನಿಮ್ಮ ಬಳಿಗೆ ಬಂದಿರುತ್ತಾರೆ ಮತ್ತು ಧರ್ಮದ ಸುಸ್ಪಷ್ಟ ಶಿಕ್ಷಣವನ್ನು ನಿಮಗೆ ನೀಡುತ್ತಿದ್ದಾರೆ. ಆದುದರಿಂದ ಈತ ಆ ಸುವಾರ್ತೆ ಕೊಡುವವನೂ ಎಚ್ಚರಿಕೆ ನೀಡುವವನೂ ಬಂದು ಬಿಟ್ಟನು ಮತ್ತು ಅಲ್ಲಾಹನು ಸಕಲ ಕಾರ್ಯಗಳಿಗೆ ಶಕ್ತನಾಗಿರುತ್ತಾನೆ." **(ಅಲ್ ಮಾಯಿದ: 19)**

ಮಕ್ಕದಲ್ಲಿ ಜನರಿಗೆ ಸುದೀರ್ಘ ಕಾಲದಿಂದಲೂ ತೌಹೀದ್ (ಏಕದೇವತ್ವ), ಆಖಿರತ್ (ಪರಲೋಕ), ರಿಸಾಲತ್ (ಪ್ರವಾದಿತ್ವದ) ಕುರಿತು ಅರಿವಿರಲಿಲ್ಲ. ಸ್ವಯಂ ಪ್ರವಾದಿ ಮುಹಮ್ಮದ್‌ರಿಗೆ(ಸ) ಅವರ ಪ್ರವಾದಿತ್ವವೇ ಒಂದು ಅಚ್ಚರಿಯ ಮತ್ತು ಅನಿರೀಕ್ಷಿತ ವಿಷಯವಾಗಿತ್ತು. ರಿಸಾಲತ್(ಪ್ರವಾದಿತ್ವದ)ನ ಆರಂಭದ ಸಮಯದಲ್ಲಿ (ದಿವ್ಯಸಂದೇಶ ಅವತೀರ್ಣಗೊಂಡ ಆರಂಭದಲ್ಲಿ) ಅವರಲ್ಲಾದ ಆಶ್ಚರ್ಯ ಮತ್ತು ಜೀವ ಭಯದ ಅವಸ್ಥೆಯು ಇದಕ್ಕೆ ಸಾಕ್ಷ್ಯ ವಹಿಸುತ್ತದೆ.

ಆದುದರಿಂದ ಜನರನ್ನು ಅವರು ತನ್ನನ್ನು ಪ್ರವಾದಿಯೆಂದು ಹೇಳಿಕೊಂಡು ಮೋಸ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ, ಯಹೂದಿಯರ ಗೋತ್ರದಲ್ಲಿ ಹುಟ್ಟಿರುತ್ತಿದ್ದರೆ ಎಲ್ಲವೂ ಸುಲಭ ಆಗಬಹುದಾಗಿತ್ತು. ಯಾಕೆಂದರೆ ಅವರಿಗೆ ರಿಸಾಲತ್‌ನ (ಪ್ರವಾದಿತ್ವದ) ಕುರಿತ ವಾಸ್ತವಿಕತೆಯ ಅರಿವಿತ್ತು.

"ಅವರ ಮನಸ್ಸಿನಲ್ಲಿರುವುದೆಲ್ಲ ಅಲ್ಲಾಹನಿಗೆ ತಿಳಿದಿದೆ. ಅವರೊಡನೆ ಪ್ರತಿರೋಧಿಸಬೇಡಿರಿ. ಅವರಿಗೆ ತಿಳಿಯ ಹೇಳಿರಿ ಮತ್ತು ಅವರ ಮನಸ್ಸಿಗೆ ನಾಟುವಂತಹ ಉಪದೇಶ ಕೊಡಿರಿ. ನಾವು ಪ್ರತಿಯೊಬ್ಬ ಸಂದೇಶವಾಹಕನನ್ನೂ ಅಲ್ಲಾಹನ ಆಜ್ಞೆಯ ಪ್ರಕಾರ ಅನುಸರಿಸಲ್ಪಡಲಿಕ್ಕಾಗಿಯೇ ಕಳುಹಿಸಿರುತ್ತೇವೆ. (ಎಂದು ಅವರಿಗೆ ತಿಳಿಯ ಹೇಳಿರಿ)" **(ಅನ್ನಿಸಾ: 63-64)**

ಪ್ರವಾದಿಗೆ ಸಂದೇಶ ಕಳುಹಿಸುವ ದೈವಿಕ ವಿಧಾನ

ಅಲ್ಲಾಹನು ತನ್ನ ದಾಸರೊಡನೆ ನೇರವಾಗಿ ಮಾತಾಡುವುದಿಲ್ಲ. ಬದಲಾಗಿ ಸಂದೇಶ ರವಾನಿಸುವ ವಿಧಾನವನ್ನು ಆಯ್ಕೆ ಮಾಡಿಕೊಂಡಿರುವನು. ಇದರಲ್ಲಿ ಯುಕ್ತಿಯು ಅಡಕವಾಗಿದ್ದು ಸಂದೇಶ ಕಳುಹಿಸುವ ಬೇರೆ ಬೇರೆ ರೀತಿಯ ಮೂರು ವಿಧಾನಗಳನ್ನು ಅಲ್ಲಾಹನು ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ವಿವರಿಸಿರುವನು.

"ಯಾವ ದಾಸನೂ ಅಲ್ಲಾಹನು ಅವನ ಜೊತೆ ಮುಖಾಮುಖಿ ಮಾತನಾಡುವಷ್ಟು ಸ್ಥಾನಮಾನವುಳ್ಳವನಲ್ಲ. ಅವನ ಮಾತು 'ವಹ್ಯ್'ನ (ಸೂಚನೆ) ರೂಪದಲ್ಲಿರುತ್ತದೆ

ಅಥವಾ ತೆರೆಯ ಮರೆಯಿಂದಾಗಿರುತ್ತದೆ ಅಥವಾ ಅವನು ಯಾರಾದರೂ ದೂತ (ದೇವಚರ)ನನ್ನು ಕಳುಹಿಸುತ್ತಾನೆ ಮತ್ತು ಆ ದೂತನು ಅವನ ಆದೇಶದಂತೆ ಅವನು ಬಯಸಿದ್ದನ್ನು ವಹ್ಯ್ ಮಾಡುತ್ತಾನೆ. ಅವನು ಮಹೋನ್ನತನೂ ಮಹಾ ಯುಕ್ತಿವಂತನೂ ಆಗಿರುತ್ತಾನೆ." (ಅಶ್ಶೂರ: 51)

"ಅಲ್ಲಾಹನು (ತನ್ನ ಆದೇಶಗಳನ್ನು ರವಾನಿಸಲಿಕ್ಕಾಗಿ) ದೇವಚರರಿಂದಲೂ ಮನುಷ್ಯರಿಂದಲೂ ಸಂದೇಶವಾಹಕರನ್ನು ಆಯ್ದುಕೊಳ್ಳುತ್ತಾನೆ. ಅವನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ" (ಸೂರಃ ಅಲ್‌ಹಜ್ಜ್: 75)

ಅಲ್ಲಾಹನ ದೇವಚರರು ಅಲ್ಲಾಹನು ಆಯ್ದುಕೊಂಡ ವ್ಯಕ್ತಿಯೆಡೆಗೆ ಅಲ್ಲಾಹನ ಸಂದೇಶವನ್ನು ತಲುಪಿಸುತ್ತಾರೆ. ಅಲ್ಲಾಹನು ಆ ವ್ಯಕ್ತಿಯನ್ನು ಪ್ರವಾದಿಯನ್ನಾಗಿ ಮಾಡಿ ಮನುಷ್ಯರ ನಡುವೆ ನಿಯೋಜಿಸಿರುವನು. ಹೀಗೆ ಆಯ್ದುಕೊಂಡ ವ್ಯಕ್ತಿಯು ಅಲ್ಲಾಹನ ದಾಸರಿಗೆ ಅಲ್ಲಾಹನ ಸಂದೇಶವನ್ನು ತನ್ನ ಜೀವನ ಚರ್ಯೆಯ ಮೂಲಕ ಮನವರಿಕೆ ಮಾಡಿಕೊಡುವನು...

ಮಹಾ ಪ್ರಬಲನೂ ಮಹಾಯುಕ್ತಿವಂತನೂ ಆಗಿರುವ ಅಲ್ಲಾಹನು ನಿಮ್ಮ ಕಡೆಗೂ ನಿಮಗಿಂತ ಮುಂಚೆ ಗತಿಸಿ ಹೋದವರ (ಸಂದೇಶವಾಹಕರ) ಕಡೆಗೂ ಇದೇ ರೀತಿಯಲ್ಲಿ 'ದಿವ್ಯವಾಣಿ' ಕಳುಹಿಸುತ್ತಲಿದ್ದಾನೆ. (ಅಶ್ಶೂರ: 3)

"ಸಂದೇಶವಾಹಕರೇ, ಇದೇ ರೀತಿಯಲ್ಲಿ ಈ ಅರಬಿ ಕುರ್‌ಆನನ್ನು ನಾವು ನಿಮ್ಮ ಕಡೆಗೆ ದಿವ್ಯವಾಣಿ ಮಾಡಿರುತ್ತೇವೆ (ಇದು) ನಾಡುಗಳ ಕೇಂದ್ರ (ಮಕ್ಕಾ ಪಟ್ಟಣ) ಹಾಗೂ ಅದರ ಸುತ್ತಮುತ್ತ ಇರುವವರನ್ನು ನೀವು ಎಚ್ಚರಿಸುವಂತಾಗಲು ಮತ್ತು ನಿಸ್ಸಂದೇಹವಾಗಿ ಬರಲಿರುವ ಸಮಾವೇಶದ ದಿನದ ಬಗ್ಗೆ ಎಚ್ಚರಿಕೆ ನೀಡುವಂತಾಗಲು ಒಂದು ಕೂಟವು ಸ್ವರ್ಗಕ್ಕೆ ಇನ್ನೊಂದು ಕೂಟವು ನರಕಕ್ಕೆ ಹೋಗಲಿಕ್ಕಿದೆ. (ಅಶ್ಶೂರ: 7)

ಮೇಲಿನ ವಚನಗಳಿಂದ ಪ್ರವಾದಿ ಮುಹಮ್ಮದ್‌ರಿಗೂ(ಸ) ಇತರ ಪ್ರವಾದಿಗಳಿಗೆ ಉಪಯೋಗಿಸಿದ ಅದೇ ವಿಧಾನವನ್ನು ವಹ್ಯ್ ಅವತೀರ್ಣಗೊಳಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿದು ಬರುತ್ತದೆ. ಅಂದರೆ ಇದುವೇ ವಹ್ಯ್ (ದಿವ್ಯ ಸಂದೇಶ) ಕಳುಹಿಸುವ ವಿಧಾನವಾಗಿದ್ದರೂ ಎಲ್ಲರೂ ಅದರಲ್ಲಿ ವಿಶ್ವಾಸ ಇರಿಸಿರಲಿಲ್ಲ ಎಂಬುದು ಕೂಡ ಮೇಲಿನ ವಚನಗಳಿಂದ ತಿಳಿದು ಬರುತ್ತದೆ. ಕೆಲವರು ವಿಶ್ವಾಸ ವಿರಿಸುತ್ತಾರೆ. ಹೀಗೆ ವಿಶ್ವಾಸ ಇರಿಸಿದವರು ಸ್ವರ್ಗವನ್ನು ಪ್ರವೇಶಿಸುವರು ಮತ್ತು ಕೆಲವರು ವಿಶ್ವಾಸವಿರಿಸಲು ನಿರಾಕರಿಸುತ್ತಾರೆ. ಅವರು ನರಕಕ್ಕೆ ಹೋಗುವರು ಎಂದು ಕೂಡಾ ತಿಳಿದು ಬರುತ್ತದೆ ಮತ್ತು ಯಾರು ವಿಶ್ವಾಸವಿರಿಸುವುದಿಲ್ಲವೋ ಅವರು ತಮ್ಮ ಭವಿಷ್ಯದ ಕುರಿತು ಚಿಂತಿಸಲಿ ಎಂದೂ ಪವಿತ್ರ ವಚನ ಎಚ್ಚರಿಸುತ್ತದೆ.

ಮೂಜಿಝಃದ (ಪವಾಡದ) ಸಾರ

ಜನರು ಪವಾಡದ ಬೇಡಿಕೆಯಿರಿಸುತ್ತಾರೆ. ಆದರೆ ಪವಾಡಕ್ಕಿಂತ ಹೆಚ್ಚು ಪ್ರಮುಖ, ಮೌಲ್ಯಯುತ ಮತ್ತು ವಿಶ್ವಾಸಪರವಾದ ವಿಷಯಗಳನ್ನು ಪವಿತ್ರ ಕುರ್‌ಆನ್ ಮತ್ತು ಅದರ ಶಿಕ್ಷಣಗಳು ಅವರ ಪ್ರಸ್ತುತಪಡಿಸುತ್ತಿದೆ. ಗಮನವಿಟ್ಟು ವಿವೇಚಿಸಿದಾಗ ಆ ಶಿಕ್ಷಣಗಳಂತೆ ಕರ್ಮವೆಸಗುವುದರಿಂದ ಮನುಷ್ಯನ ಜೀವನದಲ್ಲಿ ಅದು ಅನುಗ್ರಹ ಮತ್ತು ಪ್ರಕಾಶವಾಗಿ ಪ್ರಕಟಗೊಳ್ಳುತ್ತಿರುವುದು ವ್ಯಕ್ತವಾಗುತ್ತದೆ. ಅದಲ್ಲದೆ ಯಾವತ್ತೂ ಕಣ್ಣಿನಿಂದ ನೋಡಲು ಸಾಧ್ಯವಿರುವುದರಿಂದ ಮತ್ತು ದೃಷ್ಟಿಗೆ ಗೋಚರವಾಗುವುದರಿಂದ ಮನುಷ್ಯನಿಗೆ ಸಹಜವಾಗಿ ತೃಪ್ತಿಯಿರುತ್ತದೆ. ಅದರಂತೆ ಪವಿತ್ರ ಕುರ್‌ಆನ್ ಶಿಕ್ಷಣವೇ ಸ್ವಯಂ ಒಂದು ಪವಾಡವಾಗಿದ್ದು ಅದರ ನೈಜ ವಿಷಯಗಳಾಧರಿತ ಶಿಕ್ಷಣದಲ್ಲಿ ನಮಗೂ ತೃಪ್ತಿ ಮೂಡುವುದು. ಅದರ ಶಿಕ್ಷಣಗಳ ಪರಿಣಾಮದಲ್ಲಿ ನಮಗೆ ತೃಪ್ತಿ ದೊರೆಯುವುದರಿಂದ ಗ್ರಂಥ (ಪವಿತ್ರ ಕುರ್‌ಆನ್) ಮತ್ತು ಅದನ್ನು ತಂದಿರುವ ಸಂದೇಶವಾಹಕರಲ್ಲಿಯೂ ಸಹಜವಾಗಿಯೇ ತೃಪ್ತಿಯಾಗುವುದು.

ಪವಿತ್ರ ಕುರ್‌ಆನ್ ಅಲ್ಲಾಹನ ಪ್ರವಾದಿಯವರ(ಸ) ಮೂಲಕ ಅಲ್ಲಾಹನ ಗ್ರಂಥವನ್ನು ಬೇರೆಯಾದ ವಿಶಿಷ್ಟ ಶೈಲಿಯಲ್ಲಿ ಅಭಿಸಂಬೋಧಿತರಿಗೆ ಮನವರಿಕೆ ಮಾಡಿಕೊಡುತ್ತಿದೆ, "ಓ ಪೈಗಂಬರರೇ, ನೀವು ಇವರ ಮುಂದೆ ಯಾವುದಾದರೂ ನಿದರ್ಶನ (ಪವಾಡ)ವನ್ನು ಇರಿಸದಿದ್ದರೆ ನೀವು ನಿಮಗಾಗಿ ಯಾವುದಾದರೂ ನಿದರ್ಶನವನ್ನು ಆರಿಸಿಕೊಳ್ಳಲಿಲ್ಲವೇಕೆ? ಎಂದು ಇವರು ಕೇಳುತ್ತಾರೆ. ಅವರೊಡನೆ ಹೇಳಿರಿ: "ನಾನು, ನನ್ನ ಪ್ರಭು ನನಗೆ ಅವತೀರ್ಣಗೊಳಿಸಿದ ದಿವ್ಯವಾಣಿಯನ್ನು ಮಾತ್ರ ಅನಸುರಿಸುತ್ತೇನೆ. ಇವು ನಿಮ್ಮ ಪ್ರಭುವಿನ ಕಡೆಯಿಂದ ಜ್ಞಾನ ಪ್ರಕಾಶಗಳಾಗಿರುತ್ತವೆ ಮತ್ತು ಅವುಗಳನ್ನು ಸ್ವೀಕರಿಸಿಕೊಳ್ಳುವವರಿಗೆ ಮಾರ್ಗದರ್ಶನ ಮತ್ತು ಅನುಗ್ರಹ ವಾಗಿರುತ್ತವೆ." **(ಅಲ್ ಅಅ್‌ರಾಫ್: 203)**

ಸಾಮಾನ್ಯ ಜನರಿಗೆ ಸಂದೇಶ ತಲುಪಿಸುವ ದೈವಿಕ ವಿಧಾನ

ಸ್ವತಃ ಸೃಷ್ಟಿಕರ್ತನು ನೇರವಾಗಿ ಸಾಮಾನ್ಯ ಜನರಿಗೆ ಸಂದೇಶವನ್ನು ತಲುಪಿಸುವುದಿಲ್ಲ ಮತ್ತು ದೈವಿಕ ಸಂದೇಶವನ್ನು ತಲುಪಿಸಲು ಸೃಷ್ಟಿಕರ್ತನು ಅಲೌಕಿಕ ಸೃಷ್ಟಿಗಳನ್ನು ಕೂಡ ರವಾನಿಸುವುದಿಲ್ಲ. ಮನುಷ್ಯರಲ್ಲೇ ತಾನು ಆಯ್ದುಕೊಂಡಿರುವ ವ್ಯಕ್ತಿಯ ಮೂಲಕವೇ ಜನರಿಗೆ ತನ್ನ ಸಂದೇಶವನ್ನು ತಲುಪಿಸುತ್ತಾನೆ. ಮಾತ್ರವಲ್ಲ ಅದನ್ನು ಜನರೆಡೆಗೆ ತರುವ ಸಂದೇಶವಾಹಕರಿಗೆ ತನ್ನ ಮಾತು ಮತ್ತು ಕೃತಿಗಳ ಮೂಲಕ ಸ್ಪಷ್ಟವಾಗಿ ಜನರ ಮುಂದೆ ಅದನ್ನು ಪ್ರಸ್ತುತಪಡಿಸುವ ಹೊಣೆಗಾರಿಕೆ ವಹಿಸಿ ಕೊಡಲಾಗಿರುತ್ತದೆ. ಅವರು ಸಂದೇಶವನ್ನು ತಮ್ಮ ಜೀವನ ಚರ್ಯೆಯನ್ನಾಗಿಸಿ ಆ

ಮೂಲಕ ಜನರಿಗೆ ಮನವರಿಕೆ ಮಾಡಿಸಬೇಕಿತ್ತು. ಇದು ಸುಲಭವಾಗಿ ಜನರು ಕರ್ಮವೆಸಗಲು ಸಹಕಾರಿಯಾಗುವುದು ಮತ್ತು ಆ ಮೂಲಕ ಮನುಷ್ಯರಿಗೂ ದೈವಿಕ ಸಂದೇಶದ ಪ್ರಕಾರ ಕರ್ಮವೆಸಗಲು ಸಾಧ್ಯವೆಂಬ ವಿಶ್ವಾಸವನ್ನು ಮೂಡಿಸುವರು. ಜನರು ಸಂದೇಶವನ್ನು ಸ್ವೀಕರಿಸಿ ಮತ್ತು ಸಂದೇಶವಾಹಕರನ್ನು ಮಾದರಿಯಾಗಿಸಿ ಜನರು ಕರ್ಮವೆಸಗುವಂತಿರಬೇಕು. ಸ್ವಯಂ ಸೃಷ್ಟಿಕರ್ತನು ಬಂದು ಜನರಿಗೆ ಸಂದೇಶ ನೀಡುವುದರಿಂದಾಗಲಿ ಅಥವಾ ಮಾನವೇತರ ಸೃಷ್ಟಿಗಳನ್ನು ಜನರಿಗೆ ಸಂದೇಶ ನೀಡಲು ನಿಯೋಜಿಸುವುದರಿಂದಾಗಲಿ ಹೀಗೆ ಸಂಭವಿಸದು. ಆದುದರಿಂದ ಜನರಲ್ಲಿ ಪ್ರಸಿದ್ಧವಾದ ಮುಹಮ್ಮದ್‌ರಂತಹ(ಸ) ವ್ಯಕ್ತಿಯನ್ನು ಜನರಿಗೆ ಸಂದೇಶ ತಲುಪಿಸಲು ಆಯ್ಕೆ ಮಾಡಿಕೊಳ್ಳಲಾಗಿತ್ತು.

"ಓ ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಸಂದೇಶವಾಹಕರನ್ನು ಕಳುಹಿಸಿದಾಗಲೆಲ್ಲ ಪುರುಷರನ್ನೇ ಕಳುಹಿಸಿದ್ದೇವೆ. ನಾವು ಅವರಿಗೆ ನಮ್ಮ ಸಂದೇಶ ಗಳನ್ನು ದಿವ್ಯವಾಣಿ ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ವಿದ್ವಾಂಸರೊಡನೆ ವಿಚಾರಿಸಿರಿ. ಗತ ಸಂದೇಶವಾಹಕರಿಗೂ ನಾವು ಪ್ರತ್ಯಕ್ಷ ಪ್ರಮಾಣಗಳನ್ನೂ ಗ್ರಂಥ ಗಳನ್ನೂ ಕೊಟ್ಟು ಕಳುಹಿಸಿದ್ದೆವು ಮತ್ತು ಈಗ ಈ ಸ್ಮರಣೆಯನ್ನು ನಿಮಗೆ ಅವತೀರ್ಣ ಗೊಳಿಸಿ, ನೀವು ಜನತೆಯ ಮುಂದೆ ಅವರಿಗಾಗಿ ಅವತೀರ್ಣಗೊಳಿಸಲ್ಪಟ್ಟಿರುವ ಬೋಧನೆಯನ್ನು ವಿವರಿಸುವಂತೆಯೂ ಸ್ಪಷ್ಟೀಕರಿಸುವಂತೆಯೂ ಜನರು (ಸ್ವಯಂ) ವಿವೇಚಿಸುವಂತೆಯೂ ಮಾಡಿದೆವು." **(ಅನ್ನಹ್ಲ್: 43-44)**

ಹೀಗೆ ಜನರ ಮಿಥ್ಯ ಆಗ್ರಹಗಳಿಗೂ ಅಸ್ವಾಭಾವಿಕವೂ ಅಯೋಗ್ಯವೂ ಆದ ಕರ್ಮಗಳಿಗೆ ತಡೆಹಾಕಿ ಸೃಷ್ಟಿಕರ್ತನು ಜನರ ಸ್ವಭಾವಕ್ಕೆ ಹೊಂದುವ ಮತ್ತು ಯೋಗ್ಯ ವಿಧಾನವನ್ನು ಜನರ ಮುಂದೆ ಸ್ಪಷ್ಟಪಡಿಸಿರುವನು.

ಪ್ರವಾದಿಯವರ(ಸ) ಕೆಲಸ ಸಂದೇಶ ತಲುಪಿಸುವುದು ಮಾತ್ರ ಆಗಿದೆ

ಪ್ರವಾದಿಯವರ(ಸ) ಕೆಲಸ ದೈವಿಕ ಜ್ಞಾನವನ್ನು ಸೃಷ್ಟಿಕರ್ತನ ದಾಸರಿಗೆ ತಲುಪಿಸು ವುದಾಗಿದೆ. ಆದರೆ ಜನರು ಮಾತ್ರ ಸಂದೇಶವಾಹಕರೊಂದಿಗೆ ಅನೈಸರ್ಗಿಕ ನಿದರ್ಶನಗಳನ್ನು (ಪವಾಡವನ್ನು) ತೋರಿಸಿ ಎಂಬ ಬೇಡಿಕೆಯನ್ನು ಮುಂದಿಡುತ್ತಾರೆ. ಜನರ ಬೇಡಿಕೆಯನ್ನು ಈಡೇರಿಸುವುದಾಗಲಿ ಪವಾಡ ತೋರಿಸುವುದಾಗಲಿ ಪ್ರವಾದಿಯ ಹೊಣೆಗಾರಿಕೆಯಲ್ಲ. ಅವರ ಸ್ವಭಾವವೂ ಅದಲ್ಲ. ಜನರು ಇಂತಹವೆಲ್ಲ ಆಗ್ರಹಗಳನ್ನು ಪ್ರವಾದಿ ತಂದ ಸಂದೇಶವನ್ನು ನಿರಾಕರಿಸಲು ನೆಪವಾಗಿ ಅವರು ಮುಂದಿಡುತ್ತಿದ್ದಾರೆ. ಸಂದೇಶವಾಹಕರ ಜೀವನ, ಅವರ ಚಾರಿತ್ರ್ಯ, ಜನರೊಂದಿಗೆ ಅವರ ನಿಸ್ವಾರ್ಥ, ಪ್ರಾಮಾಣಿಕ ಪ್ರೀತಿ, ಸ್ವಯಂ ಅವರು ನೀಡುತ್ತಿರುವ ಕರೆ ಮತ್ತು ಸಂದೇಶ ಇವೆಲ್ಲವೂ

ಅವರು ಸತ್ಯಸಂಧ ಸಂದೇಶವಾಹಕರಾಗಿರುವರು ಮತ್ತು ಅವರ ನೀಡುತ್ತಿರುವ ಸಂದೇಶ ಸತ್ಯವೆಂಬುದಾಗಿ ಸಾಕ್ಷ್ಯವಹಿಸುತ್ತಿದೆ.

ಅಲ್ಲಾಹನು ತನ್ನ ಸಂದೇಶವಾಹಕರೊಡನೆ ಸ್ಪಷ್ಟವಾಗಿ ತನ್ನ ಸ್ಥಾನಮಾನ, ಇತಿ–ಮಿತಿಗಳನ್ನು ತಿಳಿಸುವಂತೆ ಆದೇಶಿಸುತ್ತಾನೆ.

"ಓ ಪೈಂಗಬರರೇ: ನನ್ನ ಪ್ರಭು ಪರಮ ಪಾವನನು. ನಾನೊಬ್ಬ ಸಂದೇಶ ತರುವ ಮಾನವರಲ್ಲಾಗಿರುವೆನಲ್ಲದೆ ಇನ್ನೇನಾದರೂ ಆಗಿರುವೆನೇ ಎಂದು ಅವರೊಡನೆ ಕೇಳಿರಿ." (ಬನೀ ಇಸ್ರಾಯೀಲ್: 93)

ಸಂದೇಶವಾಹಕರು ಜನರೊಡನೆ ಈ ರೀತಿ ಅಲ್ಲಾಹನನ್ನು ಸಾಕ್ಷ್ಯವಾಗಿರಿಸಿಕೊಂಡು ತನ್ನ ಕೆಲಸ ತನ್ನ ಒಡೆಯನ ಸಂದೇಶವನ್ನು ಅವನ ದಾಸರೆಡೆಗೆ ತಲುಪಿಸುವುದು ಮಾತ್ರವಾಗಿದೆ ಎಂದು ಹೇಳುತ್ತಾರೆ. ಆದುದರಿಂದ ನಿಮ್ಮ ಅಸಹಜವಾದ (ಅನೈಸರ್ಗಿಕ) ಬೇಡಿಕೆಯನ್ನು ನಾನು ಈಡೇರಿಸಲಾರೆನು ಎಂದು ಅವರು ಹೇಳುತ್ತಾರೆ.

ಮನುಷ್ಯನೇ ಪ್ರವಾದಿ ಆಗುವರು

ನಿಸ್ಸಂದೇಹವಾಗಿ ಮನುಷ್ಯನೇ ಪ್ರವಾದಿಯಾಗಬೇಕಾಗಿದೆ. ಮನುಷ್ಯರಿಗೆ ಮನುಷ್ಯರ ಜೀವನವೇ ಮಾದರಿ ಆಗಲು ಸಾಧ್ಯವಿದೆಯೇ ಹೊರತು ದೇವಚರರದ್ದೋ, ಜಿನ್ನ್ (ಯಕ್ಷರ)ಗಳದ್ದೋ ಅಥವಾ ಅಲೌಖಿಕ ಜೀವಿಗಳದ್ದೋ ಜೀವನ ಮಾದರಿಯಾಗಲು ಖಂಡಿತ ಸಾಧ್ಯವಿಲ್ಲ. ಆದುದರಿಂದ ಸಂದೇಶವಾಹಕರ ಮುಂದಿರಿಸಲಾದ ಜನರ ಅಲೌಖಿಕ ಬೇಡಿಕೆಗಳಿಗೆ ಸೃಷ್ಟಿಕರ್ತನು ತನ್ನ ವಚನಗಳ ಮೂಲಕ ಹೀಗೆ ಉತ್ತರಿಸಿರುವನು.

"ಜನರ ಮುಂದೆ ಸನ್ಮಾರ್ಗದರ್ಶನ ಬಂದಾಗಲೆಲ್ಲ– ಅದರ ಮೇಲೆ ವಿಶ್ವಾಸವಿಡ ದಂತೆ ಜನರನ್ನು ತಡೆದುದು "ಅಲ್ಲಾಹನು ಸಂದೇಶವಾಹಕನಾಗಿ ಮಾನವನನ್ನು ಕಳುಹಿಸಿದನೇ?" ಎಂಬ ಮಾತೇ ವಿನಃ ಇನ್ನೇನೂ ಅಲ್ಲ. ಭೂಮಿಯ ಮೇಲೆ ದೇವಚರರು ಇಷ್ಟಾನುಸಾರ ನಡೆದಾಡುತ್ತಿದ್ದರೆ ನಾವು ಖಂಡಿತವಾಗಿಯೂ ಆಕಾಶ ದಿಂದ ಒಬ್ಬ ದೇವಚರನನ್ನೇ ಅವರಿಗೆ ಸಂದೇಶವಾಹಕನನ್ನಾಗಿ ಮಾಡಿ ಕಳುಹಿಸುತ್ತಿದ್ದೇ ವೆಂದು ಅವರೊಡನೆ ಹೇಳಿರಿ." (ಬನೀ ಇಸ್ರಾಯೀಲ್: 94–95)

ಸಂದೇಶವಾಹಕರು ಮನುಷ್ಯನೇ ಆಗಿರುವುದು ಆವಶ್ಯಕ

ಸ್ವಯಂ ಪ್ರವಾದಿಯೇ ತಾನು ಕೇವಲ ಒಬ್ಬ ಮನುಷ್ಯನಾಗಿರುವೆನೆಂದು ಪವಿತ್ರ ಕುರ್‌ಆನ್ ಮೂಲಕ ತನ್ನ ಪರಿಚಯವನ್ನು ಜನರ ಮುಂದಿಡುತ್ತಾರೆ. ತಾನು ಓರ್ವ ಮನುಷ್ಯನಾಗಿದ್ದರೂ ತನ್ನ ಬಳಿಗೆ ವಹ್ಯ್ (ದಿವ್ಯ ಸಂದೇಶ) ಬರುತ್ತದೆ ಮತ್ತು ಆ ದಿವ್ಯ ಸಂದೇಶದಲ್ಲಿ ಸೃಷ್ಟಿಕರ್ತನು ಮತ್ತು ಆರಾಧ್ಯನು ಒಬ್ಬನೇ ಆಗಿರುವನೆಂದು

ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ ಎಂದು ಜನರಿಗೆ ತಿಳಿಯ ಪಡಿಸುತ್ತಾರೆ.

"ಪೈಂಗಂಬರರೇ, ಹೇಳಿರಿ– ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ, ನಿಮ್ಮ ದೇವನು ಏಕ ಮಾತ್ರ ದೇವನೆಂದು ನನ್ನ ಕಡೆಗೆ ದಿವ್ಯವಾಣಿ ಮಾಡಲಾಗುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ." **(ಅಲ್‌ಕಹ್ಫ್: 110)**

ಪ್ರವಾದಿಯು ಕೂಡ ಮನುಷ್ಯರು. ಅವರಿಗೆ ವಹ್ಯ್ ಅವತೀರ್ಣವಾಗುವುದು, ಆ ಮೂಲಕ ಅವರಿಗೆ ಒಂದು ಹೊಣೆಗಾರಿಕೆಯನ್ನು ವಹಿಸಿಕೊಡಲಾಗುತ್ತದೆ: ಮನುಷ್ಯರು ಸೃಷ್ಟಿಕರ್ತನ ಸಂದೇಶದ ನಿರೀಕ್ಷೆಯಲ್ಲಿಯೇ ಇರುತ್ತಾರೆ. ಆದರೆ ಯಾವುದೇ ಮಾನವೇತರ ಅಸ್ತಿತ್ವದ ಮೂಲಕ ಅವರೆಡೆಗೆ ಸಂದೇಶವು ಬರುವುದು ಎಂದು ಅವರ ಭಾವನೆಯಾಗಿರುತ್ತದೆ. ಅವರೆಡೆಗೆ ಸೃಷ್ಟಿಕರ್ತನು ಮಾನವನೊಬ್ಬನ ಮೂಲಕ ಸಂದೇಶ ತಲುಪಿಸುವ ವ್ಯವಸ್ಥೆಯನ್ನು ಮಾಡಿದಾಗ ಅವರು ಆಶ್ಚರ್ಯಚಕಿತ ರಾಗುವರು ಮತ್ತು ಸೃಷ್ಟಿಕರ್ತನ ಸಂದೇಶವನ್ನೇ ಸುಳ್ಳಾಗಿಸತೊಡಗಿದರು. ಇಂತಹ ಜನರ ಮಾನಸಿಕತೆಯನ್ನು ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ವಿವರಿಸಿರುವನು.

"ನಾವು(ಅನಾಸ್ಥೆಯಿಂದಿರುವ) ಜನರಿಗೆ ಎಚ್ಚರಿಕೆ ನೀಡಲಿಕ್ಕೂ ಸತ್ಯವಿಶ್ವಾಸಿಗಳಿಗೆ ಅವರ ಪ್ರಭುವಿನ ಬಳಿ ನಿಜವಾದ ಗೌರವಾದರಗಳಿವೆ ಎಂಬ ಸುವಾರ್ತೆ ನೀಡಲಿಕ್ಕೂ ಸ್ವತಃ ಅವರೊಳಗಿಂದಲೇ ಓರ್ವ ಮನುಷ್ಯನ ಮೇಲೆ ದಿವ್ಯವಾಣಿಯನ್ನು ಕಳುಹಿಸಿರು ವುದು ಜನರಿಗೆ ಆಶ್ಚರ್ಯದ ವಿಷಯವಾಯಿತೇ? (ಇಷ್ಟು ಮಾತ್ರಕ್ಕಾಗಿ) 'ಈತನು ಮಾಟಗಾರ' ಎಂದು ಸತ್ಯನಿಷೇಧಿಗಳು ಹೇಳಿದರು." **(ಯೂನುಸ್: 2)**

ಅಲ್ಲಾಹನು ತನ್ನ ಗ್ರಂಥದಲ್ಲಿ ಬಹಳ ಸ್ಪಷ್ಟವಾದ ರೀತಿಯಿಂದ ತನ್ನ ಗ್ರಂಥವನ್ನು ಸಕಲ ಜನರ ಜ್ಞಾನ ಮತ್ತು ಮಾರ್ಗದರ್ಶನಕ್ಕಾಗಿ ತನ್ನ ಪ್ರವಾದಿಯ ಬಳಿಗೆ ಕಳುಹಿಸಿರುವೆನು ಎಂದು ತಿಳಿಸಿರುವನು ಮತ್ತು ಅವರ ಕೆಲಸ ಈ ಗ್ರಂಥ ಜ್ಞಾನವನ್ನು ಜನರಿಗೆ ತಲುಪಿಸುವುದು ಮತ್ತು ಜನರಿಗೆ ಮನವರಿಕೆ ಮಾಡುವುದಾಗಿದೆ. ಗ್ರಂಥಧ ಶಿಕ್ಷಣಗಳನ್ನು ಪ್ರವಾದಿಯೇ ಮೊದಲು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವರು ಮತ್ತು ಅದರಂತೆ ಕರ್ಮವೆಸಗಿ ಜನರಿಗೆ ಮಾದರಿಯಾಗುವರು. ಜನರು ಆ ಮಾರ್ಗದರ್ಶನ ವನ್ನು ಸ್ವೀಕರಿಸಿ ಜೀವನದಲ್ಲಿ ಅದರಂತೆ ಕರ್ಮವೆಸಗಬೇಕಾಗಿದೆ. ಆದರೆ ಯಾವುದೇ ಬಲವಂತವಿಲ್ಲ. ಬಲವಂತಪಡಿಸುವುದು ಮತ್ತು ಅಂತಹ ಯಾವುದೇ ಮಾರ್ಗವನ್ನು ಸ್ವೀಕರಿಸುವ ಹೊಣೆಗಾರಿಕೆ ಪ್ರವಾದಿಗಿಲ್ಲ ಎಂದು ಅಲ್ಲಾಹನು ತಿಳಿಸಿರುವನು. ಜೊತೆಗೆ ಮಾರ್ಗದರ್ಶನವನ್ನು ಸ್ವೀಕರಿಸುವುದು ಮತ್ತು ಸ್ವೀಕರಿಸದಿರುವುದು

ಜನರದೇ ಆಯ್ಕೆಯಾಗಿದೆ. ಯಾರೂ ಯಾವುದೇ ಮಾರ್ಗವನ್ನೂ ಅಯ್ಕೆ ಮಾಡಿಕೊಳ್ಳಲು ಸ್ವತಂತ್ರರು. ಅದು ಆಯಾ ವ್ಯಕ್ತಿಗಳಿಗೆ ಸೀಮಿತವಾದ ಹೊಣೆಗಾರಿಕೆಯಾಗಿದ್ದು ಅದರ ಪರಿಣಾಮ ವನ್ನೂ ಅವರೇ ಪಡೆಯಲಿರುವರು.

ಈ ವಿಚಾರವನ್ನು ಅಲ್ಲಾಹನು ತನ್ನ ಗ್ರಂಥದಲ್ಲಿ ಸ್ಪಷ್ಟ ಪದಗಳಲ್ಲಿ ಹೀಗೆ ಹೇಳುತ್ತಾನೆ, "(ಸಂದೇಶವಾಹಕರೇ) ನಾವು ಸಕಲ ಮಾನವರಿಗಾಗಿ ಈ ಪರಮ ಸತ್ಯ ಗ್ರಂಥವನ್ನು ನಿಮಗೆ ಅವತೀರ್ಣಗಳಿಸಿದ್ದೇವೆ. ಇನ್ನು ನೇರ ಮಾರ್ಗವನ್ನು ಅನುಸರಿಸುವವನು ತನಗಾಗಿಯೇ ಅನುಸರಿಸುವನು ಮತ್ತು ಪಥಭ್ರಷ್ಟನಾಗುವವನ ಪಥಭ್ರಷ್ಟತೆಯ ದೋಷವು ಅವನ ಮೇಲೆಯೇ ಇರುವುದು. ನೀವು ಅವರ ಹೊಣೆ ಗಾರರಲ್ಲ." (ಅಝ್ಝುಮರ್: 21)

ಸಂದೇಶ ಮತ್ತು ಪ್ರವಾದಿ

ಗ್ರಂಥದದೊಂದಿಗೆ ಸಂದೇಶವಾಹಕರನ್ನು ಅಥವಾ ಸಂದೇಶದೊಂದಿಗೆ ಪ್ರವಾದಿ ಯನ್ನು ಜೊತೆಯಾಗಿ ಕಳುಹಿಸಿದುದರಲ್ಲಿ ಯುಕ್ತಿಯೂ ಇದೆ ಅನುಗ್ರಹವೂ ಇದೆ. ಸಂದೇಶವನ್ನು ಪ್ರವಾದಿ ಬಹಿರಂಗವಾಗಿ ವಿವರಿಸುವುದು ಜನರಿಗೆ ಮನವರಿಕೆ ಮಾಡಿ ಕೊಡುವುದು ಮಾತ್ರವಲ್ಲ ಅವರು ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ಕರ್ಮವೆಸಗಿ ತೋರಿಸಿಕೊಡುವುದು. ಹೀಗಾದರೆ ಮಾನವ ಸಮುದಾಯಕ್ಕೆ ಸುಲಭವಾಗಿ ಸಂದೇಶ ಮನವರಿಕೆಯಾಗುವುದು ಮತ್ತು ಕರ್ಮವೆಸಗಲು ಸುಲಭವಾಗು ವುದು. ಯಾವ ರೀತಿ ಜೀವನದಲ್ಲಿ ಅಳವಡಿಸಿಕೊಳ್ಳುವುದು ಎಂದು ಜನರಿಗೆ ಅರಿವಾಗುವುದು. ಆದುದರಿಂದ ವಿಶ್ವ ಸಾಮ್ರಾಟನು ಹೀಗೆ ಹೇಳುತ್ತಾನೆ,

"ಅದು ನಮ್ಮ ಅಪ್ಪಣೆಯಿಂದ ಸಕಲ ವಿಷಯಗಳ ಯುಕ್ತಿ ಪೂರ್ಣವಾದ ತೀರ್ಪನ್ನು ಸಾದರ ಗೊಳಿಸುವಂತಹ ರಾತ್ರಿಯಾಗಿತ್ತು. ನಾವು ಓರ್ವ ಸಂದೇಶ ವಾಹಕನನ್ನು ಕಳುಹಿಸಲಿದ್ದೆವು. ನಿನ್ನ ಪ್ರಭುವಿನ ಅನುಗ್ರಹದ ರೂಪದಲ್ಲಿ! ನಿಶ್ಚಯವಾಗಿಯೂ ಅವನೇ ಸರ್ವವನ್ನೂ ಆಲಿಸುವವನು ಮತ್ತು ಸರ್ವವನ್ನೂ ಅರಿಯುವವನಾಗಿದ್ದಾನೆ. ಭೂಮಿ–ಆಕಾಶಗಳ ಹಾಗೂ ಅವುಗಳ ನಡುವೆ ಇರುವ ಪ್ರತಿಯೊಂದು ವಸ್ತುವಿನ ಪ್ರಭು: ನೀವು ನಿಜಕ್ಕೂ ನಂಬಿಕೆಯುಳ್ಳವರಾಗಿದ್ದರೆ. ಅವನ ಹೊರತು ಇತರ ಆರಾಧ್ಯರಾರು ಇಲ್ಲ. ಅವನೇ ಜೀವಂತಗೊಳಿಸುತ್ತಾನೆ ಮತ್ತು ಅವನೇ ಮರಣ ಕೊಡುತ್ತಾನೆ. ಅವನೇ ನಿಮ್ಮ ಪ್ರಭು ನಿಮಗಿಂತ ಮುಂಚೆ ಗತಿಸಿದ ಪೂರ್ವಜರ ಪ್ರಭು." (ಅದ್ದುಖಾನ್: 2–6)

ಪ್ರವಾದಿಯ ಆಗಮನ ಮನುಷ್ಯರಿಗೆ ಅನುಗ್ರಹವಾಗಿದ್ದು ಅವರು ಅನುಗ್ರಹೀತ ಸಂದೇಶವನ್ನು ಜನರ ಬಳಿಗೆ ತರುತ್ತಾರೆ.

ಪ್ರವಾದಿಯ ಗುಣವೈಶಿಷ್ಟ್ಯಗಳು, ಸ್ಥಾನಮಾನ ಮತ್ತು ಇತಿ–ಮಿತಿಗಳು:

ದೈವಿಕ ಸಂದೇಶವನ್ನು ಇತರ ಮನುಷ್ಯರಿಗೆ ತಲುಪಿಸುವುದು ಸಂದೇಶವಾಹಕ ಸ್ಥಾನಮಾನವಾಗಿದೆಯೇ ಹೊರತು ಬೇರೇನೂ ಇಲ್ಲ. ಅವರು ಸಂದೇಶವನ್ನು ಬಹಿರಂಗ ಮತ್ತು ವಿಶದವಾಗಿ ಅಭಿಸಂಬೋಧಿತರ ಮುಂದೆ ಪ್ರಸ್ತುತಪಡಿಸುವರು. ಸಂದೇಶವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಕರ್ಮವೆಸಗುವರು. ಪ್ರತಿಯೊಂದು ವಿಷಯಗಳಲ್ಲಿಯೂ ಜನರಿಗೆ ಸಂಬಂಧಿಸಿದ ಸಂದೇಶವಿದ್ದು ಅದು ಜನರಿಗೆ ಸರಿಯಾದ ರೀತಿಯಿಂದ ತಲುಪಬೇಕಾಗಿತ್ತು. ಸಂದೇಶದಲ್ಲಿ ಯಾವುದೇ ವಿಷಯ ಬಿಟ್ಟು ಹೋಗಬಾರದು. ಅದೃಶ್ಯಗಳ ವಿಚಾರದಲ್ಲಿ ಅವರೂ ಮನುಷ್ಯರಾಗಿದ್ದು ಇತರ ಮನುಷ್ಯರಂತೆ (ಲೋಕವಸಾನ, ಯಾತನೆ ಯಾವಾಗ ಬರುವುದು ಇತ್ಯಾದಿ ವಿಷಯ ಗಳಲ್ಲಿ ಅವರೂ) ಅಸಹಾಯಕರು ಮತ್ತು ಮಿತಿಯುಳ್ಳ ವ್ಯಕ್ತಿಯಾಗಿದ್ದರು.

ಜನರಿಗೆ ತಮ್ಮ ಸ್ವಾಭಾವಿಕ ಸ್ಥಾನಮಾನವನ್ನು ವಿವರಿಸಿಕೊಡಿರಿ ಎಂದು ಅಲ್ಲಾಹನು ತನ್ನ ಗ್ರಂಥದಲ್ಲಿ ಆದೇಶಿಸಿದ್ದಾನೆ, "ಇವರೊಡನೆ ಹೇಳಿರಿ: ನಾನೊಬ್ಬ ಅಪೂರ್ವ ಸಂದೇಶವಾಹಕನಲ್ಲ. ನಾಳೆ ನನಗೇನಾಗಲಿದೆ ಎಂಬುದಾಗಲಿ, ನಿಮಗೇ ಏನಾಗಲಿದೆ ಎಂಬುದಾಗಲಿ ನನಗರಿಯದು. ನಾನಂತು ನನ್ನ ಬಳಿಗೆ ಕಳುಹಿಸ ಲಾಗುತ್ತಿರುವ ದಿವ್ಯವಾಣಿಯನ್ನು ಅನುಸರಿಸುತ್ತೇನೆ. ನಾನೊಬ್ಬ ಸುಸ್ಪಷ್ಟ ಎಚ್ಚರಿಕೆ ನೀಡುವವನೇ ಹೊರತು ಇನ್ನೇನೂ ಅಲ್ಲ." **(ಅಲ್ ಅಹ್ಕಾಫ್: 9)**

ಪರೀಕ್ಷೆಗೆ ಸಂಬಂಧಿಸಿದ ಬಹಳ ವಿಷಯಗಳಿವೆ. ಅದರಲ್ಲಿ ಕಿಯಾಮತ್ (ಲೋಕಾಂತ್ಯ) ಜೀವನ, ಮರಣಾನಂತರದ ವಿಚಾರಣೆ, ಸ್ವರ್ಗ ಮತ್ತು ನರಕ ಇತ್ಯಾದಿ, ಇವೆಲ್ಲವನ್ನೂ ಪ್ರವಾದಿ ವಿವರಿಸುವರು. ಜೊತೆಗೆ ತನ್ನ ಸ್ಥಿತಿಯನ್ನೂ ತನಗಿ ರುವ ಸ್ಥಾನವನ್ನೂ ಸ್ಪಷ್ಟವಾಗಿ ಮತ್ತು ಬಹಿರಂಗವಾಗಿ ಜನರ ಮುಂದೆ ವ್ಯಕ್ತಪಡಿಸುವರು. ಅಂದರೆ ಅವರು ಕೂಡ ಒಬ್ಬ ಮನುಷ್ಯನೇ. ಆದುದರಿಂದ ಅವರು ಅದೃಶ್ಯ ಜ್ಞಾನಿಯಲ್ಲ. ಅವರಿಗೂ ಅರಿವಿಲ್ಲ. ಜನರ ಮುಂದೆ ವಿವರಿಸುವುದು ಅವರಿಗೆ ತಿಳಿಸಿ ಕೊಡುಲಾಗುತ್ತಿರುವ ವಿಷಯಗಳಾಗಿವೆ. ವಿಶ್ವದ ಸೃಷ್ಟಿಕರ್ತನಾದ ಅಲ್ಲಾಹನು ವಹ್ಯ್ ಕಳುಹಿಸುವ ಮೂಲಕ ತಿಳಿಸಿದ ವಿಷಯಗಳನ್ನು ಅವರು ಜನರ ಮುಂದೆ ವಿವರಿಸು ವುದು. ಅದು ದೇವಚರರ ಮೂಲಕ ಪ್ರಪಂಚದ ಸೃಷ್ಟಿಕರ್ತನ ಕಡೆಯಿಂದ ತಲುಪುವ ಅಮಾನತನ್ನು (ವಹ್ಯ್‌ನ ರೂಪದಲ್ಲಿ) ಯಥಾರೂಪದಲ್ಲಿ ಜನರ ಮುಂದಿಡುತ್ತಾರೆ.

ತನ್ನ ಪ್ರವಾದಿಯನ್ನು ಕಳುಹಿಸಿದ ಉದ್ದೇಶವನ್ನು ಅಲ್ಲಾಹನು ಸ್ಪಷ್ಟಪಡಿಸಿರುವನು:

ಪ್ರಪಂಚ ಸೃಷ್ಟಿಕರ್ತನು ತನ್ನ ಪ್ರವಾದಿಯನ್ನು ಯಾವ ಉದ್ದೇಶಕ್ಕಾಗಿ ಮನುಷ್ಯರೆಡೆಗೆ ಕಳುಹಿಸಲಾಗಿದೆ ಎಂದು ಅವನು ತನ್ನ ಗ್ರಂಥದಲ್ಲಿ ವಿವರಿಸಿರುವನು.

"ಪೈಗಂಬರರೇ, ನಾವು ನಿಮ್ಮನ್ನು ಸಾಕ್ಷಿದಾರನಾಗಿಯೂ ಸುವಾರ್ತೆ ಮತ್ತು ಎಚ್ಚರಿಕೆ ನೀಡುವವನಾಗಿಯೂ ಅಲ್ಲಾಹನ ಅನುಮತಿಯಿಂದ ಅವನ ಕಡೆಗೆ ಕರೆ ನೀಡುವವನಾಗಿಯೂ ಪ್ರಕಾಶಮಯ ಜ್ಯೋತಿಯನ್ನಾಗಿಯೂ ಮಾಡಿ ಕಳುಹಿಸಿರುತ್ತೇವೆ. ಅಲ್ಲಾಹನ ಕಡೆಯಿಂದ ಮಹಾ ಅನುಗ್ರಹವಿದೆ ಎಂಬ ಸುವಾರ್ತೆಯನ್ನು ಸತ್ಯವಿಶ್ವಾಸಿಗಳಿಗೆ ತಿಳಿಸಿ ಬಿಡಿರಿ." (ಅಹ್ಝಾಬ್: 25–27)

ಸ್ವತಃ ಪ್ರವಾದಿಯ ಜೀವನ ಬಹಳ ಸುಂದರವಾಗಿದ್ದು, ಅವರು ಇತರ ಮನುಷ್ಯರ ಜೀವನವನ್ನು ಕೂಡ ಸುಂದರಗೊಳಿಸುವರು. ಅವರು ಸ್ವಯಂ ಪ್ರಕಾಶವಾಗಿರುವರು. ಅವರು ವಿಶ್ವಾಸ ಮತ್ತು ಚಾರಿತ್ರ್ಯದ ಪ್ರಕಾಶವಾಗಿದ್ದು ಅದರಿಂದ ವಾತಾವರಣವನ್ನು ಪ್ರಕಾಶಮಾನ ಗೊಳಿಸುವರು. ಅಲ್ಲಾಹನ ಏಕತ್ವಕ್ಕೆ ಸಾಕ್ಷ್ಯ ವಹಿಸುವರು. ಅವರು ಮಾತು ಕೃತಿ ಚರ್ಯೆಗಳ ಮೂಲಕ ಪ್ರಕಾಶ ದೀವಿಗೆಯಂತೆ ಜನರು ಸತ್ಯದೆಡೆಗೆ ಮಾರ್ಗದರ್ಶನ ಮಾಡುವರು.

ಪ್ರವಾದಿ ಜನರಿಗೆ ಅನುಗ್ರಹ ಮತ್ತು ಅನುಕೂಲಕರವಾದ ದೈವಿಕ ಆದೇಶಗಳನ್ನು ತರುವರು:

ಸೃಷ್ಟಿಕರ್ತನು ಸ್ಪಷ್ಟ ರೀತಿಯಿಂದ ತನ್ನ ಆದೇಶಗಳನ್ನು ಕೊಟ್ಟು ಪ್ರವಾದಿಯನ್ನು ಜನರೆಡೆಗೆ ಕಳುಹಿಸುವುದು ಸೃಷ್ಟಿಕರ್ತನ ಅನುಗ್ರಹದ ಬೇಡಿಕೆಯಾಗಿದೆ. ಜನರು ತಮ್ಮ ನಡುವೆ ಹಾಸುಹೊಕ್ಕಾಗಿರುವ ಪರಸ್ಪರ ವಂಚನೆ, ಕರ್ಮಭ್ರಷ್ಟತೆ, ಮೂಢನಂಬಿಕೆಯ ಸಂಪ್ರದಾಯಗಳಲ್ಲಿ ಬಿದ್ದುಕೊಂಡು ತಮ್ಮ ಜೀವನವನ್ನೇ ತೊಂದರೆ, ಸಂಕಷ್ಟಕ್ಕೆ ಸಿಲುಕಿಸಿರುತ್ತಾರೆ. ಪ್ರವಾದಿ ಅದರಿಂದ ಅವರನ್ನು ಬಿಡಿಸಿ ಸೃಷ್ಟಿಕರ್ತನ ಕರುಣೆಯ (ಅನುಗ್ರಹದ) ಕಡೆಗೆ ನಮ್ಮನ್ನು ಕರೆ ತರುವರು ಮತ್ತು ಪ್ರವಾದಿ ಅಲ್ಲಾಹನ ಕಡೆಯಿಂದ ಕರುಣೆ, ಅನುಗ್ರಹಗಳ ಸಂದೇಶವನ್ನು ತರುವರು ಮತ್ತು ಈ ಅನುಗ್ರಹೀತ ಸಂದೇಶವನ್ನು ಜನರ ಮುಂದೆ ಯಥಾವತ್ತಾಗಿ ಸ್ಪಷ್ಟವಾಗಿ ವಿವರಿಸಿ, ಸಮಚಿತ್ತದಿಂದ ವ್ಯವಹರಿಸುವರು. ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ.

"ತಮ್ಮಲ್ಲಿರುವ ತೌರಾತ್ ಮತ್ತು ಇಂಜೀಲ್‌ಗಳಲ್ಲಿ ಪ್ರಸ್ತಾಪಿಸಲಾಗಿರುವ ಈ ಸಂದೇಶ ವಾಹಕ ನಿರಕ್ಷರಿ ಪ್ರವಾದಿಯ ಅನುಸರಣೆಯನ್ನು ಸ್ವೀಕರಿಸಿದವರು (ಈ ಕೃಪೆಗೆ ಪಾತ್ರ ರಾಗುವರು) ಇವರು (ಪ್ರವಾದಿ) ಅವರಿಗೆ ಸತ್ಕರ್ಮದ ಆದೇಶ ನೀಡುತ್ತಾರೆ ಮತ್ತು ದುಷ್ಕೃತ್ಯದಿಂದ ತಡೆಯುತ್ತಾರೆ. ಅವರಿಗೆ ಶುದ್ಧ ವಸ್ತುಗಳನ್ನು ಧರ್ಮಸಮ್ಮತ ಮತ್ತು ಅಶುದ್ಧ ವಸ್ತುಗಳನ್ನು ನಿಷಿದ್ಧಗೊಳಿಸುತ್ತಾರೆ. ಅವರ ಮೇಲೆ ಹೇರಲಾಗಿರುವ ಹೊರೆಗಳನ್ನು ಇಳಿಸುತ್ತಾರೆ. ಅವರನ್ನು ಬಿಗಿಯಲಾಗಿದ್ದ ಬಂಧನಗಳನ್ನು ಬಿಡಿಸುತ್ತಾರೆ. ಆದುದರಿಂದ ಇವರ ಮೇಲೆ ವಿಶ್ವಾಸವಿರಿಸುವವರು, ಇವರನ್ನು

ಸಮರ್ಥಿಸುವವರು, ಇವರಿಗೆ ಸಹಕಾರ ನೀಡುವವರು ಮತ್ತು ಇವರೊಂದಿಗೆ ಅವತೀರ್ಣಗೊಳಿಸಲಾಗಿರುವ ಪ್ರಕಾಶವನ್ನು ಅನುಸರಿಸುವವರು ಮಾತ್ರ ಯಶಸ್ವಿಗಳಾಗುವರು." (ಅಲ್ ಅಅ್‌ರಾಫ್, 157)

ಸೃಷ್ಟಿಕರ್ತನು ತನ್ನ ಆದೇಶ ಮತ್ತು ಸಂದೇಶವನ್ನು ಸ್ಪಷ್ಟ ವಿಧಾನದಿಂದ ತಲುಪಿಸುವ ವ್ಯವಸ್ಥೆ ಮಾಡಿರುವನು:

ಸೃಷ್ಟಿಕರ್ತ ತನ್ನ ಆದೇಶಗಳನ್ನು ಜನರಿಗೆ ಬಹಳ ಸ್ಪಷ್ಟ ರೀತಿಯಲ್ಲಿ ತಿಳಿಸುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿರುವನು. ನಿಶ್ಚಯವಾಗಿಯೂ ಇದಕ್ಕೆಂದೇ ಅವನು ಪವಿತ್ರ ಗ್ರಂಥವನ್ನು ಕಳುಹಿಸಿರುವುದು ಮತ್ತು ಈ ಗ್ರಂಥವನ್ನು ಸ್ವೀಕರಿಸುವ ವ್ಯಕ್ತಿಯಾಗಿ ಪ್ರವಾದಿಯನ್ನು ನಿಶ್ಚಯಿಸಿದನು. ಈ ಗ್ರಂಥವನ್ನು ಜನರಿಗೆ ಸ್ಪಷ್ಟ ರೀತಿ ಯಲ್ಲಿ ಅವರು ವಿವರಿಸುವರು ಮತ್ತು ಅದರಂತೆ ಕರ್ಮ ವೆಸಗಿ ಜನರಿಗೆ ತೋರಿಸಿಕೊಡುವರು.

"ಅಲ್ಲಾಹನು ತನ್ನ ಅನುಜ್ಞೆಯಿಂದ ನಿಮ್ಮನ್ನು ಸ್ವರ್ಗ ಹಾಗೂ ಪಾಪ ವಿಮೋಚನೆಯ ಕಡೆಗೆ ಆಹ್ವಾನಿಸುತ್ತಾನೆ ಮತ್ತು ಜನರು ಬೋಧನೆ ಸ್ವೀಕರಿಸಿ ಪಾಠ ಕಲಿಯಲೆಂದು ಅವನು ತನ್ನ ಆದೇಶಗಳನ್ನು ಅವರ ಮುಂದೆ ವಿವರಿಸುತ್ತಾನೆ." (ಅಲ್‌ಬಕರ: 221)

ಸೃಷ್ಟಿಕರ್ತನ ಸಂದೇಶವನ್ನು ಅದರ ಮೂಲ ರೂಪದಲ್ಲಿ ಜನರಿಗೆ ತಲುಪಿಸಿ ಬಿಡುವುದಷ್ಟಕ್ಕೆ ಸಂದೇಶವಾಹಕರ ಕೆಲಸ ಮುಗಿಯುವುದಿಲ್ಲ. ಅದರ ಪ್ರಕಾರ ಅವರೂ ಜೀವನ ನಡೆಸುವರು. ಯಾಕೆಂದರೆ ಅವರೇ ಜನರಿಗೆ ಮಾದರಿಯಾಗಿರುವರು. ಜನರಿಗೆ ತನ್ನ ಜೀವನದ ಮೂಲಕವೂ ಬಹಿರಂಗವಾಗಿ ಅಲ್ಲಾಹನ ಸಂದೇಶವನ್ನು ಅವರು ಜನರಿಗೆ ಮನವರಿಕೆ ಮಾಡಿಕೊಡುತ್ತಾರೆ ಮತ್ತು ಆ ಪ್ರಕಾರ ಜನರ ಜೀವನ ಶೈಲಿಯನ್ನು ಸಂಸ್ಕರಿಸುವರು.

"ವಾಸ್ತವದಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳ ನಡುವೆ ಅವರೊಳಗಿನಿಂದಲೇ, ಅವರಿಗೆ ಅವನ (ಅಲ್ಲಾಹನ) ಸೂಕ್ತಗಳನ್ನು ಓದಿ ಹೇಳುವ, ಅವರ ಜೀವನವನ್ನು ಸಂಸ್ಕರಿಸುವ ಮತ್ತು ಅವರಿಗೆ ಗ್ರಂಥ ಮತ್ತು ವಿವೇಕದ ಶಿಕ್ಷಣ ನೀಡುವ ಓರ್ವ ಸಂದೇಶವಾಹಕನನ್ನು ನಿಯೋಜಿಸಿ, ಅವರ ಮೇಲೆ ಬಹುದೊಡ್ಡ ಉಪಕಾರ ಮಾಡಿದ್ದಾನೆ. ವಸ್ತುತಃ ಅವರು ಈ ಮುಂಚೆ ವ್ಯಕ್ತವಾದ ಮಾರ್ಗ ಭ್ರಷ್ಟತೆಯಲ್ಲಿ ಬಿದ್ದಿದ್ದರು." (ಆಲು ಇಮ್ರಾನ್: 164)

ಪ್ರವಾದಿಯು ವಿಶ್ವಾಸ ಇರಿಸಿದವರ ಜೀವನವನ್ನು ಸಂಸ್ಕರಿಸುವರು:

ಅಲ್ಲಾಹನ ಸಂದೇಶವನ್ನು ಜನರಿಗೆ ವಿವರಿಸಿ ಮನವರಿಕೆ ಮಾಡಿಕೊಡುವುದಷ್ಟೇ ಪ್ರವಾದಿಗಿರುವ(ಸ) ಹೊಣೆಯಲ್ಲ. ವಿಶ್ವಾಸವಿರಿಸಿದ ಜನರ ಜೀವನವನ್ನು ಪ್ರವಾದಿ(ಸ)

ಸಂಸ್ಕರಿಸುವುದೂ ಅವರ ಹೊಣೆಯಾಗಿದೆ. ಅಂದರೆ ಜನರ ನಂಬಿಕೆಗಳು, ಯೋಚನೆಗಳು, ಚಾರಿತ್ರ್ಯ, ಆಚಾರ–ವಿಚಾರಗಳು, ವಸ್ತುಗಳು, ಮನೆತನ, ಸಮಾಜ, ಸಾಮಾಜಿಕ ಜೀವನವನ್ನು ಸಸಂಸ್ಕರಿಸುವವರು ಮತ್ತು ಅದಕ್ಕೆ ಸರಿಯಾದ ದಿಕ್ಕು ಸೂಚಿಸುವವರು. ಅವರ ಸಂಸ್ಕರಣಾ ಕಾರ್ಯವೆಲ್ಲವೂ ಅಲ್ಲಾಹನ ಗ್ರಂಥ ಮತ್ತು ಗ್ರಂಥದ ಆಧಾರದಲ್ಲಿರುವುದು. ಆದ್ದರಿಂದ ಅಲ್ಲಾಹನು ತನ್ನ ಪ್ರವಾದಿಯ ಜೀವನ ಮತ್ತು ಅವರ ಪರಿಶ್ರಮದ ಮೇಲೆ ಈ ರೀತಿ ಬೆಳಕು ಚೆಲ್ಲಿರುವನು.

"ಉಮ್ಮೀಗಳ (ನಿರಕ್ಷರಿಗಳ) ನಡುವೆ ಅವರಿಂದಲೇ ಒಬ್ಬ ಸಂದೇಶವಾಹಕರನ್ನು ಎಬ್ಬಿಸಿದವನು ಅವನೇ. ಅವರು ಆ ಜನರಿಗೆ ಅವನ ಸೂಕ್ತಗಳನ್ನು ಓದಿ ಹೇಳುತ್ತಾರೆ. ಅವರ ಜೀವನವನ್ನು ಸಂಸ್ಕರಿಸುತ್ತಾರೆ. ವಸ್ತುತಃ ಇದಕ್ಕಿಂತ ಮುಂಚೆ ಅವರು ಸುಸ್ಪಷ್ಟ ಪಥಭ್ರಷ್ಟತೆಯಲ್ಲಿ ಬಿದ್ದಿದ್ದರು." **(ಅಲ್ ಜುಮುಅಃ 2)**

ಸಂದೇಶವಾಹಕರ ಜೀವನ ಮಾದರಿ, ಮಾನದಂಡ, ಉದಾಹರಣೆ:

ಸಂದೇಶವಾಹಕರ ಜೀವನದಲ್ಲಿ ನಿಮಗೆ ಅತ್ಯುತ್ತಮ ಮಾದರಿಯಿದೆ ಎಂದು ಪವಿತ್ರ ಕುರ್‌ಆನ್ ತಿಳಿಯಪಡಿಸುತ್ತಿದೆ, "ನಿಶ್ಚಯವಾಗಿಯೂ ಅಲ್ಲಾಹನ ಸಂದೇಶ ವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ." **(ಅಹ್ಜಾಬ್: 21)**

ಯಾಕೆಂದರೆ ಪ್ರವಾದಿಯವರ(ಸ) ಜೀವನದ ಅನುಸರಣೆಯಿಂದ ಮಾತ್ರ ಸರಿಯಾದ ಕರ್ಮವೆಸಗಲು ಜನರಿಗೆ ಸುಲಭವಾಗುವುದು. ಅದರಿಂದ ಮನಸ್ಸಿನ ಯಾವುದೇ ಸಂದೇಹಗಳು ಅಥವಾ ಗೊಂದಲಗಳು ಮೂಡುವುದಿಲ್ಲ. ಅಲ್ಲಾಹನ ಆದೇಶದಂತೆ ಕರ್ಮವೆಸಗುವುದಕ್ಕೆ ಯಾವುದೇ ವಿಧಾನವನ್ನು ಹುಡುಕಬೇಕಾದ ಅವಶ್ಯಕತೆ ಉದ್ಭವಿಸುವುದೂ ಇಲ್ಲ. ಪ್ರವಾದಿಯನ್ನು ಅನುಸರಿಸಿದರೆ ತಪ್ಪಾಗುವ ಸಾಧ್ಯತೆಯೂ ಇರುವುದಿಲ್ಲ. ಪ್ರವಾದಿಯವರ(ಸ) ಜೀವನ ಚರ್ಯೆಯ ಮಾದರಿ ತೃಪ್ತಿಕರವಾಗಿದೆ. ಅಲ್ಲಾಹನ ಸಂದೇಶವಾಹಕರ(ಸ) ಕರ್ಮಗಳು ಪ್ರಮಾಣಿತ, ಉದಾಹರಿತ, ಅಧಿಕೃತ ಮಾದರಿ ಆಗಿವೆ ಎಂದು ಘೋಷಿತವಾಗಿರುವುದು. ಯಾರು ಅವರು ತೋರಿಸಿಕೊಟ್ಟ ಜೀವನದಂತೆ ನಡೆಯುವನೊ ಅವನ ಕರ್ಮಗಳನ್ನು ಮತ್ತು ಅವನ ಜೀವನವನ್ನು ಅಲ್ಲಾಹನು ಸ್ವೀಕರಿಸುವನು.

ಮನುಷ್ಯ ತನ್ನ ಆರಾಧ್ಯನಿಗೆ ಭಯಪಟ್ಟರೆ ಅವನಿಗೆ ವಿಧೇಯನಾಗುವನು. ಅಲ್ಲಾಹನ ವಿಧೇಯತೆಯ ಅತ್ಯುನ್ನತ ಮಾದರಿ ಮತ್ತು ವಿಧಾನವು ಪ್ರವಾದಿಯ ವಿಧೇಯತೆಯಲ್ಲಿರುವುದು. ಆದುದರಿಂದ ಪ್ರತಿಯೊಬ್ಬ ಸಂದೇಶವಾಹಕರು ಸಂಪೂರ್ಣ

ಒತ್ತು ನೀಡಿ ಹೇಳಿರುವ ಮಾತುಗಳನ್ನು ಪವಿತ್ರ ಕುರ್‌ಆನ್ ಉದ್ಧರಿಸುತ್ತಿದೆ. "ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ." (ಅಲ್ ಇಸ್ರಾಅ್: 128)

ಸಂದೇಶವಾಹಕರನ್ನು ಕಳುಹಿಸುವ ಉದ್ದೇಶವು ಸೃಷ್ಟಿಕರ್ತನದ್ದೇ ಆಗಿದ್ದು. ಜನರಿಗೆ ಸಂದೇಶವಾಹಕರ ಸಂಪೂರ್ಣ ಜೀವನವು ಅತ್ಯುತ್ತಮ ಮಾದರಿಯಾಗಲಿ ಅದರಿಂದ ತಮ್ಮ ಜೀವನಕ್ಕೆ ಲಾಭ ಪಡೆಯುವಂತಾಗಲಿ ಎಂಬ ಉದ್ದೇಶ ಆಗಿದೆ. ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸಿದರೆ ಮಾತ್ರ ಲಾಭ ಪಡೆಯ ಬಹುದು. ಅಲ್ಲಾಹನ ಸಂತೃಪ್ತಿ ಮತ್ತು ಯಶಸ್ಸು ಗಳಿಸಲು ಅನಿವಾರ್ಯವಾಗಿ ಅಲ್ಲಾಹನ ಪ್ರವಾದಿಯವರನ್ನು(ಸ) ಅನುಸರಿಸಬೇಕಾಗುವುದು ಮತ್ತು ಪ್ರವಾದಿಯ(ಸ) ವಿಧೇಯತೆಯಲ್ಲಿ (ಅನುಸರಣೆಯಲ್ಲಿ) ಸಂಪೂರ್ಣ ತೃಪ್ತಿ ಇರಿಸಬೇಕು.

ಪ್ರವಾದಿಯ ಮಾತು ಅಧಿಕೃತ. ಆದುದರಿಂದ ಅದಕ್ಕೆ ವಿಧೇಯವಾಗಬೇಕಾಗಿದೆ (ಅದನ್ನು ಅನುಸರಿಸಬೇಕಾಗಿದೆ):

ಯಾಕೆಂದರೆ ಸಂದೇಶವಾಹಕರು ಸೃಷ್ಟಿಕರ್ತನ ಆದೇಶದಂತೆ ಮಾತು ಆಡು ವರು ಮತ್ತು ಆದೇಶವನ್ನೇ ಜನರಿಗೆ ಹೇಳುವರು. ಅದು ಜನರ ಜೀವನಕ್ಕೆ ಜ್ಞಾನ ಮತ್ತು ಮಾರ್ಗದರ್ಶನವಾಗಿದೆ. ಆದುದರಿಂದ ಅವರ ಮಾತಿನಲ್ಲಿ ವಿಶ್ವಾಸ ಇರಿಸ ಬೇಕು ಮತ್ತು ಅನುಸರಿಸಬೇಕು. ಸಂದೇಶವಾಹಕರನ್ನು ಕಳುಹಿಸಿದುದರ ಉದ್ದೇಶವೇ ಇದಾಗಿದೆ. ಆದರೂ ಅಲ್ಲಾಹನು ಸಂದೇಶವಾಹಕರನ್ನು ಕಳುಹಿಸಿರುವ ಉದ್ದೇಶವನ್ನು ತಿಳಿಯ ಪಡಿಸುವನು.

"ನಾವು ಪ್ರತಿಯೊಬ್ಬ ಸಂದೇಶವಾಹಕರನ್ನೂ ಅಲ್ಲಾಹನ ಆಜ್ಞೆ ಪ್ರಕಾರ ಅನು ಸರಿಸಲ್ಪಡಲಿಕ್ಕಾಗಿಯೇ ಕಳುಹಿಸಿರುತ್ತೇವೆ." (ಅನ್ನಿಸಾ: 64)

ಸಂದೇಶವಾಹಕರು ಮತ್ತು ಅವರ ಮಾತಿನಲ್ಲಿ ಕೇವಲ ವಿಶ್ವಾಸ ಇರಿಸಿದರೆ ಮುಗಿಯುವುದಿಲ್ಲ. ಅವರನ್ನು ಅನುಸರಿಸಿದಾಗಲೇ ಉದ್ದೇಶ ಈಡೇರುವುದು ಮತ್ತು ಜ್ಞಾನ ಮತ್ತು ಮಾರ್ಗದರ್ಶನ ಸಿಗುವುದು.

ಸಂದೇಶವಾಹಕರ ಅಧಿಕೃತತೆ:

ಸೃಷ್ಟಿಕರ್ತನು ವಿಶ್ವಸ್ಥ, ಪ್ರಾಮಾಣಿಕ ಮತ್ತು ಸಂದೇಶವನ್ನು ಯಥಾ ರೂಪದಲ್ಲಿ ಜನರಿಗೆ ತಲುಪಿಸುವ ವ್ಯಕ್ತಿಯನ್ನು ಜನರಿಗೆ ಸಂದೇಶ ತಲುಪಿಸಲು ಆಯ್ಕೆ ಅವನು ಮಾಡುತ್ತಾನೆ. ಆದುದರಿಂದ ನಮ್ಮ ಪ್ರವಾದಿಯ ಮಾತುಗಳು ನಂಬಿಕೆಗೆ ಅರ್ಹವಾದುದು, ಅಧಿಕೃತ ಮತ್ತು ಅಲ್ಲಾಹನ ಕಡೆಯಿಂದ ಬಂದಿರುವುದು ಆಗಿದೆ. ಅದರಲ್ಲಿ ಯಾವುದೇ ಮಿಶ್ರಣವಿಲ್ಲ, ಬದಾವಣೆಗಳಿಲ್ಲ. ಆದುದರಿಂದ ಜನರು ಸಂದೇಶವಾಹಕರ ಪ್ರತಿಯೊಂದು

ಮಾತುಗಳನ್ನು ಸಂಪೂರ್ಣ ವಿಶ್ವಾಸ ತೃಪ್ತಿಗಳಿಂದ ಆತ್ಮಾರ್ಥವಾಗಿ ಸ್ವೀಕರಿಸಬಹುದು. ಸಂದೇಶವಾಹಕರು(ಸ) ಕೂಡ ಅಲ್ಲಾಹನ ಮುಂದೆ ತನ್ನ ಹೊಣೆಗಾರಿಕೆಗಳ ಕುರಿತು ಉತ್ತರಿಸಲಿಕ್ಕಿದೆ ಎಂದು ತನ್ನ ಗ್ರಂಥದಲ್ಲಿ ಅಲ್ಲಾಹನು ತಿಳಿಸುತ್ತಾನೆ.

"ವಂಚನೆಯು ಒಬ್ಬ ಪ್ರವಾದಿಗೆ ಶೋಭಿಸುವಂತಹದ್ದಲ್ಲ ಮತ್ತು ವಂಚಕನು ತನ್ನ ವಂಚನೆಯೊಂದಿಗೆ ಪುನರುತ್ಥಾನ ದಿನದಂದು ಹಾಜರಾಗುವನು. ಆ ಬಳಿಕ ಪ್ರತಿಯೊಂದು ಜೀವಿಗೂ ಅದರ ಗಳಿಕೆಯ ಸಂಪೂರ್ಣ ಪ್ರತಿಫಲ ಸಿಗುವುದು ಮತ್ತು ಯಾರ ಮೇಲೂ ಅನ್ಯಾಯವಾಗದು." (ಆಲಿ ಇಮ್ರಾನ್: 161)

ಸಂದೇಶವಾಹಕರ ಮಾತು ಎಷ್ಟರವರೆಗೆ ಅಧಿಕೃತವೆಂದರೆ ಅವರ ಮಾತನ್ನು ಸ್ವೀರಿಸಿದವರು ಮತ್ತು ನಿರಾಕರಿಸಿದ ಕರ್ಮಗಳಿಗೆ ಸಂಪೂರ್ಣ ನ್ಯಾಯ ದೊರೆಯುತ್ತದೆ. ಇದು ಅವರ ಅಭಿಸಂಬೋಧಿತರು ಮತ್ತು ಆ ಸಮುದಾಯದ ಸಾಮಾನ್ಯರಿಗೆ ಸಂಬಂಧಿಸಿದ ಇನ್ನೊಂದು ಗಮನಾರ್ಹವಾದ ಹಂತವಾಗಿದೆ.

ಪ್ರತಿಫಲ ಸ್ವೀಕರಿಸದಿರುವುದು ಸಂದೇಶವಾಹಕರ ವೈಶಿಷ್ಟ್ಯವಾಗಿದೆ:

ಸಂದೇಶವಾಹಕರು ನಮ್ಮ ಜೀವನವನ್ನು ಇಹಪರಗಳಲ್ಲಿ ಯಶಸ್ಸನ್ನು ದೊರಕಿಸಿ ಕೊಡುವ ದೈವಿಕ ಜ್ಞಾನ ಮತ್ತು ಮಾರ್ಗದರ್ಶನಗಳನ್ನೊಳಗೊಂಡ ನಮಗೆ ಪ್ರಮುಖ ವಾದ ಮತ್ತು ಮೌಲ್ಯಯುತ ಗ್ರಂಥ (ಪವಿತ್ರ ಕುರ್‌ಆನ್) ತಂದರು. ಜನರಿಗೆ ಅದನ್ನು ತಲುಪಿಸುವ ಸಲುವಾಗಿ ಅವಿಶ್ರಾಂತವಾಗಿ ಪರಿಶ್ರಮಿಸಿದರು ಮತ್ತು ತ್ಯಾಗ ಮಾಡಿದರು. ಅವರು ಜನರಿಂದ ಯಾವುದೇ ಪ್ರತಿಫಲವನ್ನು ಅವರು ಸ್ವೀಕರಿಸುವುದಿಲ್ಲ. ಏಕೆಂದರೆ ಆ ಹೊಣೆಗಾರಿಕೆಯನ್ನು ಅಲ್ಲಾಹನು ಅವರಿಗೆ ನೀಡಿರುವುದು ಮತ್ತು ಅವನಲ್ಲೇ ಕ್ಷಮೆ ಮತ್ತು ಪ್ರತಿಫಲವನ್ನು ನಿರೀಕ್ಷಿಸುತ್ತಾರೆ. ಅವರ ನಿಸ್ವಾರ್ಥ ಕಾರ್ಯಗಳಿಂದ ಜನರು ಪ್ರಭಾವಗೊಂಡು ಅವರು ನೀಡುವ ಸಂದೇಶವನ್ನು ಸ್ವೀಕರಿಸಬಹುದು.

ಸಂದೇಶವಾಹಕರ ಕಾರ್ಯ ವಿಧಾನ ಘನತೆಯದ್ದಾಗಿದೆ. ಅವರು ಸಂಪೂರ್ಣ ಪ್ರೀತಿಯಿಂದ, ನಿಷ್ಪಕ್ಷೀಯತೆ ಮತ್ತು ಹಿತಾಕಾಂಕ್ಷೆಯೊಂದಿಗೆ ಜನರನ್ನು ಅಭಿಸಂಬೋಧಿ ಸುವರು. ಜನರು ಸಂದೇಶ ಸ್ವೀಕರಿಸಬೇಕು ಮತ್ತು ಆ ಮೂಲಕ ನರಕದಿಂದ ಪಾರಾ ಗಲಿ ಎಂದು ನಿಸ್ವಾರ್ಥವಾಗಿ ಬಯಸುತ್ತಾರೆ. ಇದಕ್ಕೆಂದು ಅವರು ಯಾವ ಸಂಭಾವನೆ ಯನ್ನೂ ಸ್ವೀಕರಿಸುವವರಲ್ಲ. ಆದ್ದರಿಂದ ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ತನ್ನ ಪ್ರವಾದಿ ಸ್ಥಾನಮಾನವನ್ನು ಮತ್ತು ಅವರ ಸ್ಥಿತಿಯನ್ನು ಸ್ಪಷ್ಟವಾದ ರೀತಿಯಲ್ಲಿ ವಿವರಿಸಿರುವನು.

"ಇವರೊಡನೆ, 'ನಾನು ಈ ಕಾರ್ಯಕ್ಕಾಗಿ ನಿಮ್ಮಿಂದ ಯಾವುದೇ ಪ್ರತಿಫಲ

ಕೇಳುವುದಿಲ್ಲ. ಇಷ್ಟವಿದ್ದವನು ತನ್ನ ಪ್ರಭುವಿನ ಮಾರ್ಗವನ್ನು ಅನುಸರಿಸುವುದೇ ನನ್ನ ಪ್ರತಿಫಲ' ಎಂದು ಹೇಳಿರಿ." **(ಅಲ್ ಫುರ್ಕಾನ್: 57)**

ಅಲ್ಲಾಹನ ಸಂದೇಶವನ್ನು ಸ್ವೀಕರಿಸುವುದೇ ನೀವು ನನಗೆ ನೀಡುವ ಪ್ರತಿಫಲವಾಗಿದೆ ಎಂದು ಜನರನ್ನುದ್ದೇಶಿಸಿ ಹೇಳಲು ಮೇಲಿನ ವಚನ ಸಂದೇಶವಾಹಕರಿಗೆ ಆದೇಶಿಸುತ್ತದೆ- ಪ್ರವಾದಿಗೆ ತನ್ನ ಕೆಲಸಕ್ಕಾಗಿ ಪ್ರತಿಫಲ ಪಡೆಯುವ ಆವಶ್ಯಕತೆಯಿಲ್ಲ. ಅವರು ಸ್ವರ್ಗ ಗಳಿಸುವ ಮತ್ತು ನರಕದ ಬೆಂಕಿಯಿಂದ ಸುರಕ್ಷಿತಗೊಳ್ಳುವ ದಾರಿಯನ್ನು ಜನರಿಗೆ ತಿಳಿಸುವರು. ತಮ್ಮ ಸೃಷ್ಟಿಕರ್ತನೊಡನೆ ಸಂಧಿಸುವ ಕಾರ್ಯವನ್ನು ಅವರು ನಿರ್ವಹಿಸುತ್ತಾರೆ. ಯಾಕೆಂದರೆ ಜನರು ಅವರ ಈ ಕರೆಗೆ ಓಗೊಡಲಿ, ಸ್ವಲ್ಪ ಸಮಯ ನೀಡಲಿ ಎಂದು ಅವರು ಬಯಸುತ್ತಾರೆ.

"ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಬಯಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ." **(ಅಶ್ಶುಅರಾ: 109)**

ಸಂದೇಶವಾಹಕರು ತನ್ನ ದಾಸ್ಯದೆಡೆಗೆ ಕರೆ ನೀಡುವುದಿಲ್ಲ:

ಸಂದೇಶವಾಹಕರು ತನ್ನ ಸೃಷ್ಟಿಕರ್ತನನ್ನು ಆರಾಧಿಸಲು ಕರೆ ನೀಡುತ್ತಾರೆಯೇ ಹೊರತು ತನ್ನ (ಸಂದೇಶವಾಹಕರ) ದಾಸ್ಯದೆಡೆಗೆ ಕರೆ ನೀಡುವುದಿಲ್ಲ ಎಂದು ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ಸ್ಪಷ್ಟವಾಗಿ ಮತ್ತು ಸಂಪೂರ್ಣವಾಗಿ ಒತ್ತು ನೀಡಿ ತಿಳಿಸಿದ್ದಾನೆ.

"ಅಲ್ಲಾಹನು ತನಗೆ ಗ್ರಂಥವನ್ನೂ ನಿರ್ದೇಶವನ್ನೂ ಪ್ರವಾದಿತ್ವವನ್ನೂ ದಯಪಾಲಿಸಿರುವಾಗ ಅವನು ಜನರೊಡನೆ, ನೀವು ಅಲ್ಲಾಹನ ಬದಲಿಗೆ ನನ್ನ ದಾಸರಾಗಿರಿ ಎನ್ನುವುದು ಯಾವನೇ ಮಾನವನ ಕೆಲಸವಲ್ಲ. ಅವನಂತೂ, ನೀವು ಓದುತ್ತಿರುವ ಮತ್ತು ಓದಿಸುತ್ತಿರುವ ಗ್ರಂಥದ ಬೋಧನೆಯ ಬೇಡಿಕೆಯ ಪ್ರಕಾರ ಅಪ್ಪಟ ದೇವಭಕ್ತ ಆಗಿರೆಂದೇ ಹೇಳುವನು. ನೀವು ದೇವಚರರನ್ನು ಅಥವಾ ದೇವ ಸಂದೇಶವಾಹಕರನ್ನು ನಿಮ್ಮ ಪ್ರಭುಗಳನ್ನಾಗಿ ಮಾಡಿಕೊಳ್ಳಿರೆಂದು ಅವನೆಂದೂ ಹೇಳಲಾರ. ನೀವು ಓರ್ವ ಮುಸ್ಲಿಮ್ ಆಗಿರುವಾಗ ಓರ್ವ ಪ್ರವಾದಿಯು ನಿಮಗೆ ಅಧರ್ಮದ ಆದೇಶ ಕೊಡುವುದು ಸಾಧ್ಯವೇ?" **(ಆಲಿ ಇಮ್ರಾನ್: 79-80)**

ಮನುಷ್ಯರಿಗೆ ಲಾಭ-ನಷ್ಟ ಉಂಟು ಮಾಡುವ ಆಯ್ಕೆ ಪ್ರವಾದಿಗೆ ನೀಡಲಾಗಿಲ್ಲ:

ಸಂದೇಶವಾಹಕರು ಸೃಷ್ಟಿಕರ್ತನಿಂದ ಆಯ್ಕೆಗೊಂಡು ಮನುಷ್ಯನಾಗಿದ್ದು ಸೃಷ್ಟಿಕರ್ತನ ಶ್ರೇಷ್ಠ ಸಂದೇಶವನ್ನು ತಂದಿರುವವರಾದರೂ ತಮಗಾಗಲಿ ಇತರರಿಗಾಗಲಿ ಲಾಭ-ನಷ್ಟವನ್ನುಂಟು ಮಾಡುವ ಯಾವುದೇ ಆಯ್ಕೆ ಸ್ವಾತಂತ್ರ್ಯ ಅವರಿಗಿಲ್ಲ. ಅಲ್ಲಾಹನ

ಹಿಡಿತದಿಂದ ಅಲ್ಲಾಹನ ಹೊರತು ಅವರನ್ನೂ ಯಾರಿಂದಲೂ ರಕ್ಷಿಸಲು ಸಾಧ್ಯವಿಲ್ಲ. ಎಲ್ಲಿಯೂ ಅವರು ಆಶ್ರಯ ಪಡೆಯಲಾರರು. ಈ ವಾಸ್ತವಿಕತೆಯನ್ನು ಸ್ವತಃ ಪ್ರವಾದಿಯ ಮೂಲಕವೇ ತನ್ನ ಗ್ರಂಥದಲ್ಲಿ ವಿವರಿಸಿರುವನು.

"ಸಂದೇಶವಾಹಕರೇ, ಹೇಳಿರಿ: ನಾನಂತು ನನ್ನ ಪ್ರಭುವನ್ನು ಪ್ರಾರ್ಥಿಸುತ್ತೇನೆ ಮತ್ತು ಅವನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡುವುದಿಲ್ಲ. ಹೇಳಿರಿ: ನಿಮಗೆ ಯಾವುದೇ ಹಾನಿ ಮಾಡಲಿಕ್ಕಾಗಲಿ, ಯಾವುದೇ ಲಾಭವನ್ನುಂಟು ಮಾಡಲಿಕ್ಕಾಗಲಿ ನನಗೆ ಅಧಿಕಾರವಿಲ್ಲ. ಹೇಳಿರಿ: ನನ್ನನ್ನು ಅಲ್ಲಾಹನ ಹಿಡಿತದಿಂದ ಯಾರೂ ರಕ್ಷಿಸಲಾರರು ಮತ್ತು ನನಗೆ ಅವನ ಸನ್ನಿಧಿಯ ಹೊರತು ಬೇರೆಲ್ಲೂ ಅಭಯಾಶ್ರಯ ಸಿಗಲಾರದು. ಅಲ್ಲಾಹನ ವಚನ ಮತ್ತು ಅವನ ಸಂದೇಶಗಳನ್ನು ತಲುಪಿಸುವ ಹೊರತು ಬೇರಾವ ಕರ್ತವ್ಯವೂ ನನ್ನ ಮೇಲಿಲ್ಲ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಉಲ್ಲಂಘಿಸುವವರಿಗಾಗಿ ನರಕಾಗ್ನಿ ಇದೆ ಮತ್ತು ಇಂತಹವರು ಅದರಲ್ಲಿ ಸದಾಕಾಲ ಬಿದ್ದಿರುವರು." **(ಅಲ್ ಜಿನ್ನ್: 20–23)**

ಈ ರೀತಿ ಹಾನಿ–ಲಾಭವನ್ನುಂಟು ಮಾಡುವ ಆಯ್ಕೆ ಅಲ್ಲಾಹನದ್ದಾಗಿರುವುದು ಎಂಬ ಪ್ರವಾದಿಯ(ಸ) ಘೋಷಣೆಯಲ್ಲಿ ತೌಹೀದ್(ಏಕದೇವತ್ವ)ನ ಹೊಳಪು ಕಂಡು ಬರುತ್ತದೆ. ಅಲ್ಲಾಹನ ಹಿಡಿತದಿಂದ ಯಾರೂ ಯಾರನ್ನೂ ರಕ್ಷಿಸಲಾರರು. ಕೇವಲ ಅಲ್ಲಾಹನು ಮಾತ್ರ ಆಶ್ರಯದಾತನಾಗಿರುವನು. ಹೀಗೆಂದ ಬಳಿಕ ಸಂದೇಶವಾಹಕರು ತನ್ನ ಹೊಣೆಗಾರಿಕೆಯನ್ನು ಜನರಿಗೆ ಜ್ಞಾಪಿಸುತ್ತಾರೆ ಮತ್ತು ಅಲ್ಲಾಹನ ಸಂದೇಶವನ್ನು ಸ್ವೀಕರಿಸುವುದು ಮತ್ತು ಸ್ವೀಕರಿಸದಿರುವುದರ ಪರಿಣಾಮ ಏನಾಗಿರುತ್ತದೆ ಎಂದು ಅವರು ಜನರಿಗೆ ತಿಳಿಸುವರು.

ಜನರಿಗೆ ಜ್ಞಾನ ಕೊಡುವುದು ಪ್ರವಾದಿಯ ಹೊಣೆಗಾರಿಕೆಯಲ್ಲ ಮತ್ತು ಅವರಿಂದ ಅದನ್ನು ಕೊಡುವುದೂ ಸಾಧ್ಯವಿಲ್ಲ:

ಕೇವಲ ದೇವನ ಸಂದೇಶವನ್ನು ಜನರಿಗೆ ತಲುಪಿಸುವುದು ಮಾತ್ರವೇ ಪ್ರವಾದಿಯವರ(ಸ) ಹೊಣೆಗಾರಿಕೆಯಾಗಿದೆ. ಜನರನ್ನು ನೇರ ಮಾರ್ಗಕ್ಕೆ ತರುವುದು ಅವರ ಹೊಣೆಯಲ್ಲ. ಅವರು ಜನರನ್ನು ನೇರ ಮಾರ್ಗದಲ್ಲಿ ನಡೆಸುವವರಲ್ಲ. ಬದಲಾಗಿ ಜನರು ಸನ್ಮಾರ್ಗದಲ್ಲಾಗಬೇಕೆಂದು ಅದಕ್ಕಾಗಿ ಪ್ರಯತ್ನಿಸುವವರಾಗಿದ್ದಾರೆ. ನೇರ ಮಾರ್ಗದಲ್ಲಿ ಜೀವಿಸಲು ಬಯಸುವ ಮತ್ತು ಪ್ರವಾದಿ(ಸ) ತಂದ ದೈವಿಕ ಮಾರ್ಗದರ್ಶನದಿಂದ ಲಾಭ ಪಡೆದುಕೊಂಡವರನ್ನು ಅಲ್ಲಾಹನು ಮಾತ್ರ ನೇರ ಮಾರ್ಗದಲ್ಲಿ ಮುನ್ನಡೆಸುತ್ತಾನೆ. ಅಲ್ಲಾಹನು ಈ ವಾಸ್ತವಿಕತೆಯನ್ನು ಸ್ಪಷ್ಟಪಡಿಸುವ ಮೂಲಕ ಪ್ರವಾದಿಯವರ(ಸ) ಹೊಣೆಗಾರಿಕೆಯ ಭಾರವನ್ನು ಹಗುರಗೊಳಿಸಿರುವನು.

"ಪ್ರವಾದಿಗಳೇ, ನೀವಿಚ್ಛಿಸಿದವರಿಗೆ ಸನ್ಮಾರ್ಗ ನೀಡಲು ನಿಮ್ಮಿಂದಾಗದು. ಆದರೆ ಅಲ್ಲಾಹನು ತಾನಿಚ್ಛಿಸಿದವರಿಗೆ ಸನ್ಮಾರ್ಗ ನೀಡುತ್ತಾನೆ. ಅವನು ಸನ್ಮಾರ್ಗ ಸ್ವೀಕರಿಸುವವರನ್ನು ಚೆನ್ನಾಗಿ ಅರಿತಿರುತ್ತಾನೆ." **(ಅಲ್ ಕಸಸ್: 56)**

ಸಂದೇಶವಾಹಕರ ಕೆಲಸ ಕೇವಲ ಮುನ್ನೆಚ್ಚರಿಕೆ ನೀಡುವುದು ಮಾತ್ರವಾಗಿದೆ:

ಪ್ರವಾದಿಯ ಕೆಲಸ ಕೇವಲ ಜನರನ್ನು ಉದ್ಬೋಧಿಸುವುದಾಗಿದೆ. ಅವರು ಹೀಗೆ ಜನರನ್ನು ಒಬ್ಬ ದೇವನಲ್ಲಿ ವಿಶ್ವಾಸ ಇರಿಸಿದರೆ ಅದರ ಪರಿಣಾಮ ಏನಾಗಲಿದೆ. ಮತ್ತು ವಿಶ್ವಾಸ ಇರಿಸದಿದ್ದರೆ ಏನಾಗುತ್ತದೆ. ಆ ದೇವನ ವಿಧೇಯತೆಯನ್ನು ಒಪ್ಪಿದರೆ ಮತ್ತು ಒಪ್ಪದಿದ್ದರೆ ಆಗಲಿರುವ ಉತ್ತಮ ಮತ್ತು ಕೆಟ್ಟ ಪರಿಣಾಮಗಳನ್ನು ಜನರಿಗೆ ತಿಳಿಸಿ ಮುನ್ನೆಚ್ಚರಿಕೆ ನೀಡುವರು. ಹೀಗೆ ಸಂದೇಶವಾಹಕರು ಅಲ್ಲಾಹನ ಮಾರ್ಗಕ್ಕೆ ಉದ್ಬೋಧಿಸುವ ಕೆಲಸವನ್ನಷ್ಟೇ ಮಾಡುತ್ತಾರೆ.

"ನೀವು ಕೇವಲ ಎಚ್ಚರಿಕೆ ಕೊಡುವವರಾಗಿದ್ದೀರಿ. ಸಕಲ ಕಾರ್ಯಗಳ ಹೊಣೆಗಾರನು ಅಲ್ಲಾಹನಾಗಿರುತ್ತಾನೆ." **(ಹೂದ್: 12, ಕೊನೆಯಭಾಗ)**

ಸಂದೇಶವಾಹಕರಾಗಿ ಮುಹಮ್ಮದ್‌ರ(ಸ) ಸ್ಥಾನ:

ಅಲ್ಲಾಹನು ತನ್ನ ಪ್ರವಾದಿಯ ಸ್ಥಾನಮಾನಗಳನ್ನು, ಗುಣವೈಶಿಷ್ಟ್ಯಗಳನ್ನು ಅವರ ವಿಶೇಷ ಹೊಣೆಗಾರಿಕೆಗಳನ್ನು ಸ್ಪಷ್ಟವಾಗಿ ಸ್ವತಃ ಪ್ರವಾದಿಗೂ ಮತ್ತು ಅವರ ಅಭಿಸಂಬೋಧಿತರಿಗೂ ತಿಳಿಸುತ್ತಾನೆ, "ಸಂದೇಶವಾಹಕರೇ, ನಾವು ನಿಮ್ಮನ್ನು ಸಾಕ್ಷ್ಯ ನೀಡುವವರಾಗಿ, ಸುವಾರ್ತೆ ನೀಡುವವರಾಗಿ ಮತ್ತು ಎಚ್ಚರಿಕೆ ಮಾಡುವವರಾಗಿ ಮಾಡಿ ಕಳುಹಿಸಿರುತ್ತೇವೆ." **(ಅಲ್ ಫತಹ್: 8)**

ಪ್ರವಾದಿಯ ಹೊಣೆಗಾರಿಕೆ ಎಷ್ಟು:

ಸಂದೇಶವಾಹಕರ ಹೊಣೆಗಾರಿಕೆ ಅಲ್ಲಾಹನ ಆಜ್ಞಾದೇಶಗಳನ್ನು ಅವನ ದಾಸರಿಗೆ ಸುಸ್ಪಷ್ಟವಾಗಿ ತಲುಪಿಸುವುದು ಮಾತ್ರ ಆಗಿದೆ. ದೇವನ ದಿವ್ಯ ಸಂದೇಶವನ್ನು (ವಹ್ಯ್) ಅವರ ಬಳಿಗೆ ದೇವಚರರ ಮೂಲಕ ತಲುಪಿಸಲಾಗುತ್ತದೆ. ಅದನ್ನು ಸಕಲ ದಾಸರಿಗೆ ತಲುಪಿಸುವ ಒಂದು ಮಾಧ್ಯಮ ಸಂದೇಶವಾಹಕರು ಆಗಿದ್ದಾರೆ. ಅಲ್ಲಾಹನು ಅವರ ಕೆಲಸವನ್ನು ತನ್ನ ಗ್ರಂಥದಲ್ಲಿ ವಿವರಿಸಿರುವನು. ಅವನ ಆಜ್ಞಾದೇಶಗಳನ್ನು ಮನುಷ್ಯರೆಡೆಗೆ ತಲುಪಿಸುವುದು ಮಾತ್ರ ಸಂದೇಶವಾಹಕರ ಕೆಲಸ ಮತ್ತು ಅದನ್ನು ಸ್ವೀಕರಿಸದವರನ್ನು ಸ್ವೀಕರಿಸುವಂತೆ ಬಲವಂತಪಡಿಸುವುದು ಅವರ ಕೆಲಸವಲ್ಲ ಎಂದು ವಿವರಿಸುತ್ತಾನೆ. ಇನ್ನೊಂದೆಡೆ ಸಾಮಾನ್ಯ ಮನುಷ್ಯರಿಗೂ ಇದರಿಂದ ಅವನ ಸಂದೇಶವಾಹಕರು ಅವನ ಆದೇಶಗಳನ್ನು ಆಲಿಸುವಂತೆ ನಿಮ್ಮನ್ನು ಬಲವಂತ

ಪಡಿಸಲಾರರು ಎಂಬ ತಿಳುವಳಿಕೆಯಿದೆ. ಕೇವಲ ವಿಶ್ವಾಸ ಇರಿಸಿದರೆ ಮತ್ತು ಇರಿಸದಿದ್ದರೆ ಆಗುವ ಪರಿಣಾಮವನ್ನು ಸಂದೇಶವಾಹಕರು ತಿಳಿಸುವರು. ವಿಶ್ವಾಸ ಇರಿಸಿದರೆ ಸಿಗುವ ಪ್ರತಿಫಲ ಮತ್ತು ವಿಶ್ವಾಸ ಇರಿಸದಿದ್ದರೆ ಸಿಗುವ ಶಿಕ್ಷೆಯನ್ನು ಅವರು ತಿಳಿಸುವರು. ಆದುದರಿಂದ ಸೃಷ್ಟಿಕರ್ತನ ಆದೇಶಗಳನ್ನೊಳಗೊಂಡ ಪ್ರವಾದಿ ಮಾತುಗಳನ್ನು ಕಡೆಗಣಿಸಬಾರದು. ಕ್ಷುಲ್ಲಕ ವಿಚಾರವೆಂದು ಪರಿಗಣಿಸಬಾರದು. ಪ್ರವಾದಿಯ ಹೊಣೆಗಾರಿಕೆಯನ್ನು ಅಲ್ಲಾಹನು ಹೀಗೆ ವಿವರಿಸಿದ್ದಾನೆ.

"ಅನ್ಯಥಾ ಸುವ್ಯಕ್ತವಾಗಿ ಆದೇಶಗಳನ್ನು ತಲುಪಿಸುವುದಕ್ಕಿಂತ ಹೆಚ್ಚಿನ ಹೊಣೆಯೇನೂ ರಸೂಲರ ಮೇಲಿಲ್ಲ." **(ಅನ್ನೂರ್: 54 ಕೊನೆ ಭಾಗ)**

ಆದುದರಿಂದ ಪ್ರವಾದಿಯ ಕೆಲಸ ಅಲ್ಲಾಹನ ಸಂದೇಶವನ್ನು ಜನರೆಡೆಗೆ ತಲುಪಿಸಿ ಅವರು ವಿಶ್ವಾಸವಿರಿಸಿದರೆ ಮತ್ತು ವಿಶ್ವಾಸ ಇರಿಸದಿದ್ದರೆ ಅದರಿಂದಾಗಲಿರುವ ಪರಿಣಾಮಗಳನ್ನು ಜನರಿಗೆ ತಿಳಿಸುವುದು ಆಗಿದೆ:

ಪ್ರವಾದಿಯ ಕೆಲಸ ಸತ್ಯವಚನವನ್ನು ಸ್ವೀಕರಿಸಲೇಬೇಕೆಂದು ಅಭಿಸಂಬೋಧಿತ ಜನ ವಿಭಾಗವನ್ನು ಬಲವಂತ ಪಡಿಸುವುದಲ್ಲ. ಒಂದು ವೇಳೆ ಹಾಗೆ ಮಾಡಿದರೆ ಸ್ವೀಕರಿಸುವ ಮತ್ತು ಸ್ವೀಕರಿಸದಿರುವ ಸ್ವಾತಂತ್ರ್ಯವೇ ಜನರಿಗೆ ಇಲ್ಲದಾಗುತ್ತದೆ. ಕೇವಲ ಜನರ ವರೆಗೆ ಸತ್ಯವಚನವನ್ನು ತಲುಪಿಸುವುದು ಮಾತ್ರ ಪ್ರವಾದಿಯ ಕೆಲಸವಾಗಿದೆ. ಆದುದರಿಂದ ಸ್ವಯಂ ತನ್ನ ಜೀವನವನ್ನು ಸಂದೇಶವಾಹಕರು ಅಡಿಯಿಂದ ಮುಡಿವರೆಗೆ ಸತ್ಯ ವಚನಗಳಂತೆ ರೂಪಿಸಿ ತನ್ನ ಜೀವನವನ್ನೇ ಸಂಪೂರ್ಣ ಸಂದೇಶವಾಗಿ ಪರಿವರ್ತಿಸುತ್ತಾರೆ. ಅವರು ವಿಶ್ವಾಸ ಇರಿಸುವ ವಿಶ್ವಾಸಿಗಳಿಗೆ ಸುವಾರ್ತೆ ನೀಡುತ್ತಾರೆ. ಮತ್ತು ವಿಶ್ವಾಶ ಇರಿಸಲು ನಿರಾಕರಿಸಿದವರಿಗೆ ಮುನ್ನೆಚ್ಚರಿಕೆ ನೀಡುತ್ತಾರೆ. ಇಷ್ಟೇ ಪ್ರವಾದಿಯ ಕೆಲಸವಾಗಿದೆ.

ಪವಿತ್ರ ಕುರ್‌ಆನ್‌ನಲ್ಲಿ ಸಂದೇಶವಾಹಕರ ಹೊಣೆಗಾರಿಕೆಯು ಏನೆಲ್ಲ ಮತ್ತು ಅದು ಎಷ್ಟರವರೆಗಿದೆ ಎಂದು ಅಲ್ಲಾಹನು ಸ್ಪಷ್ಟಪಡಿಸಿರುವನು.

"ವಾಸ್ತವದಲ್ಲಿ ಅಲ್ಲಾಹನ ಸೂಕ್ತಗಳಲ್ಲಿ ವಿಶ್ವಾಸವಿರಿಸದವರಿಗೆ ಅಲ್ಲಾಹನು ಎಂದೆಂದಿಗೂ ಸನ್ಮಾರ್ಗದರ್ಶನ ಮಾಡುವುದಿಲ್ಲ. ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ." **(ಅನ್ನಹ್ಲ್: 104)**

ಇದರಿಂದ ತಿಳಿದು ಬರುವುದೇನೆಂದರೆ ಇಸ್ಲಾಮ್‌ನ ಬೋಧನೆಗಳು ಮತ್ತು ಉಪದೇಶಗಳನ್ನು ಜನರ ಮೇಲಿನ ಪ್ರೀತಿ, ವಿಶ್ವಾಸ, ದಯೆ, ಉಪಕಾರವಾಗಿ ಮತ್ತು ಶಾಂತಿಯುತವಾಗಿ ಜನರಿಗೆ ತಲುಪಿಸಲಾಗುವುದು ಎಂದು ತಿಳಿದು ಬರುತ್ತದೆ.

ಆದರೆ ಈ ಶಾಂತ ಸಂದೇಶ ಪ್ರಚಾರದ ವಿಧಾನಕ್ಕೆ ಕೂಡ ಜನರಲ್ಲಿ ಕೆಲವರು ಅಡೆತಡೆಯನ್ನು ಹುಟ್ಟು ಹಾಕುತ್ತಾರೆ. ಅಶಾಂತಿ ಮತ್ತು ಸಂಘರ್ಷದ ಸ್ಥಿತಿಯನ್ನು ಹುಟ್ಟುಹಾಕುವರು. ಇಸ್ಲಾಮ್ ಖಡ್ಗದ ಮೂಲಕ ಹರಡಿತು ಎಂದು ಪ್ರಚಾರ ಮಾಡಿ ಇಸ್ಲಾಮ್ ಮತ್ತು ಮುಸ್ಲಿಮರ ಮಾನಹಾನಿಗೆ ಪ್ರಯತ್ನಿಸುವರು. ಆದರೆ ಇಂತಹವರು ಇಸ್ಲಾಮಿನ ಗುಣವೇ ಜನರ ಹೃದಯ, ಮೆದುಳಿಗೆ ವ್ಯಾಪಿಸಿ ಆಂತರಿಕ ಜಾಗೃತಿ ಸೃಷ್ಟಿಸುವುದು ಆಗಿದೆ. ಅದು ಖಡ್ಗಗಳನ್ನು ಎತ್ತಿ ಹಿಡಿದು ಕೊರಳನ್ನು ಬಾಗಿಸುವುದಿಲ್ಲ ಎಂದು ತಿಳಿದಿರಲಿ. ಇಸ್ಲಾಮ್ ತನ್ನೆಡೆಗೆ ಬಲವಂತದಿಂದ ಮಣಿಸಲು ನೋಡುವುದಿಲ್ಲ. ಕೇವಲ ಸಂದೇಶವಾಹಕರು ಜನರನ್ನು ಒಳಿತೆನೆಡೆಗೆ ಆಹ್ವಾನಿಸಿದರು.

ಮನುಷ್ಯರ ಸೃಷ್ಟಿಕರ್ತನು ಜನರೆಡೆಗೆ ತನ್ನ ಪ್ರವಾದಿಯನ್ನು ನಿಯೋಜಿಸಿ ನೀಡುವ ಆದೇಶ ಮತ್ತು ಆಹ್ವಾನದಲ್ಲಿ ಯಾವತ್ತೂ ಮನಷ್ಯರ ಒಳಿತು ಅಡಕಗೊಂಡಿರುವುದು ಮತ್ತು ಅದು ಅವರನ್ನೂ ಮನುಷ್ಯತ್ವದ ಉನ್ನತ ಸ್ಥಿತಿಯೆಡೆಗೆ ಅವರನ್ನು ತಲುಪಿಸುವ ಕರೆ ಮತ್ತು ಆದೇಶವಾಗಿರುವುದು.

"ಓ ಸತ್ಯವಿಶ್ವಾಸಿಗಳೇ, ನಿಮಗೆ ಚೇತನ ನೀಡುವಂತಹ ವಿಷಯದ ಕಡೆಗೆ ಅಲ್ಲಾಹ್ ಮತ್ತು ರಸೂಲರು ನಿಮ್ಮನ್ನು ಕರೆದಾಗ ಓಗೊಡಿರಿ. ಅಲ್ಲಾಹ್ ಮನುಷ್ಯನ ಮತ್ತು ಅವನ ಹೃದಯದ ನಡುವೆ ಇದ್ದಾನೆಂದೂ ನೀವು ಅವನ ಕಡೆಗೆ ಒಟ್ಟುಗೂಡಿಸಲ್ಪಡುವಿರೆಂದೂ ಅರಿತುಕೊಳ್ಳಿರಿ." **(ಅಲ್ ಅನ್ಫಾಲ್: 24)**

ಪ್ರತಿಯೊಂದು ಕಾಲದಲ್ಲಿ, ಪ್ರತಿಯೊಂದು ಜಾಗದಲ್ಲಿ, ಪ್ರತಿಯೊಂದು ಸಮುದಾಯಕ್ಕೆ ಮಾರ್ಗದರ್ಶನದ ವ್ಯವಸ್ಥೆ ಮಾಡಲಾಗಿದೆ:

ಏಕೈಕನಾದ ಸೃಷ್ಟಿಕರ್ತನು ಸಕಲ ಪ್ರದೇಶಕ್ಕೆ ಪ್ರವಾದಿಯನ್ನು ನಿಯೋಜಿಸಿದನು. ಪ್ರತಿಯೊಬ್ಬ ಪ್ರವಾದಿಯೂ ಸೃಷ್ಟಿಕರ್ತನ ಕಡೆಯಿಂದ ಒಂದೇ ಸಂದೇಶವನ್ನು ತಂದರು. ಆದುದರಿಂದ ಎಲ್ಲ ಮನುಷ್ಯರ ಪ್ರಕೃತಿ ಒಂದೇ ಆಗಿದೆ ಮತ್ತು ಎಲ್ಲರ ಚಾರಿತ್ರ್ಯ(ನೈತಿಕತೆಯ)ದ ಮೂಲ ತಳಹದಿಯೂ ಸಕಲ ಮನುಷ್ಯರ ಬೇಡಿಕೆ-ಅವಶ್ಯಕತೆಗಳೂ ಸಮಾನವಾಗಿದೆ. ಸೃಷ್ಟಿಕರ್ತನು ಸಕಲರ ಪ್ರಭು. ಅವನು ಎಲ್ಲರನ್ನೂ ಸಮಾನವಾಗಿ ಪ್ರೀತಿಸುವನು. ಎಲ್ಲರಿಗೂ ಒಂದು ಅತ್ಯುತ್ತಮ ವಸ್ತು (ಗ್ರಂಥ) ಕೊಟ್ಟನು. ಇದು ಅವನ ಪ್ರೀತಿ, ನ್ಯಾಯ- ಅನುಗ್ರಹಗಳ ಬೇಡಿಕೆಯೂ ಆಗಿದೆ. ಇದನ್ನು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ.

"ನೀವು ಕೇವಲ ಎಚ್ಚರಿಕೆ ಕೊಡುವವರಾಗಿರುತ್ತೀರಿ. ನಾವು ನಿಮ್ಮನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿ ಸತ್ಯಸಹಿತ ಕಳುಹಿಸಿರುತ್ತೇವೆ. ಎಚ್ಚರಿಕೆ ಕೊಡುವವರಾರು ಬಂದಿರದಂತಹ ಸಮುದಾಯವೊಂದು ಗತಿಸಿಲ್ಲ." **(ಫಾತಿರ್: 23-24)**

ಸೃಷ್ಟಿಕರ್ತನು ಪ್ರವಾದಿಗಳನ್ನು ನಿಯೋಜಿಸುವ ಮೂಲಕ ಪ್ರತಿಯೊಂದು ಕಾಲ, ಸ್ಥಳಗಳ ಜನರಿಗೆ ಮಾರ್ಗದರ್ಶನ ನೀಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿರುವನು. ಈ ಕುರಿತು ಅಲ್ಲಾಹನು ಹೀಗೆ ಹೇಳಿದ್ದಾನೆ.

"ನಾವು ಇದಕ್ಕಿಂತ ಮುಂಚೆ ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೆ ರವಾನಿಸಿದ್ದೆವು. ನಿಮ್ಮ ಜನಾಂಗವನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶಕ್ಕೆ ತರಬೇಕೆಂದೂ ಅವರಿಗೆ ಅಯ್ಯಾಮುಲ್ಲಾಹ್(ದಿವ್ಯದಿನ)ಗಳ ಬೋಧಪ್ರದ ಘಟನೆ ಗಳನ್ನು ಹೇಳಿ ತಿಳಿಸಿ ಉಪದೇಶಿಸಬೇಕೆಂದೂ ನಾವು ಅವರಿಗೂ ಅಪ್ಪಣೆ ಕೊಟ್ಟಿದ್ದೆವು. ಈ ಘಟನೆಗಳಲ್ಲಿ ನಿಶ್ಚಯವಾಗಿಯೂ ಪ್ರತಿಯೊಬ್ಬ ಸಹನಾಶೀಲನಿಗೂ ಕೃತಜ್ಞನಿಗೂ ದೊಡ್ಡ ನಿದರ್ಶನಗಳಿವೆ." (ಇಬ್ರಾಹೀಮ್: 5)

ಮೇಲಿನ ವಚನಗಳಿಂದ ಪ್ರವಾದಿಗಳನ್ನು ನಿದರ್ಶನಗಳ ಸಹಿತ ನಿಯೋಜಿಸ ಲಾಗುತ್ತದೆ ಎಂದು ತಿಳಿದು ಬರುವುದು. ಪ್ರವಾದಿಗಳು ನಿದರ್ಶನಗಳ ಸಹಿತ ಕಳುಹಿಸಲ್ಪಡುವರು. ಪ್ರವಾದಿಗಳು ಪ್ರವಾದಿಯಾಗಿ ಆಯ್ಕೆಯಾಗಿರುವ ಗುರುತುಗಳು ನೇರವಾಗಿ ಅಭಿಸಂಭೋದಿತರ ಮುಂದೆ ಗೋಚರಿಸುವುದಿಲ್ಲ. ಬಹಿರಂಗವಾಗಿ ವ್ಯಕ್ತವಾಗುವುದಿಲ್ಲ. ಅದಕ್ಕೆಂದು ಯಾವುದೇ ವೇದಿಕೆಯಿಲ್ಲ. ಆ ವೇದಿಕೆಗೆ ಹತ್ತಿ ದೇವಚರ ಬಂದು ಇವರು ನಿಮ್ಮ ಪ್ರವಾದಿ ಎಂದು ಘೋಷಣೆ ಮಾಡುವ ವ್ಯವಸ್ಥೆಯಿಲ್ಲ.

ಬದಲಾಗಿ ಪ್ರವಾದಿಯ ಶಿಕ್ಷಣಗಳಲ್ಲಿ ಮತ್ತು ಅವರ ಜೀವನದಲ್ಲಿ ಅವರು ಪ್ರವಾದಿಯೆಂಬ ನಿದರ್ಶನಗಳು ಗಮನಹರಿಸುವವರಿಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರವಾದಿಗಳು ತಾವು ಬೋಧಿಸುವ ಶಿಕ್ಷಣಗಳಂತೆ ಕರ್ಮವೆಸಗುತ್ತಾರೆ. ಇಂತಹ ನಿದರ್ಶನಗಳು ಅವರು ಪ್ರವಾದಿಯೆಂಬುದನ್ನು ಸೂಚಿಸುತ್ತದೆ. ಪ್ರವಾದಿಯ ಜೀವನ ದಲ್ಲಿಯೂ ಅಸಾಮಾನ್ಯ ಅಥವಾ ಅಸ್ವಾಭಾವಿಕ ಘಟನೆಗಳು ಸಂಭವಿಸುವುದಾದರೂ ಜನರ ಹೃದಯವನ್ನು ಅವರ ಶಿಕ್ಷಣಗಳು, ಅವರ ಜೀವನಚರ್ಯೆ, ಅವರ ವ್ಯಕ್ತಿತ್ವ ಸ್ಪರ್ಶಿಸುತ್ತವೆ ಇದು ಅವರು ಪ್ರವಾದಿಯೆಂಬುದನ್ನು ಸೂಚಿಸುವ ಪ್ರಧಾನ ನಿದರ್ಶನ ಗಳು. ಅವರು ನೀಡುವ ತರಬೇತಿಯನ್ನು ಸ್ವೀಕರಿಸಿ ಕರ್ಮವೆಸಗುವ ಜನರ ಜೀವನ ದಲ್ಲಿ ಕ್ರಾಂತಿಕಾರಕವಾದ ಬದಲಾವಣೆಯಾಗುವುದು ಕೂಡ ಅವರು ಅಲ್ಲಾಹನ ಪ್ರವಾದಿ ಆಗಿದ್ದಾರೆ ಎಂಬುದಕ್ಕಿರುವ ದೃಷ್ಟಾಂತವಾಗಿದೆ.

ಬನೀ ಆದಮ್‌ನ (ಆದಮರ ಸಂತತಿಯ) ಮಾರ್ಗದರ್ಶನವು ಒಂದು ಮುಖ್ಯ ಆವಶ್ಯಕತೆಯಾಗಿದ್ದು ಇದು ಸಂಪೂರ್ಣವಾಗಿ ಪ್ರಪಂಚದ ಕೊನೆಯ ಮನುಷ್ಯನವರೆಗೂ ತಲುಪಬೇಕಾಗಿದೆ:

ಭೂಮಿಯಲ್ಲಿ ಮನುಷ್ಯರ ಅಸ್ತಿತ್ವವಿರುವ ವರೆಗೂ ಬನೀ ಆದಮ್ (ಮನುಷ್ಯರ) ಸಂತತಿಗೆ ಮಾರ್ಗದರ್ಶನವು ಆವಶ್ಯಕವಾಗಿರುತ್ತದೆ. ಆದುದರಿಂದ ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಸೃಷ್ಟಿಕರ್ತನು ಮಾಡಿರುವನು. ತಾನು ನಿಯೋಜಿಸಿದ ಪ್ರವಾದಿಯ ಜೀವನದ ಆದರ್ಶವನ್ನು (ಜೀವನಚರ್ಯೆಯನ್ನು) ಮತ್ತು ಮಾರ್ಗದರ್ಶಕ ಗ್ರಂಥ ವಾದ ಪವಿತ್ರ ಕುರ್‌ಆನನ್ನು ಲೋಕಾಂತ್ಯದವರೆಗೆ ಸುರಕ್ಷಿತ ಗೊಳಿಸಿದನು ಮತ್ತು ಈ ರೀತಿ ಅದರಿಂದ ಜನರು ಮಾರ್ಗದರ್ಶನ ಪಡೆಯುವಂತಹ ವ್ಯವಸ್ಥೆಯನ್ನು ಸೃಷ್ಟಿಕರ್ತನು ಮಾಡಿರುವನು. ತನ್ನ ಮಾರ್ಗದರ್ಶನ ವ್ಯವಸ್ಥೆಯೊಳಗೆ ಅಡಕವಾದ ಯುಕ್ತಿಯನ್ನು ತನ್ನ ಗ್ರಂಥದಲ್ಲಿ ಸೃಷ್ಟಿಕರ್ತನು ಹೀಗೆ ವಿವರಿಸಿದ್ದಾನೆ.

"ಇಬ್ಲೀಸನಿಗೆ ಅವರ ಮೇಲೇನೂ ಅಧಿಕಾರ ಪ್ರಾಪ್ತವಿರಲಿಲ್ಲ. ಆದರೆ ಪರಲೋಕ ವನ್ನು ನಂಬುವವನಾರು ಮತ್ತು ಅದರ ಬಗ್ಗೆ ಸಂಶಯಗ್ರಸ್ತನಾರು ಎಂದು ನಾವು ತಿಳಿಯ ಬಯಸಿದುದರಿಂದ ಹೀಗೆಲ್ಲ ಆಯಿತು. ನಿನ್ನ ಪ್ರಭು ಪ್ರತಿಯೊಂದು ವಿಷಯದ ಮೇಲ್ನೋಟವುಳ್ಳವನಾಗಿರುತ್ತಾನೆ." **(ಸಬಾ: 28)**

ಮನುಷ್ಯರ ಮಾರ್ಗದರ್ಶನಕ್ಕಾಗಿ ದೈವಿಕ ಶಿಕ್ಷಣದ ಕ್ರಿಯಾರೂಪದ (ಕರ್ಮಗಳ ಮೂಲಕ) ಮಾದರಿಯನ್ನು ಪ್ರಸ್ತುತಪಡಿಸುವುದು ಸೂಕ್ತ ಮತ್ತು ಸ್ವೀಕಾರ ಯೋಗ್ಯ ವಾಗಿರುತ್ತದೆ. ಆದುದರಿಂದ ಇದಕ್ಕಾಗಿ ಒಬ್ಬ ವ್ಯಕ್ತಿಯನ್ನು ಜನರ ಮಧ್ಯದಿಂದಲೇ ಆಯ್ಕೆ ಮಾಡುವುದು ಮತ್ತು ಆ ವ್ಯಕ್ತಿಗೆ ಮಾರ್ಗದರ್ಶನ ಮಾಡುವುದು ಮತ್ತು ವ್ಯಕ್ತಿಯನ್ನು ಮನುಷ್ಯರ ನಡುವೆ ಸಂದೇಶ ತಲುಪಿಸಲು ಕಳಿಸುವುದು. ಆ ವ್ಯಕ್ತಿ ಜೀವನದ ಮಾದರಿ (ಚರ್ಯೆ) ಉನ್ನತ ಗುಣಮಟ್ಟದ್ದು ಮತ್ತು ಜನರ ಸ್ವೀಕಾರಕ್ಕೆ ಅರ್ಹವೂ ಆಗಿರುತ್ತದೆ.

"ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಮನುಷ್ಯರನ್ನೇ ಸಂದೇಶ ವಾಹಕರಾಗಿ ರವಾನಿಸಿದ್ದೆವು. ಅವರ ಮೇಲೆ ನಾವು ದಿವ್ಯವಾಣಿ ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ಗ್ರಂಥದವರೊಡನೆ ಕೇಳಿರಿ. ನಾವು ಆ ಸಂದೇಶವಾಹಕರಿಗೆ ಆಹಾರವನ್ನು ಸೇವಿಸದಂತಹ ಶರೀರವನ್ನು ನೀಡಿರಲಿಲ್ಲ ಮತ್ತು ಅವರು ಸದಾ ಕಾಲ ಬದುಕುವವರೂ ಆಗಿರಲಿಲ್ಲ." **(ಅಲ್ ಅಂಬಿಯ: 7–8)**

ತಾನು ಸೃಷ್ಟಿಕರ್ತನ ಪ್ರವಾದಿ ಮತ್ತು ಸೃಷ್ಟಿಕರ್ತನ ಗ್ರಂಥವನ್ನು ತಂದಿರುವೆನೆಂದು ಘೋಷಿಸಿದರೆ ಅವನ ಮಾತನ್ನು ಕ್ಷುಲ್ಲಕವೆಂದು ಕಡೆಗಣಿಸುವಂತಿರುವುದಿಲ್ಲ. ಒಂದು ವೇಳೆ ಅವನು ನಿಜವನ್ನೇ ಹೇಳುತ್ತಿದ್ದರೆ, ನಿಜಕ್ಕೂ ಅವನೇ ಸೃಷ್ಟಿಕರ್ತನ ಪ್ರವಾದಿಯಾಗಿದ್ದರೆ ಅವನಲ್ಲಿ ವಿಶ್ವಾಸ ಇರಿಸುವುದರಿಂದ ಸಿಗುವ ಇಹಪರದ ಯಶಸ್ಸು ನಷ್ಟವಾಗುತ್ತದೆ. ಅವನನ್ನು ನಿರಾಕರಿಸುವುದು ಇಹಪರಗಳಲ್ಲಿ ಕೊರತೆಯಾಗಿಯೇ ಉಳಿಯುತ್ತದೆ.

ಅವನು ತನ್ನ ಹಕ್ಕುವಾದಕ್ಕೆ ಸಾಕ್ಷಿಯಾಗಿ ತನ್ನ ಜೀವನವನ್ನು ತೆರೆದಿಡುತ್ತಾನೆ. ತಾನು ತಂದಿರುವ ಗ್ರಂಥದ ಶಿಕ್ಷಣಗಳ ಪ್ರಕಾರ ತನ್ನ ಜೀವನ ಚರ್ಯೆ ಇದೆಯೇ ಎಂದು ನೋಡಿರಿ ಎಂದು ಜನರಿಗೆ ಹೇಳುತ್ತಾನೆ. ಅಲ್ಲಾಹನ ಗ್ರಂಥ ಜನರ ಒಳಿತಿಗಾಗಿರುವುದಾಗಿದೆ. ನೀವು ಓದಿರಿ. ಚಿಂತಿಸಿರಿ. ನಿಮಗೆ ಅದು ಅಲ್ಲಾಹನ ಗ್ರಂಥವೇ ಅಲ್ಲವೆ ಎಂದು ಮನವರಿಕೆಯಾಗುವುದು ಎಂದು ಜನರನ್ನು ಆಹ್ವಾನಿಸುತ್ತಾನೆ. ನೀವೇ ಅವಲೋಕಿಸಿ ಇದರಲ್ಲಿ ಏನಾದರೂ ವಿರೋಧಾಭಾಸಗಳಿವೆಯೇ. ಅಲ್ಲಾಹನ ಹೊರತು ಇನ್ನಾರದೆ ಗ್ರಂಥಗಳಾಗಿದ್ದರೆ ವಿರೋಧಾಭಾಸಗಳಿರುತ್ತಿದ್ದವು. ಈ ರೀತಿ ತನಗೆ ಅವತೀರ್ಣವಾಗಿರುವ ಗ್ರಂಥ ಮತ್ತು ತನ್ನ ಜೀವನ ಚರ್ಯೆ ಮೇಲೆ ಚಿಂತನೆ, ಅವಲೋಕ ನಡೆಸಿರಿ ಎಂದು ಸೃಷ್ಟಿಕರ್ತನಿಂದ ಕಳುಹಿಸಲ್ಪಟ್ಟ ನಿಜವಾದ ಪ್ರವಾದಿ ಜನರಿಗೆ ಕರೆ ನೀಡುತ್ತಾನೆ.

"ಇವರೇನು ಕುರ್‌ಆನಿನ ಬಗ್ಗೆ ಚಿಂತನೆ ನಡೆಸುವುದಿಲ್ಲವೇ? ಇದು ಅಲ್ಲಾಹನ ಹೊರತು ಇನ್ನಾರ ಕಡೆಯಿಂದಾದರೂ ಆಗಿರುತ್ತಿದ್ದರೆ ಇದರಲ್ಲಿ ಅನೇಕ ವಿರೋಧಾಭಾಸ ಗಳು ಕಂಡು ಬರುತ್ತಿದ್ದವು." (ಅನ್ನಿಸಾ: 82)

ಸೃಷ್ಟಿಕರ್ತನು ಕಳುಹಿಸಿದ ಪ್ರವಾದಿಯನ್ನು ಗುರುತಿಸುವ, ತಿಳಿಯುವ ಮತ್ತು ವಿಶ್ವಾಸ ಇರಿಸುವ ಮತ್ತು ಅವರ ಮಾರ್ಗದರ್ಶನಕ್ಕೆ ತಮ್ಮನ್ನು ಅರ್ಪಿಸುವುದರಿಂದ ಹಾಗೂ ಅವರಿಗೆ ವಿಧೇಯವಾಗುವುದರಿಂದ (ಅನುಸರಿಸುವುದರಿಂದ) ಸ್ಪಷ್ಟ ಮತ್ತು ಸರಿಯಾದ ಮಾರ್ಗದರ್ಶನ ಮತ್ತು ತೃಪ್ತಿಯು ದೊರಕುತ್ತದೆ. ಈ ಪ್ರವಾದಿಯನ್ನು ಪೂರ್ವಗ್ರಹ ರಹಿತ ರೀತಿಯಲ್ಲಿ ಅವಲೋಕಿಸುವುದಾದರೆ ಬಹಳ ಸುಲಭವಾಗಿ ಗುರುತಿಸಲು ಸಾಧ್ಯವಿದೆ.

ಸಂದೇಶವಾಹಕರ ವಿಶೇಷತೆ: ಕೊನೆಯ ಪ್ರವಾದಿ:

ಪ್ರವಾದಿ ಮುಹಮ್ಮದ್‌ರ(ಸ) ನಿಯೋಜನೆಯೊಂದಿದೆ ಸಂದೇಶವಾಹಕರ ಆಗಮನದ ಸರಣಿ ಕೊನೆಗೊಳಿಸಲಾಗಿದ್ದು, ಕೊನೆಯ ಪ್ರವಾದಿ ಮುಹಮ್ಮದ್‌ರು(ಸ) ಆಗಿದ್ದಾರೆ. ಅವರು ತಂದಿರುವ ಸಂದೇಶದಲ್ಲಿ ವಿಶ್ವಾಸ ಇರಿಸಿ ಕರ್ಮವೆಸಗುವುದೊಂದೇ ಜನರ ವಿಜಯಕ್ಕಿರುವ (ಯಶಸ್ಸಿನ) ಮಾರ್ಗವಾಗಿದ್ದು ಅಲ್ಲಾಹನು ತಾನು ಅವತೀರ್ಣ ಗೊಳಿಸಿದ ಗ್ರಂಥಗಳಲ್ಲಿ ಅತೀ ಕೊನೆಯ ಆವೃತ್ತಿ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಘೋಷಿಸಿರುವನು...

"ಜನರೇ, ಮುಹಮ್ಮದ್‌ರು ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ. ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ

ಕೊನೆಯವರಾಗಿರುತ್ತಾರೆ. ಅಲ್ಲಾಹನು ಸಕಲ ವಸ್ತುಗಳ ಪರಿಜ್ಞಾನವುಳ್ಳವನು."

(ಅಲ್ ಅಹ್ಝಾಬ್: 40)

ಪ್ರವಾದಿ ಮುಹಮ್ಮದ್‌ರು(ಸ) ಕೊನೆಯ ಸಂದೇಶವಾಹಕ ಆಗಿರುವುದರಿಂದ ವಿಶ್ವವು ಅಸ್ತಿತ್ವದಲ್ಲಿರುವ ವರೆಗೂ ಬರುವ ಇರುವ ಸಕಲ ಮನಷ್ಯರ ಅವರೇ ನಾಯಕರು ಹಾಗೂ ಮಾರ್ಗದರ್ಶಕ ಆಗಿರುವರೆಂದು ಸಂದೇಶವಾಹಕರನ್ನಾಗಿ ಅವರನ್ನು ನಿಯೋಜಿಸಿದ ಅಲ್ಲಾಹನೇ ಅದನ್ನು ಬಹಿರಂಗಪಡಿಸಿರುವನು.

"ಮತ್ತು (ಇವರ ಸಂದೇಶವಾಹಕತ್ವವು) ಅವರನಿನ್ನೂ ಭೇಟಿಯಾಗಿರದ ಇತರ ಜನರಿಗೂ ಅನ್ವಯಿಸುತ್ತದೆ. ಅಲ್ಲಾಹನು ಪ್ರಬಲನೂ ಯುಕ್ತಿಪೂರ್ಣನೂ ಅಗಿರುತ್ತಾನೆ."

(ಅಲ್ ಜುಮುಅಃ: 3)

❖ ❖ ❖ ❖

ಅಧ್ಯಾಯ 5

ವಿಶ್ವ ಸಾಮ್ರಾಟನೇ ನೈಜ ಆರಾಧ್ಯನು

ಪ್ರಪಂಚದ ಸೃಷ್ಟಿಕರ್ತನ ಹೆಸರು 'ಅಲ್ಲಾಹ್' ಎಂದಾಗಿದೆ

ಪ್ರಪಂಚದ ಸೃಷ್ಟಿಕರ್ತನು ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ತನ್ನ ಹೆಸರನ್ನು ಅಲ್ಲಾಹನೆಂದು ಪರಿಚಯಿಸಿರುವನು. ನಾವು ಪವಿತ್ರ ಕುರ್‌ಆನಿನ ಹಲವು ವಚನಗಳಲ್ಲಿ ಇದೇ ಹೆಸರನ್ನು ನೋಡುತ್ತೇವೆ. ಆದ್ದರಿಂದ ನಮ್ಮ ಇನ್ನೂ ಮುಂದಿನ ವಿವರಣೆಗಳಲ್ಲಿ ಸ್ವಯಂ ಸೃಷ್ಟಿಕರ್ತನೇ ತಿಳಿಸಿರುವಂತೆ ಅವನನ್ನು ಅಲ್ಲಾಹ್ ಎಂದೇ ಸಂಬೋಧಿಸುವೆವು. ಕೆಲವರು ತಮ್ಮ ಸ್ವಂತ ಇಷ್ಟ ಪ್ರಕಾರ ಅವನಿಗೆ ಹೆಸರಿರಿಸಿಕೊಂಡು ಆ ಹೆಸರಿನಿಂದ ಅವನನ್ನು ಸ್ಮರಿಸುತ್ತಾರೆ. ಹೀಗೆ ಮಾಡುವುದು ಸರಿಯಲ್ಲ ತಪ್ಪಾಗುವುದು ಮತ್ತು ಸ್ವೇಚ್ಛಾ ವರ್ತನೆ ಆಗುವುದು. ಇತರರು ನಮ್ಮ ಹೆಸರಿನ ಬದಲಾಗಿ ಬೇರೆ ಹೆಸರಿನಿಂದ ನಮ್ಮನ್ನೇ ಕರೆಯುವುದು ನಮಗೆ ಸರಿಯೆಂದು ಅನಿಸುವುದಿಲ್ಲ. ಹಾಗೆ ಕರೆದವರ ಕಡೆಗೆ ನಾವು ಗಮನಹರಿಸುವುದಿಲ್ಲ.

ಅದರಂತೆ ನಮ್ಮ ಸೃಷ್ಟಿಕರ್ತ, ಆರಾಧ್ಯನ ಹೆಸರು ಅಲ್ಲಾಹ್ ಎಂದಾಗಿದ್ದು ಅವನನ್ನು ಅದೇ ಹೆಸರಿನಿಂದ ನಾವು ಕರೆದರೆ ನಮ್ಮತ್ತ ಅವನು ಗಮನ ನೀಡುವನು. ಅಲ್ಲಾಹನ ನಾಮದಲ್ಲಿ ಅಲ್ಲಾಹನನ್ನು ಕರೆದಾಗ ಅವನ ಪರಿಪೂರ್ಣ ವ್ಯಕ್ತಿತ್ವ ಮತ್ತು ಅಸ್ತಿತ್ವಗಳು ಅವನ ಸಕಲ ಗುಣಗಳೊಂದಿಗೆ ಅವನ ಸರ್ವ ಸಾಮರ್ಥ್ಯದೊಂದಿಗೆ ಅವನನ್ನು ಕೂಗಿ ಕರೆದಂತೆ ಆಗುವುದು. ಆಗ ದಾಸರ ಕಡೆಗೆ ಅವನ ದಯಾದೃಷ್ಟಿಯು ಸಂಪೂರ್ಣ ಅನುಗ್ರಹಗಳ ಸಹಿತ ಹರಿಯುವುದು. ಯಾಕೆಂದರೆ ಸೃಷ್ಟಿಕರ್ತನೇ ನೈಜ ಆರಾಧ್ಯನು ಮತ್ತು ಅವನ ಹೆಸರು ಅಲ್ಲಾಹ್. ಆದುದರಿಂದ ಅಲ್ಲಾಹ್ ಎಂದೇ ನೈಜ ಆರಾಧ್ಯನನ್ನು ಕರೆಯಬೇಕಾಗಿದೆ.

ಪವಿತ್ರ ಕುರ್‌ಆನ್ ನೈಜ ಆರಾಧ್ಯನ ಹೆಸರನ್ನು ಈ ರೀತಿ ವಿವರಿಸಿದೆ, "ಜನರೇ, ನಿಮ್ಮ ದೇವನು ಏಕ ಮಾತ್ರ ಅಲ್ಲಾಹನಾಗಿದ್ದು ಅವನ ಹೊರತು ಅನ್ಯ ದೇವನಾರೂ ಇಲ್ಲ. ಅವನ ಜ್ಞಾನವು ಸಕಲ ವಸ್ತುಗಳನ್ನು ಆವರಿಸಿಕೊಂಡಿದೆ." **(ತಾಹಾ: 98)**

ಇನ್ನೊಂದು ಕಡೆ ಹೀಗೆ ತಿಳಿಸುತ್ತದೆ, "ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅಗೋಚರವಾದ ಮತ್ತು ಗೋಚರವಾಗಿರುವ ಎಲ್ಲವನ್ನೂ ಬಲ್ಲವನು. ಅವನೇ ಪರಮ ದಯಾಮಯನೂ ಕರುಣಾನಿಧಿಯೂ ಆಗಿರುತ್ತಾನೆ." (ಅಲ್ ಹಶ್ರ್: 22)

ಆರಾಧ್ಯನ ನೈಜ ಗುಣವೈಶಿಷ್ಟ್ಯಗಳು

ಆರಾಧ್ಯನಲ್ಲಿ ನಾವು ಹುಡುಕುತ್ತಿರುವ ಆರಾಧ್ಯನ ವಿಶಿಷ್ಟ ಗುಣಗಳು ಅರ್ಥಾತ್ ಗುಣವೈಶಿಷ್ಟ್ಯಗಳು ನಮಗೆ ದೈವಿಕ ಗ್ರಂಥದಿಂದ ಮಾತ್ರ ದೊರೆಯುವುದು ಮತ್ತು ಆ ದೈವಿಕ ಗ್ರಂಥದ ಹೆಸರು ಪವಿತ್ರ ಕುರ್‌ಆನ್ ಎಂದಾಗಿದೆ.

ಈ ಗ್ರಂಥವು ತನ್ನನ್ನೇ ಸ್ವಯಂ ತಾನು ಪ್ರಪಂಚ ಸೃಷ್ಟಿಕರ್ತನ ಗ್ರಂಥವೆಂದು ವಾದಿಸುತ್ತಿದೆ. ನಮ್ಮ ಇದೇ ಪುಸ್ತಕದ ಎರಡನೇ ಅಧ್ಯಾಯದಲ್ಲಿ ಪವಿತ್ರ ಕುರ್‌ಆನಿನ ವಾಸ್ತವಿಕತೆಗಳನ್ನು ನಾವು ಚರ್ಚಿಸಿದ್ದೇವೆ ಮತ್ತು ಮನವರಿಕೆ ಮಾಡಿಕೊಂಡು ನಾವು ತೃಪ್ತರಾದೆವು.

ನನ್ನ ಮೊದಲ ಕೃತಿ 'ಖಾಲಿಕೆ ಕಾಯಿಕಾತ್ ಕಾ ಹಕೀಕತ್ ಪಸಂದಾನಾ ತಸವ್ವುರ್'ನಲ್ಲಿ (ಸೃಷ್ಟಿಕರ್ತನ ವಾಸ್ತವಿಕತೆ) ತಾರ್ಕಿಕ ಕಾರಣಗಳೊಂದಿಗೆ ಆರಾಧ್ಯನ ಗುಣಗಳನ್ನು ಚರ್ಚಿಸಿ ತೃಪ್ತರಾಗಿದ್ದೇವೆ. ಅವನ ಗುಣವೈಶಿಷ್ಟ್ಯಗಳು ಪವಿತ್ರ ಕುರ್‌ಆನ್ ನಲ್ಲಿ ಕೇವಲ ಉಲ್ಲೇಖದ ರೂಪದಲ್ಲಿ ಅಲ್ಲ, ಬದಲಾಗಿ ಅದು ಪುರಾವೆಗಳ ಸಹಿತ ಉದ್ಧರಿಸಲ್ಪಟ್ಟಿವೆ.

ಪ್ರಸ್ತುತ ಕೃತಿ(ಸೃಷ್ಟಿಕರ್ತನ ವಾಸ್ತವಿಕತೆ)ಯಲ್ಲಿ ವಿವರಿಸಲಾದ ಮನುಷ್ಯರನ್ನು ಸೃಷ್ಟಿಸಿದ ಸೃಷ್ಟಿಕರ್ತನ ಗುಣವೈಶಿಷ್ಟ್ಯಗಳು, ಈ ಪುಸ್ತಕದ ಅಧ್ಯಾಯ ಒಂದರಲ್ಲಿರುವ ತನ್ನ ಗ್ರಂಥ ಪವಿತ್ರ ಕುರ್‌ಆನಿನಲ್ಲಿ ಮನುಷ್ಯರ ಸೃಷ್ಟಿಕರ್ತ ಮತ್ತು ಆರಾಧ್ಯನಿಂದ ತನ್ನ ಸ್ವಪರಿಚಯ ಎಂಬ ಅಧ್ಯಾಯದಲ್ಲಿ ಬಂದಿವೆ.

ಮನುಷ್ಯನ ಸೃಷ್ಟಿಕರ್ತ ಮತ್ತು ಆರಾಧ್ಯನು ತನ್ನ ಪವಿತ್ರ ಕುರ್‌ಆನಿನಲ್ಲಿ ತನ್ನನ್ನು ಸ್ವಯಂ ಪರಿಚಯಿಸಿಕೊಂಡಿರುವನು. ಆದುದರಿಂದ ಅವನು ಎಷ್ಟು ಸಾಮಾನ್ಯ ರೀತಿಯಿಂದ ಮತ್ತು ಎಷ್ಟು ಆಕರ್ಷಕವಾಗಿ ಪರಿಚಯಿಸಿಕೊಂಡಿರುವನು ಎಂಬುದನ್ನು ನಾವು ನೋಡೋಣ.

ಆರು (6) ಆರಾಧ್ಯ ಎಂಬುದಕ್ಕೆ ಇರುವ ಪ್ರಥಮ ಗುಣವಿಶೇಷತೆಗಳು (ಪ್ರೈಮ್ ಕ್ರೈಟೀರಿಯ):

ಆರು ಗುಣಗಳೊಳಗೆಯೇ ಇನ್ನೂ ಬಹಳಷ್ಟು ಗುಣಗಳು ಅಡಕವಾಗಿವೆ.

1) ಆರಾಧ್ಯನಾಗಲು ಅವನು ವಿಶ್ವ ಮತ್ತು ಮಾನವರನ್ನು ಸೃಷ್ಟಿಸಿದ ಸೃಷ್ಟಿಕರ್ತನಾಗಿರುವುದು ಅತ್ಯವಶ್ಯಕವಾಗಿದೆ.

ಆರಾಧ್ಯನಾಗಿರುವುದಕ್ಕಿರುವ ಪ್ರಥಮ ಆರು ಗುಣವಿಶೇಷತೆಗಳು: ಸೃಷ್ಟಿಕಾರ್ಯ ಮಾಡಿದವನೇ ಆರಾಧ್ಯನಾಗುತ್ತಾನೆ. ಆದುದರಿಂದ ಆರಾಧ್ಯನಾಗುವುದಕ್ಕೆ ಇರುವ ಮೊದಲ ಗುಣವೈಶಿಷ್ಟ್ಯ ಅವನು ಮನುಷ್ಯರನ್ನು ಮತ್ತು ವಿಶ್ವವನ್ನು ಸೃಷ್ಟಿಸಿದವನು ಆಗಿರಬೇಕು. ಪವಿತ್ರ ಕುರ್‌ಆನ್ ಹೇಳುತ್ತದೆ,

"ನಿಮ್ಮ ಮಾತೆಯರ ಗರ್ಭಗಳಲ್ಲಿ ತನಗಿಷ್ಟ ಬಂದ ರೂಪವನ್ನು ನಿಮಗೆ ಕೊಡುವಾತನು ಅವನೇ. ಪ್ರಬಲನೂ ಯುಕ್ತಿಪೂರ್ಣನೂ ಆಗಿರುವ ಅವನ ಹೊರತು ಅನ್ಯ ಆರಾಧ್ಯನಿಲ್ಲ." (ಆಲಿ ಇಮ್ರಾನ್: 6)

ಮೇಲಿನ ವಚನಗಳಿಂದ ಯಾರು ನಮಗೆ ಅಸ್ತಿತ್ವ ಕೊಟ್ಟನೋ ಅವನೇ ಆರಾಧನೆಗೆ ಅರ್ಹನು, ಸಾಷ್ಟಾಂಗವೆರಗಲು ಅರ್ಹನು ಎಂದು ತಿಳಿದು ಬರುತ್ತದೆ.

ಪವಿತ್ರ ಕುರ್‌ಆನ್ ಸೃಷ್ಟಿಕಾರ್ಯದ ಕುರಿತು ವಿವರವಾಗಿ ಮತ್ತಷ್ಟು ಚರ್ಚಿಸುತ್ತಿದೆ. ನೋಡಿರಿ.

"ಸಂದೇಶವಾಹಕರೇ, ಇವರೊಡನೆ (ಹೀಗೆ) ಹೇಳಿರಿ: ನೀವು ಅಲ್ಲಾಹನನ್ನು ಬಿಟ್ಟು ಪ್ರಾರ್ಥಿಸುತ್ತಿರುವವುಗಳು ಏನಾಗಿರುತ್ತವೆ ಎಂಬುದನ್ನು ನೀವು ಕಣ್ತೆರೆದು ನೋಡಿದಿರಾ? ಅವರು ಈ ಭೂಮಿಯಲ್ಲಿ ಏನನ್ನು ಸೃಷ್ಟಿಸಿದ್ದಾರೆಂಬುದನ್ನು ಅಥವಾ ಆಕಾಶಗಳ ಸೃಷ್ಟಿ ಹಾಗೂ ನಿರ್ವಹಣೆಯಲ್ಲಿ ಅವರದ್ದೇನಾದರೂ ಪಾಲಿದೆಯೇ ಎಂಬುದನ್ನು ನನಗೆ ತೋರಿಸುವಿರಾ? ನೀವು ಸತ್ಯವಾದಿಗಳಾಗಿದ್ದರೆ ಇದಕ್ಕಿಂತ ಮುಂಚೆ ಬಂದ ಯಾವುದಾದರೂ ಗ್ರಂಥ ಅಥವಾ ಜ್ಞಾನದ ಯಾವುದಾದರೂ ಪಳೆಯುಳಿಕೆಯು (ಈ ನಿಮ್ಮ ನಂಬಿಕೆಗಳಿಗೆ ಆಧಾರವಾಗಿ) ನಿಮ್ಮ ಬಳಿಯಲ್ಲಿದ್ದರೆ ಅದನ್ನೇ ತನ್ನಿರಿ. ಅಲ್ಲಾಹನನ್ನು ಬಿಟ್ಟು ಪುರುತ್ಥಾನದ ದಿನದ ವರೆಗೂ ಅವನಿಗೆ ಉತ್ತರ ಕೊಡಲಾಗದಂತಹವರನ್ನು ಪ್ರಾರ್ಥಿಸುವವನಿಗಿಂತಲೂ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಮಾತ್ರಲ್ಲ, ಅವರಿಗಂತೂ ಪ್ರಾರ್ಥಿಸುವವರು ತಮ್ಮನ್ನು ಪ್ರಾರ್ಥಿಸುತ್ತ ಇದ್ದಾರೆಂಬ ಅರಿವು ಕೂಡಾ ಇಲ್ಲ. ಸಕಲ ಮಾನವರೂ ಒಟ್ಟುಗೂಡಿಸಲ್ಪಡುವಂದು ಅವರು ತಮ್ಮನ್ನು ಪ್ರಾರ್ಥಿಸುತ್ತಿದ್ದವರ ಶತ್ರುಗಳಾಗಿ ಬಿಡುವರು ಮತ್ತು ಅವರು ತಮ್ಮನ್ನು ಆರಾಧಿಸುತ್ತಿದ್ದರೆಂಬುದನ್ನೇ ನಿರಾಕರಿಸಿ ಬಿಡುವರು." (ಅಲ್ ಅಹ್‌ಕಾಫ್: 4–6)

ಆರಾಧ್ಯನ ಗುಣವೈಶಿಷ್ಟ್ಯತೆಗಳಲ್ಲಿ ಪ್ರಮುಖವಾದುದು ಅವನು ನಡೆಸುವ ಸೃಷ್ಟಿ ಕಾರ್ಯವಾಗಿದ್ದು ಅಲ್ಲಾಹನನ್ನು ಹೊರತುಪಡಿಸಿ ಇತರ ಯಾರಿಂದಲೂ ಆ ಕಾರ್ಯ

ಸಾಧ್ಯವಿಲ್ಲ. ಇನ್ನು ಜನರು ತಮ್ಮ ಆರಾಧ್ಯನಾಗಿಸಿರುವವರಿಗಾಗಲಿ ಅಥವಾ ತಮ್ಮ ಆರಾಧ್ಯನಾಗುವುದಕ್ಕೆ ಸೂಕ್ತವೆಂದೋ ಸಮರ್ಥವೆಂದೋ ಹಾಗೂ ಆರಾಧಿಸಲ್ಪಡುವ ಅರ್ಹತೆ ಇದೆ ಎಂದೋ ತಿಳಿದುಕೊಂಡ ಬೇರೆ ಯಾವುದೇ ಅಸ್ತಿತ್ವದಲ್ಲಿ ಸೃಷ್ಟಿ ಕಾರ್ಯದ ಗುಣ ವ್ಯಕ್ತವಾಗುವುದಿಲ್ಲ. ಈ ಕುರಿತು ಪವಿತ್ರ ಕುರ್‌ಆನ್ ಯಾವುದೇ ದುರ್ಬಲ ಮತ್ತು ಅಸಹಾಯಕ ಅಸ್ತಿತ್ವಕ್ಕೆ ಆರಾಧ್ಯನಾಗುವ ಹಕ್ಕು, ಯೋಗ್ಯತೆಗಳಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದೆ.

"ಅವನು ಭೂಮಿ–ಆಕಾಶಗಳ ಪ್ರಭುತ್ವದ ಒಡೆಯನು. ಅವನು ಯಾರನ್ನೂ ಪುತ್ರನಾಗಿಸಿಕೊಂಡಿಲ್ಲ. ಅವನ ಜೊತೆ ಪ್ರಭುತ್ವದಲ್ಲಿ ಯಾರೂ ಸಹಭಾಗಿ ಇಲ್ಲ. ಅವನು ಪ್ರತಿಯೊಂದು ವಸ್ತುವನ್ನೂ ಸೃಷ್ಟಿಸಿದನು. ಆನಂತರ ಅದಕ್ಕೊಂದು ವಿಧಿ ನಿಯಮವನ್ನು ನಿಶ್ಚಯಿಸಿದನು." **(ಅಲ್ ಫುರ್ಕಾನ್: 3)**

ಸೃಷ್ಟಿಸಲ್ಪಡುವ ಅಸ್ತಿತ್ವವಾಗಲಿ ಅಥವಾ ಸೃಷ್ಟಿಗಳಾಗಲಿ ಮಾನವರ ಆರಾಧ್ಯನಾಗಲಾರರು: ಆಲಿಸಲಾಗದ, ಲಾಭ–ನಷ್ಟವುಂಟು ಮಾಡುವ ಶಕ್ತಿಯಿಲ್ಲದವರು ಹೇಗೆ ಆರಾಧ್ಯ ನಾಗಲು ಸಾಧ್ಯ? ಸೃಷ್ಟಿಕಾರ್ಯ ಮಾಡುವವನಿಗೆ, ಸೃಷ್ಟಿಗಳಿಗೆ ಮಾರ್ಗದರ್ಶನ ಮಾಡು ವವನಿಗೆ ಮಾತ್ರ ಆರಾಧ್ಯನಾಗುವ ಮತ್ತು ಆರಾಧಿಸಲ್ಪಡುವ ಹಕ್ಕು ಇದೆ. (ಮಾರ್ಗ ದರ್ಶನವು ಆರಾಧ್ಯನ ಮುಖ್ಯ ಗುಣಗಳಲ್ಲಿ ಒಂದಾಗಿದ್ದು ಜೊತೆಗೆ ಮಾರ್ಗದರ್ಶನ ಸಿಗುವುದು ಮನುಷ್ಯರ ಮುಖ್ಯ ಬೇಡಿಕೆಯಾಗಿದೆ). ಪರಿ ಪಾಲಿಸುವ, ಗುಣಪಡಿಸುವ ಮತ್ತು ಪಾಪಗಳನ್ನು ಕ್ಷಮಿಸುವ ಶಕ್ತಿಯಿರುವವನಿಗೇ ಆರಾಧ್ಯನಾಗುವ ಹಕ್ಕಿದೆ.

ಈ ವಾಸ್ತವಿಕತೆಯನ್ನು ಪವಿತ್ರ ಕುರ್‌ಆನ್ ಹೀಗೆ ಯುಕ್ತಿಪೂರ್ವಕವಾಗಿ ಸ್ಪಷ್ಟಪಡಿಸಿದೆ: "ಇವರಿಗೆ ಇಬ್ರಾಹೀಮರ ವೃತ್ತಾಂತವನ್ನು ತಿಳಿಸಿರಿ. ಅವರು ತಮ್ಮ ತಂದೆ ಮತ್ತು ಜನಾಂಗದೊಡನೆ, "ನೀವು ಇದೆಂತಹ ವಸ್ತುಗಳನ್ನು ಪೂಜಿಸುತ್ತಿರುವಿರಿ?" ಎಂದು ಕೇಳಿದಾಗ ಅವರು "ಇವು ಕೆಲವು ವಿಗ್ರಹಗಳು, ನಾವು ಇವುಗಳನ್ನು ಪೂಜಿ ಸುತ್ತೇವೆ ಮತ್ತು ಇವುಗಳ ಸೇವೆಯಲ್ಲೇ ನಿರತರಾಗಿರುತ್ತೇವೆ" ಎಂದರು. ಆಗ ಇವರು ಕೇಳಿದರು, "ನೀವು ಇವುಗಳನ್ನು ಕರೆದು ಪ್ರಾರ್ಥಿಸಿದಾಗ ಇವು ಕೇಳುತ್ತವೆಯೇ? ಅಥವಾ ಇವು ನಿಮಗೇನಾದರೂ ಲಾಭವನ್ನಾಗಲಿ, ಹಾನಿಯನ್ನಾಗಲಿ ಉಂಟು ಮಾಡುತ್ತವೆಯೇ?" ಅದಕ್ಕೆ ಅವರು, "ಇಲ್ಲ, ಆದರೆ ನಮ್ಮ ಪೂರ್ವಿಕರು ಹೀಗೆ ಮಾಡುತ್ತಿರುವುದನ್ನು ನಾವು ಕಂಡಿದ್ದೇವೆ" ಎಂದರು. ಆಗ ಇಬ್ರಾಹೀಮರು ಕೇಳಿ ದರು: "ನೀವು ಮತ್ತು ನಿಮ್ಮ ಪೂರ್ವಿಕರು ಪೂಜಿಸುತ್ತಾ ಬಂದಿರುವ ವಸ್ತುಗಳನ್ನು ನೀವೆಂದಾದರೂ (ಕಣ್ತೆರೆದು) ನೋಡಿದ್ದುಂಟೇ? ಇವೆಲ್ಲವೂ ನನ್ನ ಶತ್ರುಗಳು,

ಸರ್ವಲೋಕಗಳ ಪಾಲಕ ಪ್ರಭುವೊಬ್ಬನ ಹೊರತು. ಅವನು ನನ್ನನ್ನ ಸೃಷ್ಟಿಸಿದನು ಮತ್ತು ಅವನೇ ನನಗೆ ಮಾರ್ಗದರ್ಶನ ನೀಡುತ್ತಾನೆ- ಅವನು ನನಗೆ ಉಣಿಸುತ್ತಾನೆ ಮತ್ತು ಕುಡಿಸುತ್ತಾನೆ. ನಾನು ಕಾಯಿಲೆ ಬಿದ್ದಾಗ ಅವನೇ ನನ್ನನ್ನು ಗುಣಪಡಿಸುತ್ತಾನೆ. ಅವನೇ ನನಗೆ ಮರಣ ಕೊಡುವನು ಮತ್ತು ಪುನಃ ಜೀವಂತ ಗೊಳಿಸುವನು. ಪ್ರತಿಫಲ ನೀಡಲಾಗುವ ಆ ದಿನ ಅವನು ನನ್ನ ತಪ್ಪುಗಳನ್ನು ಕ್ಷಮಿಸು ವನೆಂದೂ ನಾನು ಅವನಿಂದ ನಿರೀಕ್ಷಿಸುತ್ತಿದ್ದೇನೆ" ಎಂದು ಹೇಳಿದರು. **(ಅಶ್ಶುಅರಾ: 69-82)**

2) ಆರಾಧ್ಯನಾಗುವ ಅರ್ಹತೆ - ಚಿರಂತನನು ಮತ್ತು ಸ್ವಯಂ ಜೀವಂತನು ಆಗಿರಬೇಕು:

ಆರಾಧ್ಯನು ತಾನೇ ಸ್ವಯಂ ಜೀವಂತನು ಮತ್ತು ಚಿರಂತನನು ಆಗಿರುತ್ತಾನೆ. ಅಂದರೆ ಏನೂ ಇರಲಿಲ್ಲ (ಶೂನ್ಯವಿತ್ತು) ಆಗಲೂ ಅವನಿದ್ದ ಮತ್ತು ಯಾವುದೂ ಇರುವುದಿಲ್ಲ (ಉಳಿಯುವುದಿಲ್ಲ) ಆಗಲೂ ಅವನಿರುತ್ತಾನೆ. ಸೃಷ್ಟಿಕರ್ತನಾದ ಅಲ್ಲಾಹನು ಸ್ವಯಂ ಜೀವಂತನು. ಇದು ಅವನಿಗೇ ಬಿಟ್ಟ ವಿಚಾರವೇ ಹೊರತು ಯಾರೂ ಅದನ್ನು ಅವನಿಗೆ ಕೊಟ್ಟಿಲ್ಲ. ಅವನಿಗೆ ಆರಂಭವಿಲ್ಲ. ಅಂತ್ಯವೂ ಇಲ್ಲ. ಅಂದರೆ ಇವು ಮನುಷ್ಯನ ಅರಿವಿಗೆಟಕದಿರುವ (ಮಾನವ ಪರಿಕಲ್ಪನೆ ವ್ಯಾಪ್ತಿಯನ್ನು ಮೀರಿದ) ವಿಷಯವಾಗಿದೆ. ಅವನು ಹುಟ್ಟಿಲ್ಲ ಅಥವಾ ಅವನು ಇತರರಿಂದ ಸೃಷ್ಟಿಸಲ್ಪಟ್ಟಿಲ್ಲ. ಅವನಿಗೆ ಮರಣವಿಲ್ಲ, ಅವನಿಗೆ ಜೀವಿತದ ಅವಧಿಯೂ ಇಲ್ಲ. ಅವನ ಜೀವಿತಾ ವಧಿ ಅಸೀಮವಾದುದು. ಯಾಕೆಂದರೆ ಅವನಿಗೆ ಮರಣವೇ ಇಲ್ಲ. ಅವನು ಸ್ವಯಂ ಜೀವಂತನು. ಆದುದರಿಂದ ಅಲ್ಲಾಹನು 'ಅಲ್ ಹಯ್ಯುಲ್ ಕಯ್ಯೂಂ' ಆಗಿರುವನು ಅರ್ಥಾತ್ ಸ್ವಯಂ ಜೀವಂತನು ಮತ್ತು ಚಿರಂತನನು. ಅಂದರೆ ಈ ಪ್ರಪಂಚ ಇರಲಿಲ್ಲ, ಅವನಿದ್ದ. ಈ ಪ್ರಪಂಚ ಇರುವಾಗಲೂ ಅವನು ಇದ್ದಾನೆ. ಈ ಪ್ರಪಂಚ ಅಂತ್ಯವಾಗಲಿದೆ ಆಗಲೂ ಅವನು ಇರುತ್ತಾನೆ.

ಆದಿಯಿಂದಲೇ ಜೀವಂತನಿರುವವನಿಗೆ ಮಾತ್ರ ಬೇರೆಯವರಿಗೆ ಜೀವ ನೀಡಲು ಸಾಧ್ಯವಿದೆ ಮತ್ತು ಆ ಜೀವಿಗಳು ಆರಂಭದ ಜೀವಂತನು ಬಯಸುವ ಕಾಲದವರೆಗೆ ಮಾತ್ರ ಜೀವಂತವಿರುತ್ತವೆ. ಆದುದರಿಂದ ಆದಿಯಿಂದಲೇ ಜೀವಂತ ಇರುವವನು ಅಲ್ ಹಯ್ಯ್ (ಚಿರಂತನನು) ಮತ್ತು ಅಲ್ ಕಯ್ಯೂಂ (ಸ್ವಯಂ ಜೀವಂತನು) ಎಂದು ಕರೆಯಲ್ಪಡುವನು ಮತ್ತು ಇದು ಅಲ್ಲಾಹನ ಗುಣವಾಗಿದೆ (ಅವನೇ ಜೀವ ಕೊಡುವವನು, ಸೃಷ್ಟಿಗಳನ್ನು ಸೃಷ್ಟಿಸುವವನು). ಅವನೇ ಪ್ರಪಂಚ ಮತ್ತು ಮನುಷ್ಯರನ್ನು ಸೃಷ್ಟಿಸಿದ ಸೃಷ್ಟಿಕರ್ತನಾಗಿದ್ದಾನೆ. ಪವಿತ್ರ ಕುರ್‌ಆನ್ ಈ ವಾಸ್ತವಿಕತೆಯ ಕುರಿತು ಈ ರೀತಿ ಬೆಳಕು ಹರಿಸುತ್ತಿದೆ: "ಅಲ್ಲಾಹನು ಚಿರಂತನನು,

ಸ್ವಯಂ ಜೀವಂತನು. ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರತು ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲಿ ನಿದ್ರೆಯಾಗಿ ಬಾಧಿಸುವುದಿಲ್ಲ. ಆಕಾಶ ಭೂಮಿಗಳಲ್ಲಿ ಇರುವುದೆಲ್ಲವೂ ಅವನದೇ." (ಅಲ್‌ಬಕರ: 255)

ಅಂದರೆ ಸದಾ ಜೀವಂತ ಇದ್ದವನು ಮತ್ತು ಸದಾ ಜೀವಂತ ಇರುವವನು ಅವನೇ ನಮಗೆ ಜೀವನವನ್ನು ನೀಡುತ್ತಾನೆ ಮತ್ತು ಅದನ್ನು ಕಾಯಂಗೊಳಿಸುವನು. ಅವನು ಜೀವನ ಕೊಟ್ಟ ಜೀವಿಗಳಿಗೆ ಅವನೇ ಆರಾಧ್ಯ ಆಗಿರುತ್ತಾನೆ. ಸೃಷ್ಟಿಗಳಿಗೆ ಅವುಗಳ ಸೃಷ್ಟಿಕರ್ತನೇ ಆರಾಧ್ಯನಾಗಿರುವನು. ಅವನನ್ನು ಆರಾಧಿಸುವುದು ಪ್ರಥಮತಃ ಸೃಷ್ಟಿಗಳ ಹಕ್ಕಾಗಿದೆ. ಈ ಸಾಮರ್ಥ್ಯವಿಲ್ಲದವರು ಆರಾಧ್ಯನಾಗಲಾರರು.

ಯಾರೋ ಕೊಟ್ಟಿರುವ ಜೀವನದಿಂದಾಗಿ ಜೀವಂತ ಇರುವವರು ಇತರರ ಆರಾಧ್ಯರಾಗುವುದಿಲ್ಲ. ಇವರು ಅಸಹಾಯಕರು, ಅಸಮರ್ಥರು, ದುರ್ಬಲರು. ಸ್ವತಃ ತಮ್ಮ ಜೀವವನ್ನು ರಕ್ಷಿಸುವುದೇ ಅವರಿಗೆ ಸಾಧ್ಯವಿಲ್ಲ. ಇಂತಹವರಿಂದ ಇತರರ ಜೀವ ರಕ್ಷಿಸುವುದು ದೂರದ ಮಾತು. ಅಂದರೆ ತಮ್ಮನ್ನು ಮತ್ತು ಇತರರನ್ನೂ ರಕ್ಷಿಸಲು ಇವರು ಸಮರ್ಥರಲ್ಲ. ಇಂತಹವರು ಆರಾಧ್ಯರಾಗುವುದಾದರೂ ಹೇಗೆ?

ಆರಾಧ್ಯನು ಸ್ವಯಂ ಜೀವಂತನು ಮತ್ತು ಚಿರಂತನು ಮತ್ತು ಅವನೇ ಅಲ್ಲಾಹ್. ಅಲ್ಲಾಹನೇ ಸೃಷ್ಟಿಗಳಿಗೆ ಜೀವನ ನೀಡಿದನು. ಸೃಷ್ಟಿಗಳು ಮಿತಿಯನ್ನು ಒಳಗೊಂಡಿದ್ದು ಅವುಗಳಿಗೆ ಒಂದು ಆದಿ ಮತ್ತು ಅಂತ್ಯವಿರುವುದು. ಆದುದರಿಂದ ಸೃಷ್ಟಿಗಳು ಆರಾಧ್ಯನೆನಿಸಿಕೊಳ್ಳುವುದು ಸಾಧ್ಯವಿಲ್ಲ.

ಆದಿಯಿಂದಲೂ ಜೀವಂತ ಇರುವ ಅಸ್ತಿತ್ವವು ಅಲ್ ಕಯ್ಯೂಮ್ ಆಗಿದ್ದು ಅವನೇ ಇತರ ಜೀವಿಗಳಿಗೆ (ಸೃಷ್ಟಿಗಳಿಗೆ) ಜೀವಿಸಲು ಅಗತ್ಯವಿರುವ ವ್ಯವಸ್ಥೆ ಮಾಡಿ ರುವನು. ಅವನೇ ಸೃಷ್ಟಿಗಳಿಗೆ ಶಕ್ತಿಯ ಜೀವಾಳವಾಗಿದ್ದು ಅವರಿಗೆ ಮಹಾ ಉಪಕಾರಿ ಮತ್ತು ಅವರ ರಕ್ಷಕನಾಗಿರುವನು. ಅಲ್ಲಾಹನೇ ಅಲ್ ಕಯ್ಯೂಂ ಆಗಿದ್ದು ಅವನೇ ಆರಾಧ್ಯನಾಗಿರುವನು. ಅವನನ್ನೇ ಪ್ರಾರ್ಥಿಸಬೇಕು. ಅವನ ಮುಂದೆ ಬೇಡಿಕೆಗಳನ್ನು ಇರಿಸಬೇಕು. ಅವನನ್ನೇ ಸಹಾಯಕ್ಕೆ ಕೂಗಿ ಕರೆಯಬೇಕು ಮತ್ತು ಅವನಿಂದ ಉಪಕೃತರಾಗುವ ವಿಶ್ವಾಸ ಇರಿಸಬೇಕು. ಅವನಿಗೆ ವಿಧೇಯನಾಗಬೇಕು. ಅವನ ಯುಕ್ತಿ ಯಲ್ಲಿ ವಿಶ್ವಾಸ ಇರಿಸಬೇಕು.

ಅವನು ಜೀವಂತ ಇರಿಸಬಲ್ಲವನು. ಅವನಿಗೆ ನಿದ್ದೆಯಿಲ್ಲ. ತೂಕಡಿಸುವುದಿಲ್ಲ. ಅವನು ಪ್ರತಿಯೊಂದು ದಾಸರ (ಸೃಷ್ಟಿಗಳ) ಸಕಲ ಸ್ಥಿತಿಗತಿಗಳ ಅರಿವಿರುವವನು. ಅವರಲ್ಲಿ ಆಸಕ್ತನು ಅವರ ಕೋರಿಕೆ ಆಲಿಸುವನು. ಆದ್ದರಿಂದ ದಾಸರಿಗೆ ಅವನೇ

ಆರಾಧ್ಯನಾಗಿರುತ್ತಾನೆ. ಸ್ವಯಂ ಜೀವಂತನಿರುವವನು ತನ್ನ ಸೃಷ್ಟಿಗಳನ್ನು ಜೀವಂತವಾಗಿರಿಸುವನು. ಆದುದರಿಂದ ಅವನೇ ಆರಾಧ್ಯನು. ಅವನು ಅಲ್ಲಾಹನು.

ಯಾರ ಬಳಿ ಅವನದ್ದಾದ ಮೂಲ ಜೀವನ ಇಲ್ಲ. ಸ್ವಯಂ ಜೀವಂತವಾಗಿರಿಸಿಕೊಳ್ಳಲಾರ ಮತ್ತು ಇತರರನ್ನು ಜೀವಂತವಾಗಿರಿಸಲಾರ. ಇಂತಹವನು ಆರಾಧ್ಯನಾಗಲಾರ. ಯಾಕೆಂದರೆ ಮೂಲತಃ ಅಲ್ಲಾಹನು ಮಾತ್ರ ಸ್ವಯಂ ಜೀವಂತನು ಆಗಿದ್ದು ಅವನು ಅದನ್ನು ತನ್ನ ಶಕ್ತಿಯಲ್ಲೇ ಇರಿಸಿಕೊಂಡಿರುವನು. ಆದುದರಿಂದ ಅವನು ಹಯ್ಯುಲ್ ಕಯ್ಯೂಂ (ಸ್ವಯಂ ಜೀವಂತನು) ಆಗಿರುವನು. ಸೃಷ್ಟಿಕರ್ತನೇ ಆರಾಧ್ಯನು ಮತ್ತು ಸೃಷ್ಟಿಗಳು ಆರಾಧ್ಯರಲ್ಲ.

ಇನ್ನಷ್ಟು ಆವಶ್ಯಕ ವಿವರಣೆ:

ಮನುಷ್ಯನು ಆರಾಧ್ಯನ ಕುರಿತು ಯೋಚಿಸುವುದು ತನ್ನ ಸೀಮಿತವಾದ ಜ್ಞಾನ, ಅನುಭವ, ಆಲೋಚನೆಗಳಿಂದಾಗಿದೆ ಮತ್ತು ತಪ್ಪುಕಲ್ಪನೆ ಹಾಗೂ ಸಂಕುಚಿತ ಅರಿವುಗಳಿಂದ ಯೋಚಿಸಿ ಆಶ್ಚರ್ಯಕ್ಕೊಳಗಾಗುತ್ತಾನೆ. ಆದುದರಿಂದ ಕೆಲವರು ಸ್ವಯಂ ಅಸ್ತಿತ್ವಗೊಂಡ ನೈಜ ಆರಾಧ್ಯ ಅಲ್ಲಾಹನನ್ನು ನಿರಾಕರಿಸುತ್ತಾರೆ. ಮನುಷ್ಯರಲ್ಲಿ ಯಾಕೆ ಆರಾಧ್ಯನ ಕುರಿತು ಇಂತಹ ಆಶ್ಚರ್ಯ ಸೃಷ್ಟಿಯಾಗಿದ್ದು ಅಂದರೆ ಸೃಷ್ಟಿಕರ್ತನನ್ನು ಸೃಷ್ಟಿಯ ಸ್ಥಾನದಲ್ಲಿರಿಸಿ ಪರಿಕಲ್ಪಿಸಿಕೊಂಡಿರುತ್ತಾರೆ. ಮತ್ತು ಅಲ್ಲಾಹನಿಗಿರುವ (ಸೃಷ್ಟಿಕರ್ತನ) ಅಪಾರ ಶಕ್ತಿ ಮತ್ತು ಸಾಮರ್ಥ್ಯ ಮತ್ತು ಜ್ಞಾನ ಹಾಗೂ ಯುಕ್ತಿಗಳನ್ನೆಲ್ಲ ಮನುಷ್ಯನು ತನ್ನ ದುರ್ಬಲ ಶಕ್ತಿ ಸಾಮರ್ಥ್ಯಗಳಿಗೆ ಅಲ್ಲಾಹನನ್ನು ಹೋಲಿಸಿ ಅಳೆದು ನೋಡುತ್ತಾನೆ. ಇಂತಹ ದುರ್ಬಲ ಆಲೋಚನೆಗಳಿಂದ ಪ್ರಪಂಚ ಮತ್ತು ಪ್ರಪಂಚದಲ್ಲಿರುವ ಸಕಲ ವಸ್ತುಗಳು ಮತ್ತು ಪ್ರಪಂಚದಲ್ಲಿರುವ ಸಕಲ ಜೀವಿಗಳು ತಮ್ಮಷ್ಟಕ್ಕೆ ಸ್ವಯಂ ಅಸ್ತಿತ್ವವನ್ನು ಪಡೆದುಕೊಂಡವು ಎಂದು ತನ್ನ ಮನುಷ್ಯನು ನಿರ್ಧರಿಸುವನು.

ಇಂತಹವರಲ್ಲಿ ತಮ್ಮ ಸೃಷ್ಟಿಕರ್ತನ ನಿರಾಕರಣೆ ಮಾತ್ರವಲ್ಲ ಅದರ ಜೊತೆಗೆ ತಾವು ಹೀಗೆ ನಿರಾಕರಿಸುವುದು ತರ್ಕಸಂಗತವಾಗಿದೆ ಮತ್ತು ಸರಿಯಾಗಿದೆ ಎಂಬ ಭಾವನೆ ಬಲವಾಗಿರುತ್ತದೆ. ತಾವು ಉತ್ತರಿಸಬೇಕಾದ ಸಂದರ್ಭಗಳಲ್ಲೆಲ್ಲ ನಿಸರ್ಗ (ಪ್ರಕೃತಿ) ಎಂಬ ಪದವನ್ನು ಅವರು ಧಾರಾಳವಾಗಿ ಉಪಯೋಗಿಸುತ್ತಿರುವುದು ಕಾಣಬಹುದು. ನಿಸರ್ಗ ಪದ ಬಳಕೆ ಮನುಷ್ಯನ ಮನಸಂತೃಪ್ತಿಗಿರುವ ಯೋಚನೆಯೇ ಹೊರತು ಮತ್ತೇನಲ್ಲ. ಹೀಗೆ ಇಂತಹವರು ಹಲವಾರು ಉತ್ತರಗಳಿಗೆ ನಿಸರ್ಗ ಎಂಬ ಪದವನ್ನೇ ಎತ್ತಿಕೊಂಡು ವಿವರಿಸಲು ಯತ್ನಿಸುವರು. ಆದರೆ ಅದು ಇಂತಹವರ ಅಸಹಾಯಕತೆಯ ಅಭಿವ್ಯಕ್ತಿಯನ್ನು ಸ್ವಯಂ ಅನಾವರಣಗೊಳಿಸುತ್ತದೆ ಅಷ್ಟೇ.

ನೇಚರ್(ನಿಸರ್ಗ) ಎಂಬ ಪದವನ್ನು ಬಳಸಿದಾಗ ವ್ಯಕ್ತವಾಗುವುದು ಒಂದು

ನಿರ್ಜೀವ ವಸ್ತುವನ್ನು ಸೂಚಿಸುತ್ತಿದ್ದಾರೆ ಎಂಬಂತಹ ಅನುಭವವಾಗಿದೆ. ಇದೇ ವೇಳೆ ಜ್ಞಾನ, ಉದ್ದೇಶ, ಶಕ್ತಿಸಾಮರ್ಥ್ಯ, ಯೋಜನೆ ಮತ್ತು ಅವುಗಳನ್ನು ಜಾರಿಗೊಳಿಸುವ ಶಕ್ತಿಗಳೆಲ್ಲವೂ ಯಾವುದೇ ಅತ್ಯಂತ ಪ್ರಬಲನೂ ಸಮರ್ಥನೂ ಆದ ಜೀವನದಲ್ಲಿ ಮಾತ್ರ ಕಾಣಲು ಸಾಧ್ಯವಿರುವುದು. ಆದುದರಿಂದ ಈ ಎಲ್ಲ ಗುಣಗಳು ಒಬ್ಬ ಜೀವಂತನನ್ನು ಮತ್ತು ಪ್ರಬಲನನ್ನೇ ಸಾಕ್ಷ್ಯವಹಿಸುತ್ತದೆ ಎಂಬುದು ಸ್ಪಷ್ಟವಾಗಿದೆ. ಯಾವತ್ತೂ ಜೀವಂತ ಅಸ್ತಿತ್ವಕ್ಕೆ ಮಾತ್ರ ಇನ್ನೊಂದು ಜೀವಿಗೆ ಜೀವ ಕೊಡಲು ಸಾಧ್ಯವಿರುತ್ತದೆ.

ಇದೇ ವೇಳೆ ನಮ್ಮ (ಮನುಷ್ಯರ) ಜೀವಂತ ಇರುವಿಕೆಯೇ ಬಹುದೊಡ್ಡ ಜೀವಂತ ಅಸ್ತಿತ್ವವಿದೆ ಎಂಬು ಬಗ್ಗೆ ಸಾಕ್ಷ್ಯವನ್ನು ಒದಗಿಸುತ್ತಿದೆ. ಆದಾಗ್ಯೂ ನಮ್ಮ ಜ್ಞಾನ–ಪ್ರಜ್ಞೆಗ್ಗಳಿಗೆ ಮಿತಿಗಳಿವೆ. ಅದರೂ ಅಲ್ಲಾಹನು ನಮಗೆ ಕೊಟ್ಟಿರುವ ಬುದ್ಧಿಶಕ್ತಿಯನ್ನು ಸರಿಯಾಗಿ ಉಪಯೋಗಿಸುವುದರಿಂದ ಅವನನ್ನು ತಲುಪಬಹುದು ಮತ್ತು ಅವನನ್ನು ಗುರುತಿಸಬಹುದು. ಈ ರೀತಿ ನಾವು ಜೀವನದ ಅರ್ಥಾತ್ ಜೀವಿಗಳ ಅಸ್ತಿತ್ವ ಮತ್ತು ಪ್ರಪಂಚದ ಅಸ್ತಿತ್ವದ ರಹಸ್ಯವನ್ನು ಬಗೆಹರಿಸಿಕೊಳ್ಳಬಹುದು.

3) ಆರಾಧ್ಯನಿಗೆ ಇರುವ ಇನ್ನೊಂದು ಪ್ರಮುಖ ಗುಣ:

ಆರಾಧ್ಯನಿಗೆ ಮರಣವಿಲ್ಲ ಎಂಬುದು ಆರಾಧ್ಯನ ಇನ್ನೊಂದು ಪ್ರಮುಖವಾದ ಗುಣವಾಗಿದೆ. ಅವನು ಅಲ್ ಹಯ್ಯುಲ್ ಕಯ್ಯೂಂ (ಸ್ವಯಂ ಜೀವಂತನು) ಆಗಿರುವುದು ಅನಿವಾರ್ಯ. ಅವನಿಗೆ ಸಾವಿಲ್ಲ. ಅವನು ನಾಶವಾಗುವುದಿಲ್ಲ. ಅವನು ಶಾಶ್ವತನು ಮತ್ತು ಸದಾ ಜೀವಂತವಾಗಿದ್ದಾನೆ ಮತ್ತು ಸದಾ ಜೀವಂತವಾಗಿರುತ್ತಾನೆ. ಪ್ರಪಂಚದ ಮೇಲೆ ಅವನಿಗೆ ಮಾತ್ರ ಅಧಿಕಾರವಿದೆ. ಅವನಿಗೆ ಸಾವಿಲ್ಲ. ಅದರಂತೆ ನಾಶವೂ ಇಲ್ಲ. ಅವನು ಅನಾದಿ ಕಾಲದಿಂದಲೂ ಜೀವಂತವಿದ್ದಾನೆ ಮತ್ತು ಅನಾದಿ ಕಾಲದ ವರೆಗೂ ಜೀವಂತವಾಗಿ ಇರುತ್ತಾನೆ. ಅವನು ಸರ್ವಶಕ್ತ, ಸಂಪೂರ್ಣ ವಿಶ್ವದಲ್ಲಿ ಅವನೊಬ್ಬನದೇ ಅಧಿಕಾರ ಜಾರಿಯಲ್ಲಿದೆ. (ಅವನ ಅಧಿಕಾರ ವ್ಯಾಪ್ತಿಗೆ ಪ್ರಪಂಚ ಆಧೀನವಾಗಿದೆ). ಆದುದರಿಂದ ಅಲ್ಲಾಹನ ಈ ಗುಣಗಳ ಕುರಿತು ಪವಿತ್ರ ಕುರ್‌ಆನ್ ಹೀಗೆ ನಮ್ಮ ಮುಂದೆ ಬೆಳಕು ಚೆಲ್ಲುತ್ತಿದೆ.

"ಪೈಗಂಬರರೇ, ಸ್ವಯಂ ಜೀವಂತನೂ ಅಮರನೂ ಆಗಿರುವ ದೇವನ ಮೇಲೆ ಭರವಸೆಯಿಡಿರಿ. ಅವನ ಪ್ರಶಂಸೆಯೊಂದಿಗೆ ಅವನನ್ನು ಸ್ಮರಿಸಿರಿ. ತನ್ನ ದಾಸರ ಪಾಪಗಳ ಬಗ್ಗೆ ಅವನು ಮಾತ್ರ ಅರಿತಿದ್ದರೆ ಸಾಕು. ಅವನು ಭೂಮಿ–ಆಕಾಶಗಳನ್ನೂ ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿದನು. ತರುವಾಯ ಸ್ವಯಂ ಸಿಂಹಾಸನಾ ರೂಢನಾದನು. ರಹ್ಮಾನ್! ಅವನ

ಘನತೆಯನ್ನು ಬಲ್ಲವರೊಡನೆ ಕೇಳಿ ತಿಳಿದುಕೊಳ್ಳಿರಿ." (ಅಲ್ ಫುರ್ಕಾನ್: 58–59)

ಅಲ್ಲಾಹನು ಜೀವಂತನು, ಅಂದರೆ ಅವನು ಜೀವನದ ಸಂಪೂರ್ಣ ವೈಶಿಷ್ಟ್ಯಗಳೊಂದಿಗೆ ಜೀವಂತವಾಗಿದ್ದಾನೆ ಎಂದರ್ಥ ಮತ್ತು ಅವನಿಗಿರುವ ಆ ಗುಣಗಳು ಅತ್ಯುನ್ನತ ದರ್ಜೆಯವು ಆಗಿವೆ ಮತ್ತು ಅವನಿಗೆ ಯಾವ ಪತನವೂ ಇಲ್ಲ.

ನಿಜವಾದ ಆರಾಧ್ಯನು ಯಾರು ಎಂದು ಪವಿತ್ರ ಕುರ್‌ಆನ್ ತಿಳಿಸುತ್ತದೆ. ನಿಜವಾದ ಆರಾಧ್ಯರು ಯಾರಲ್ಲ ಎಂದೂ ಮತ್ತು ಯಾಕಲ್ಲ ಎಂದೂ ಪವಿತ್ರ ಕುರ್‌ಆನ್ ವಿವರಿಸುತ್ತಿದೆ:

"ಇವರು ಅಲ್ಲಾಹನನ್ನು ಬಿಟ್ಟು ಇತರ ಯಾರನ್ನು ಕೂಗಿ ಪ್ರಾರ್ಥಿಸುವರೋ ಅವರು ಯಾವುದೇ ವಸ್ತುವಿನ ಸೃಷ್ಟಿಕರ್ತರಲ್ಲ. ನಿಜವಾಗಿ ಅವರು ಸ್ವತಃ ಸೃಷ್ಟಿಗಳು. ಅವರು ನಿರ್ಜೀವಿಗಳು, ಸಜೀವಿಗಳಲ್ಲ. ಅವರನ್ನು ಯಾವಾಗ (ಪುನಃ ಜೀವಂತಗೊಳಿಸಿ) ಎಬ್ಬಿಸಲಾಗುವುದೆಂದು ಅವರಿಗೆ ತಿಳಿದಿರುವುದಿಲ್ಲ. ನಿಮ್ಮ ಆರಾಧ್ಯನು ಕೇವಲ ಏಕ ಆರಾಧ್ಯನು. ಆದರೆ ಪರಲೋಕದ ಮೇಲೆ ವಿಶ್ವಾಸವಿರಿಸಿದವರ ಹೃದಯಗಳಲ್ಲಿ ನಿರಾಕರಣೆಯು ನೆಲೆನಿಂತು ಬಿಟ್ಟಿದೆ ಮತ್ತು ಅವರು ಗರ್ವಿಷ್ಠರಾಗಿದ್ದಾರೆ."

(ಅನ್ನಹ್ಲ್: 20–22)

ಮೇಲಿನ ವಚನಗಳಿಂದ ಅಲ್ಲಾಹನ ಹೊರತಾಗಿ ಜೀವಂತವಿರುವುದಾಗಲಿ ನಿರ್ಜೀವವಾದುದು ಆಗಿರಲಿ ಸಕಲವೂ ಸೃಷ್ಟಿಗಳಾಗಿವೆ ಎಂದು ನಮಗೆ ತಿಳಿದು ಬರುತ್ತದೆ. ಈ ಸೃಷ್ಟಿಗಳ ಪೂಜೆ (ಆರಾಧನೆ) ಸಲ್ಲದು. ಅದರಂತೆ ಸೃಷ್ಟಿಗಳು ಆರಾಧ್ಯರಾಗುವುದಿಲ್ಲ. ಅವುಗಳಿಗೆ ಆರಾಧ್ಯನಾಗುವ ಹಕ್ಕು, ಅರ್ಹತೆಗಳಿಲ್ಲ. ಅವು ದುರ್ಬಲವೂ ನಶಿಸುವಂತಹದೂ ಆಗಿವೆ ಮತ್ತು ದುರ್ಬಲ ಮತ್ತು ನಾಶವಾಗುವುದನ್ನು ಆರಾಧನೆ ಮಾಡಬಾರದು ಎಂಬುದನ್ನು ನಾವು ಅರಿತಿರಬೇಕಾಗಿದೆ.

4) ಆರಾಧ್ಯನು ಸರ್ವಶಕ್ತ ಮತ್ತು ಸರ್ವಶ್ರೇಷ್ಠ: ಇದು ನೈಜ ಆರಾಧ್ಯನ ನಾಲ್ಕನೇ ಗುಣವಾಗಿದೆ:

ಆರಾಧ್ಯನು ಯಾರ ಸಮಕ್ಷಮವೂ ಉತ್ತರಿಸಬೇಕಾಗಿಲ್ಲ. ಅವನೇ ಸೃಷ್ಟಿಕರ್ತ, ಒಡೆಯ, ಅಧಿಕಾರಿ (ಆಡಳಿತಗಾರ) ಮತ್ತು ಆರಾಧ್ಯನಾಗಿರುವನು ಮತ್ತು ಅವನ ಮುಂದೆ ಅವನ ದಾಸರಾದ (ತಮ್ಮ ಕರ್ಮಗಳ ಕುರಿತು) ಎಲ್ಲರೂ ಉತ್ತರಿಸಬೇಕಾಗುತ್ತದೆ. ಅವರಲ್ಲಿ ದುರ್ಬಲರು, ತಪ್ಪೆಸಗುವಂತಹವರು. ತಮ್ಮ ಶಕ್ತಿಯನ್ನು ತಪ್ಪು ಬಳಕೆ ಮಾಡಬಹುದಾದವರು, ದೌರ್ಜನ್ಯ ಎಸಗಬಹುದಾದವರು. ಇತರರ ಹಕ್ಕನ್ನು ಕಬಳಿಸುವವರು, ವಂಚಿಸುವವರು, ನ್ಯಾಯ ನಿರಾಕರಿಸಬಹುದಾದಂತಹ ಅವನ ಎಲ್ಲ ದಾಸರು ಅವನ ಮುಂದೆ ಉತ್ತರಿಸಬೇಕಾದವರು ಆಗಿದ್ದಾರೆ.

ಅಂದರೆ ಸೃಷ್ಟಿಕರ್ತನು ಈ ಎಲ್ಲ ದೌರ್ಬಲ್ಯಗಳಿಂದ ಮುಕ್ತನಾಗಿರುವನು ಮತ್ತು ಸಾರ್ವಭೌಮನಾಗಿರುವನು. ಅಲ್ಲಾಹನ ಪಾವಿತ್ರ್ಯದಲ್ಲಿ ಈ ಗುಣಗಳು ಸೇರಿವೆ–

ಮೇಲೆ ಸೃಷ್ಟಿಕರ್ತ ಮತ್ತು ಆರಾಧ್ಯನ ನಿರ್ದಿಷ್ಟ ಗುಣಗಳನ್ನು ವಿವರಿಸಲಾಗಿದೆ. ಇದನ್ನೇ ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ.

"ಅವನು ತನ್ನ ಕಾರ್ಯಗಳಿಗಾಗಿ (ಯಾರ ಮುಂದೆಯೂ) ಪ್ರಶ್ನಿಸಲ್ಪಡುವವನಲ್ಲ. ಉಳಿದವರೆಲ್ಲರೂ ಪ್ರಶ್ನಿಸಲ್ಪಡುವರು. ಇವರು ಅವನನ್ನು ಬಿಟ್ಟು ಇತರ ದೇವರುಗಳನ್ನು ಮಾಡಿ ಕೊಂಡಿದ್ದಾರೆಯೇ? ಪೈಗಂಬರರೇ, ಇವರೊಡನೆ ಹೇಳಿರಿ: ನಿಮ್ಮ ಪುರಾವೆಯನ್ನು ತನ್ನಿರಿ. ನನ್ನ ಕಾಲದವರಿಗೆ ಬೋಧನೆಯಾಗಿರುವ ಈ ಗ್ರಂಥವೂ ಇದೆ. ನನಗಿಂತ ಮುಂಚಿನವರಿಗೆ ಬೋಧನೆಯಾದ ಆ ಗ್ರಂಥಗಳೂ ಇವೆ. ಆದರೆ ಇವರಲ್ಲಿ ಹೆಚ್ಚಿನವರಿಗೆ ವಸ್ತುಸ್ಥಿತಿಯ ಅರಿವಿಲ್ಲ. ಆದುದರಿಂದ ವಿಮುಖರಾಗಿದ್ದಾರೆ."

(ಅಲ್ ಅಂಬಿಯ: 23–24)

ಆರಾಧ್ಯ ಸಾರ್ವಭೌಮನಾಗಿರುವನು. ಅವನೇ ಅಲ್ಲಾಹ್ ಆಗಿದ್ದಾನೆ–

ಇದನ್ನು ಪವಿತ್ರ ಕುರ್‌ಆನ್ ಇನ್ನೊಂದು ಕಡೆ ಹೀಗೆ ವಿವರಿಸಿದೆ,

"ಅಲ್ಲಾಹನು ಅಧಿಕಾರ ನಡೆಸುತ್ತಾನೆ. ಅವನ ತೀರ್ಮಾನವನ್ನು ಪುನರ್ವಿಮರ್ಶಿಸತಕ್ಕವನು ಯಾರೂ ಇಲ್ಲ ಮತ್ತು ಅವನಿಗೆ ಲೆಕ್ಕಾಚಾರ ಪಡೆಯುವುದರಲ್ಲಿ ಸ್ವಲ್ಪವೂ ವಿಳಂಬವಾಗುವುದಿಲ್ಲ." **(ಅರ್ರಅದ್: 41ರ ಕೊನೆಯ ವಚನ)**

5) ಸರ್ವಶಕ್ತನೇ ಆರಾಧನೆಗರ್ಹ:

ಆರಾಧ್ಯನು ಯಾರು? ಆಕಾಶ ಭೂಮಿಗಳ ಮೇಲೆ (ಭೂಮ್ಯಾಕಾಶಗಳ ಮೇಲೆ) ಇರುವ ಪ್ರತಿಯೊಂದರಲ್ಲೂ ಅಧಿಕಾರವನ್ನು ಮತ್ತು ಪ್ರಬಲ ನಿಯಂತ್ರಣ ಹೊಂದಿರುವವನು ಆರಾಧ್ಯ ಆಗಿದ್ದಾನೆ. ಅವುಗಳನ್ನು ಹೃತ್ಪೂರ್ವಕವಾಗಿ ಪಾಲಿಸಿ ರಕ್ಷಿಸುವುದು ಅವನಿಗೆ ಸ್ವಲ್ಪವೂ ಕಷ್ಟದ ವಿಚಾರವಲ್ಲ. ಸರ್ವಶ್ರೇಷ್ಠನೂ, ಸರ್ವಶಕ್ತನೂ, ಉನ್ನತನೂ, ಸಾರ್ವಭೌಮನೂ ಆಗಿರುವ ಅಸ್ತಿತ್ವವೇ ಆರಾಧನೆಗೆ ಅರ್ಹವಾಗಿರುತ್ತದೆ. ಅಲ್ಲಾಹ್ ಎಂದು ಈ ಅಸ್ತಿತ್ವದ ಹೆಸರು ಆಗಿದೆ.

ಪವಿತ್ರ ಕುರ್‌ಆನ್ ಹೇಳುತ್ತಿದೆ, "ಅವನ ಅಧಿಕಾರವು ಆಕಾಶ–ಭೂಮಿಯನ್ನೂ ವ್ಯಾಪಿಸಿದೆ. ಅವುಗಳ ಸಂರಕ್ಷಣೆಯು ಆತನಿಗೆ ದಣಿಸುವಂತಹ ಕಾರ್ಯವಲ್ಲ. ಅವನು ಏಕೈಕನು ಮಹೋನ್ನತನೂ ಸರ್ವ ಶ್ರೇಷ್ಠನೂ ಆಗಿರುತ್ತಾನೆ."

(ಅಲ್‌ಬಕರ: 255 ಕೊನೆಯ ಭಾಗ)

ಈ ರೀತಿ ಸಾವಿರಾರು ವರ್ಷಗಳಿಂದಲೂ ಪ್ರತಿ ಕ್ಷಣಗಳ ಮಹಾನ್ ವ್ಯವಸ್ಥೆ

ಮಾಡುತ್ತಿರುವನು. ಅದರೂ ಅವನಿಗೆ ಯಾವುದೇ ದಣಿವಿಲ್ಲ. ಬಳಲಿಕೆಯಿಲ್ಲ. ಈ ವಾಸ್ತವವು ಸೃಷ್ಟಿಕರ್ತನ ದೈವಿಕ ಶಕ್ತಿ ಸಾಮರ್ಥ್ಯಗಳನ್ನು ಸಾಕ್ಷ್ಯ ವಹಿಸುತ್ತದೆ. ಸೃಷ್ಟಿಕರ್ತನ ಪ್ರಭುತ್ವ ಮತ್ತು ಸರ್ವಾಧಿಕಾರ ಜೀವಂತ ಮತ್ತು ನಿರ್ಜೀವಿಯಾದ ಎಲ್ಲ ವಸ್ತುಗಳ ಮೇಲೆ ಸ್ಥಾಪನೆಗೊಂಡಿದೆ. ಯಾವುದೇ ಒಂದು ವಸ್ತು ಕೂಡ ಯಾವ ಕ್ಷಣದಲ್ಲಿಯೂ ಅವನ ನಿಯಂತ್ರಣದ ಹೊರಗಿಲ್ಲ.

ಸೃಷ್ಟಿಕರ್ತನ ಹೊರತು ಬೇರೆ ಯಾವುದೇ ಅಸ್ತಿತ್ವದಲ್ಲಿ ಈ ಪ್ರಭುತ್ವ ಮತ್ತು ವ್ಯವಸ್ಥಾಪನೆಯ ಶಕ್ತಿ ಸಾಮರ್ಥ್ಯ ಮತ್ತು ಕುಶಲತೆಗಳಿಲ್ಲ, ಆಧಿಪತ್ಯದ ಗುಣವೈಶಿಷ್ಟ್ಯಗಳು ಇಲ್ಲ. ವಿಶ್ವದ ಮೇಲೆ ನಾವು ಗಮನಹರಿಸಿದಾಗ ಈ ಎಲ್ಲ ಗುಣಗಳು ಬೇರೆ ಯಾರಲ್ಲೂ ಇಲ್ಲ ಎಂದು ನಮಗೆ ಮನವರಿಕೆಯಾಗುವುದು. ಸಂದೇಹ ರಹಿತವಾಗಿ ಸೃಷ್ಟಿಕರ್ತನೇ ನೈಜ ಆರಾಧ್ಯನು ಅವನೇ ಸಕಲ ಗುಣಗಳ ಒಡೆಯನು ಎಂದು ಸ್ಪಷ್ಟವಾಗುತ್ತದೆ.

6) ಆರಾಧ್ಯನ ಪರಿಪೂರ್ಣ ಶಕ್ತಿ:

ಆರಾಧ್ಯನು ಅಸಾಧಾರಣ ಶಕ್ತಿ-ಸಾಮರ್ಥ್ಯಗಳ ಒಡೆಯನಾಗಿರುವನು. ಆದರೂ ಪವಿತ್ರ ಕುರ್‌ಆನ್ ಅಲ್ಲಾಹನನ್ನು ಈ ರೀತಿ ಪರಿಚಯಿಸುತ್ತಿದೆ: "ವಾಸ್ತವದಲ್ಲಿ ಭೂಮಿ ಆಕಾಶಗಳಲ್ಲಿರುವುದೆಲ್ಲವೂ ಅವನ ಸೊತ್ತು. ಸರ್ವವೂ ಅವನ ವಿಧೇಯ ಆಜ್ಞಾನುವರ್ತಿಗಳು. ಆತನು ಭೂಮಿ-ಆಕಾಶಗಳ ನಿರ್ಮಾತೃ. ಅವನು ಯಾವುದಾದರೊಂದು ಕಾರ್ಯದ ನಿರ್ಧಾರ ಮಾಡಿಕೊಂಡೊಡನೆ 'ಸಂಭವಿಸು' ಎಂದು ಆಜ್ಞಾಪಿಸುತ್ತಾನೆ. ಆಗಲೇ ಅದು ಸಂಭವಿಸುತ್ತದೆ." **(ಅಲ್‌ಬಕರ: 116- 117)**

ಆರಾಧ್ಯನಿಗೆ ಯಾವುದೇ ಕೆಲಸ ಆಗಬೇಕಾದರೂ ಅದಕ್ಕಾಗಿ ಅತ್ತಿಂದಿತ್ತ ಓಡಾಟ ನಡೆಸುವ ಅಗತ್ಯವಿಲ್ಲ. ಅವನು ಬಯಸುವುದು ಕಾರ್ಯರೂಪಕ್ಕೆ ಬರಲು ಒಂದು ಆದೇಶವು ಧಾರಾಳ ಸಾಲುತ್ತದೆ. ಯಾಕೆಂದರೆ ಅವನೇ ಸೃಷ್ಟಿಕರ್ತ, ಆಡಳಿತಗಾರ, ಸಾಮ್ರಾಟ. ಅವನ ಇಚ್ಛೆಯಂತೆ ಮತ್ತು ಆದೇಶಗಳಂತೆ ಅವನು ಬಯಸಿದ ವಸ್ತು ಕಾರ್ಯರೂಪಕ್ಕೆ ಬರುವುದು ಅಥವಾ ಅಸ್ತಿತ್ವ ಪಡೆದುಕೊಳ್ಳುವುದು. ಇಂತಹ ಸರ್ವಶಕ್ತನಾಗಿರುವ ಅಸ್ತಿತ್ವವೇ ಖಂಡಿತವಾಗಿಯೂ ಸಕಲ ಮನುಷ್ಯರಿಗೆ ನೈಜ ಆರಾಧ್ಯನಾಗಿದ್ದು ಅಲ್ಲಾಹ್ ಎಂದು ಈ ಅಸ್ತಿತ್ವದ ಹೆಸರು. ಅಲ್ಲಾಹನು ಸಕಲ ಮನುಷ್ಯರ ಆರಾಧ್ಯನಾಗಿದ್ದು ಪ್ರಥಮ ಮನುಷ್ಯನಿಂದ ಹಿಡಿದು ಕೊನೆಯ ಮನುಷ್ಯನ ವರೆಗೂ ಅವರ ನೈಜ ಆರಾಧ್ಯನಾಗಿರುವನು. ಭೂಮಿ-ಆಕಾಶಗಳು ಮತ್ತು ಅದರಲ್ಲಿ ಅಸ್ತಿತ್ವದಲ್ಲಿರುವ ಸಕಲ ಜೀವರಾಶಿಯನ್ನು ಅಸ್ತಿತ್ವಕ್ಕೆ ತಂದವನು ಅಲ್ಲಾಹನಾಗಿದ್ದು ಅವೆಲ್ಲದ್ದಕ್ಕೂ ನೈಜ ಆರಾದ್ಯನು ಅವನೇ ಆಗಿದ್ದಾನೆ.

7) ಅಲ್ಲಾಹನೇ ಸರ್ವಶ್ರೇಷ್ಠ:

ಸೃಷ್ಟಿಗಳನ್ನು ಸೃಷ್ಟಿಸಿ ಸೃಷ್ಟಿಗಳ ಜೀವನಕ್ಕೆ ಆವಶ್ಯಕವಾದ ಸಕಲ ವ್ಯವಸ್ಥೆ ಮಾಡಿರುವವನು. ಸೃಷ್ಟಿಗಳಿಗೆ ಜೀವನ ದಯಪಾಲಿಸಿ ಅದನ್ನು ಪೋಷಿಸಿರುವವನು ನೈಜ ಸೃಷ್ಟಿಕರ್ತ, ಸೂತ್ರಧಾರ ಮತ್ತು ನಿರ್ವಾಹಕ. ಅವನ ಹೆಸರು ಅಲ್ಲಾಹ್ ಎಂದು ಆಗಿದೆ. ಆದುದರಿಂದ ನೈಜ ಆರಾಧ್ಯನೂ ಅಲ್ಲಾಹನಾಗಿದ್ದಾನೆ. ಪವಿತ್ರ ಕುರ್‌ಆನ್ ಈ ವಾಸ್ತವಿಕತೆಯತ್ತ ಹೀಗೆ ಬೆಳಕು ಚೆಲ್ಲಿದೆ.

"ಇದೇಕೆಂದರೆ ಅಲ್ಲಾಹನೇ ಪರಮ ಸತ್ಯ. ಅಲ್ಲಾಹನನ್ನು ಬಿಟ್ಟು ಇವರು ಪ್ರಾರ್ಥಿಸುವಂತಹವುಗಳೆಲ್ಲವೂ ಮಿಥ್ಯ. ಅಲ್ಲಾಹನೇ ಸರ್ವೋನ್ನತನೂ ಮಹಾನನೂ ಆಗಿರುತ್ತಾನೆ. ಅಲ್ಲಾಹ್ ಆಕಾಶದಿಂದ ನೀರು ಸುರಿಸುವುದನ್ನೂ ಅದರಿಂದಾಗಿ ಭೂಮಿಯು ಸಸ್ಯ ಶ್ಯಾಮಲವಾಗುವುದನ್ನೂ ನೀವು ನೋಡುತ್ತಿಲ್ಲವೇ? ವಾಸ್ತವದಲ್ಲಿ ಅವನು ಸೂಕ್ಷ್ಮಜ್ಞನೂ ವಿವರಪೂರ್ಣನೂ ಆಗಿರುತ್ತಾನೆ. ಆಕಾಶಗಳಲ್ಲಿರುವುದೂ ಭೂಮಿಯಲ್ಲಿರುವುದೂ ಆತನದೇ. ನಿಶ್ಚಯವಾಗಿಯೂ ಅವನು ನಿರಪೇಕ್ಷನೂ ಪ್ರಶಂಸಾರ್ಹನೂ ಆಗಿರುತ್ತಾನೆ." **(ಅಲ್‌ಹಜ್: 62-64)**

8) ಕಾನೂನಿನ ಶಕ್ತಿ ಸಂಪೂರ್ಣ ಅನುಗ್ರಹಯುತವಾಗಿದೆ:

ಆರಾಧ್ಯನಿಗೆ ಯಾವ ವಿಚಾರಕ್ಕೂ ಯಾರ ಅಗತ್ಯವೂ ಇಲ್ಲ ಮತ್ತು ಅವನು ಸಕಲ ಪ್ರಶಂಸೆಗಳಿಗೆ ಪಾತ್ರನಾಗಿದ್ದಾನೆಂದು ನಾವು ಅರಿತುಕೊಳ್ಳಬೇಕಾಗಿದೆ. ಅವನು ಸ್ವಯಂ ಪ್ರಶಂಸಿತನು. ಮತ್ತು ಅವನಿಂದಾಗುವ ಸಕಲ ಕಾರ್ಯಗಳು ಮತ್ತು ಅವನ ಎಲ್ಲ ಗುಣಗಳು ಪ್ರಶಂಸೆಗೆ ಅರ್ಹವಾಗಿದೆ.

ಪ್ರಪಂಚದ ಪ್ರತಿಯೊಂದು ವಸ್ತುಗಳನ್ನು ತನ್ನ ನಿಯಂತ್ರಣ ಮತ್ತು ತನ್ನ ಅಧೀನವಾಗಿಟ್ಟುಕೊಳ್ಳುವಂತ ಕಾನೂನುಗಳನ್ನು ಅಲ್ಲಾಹನು ಮಾಡಿರುವನು. ಜನರಿಗೆ ಪರಿಚಿತವಾಗಿರುವ ನ್ಯೂಟನ್‌ನ ಕಾನೂನು (ನ್ಯೂಟನ್‌ನ ನಿಯಮ) ಪ್ರಸ್ತುತಪಡಿಸಿರುವಂತೆ. ಆದರೆ ಆರಾಧ್ಯನು ನ್ಯೂಟನ್‌ನಂತಲ್ಲ, ಬದಲಾಗಿ ಪ್ರಪಂಚದ ಸೃಷ್ಟಿಕರ್ತನಾಗಿದ್ದಾನೆ. ಆರಾಧ್ಯನ ಈ ಮೂಲ ನಿಯಮಗಳನ್ನು ಗುರುತಿಸುವ ಕೆಲಸವನ್ನಷ್ಟೇ ನ್ಯೂಟನ್ ಮಾಡಿರುವುದು. ಅಂದರೆ ನ್ಯೂಟನ್ ಗುರುತಿಸಿದ್ದು ಸೃಷ್ಟಿಕರ್ತನ ಮೂಲ ಕಾನೂನುಗಳನ್ನಾಗಿದೆ. ಸೃಷ್ಟಿಕರ್ತನ ಕಾನೂನು ಮನುಷ್ಯರ ಪಾಲಿಗೆ ಸಹಾನುಭೂತಿ ಮತ್ತು ಅನುಗ್ರಹವನ್ನೊಳಗೊಂಡಿರುವುದಾಗಿದೆ. ಮನುಷ್ಯರಲ್ಲಿರುವ ಜ್ಞಾನ ಅರಿವುಗಳೆಲ್ಲವೂ ಸೃಷ್ಟಿಕರ್ತನು ದಯಪಾಲಿಸಿರುವುದು. ಸೃಷ್ಟಿಕರ್ತನು ತನ್ನ ಈ ವಾಸ್ತವಿಕತೆಯನ್ನು ಮನುಷ್ಯರಿಗೆ ಪರಿಚಿತವಾಗಿರಲೆಂದು ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ವಿವರಿಸಿರುವನು.

"ಅವನು ಭೂಮಿಯಲ್ಲಿರುವುದೆಲ್ಲವನ್ನೂ ನಿಮಗೆ ಅಧೀನಗೊಳಿಸಿರುವುದನ್ನೂ ನಾವೆಯು ಅವನ ಅಪ್ಪಣೆಯಂತೆ ಸಮುದ್ರದಲ್ಲಿ ಚಲಿಸುವಂತೆ ಅವನೇ ಅದನ್ನು ನಿಯಮಬದ್ಧಗೊಳಿಸಿರುವುದನ್ನೂ ಅವನ ಅಪ್ಪಣೆಯಿಲ್ಲದೆ ಆಕಾಶವು ಭೂಮಿಯ ಮೇಲೆ ಬೀಳದಂತೆ ಅವನೇ ಅದನ್ನು ಈ ರೀತಿ ಆಧರಿಸಿರುವುದನ್ನೂ ನೀವು ಕಾಣುತ್ತಿಲ್ಲವೇ? ವಾಸ್ತವದಲ್ಲಿ ಅಲ್ಲಾಹನು ಜನರ ಬಗ್ಗೆ ಮಹಾ ವತ್ಸಲನೂ ಅತ್ಯಂತ ಕರುಣಾಮಯಿಯೂ ಆಗಿರುತ್ತಾನೆ." (ಅಲ್ ಹಜ್ಜ್: 65)

ಈ ರೀತಿ ಜೀವನ ವ್ಯವಸ್ಥೆಯ ಕಾರ್ಯ ಯಾರದು, ಮಹದುಪಕಾರ ಯಾರದು ಮತ್ತು ಯಾರು ಪ್ರತಿಯೊಂದು ವಸ್ತುವಿನೊಳಗೆ ಕಾಯಿದೆ ಕಾನೂನುಗಳನ್ನು ಇರಿಸಿದ್ದಾನೆ. ಇದನ್ನೇ ಮನುಷ್ಯನು ಕಂಡು ಹಿಡಿಯುತ್ತಾನೆ ಮತ್ತು ತನ್ನ ಜೀವನಕ್ಕೆ ಬೇಕಾದ ಪ್ರಯೋಜನವನ್ನು ಅದರಿಂದ ಪಡೆಯುತ್ತಾನೆ ಮತ್ತು ತನಗೆ ಬೇಕಾದ ಸೌಲಭ್ಯಗಳನ್ನು ಮಾಡಿಕೊಳ್ಳುತ್ತಾನೆ. ಆದುದರಿಂದ ಆ ವ್ಯವಸ್ಥೆಯನ್ನು ಮಾಡಿದ ಅಲ್ಲಾಹನೇ ಮನುಷ್ಯರ ಕೃತಜ್ಞತೆ ಮತ್ತು ವಿಧೇಯತೆಗರ್ಹನಾಗಿದ್ದಾನೆ. ಯಾಕೆಂದರೆ ಮನುಷ್ಯನ ದೇಹಕ್ಕೂ ಮನುಷ್ಯನ ಚಾರಿತ್ರ್ಯಕ್ಕೂ ಕಾಯಿದೆ ಕಾನೂನುಗಳು ಇರುವುದು ಕೂಡಾ ಅತ್ಯವಶ್ಯಕವಾಗಿದೆ. ಆದುದರಿಂದ ಅಲ್ಲಾಹನು ಮನುಷ್ಯರಾದ ನಮ್ಮ ಜೀವನಕ್ಕೆ ಸೂಕ್ತವಾದ ಕಾನೂನುಗಳನ್ನು ಕೊಟ್ಟನು.

9) ಆರಾಧ್ಯನು ಜೀವನಕ್ಕೆ ಮಾರ್ಗದರ್ಶನ ಮಾಡುತ್ತಾನೆ:

ಮನುಷ್ಯನಿಗೆ ಪ್ರಪಂಚದ ಅಧಿಪತಿಯ ಕಾನೂನು ಆದೇಶಗಳ ಬಗ್ಗೆ ಅರಿವಿದೆಯೇ? ಎಷ್ಟರವರೆಗೆಂದರೆ ಮನುಷ್ಯನಿಗೆ ಮನುಷ್ಯನ ದೈಹಿಕ ಪ್ರಕೃತಿಯದೇ ಹೆಚ್ಚು ತಿಳಿದಿಲ್ಲ. ಮನುಷ್ಯ ಪ್ರಕೃತಿಯ ಗುಣಸ್ವಭಾವಗಳು, ಅದರ ದೌರ್ಬಲ್ಯಗಳು, ಬೇಡಿಕೆಗಳು, ಆವಶ್ಯಕತೆ, ಹಾರೈಕೆಗಳು, ಪ್ರಕೃತಿಯ ಮನೋಧರ್ಮ, ಇವೆಲ್ಲವುಗಳ ಕುರಿತು ಅವನು ನೂರಕ್ಕೆ ನೂರರಷ್ಟು ಜ್ಞಾನಿಯಲ್ಲ. ಆದ್ದರಿಂದಲೇ ಅವನ ಜೀವನಕ್ಕೆ ಕಾನೂನು ನಿಯಮಗಳು ಆವಶ್ಯಕವಾಗಿದ್ದು ಮನುಷ್ಯರನ್ನು ಸೃಷ್ಟಿಸಿದ ಸೃಷ್ಟಿಕರ್ತ ಅವರ ಜೀವನಕ್ಕೆ ಅಗತ್ಯವಾದ ಕಾನೂನು, ನಿಯಮಗಳನ್ನು ರೂಪಿಸಿದ್ದಾನೆ. ಅದಕ್ಕೆ ಅವನೇ ಅರ್ಹನೂ ಆಗಿದ್ದಾನೆ. ಮನುಷ್ಯರಿಂದ ಅವರ ಜೀವನಕ್ಕೆ ದೋಷಮುಕ್ತವೂ ನ್ಯಾಯೋಚಿತ ಮತ್ತು ಸಂಪೂರ್ಣ ಸರಿಯಾದ ಕಾನೂನು ಕಾಯಿದೆಗಳನ್ನು ರೂಪಿಸಲು ಸಾಧ್ಯವಿಲ್ಲ.

ಅದಕ್ಕೆ ಸಮೀಅ್ (ಪರಿಪೂರ್ಣ ಜ್ಞಾನದ) ಆಗಿರುವವನ ಅಗತ್ಯವಿದೆ. ಇದು ಮನುಷ್ಯನಲ್ಲ. ಬದಲಾಗಿ ವಿಶ್ವವನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿದವನು ಮಾತ್ರ ಪರಿಪೂರ್ಣ ಜ್ಞಾನಿ. ಅವನು ಕಾನೂನು ರೂಪಿಸಿ ಕಾರ್ಯರೂಪಕ್ಕೆ ತರಲು ಸಮರ್ಥನು. ಅವನಿಗೆ ಪ್ರಪಂಚಕ್ಕೆ ಎಂತಹ ಕಾನೂನು(ನಿಯಮ)ಗಳು ಬೇಕು ಮತ್ತು

ಮನುಷ್ಯನ ಜೀವನಕ್ಕೆ ಎಂತಹ ಕಾನೂನು(ನಿಯಮ)ಗಳು ಅರಿವಿದೆ. ಅವನು ಮಾನವ ಪ್ರಕೃತಿಯ ಅಂತರಾಳ ಬಹಿರಂಗಗಳನ್ನೆಲ್ಲವನ್ನೂ ಸಂಪೂರ್ಣ ಅರಿತಿದ್ದಾನೆ. ಈ ಸೃಷ್ಟಿಕರ್ತ ಯಾವುದೇ ಮನುಷ್ಯರ ಬಗ್ಗೆಯಾಗಲಿ, ಯಾವುದೇ ಗುಂಪುಗಳ ಬಗ್ಗೆಯಾಗಲಿ ಪಕ್ಷಪಾತಿಯಲ್ಲ. ಅವುಗಳಿಂದೆಲ್ಲ ಅವನು ಮುಕ್ತನು. ಯಾಕೆಂದರೆ ಅವನ ದೃಷ್ಟಿಯಲ್ಲಿ ಮನುಷ್ಯರೆಲ್ಲರೂ ಸಮಾನರು. ಹೀಗಿದ್ದರೆ ಮಾತ್ರ ಅವನು ಮನುಷ್ಯನಿಗೆ ನ್ಯಾಯಯುತ, ಮಧ್ಯಮ, ಅನುಗ್ರಹೀತ, ಸಾಮೂಹಿಕವಾದ ಜೀವನ ವಿಧಾನವನ್ನು ನೀಡಬಲ್ಲ. ಅದು ಸಕಲ ದೋಷಗಳಿಂದ ಮುಕ್ತವೂ ಸಕಲ ಸದ್ಗುಣ ಗಳಿಂದ ಕೂಡಿದ ಜೀವನ ಪದ್ಧತಿಯಾಗಿದೆ.

ಈ ಜೀವನ ಪದ್ಧತಿ ನಿಸ್ಸಂದೇಹವಾಗಿಯೂ ಪ್ರಬಲವೂ ವಿಶ್ವಾಸಾರ್ಹ, ತೃಪ್ತಿಕರ, ಕಾರ್ಯ ಸಾಧ್ಯ ನಿಯಮ ಕಾನೂಗಳ ಸಂಹಿತೆಯಾಗಿದೆ.

ಅಲ್ಲಾಹನ ಪವಿತ್ರ ಗ್ರಂಥದಲ್ಲಿ ಉತ್ತಮ ಜೀವನ ನಡೆಸುವವರಿಗೆ ಸೂಕ್ತ ಮಾರ್ಗದರ್ಶನ ಇದೆ. ಸಕಲ ವಿಶ್ವ ಮತ್ತು ಸಕಲ ಮನುಷ್ಯರ ಪ್ರಭು ಅವನು. ಅವನೇ ಆಜ್ಞಾಧಿಕಾರಿ. ಸಕಲರನ್ನೂ ಸಕಲವನ್ನೂ ಪರಿಪಾಲಿಸುವ ಪ್ರಭುವಾಗಿರುವನು. ಸಕಲವನ್ನೂ ಅವನ ಜ್ಞಾನ ಆವೃತ್ತಗೊಂಡಿದೆ. ಅವನು ಸರ್ವಜ್ಞ ಮತ್ತು ಯುಕ್ತಿಜ್ಞ

ಈ ಕೆಳಗಿನ ಪವಿತ್ರ ಕುರ್‌ಆನ್ ವಚನಗಳ ಮೂಲಕ ಅಲ್ಲಾಹನು ತನ್ನನ್ನೂ ಮತ್ತು ತನ್ನ ಗ್ರಂಥವನ್ನು ಪರಿಚಯಿಸಿ ಅದರ ಗುಣವಿಶೇಷತೆಗಳನ್ನು ಸ್ಪಷ್ಟವಾಗಿ ವಿವರಿಸಿರುವನು. ಅರ್ಥಾತ್ ಪವಿತ್ರ ಕುರ್‌ಆನ್ ಸಾಮಾನ್ಯವಾದ ಒಂದು ಗ್ರಂಥವೂ ಅಲ್ಲ. ಸಾಧಾರಣ ಅಸ್ತಿತ್ವದಿಂದ ಅವತೀರ್ಣವಾಗಿ ನಿಮ್ಮ ಬಳಿಗೆ ಬಂದಿರುವುದಲ್ಲ. ಸರ್ವತ್ರ ಮತ್ತು ಸಂಪೂರ್ಣ ಒಳಿತುಗಳ ಸಮಾಹಾರ ಅದರಲ್ಲಡಕವಾಗಿದೆ. ಪವಿತ್ರ ಕುರ್‌ಆನ್ ಅದರ ಶ್ರೇಷ್ಠತೆಯನ್ನು ಈ ರೀತಿ ವಿವರಿಸಿದೆ.

ಇನ್ನು ಮಾಮೂಲಿ ಗತ ತಿಳಿಯಬೇಡಿ. ಇದು ಸಾಮಾನ್ಯ ಅಥವಾ ಮಾಮೂಲಿ ಅಸ್ತಿತ್ವದ ಕಡೆಯಿಂದ ಬಂದುದಲ್ಲ. ಬದಲಾಗಿ ಸರ್ವಶಕ್ತ ಮತ್ತು ಸರ್ವಜ್ಞನ ಕಡೆ ಯಿಂದ ಬಂದುದಾಗಿದೆ. ಆದುದರಿಂದ ಸರ್ವತ್ರ (ಸಂಪೂರ್ಣ) ಒಳಿತುಗಳಿವೆ. ಪವಿತ್ರ ಕುರ್‌ಆನ್ ಅದರ ಶ್ರೇಷ್ಠತೆಯನ್ನು ನಮಗೆ ತಿಳಿಸುತ್ತದೆ.

"ಈ ಗ್ರಂಥದ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದಾಗಿರುತ್ತದೆ." (ಅಲ್ ಅಹ್ಕಾಫ್: 2)

ವಿಶ್ವ ಸೃಷ್ಟಿಕರ್ತನು ತನ್ನ ಸೃಷ್ಟಿ ಕಾರ್ಯ ನಡೆಸಿದ ಬಳಿಕ ತಾನು ಸೃಷ್ಟಿಸಿದ ವಸ್ತುಗಳಿಗೆ ಸಹಜವಾಗಿ ಅವುಗಳ ಒಡೆಯನಾಗಿರುತ್ತಾನೆ. ಯಾವತ್ತೂ ಒಡೆಯನಿಗೇ

ತನ್ನ ವಸ್ತುಗಳ ಮೇಲೆ ಆಜ್ಞಾಧಿಕಾರ ಇರುತ್ತದೆ. ಆದುದರಿಂದ ಅವನೇ ತನ್ನ ಸೃಷ್ಟಿಗಳ ಮೂಲಕ ಆರಾಧಿಸಲ್ಪಡಲು ಅರ್ಹನಾಗಿರುತ್ತಾನೆ. ಸೃಷ್ಟಿಗಳ ವಿಧೇಯತೆಗೆ ಅವನೇ ಅರ್ಹನು. ಆದ್ದರಿಂದಲೂ ಅವನು ತನ್ನ ಸೃಷ್ಟಿಗಳಿಗೆ ಮಾರ್ಗದರ್ಶಿಯಾದ ಕಾನೂನುಗಳನ್ನು ನೀಡುವ ಹಕ್ಕು ಅಧಿಕಾರಗಳನ್ನು ಸಹಜವಾಗಿಯೇ ಹೊಂದಿರುತ್ತಾನೆ.

ಮಾತ್ರವಲ್ಲ ವಿಶ್ವದ ಸೃಷ್ಟಿಕರ್ತ ಸ್ವಯಂ ತನ್ನ ಹೆಸರನ್ನು ಅಲ್ಲಾಹ್ ಎಂದು ಸೂಚಿಸಿರುವನು. ಹೀಗಾಗಿ ಪ್ರಪಂಚಕ್ಕೆ ಮತ್ತು ಪ್ರಪಂಚದ ಸೃಷ್ಟಿಗಳನ್ನು ಪರಿಪಾಲಿಸುವ ಪಾಲಕ ಪ್ರಭು ಅಲ್ಲಾಹನೇ ಆಗಿದ್ದಾನೆ (ಪರಿಪಾಲಿಸುವವನು, ಪೋಷಿಸುವವನು, ಜೀವನಾಧಾರ ನೀಡುವವನು). ಅವನೇ ತನ್ನ ಸೃಷ್ಟಿಗಳಿಗೆ ಅವುಗಳಿಗಿರುವ ಉದ್ದೇಶವನ್ನು ಮತ್ತು ಅವುಗಳ ಅಸ್ತಿತ್ವದ ಕುರಿತು ಮಾರ್ಗದರ್ಶನ ನೀಡಿರುವನು. ಮೂಲತಃ ಈ ಮಾರ್ಗದರ್ಶನವು ಅವುಗಳ ಸ್ವಭಾವದಲ್ಲಿಯೇ (ಮೂಲ ಪ್ರಕೃತಿಯಲ್ಲಿ) ಇದೆ.

ಉದಾಹರಣೆಗೆ, ಜೇನು ನೊಣಗಳು ಇಡೀ ದಿನ ತಮ್ಮನ್ನು ತೊಡಗಿಸಿಕೊಳ್ಳುವುದು ತಮ್ಮ ಅಸ್ತಿತ್ವದ ಉದ್ದೇಶವನ್ನು (ಅರ್ಥಾತ್ ಜೀವನಾಧಾರವನ್ನು) ಹುಡುಕಿಕೊಳ್ಳುವುದರಲ್ಲಾಗಿದೆ. ಮನುಷ್ಯರು ಅಲ್ಲಾಹನು ಅವರಿಗೆ ನೀಡಿರುವ ಗ್ರಂಥ ಪವಿತ್ರ ಕುರ್‌ಆನ್‌ನ ಮೂಲಕ ತಮ್ಮ ಅಸ್ತಿತ್ವದ ಉದ್ದೇಶ ಮತ್ತು ಅದನ್ನು ಸಾಧಿಸುವ ವಿಧಾನವನ್ನು ಮತ್ತು ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ಅಲ್ಲಾಹನು ಅವರು ತಮ್ಮ ಜೀವನದಲ್ಲಿ ಯಶಸ್ವಿಯಾಗುವುದಕ್ಕೆ ಅಗತ್ಯವಿರುವ ಸೂಕ್ತ ಮಾರ್ಗದರ್ಶನ ಗ್ರಂಥದಲ್ಲಿ ಇರಿಸಿದ್ದಾನೆ.

ಅವನು ಮುಹಮ್ಮದ್‌ರನ್ನು(ಸ) ಸಂದೇಶವಾಹಕರಾಗಿ ಆಯ್ಕೆ ಮಾಡಿ, ತನ್ನ ವಚನಗಳ ಸಮಾಹಾರವಾದ ಪವಿತ್ರ ಕುರ್‌ಆನ್‌ನನ್ನು ಜನರಿಗೆ ವಿವರಿಸುವ ಬಹು ದೊಡ್ಡ ಹೊಣೆಗಾರಿಕೆಯನ್ನು ವಹಿಸಿಕೊಟ್ಟನು. ಮಾತ್ರವಲ್ಲ ಅವರೇ ಸ್ವತಃ ಆ ವಚನಗಳಂತೆ ತಮ್ಮ ಕರ್ಮಗಳ ಮೂಲಕ ಜನರಿಗೆ ಮಾದರಿಯಾಗಿ ತಮ್ಮ ಜೀವನವನ್ನು ಜನರ ಮುಂದೆ ಪ್ರಸ್ತುತಪಡಿಸುವ ಹೊಣೆಯನ್ನೂ ನೀಡಿದನು. ಅಲ್ಲಾಹನೇ ನೈಜ ಆರಾಧ್ಯ ಎಂಬುದನ್ನು ನಿರಾಕರಿಸುವವರ ವಿರೋಧ, ಪ್ರತಿರೋಧದ ಹೊರತಾಗಿಯೂ ಜನರ ಮುಂದೆ ಅಲ್ಲಾಹನೇ ತಿಳಿಸುವ ಹೊಣೆಗಾರಿಕೆ ಕೂಡಾ ಅದಾಗಿತ್ತು.

ಆದುದರಿಂದ ಅಲ್ಲಾಹನು ತನ್ನ ಗ್ರಂಥದ ಮೂಲಕ ಸತ್ಯವನ್ನು ಅನಾವರಣಗೊಳಿಸುತ್ತಾನೆ. ಅರ್ಥಾತ್ ನೈಜ ಸ್ಥಿತಿಯನ್ನು ಅಭಿಸಂಬೋಧಿತರ ಮುಂದೆ ವಿವರಿಸಿದ್ದಾನೆ. ಅವನು ಈ ಪ್ರಪಂಚ ಮತ್ತು ಪ್ರಪಂಚದೊಳಗಿರುವ ಸಕಲ ವಸ್ತುಗಳ ಪ್ರಭು, ಸೃಷ್ಟಿಕರ್ತ ಒಡೆಯ ಮತ್ತು ಅವನಿಗೆ ಪ್ರತಿಯೊಂದರ ಮೇಲೆ ಪ್ರಭುತ್ವ, ಅಧಿಕಾರವಿದೆ. ಮನುಷ್ಯರಿಗೂ ಅವನೇ ಮಾರ್ಗದರ್ಶನ ಮಾಡುತ್ತಾನೆ. ಮನುಷ್ಯರ ಮಾರ್ಗದರ್ಶನದ

ಸಲುವಾಗಿಯೇ ಪವಿತ್ರ ಕುರ್‌ಆನನ್ನೂ ತನ್ನ ಪ್ರವಾದಿಯ ಮೂಲಕ ಅವರ ಕಡೆಗೆ ಕಳುಹಿಸಿರುತ್ತಾನೆ ಎಂಬುದೆಲ್ಲವನ್ನೂ ಅಲ್ಲಾಹನ ಗ್ರಂಥವು ತಿಳಿಯಪಡಿಸುತ್ತದೆ. ಜನರ ಮುಂದಿಡುತ್ತಿರುವ ಈ ಮಾರ್ಗದರ್ಶನ ಮತ್ತು ಜ್ಞಾನವು ಅಲ್ಲಾಹನನ್ನೇ ಆರಾಧಿಸಲು ಮತ್ತು ಅಲ್ಲಾಹನಿಗೇ ವಿಧೇಯರಾಗಲಿಕ್ಕಾಗಿದೆ.

"ತಾಹಾ. ನಾವು ಈ ಕುರ್‌ಆನನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ನಿಮ್ಮನ್ನು ಸಂಕಷ್ಟಕ್ಕೀಡು ಮಾಡಲಿಕ್ಕಲ್ಲ. ಇದು ಭಯಪಿರಿಸುವ ಪ್ರತಿಯೊಬ್ಬನಿಗೆ ನೆನಪಿಸುವ ಒಂದು ಸಾಧನವಾಗಿದೆ. ಭೂಮಿಯನ್ನೂ ಉನ್ನತ ಆಕಾಶಗಳನ್ನೂ ಸೃಷ್ಟಿಸಿದವನ ಕಡೆಯಿಂದ ಇದು ಅವತೀರ್ಣಗೊಂಡಿದೆ. ಆ ದಯಾಮಯನು (ವಿಶ್ವ) ಸಿಂಹಾಸನದ ಮೇಲೆ ವಿರಾಜಿಸುತ್ತಿದ್ದಾನೆ. ಅವನು ಆಕಾಶಗಳಲ್ಲೂ ಭೂಮಿಯಲ್ಲೂ ಅವೆರಡರ ನಡುವೆಯೂ ಮಣ್ಣಿನಡಿಯಲ್ಲಿಯೂ ಇರುವ ಸಕಲ ವಸ್ತುಗಳ ಮಾಲಕನಾಗಿರುತ್ತಾನೆ. ನೀವು ನಿಮ್ಮ ಮಾತನ್ನು ಉಚ್ಚ ಸ್ವರದಲ್ಲೇ ಹೇಳಿದರೂ ಅವನಂತೂ ಮೆಲುದನಿಯ ಮಾತನ್ನು ಮಾತ್ರವಲ್ಲ ಅದಕ್ಕಿಂತಲೂ ರಹಸ್ಯವಾದ ಮಾತನ್ನು ಅರಿಯುತ್ತಾನೆ. ಅವನು ಅಲ್ಲಾಹ್, ಅವನ ಹೊರತು ಅನ್ಯ ದೇವನಿಲ್ಲ. ಅವನಿಗೆ ಅತ್ಯುತ್ತಮ ನಾಮಗಳಿವೆ." **(ತಾಹ: 1–8)**

10) ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಪರಿಚಯ:

ಸಾಷ್ಟಾಂಗವೆರಗಲು ಮತ್ತು ವಿಧೇಯತ್ವಕ್ಕೆ(ಅನುಸರಣೆಗೆ) ಯಾವ ಅಸ್ತಿತ್ವ ಸೂಕ್ತವೋ ಆ ಅಸ್ತಿತ್ವವನ್ನು ಪವಿತ್ರ ಕುರ್‌ಆನ್ ಹೀಗೆ ಪರಿಚಯಿಸುತ್ತಿದೆ...

"ಪೈಗಂಬರರೇ, ಸ್ವಯಂ ಜೀವಂತನೂ ಅಮರನೂ ಆಗಿರುವ ದೇವನ ಮೇಲೆ ಭರವಸೆಯಿಡಿರಿ. ಅವನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸಿರಿ. ತನ್ನ ದಾಸರ ಪಾಪಗಳ ಬಗ್ಗೆ ಅವನು ಮಾತ್ರ ಅರಿತಿದ್ದರೆ ಸಾಕು. ಅವನು ಭೂಮಿ–ಆಕಾಶಗಳನ್ನೂ ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿದನು. ತರುವಾಯ ಸ್ವಯಂ ಸಿಂಹಾಸನಾ ರೂಢನಾದನು. ರಹ್ಮಾನ್! ಅವನ ಘನತೆಯನ್ನು ಬಲ್ಲವರೊಡನೆ ಕೇಳಿಕೊಳ್ಳಿರಿ." **(ಅಲ್ ಫುರ್ಖಾನ್: 58–59)**

11) ಸೃಷ್ಟಿಕಾರ್ಯ ಕೂಡ ಅವನದೇ ಮತ್ತು ಸಾರ್ವಭೌಮತ್ವವೂ ಅವನದೇ:

ಈ ಹಿಂದೆಯೇ ಅಲ್ಲಾಹನು ಸದಾ ಜೀವಂತ (ಅಮರನು) ಇರುವವನು ಎಂದು ತಿಳಿಸಲಾಗಿದೆ. ಅವನು ಈ ಪ್ರಪಂಚವನ್ನು ಆರು ದಿನಗಳಲ್ಲಿ ಸೃಷ್ಟಿಸಿದನು. ಆಮೇಲೆ ಈ ಪ್ರಪಂಚದಲ್ಲಿ ಅಧಿಕಾರ (ಪ್ರಭುತ್ವ ಅವನದೇ) ನಡೆಸುತ್ತಿದ್ದಾನೆ. ಸೃಷ್ಟಿಕಾರ್ಯದಿಂದ ಅವನು ದಣಿಯುವುದಿಲ್ಲ, ನಿದ್ರಿಸುವುದಿಲ್ಲ. ಅವನು ಪ್ರಪಂಚದ

ವ್ಯವಸ್ಥೆ ಮತ್ತು ವ್ಯವಸ್ಥಾಪನೆಯಲ್ಲಿ ಅವನು ಸಂಪೂರ್ಣ ಆಸಕ್ತನು. ಅವರ*(ಸೃಷ್ಟಿಗಳ) ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ತನ್ನನ್ನು ಕರುಣಾನಿಧಿ (ರಹ್ಮಾನ, ಕರುಣಾಮಯಿ) ಎಂಬ ನೆಲೆಯಲ್ಲೂ ಪರಿಚಯಿಸಿರುವನು. ಸಂಪೂರ್ಣ ಕರುಣೆಯಿಂದ (ಅನುಗ್ರಹ ಗಳಿಂದ) ಅವನು ಪ್ರಪಂಚದ ಆಧಿಪತ್ಯ (ಅಧಿಕಾರ) ನಡೆಸುತ್ತಿದ್ದಾನೆ. ಅವನಲ್ಲಿ ಸಕಲ ಅತ್ಯುತ್ಕೃಷ್ಟ ಗುಣವೈಶಿಷ್ಟ್ಯಗಳು ಉನ್ನತಮಟ್ಟದಲ್ಲಿ ಪರಿಪೂರ್ಣವೂ ಸಮನ್ವಯವೂ ಆಗಿದೆ. ಅದನ್ನು ಮನುಷ್ಯನಿಂದ (ಬುದ್ಧಿಗೆ) ಗ್ರಹಿಸಲೋ ಊಹಿಸಲೋ ಸಾಧ್ಯವಿಲ್ಲ. ಅದಕ್ಕೆ ಅವರು ಸಮರ್ಥರೂ ಅಲ್ಲ.

ಆದುದರಿಂದ ಪ್ರವಾದಿ (ಪ್ರವಾದಿ ಕೂಡ ಮನುಷ್ಯರೇ) ತನ್ನ ವತಿಯಿಂದ ಏನನ್ನೂ ಹೇಳಲಾರರು. ಕೇವಲ ಅವರು ತನ್ನ ಮೇಲೆ ವಹಿಸಿಕೊಟ್ಟಿರುವ ಜನರೆಡೆಗೆ ತಲುಪಿಸುವ (ಅಲ್ಲಾಹನ ಸಂದೇಶ) ಕಾರ್ಯವನ್ನು ಸಂಪೂರ್ಣ ಹೊಣೆಗಾರಿಕೆಯಿಂದ ನಿರ್ವಹಿಸುತ್ತಾರೆ. ಅವರ ಕೆಲಸ ಜನರೆಡೆಗೆ ಸೃಷ್ಟಿಕರ್ತನ ಸಂದೇಶವನ್ನು ತಲುಪಿಸುವುದು. ಅವರು ವಹ್ಯ್‌ನಲ್ಲಿ ಅವತೀರ್ಣವಾದುದನ್ನು (ಅಲ್ಲಾಹನಿಂದ ಅವತೀರ್ಣಗೊಳ್ಳುವ ಸಂದೇಶ) ಸ್ಪಷ್ಟವೂ ಮತ್ತು ವ್ಯಕ್ತವಾದ ರೀತಿಯಲ್ಲಿ ಜನರಿಗೆ ವಿವರಿಸಿ ಹೇಳುವರು. ಸೃಷ್ಟಿಕರ್ತ ಮತ್ತು ಆರಾಧ್ಯ ಒಬ್ಬನೇ ಎಂದು ವಹ್ಯ್ ಮೂಲಕ ಅವರಿಗೆ ತಿಳಿಸ ಲಾಗುತ್ತದೆ. ಪವಿತ್ರ ಕುರ್‌ಆನ್ ದೈವಿಕ ವಚನಗಳ (ವಹ್ಯ್ ಇಲಾಹಿ) ಗ್ರಂಥವಾಗಿದ್ದು ಹೀಗೆ ವಿವರಿಸುತ್ತಿದೆ.

"ಓ, ಪೈಗಂಬರರೇ, ಹೇಳಿರಿ– ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ, ನಿಮ್ಮ ದೇವನು ಏಕ ಮಾತ್ರ ದೇವನೆಂದು ನನ್ನ ಕಡೆಗೆ ದಿವ್ಯವಾಣಿ ಮಾಡಲಾಗುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ." (ಅಲ್‌ಕಹ್ಫ್: 110)

12) ಅಲ್ಲಾಹನು ಏಕೈಕನಾಗಿದ್ದಾನೆ:

ಒಬ್ಬನಿಗಿಂತ ಹೆಚ್ಚು ಸೃಷ್ಟಿಕರ್ತರು, ಒಡೆಯರು, ಆಡಳಿತಾಧಿಕಾರಿಗಳು ಇದ್ದರೆ ವಿಶ್ವ ನಿರ್ವಹಣೆಯ ಒಟ್ಟು ವ್ಯವಸ್ಥೆಯೇ ಕೆಟ್ಟುಹೋದಿತು. ಇಂತಹದ್ದೊಂದು ಚಿಂತನೆಯೇ ನಿಶ್ಚಯವಾಗಿಯೂ ಅಸಹಜ ಮತ್ತು ಅವಾಸ್ತವಿಕವಾದ ಚಿಂತನೆ ಯಾಗುವುದು. ಖಂಡಿತವಾಗಿಯೂ ಒಂದು ಸಂಸ್ಥೆಗೆ ಒಬ್ಬ ಅಧ್ಯಕ್ಷನಿರುವುದು ವಾಸ್ತವಿಕವಾಗಿದೆ. ಈ ವಸ್ತುಸ್ಥಿತಿಯನ್ನು ಪವಿತ್ರ ಕುರ್‌ಆನ್ ಹೀಗೆ ಮನವರಿಕೆ ಮಾಡಿಕೊಡುತ್ತಿದೆ.

"ಭೂಮಿ–ಆಕಾಶಗಳಲ್ಲಿ ಏಕೈಕ ಅಲ್ಲಾಹನ ಹೊರತು ಇತರ ದೇವರುಗಳು ಇರುತ್ತಿದ್ದರೆ (ಭೂಮಿ–ಆಕಾಶ) ಇವೆರಡರ ವ್ಯವಸ್ಥೆಯೂ ಕೆಟ್ಟು ಹೋಗುತ್ತಿತ್ತು.

ಆದುದರಿಂದ 'ವಿಶ್ವ ಸಿಂಹಾಸನದ' ಪ್ರಭು ಆಗಿರುವ ಅಲ್ಲಾಹನು ಇವರು ಹೊರಿಸುವ ಆರೋಪಗಳಿಂದ ಪರಿಶುದ್ಧನಾಗಿರುತ್ತಾನೆ." **(ಅಲ್ ಅಂಬಿಯಾ: 22)**

ಮೇಲಿನ ವಚನಗಳಿಂದ ಒಂದಕ್ಕಿಂತ ಹೆಚ್ಚು ದೈವಿಕ ಅಸ್ತಿತ್ವಗಳಿವೆ (ದೇವರುಗಳಿದ್ದಾರೆ) ಎಂಬ ಪರಿಕಲ್ಪನೆಯೇ ತಪ್ಪು ಮತ್ತು ಅದೊಂದು ವಿಪರೀತ ಚಿಂತನೆ ಮತ್ತು ಅತಾರ್ಕಿಕ ವಾದವಾಗಿದೆ ಎಂದು ತಿಳಿದು ಬರುತ್ತದೆ. ಜೊತೆಗೆ ಇಂತಹ ಪರಿಕಲ್ಪನೆ ಗಳೆಲ್ಲವೂ ತರ್ಕಕ್ಕೆ ಮತ್ತು ಪ್ರಮಾಣಗಳಿಗೆ ನಿಲುಕದ ವಿಚಾರಗಳಾಗಿವೆ.

13) ಆರಾಧ್ಯನ ಏಕತ್ವ– ಎಲ್ಲ ಕಾಲದಲ್ಲಿಯೂ ಸಕಲ ಮನುಷ್ಯರಿಗೆ ಸದಾ ಇರುವುದು ಒಬ್ಬನೇ ಆರಾಧ್ಯ:

ಸಕಲ ಮನುಷ್ಯರಿಗೆ ಎಲ್ಲ ಸ್ಥಳಗಳಲ್ಲಿಯೂ ಎಲ್ಲ ಸಮಯದಲ್ಲಿಯೂ ಇರುವವನು ಏಕೈಕ ದೇವನು ಎಂಬುದು ಏಕತ್ವ(ಏಕದೇವತ್ವ)ದ ವಿಶೇಷತೆಯಾಗಿದೆ. ದೇವನೊಬ್ಬನೇ. ಸತ್ಯ ಕೂಡ ಒಂದೇ ಆಗಿರುತ್ತದೆ. ಸಮಯಕ್ಕೆ ತಕ್ಕಂತೆಯೋ ಲೆಕ್ಕಾಚಾರದ ಪ್ರಕಾರವೋ ಇದರಲ್ಲಿ ಬದಲಾವಣೆಗಳಾಗದು. ಅಲ್ಲಾಹನು ಎಲ್ಲಾ ಕಾಲದಲ್ಲಿ ಸಕಲ ಸ್ಥಳಗಳಿಗೆ ಮತ್ತು ಅಂದಿನ ಆಯಾ ಸ್ಥಳದ ಜನರಿಗೆ ಸಂದೇಶವಾಹಕರನ್ನಾಗಿ ಮನುಷ್ಯರನ್ನೇ ನಿಯೋಜಿಸಿದನು.

ಸಂದೇಶವಾಹಕರೆಲ್ಲರ ಸಂದೇಶವು ಮೂಲತಃ ಒಂದೇ ಆಗಿತ್ತು. ಅವರೆಲ್ಲರೂ ತಮ್ಮೆಲ್ಲ ಅಭಿಸಂಬೋಧಿತರ ಮುಂದೆ ನೈಜ ಆರಾಧ್ಯನು ಒಬ್ಬನೇ ಎಂಬ ಒಂದೇ ಮಾತನ್ನು ಹೇಳಿದರು. ಆ ಆರಾಧ್ಯನು ಅಲ್ಲಾಹನಾಗಿದ್ದು ಎಲ್ಲರೂ ಅವನ ದಾಸರು ಹಾಗೂ ಅವನದೇ ದಾಸ್ಯಾರಾಧನೆ ಮಾಡಬೇಕೆಂಬ ಒಂದೇ ಸಂದೇಶವನ್ನು ಸಕಲ ಸಂದೇಶವಾಹಕರು ನೀಡಿದರು.

"ನಾವು ನಿಮಗಿಂತ ಮುಂಚೆ ಕಳುಹಿಸಿದ ಪ್ರತಿಯೊಬ್ಬ ಸಂದೇಶವಾಹಕರಿಗೂ "ನನ್ನ ಹೊರತು ಅನ್ಯ ದೇವರಿಲ್ಲ. ಆದ್ದರಿಂದ ನೀವು ನನ್ನ ದಾಸ್ಯ–ಆರಾಧನೆಯನ್ನೇ ಮಾಡಿರಿ" ಎಂದು 'ದಿವ್ಯವಾಣಿ' ಮಾಡಿದೆವು." **(ಅಲ್ ಅಂಬಿಯಾ: 25)**

ಸಂಪೂರ್ಣ ಪ್ರಪಂಚವನ್ನು ಸೃಷ್ಟಿಸಿದವನು ಅತ್ಯುತ್ತಮ ಜ್ಞಾನಿಯಾಗಿದ್ದಾನೆ. ಅವನಲ್ಲದೆ ಆರಾಧ್ಯರು ಬೇರೆ ಇದ್ದಾರೆಯೇ, ಅವರು ವಿಧೇಯತ್ವಕ್ಕೆ ಅರ್ಹರೇ, ಅವರಿಗೆ ಸಾಷ್ಟಾಂಗವೆರಗಬಹುದೇ, ಅವರೊಡನೆ ಪ್ರಾರ್ಥಿಸಬಹುದೇ ಎಂಬೆಲ್ಲ ವಿಷಯದ ಮೇಲೆ ಅತ್ಯುತ್ತಮ ಜ್ಞಾನವು ಈ ಪ್ರಪಂಚವನ್ನು ಸೃಷ್ಟಿಸಿದ ಸೃಷ್ಟಿಕರ್ತನಿಗೆ ಮಾತ್ರ ಇರುವುದು. ಆದುದರಿಂದ ಅವನೇ ವಸ್ತು ಸ್ಥಿತಿಯನ್ನು ತಿಳಿಸಬೇಕಾಗಿದೆ. ಸೃಷ್ಟಿಕರ್ತನು ಜನರಿಂದ ಆಯ್ಕೆ ಮಾಡಿ ಜನರ ಕಡೆಗೆ ನಿಯೋಜಿಸಿದ ದಾಸನ (ಸಂದೇಶವಾಹಕ–

ಪ್ರವಾದಿ) ಮೂಲಕ ಈ ವಸ್ತುಸ್ಥಿತಿಯನ್ನು ದಾಸರಿಗೆ ತಿಳಿಸುತ್ತಾನೆ ಮತ್ತು ಇದು ದಾಸರ ಮೇಲೆ ಅವನ ಅನುಗ್ರಹ ಮತ್ತು ಪ್ರೀತಿಯಾಗಿದೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತದೆ...

"ಅವನು ಈ ರೂಹ್ ಅನ್ನು ತನಗೆ ಇಷ್ಟ ಬಂದ ದಾಸನ ಮೇಲೆ ತನ್ನ ಅನುಜ್ಞೆಯಿಂದ ದೇವಚರ ಮುಖಾಂತರ ಅವತೀರ್ಣಗೊಳಿಸಿ ಬಿಡುತ್ತಾನೆ. (ಇದು) "ನನ್ನ ಹೊರತು ಯಾರೂ ನಿಮ್ಮ ಆರಾಧ್ಯನಿಲ್ಲ. ಆದುದರಿಂದ ನೀವು ನನ್ನನ್ನೇ ಭಯ ಪಡಿರಿ ಎಂದು ಜನರನ್ನು ಎಚ್ಚರಿಸಿರಿ" (ಎಂಬ ಆದೇಶ ಸಹಿತ)." (ಅನ್ನಹ್ಲ್: 2)

ಅಲ್ಲಾಹನ ಹಿಂದೆಯಾಗಲಿ ಮುಂದೆಯಾಗಲಿ ಇತರ ಯಾರೂ ಇಲ್ಲ. ಅವನ ಸುತ್ತಮುತ್ತಲೂ ಯಾರೂ ಇಲ್ಲ. ಈ ವಿಚಾರವು ಸೂರ ಇಖ್ಲಾಸ್‌ನಲ್ಲಿ ಕೂಡ ಉದ್ಧರಿಸಲ್ಪಟ್ಟಿದೆ ಅಲ್ಲಾಹನಿಗೆ ಯಾವುದೇ ಸಂತಾನವಿಲ್ಲ. ಅವನು ಯಾರದೇ ಸಂತಾನವಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಇಲ್ಲಿ ಮೇಲೆ ಬಂದಿರುವ ವಚನಗಳಿಂದ ಸಕಲ ವಸ್ತುಗಳೂ ಅವನ ಆಸ್ತಿಯೆಂದೂ ಅದರಲ್ಲಿ ಜೀವ ಇರುವುದಾಗಿರಲಿ, ಇಲ್ಲದಿರುವುದಾಗಿರಲಿ ಎಲ್ಲವೂ ಅವನದೇ ಆಸ್ತಿ ಮತ್ತು ಎಲ್ಲವೂ ಅವನ ಸೃಷ್ಟಿಗಳು ಮತ್ತು ಎಲ್ಲವೂ ಅವನ ಆಜ್ಞೆಯಂತೆಯೇ ಅಸ್ತಿತ್ವವನ್ನು ಪಡೆದುಕೊಂಡಿವೆ ಎಂಬ ವಿಚಾರ ತಿಳಿದು ಬರುತ್ತದೆ.

ಯಾವತ್ತೂ ಸೃಷ್ಟಿಗಳು ಸೃಷ್ಟಿಕರ್ತನ ಸಂತಾನವಲ್ಲ ಮತ್ತು ಅವರು ಅವನ ಸಂತಾನವಾಗಲು ಸಾಧ್ಯವೂ ಇಲ್ಲ. ಯಾರಾದರೂ ಹೀಗೆ ವಾದಿಸುವುದಾದರೆ ಕೇವಲ ಅದೊಂದು ಹಾಸ್ಯಾಸ್ಪದ ವಿಚಾರವೂ ವಂಚನೆಯೂ ಆಗಿಬಿಡುತ್ತದೆ. ಏಕೆಂದರೆ ಸೃಷ್ಟಿಗಳು ಬರೇ ಸೃಷ್ಟಿಗಳು ಮಾತ್ರವಾಗಿದ್ದಾರೆ. ಅವರು ಹೇಗೆ ಸಂತಾನವಾಗುವುದು? ಮಕ್ಕಳು ತಾಯಿಯ ಗರ್ಭದಿಂದ ಜನಿಸುವುದು.

ಅಲ್ಲಾಹನಂತಹ ಇನ್ನೊಂದು ಅಸ್ತಿತ್ವವಿಲ್ಲ. ಅವನ ಗುಣವೈಶಿಷ್ಟ್ಯಗಳು ಅವನಿನಲ್ಲದೆ ಬೇರೆ ಯಾರಿಗೂ ಇಲ್ಲ, ಅಲ್ಲಾಹನಿಗೆ ಸರಿಸಮಾನ ಅವನಲ್ಲದೆ ಬೇರೆ ಯಾವುದೇ ಅಸ್ತಿತ್ವವೇ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುವನು. ಜೊತೆಗೆ ಅಲ್ಲಾಹನು ತನ್ನ ಗ್ರಂಥದಲ್ಲಿ ಪ್ರಪಂಚದಲ್ಲಿ ಇರುವುದೆಲ್ಲವನ್ನೂ ಅವುಗಳ ಸ್ಥಿತಿಗತಿಗಳನ್ನೂ ಸ್ಥಾನಮಾನವನ್ನೂ ಅವುಗಳು ಹೇಗೆ ಅಸ್ತಿತ್ವಕ್ಕೆ ಬಂದಿವೆ ಎಂದೂ ಬಹಳ ಸ್ಪಷ್ಟವಾಗಿ ವಿವರಿಸುತ್ತಾನೆ.

"ಅಲ್ಲಾಹನು ಪುತ್ರನನ್ನು ಹೊಂದಿದ್ದಾನೆ ಎಂದು ಅವರನ್ನುತ್ತಾರೆ. ಇಂತಹ ಮಾತುಗಳಿಂದ ಅಲ್ಲಾಹನು ಪರಿಶುದ್ಧನು. ವಾಸ್ತವದಲ್ಲಿ ಭೂಮಿ-ಆಕಾಶಗಳಲ್ಲಿರುವುದೆಲ್ಲವೂ ಅವನ ಸೊತ್ತು. ಸರ್ವವೂ ಅವನ ವಿಧೇಯ ಆಜ್ಞಾನುವರ್ತಿಗಳು. ಆತನು ಭೂಮಿ-ಆಕಾಶಗಳ ನಿರ್ಮಾತೃ. ಅವನು ಯಾವುದಾದರೊಂದು

ಕಾರ್ಯದ ನಿರ್ಧಾರ ಮಾಡಿಕೊಂಡೊಡನೆ "ಸಂಭವಿಸು" ಎಂದು ಆಜ್ಞಾಪಿಸುತ್ತಾನೆ. ಆಗಲೇ ಇದು ಸಂಭವಿಸುತ್ತದೆ." (ಅಲ್‌ಬಕರಾ: 116–117)

ಅವನು ಆದಿಯಿಂದಲೂ ಉಪಸ್ಥಿತನಿರುವವನು. ಅಂದರೆ ಅವನ ಹೊರತು ಬೇರೆ ಯಾವುದೂ ಇರಲಿಲ್ಲ. ಜೀವಜಾಲಗಳನ್ನು ಮತ್ತು ಪ್ರಪಂಚವನ್ನು ಅವನೇ ಸೃಷ್ಟಿಸಿರುವುದು.

14) ಪ್ರಪಂಚ ಸೃಷ್ಟಿಕರ್ತನಾಗಿರುವ ಅಲ್ಲಾಹನ ಪರಿಚಯ:

ಪವಿತ್ರ ಕುರ್‌ಆನ್ ಪ್ರಪಂಚ ಸೃಷ್ಟಿಕರ್ತನಾದ ಅಲ್ಲಾಹನೇ ಆದಿಯಾಗಿದ್ದಾನೆ. ಅವನು ಏಕೈಕನು ಮತ್ತು ಅವನಿಗಿಂತ ಮೊದಲು ಎಂಬುದಿಲ್ಲ ಎಂದು ಪರಿಚಯಿಸಿದೆ. ಅವನು ಅಲ್ ಹಯ್ಯುಲ್ ಕಯ್ಯೂಂ (ಸ್ವಯಂ ಜೀವಂತನು, ಚಿರಂತನನು) ಆಗಿರುವನು. ಅವನು ಸದಾ ಜೀವಂತನಾಗಿರುವನು ಶಾಸ್ವತನಾಗಿರುವವನಿಗೆ ಸಂತಾನ ಗಳನ್ನು ಆಶ್ರಯಿಸುವ ಅಗತ್ಯವಿಲ್ಲ. ಅವನಿಗೆ ಮುಪ್ಪಿಲ್ಲ, ವಯಸ್ಸಾಗುವುದಿಲ್ಲ. ಅವನು ಅಸ್ವಸ್ಥನಾಗುವುದಿಲ್ಲ. ಸಕಲ ದೌರ್ಬಲ್ಯಗಳಿಂದ ಮುಕ್ತನು.

ಇತರರ ಅವಲಂಬನೆಯ ಸಕಲ ಕಾರಣಗಳಿಂದ ಅಲ್ಲಾಹನು ಮುಕ್ತನು ಸರ್ವ ಸ್ವತಂತ್ರನು, ಪರಿಶುದ್ಧನು ಮತ್ತು ನಿರಪೇಕ್ಷನಾಗಿದ್ದಾನೆ. ಅವನು ನಿರಪೇಕ್ಷನಾಗಿರುವುದ ರಿಂದ ಅವನು ಸರ್ವಸ್ವತಂತ್ರನು ಮತ್ತು ಏಕೈಕನು. ಅವನ ಅಸ್ತಿತ್ವದಲ್ಲಾಗಲಿ ಅವನ ಗುಣಗಳಲ್ಲಿ ಯಾರೂ ಭಾಗೀದಾರರಿಲ್ಲ. (ಅವನಿಗೆ ಪತ್ನಿ–ಮಕ್ಕಳಿಲ್ಲ) ಅವನ ಗುಣ ಗಳಿಗೆ ಅವನೇ ಅರ್ಹ. ಅಂದರೆ ಅಲ್ಲಾಹನಂತೆ ವೀಕ್ಷಿಸುವ, ಆಲಿಸುವ, ಪ್ರೀತಿಸುವ, ಜೀವ ಕೊಡುವವರು ಮರಣ ಕೊಡುವವರು ಬೇರೆ ಯಾರೂ ಇಲ್ಲ. ಈ ಗುಣ ಗಳೆಲ್ಲವೂ ಅವನಿಗೇ ಸೀಮಿತವಾಗಿದೆ. ಆದುದರಿಂದ ಅವನೇ ದಾಸರ ವಿಧೇಯತೆ, ಸಾಷ್ಟಾಂಗವೆರಗಲು, ಪ್ರಾರ್ಥನೆ, ಭರವಸೆ, ನಿರೀಕ್ಷೆ ಇರಿಸಲು ಮತ್ತು ಪ್ರೀತಿಸಲು ಅರ್ಹನು. ಅವನ ಹೊರತು ಬೇರೆ ಯಾರೂ ಅರ್ಹರಲ್ಲ.

ಅವನ ಅಧಿಕಾರದಲ್ಲಿ ಯಾರೂ ಭಾಗೀದಾರರಿಲ್ಲ. ವಾಸ್ತವದಲ್ಲಿ ದಾಸರ ಸಾಷ್ಟಾಂಗ, ವಿಧೇಯತೆ, ಪ್ರಾರ್ಥನೆ, ಭರವಸೆ, ನಿರೀಕ್ಷೆ ಮತ್ತು ಪ್ರೀತಿಸುವುದಕ್ಕೆ ಅವನೇ ಅರ್ಹನು. ಆದುದರಿಂದ ಅವನಲ್ಲದೆ ಬೇರೆಯಾರನ್ನೂ ಪ್ರಾರ್ಥಿಸಬಾರದು. ಅವನಿಗಲ್ಲದೆ ಬೇರೆಯಾರಿಗೂ ಸಾಷ್ಟಾಂಗ ಪ್ರಮಾಣ ಮಾಡಬಾರದು. ವಿಶ್ವದಲ್ಲಿ ಅವನಂತಿರುವ ಉದಾಹರಣೆ ನೀಡಬಹುದಾದ ಬೇರೆ ಯಾರೂ ಇಲ್ಲ. ಅವನಂತಹ ಶಕ್ತಿಶಾಲಿ ಅಸ್ತಿತ್ವ ಬೇರೆ ಯಾರಿಗೂ ಇಲ್ಲ. ಅವನು ಕರುಣೆ ತೋರುವವನು, ಪ್ರೀತಿಸು ವವನು, ಕ್ಷಮಿಸುವವನು, ವೀಕ್ಷಿಸುವವನು, ಆಲಿಸುವವನು, ಜ್ಞಾನಿ (ಸಕಲ ವಿಷಯಗಳ ಅರಿವು ಹೊಂದಿರುವವನು) ಹೃದ್ಮನಗಳ ಸ್ಥಿತಿಯನ್ನು ಅರಿತವನು,

ಸ್ವತಂತ್ರ, ಸ್ವಾಯತ್ತನು, ಅವನ ತೀರ್ಮಾನವೇ ಅಂತಿಮ ತೀರ್ಮಾನವಾಗಿದೆ. ಅವನ ತೀರ್ಮಾನವನ್ನು ಪ್ರಶ್ನಿಸಲು ಯಾರಿಗೂ ಸಾಧ್ಯವಿಲ್ಲ ಮತ್ತು ಯಾರ ಮುಂದೆಯೂ ಅವನು ಉತ್ತರಿಸಬೇಕಾದವನಲ್ಲ. ಪ್ರಪಂಚದಲ್ಲಿರುವ ಸರ್ವ ಸೃಷ್ಟಿಗಳು ಅವನ ಮುಂದೆ ಉತ್ತರಿಸಬೇಕಾಗಿದೆ. ಆದುದ ರಿಂದ ಸೃಷ್ಟಿಕರ್ತನಿಗೆ ಯಾವುದೇ ಸೃಷ್ಟಿಗಳನ್ನು ಹೋಲಿಸಲು ಹೇಗೆ ಸಾಧ್ಯವಿದೆ? ಅವನು ತನ್ನ ಅಸ್ತಿತ್ವದಲ್ಲೂ ಗುಣವೈಶಿಷ್ಯಗಳಿಂದಲೂ ಮತ್ತು ಒಳಿತು, ಶಕ್ತಿಗಳಲ್ಲೂ ಅನನ್ಯನಾಗಿರುವನು. ಈ ಮಹದ್‌ಸತ್ಯವನ್ನು ತಿಳಿಸಲಿಕ್ಕಾಗಿ ಒಂದು ಸೂರಃವನ್ನೇ (ಅಧ್ಯಾಯವನ್ನೇ) ಪವಿತ್ರ ಕುರ್‌ಆನ್ ಮೀಸಲಿಟ್ಟಿತು.

"ಹೇಳಿರಿ– ಅವನು ಅಲ್ಲಾಹನು ಏಕೈಕನು. ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ ಅವನು ಯಾರ ಸಂತಾನವೂ ಅಲ್ಲ ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ." **(ಅಲ್ ಇಖ್ಲಾಸ್: 1–4)**

ಮೇಲೆ ಉದ್ಧರಿಸಿದ ಪವಿತ್ರ ಕುರ್‌ಆನಿನ ಅಧ್ಯಾಯದಿಂದ ಸಕಲ ವಸ್ತುಗಳ, ಪ್ರತಿಯೊಂದು ವ್ಯಕ್ತಿ– ಅಸ್ತಿತ್ವಗಳ ಸಹಕಾರದಿಂದ ಅಲ್ಲಾಹನು ಮುಕ್ತನೂ ನಿರಪೇಕ್ಷ ನಾಗಿದ್ದಾನೆ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಅಲ್ಲಾಹನು ಯಾವುದೇ ಸಮಯದಲ್ಲಿಯೂ ಯಾವುದೇ ರೀತಿಯಿಂದಲೂ ಮತ್ತು ಯಾವುದೇ ವಸ್ತುಗಳಿಗೆ ಅವಲಂಬಿತನಾಗಿಲ್ಲ. ಅವನ ಅಸ್ತಿತ್ವವು ಅಂತಹದು. ಅಷ್ಟು ನಿರಪೇಕ್ಷವಾದ ಅಸ್ತಿತ್ವವಾಗಿದೆ. ಅವನು ಸಕಲ ದೌರ್ಬಲ್ಯ– ಅಸಹಾಯಕತೆಗಳಿಂದ ಮುಕ್ತನು. ತನ್ನ ಅಸ್ತಿತ್ವ, ಗುಣಗಳು, ಶಕ್ತಿಗಳಲ್ಲಿ ಅವನು ಅನ್ಯನು ಆಗಿದ್ದು ಅವನೇ ಆರಾಧಿಸಲ್ಪಡಲು ಅರ್ಹನಾದ ಆರಾಧ್ಯ ಮತ್ತು ಅವನೇ ಅಲ್ಲಾಹ್, ಪವಿತ್ರ ಕುರ್‌ಆನ್ ಈ ಅಲ್ಲಾಹನ ಅಸ್ತಿತ್ವ ಎಂತಹದು ಎಂದು ಮೇಲಿನ ವಚನಗಳಲ್ಲಿ ವಿವರಿಸಿದೆ.

15) ಏಕತ್ವ ಮತ್ತು ಸಹಭಾಗಿತ್ವ

ಈ ಹಿಂದಿನ ಪುಟಗಳಲ್ಲಿ ಸತ್ಯ ಕೇವಲ ಒಂದೇ ಆಗಿರುತ್ತದೆ ಎಂಬುದಾಗಿ ವಿವರಿಸಲಾಯಿತು. ಆದರೆ ಮಿಥ್ಯವು ಹಲವು ಮತ್ತು ಹಲವು ರೂಪದಲ್ಲಿರುತ್ತದೆ. ಸತ್ಯವೂ ಒಂದೇ ಮತ್ತು ಅದಕ್ಕಿರುವುದು ಏಕ ಸ್ವರೂಪವಾಗಿದೆ ಎಂಬುದನ್ನೆಲ್ಲ ಈಗಾಗಲೇ ಚರ್ಚಿಸಿದ್ದೇವೆ. ಈ ಚರ್ಚೆಯಲ್ಲಿಯೇ ಪ್ರಪಂಚದ ಸೃಷ್ಟಿ, ಮನುಷ್ಯರ ಅಸ್ತಿತ್ವ ಮತ್ತು ಅವರ ಜೀವಿಸಲು ಆಧಾರವಾದ ವ್ಯವಸ್ಥೆ ಮಾಡಿ ನಿರ್ವಹಿಸುವವನು ಒಬ್ಬನೇ ಎಂಬುದು ಕೂಡ ತಾರ್ಕಿಕವಾಗಿ ಸಾಬೀತುಗೊಂಡಿದೆ. ಆ ಏಕೈಕನ ಹೊರ ತಾದ ಅಸ್ತಿತ್ವದಲ್ಲಿರುವ ಇತರ ಚಿಂತನೆ ಪರಿಕಲ್ಪನೆಗಳೆಲ್ಲವೂ ಭ್ರಮಿತವಾಗಿವೆ. ತಪ್ಪಾ ಗಿವೆ. ಮಿಥ್ಯ ಕಲ್ಪನೆಗಳಾಗಿವೆ. ಅವುಗಳನ್ನು ನಿಜವೆಂದು ಸಮರ್ಥಿಸಿಕೊಳ್ಳುವಂತೆ

ಯಾವುದೇ ತರ್ಕಬದ್ಧ ಉದಾಹರಣೆ ನೀಡುವುದು ಸಂಭವನೀಯವಲ್ಲ. ಉಳಿದಂತೆ ಅವೆಲ್ಲವೂ ಕೇವಲ ಚಿಂತನೆಗಳು ಮಾತ್ರ. ಅನ್ಯಥಾ ಅವುಗಳಲ್ಲಿ ವಾಸ್ತವಿಕತೆಗಳಿಲ್ಲ. ಮನಸ್ಸಿನಲ್ಲಿ ಹುಟ್ಟಿಕೊಳ್ಳುವ ಬರೇ ಆಲೋಚನೆಗಳು ಅವೆಲ್ಲ ಅಷ್ಟೇ.

ಈ ಜೀವನಕ್ಕೆ ಉದ್ದೇಶವಿದೆ. ತಮ್ಮ ಆತ್ಮಸಾಕ್ಷಿಯ ಕರೆಗೆ ಯಾರು ಓಗೊಡುತ್ತಾರೆ, ಸತ್ಯ ವಿಚಾರದ ಮೇಲೆ ಯಾರು ವಿಶ್ವಾಸ ಇರಿಸುತ್ತಾರೆ, ಸತ್ಯದ ಬೇಡಿಕೆಯಂತೆ ಯಾರು ಜೀವನ ಕರ್ಮ ಎಸಗುತ್ತಾರೆ ಮತ್ತು ಹೀಗೆ ಮಾಡದೆ ವಿಪರೀತವಾಗಿ ಯಾರು ವರ್ತಿಸುತ್ತಾರೆ ಎಂಬ ಮಹತ್ತರ ಉದ್ದೇಶ ಮನುಷ್ಯ ಜೀವನದ್ದಾಗಿದೆ. ಜೀವನ ಇರುವುದು ಬರೇ ತಿಂದು ಉಣ್ಣಲೋ, ಮನಸ್ಸು ಬಯಸಿದ್ದನ್ನೆಲ್ಲ ಮಾಡಲೋ ಮತ್ತು ಹೀಗೆಯೇ ಇದ್ದು ಸಾಯುವುದಕ್ಕೋ ಅಲ್ಲ.

ಮೇಲೆ ತಿಳಿಸಿದ ಸತ್ಯವಿಚಾರ ಎಂಬುದು ಏಕೈಕನಾದ ಅಲ್ಲಾಹನಲ್ಲಿ ವಿಶ್ವಾಸ ತಂದು ಜೀವನ ನಡೆಸುವುದು ಮತ್ತು ಒಬ್ಬ ಅಲ್ಲಾಹನಲ್ಲಿ ವಿಶ್ವಾಸ ಇರಿಸದೆ ಮಿಥ್ಯ ಆಧಾರಿತವಾಗಿ ಜೀವನ ನಡೆಸುವುದು ಈ ಎರಡು ಅವಸ್ಥೆಗಳು ಸಮಾನವಾಗಿಲ್ಲ. ಅವುಗಳ ನಡುವೆ ಬಹುದೊಡ್ಡ ಅಂತರವಿದೆ.

ಒಂದು, ಅತ್ಮಸಾಕ್ಷಿಗೆ ಓಗೊಟ್ಟು ಬದುಕುವವರ ಜೀವನ ಸ್ಥಿತಿ ಪರಿಶುದ್ಧವೂ ಒಳಿತು, ಮಾನವೀಯತೆಗಳಿಂದ ತುಂಬಿದ್ದಾಗಿರುತ್ತದೆ. ಇನ್ನೊಂದು ಮಿಥ್ಯಾಧಾರಿತ ಜೀವನ ಅಪವಿತ್ರವೂ ಅಕ್ರಮವೂ ಕ್ಷೋಭೆಯುತವಾಗಿರುತ್ತದೆ. ಜೀವನಕ್ಕೆ ತಕ್ಕಂತೆ ಪ್ರತಿಫಲವಿರಲೇ ಬೇಕು. ಉತ್ತಮ ಜೀವನಕ್ಕೆ ಉತ್ತಮವಾದ ಪ್ರತಿಫಲವಾದರೆ ಕೆಟ್ಟ ಜೀವನವು ಶಿಕ್ಷೆಗೆ ಪಾತ್ರವಾಗಬೇಕು. ಇದು ಮನುಷ್ಯನ ಅತ್ಮಸಾಕ್ಷಿಯ ಧ್ವನಿ ಮಾತ್ರವಲ್ಲ ಮನುಷ್ಯರ ಸ್ವಭಾವದ ಬೇಡಿಕೆಯಾಗಿದೆ. ಶಿಕ್ಷೆ, ಪ್ರತಿಫಲಗಳನ್ನು ನೀಡಲೆಂದು ಇನ್ನೊಂದು ಲೋಕವನ್ನು ಅಸ್ತಿತ್ವಕ್ಕೆ ತರಲಾಗುವುದು. ಇಹ ಜೀವನವಲ್ಲದೆ ಬೇರೆ ಇನ್ನೊಂದು ಜೀವನ ಕೂಡ ಮನುಷ್ಯರಿಗಿದೆ. ಅಲ್ಲಿ ಮನುಷ್ಯ ಜೀವನದ ವಿಚಾರಣೆಯೂ ನಡೆಯುವುದು. ಆನಂತರ ಪ್ರತಿಫಲ ಅಥವಾ ಶಿಕ್ಷೆಯೂ ದೊರೆ ಯುವುದು. ವಿಚಾರಣೆಯಲ್ಲಿ ಯಶಸ್ವಿಯಾದವನು ಸ್ವರ್ಗವನ್ನು ಅಥವಾ ವಿಫಲನಾದವನು ಶಿಕ್ಷೆಯ ರೂಪದಲ್ಲಿ ನರಕವನ್ನೂ ಪಡೆಯುತ್ತಾನೆ.

ಇಹಲೋಕದ ಜೀವನ ಮುಗಿದ ನಂತರ ಇನ್ನೊಂದು ಲೋಕವಿದ್ದು ಅಲ್ಲಿಯೂ ಜೀವಿಸಬೇಕಾಗಿದೆ ಎಂದು ವಿಶ್ವಾಸವಿರಿಸುವವನು ಏಕೈಕನಾದ ಅಲ್ಲಾಹನಲ್ಲಿ ವಿಶ್ವಾಸ ಇರಿಸುವನು. ಮತ್ತು ಅಲ್ಲಾಹನ ದೈವಿಕತೆಯಲ್ಲಿ ಯಾವುದೇ ಮಿಶ್ರಣಕ್ಕೆ (ಶಿರ್ಕ್, ದೇವನಲ್ಲಿ ಇತರರನ್ನು ಭಾಗಿದಾರಿಗೊಳಿಸುವುದು) ಆಸ್ಪದವಾಗದಿರುವಂತೆ ಎಚ್ಚರಿಕೆಯಿಂದ ಜೀವನ ನಡೆಸುತ್ತಾನೆ. ಶಿರ್ಕ್ ಮಾಡುವುದೆಂದರೆ ದೇವನಿಗೆ

ಇತರರನ್ನು ಸಹಭಾಗಿಗೊಳಿಸುವುದು, ಅಲ್ಲಾಹನ ಏಕತ್ವವನ್ನು ನಿರಾಕರಿಸುವುದಾಗಿದೆ. ಇಂತಹವರು ಕೆಟ್ಟ ಕರ್ಮಗಳನ್ನು ಮಾಡಿ ದೇವನ ಶಿಕ್ಷೆಯಿಂದ ಇತರರ ಶಿಫಾರಸ್ಸಿನ ಮೂಲಕ ತಾವು ಪಾರಾಗುತ್ತೇವೆ ಎಂಬ ತಪ್ಪುಕಲ್ಪನೆಯ ವಿಶ್ವಾಸ ಹೊಂದಿರುವವರು.

ಪವಿತ್ರ ಕುರ್‌ಆನ್ ಸೃಷ್ಟಿಗಳಿಗೆ ದೈವತ್ವದ ಹಕ್ಕು ಅರ್ಹತೆಗಳನ್ನು ನೀಡುವುದಿಲ್ಲ. ಅದು ಸೃಷ್ಟಿಕರ್ತನದ್ದಾಗಿದ್ದು ಅವನು ಏಕೈಕನು ಮತ್ತು ಅವನೇ ಅಲ್ಲಾಹನಾಗಿದ್ದಾನೆ.

"ಇವರು ಅಲ್ಲಾಹನನ್ನು ಬಿಟ್ಟು ಇತರ ಯಾರನ್ನು ಕೂಗಿ ಪ್ರಾರ್ಥಿಸುವರೋ ಅವರು ಯಾವುದೇ ವಸ್ತುವಿನ ಸೃಷ್ಟಿಕರ್ತರಲ್ಲ. ನಿಜವಾಗಿ ಅವರು ಸ್ವತಃ ಸೃಷ್ಟಿಗಳು. ಅವರು ನಿರ್ಜೀವಿಗಳು, ಸಜೀವಿಗಳಲ್ಲ. ಅವರನ್ನು ಯಾವಾಗ (ಪುನಃ ಜೀವಂತಗೊಳಿಸಿ) ಎಬ್ಬಿಸಲಾಗುವುದೆಂದು ಅವರಿಗೆ ತಿಳಿದಿರುವುದಿಲ್ಲ. ನಿಮ್ಮ ಆರಾಧ್ಯನೇ ಏಕೈಕ ಆರಾಧ್ಯನು. ಆದರೆ ಪರಲೋಕದ ಮೇಲೆ ವಿಶ್ವಾಸವಿರಿಸದವರ ಹೃದಯಗಳಲ್ಲಿ ನಿರಾಕರಣೆಯು ನೆಲೆನಿಂತು ಬಿಟ್ಟಿದೆ ಮತ್ತು ಅವರು ಗರ್ವಿಷ್ಠರಾಗಿದ್ದಾರೆ." **(ಅನ್ನಹ್ಲ್: 20–22)**

ಇನ್ನೊಂದು ಕಡೆ ಅಲ್ಲಾಹನು ಪ್ರಶ್ನೆಗಳನ್ನು ಮುಂದಿಟ್ಟು ಮನುಷ್ಯನ (ಅತ್ಮಸಾಕ್ಷಿ ಯನ್ನೇ) ಕೆದಕುತ್ತಾನೆ. ಸ್ವಲ್ಪ ಗಂಭೀರವಾಗಿ ಯೋಚಿಸುವುದಾರೆ ಯಾವುದು ಸತ್ಯ ಎಂದು ನಿಮಗೇ ಮನವರಿಕೆಯಾಗುತ್ತದೆ ಮತ್ತು ನಿಮಗೆ ನಿಮ್ಮಲ್ಲಿ ವಿಶ್ವಾಶ ಮೂಡು ತ್ತದೆ ಎಂದು ಹೇಳುತ್ತಾನೆ. ಆದರೆ ನೀವು ಕುರುಡರಂತೆ ಅಂಧವಾಗಿ ವಿಶ್ವಾಸ ಇರಿಸ ಬೇಕೆಂದು ಅಲ್ಲಾಹನು ಹೇಳುವುದಿಲ್ಲ. ನಿಮ್ಮ ದೈನಂದಿನ ಜೀವನದಲ್ಲಿ ಹಗಲೂ ರಾತ್ರೆಯ ವೇಳೆ ನಿಮ್ಮೊಳಗೆ ಇರಿಸಲಾದ ವಿವೇಚನಾ ಶಕ್ತಿ, ಆತ್ಮಸಾಕ್ಷಿಯೆಂಬ ಒಳಿತನ್ನು ಉಪಯೋಗಿಸುತ್ತೀರಿ. ಇನ್ನು ಅದನ್ನೇ ಸ್ವಲ್ಪ ಸರಿಯಾಗಿ ಉಪಯೋಗಿಸಿ ನೋಡಿರಿ. ಸತ್ಯದ ಪರಿಣಾಮಕ್ಕೆ ನೀವು ತಲುಪುವಿರಿ. ಆಗ ನಿಮಗೇ ನಿಮ್ಮ ತಪ್ಪುಗಳು, ತಪ್ಪುಕಲ್ಪನೆಗಳು ಮನವರಿಕೆಯಾಗುವುದು ಸತ್ಯದ ಮೇಲೆ ನಿಮಗೆ ವಿಶ್ವಾಸ ಮೂಡಿ ಸತ್ಯದ ಪರಿಣಾಮವನ್ನು ಅರಿತುಕೊಳ್ಳುವಿರಿ ಎಂದು ತಿಳಿಸಲಾಗಿದೆ.

"ಸಂದೇಶವಾಹಕರೇ, ಇವರೊಡನೆ (ಹೀಗೆ) ಹೇಳಿರಿ: ನೀವು ಅಲ್ಲಾಹನನ್ನು ಬಿಟ್ಟು ಪ್ರಾರ್ಥಿಸುತ್ತಿರುವವುಗಳು ಏನಾಗಿರುತ್ತವೆ ಎಂಬುದನ್ನು ನೀವು ಕಣ್ತೆರೆದು ನೋಡಿದಿರಾ? ಅವರು ಈ ಭೂಮಿಯಲ್ಲಿ ಏನನ್ನು ಸೃಷ್ಟಿಸಿದ್ದಾರೆಂಬುದನ್ನು ಅಥವಾ ಆಕಾಶಗಳ ಸೃಷ್ಟಿ ಹಾಗೂ ವ್ಯವಸ್ಥಾಪನೆಯಲ್ಲಿ ಅವರದ್ದೇನಾದರೂ ಪಾಲಿದೆಯೇ? ಎಂಬುದನ್ನು ನನಗೆ ತೋರಿಸುವಿರಾ? ನೀವು ಸತ್ಯವಾದಿಗಳಾಗಿದ್ದರೆ ಇದಕ್ಕಿಂತ ಮುಂಚೆ ಬಂದ ಯಾವುದಾದರೂ ಗ್ರಂಥ ಅಥವಾ ಜ್ಞಾನದ ಯಾವುದಾದರೂ ಪಳೆಯುಳಿಕೆಯು (ಈ ನಿಮ್ಮ ನಂಬಿಕೆಗಳಿಗೆ ಆಧಾರವಾಗಿ) ನಿಮ್ಮ ಬಳಿಯಲ್ಲಿದ್ದರೆ ಅದನ್ನೇ ತನ್ನಿರಿ. ಅಲ್ಲಾಹನನ್ನು ಬಿಟ್ಟು, ಪುನರುತ್ಥಾನದ ದಿನದ ವರೆಗೂ ಅವನಿಗೆ

ಉತ್ತರ ಕೊಡಲಾಗ ದಂತಹವರನ್ನು ಪ್ರಾರ್ಥಿಸುವವನಿಗಿಂತಲೂ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಮಾತ್ರವಲ್ಲ, ಅವರಿಗಂತು ಪ್ರಾರ್ಥಿಸುವರು ತಮ್ಮನ್ನು ಪ್ರಾರ್ಥಿಸುತ್ತಿದ್ದಾರೆಂಬ ಅರಿವು ಕೂಡ ಇಲ್ಲ. ಸಕಲ ಮಾನವರೂ ಒಟ್ಟುಗೂಡಿಸಲ್ಪಡುವಂದು ಅವರು ತಮ್ಮನ್ನು ಪ್ರಾರ್ಥಿಸುತ್ತಿದ್ದವರ ಶತ್ರುಗಳಾಗಿ ಬಿಡುವರು ಮತ್ತು ಅವರು ತಮ್ಮನ್ನು ಆರಾಧಿಸುತ್ತಿದ್ದರೆಂಬುದನ್ನೇ ನಿರಾಕರಿಸುವರು." **(ಅಲ್ ಅಹ್ಕಾಫ್: 4–6)**

16) ಮಾರ್ಗದರ್ಶನ ಮಾಡುವುದು, ನಿರ್ದೇಶನ ನೀಡುವುದು, ದಾರಿ ತೋರಿಸುವುದು, ಆರಾಧ್ಯನ ಮಹತ್ವದ ಗುಣವೈಶಿಷ್ಟ್ಯವಾಗಿದೆ:

ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿ ಆನಂತರ ಅವುಗಳ ಅಸ್ತಿತ್ವದ ಉದ್ದೇಶವನ್ನು ಪೂರ್ಣಗೊಳಿಸುವ ಸಲುವಾಗಿ ಸೂಕ್ತ ಮಾರ್ಗವನ್ನು ತೋರಿಸುವವನು ಆರಾಧ್ಯನಾಗಿರುತ್ತಾನೆ. ಅವನು ಅವುಗಳ ಪ್ರಕೃತಿಯಲ್ಲೇ (ಸ್ವಭಾವದಲ್ಲಿಯೇ) ಆ ಉದ್ದೇಶವನ್ನು ಇರಿಸಿರುತ್ತಾನೆ. ಅವನೇ ಮನುಷ್ಯನಿಗೂ ಇಂತಹದೇ ವ್ಯವಸ್ಥೆಯನ್ನು ಮಾಡಿರುವನು. ಪ್ರತಿಯೊಂದು ಕಾಲದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಇದಕ್ಕಾಗಿ ಆಯಾ ಕಾಲದ ಜನರ ನಡುವಿನಿಂದಲೇ ತಾನು ಆಯ್ಕೆ ಮಾಡಿದ ಮನುಷ್ಯರ ಮೂಲಕ ಜನರ ಅಸ್ತಿತ್ವದ ಉದ್ದೇಶದ ಕುರಿತ ಜ್ಞಾನವನ್ನು ಮತ್ತು ಅದಕ್ಕಾಗಿ ಗ್ರಂಥವನ್ನು ಕಳುಹಿಸಿರುವನು. ಆದರೂ ಅಲ್ಲಾಹನ ಈ ಗುಣವನ್ನು ಅಲ್ಲಾಹನ ಪ್ರವಾದಿ ಮೂಸಾ ಮತ್ತು ಫರೋವ (ಫಿರ್‌ಔನ್)ರ ಘಟನೆಯ ಮೂಲಕ ಪವಿತ್ರ ಕುರ್‌ಆನ್ ವಿವರಿಸುತ್ತಿದೆ. ಅಂದು ಪ್ರವಾದಿ ಮೂಸಾರನ್ನು ಫಿರ್‌ಔನನು "ಓ ಮೂಸಾ ನಿನ್ನ ಪ್ರಭು ಯಾರು" ಎಂದು ಪ್ರಶ್ನಿಸಿದನು.

ಮೂಸಾ ಉತ್ತರವಿತ್ತರು, "ಪ್ರತಿಯೊಂದು ವಸ್ತುವಿಗೆ ಅದರ ಆಕೃತಿ ಪ್ರದಾನ ಮಾಡಿ ಅದಕ್ಕೆ ದಾರಿ ತೋರಿಸಿದವನೇ ನಮ್ಮ ಪ್ರಭು." **(ತಾಹಾ: 50)**

17) ದುರ್ಬಲ ಮತ್ತು ಮಿಥ್ಯ ಆರಾಧ್ಯರ ಸಮಕ್ಷಮದಲ್ಲಿ ನೈಜ ಆರಾಧ್ಯ:

ಮನುಷ್ಯರಲ್ಲಿ ಆರಾಧ್ಯರ ಕುರಿತು ದೊಡ್ಡ ದೊಡ್ಡ (ಮಹತ್ಕಾರ್ಯ) ಕೆಲಸಗಳನ್ನು ಮಾಡುವವರು ಎಂಬ ಊಹೆ–ಪರಿಕಲ್ಪನೆಗಳಿದ್ದರೂ ಅಲ್ಲಾಹನ ಹೊರತಾದ ಮತ್ತು ಜನರು ಆರಾಧ್ಯರನ್ನಾಗಿ ಮಾಡಿಕೊಂಡವರೆಲ್ಲರೂ ಅಸಹಾಯಕರು. ಅವರು ಒಂದು ನೊಣದ ಮೇಲೆ ಕೂಡ ಇವರು ಆಧಿಪತ್ಯ ಸಾಧಿಸದಷ್ಟು ದುರ್ಬಲರು. ಇದನ್ನು ಪವಿತ್ರ ಕುರ್‌ಆನ್ ಸರಳ ಭಾಷೆಯಲ್ಲಿ ಮತ್ತು ಮನಮುಟ್ಟುವಂತೆ ವಿವರಿಸುತ್ತಿದೆ.

"ಜನರೇ, ಒಂದು ಉದಾಹರಣೆ ಕೊಡಲಾಗುತ್ತಿದೆ. ಗಮನವಿಟ್ಟು ಕೇಳಿರಿ: ನೀವು ಅಲ್ಲಾಹನನ್ನು ಬಿಟ್ಟು ಯಾವ ಆರಾಧ್ಯರನ್ನು ಪ್ರಾರ್ಥಿಸುತ್ತೀರೋ ಅವರೆಲ್ಲರೂ

ಒಟ್ಟಾಗಿ ಒಂದು ನೊಣವನ್ನೂ ಸೃಷ್ಟಿಸಲಾರರು. ಮಾತ್ರವಲ್ಲ ನೊಣವು ಅವರಿಂದ ಏನನ್ನಾದರೂ ಕಸಿದುಕೊಂಡೊಯ್ದರೆ ಅವರಿಗೆ ಅದನ್ನು ಬಿಡಿಸಿಕೊಳ್ಳಲಿಕ್ಕೂ ಸಾಧ್ಯವಾಗದು. ಸಹಾಯಾರ್ಥಿಗಳು ದುರ್ಬಲರು, ಯಾರಿಂದ ಸಹಾಯ ಬೇಡಲಾಗುತ್ತದೋ ಅವರೂ ದುರ್ಬಲರು. ಇವರು ಅಲ್ಲಾಹನ ಮಹತ್ವವನ್ನು ಹೇಗೆ ಅರಿಯಬೇಕಿತ್ತೋ ಹಾಗೆ ಅರಿತುಕೊಳ್ಳಲೇ ಇಲ್ಲ. ವಾಸ್ತವದಲ್ಲಿ ಶಕ್ತಿಪೂರ್ಣನೂ ಮಹಾ ಪ್ರತಾಪಿಯೂ ಅಲ್ಲಾಹನೇ ಆಗಿರುತ್ತಾನೆ." (ಅಲ್ ಹಜ್ಜ್: 73–74)

ಸೃಷ್ಟಿಸುವವನೇ ಆರಾಧ್ಯನೆಂದು ನಾವು ಅರಿತಿರಬೇಕು. ಅಸಾಧಾರಣ ಶಕ್ತಿ ಮತ್ತು ಅಧಿಕಾರ ಅವನದ್ದಾಗಿದೆ. ಯಾರ ಬಳಿ ಶಕ್ತಿ ಸಾಮರ್ಥ್ಯಗಳಿರುವುದೋ ಅವನು ಗೌರವಾನ್ವಿತನಾಗಿರುವನು. ಅವನೇ ಆರಾಧ್ಯನು ಮತ್ತು ಅವನೇ ಅಲ್ಲಾಹನಾಗಿರುವನು. ಇಲ್ಲಿ ವಿರಿಸಿದ ಈ ಭಾವನೆಗಳಿಲ್ಲದ ಮತ್ತು ವಿಶ್ವಾಸದಿಂದ ವಂಚಿತನಾದ ವ್ಯಕ್ತಿ ನೈಜ ಆರಾಧ್ಯನನ್ನು ಬಿಟ್ಟು ಇತರ ಅಸ್ತಿತ್ವಗಳನ್ನೂ ಶಕ್ತಿಶಾಲಿಯೆಂದು ತಿಳಿದನು ಮತ್ತು ತನ್ನ ಆರಾಧ್ಯನಾಗಿ ಮಾಡಿದನು. ಆದರೆ ಈ ವ್ಯಕ್ತಿ ಸ್ವಲ್ಪ ಚಿಂತಿಸುವ ಅಗತ್ಯವಿದೆ. ತಾನು ಹೀಗೆ ಮಾಡುವುದರಿಂದ ನೈಜ ಸ್ಥಿತಿ ಬದಲಾಗುವುದಿಲ್ಲ ಎಂಬದನ್ನು ನಾವು ಮನಗಾಣಬೇಕಾಗಿದೆ. ಯಾಕೆಂದರೆ ಆರಾಧ್ಯರು ಏನೂ ಮಾಡುವುದಿಲ್ಲ. ಬದಲಾಗಿ ಅವುಗಳನ್ನೇ ಮಾಡಲಾಗಿದೆ.

ಅವು ಮಾಡುವುದಿಲ್ಲ– ಮಾಡಲ್ಪಟ್ಟಿವೆ. ಅವು ಆಲಿಸಲಾರವು, ವೀಕ್ಷಿಸಲಾರವು, ಯಾವ ಸಹಾಯವನ್ನೂ ಮಾಡಲಾರವು. ಇಷ್ಟು ದುರ್ಬಲವಾಗಿರುವಾಗ ಅವುಗಳು ಆರಾಧನೆಗೆ ಹೇಗೆ ಅರ್ಹವಾದೀತು?

ಮನುಷ್ಯನ ವಿವೇಕವನ್ನು ಜಾಗ್ರತಗೊಳಿಸಲು ಪವಿತ್ರ ಕುರ್‌ಆನ್ ಪ್ರಯತ್ನಿಸುತ್ತಿದೆ. "ಈ ಗ್ರಂಥದಲ್ಲಿ ಇಬ್ರಾಹೀಮರ ಬಗ್ಗೆ ಪ್ರಸ್ತಾಪಿಸಿರಿ. ನಿಶ್ಚಯವಾಗಿಯೂ ಅವರೊಬ್ಬ ಸತ್ಯಸಂಧರೂ ಪ್ರವಾದಿಯೂ ಆಗಿದ್ದರು. ಅವರು ತಮ್ಮ ತಂದೆಯೊಡನೆ, 'ಅಪ್ಪಾ ಆಲಿಸಲಾಗದ, ನೋಡಲಾಗದ ಮತ್ತು ತಮ್ಮ ಯಾವ ಕೆಲಸಕ್ಕೂ ಬಾರದ ವಸ್ತುಗಳನ್ನು ತಾವೇಕೆ ಆರಾಧಿಸುತ್ತೀರಿ?' ಎಂದು ಕೇಳಿದ್ದರು." (ಮರ್ಯಮ್: 41–42)

ಮನುಷ್ಯನು ತೋರಿಸುತ್ತಿರುವ ಈ ವರ್ತನೆಯು ಅಜ್ಞಾನ ಮತ್ತು ಮೂರ್ಖತನದ ಪರಮಾವಧಿ ಆಗಿದೆ.

18) ಆರಾಧ್ಯನಿಗೆ ಆವಶ್ಯಕವಾಗಿ ಇರಬೇಕಾದ ಗುಣಗಳು:

ಮನುಷ್ಯನ ಬುದ್ಧಿಶಕ್ತಿ ಮತ್ತು ಸ್ವಭಾವದ ಬೇಡಿಕೆಯಂತೆ ಆರಾಧ್ಯನಿಗಿರಬೇಕಾದ ಗುಣಗಳ ಬಗ್ಗೆ ಪವಿತ್ರ ಕುರ್‌ಆನ್ ವಿವರಿಸಿದೆ. ತಮ್ಮ ಬುದ್ಧಿ ಮತ್ತು ಸ್ವಭಾವವು ಯಾವ ಗುಣಗಳು ಇರಬೇಕಾಗಿದೆ ಮತ್ತು ಇರಬಾರದೆಂದು ಸೂಚಿಸುತ್ತಿದೆ ಎಂದು

ಯೋಚಿಸಬೇಕಾಗಿದೆ. ಮನುಷ್ಯನ ಬುದ್ಧಿ ಮತ್ತು ಪ್ರಕೃತಿ ಯಾವ ಗುಣಗಳನ್ನು ಆರಾಧ್ಯನ ಅಸ್ತಿತ್ವದಲ್ಲಿ ನೋಡ ಬಯಸುತ್ತಿದೆ, ಯಾರನ್ನು ಆರಾಧ್ಯನ ಸ್ಥಾನದಲ್ಲಿ ಸ್ವೀಕರಿಸಲು ಬಯಸುತ್ತದೆ. ಅವುಗಳನ್ನು ಪವಿತ್ರ ಕುರ್‌ಆನ್ ಗ್ರಂಥ ಹಲವು ಕಡೆಗಳಲ್ಲಿ ಸ್ಪಷ್ಟವಾಗಿ ಪ್ರಸ್ತುತಪಡಿಸುತ್ತಿದೆ.

"ಜನರು ಅವನನ್ನು ಬಿಟ್ಟು ಯಾವ ವಸ್ತುವನ್ನೂ ಸೃಷ್ಟಿಸದ ಮತ್ತು ಸ್ವತಃ ಸೃಷ್ಟಿಸಲ್ಪಟ್ಟಂತಹ ವಸ್ತುಗಳನ್ನು ಆರಾಧ್ಯರನ್ನಾಗಿ ಮಾಡಿಕೊಂಡರು. ಅವು ಸ್ವತಃ ತಮಗೂ ಯಾವುದೇ ಲಾಭ ಅಥವಾ ಹಾನಿಯನ್ನುಂಟು ಮಾಡುವ ಅಧಿಕಾರ ಹೊಂದಿಲ್ಲ. ಅವು ಕೊಲ್ಲಲಾರವು. ಜೀವಂತಗೊಳಿಸಲಾರವು ಮತ್ತು ಸತ್ಯವನ್ನು ಪುನಃ ಎಬ್ಬಿಸಲಾರವು." **(ಅಲ್ ಫುರ್ಕಾನ್: 3)**

ಯಾವುದೇ ಅಸಹಾಯಕ ಅಸ್ತಿತ್ವವನ್ನು ಆರಾಧ್ಯನನ್ನಾಗಿ ಮಾಡುವುದು ವಿವೇಕ ವಾಗಿದೆಯೇ. ಇಂತಹ ಆರಾಧ್ಯರು ಯಾವುದೇ ಪ್ರಯೋಜನಕ್ಕೆ ಸಿಗಬಹುದೇ? ಅವು ಪ್ರಾರ್ಥನೆಯನ್ನು ಆಲಿಸಿಯಾವೇ? ಯಾವುದೇ ಬೇಡಿಕೆಗಳನ್ನು ಈಡೇರಿಸಿಯಾವೇ? ರಕ್ಷಣೆ ಮತ್ತು ಮಾರ್ಗದರ್ಶನಗಳನ್ನು ನೀಡಬಹುದೇ?

"ನಿಜಕ್ಕೂ ನಿಮ್ಮ ಪ್ರಭುವಿನ ಹಿಡಿತವು ಬಹಳ ಕಠಿಣವಾದುದು. ಅವನೇ ಪ್ರಥಮ ಬಾರಿ ಸೃಷ್ಟಿಸುತ್ತಾನೆ. ಅವನೇ ಪುನಃ ಸೃಷ್ಟಿಸುವನು. ಅವನು ಮಹಾ ಕ್ಷಮಾಶೀಲನೂ ಪ್ರೀತಿಸುವವನೂ ಆಗಿರುತ್ತಾನೆ. ಅವನು ವಿಶ್ವ ಸಿಂಹಾಸನದ ಒಡೆಯನು. ಪರಮೋನ್ನತನು ಮತ್ತು ತಾನಿಚ್ಛಿಸಿದ್ದನ್ನು ಮಾಡುವವನು. ನಿಮಗೆ ಸೇನೆಗಳ ಸಮಾಚಾರ ತಲುಪಿ ದೆಯೇ? ಫಿರ್‌ಔನ್ ಮತ್ತು ಸಮೂದರ (ಸೇನೆಗಳ ಸಮಾಚಾರ). ಆದರೆ, ಸತ್ಯನಿಷೇಧಿ ಗಳು ಸುಳ್ಳಾಗಿಸುವುದರಲ್ಲೇ ಮಗ್ನರಾಗಿದ್ದಾರೆ. ವಸ್ತುತಃ ಅಲ್ಲಾಹನು ಅವರನ್ನು ಸುತ್ತು ವರಿದಿದ್ದಾನೆ. (ಅವರ ನಿರಾಕರಣೆಯಿಂದ ಈ ಕುರ್‌ಆನಿಗೇನೂ ನಷ್ಟವಿಲ್ಲ.) ವಾಸ್ತವದಲ್ಲಿ ಈ ಕುರ್‌ಆನ್ ಅತ್ಯುನ್ನತ ಮಟ್ಟದ್ದಾಗಿದೆ." **(ಅಲ್‌ಬುರೂಜ್: 12–21)**

ಮೇಲಿನ ವಚನಗಳಲ್ಲಿ ಬಂದಿರುವ 'ನಿಮ್ಮ ಪ್ರಭುವಿನ ಹಿಡಿತವು ಬಹಳ ಕಠಿಣವಾದುದು' ಎಂದರೆ ಇದರರ್ಥ ಕೆಡುಕು ಮತ್ತು ಧಿಕ್ಕಾರ ನೀತಿಯನ್ನು ತೊರೆಯದ ಮತ್ತು ಉಪದೇಶಕ್ಕೆ ಕಿವಿಗೊಡದ ಮನುಷ್ಯರನ್ನು ಅಲ್ಲಾಹನು ಕಠಿಣ ವಾದ ರೀತಿಯಲ್ಲಿ ಶಿಕ್ಷಿಸುವನು ಎಂದಾಗಿದೆ. ಯಾರಿಗೂ ಅವನ ಹಿಡಿತ ಮತ್ತು ನಿಯಂತ್ರಣಗಳಿಂದ ಪಾರಾಗಲು ಸಾಧ್ಯವಿಲ್ಲ ಎಂದಾಗಿದೆ. ಮೇಲಿನ ವಚನಗಳಲ್ಲಿ ಬಂದಿರುವ ಪ್ರಥಮ ಬಾರಿ ಸೃಷ್ಟಿಸುವನು ಎಂಬುದು ಕೂಡ ಇಹಲೋಕದ ಜೀವನವು ಕ್ರಿಯಾ ರೂಪದ ಜೀವನವಾಗಿದ್ದು ಇಲ್ಲಿ ಮನುಷ್ಯನು ಕರ್ಮವೆಸಗುವನು. ಆದುದರಿಂದ ವ್ಯಕ್ತಿಯು ಇಲ್ಲಿ ಸರಿಯಾದ ರೀತಿಯಲ್ಲಿ ಜೀವನ ನಡೆಸುವನೋ,

ತಪ್ಪಾದ ರೀತಿಯಲ್ಲಿ ಜೀವಿಸುವನೋ ಎಂದು ಪರೀಕ್ಷಿಸಲಾಗುವುದೆಂದು ಸೂಚಿಸಲಾಗಿದೆ. ಪುನಃ ಸೃಷ್ಟಿಸುವನು ಎಂದರೆ ಎರಡನೇ ಬಾರಿ ಜೀವಿಸಲಿಕ್ಕಿದೆಯೆಂದರ್ಥ. ಇಹ ಜೀವನದಲ್ಲಿ ಅಥವಾ ಜಗತ್ತಿನಲ್ಲಿ ಮಾಡಿದ ಕರ್ಮಗಳಿಗಾಗಿ ಎರಡನೆಯ ಜೀವನ ನೀಡಲಾಗುವುದು ಈ ಜೀವನದಲ್ಲಿ ಇಹಲೋಕ ಜೀವನದ ಕುರಿತ ವಿಚಾರಣೆ ನಡೆಯುವುದು. ಅದರಂತೆ ಪ್ರತಿಫಲ (ಸ್ವರ್ಗ) ಮತ್ತು (ನರಕ) ಶಿಕ್ಷೆಗಳಿವೆ. ಮತ್ತು ಇದು ಸಂಭವಿಸಿಯೇ ತೀರುವುದು. ಹೀಗಾಗುವ ಮೊದಲು ಅಲ್ಲಾಹನು ತನ್ನ ಕೃಪೆಯ ಕುರಿತು ಜನರಿಗೆ ಜ್ಞಾಪಿಸುತ್ತಾನೆ. ದಾಸರು ಅಲ್ಲಾಹನ ಆಜ್ಞೋಲ್ಲಂಘಿಸದಿರುವಂತೆಯೂ ಧಿಕ್ಕಾರವನ್ನು ಕೈ ಬಿಡುವಂತೆಯೂ ಅಲ್ಲಾಹನು ಪ್ರೋತ್ಸಾಹಿಸಿದ್ದಾನೆ. ಅವನ ಆದೇಶಗಳನ್ನು ಪಾಲಿಸುವುದು ಅವರಿಗೆ ಲಾಭವನ್ನೂ ಯಶಸ್ಸನ್ನೂ ತಂದು ಕೊಡುವುದಾಗಿದೆ.

ಕ್ಷಮಿಸುವವನು ಎಂದರೆ ಯಾರಾದರೂ ಒಂದು ವೇಳೆ ತಮ್ಮ ಪಾಪಕೃತ್ಯಗಳಿಗೆ ಜಿಗುಪ್ಸೆಗೊಂಡು ಕ್ಷಮಾ ಯಾಚನೆಯನ್ನು ನಡೆಸುವುದಾದರೆ ನಿಮಗೆ ಅಲ್ಲಾಹನ ಕರುಣೆಯಲ್ಲಿ ಆಶ್ರಯವಿದೆ ಎಂದು ಭರವಸೆ ತುಂಬಲಾಗುತ್ತಿದೆ. ಜೊತೆಗೆ ಅಲ್ಲಾಹನು ಪ್ರೀತಿಸುವವನು ಎನ್ನುವ ಮೂಲಕ ಸೃಷ್ಟಿಗಳಿಗೆ ಶಿಕ್ಷೆ ಯಾತನೆ ನೀಡುವುದು ಅವನ ಇಚ್ಛೆಯಲ್ಲ ಎಂದು ಸೂಚಿಸಲಾಗಿದೆ. ಯಾಕೆಂದರೆ ಅವನೇ ಸೃಷ್ಟಿಗಳನ್ನು ಸೃಷ್ಟಿಸಿದವನು. ಅವುಗಳ ಮೇಲೆ ಅಪಾರ ಪ್ರೀತಿಯಿರಿಸಿ ಕೊಂಡಿರುವನು. ಇನ್ನು ಉಪದೇಶ, ಮಾರ್ಗದರ್ಶನಗಳ ನಂತರವೂ ಧಿಕ್ಕಾರ ನೀತಿಯಲ್ಲಿ ಅಂಟಿಕೊಂಡಿರುವುದಕ್ಕಾಗಿ ಮಾತ್ರ ಅವನು ಶಿಕ್ಷಿಸುವುದು.

ಮೇಲಿನ ವಚನಗಳಲ್ಲಿರುವ ಅರ್ಶ್‌ನ ಒಡೆಯ (ವಿಶ್ವ ಸಿಂಹಾಸನದ ಒಡೆಯ) ಎನ್ನುವ ಮೂಲಕ ತನ್ನ ಪ್ರಪಂಚ ಸಾಮ್ರಾಜ್ಯಕ್ಕೆ ಆದೇಶ ಜಾರಿಗೊಳಿಸುವುದು ತಾನೇ ಎಂಬುದನ್ನು ಅಲ್ಲಾಹನು ಸೂಚಿಸುತ್ತಾನೆ. ಪ್ರಪಂಚದಲ್ಲಿ ಎಲ್ಲಿ ಹೋಗಿಯೂ ಧಿಕ್ಕಾರಿಯು ಅವನ ಹಿಡಿತದಿಂದ ಪಾರಾಗಲಾರನು ಮತ್ತು ಆಶ್ರಯ ಪಡೆದುಕೊಳ್ಳಲಾರನು.

ಅಲ್ಲಾಹನನ್ನು ಪರಮೋನ್ನತನು ಎನ್ನುವ ಮೂಲಕ ಮನುಷ್ಯರ ಮೂರ್ಖತನಗಳ ಬಗ್ಗೆ ಎಚ್ಚರಿಸಲಾಗಿದೆ. ಅಲ್ಲಾಹನು ಅವರನ್ನೇ ಪ್ರೀತಿಸುವ ಮಹಾನ್ ಅಸ್ತಿತ್ವವಾಗಿದ್ದಾನೆ. ಆದರೂ ಮನುಷ್ಯರು ಅವನೊಡನೆ ಸ್ಪರ್ಧೆಗಿಳಿದು ಅಹಂಕಾರ, ದರ್ಪಗಳನ್ನು ಪ್ರದರ್ಶಿಸುವರು ಎಂದು ಎಚ್ಚರಿಸಲಾಗಿದೆ.

ಮೇಲಿನ ವಚನಗಳಲ್ಲಿ ಕೊನೆಯದಾಗಿ ತಾನಿಚ್ಛಿಸಿದ್ದನ್ನು ಮಾಡುವವನು ಎನ್ನಲಾಗಿದೆ. ಅಂದರೆ ಯಾರು ಒಪ್ಪಲಿ, ಒಪ್ಪದಿರಲಿ ಇಡೀ ಪ್ರಪಂಚದಲ್ಲಿ ಅಲ್ಲಾಹನಂತೆ ಕಾರ್ಯವೆಸಗುವ ಸಾಮರ್ಥ್ಯ ಅವನಿಗಲ್ಲದೆ ಬೇರೆ ಯಾರಿಗೂ ಇಲ್ಲ ಎಂದಾಗಿದೆ.

19) ಮಾನವ ಸ್ವಭಾವ ಮತ್ತು ಆತ್ಮಸಾಕ್ಷಿಯ ಧ್ವನಿ:

ಮನುಷ್ಯ ಸ್ವಭಾವವೇ ಕೆಲವು ವಿಷಯಗಳನ್ನು ಸರಿಯೆಂದೂ ಮತ್ತು ಕೆಲವು ವಿಷಯಗಳನ್ನು ತಪ್ಪೆಂದೂ ಹೇಳುತ್ತದೆ. ಪವಿತ್ರ ಕುರ್‌ಆನ್ ಈ ವಿಷಯಗಳನ್ನೇ ಪ್ರಶ್ನಾರ್ಥಕವಾಗಿ ಸರಿಯಾದುದನ್ನು ಮತ್ತು ತಪ್ಪಾದುದನ್ನು ಬಹಿರಂಗೊಳಿಸುತ್ತಿದೆ. ನಿಮ್ಮ ಸ್ವಭಾವ ಮತ್ತು ಆತ್ಮಸಾಕ್ಷಿಯ ಆಂತರ್ಯದಲ್ಲೇ ಸತ್ಯವು ಅಡಕವಾಗಿದೆ ಎನ್ನುತ್ತದೆ. ಇದಕ್ಕೆ ಸಾಕ್ಷ್ಯ ನಿಮ್ಮ ನಾಲಗೆಯಲ್ಲಿಯೇ ಇದೆ. ಆದರೆ ನಿಮ್ಮ ವೈಯಕ್ತಿಕ ಉದ್ದೇಶ ಸ್ವಾರ್ಥಗಳಿಂದಾಗಿ ನಿಮ್ಮ ಆತ್ಮ ಸತ್ಯವನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ಮನುಷ್ಯರ ಆತ್ಮ ಮತ್ತು ಸ್ವಭಾವದ ಮುಂದೆ ಹೀಗೆ ಅಲ್ಲಾಹನು ಸವಾಲನ್ನಿರಿಸುತ್ತಾನೆ.

"ನೀವು ಬಲ್ಲವರಾಗಿದ್ದರೆ ಈ ಭೂಮಿ ಮತ್ತು ಇದರೊಳಗಿರುವುದೆಲ್ಲವೂ ಯಾರದೆಂದು ಹೇಳಿರಿ" ಎಂದು ಅವರೊಡನೆ ಕೇಳಿರಿ. ಅವರು ಖಂಡಿತವಾಗಿಯೂ 'ಅಲ್ಲಾಹನದು' ಎನ್ನುವರು ಹಾಗಾದರೆ ನೀವು ಪ್ರಜ್ಞಾವತಂರಾಗುವುದಿಲ್ಲವೇ ಎಂದು ಕೇಳಿರಿ. ಸಪ್ತಗಗನಗಳ ಮತ್ತು ಮಹಾ ಸಿಂಹಾಸನದ ಒಡೆಯನಾರೆಂದು ಇವರನ್ನು ಕೇಳಿರಿ. ಅವರು ಖಂಡಿತವಾಗಿಯೂ 'ಅಲ್ಲಾಹನೇ' ಎನ್ನುವರು. ಹಾಗಾದರೆ ನೀವೇಕೆ ಭಯಪಡುವುದಿಲ್ಲವೆಂದು ಅವರೊಡನೆ ಕೇಳಿರಿ, "ಸಕಲ ವಸ್ತುಗಳ ಮೇಲೆ ಯಾರ ಪ್ರಭುತ್ವವಿದೆ? ಎಲ್ಲರಿಗೂ ಆಶ್ರಯ ನೀಡುವವನೂ ಅವನ ವಿರುದ್ಧ ಆಶ್ರಯ ನೀಡಲು ಯಾರಿಗೂ ಸಾಧ್ಯವಿಲ್ಲದಂತಹವನೂ ಯಾರು? ನಿಮಗೆ ಗೊತ್ತಿದ್ದರೆ ಹೇಳಿರಿ." ಅವರು ಖಂಡಿತವಾಗಿಯೂ "ಈ ಗುಣಗಳು ಅಲ್ಲಾಹನಿಗೇ ಇವೆ" ಎಂದು ಹೇಳುತ್ತಾರೆ. "ಹಾಗಾದರೆ ನೀವು ಮೋಸ ಹೋಗುವುದು ಹೇಗೆ ಎಂದು ಕೇಳಿರಿ. ಸತ್ಯವೇನಿದೆಯೋ ಅದನ್ನು ನಾವು ಅವರ ಮುಂದೆ ತಂದಿದ್ದೇವೆ. ಇವರು ಸುಳ್ಳುಗಾರ ರೆಂಬುದರಲ್ಲಿ ಏನೂ ಸಂಶಯವಿಲ್ಲ. ಅಲ್ಲಾಹನು ಯಾರನ್ನೂ ತನ್ನ ಮಕ್ಕಳನ್ನಾಗಿ ಮಾಡಿಲ್ಲ. ಅವನ ಜತೆ ಇನ್ನೊಬ್ಬ ದೇವನೂ ಇಲ್ಲ. ಹಾಗಿರುತ್ತಿದ್ದರೆ ಪ್ರತಿಯೊಬ್ಬ ದೇವನೂ ತನ್ನ ಸೃಷ್ಟಿಯನ್ನು ತೆಗೆದುಕೊಂಡು ಬೇರೆ ಹೋಗಿ ಬಿಡುತ್ತಿದ್ದನು. ಆ ಬಳಿಕ ಅವರು ಒಬ್ಬರ ಮೇಲೆ ಇನ್ನೊಬ್ಬರು ಆಕ್ರಮಣ ನಡೆಸುತ್ತಿದ್ದರು. ಇವರು ಆಡುವ ಮಾತುಗಳಿಂದೆಲ್ಲಾ ಅಲ್ಲಾಹನು ಪರಿಶುದ್ಧನಾಗಿರುತ್ತಾನೆ. ಅವನು ರಹಸ್ಯವಾಗಿರು ವುದನ್ನೂ ಬಹಿರಂಗವಾಗಿರುವುದನ್ನೂ ಬಲ್ಲವನು. ಇವರು ಮಾಡುತ್ತಿರುವ ದೇವ ಸಹಭಾಗಿತ್ವದಿಂದ ಅವನು ಉನ್ನತನಾಗಿರುತ್ತಾನೆ. ಅವನು ರಹಸ್ಯವಾಗಿರುವುದನ್ನೂ ಬಹಿರಂಗವಾಗಿರುವುದನ್ನೂ ಬಲ್ಲವನು. ಇವರು ಮಾಡುತ್ತಿರುವ ದೇವ ಸಹಭಾಗಿತ್ವದಿಂದ ಅವನು ಉನ್ನತನಾಗಿರುತ್ತಾನೆ." **(ಅಲ್ ಮೂಮಿನೂನ್: 84–92)**

ಮೇಲಿನ ಈ ಪ್ರಶ್ನೆಗಳಿಗೆ ಪ್ರತಿಯೊಂದು ಕಾಲದಲ್ಲಿಯೂ ಮನುಷ್ಯನ ಸ್ವಭಾವ

ಮತ್ತು ಆತ್ಮಸಾಕ್ಷಿಯು ಇದೇ ಉತ್ತರವನ್ನು ನೀಡುತ್ತಾ ಬಂದಿದೆ. ಅಲ್ಲಾಹನು ಅದನ್ನೇ ತನ್ನ ಗ್ರಂಥವಾದ ಪವಿತ್ರ ಕುರ್‌ಆನ್‌ನಲ್ಲಿ ವಿವರಿಸಿದನು. ಯಾಕೆಂದರೆ ಪ್ರತಿಯೊಂದು ಕಾಲದ ಮನುಷ್ಯರಲ್ಲಿರುವ ಆತ್ಮಸಾಕ್ಷಿ ಮತ್ತು ಸ್ವಭಾವ ಏಕ ರೀತಿಯದ್ದೇ ಮತ್ತು ಈಗಲೂ ಅದೇ ರೀತಿ ಇದೆ. ಯಾವಾಗಲೂ ಹಾಗೆಯೇ ಇರುತ್ತದೆ.

ಯಾಕೆಂದರೆ ಹಿಂದಿನ ಕಾಲದಲ್ಲಿಯೂ ಇಂದಿನಂತೆ ಯಾವತ್ತೂ ಒಳ್ಳೆಯ ವಿಷಯಗಳು ಒಳ್ಳೆಯವೇ ಮತ್ತು ಸರಿಯಾಗಿರುವವುಗಳೇ ಆಗಿದ್ದವು. ಮತ್ತು ಹಿಂದಿನ ಕಾಲದಲ್ಲಿಯೂ ಕೆಟ್ಟ ವಿಚಾರಗಳು ಮಿಥ್ಯ ವಿಚಾರಗಳೂ ತಪ್ಪು ವಿಚಾರ ಗಳೂ ಆಗಿದ್ದವು. ಇವೆಲ್ಲವೂ ಮನುಷ್ಯರ ಆತ್ಮಸಾಕ್ಷಿಯೊಳಗೆ ಇಂದು ಕೂಡಾ ಅಡಕ ವಾಗಿದೆ. ಅಂದೂ ಕೂಡ ಇದ್ದವು. ಆದುದರಿಂದ ಇಂದಿನಂತೆ ಅಂದು ಕೂಡ ಮನುಷ್ಯನ ಸ್ವಭಾವ ಸರಿಯಾದ ವಿಷಯಗಳನ್ನೇ ಬಯಸುತ್ತಿತ್ತು. ಮನುಷ್ಯನ ಸ್ವಭಾವ ಸರಿಯಾದ ವಿಷಯಗಳನ್ನು ಗೌರವದ ದೃಷ್ಟಿಯಿಂದಲೇ ನೋಡುತ್ತಿತ್ತು.

ಇದೇ ವಿಷಯವನ್ನು ಪವಿತ್ರ ಕುರ್‌ಆನ್ ಹೀಗೆ ಜ್ಞಾಪಿಸುತ್ತಿದೆ– ನಾವು ಮನುಷ್ಯನ ಸ್ವಭಾವ ಬದಲಿಸಲೂ ಇಲ್ಲ, ಸತ್ಯವೂ ಬದಲಾಗಿಲ್ಲ. ಒಂದು ವೇಳೆ ಮನುಷ್ಯನ ಆತ್ಮಸಾಕ್ಷಿಯು ಜೀವಂತವಾಗಿದ್ದರೆ ಅದು ಇದೇ ವಾಸ್ತವಿಕತೆಯನ್ನೇ ಸಾಕ್ಷ್ಯವಹಿಸುತ್ತದೆ. ಆದರೆ, ಮನುಷ್ಯನು ತನ್ನ ಆತ್ಮಸಾಕ್ಷಿಯ ವಿರುದ್ಧ ನಿಲ್ಲುತ್ತಾನೆ. ವಾಸ್ತವವನ್ನೇ ಒಪ್ಪುವುದಿಲ್ಲ. ಕಾರಣ– ಮನಸ್ಸಿನ ಆಶೆಗಳು, ವೈಯಕ್ತಿಕ ಆಸಕ್ತಿಗಳು, ಜನಾಂಗೀಯ ವಾದ, ಸಮುದಾಯ ಮತ್ತು ಗುಂಪುಗಾರಿಕೆಗಳ ಪೂರ್ವಗ್ರಹಗಳಿಂದಾಗಿ ಅವನು ಹೀಗೆ ವರ್ತಿಸುತ್ತಾನೆ. ಅಥವಾ ಸತ್ಯಾವಸ್ಥೆಯನ್ನು ಒಪ್ಪದಿರಲಿಕ್ಕಾಗಿಯೇ ಹಲವು ನೆಪಗಳನ್ನು ತರುತ್ತಾನೆ. ವಕ್ರ ಪ್ರಶ್ನೆಗಳನ್ನು ಕೇಳುತ್ತಾನೆ. ತಪ್ಪು ವ್ಯಾಖ್ಯಾನಗಳನ್ನು ನೀಡುತ್ತಾನೆ. ತಮ್ಮ ತಂದೆ ತಾತಂದಿರ ಸಂಪ್ರದಾಯಗಳ ಆಶ್ರಯಗಳನ್ನು ಪಡೆಯು ತ್ತಾನೆ. ಇದು ಸ್ವಯಂ ತಮ್ಮನ್ನು ತಾವೇ ವಂಚಿಸಿಕೊಳ್ಳುವುದೇ ಹೊರತು ಬೇರೇನಲ್ಲ ಎಂದು ಪವಿತ್ರ ಕುರ್‌ಆನ್ ಎಚ್ಚರಿಸುತ್ತದೆ.

ಮೇಲಿನ ವಚನಗಳಲ್ಲಿ ಸೂಚಿಸಿದ ಎಲ್ಲ ಗುಣಗಳು ಆರಾಧ್ಯನಿಗೆ ಇರಬೇಕಾದ್ದು ಎಂದು ವಿವರಿಸುತ್ತದೆ ಮತ್ತು ಆರಾಧ್ಯನ ಇನ್ನೂ ಅನೇಕ ಗುಣಗಳನ್ನು ಪವಿತ್ರ ಕುರ್‌ಆನ್‌ನ ಬೇರೆ ಬೇರೆ ಕಡೆಗಳಲ್ಲಿ ವಿವರಿಸಿದೆ. ಮತ್ತು ಆರಾಧ್ಯನ ಗುಣವೈಶಿಷ್ಟ್ಯಗಳೆಲ್ಲವೂ ಅಲ್ಲಾಹನ ಅಸ್ತಿತ್ವದಲ್ಲಿ ಮಾತ್ರ ಕಾಣಲು ಸಿಗುತ್ತದೆ ಮತ್ತು ಆರಾಧ್ಯನಲ್ಲಿರಬೇಕಾದ ಗುಣವೈಶಿಷ್ಟ್ಯಗಳು ಮನುಷ್ಯನ ಆತ್ಮದ ಬೇಡಿಕೆಗಳು ಅಲ್ಲಾಹನ ಹೊರತು ಬೇರೆ ಯಾವುದೇ ಅಸ್ತಿತ್ವದಲ್ಲಿ ಕಾಣಲು ಸಿಗುವುದಿಲ್ಲ. ಅಲ್ಲಾಹನ ಹೊರತಾದ ಯಾವುದೇ ಅಸ್ತಿತ್ವಕ್ಕೆ ತನ್ನೊಳಗೆ ಎಲ್ಲ ದೈವಿಕ ಗುಣಗಳು ಇವೆಯೆಂದು ವಾದಿಸುವುದು ಅಸಂಭವ.

ಪವಿತ್ರ ಕುರ್‌ಆನ್ ಮುಂದಿಟ್ಟಿರುವ ಈ ಸವಾಲನ್ನು ಯಾರಿಗೂ ಈವರೆಗೂ ಸ್ವೀಕರಿಸಲು ಸಾಧ್ಯವೇ ಆಗಿಲ್ಲ.

20) ರಬ್ (ಪ್ರಭು):

ಕೆಳಗಿನ ವಚನಗಳಲ್ಲಿ ವಿವರಿಸಲಾದ ಕಾರ್ಯಗಳು ಮನುಷ್ಯರ ಉಳಿವಿಗೆ ಜೀವನ ಯಾತನೆಗೆ ಆವಶ್ಯಕವಾಗಿದೆ. ಅವುಗಳನ್ನು ವ್ಯವಸ್ಥಾಪಿಸಿರುವವನಿಗೇ ಮನುಷ್ಯರ ಪ್ರಭುವಾಗುವ ಅರ್ಹತೆಯಿರುತ್ತದೆ. ಮತ್ತು ಈ ಪ್ರಭುವೇ ಆರಾಧ್ಯನಾಗಿರುವನು ಮತ್ತು ಈ ಆರಾಧ್ಯನ ಹೆಸರೇ ಅಲ್ಲಾಹ್ ಎಂದಾಗಿದೆ.

"ರಾತ್ರೆಯನ್ನು ನಿಮಗೆ ಉಡುಪಾಗಿಯೂ ನಿದ್ದೆಯನ್ನು ಪ್ರಶಾಂತಿಯಾಗಿಯೂ ಹಗಲನ್ನು ಎದ್ದೇಳುವ ಸಮಯವಾಗಿಯೂ ಮಾಡಿದವನು ಅಲ್ಲಾಹನೇ ಆಗಿರುತ್ತಾನೆ. ತನ್ನ ಕೃಪೆಗೆ ಮುಂಚಿತವಾಗಿ ಮಾರುತಗಳನ್ನು ಸುವಾರ್ತೆಯಾಗಿ ಕಳುಹಿಸುವವನು ಅವನೇ, ಅನಂತರ ಆಕಾಶದಿಂದ ಶುದ್ಧ ನೀರನ್ನಿಳಿಸುತ್ತಾನೆ. (ಇದು) ಅದರ ಮೂಲಕ ಒಂದು ನಿರ್ಜೀವ ಪ್ರದೇಶಕ್ಕೆ ಜೀವದಾನ ಮಾಡಲಿಕ್ಕಾಗಿ ಮತ್ತು ತನ್ನ ಸೃಷ್ಟಿಯ ಪೈಕಿ ಅನೇಕ ಪ್ರಾಣಿಗಳಿಗೂ ಮನುಷ್ಯರಿಗೂ ಕುಡಿಸಲಿಕ್ಕಾಗಿ." **(ಅಲ್ ಫುರ್ಕಾನ್: 47–49)**

"ನೀರಿನಿಂದ ಒಬ್ಬ ಮಾನವನನ್ನು ಸೃಷ್ಟಿಸಿದವನೂ ಅವನೇ. ತರುವಾಯ ಅವನಿಂದ ವಂಶೀಯ ಮತ್ತು ವೈವಾಹಿಕ ಎಂಬ ಎರಡು ಬೇರೆ ಬೇರೆ ಪರಂಪರೆಗಳನ್ನು ಹೊರಡಿಸಿದನು. ನಿನ್ನ ಪ್ರಭು ಮಹಾ ಸಮರ್ಥನು." **(ಅಲ್ ಫುರ್ಕಾನ್: 54)**

ಸೃಷ್ಟಿಕರ್ತನನ್ನು ಹೊರತು ಪಡಿಸಿ ಪ್ರತಿಯೊಂದು ವಸ್ತುಗಳೂ ಸೃಷ್ಟಿಗಳಾಗಿವೆ. ಅವು ಜೀವಂತವಾಗಿರುವುದೇ ಆಗಿರಲಿ. ನಿರ್ಜೀವವಾಗಿರುವುದೇ ಆಗಿರಲಿ. ಸೃಷ್ಟಿಗಳು ಬಲಿಷ್ಠರಲ್ಲ .ದುಬರ್ಲರು ಮತ್ತು ಅಸಹಾಯಕರು. ಅವುಗಳಿಗೆ ತಮ್ಮ ಜೀವವನ್ನು ಸ್ವಯಂ ಉಳಿಸಿಕೊಳ್ಳುವ ಶಕ್ತಿಯಿಲ್ಲ ಮತ್ತು ಜೀವನ ನೀಡುವುದಕ್ಕೂ ಸಾಧ್ಯ ಇಲ್ಲ. ಪ್ರಾರ್ಥನೆಯನ್ನು ಆಲಿಸಲಾರವು. ಯಾರಿಗೂ ಸಹಾಯವನ್ನು ಮಾಡಲಾರವು.

ಪವಿತ್ರ ಕುರ್‌ಆನ್ ಈ ವಾಸ್ತವಿಕತೆಯನ್ನು ಸ್ಪಷ್ಟವಾಗಿ ಹೀಗೆ ಬಹಿರಂಗಗೊಳಿಸಿದೆ...

"ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕೂಗಿ ಕರೆಯುತ್ತೀರೋ ಅವರೂ ನಿಮ್ಮಂತಿರುವ ದಾಸರೇ. ಅವರ ಬಗ್ಗೆ ನಿಮ್ಮ ವಿಚಾರಗಳು ಸರಿಯಾಗಿದ್ದರೆ ನೀವು ಅವರನ್ನೊಮ್ಮೆ ಪ್ರಾರ್ಥಿಸಿ. ನಿಮ್ಮ ಪ್ರಾರ್ಥನೆಗೆ ಉತ್ತರ ಕೊಡುತ್ತಾರೋ ನೋಡಿರಿ."

(ಅಲ್ ಫುರ್ಕಾನ್: 194)

ನೀವು ಕೂಗಿ ಕರೆಯುವವರೆಲ್ಲರೂ ಅವರು ನಿಮ್ಮಂತಹದೇ ದಾಸರು. ರೀತಿ ನಿಮಗೆ ನೀವೇ ಸಹಾಯ ಮಾಡಿಕೊಳ್ಳಲಾರಿರಿ. ಅದೇ ರೀತಿ ನಿಮ್ಮಂತಹ ಇತರ

ದಾಸರ ಅವಸ್ಥೆಯಾಗಿದೆ. ಅವರು ದುರ್ಬಲರು. ಮತ್ತು ಅಸಹಾಯಕರು. ಹೀಗಿರುತ್ತಾ... ಅವರು ನಿಮಗೆ ಯಾವ ರೀತಿ ಸಹಾಯ ಮಾಡಿಯಾರು?

ಪ್ರಭು ಯಾರು? ದಾಸರ ಮೊರೆಗೆ ಉತ್ತರ ಕೊಡುವವನು ಮತ್ತು ಲಾಭ-ನಷ್ಟವನ್ನುಂಟು ಮಾಡುವ ಅಧಿಕಾರ ಹೊಂದಿರುವವನು ಆಗಿರುತ್ತಾನೆ.

ಪವಿತ್ರ ಕುರ್‌ಆನ್ ಈ ವಸ್ತು ಸ್ಥಿತಿಯ ಅರಿವಿಗಾಗಿಯೇ ಪ್ರವಾದಿ ಮೂಸಾರ(ಅ) ಕಾಲದ ಸತ್ಯಘಟನೆಗಳನ್ನು ನಮ್ಮ ಮುಂದಿಡುತ್ತಿದೆ.

"ಅದು ಅವರ ಮಾತಿಗೆ ಉತ್ತರಿಸುವುದಿಲ್ಲ ಎಂಬುದನ್ನಾಗಲಿ, ಅವರ ಲಾಭ ನಷ್ಟಗಳ ಯಾವ ಅಧಿಕಾರವನ್ನೂ ಪಡೆದಿಲ್ಲ ಎಂಬುದನ್ನಾಗಲಿ ಅವರು ನೋಡು ತ್ತಿರಲಿಲ್ಲವೇ?" (ತಾಹಾ: 89)

ಪ್ರವಾದಿ ಮೂಸಾರ ಕಾಲದ ಜನರು ತಮ್ಮ ಕೈಯಿಂದ ರೂಪುಕೊಟ್ಟ ಕರು ವನ್ನು ತಮ್ಮ ಅರಾಧ್ಯನನ್ನಾಗಿ ಮಾಡಿ ಪೂಜಿಸುತ್ತಿದ್ದರು. ಮೇಲಿನ ವಚನ ಅದರತ್ತ ಗಮನ ಹರಿಸಿರೆಂದು ಸೂಚಿಸಿದೆ.

21) ಮಿಥ್ಯ ಆರಾಧ್ಯರ ಅಸಹಾಯಕತೆ:

ಸೃಷ್ಟಿಕರ್ತನ ಹೊರತು ಕೂಗಿ ಕರೆಯಲಾಗುವ ಬೇರೆ ಮಿಥ್ಯ ಆರಾಧ್ಯರದ್ದು ಅಸಹಾಯಕ ಅವಸ್ಥೆಯನ್ನು ಹೀಗೆ ಬಹಿರಂಗಪಡಿಸುತ್ತಿದೆ.

"ಅವನನ್ನು (ಅಲ್ಲಾಹನನ್ನು) ಪ್ರಾರ್ಥಿಸುವುದೇ ಸರಿ. ಅವನನ್ನು ಬಿಟ್ಟು ಇವರು ಮೊರೆಯಿಡುತ್ತಿರುವ ಇತರರು ಇವರ ಪ್ರಾರ್ಥನೆಗೆ ಯಾವ ಉತ್ತರವನ್ನೂ ಕೊಡ ಲಾರರು. ಅವರನ್ನು ಕೂಗಿ ಕರೆಯುವುದೆಂದರೆ-ಒಬ್ಬನು ನೀರಿದ್ದ ಕಡೆಗೆ ಕೈಗಳೆರಡನ್ನೂ ಚಾಚಿ, ನೀನು ನನ್ನ ಬಾಯಿಗೆ ಬಾ ಎಂದು ಅದರೊಡನೆ ಪ್ರಾರ್ಥಿಸಿಕೊಂಡಂತೆ. ವಸ್ತುತಃ ನೀರು (ತಾನಾಗಿ) ಅವನ ಬಳಿಗೆ ತಲುಪಲಾರದು. ಇದೇ ರೀತಿಯಲ್ಲಿ ಸತ್ಯನಿಷೇಧಿಗಳ ಪ್ರಾರ್ಥನೆಗಳೂ ಗುರಿ ಮುಟ್ಟಲಾರವು." (ಅರ್‍ರಅದ್: 14)

22) ನೈಜ ಆರಾಧ್ಯನು ದೌರ್ಬಲ್ಯಗಳಿಂದ ಮುಕ್ತನಾಗಿದ್ದಾನೆ:

ಆರಾಧ್ಯನು ಯಾರು? ಅವನಿಗೆ ದಾಸರ ಸ್ಥಿತಿಗತಿಗಳ ಅರಿವಿರುತ್ತದೆ. ಅವರ ಸಕಲ ವಿಷಯಗಳಲ್ಲಿ (ವ್ಯವಹಾರಗಳ ಬಗ್ಗೆ) ಆಸಕ್ತನು. ಅವನು ದಾಸರ ಮೊರೆ ಯನ್ನು ಆಲಿಸುವವನು. ಒಂದೇ ಒಂದು ಕ್ಷಣ ಕೂಡ ದಾಸರ ಪರಿಸ್ಥಿತಿಯ ಕುರಿತು ಅರಿವಿಲ್ಲ ಎಂಬ ಅವಸ್ಥೆಯೇ ಅವನಿಗಿಲ್ಲ. ಅಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಯಾವತ್ತೂ ವಿಶ್ರಾಂತಿ, ನಿದ್ರೆಗಳು ದಣಿದಿರುವುದನ್ನು ತೋರಿಸುತ್ತದೆ. ಹೀಗೊಂದು ಅವಸ್ಥೆಗಳೇ ಆರಾಧ್ಯನಿಗೆ ದಾಸರ ಸಂಪೂರ್ಣ ಅವಸ್ಥೆಯು ಅರಿವಾಗದು ಎಂಬುದನ್ನು

ವ್ಯಕ್ತಪಡಿಸುತ್ತವೆ. ಹಾಗಿದ್ದರೆ ಇಂತಹವರು ಆರಾಧ್ಯನಾಗಲು ಹೇಗೆ ಅರ್ಹರಾದಾರು? ಅವರು ಮನುಷ್ಯರ ಪ್ರಾರ್ಥನೆಯನ್ನು ಆಲಿಸಲು ಸಮರ್ಥರಲ್ಲ. ಬಯಕೆಗಳನ್ನು ಈಡೇರಿಸಿ ಕೊಡಲಾರರು. ಇವರು ದಾಸರ ಉಪಕಾರಕ್ಕೂ ಸಿಗಲಾರರು. ಆದರೆ ಮನುಷ್ಯರಿಗೆ ಅವರ ಕರ್ಮಗಳಿಗೆ ನ್ಯಾಯಪೂರ್ಣ ಪ್ರತಿಫಲ ಇರಬೇಕು ಅಥವಾ ಶಿಕ್ಷೆ ಇರಬೇಕು. ಇದು ನ್ಯಾಯದ ಬೇಡಿಕೆಯಾಗಿದೆ. ಈ ಬೇಡಿಕೆಗಳನ್ನು ನಿದ್ರಿಸುವ, ದಣಿಯುವ, ವಿಶ್ರಾಂತಿ ಪಡೆಯುವ ಅಸ್ತಿತ್ವಗಳು ಪೂರೈಸುವುದು ಅಸಂಭವ.

ನಿದ್ರಿಸುವುದರ ಅರ್ಥ ಸೃಷ್ಟಿಕರ್ತ ವ್ಯವಸ್ಥಾಪನೆಯ ಹೊಣೆಗಾರಿಕೆಗಳನ್ನು ನಿರ್ವಹಿಸಿ ದಣಿಯುವನು ಎಂದಾಗುವುದು ಮತ್ತು ವಿಶ್ರಾಂತಿಯು ಚೇತರಿಕೆಯ ಅಗತ್ಯವಿದೆ ಎಂಬುದನ್ನು ಸೂಚಿಸುತ್ತದೆ. ಈ ದುರ್ಬಲ ಅಸ್ತಿತ್ವವು ಪ್ರಪಂಚದ ಪ್ರತಿಯೊಂದು ಕ್ಷಣದ ವ್ಯವಸ್ಥಾಪನೆ ಮಾಡುವುದು ಎಂಬ ವಾಸ್ತವಿಕತೆಗೆ ಸಮನ್ವಯ ವಾಗುವುದಿಲ್ಲ. ಆದುದರಿಂದಲೇ ಇಂತಹ ದುರ್ಬಲ ಅಸ್ತಿತ್ವವು ಸೃಷ್ಟಿಕರ್ತ ಹಾಗೂ ಆಧಿಪತಿ ಮತ್ತು ಆರಾಧ್ಯನಾಗಲು ಸಾಧ್ಯವಿಲ್ಲ.

ಪವಿತ್ರ ಕುರ್‌ಆನ್ ಅಲ್ಲಾಹನು ಈ ದೌರ್ಬಲ್ಯಗಳಿಂದ ಮುಕ್ತನು ಎಂದು ಸಾರುತ್ತಿದೆ. "ಅವನು ನಿದ್ದೆ ಮಾಡುವುದಿಲ್ಲ. ತೂಕಡಿಸುವುದಿಲ್ಲ." (ಅಲ್ ಬಕರ: 255)

ಇನ್ನೊಂದೆಡೆ ನಿದ್ದೆಯು ಮರಣದ ಒಂದು ರೂಪವಾಗಿದೆ. ಅಲ್ಲಾಹನ ಅಸ್ತಿತ್ವ ಈ ಎಲ್ಲ ಸ್ಥಿತಿಯಿಂದ ಮುಕ್ತವಾಗಿದೆ. ತನ್ನ ಅಸ್ತಿತ್ವ ನಿದ್ದೆ ಬಾಧಿಸದಂತೆ ಯಾರು ನೋಡಿಕೊಳ್ಳಲಾರನೋ ಅಂತಹವನಿಂದ ಈ ಪ್ರಪಂಚದ ಅಸ್ತಿತ್ವದ ಉಳಿವು ಹೇಗೆ ಸಂಭಾವ್ಯ?

23) ಸೃಷ್ಟಿಕರ್ತನೇ ಒಡೆಯ ಮತ್ತು ತನ್ನ ಸೊತ್ತುಗಳ ಹಾಗೂ ಸೃಷ್ಟಿಗಳ ಆರಾಧ್ಯ ನಾಗಿರುವನು:

ಅವನು ಭೂಮಿ, ಆಕಾಶ ಸಹಿತ ಸಕಲ ವಸ್ತುಗಳಿಗೆ ಒಡೆಯನಾಗಿರುವನು. ಮತ್ತು ಅದರ ಪರಿಪಾಲಕ ಪ್ರಭು ಆಗಿರುವನು. ಅವನು ಪ್ರಬಲನು, ಸರ್ವಜ್ಞ ಮತ್ತು ಯುಕ್ತಿ ಪೂರ್ಣನಾಗಿದ್ದಾನೆ. ನಿಶ್ಚಯವಾಗಿಯೂ ಅವನೇ ಅಧಿಪತಿ ಮತ್ತು ಅವನೇ ಸೃಷ್ಟಿಗಳ ನೈಜ ಆರಾಧ್ಯ ಮತ್ತು ಅವನೇ ಅಲ್ಲಾಹ್.

ಪವಿತ್ರ ಕುರ್‌ಆನ್ ಈ ವಿಷಯಗಳನ್ನು ಈ ರೀತಿ ವರ್ಣಿಸುತ್ತಿದೆ. "ಆದುದರಿಂದ ಸರ್ವ ಪ್ರಶಂಸೆಯೂ ಭೂಮಿ-ಆಕಾಶಗಳ ಒಡೆಯನಾಗಿರುವ ಮತ್ತು ಸಕಲ ಲೋಕ ವಾಸಿಗಳ ಪಾಲಕ ಪ್ರಭುವಾಗಿರುವ ಅಲ್ಲಾಹನಿಗೇ ಮೀಸಲು. ಭೂಮಿ-ಆಕಾಶಗಳಲ್ಲಿ ಮಹಾನತೆಯು ಅವನಿಗೇ ಇದೆ ಮತ್ತು ಅವನೇ ಪ್ರಬಲನೂ ಯುಕ್ತಿ ಪೂರ್ಣನೂ ಆಗಿರುತ್ತಾನೆ." (ಅಲ್‌ಜಾಸಿಯ: 36-37)

ಕುರ್‌ಆನ್ ಹೀಗೆ ಪ್ರಶ್ನಿಸುತ್ತದೆ- ಅಲ್ಲಾಹನಿಗಿಂತ ದೊಡ್ಡ ಮತ್ತು ಮಹಾನ್ ಅಸ್ತಿತ್ವ ಇದೆಯೇ? ಅವನಿಗಿಂತ ದೊಡ್ಡ ಮಹಾನ್ ಅಸ್ತಿತ್ವದ ವಿಷಯವಂತೂ ದೂರ ದೂರದ ಮಾತು. ಹೀಗಿರುವಾಗ ಆರಾಧನೆಗೆ ಯಾರು ಅರ್ಹನಾಗಿರುವನು?

"ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆಯಿರುವ ಸರ್ವಸ್ವಗಳ ಪಾಲಕ ಪ್ರಭು. ಆದುದರಿಂದ ನೀವು ಅವನ ದಾಸ್ಯಾರಾಧನೆ ಮಾಡಿರಿ ಮತ್ತು ಅವನ ದಾಸ್ಯ ಆರಾಧನೆಯಲ್ಲೇ ಸ್ಥಿರವಾಗಿರಿ. ನಿಮ್ಮ ತಿಳುವಳಿಕೆಯಲ್ಲಿ ಅವನಿಗೆ ಸರಿಸಮಾನವಾದವನು ಯಾರಾದರೂ ಇದ್ದಾನೆಯೇ." (ಮರ್ಯಮ್: 65)

ಅವನು ಪ್ರಭು, ಪರಿಪಾಲಿಸುವವನು. ರಕ್ಷಿಸುವವನು. ಮತ್ತು ಆವಶ್ಯಕತೆಗಳನ್ನು ಈಡೇರಿಸಿಕೊಡುವವನು. ಆದುದರಿಂದ ಅವನ ಮಾತನ್ನು ಆಲಿಸಿರಿ ಮತ್ತು ಅವನಂತಹ ಮಹಾನರು ಯಾರೂ ಇಲ್ಲ. ಅಲ್ಲಾಹನನ್ನು ಹೊರತು ಆರಾಧಿಸ ಬಹುದಾದಂತಹ ಇತರರು ಯಾರೂ ಇಲ್ಲ.

24) ಪ್ರಭು ಮತ್ತು ಆಜ್ಞಾಧಿಕಾರಿಯೇ ಆರಾಧ್ಯನಾಗಿರುತ್ತಾನೆ:

ಇಡೀ ಪ್ರಪಂಚದ ಕಾನೂನು ವ್ಯವಸ್ಥೆ (ಲಾ ಆ್ಯಂಡ್ ಆರ್ಡರ್) ಒಬ್ಬನೇ ಒಬ್ಬ ಆಜ್ಞಾಧಿಕಾರಿಯ ಮೂಲಕ ನಡೆಯುತ್ತದೆ ಮತ್ತು ಮನುಷ್ಯನು ಕೂಡ ಈ ವಿಶ್ವಕ್ಕೆ ಸೇರಿದ ಒಂದು ವಸ್ತು. ಆದುದರಿಂದ ಮನುಷ್ಯ ಈ ಏಕ ಆಜ್ಞಾಧಿಕಾರಿಯ ಆದೇಶಗಳನ್ನು ಒಪ್ಪಿ ಅನುಸರಿಸಬೇಕು. ಅವನೇ ಮನುಷ್ಯರಿಗೆ ಆರಾಧ್ಯ. ಅವನೇ ಅನುಗ್ರಹಗಳನ್ನು ನೀಡಿದವನು. ಅನುಗ್ರಹಗಳನ್ನು ನೀಡುವವನೇ ಆರಾಧ್ಯನಾಗಿರುವನು. ಯಾವುದು ಅವನ ಸಾಮ್ರಾಜ್ಯವಾಗಿದೆಯೋ ಅದಕ್ಕೆ ಅವನೇ ಒಡೆಯ ಮತ್ತು ಆರಾಧ್ಯ ಕೂಡಾ ಆಗಿದ್ದಾನೆ.

ಕಷ್ಟದ ಸಮಯದಲ್ಲಿ ಬೇರೆ ಯಾವ ಸೃಷ್ಟಿಗಳಿಂದ ರಕ್ಷಣಾ ಕಾರ್ಯ ಅಸಾಧ್ಯ. ಅವನ ಹೊರತು ಯಾವುದೇ ತಂತ್ರಗಳೂ ಉಪಯುಕ್ತ ವಾಗದು. ಮನುಷ್ಯನನ್ನು ಕಣ್ಣಿಗೆ ಕಾಣಿಸದ, ಮರೆಯಾಗಿರುವವುಗಳಿಂದ ಕೂಡ ಅವನೇ ಮನುಷ್ಯರನ್ನು ಉಳಿಸಬಲ್ಲ. ಅಷ್ಟು ಪ್ರಬಲನೂ ಸಮರ್ಥನೂ ಸಹಾಯಕನೂ ಆಗಿರುವ ಆರಾಧ್ಯ ಅವನೇ ಆಗಿದ್ದಾನೆ. ಆದುದರಿಂದ ಪವಿತ್ರ ಕುರ್‌ಆನ್ ಅವನ ಸ್ವಭಾವ ಜನ್ಯ ವಿಷಯಗಳೆಡೆಗೆ ಮಾರ್ಗದರ್ಶನವೀಯುತ್ತಿದೆ.

"ಇಬ್ಬರು ಆರಾಧ್ಯರನ್ನು ಮಾಡಿಕೊಳ್ಳಬೇಡಿರಿ. ಆರಾಧ್ಯನಂತು ಒಬ್ಬನೇ, ಆದುದರಿಂದ ನನ್ನನ್ನು ಮಾತ್ರ ಭಯಪಡಿರಿ ಎಂದು ಅಲ್ಲಾಹನು ಆಜ್ಞಾಪಿಸುತ್ತಾನೆ. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲವೂ ಅವನದೇ. ಅವನ ಧರ್ಮವೇ

(ಇಡೀ ವಿಶ್ವದಲ್ಲಿ) ಸಂಪೂರ್ಣವಾಗಿ ಜಾರಿಯಲ್ಲಿದೆ. ಹೀಗಿರುತ್ತ ನೀವು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ಭಯಪಡುವಿರಾ? ನಿಮಗೆ ಒದಗಿರುವ ಎಲ್ಲ ಭವ್ಯ ಕೊಡುಗೆಗಳು ಅಲ್ಲಾಹನ ಕಡೆಯಿಂದಲೇ ಆಗಿರುತ್ತವೆ. ನಿಮಗೆ ಹಾನಿ ತಟ್ಟಿದಾಗ ನೀವು ಅವನೊಡನೆಯೇ ಮೊರೆಯಿಡುತ್ತೀರಿ." **(ಅನ್ನಹ್ಲ್: 51–53)**

ಮನುಷ್ಯನ ಸ್ವಭಾವ ಅನಾಯಾಸವಾಗಿ ಯಾರತ್ತ ಹೊರಳುವುದೋ ಅವನೇ ಸತ್ಯವಾಗಿದ್ದಾನೆ.

25) ಪ್ರಪಂಚ ಸಾಮ್ರಾಟನೇ ಮಾನವರ ನೈಜ ಆರಾಧ್ಯನಾಗಿದ್ದಾನೆ:

ಪ್ರಪಂಚದ ಸಾಮ್ರಾಟ ಅಂದರೆ ಮಹಾನ್ ಅರ್ಶ್(ವಿಶ್ವ ಸಿಂಹಾಸನದೊಡೆಯ)ನ ಒಡೆಯನೇ ವಿಶ್ವಾಸ ಯೋಗ್ಯನು ಮತ್ತು ಮನುಷ್ಯನಿಗೆ ಅವನೇ ಸಾಕು. ಆದುದರಿಂದ ಅವನೇ ನೈಜ ಆರಾಧ್ಯ. ಇದನ್ನು ಪವಿತ್ರ ಕುರ್ಆನ್ ಹೀಗೆ ವಿವರಿಸಿದೆ.

"ಓ ಪೈಗಂಬರರೇ, ಇನ್ನಿವರು ನಿಮ್ಮಿಂದ ವಿಮುಖರಾಗುತ್ತಾರಾದರೆ ಇವರೊಡನೆ ಹೀಗೆ ಹೇಳಿ ಬಿಡಿರಿ: ನನಗೆ ಅಲ್ಲಾಹನೇ ಸಾಕು. ಅವನ ಹೊರತು ಅನ್ಯ ಆರಾಧ್ಯನಿಲ್ಲ. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದ್ದೇನೆ ಮತ್ತು ಅವನು ವಿಶ್ವ ಮಹಾ ಸಿಂಹಾಸನದ ಮಾಲಿಕನಾಗಿರುತ್ತಾನೆ." **(ಅತ್ತೌಬ: 129)**

26) ಎಲ್ಲವನ್ನು ಆವರಿಸಿಕೊಂಡ ಜ್ಞಾನ ಇರುವವನೇ ಮನುಷ್ಯರ ವಿಧೇಯತ್ವಕ್ಕೆ ಅರ್ಹನು:

ಜ್ಞಾನಿಯಾದವನಿಗೆ ಮಾತ್ರ ಸರಿಯಾದ ಆಡಳಿತ ಸಾಧ್ಯ ಮತ್ತು ವಿಧೇಯತೆಗೂ (ಅನುಸರಣೆಗೂ) ಅವನೇ ಅರ್ಹನಾಗಿರುವನು. ಯಾಕೆಂದರೆ ಅವನ ಆದೇಶಗಳು ಮತ್ತು ಆಡಳಿತವು ಜ್ಞಾನಾಧಾರದಲ್ಲಿರುತ್ತದೆ. ಅವನ ಆದೇಶಗಳು ಅನುಗ್ರಹಪೂರಿತ ವಾಗಿರುತ್ತವೆ. "ಜನರೇ, ನಿಮ್ಮ ದೇವನು ಏಕಮಾತ್ರ ಅಲ್ಲಾಹನಾಗಿದ್ದು ಅವನ ಹೊರತು ಅನ್ಯ ದೇವನಾರೂ ಇಲ್ಲ. ಅವನ ಜ್ಞಾನವು ಸಕಲ ವಸ್ತುಗಳನ್ನು ಆವರಿಸಿಕೊಂಡಿದೆ." **(ತಾಹಾ: 98)**

27) ಅಲ್ಲಾಹನ ಅನನ್ಯ ಗುಣವೈಶಿಷ್ಟ್ಯಗಳು:

ಪವಿತ್ರ ಕುರ್ಆನ್ ಅಲ್ಲಾಹನ ಅನನ್ಯ ಗುಣಗಳನ್ನು ಹೀಗೆ ವಿವರಿಸಿದೆ. "ಆದಿಯೂ ಅವನೇ. ಅಂತ್ಯನೂ ಅವನೇ ಮತ್ತು ಅಭಿವ್ಯಕ್ತನೂ ಅವನೇ. ರಹಸ್ಯನೂ ಅವನೇ ಮತ್ತು ಅವನು ಸಕಲ ವಿಷಯಗಳ ಜ್ಞಾನವುಳ್ಳವನು." **(ಅಲ್ ಹದೀದ್: 3)**

ಅವನು ಆದಿಯಾಗಿದ್ದಾನೆ– ಶೂನ್ಯವಿತ್ತು. ಏನೂ ಇರಲಿಲ್ಲ. ಈ ಪ್ರಪಂಚವೂ ಇರಲಿಲ್ಲ. ಆದರೆ ಅವನಿದ್ದ. ಅರ್ಶ್‌ನಲ್ಲಿ ಅರ್ಥಾತ್ ವಿಶ್ವ ಸಿಂಹಾನದಲ್ಲಿ ಅಲ್ಲಾಹನು

ಆರೂಢನಾಗಿದ್ದ. ಆದುದರಿಂದ ಅವನೇ ಆದಿ. ಅವನು ಈ ವಿಶ್ವವನ್ನು ಅದರೊಳಗಿನ ಪ್ರತಿಯೊಂದು ವಸ್ತುಗಳನ್ನು ಸೃಷ್ಟಿಸಿದನು.

ಅವನು ಅಂತ್ಯವಾಗಿದ್ದಾನೆ– ಅಂದರೆ ಯಾವುದಕ್ಕೂ ಉಳಿವಿಲ್ಲ. ಎಲ್ಲವೂ ಅಂತ್ಯವಾಗುವುದು. ಪ್ರತಿಯೊಂದು ವಸ್ತುವನ್ನು ನಾಶಕ್ಕೊಳಪಡಿಸಲಾಗುವುದು. ಆದರೆ ಅಲ್ಲಾಹ್ ಅಲ್ ಹಯ್ಯುಲ್ ಕಯ್ಯೂಂ (ಸ್ವಯಂ ಜೀವಂತನನು, ಚಿರಂತನನು) ಆಗಿದ್ದು ಅವನು ಉಳಿಯುವನು. ಅವನಿಗೆ ಅಳಿವಿಲ್ಲ.

ಅವನು ಅಭಿವ್ಯಕ್ತನು– ಅಂದರೆ ಪ್ರತಿಯೊಂದು ಕಡೆ ತನ್ನ ಪ್ರತಿಯೊಂದು ಸೃಷ್ಟಿಗಳ ಮೂಲಕವಾಗಿ ಅರಿವಾಗುತ್ತಾನೆ. ಇದನ್ನು ಅನುಭವಕ್ಕೆ ತಂದುಕೊಳ್ಳಬಹುದಾಗಿದೆ. ಅವನ ಶಕ್ತಿ ಮತ್ತು ಕಾರ್ಯಗಳು ಅವನ ಅಸ್ತಿತ್ವ ಸೂಚಕವೂ ಇವೆಲ್ಲ ಪ್ರಪಂಚದ ಚಲನೆಯ ಪ್ರತಿಕ್ಷಣಗಳಲ್ಲಿಯೂ ನಮಗೆ ಅನುಭವಕ್ಕೆ ಬರುತ್ತದೆ. ಅಂದರೆ ಅವನ ಶಕ್ತಿಯಲ್ಲಿ, ಅವನ ಕರುಣೆಯಲ್ಲಿ, ಅವನು ತಾನು ಬಯಸುವುದನ್ನು ಈಡೇರಿಸಿಕೊಳ್ಳುವುದರಲ್ಲಿ, ಪ್ರಾರ್ಥನೆ ಆಲಿಸುವುದರಲ್ಲಿ, ಅಸಂಭಾವ್ಯ ಕಾರ್ಯಗಳನ್ನು ಘಟಿಸುವುದರಲ್ಲಿ, ಪ್ರಪಂಚ ವ್ಯವಸ್ಥೆ ನಿಯಮಿತವಾಗಿ ನಡೆಯುತ್ತಿರುವುದರಲ್ಲಿ ಅಲ್ಲಾಹನ ಅಸ್ತಿತ್ವವನ್ನು ನಾವು ಅನುಭವ ಮಾಡಿಕೊಳ್ಳ ಬಹುದಾಗಿದೆ. ಮನುಷ್ಯನ ದೇಹದ ವ್ಯವಸ್ಥೆ ಮತ್ತು ಅದು ನಿಯಮಿತವಾಗಿ ನಡೆಯುತ್ತಿರುವುದು. ಮನುಷ್ಯರು ಮತ್ತು ಇತರ ಸೃಷ್ಟಿಗಳ ಜೀವನಾಧಾರಕ್ಕಾಗಿ ಭೂಮಿ ಮತ್ತು ಆಕಾಶದ ಗುಣಲಕ್ಷಣಗಳು ಮತ್ತು ಕಾನೂನುಗಳ ಅರಿವು ಜೊತೆಗೆ ಪ್ರತಿಯೊಂದು ವಸ್ತುಗಳ ಅಂತರಾಳದೊಳಗೆ ಅವುಗಳದೇ ಕಾನೂನುಗಳು ಸಕ್ರಿಯ ಗೊಂಡಿರುವುದು ಅಲ್ಲಾಹನ ಮತ್ತು ಅವನ ಅಸ್ತಿತ್ವದ ಅನುಭವವನ್ನೂ ವಿಶ್ವಾಸವನ್ನೂ ಮೂಡಿಸುತ್ತದೆ. ಆದುದರಿಂದ ಅವನು ಸಕಲ ವಸ್ತುಗಳಿಗಿಂತಲೂ ಬಹಿರಂಗ ಹಾಗೂ ಸ್ಪಷ್ಟ ಆಗಿರುವನು.

ಹಾಗೆ ಹೇಳುವುದಾದರೆ ಸೂರ್ಯನು ಎಲ್ಲವುಗಳಿಗಿಂತ ಹೆಚ್ಚು ಸ್ಪಷ್ಟವಾಗಿ ವ್ಯಕ್ತವಾಗುತ್ತಾನೆ. ಆದರೆ ಸೂರ್ಯ ಕೂಡ ನಮ್ಮ ದೃಷ್ಟಿಯಿಂದ ಮರೆಯಾಗುವುದು. ಆದರೆ ಅಲ್ಲಾಹನ ಅಸ್ತಿತ್ವವು ಹಾಗಲ್ಲ. ಅವನ ಅಸ್ತಿತ್ವವು ಹಗಲೂ ರಾತ್ರೆಯೂ ಮತ್ತು ಪ್ರತಿಯೊಂದು ಸ್ಥಳಗಳಲ್ಲಿ ಪ್ರತಿಯೊಂದು ಸಮಯದಲ್ಲಿ ಮತ್ತು ಪ್ರತಿಯೊಂದು ವಸ್ತುಗಳಲ್ಲಿಯೂ ಅನುಭವ ವೇದ್ಯವಾಗುತ್ತದೆ. ಅದು ವಿಭಿನ್ನ ರೂಪದಲ್ಲಿ ಮತ್ತು ಪ್ರತಿಷ್ಠಿತವಾಗಿ ನನ್ನ ಅನುಭವಕ್ಕೆ ಬಂದೇ ಬರುತ್ತದೆ. ಆ ನಂತರವೂ ಮನುಷ್ಯರು ತಮ್ಮ ಸೃಷ್ಟಿಕರ್ತ, ಒಡೆಯ, ಪಾಲಕ ಪ್ರಭು, ಆಜ್ಞಾಧಿಕಾರಿ, ಸಹಾಯಕ, ನಿರ್ವಾಹಕ ವ್ಯವಸ್ಥಾಪಕನಾದ ಅಲ್ಲಾಹನ ಅನುಭವ ಪಡೆಯದಿರುವುದಾದರೆ ಮತ್ತು ಅವನಲ್ಲಿ ವಿಶ್ವಾಸ ಇರಿಸದಿರುವುದಾದರೆ ಅದು ಮನುಷ್ಯರದೇ ಬಹುದೊಡ್ಡ ವೈಫಲ್ಯವಾಗುವುದು,

ವಿನಾಶವಾಗುವುದು. ಇವುಗಳಿಗೆ ಸ್ವತಃ ಮನುಷ್ಯನೇ ಹೊಣೆಗಾರನಾಗಿರುವನು.

ಮತ್ತು ಅದು ಮರೆಯಲ್ಲಿರುತ್ತದೆ– ಅವನಿಗೆ ಅರಿವಾಗದೇ ಅಲ್ಲಾಹನು ಅತ್ಯಂತ ಹೆಚ್ಚು ಮರೆಮಾಚಲ್ಪಟ್ಟಿದ್ದಾನೆ. ಯಾಕೆಂದರೆ ಅವನ ಅಸ್ತಿತ್ವವನ್ನು ಯಾವ ಕಣ್ಣುಗಳ ದೃಷ್ಟಿಯೂ ನೋಡಲಾರದು ಮತ್ತು ಯಾರೂ ನೋಡಿಲ್ಲ. ಆದರೂ ಅವನ ಶಕ್ತಿ, ಸಾಮರ್ಥ್ಯ ಮತ್ತು ಅನುಗ್ರಹಗಳನ್ನು ನಾವು ಪ್ರತಿಯೊಂದು ವಸ್ತುಗಳಿಂದ ಮಾತ್ರವಲ್ಲ ಪ್ರತೀ ಕ್ಷಣ ಕ್ಷಣಗಳಲ್ಲಿ ಅನುಭವಿಸಿಕೊಳ್ಳಬಹುದಾಗಿದೆ.

ಮತ್ತು ಅವನು ಸಕಲ ವಿಷಯಗಳ ಜ್ಞಾನಿ– ಸೃಷ್ಟಿಸಿದವನಿಗೆ ಅರಿವಿರದಿರುವುದು ಹೇಗೆ ಸಾಧ್ಯ? ಪ್ರಪಂಚ ಮತ್ತು ಅದರೊಳಗಿನ ಸಕಲ ವಸ್ತುಗಳನ್ನು ಆರಂಭದಿಂದಲೂ ಮತ್ತು ಅದರ ಸೃಷ್ಟಿಯ ಅಸ್ತಿತ್ವದಿಂದಲೂ ರಚಿಸುವುದು ಅಲ್ಲಾಹನ ಕಾರ್ಯ ಮತ್ತು ಶಕ್ತಿಯಾಗಿದೆ. ಸಕಲ ಸೃಷ್ಟಿಗಳು ಇಲ್ಲದಿರುವಿಕೆಯಿಂದ (ಶೂನ್ಯದಿಂದ) ಅಸ್ತಿತ್ವಕ್ಕೆ ಬಂದುವು. ಇವೆಲ್ಲವೂ ಅಲ್ಲಾಹನದೇ ಕಾರ್ಯವೂ ಮತ್ತು ಅವನ ಶಕ್ತಿಯಾಗಿ ರುವುದು. ನಿಶ್ಚಯವಾಗಿಯೂ ಅವನು ಸಕಲ ವಸ್ತುವಿನ ಜ್ಞಾನವನ್ನು ಹೊಂದಿರುವನು. ಮನುಷ್ಯನಲ್ಲಿರುವ ಜ್ಞಾನವೂ ಸೃಷ್ಟಿಕರ್ತನು ಅವನಿಗೆ ನೀಡಿದ ಕೊಡುಗೆಯಾಗಿದೆ.

ಈ ಪ್ರಪಂಚದಲ್ಲಿ ವ್ಯಾಪಿಸಿರುವುದನ್ನೇ ತನ್ನ ಪ್ರಯತ್ನಗಳ ಮೂಲಕ ಮನುಷ್ಯನು ತಮ್ಮದಾಗಿಸಿಕೊಂಡನು ಮತ್ತು ಅವುಗಳನ್ನು ಉಪಯೋಗಿಸುತ್ತಿದ್ದಾನೆ. ಮನುಷ್ಯನ ಜ್ಞಾನ ಸೀಮಿತವಾಗಿದ್ದು, ಅವನು ಸಾಯುವುದರೊಂದಿಗೆ ಅದು ಬಹುತೇಕ ಕೊನೆಗೊಳ್ಳುತ್ತದೆ. ಆದರೆ ಅಲ್ಲಾಹನ ಜ್ಞಾನಕ್ಕೆ ಕೊನೆ ಮೊದಲೆಂಬುದಿಲ್ಲ. ಅದು ಅಸೀಮ. ಅನಂತ. ಆದುದರಿಂದ ಆದಿಯೂ ಮತ್ತು ಅಂತ್ಯವೂ ಅವನದೇ. ಅವನೇ ಶಾಶ್ವತನು ಮತ್ತು ಸದಾ ಇರುವವನು. ವ್ಯಕ್ತ ಮತ್ತು ಅವ್ಯಕ್ತವಾದ ಸಕಲ ವಸ್ತುವಿನ ಜ್ಞಾನಿಯೂ ಆಗಿದ್ದಾನೆ. ಅವನು ಸರ್ವಜ್ಞ ಮತ್ತು ಅವನೇ ನೈಜ ಆರಾಧ್ಯನಾಗಿದ್ದಾನೆ.

ಮರಣ, ಜೀವನಗಳು ಸಂಪೂರ್ಣವಾಗಿ ಅಲ್ಲಾಹನ ಹಸ್ತದಲ್ಲಿ:

ಅಲ್ಲಾಹನು ವಿಶ್ವದ ಸೃಷ್ಟಿಕರ್ತನು ಮತ್ತು ಜೀವಂತನು. ಆದುದರಿಂದ ತಾನು ಸೃಷ್ಟಿಸಿದ ವಸ್ತುಗಳನ್ನು ನಾಶಪಡಿಸುವುದು ಮತ್ತು ತಾನು ಜೀವ ಕೊಟ್ಟಿರುವ ಜೀವಿಗಳಿಗೆ ಮರಣ ಕೊಡುವ ಅಧಿಕಾರ ಖಂಡಿತಾ ಅವನದ್ದೇ. ಒಂದು ವೇಳೆ ಯಾವುದೇ ಇತರ ಅಸ್ತಿತ್ವವು (ಇತರ ಶಕ್ತಿ, ವ್ಯಕ್ತಿ ಯಾವುದೇ ಇರಲಿ) ಸಾವು ಕರುಣಿಸಬಹುದಾದವರು ಮತ್ತು ತಮ್ಮಲ್ಲೂ ಆ ಶಕ್ತಿ ಇದೆ ಎಂದು ಯೋಚಿಸುವುದಾದರೆ ಇದರ ಅರ್ಥ ಅಲ್ಲಾಹನು ಅಸಹಾಯಕನು ಮತ್ತು ತಾನೇ ಜೀವನ ಪ್ರದಾನಿಸಿದ ಜೀವಿಗಳ ಅಸ್ತಿತ್ವವನ್ನು ಜೀವಂತ ಇರಿಸಲಾರ ಎಂದಾಗುತ್ತದೆ ಮತ್ತು ಅವುಗಳ ರಕ್ಷಣೆ

ಮಾಡಲಾರ ಎಂದಾಗುವುದು. ಇದು ತಪ್ಪು. ಸರಿಯಲ್ಲ. ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ.

"ಭೂಮಿ–ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಆಗಿರುತ್ತಾನೆ. ಅವನೇ ಜೀವನ ನೀಡುತ್ತಾನೆ ಮತ್ತು ಮರಣ ಕೊಡುತ್ತಾನೆ. ಅವನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು." (ಅಲ್ ಹದೀದ್: 2)

ಅವನ ಸಾಮ್ರಾಜ್ಯದಲ್ಲಿ ಅರ್ಥಾತ್, ಅಲ್ಲಾಹನ ಸಾಮ್ರಾಜ್ಯದಲ್ಲಿ ಅಲ್ಲಾಹನ ಅನುಮತಿ ಇಲ್ಲದೆ ಮತ್ತು ಅವನ ಇಚ್ಛೆಗೆ ವಿರುದ್ಧವಾಗಿ ಯಾವುದೇ ಅಸ್ತಿತ್ವಕ್ಕೆ ಯಾವುದಾದರೂ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ಇಂತಹ ಅಸ್ತಿತ್ವಗಳು ಜೀವನ ಮರಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಮಾಡಲಾರವು.

ಹೀಗಿರುವಾಗ ಯಾವುದೇ ಜೀವಿಗೆ (ಜೀವಂತ ಅಸ್ತಿತ್ವಗಳಿಗೆ) ಯಾವಾಗ ಮರಣ ಕೊಡಬೇಕು ಮತ್ತು ಯಾವ ರೀತಿಯಾಗಿ ಕೊಡಬೇಕು ಎಂಬುದನ್ನು ಅಲ್ಲಾಹನೇ ತೀರ್ಮಾನಿಸುತ್ತಾನೆ.

ಯಾವನೇ ವ್ಯಕ್ತಿ ಇನ್ನು ಯಾವುದೇ ವ್ಯಕ್ತಿಯ ಕೊಲೆಯ ಯೋಜನೆ ಹಾಕಿದರೂ ಆ ವ್ಯಕ್ತಿಯ ಯೋಜನೆ ಯಶಸ್ವಿಯಾಗಲು ಬಿಡುವುದು ಅಥವಾ ಬಿಡದಿರುವುದು ಅಲ್ಲಾಹನ ಇಚ್ಛೆಯಾಗಿದೆ. ಅವೆಲ್ಲವೂ ಅಲ್ಲಾಹನ ತೀರ್ಮಾನದಂತೆ ಮಾತ್ರ ಸಂಭವಿಸುತ್ತದೆ. ಒಂದೋ ಅಲ್ಲಾಹನು ಆ ವ್ಯಕ್ತಿಯ ಜೀವ ಉಳಿಸಲು ಬಯಸಿದರೆ ಅವನನ್ನು ರಕ್ಷಿಸುವನು. ಕೊಲೆ ಕೃತ್ಯ ಯಶಸ್ವಿಯಾಗದು ಅಥವಾ ಅವನಿಗೆ ಸಾವು ನಿರ್ಧರಿಸಿದ್ದರೆ ಅವನು ಕೊಲ್ಲಲ್ಪಡುವನು. ಈ ರೀತಿ ಅಲ್ಲಾಹನ ತೀರ್ಮಾನವೇ ಈ ಘಟನೆಗಳಲ್ಲಿಯೂ ಜಾರಿಗೊಂಡಿರುತ್ತದೆ. ಕೊಲೆ ಸಂಚು ರೂಪಿಸಿದವರದಲ್ಲ. ಆದರೆ ಕೊಲೆ ಸಂಚು ರೂಪಿಸಿ ಕೊಲೆ ಕೃತ್ಯಕ್ಕೆ ಯತ್ನಿಸಿದವರು ತಮ್ಮ ದುಷ್ಕರ್ಮಕ್ಕೆ ಶಿಕ್ಷಿಸಲ್ಪಡುವರು. ಒಬ್ಬ ವ್ಯಕ್ತಿ ನೀರಿನಲ್ಲಿ ಮುಳುತ್ತಿರುವಾಗ ಬೇರೆ ಯಾರೋ ಅವನನ್ನು ರಕ್ಷಿಸಲು ಯತ್ನಿಸಿ ಅದರಲ್ಲಿ ಯಶಸ್ವಿಯಾದರೂ ಯಶಸ್ವಿ ಯಾಗದಿದ್ದರೂ ಅದು ಅಲ್ಲಾಹನ ತೀರ್ಮಾನವಾಗಿರುತ್ತದೆ. ರಕ್ಷಿಸಲು ಧುಮುಕಿದವನ ಪ್ರಯತ್ನ ಯಶಸ್ವಿ ಅಥವಾ ವಿಫಲವು ಅಲ್ಲಾಹನ ಇಚ್ಛೆಯ ಆಧಾರಿತವಾಗಿರುತ್ತದೆ ಮತ್ತು ಅವನ ತೀರ್ಮಾನಕ್ಕೆ ಬದ್ಧವಾಗಿರುತ್ತದೆ. ಆದರೂ ರಕ್ಷಿಸಲು ಬಯಸಿ ಮುಂದೆ ಬಂದು ಅದಕ್ಕೆ ಶ್ರಮಿಸಿದವರ ಮಾನವೀಯ ಕಾರ್ಯಕ್ಕೆ ಅಲ್ಲಾಹನು ಪ್ರತಿಫಲ ನೀಡಲಿದ್ದಾನೆ. ನೀರಿನಲ್ಲಿ ಮುಳುಗುತ್ತಿರುವ ವ್ಯಕ್ತಿ ಸಾಯುವುದು ಮತ್ತು ಬದುಕುಳಿಯುವುದು ಅಲ್ಲಾಹನ ಅಧಿಕಾರ ವ್ಯಾಪ್ತಿಯಲ್ಲಿದೆ. ಈ ಶಕ್ತಿ ಬೇರೆ ಯಾರಿಗೂ ಇಲ್ಲ. ಇತರರಿಗೆ ಆ ಅಧಿಕಾರವೂ ಇಲ್ಲ. ಅಲ್ಲಾಹನೇ ತನ್ನ ಪ್ರಭುತ್ವದಲ್ಲಿ

ಸಕಲ ವಿಷಯಗಳು ಮತ್ತು ಸಕಲ ಕಾರ್ಯಗಳನ್ನು ಜಾರಿಗೊಳಿಸುವನು ಮತ್ತು ಅದಕ್ಕೆ ಅವನೇ ಸಮರ್ಥನಾಗಿರುವನು.

ಈ ಸತ್ಯ ಸ್ಥಿತಿಯನ್ನು ತನ್ನದೇ ಶೈಲಿಯಲ್ಲಿ ಪವಿತ್ರ ಕುರ್‌ಆನ್ ಉದ್ಧರಿಸಿದ್ದು ಸಕಲ ವಿಷಯಗಳ ಅಂತಿಮ ತೀರ್ಮಾನ ಅಲ್ಲಾಹನ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ ಎಂದಿದೆ. ಮನುಷ್ಯನ ಪ್ರಯತ್ನ ಯಶಸ್ವಿಯಾದರೂ ಯಶಸ್ವಿಯಾಗದಿದ್ದರೂ ತನ್ನ ಸಾಮ್ರಾಜ್ಯದಲ್ಲಿ ಸಕಲ ಕಾರ್ಯಗಳನ್ನು ತನ್ನ ಇಚ್ಛೆಯಂತೆ ಮತ್ತು ತಾನು ಬಯಸಿರುವಂತೆ ನಿರ್ವಹಿಸುವನು. ಮನುಷ್ಯನ ಪ್ರಯತ್ನಗಳು ಒಳಿತಿನದ್ದಾಗಿರಲಿ, ಕೆಡುಕಿನದ್ದಾಗಿರಲಿ. ಅದು ಲೋಕದ ದೃಷ್ಟಿಗೆ ಯಶಸ್ವಿಯಾದುದಾಗಿರಲಿ. ವಿಫಲವಾದುದು ಆಗಿರಲಿ, ಅವುಗಳೆರಡಕ್ಕೂ ಪರಿಣಾಮವಿದೆ. ಪ್ರತಿಫಲವಿದೆ. ಈ ವಾಸ್ತವವನ್ನು ಅರ್ಥಾತ್ ಸಕಲ ವಿಷಯಗಳಲ್ಲಿ ಅಲ್ಲಾಹನೇ ತೀರ್ಮಾನಿಸುವನೆಂದು ಪವಿತ್ರ ಕುರ್‌ಆನ್ ತಿಳಿಸುತ್ತಿದೆ.

"ಭೂಮಿ–ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಮತ್ತು ಸಕಲ ವಿಷಯಗಳು ತೀರ್ಮಾನಕ್ಕಾಗಿ ಅವನ ಕಡೆಗೆ ಮರಳಿಸಲ್ಪಡುತ್ತವೆ." **(ಅಲ್ ಹದೀದ್: 5)**

28) ಅಲ್ಲಾಹನು ದಾಸನಿಗೆ ಸಮೀಪವಿದ್ದು, ದಾಸನ ಉದ್ದೇಶವನ್ನು ಅರಿಯುತ್ತಾನೆ:

ಅಲ್ಲಾಹನು ಪ್ರತಿಯೊಬ್ಬರ (ದಾಸನ) ಸಕಲ ಅವಸ್ಥೆಯ ಕುರಿತು ಜ್ಞಾನಿಯಾಗಿದ್ದು. ದಾಸನ ಮೊರೆಯನ್ನು ಆಲಿಸುವನು. ದಾಸನ ಆಶೆ–ಆಕಾಂಕ್ಷೆ ಮತ್ತು ಆವಶ್ಯಕತೆಗಳನ್ನು ಈಡೇರಿಸುವನು. ದಾಸನಿಗೆ ಒಳಿತಿನ ಕಾರ್ಯಗಳಲ್ಲಿ ನೆರವಾಗುವನು. ದಾಸನ ಜೀವನ ಕರ್ಮಗಳ ದಾಖಲೆ ಅವನ ನಿಗಾವಣೆಯಲ್ಲಿದೆ. ಎಷ್ಟರವರೆಗೆಂದರೆ ಅಲ್ಲಾಹನು ದಾಸರ ಹೃದಯಾಂತರಾಳದಲ್ಲಿ ಅಡಗಿರುವ ರಹಸ್ಯಗಳ ಮತ್ತು ಉದ್ದೇಶಗಳ ಜ್ಞಾನಿಯಾಗಿದ್ದಾನೆ. ಈ ರೀತಿ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳ ಸಕಲ ಜ್ಞಾನವೂ ಅವನಿಗಿದೆ. ಅಲ್ಲಾಹನು ಅಷ್ಟು ತನ್ನ ದಾಸರಿಗೆ ನಿಕಟನಾಗಿದ್ದು ಅದನ್ನು ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ.

"ಭೂಮಿ–ಆಕಾಶಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದವನು ಅವನೇ. ಆನಂತರ ವಿಶ್ವ ಸಿಂಹಾಸನಾರೂಢನಾದನು. ಭೂಮಿಯೊಳಗೆ ಹೋಗುವ, ಅದರಿಂದ ಹೊರ ಬರುವ ಮತ್ತು ಆಕಾಶದಿಂದ ಇಳಿಯುವ ಮತ್ತು ಅದಕ್ಕೆ ಏರಿ ಹೋಗುವ ಎಲ್ಲ ವಸ್ತುಗಳ ಜ್ಞಾನ ಅವನಿಗಿದೆ. ನೀವೆಲ್ಲಿದ್ದರೂ ಅವನು ನಿಮ್ಮ ಜೊತೆಗಿದ್ದಾನೆ. ನೀವು ಮಾಡುವುದೆಲ್ಲವನ್ನೂ ಅವನು ನೋಡುತ್ತಿದ್ದಾನೆ." **(ಅಲ್ ಹದೀದ್: 4)**

ಮತ್ತು ಮುಂದುವರಿದು ಪವಿತ್ರ ಕುರ್‌ಆನ್ ಹೀಗೆಂದಿದೆ.

"ನಿಮಗೇನಾಗಿದೆ? ಸಂದೇಶವಾಹಕನು ನಿಮಗೆ ನಿಮ್ಮ ಒಡೆಯನ ಮೇಲೆ ವಿಶ್ವಾಸ ವಿರಿಸಲು ಕರೆ ನೀಡುತ್ತಿದ್ದರೂ ನೀವು ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದಿಲ್ಲವೇಕೆ? ನೀವು ನಿಜಕ್ಕೂ ವಿಶ್ವಾಸಿಗಳಾಗಿದ್ದರೆ. ಅವನು ನಿಮ್ಮಿಂದ ವಚನ ಪಡೆದಿರುತ್ತಾನೆ." **(ಅಲ್ ಹದೀದ್: 8)**

ವಿಶ್ವ ಮತ್ತು ಜೀವಜಾಲಗಳ ವ್ಯವಸ್ಥಾಪನೆಗೆ ಪ್ರತಿಯೊಂದು ವಸ್ತುಗಳ ಕುರಿತ ಜ್ಞಾನ, ಸಕಲ ವಿಷಯಗಳ ಪ್ರತೀ ಕ್ಷಣ ಕ್ಷಣಗಳ ಅರಿವು ಅತ್ಯವಶ್ಯಕ. ಈ ಅಸ್ತಿತ್ವವು ಆರಾಧ್ಯನಾಗಿದ್ದು ಅವನು ಮನುಷ್ಯನಿಗೆ ಅತಿ ನಿಕಟವಾಗಿರುವನು. ಮಾತ್ರವಲ್ಲ ಸಕಲ ವಸ್ತುವಿಗೆ ಯಾವ್ಯಾವ ಬೇಡಿಕೆ ಅಗತ್ಯಗಳಿವೆ ಎಂಬ ಕುರಿತ ಜ್ಞಾನ ಆರಾಧ್ಯನಿಗಿದೆ ಮತ್ತು ಅವನೇ ಅಲ್ಲಾಹನಾಗಿದ್ದಾನೆ. ಈ ಗುಣವೈಶಿಷ್ಟ್ಯಗಳನ್ನು ಹೊಂದಿರುವ ಅಲ್ಲಾಹನೇ ಸರ್ವರ ನೈಜ ಆರಾಧ್ಯನಾಗಿದ್ದಾನೆ.

29) ಮನುಷ್ಯರ ಸೃಷ್ಟಿ ಕಾರ್ಯ:

ಅಲ್ಲಾಹನು ಮಣ್ಣಿನಿಂದ ಮನುಷ್ಯನನ್ನು ಸೃಷ್ಟಿಸಿದನು. ಮಾನವರ ತಲೆಮಾರು ಮುಂದುವರಿಯುವ ಸಲುವಾಗಿ ಅದಕ್ಕೆ ಬೇಕಾದ ಒಂದು ಸೂಕ್ತ ವ್ಯವಸ್ಥೆಯನ್ನು ರೂಪಿಸಿದನು. ಆ ವ್ಯವಸ್ಥೆಗನುಗುಣವಾಗಿ ಮನಷ್ಯರ ಜನನ ಕಾರ್ಯ ಮುಂದುವರಿಯುತ್ತಿದೆ. ಪವಿತ್ರ ಕುರ್‌ಆನ್ ಈ ವಾಸ್ತವವನ್ನು ತಿಳಿಸಿದ್ದು ಅಲ್ಲಾಹನೇ ಮನುಷ್ಯನ ಸೃಷ್ಟಿಕರ್ತ ಎಂದು ಸೂಚಿಸಿದೆ. ಆದುದರಿಂದ ಸೃಷ್ಟಿ ಕಾರ್ಯದ ಕರ್ತೃ ನೈಜ ಆರಾಧ್ಯನಾಗಿರುವನು. ಏನೂ ಇಲ್ಲದ ಶೂನ್ಯಾವಸ್ಥೆಯಿಂದ ಅವನು ಮನುಷ್ಯರನ್ನು ಅಸ್ತಿತ್ವಕ್ಕೆ ತಂದಿರುವನು. ಜೊತೆಗೆ ಮಾನವರಿಗಾಗಿ ಅತ್ಯುತ್ತಮವಾದ ಅನೂಕೂಲತೆಗಳನ್ನು (ಉತ್ಕೃಷ್ಟ ಸೌಲಭ್ಯಗಳನ್ನು) ಮಾಡಿದ ಅಲ್ಲಾಹನೇ ನೈಜ ಆರಾಧ್ಯನಾಗಿದ್ದಾನೆ.

ಪವಿತ್ರ ಕುರ್‌ಆನ್ ಮನುಷ್ಯರ ಸೃಷ್ಟಿಕಾರ್ಯದ ಕುರಿತ ಚಿತ್ರಣವನ್ನು ಈ ರೀತಿ ಅಭಿಸಂಬೋಧಿತರ ಮುಂದಿಡುತ್ತಿದೆ. "ನಿಮ್ಮ ಪ್ರಭು ದೇವಚರರೊಡನೆ, 'ನಾನು ಹಳಸಿದ ಮಣ್ಣಿನ ಒಣಗಾರೆಯಿಂದ ಒಬ್ಬ ಮಾನವನನ್ನು ಸೃಷ್ಟಿಸುವವನಿದ್ದೇನೆ. ನಾನು ಅವನನ್ನು ಸಂಪೂರ್ಣಗೊಳಿಸಿ ಅವನೊಳಗೆ ನನ್ನ ಆತ್ಮದಿಂದ ಕೊಂಚ ಊದಿದಾಗ ನೀವೆಲ್ಲರೂ ಅವನ ಮುಂದೆ ಸಾಷ್ಟಾಂಗವೆರಗಬೇಕು' ಎಂದು ಹೇಳಿದ ಸಂಧರ್ಭವನ್ನು ಸ್ಮರಿಸಿರಿ." **(ಅಲ್ ಹಿಜ್ರ್: 28-29)**

ತದನಂತರ ಸೃಷ್ಟಿ ಕಾರ್ಯದ ಮುಂದುವರಿಕೆಯ ಇತರ ಹಂತಗಳನ್ನು ಮತ್ತು ವಿಧಾನವನ್ನು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ, "ನಾವು ಮಾನವನನ್ನು ಒಂದು ಸಮ್ಮಿಶ್ರ ವೀರ್ಯದಿಂದ ಸೃಷ್ಟಿಸಿದೆವು. ಅವನನ್ನು ಪರೀಕ್ಷಿಸಲಿಕ್ಕಾಗಿ ಮತ್ತು

ಈ ಉದ್ದೇಶದಿಂದ ನಾವು ಅವನನ್ನು ಆಲಿಸುವ ವನಾಗಿ ಹಾಗೂ ವೀಕ್ಷಿಸುವವನಾಗಿ ಮಾಡಿದೆವು. ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ." (ಅದ್ದಹ್ರ್: 2-3)

ಸಹಜವಾಗಿಯೂ ಸೃಷ್ಟಿಸಿದವನದೇ ಸಾಮ್ರಾಜ್ಯವಾಗಿರುತ್ತದೆ (ಪ್ರಪಂಚ). ಆ ಸಾಮ್ರಾಜ್ಯದಲ್ಲಿ ಅದನ್ನು ಸೃಷ್ಟಿಸಿದವನದೇ ಶಾಸನಾಧಿಕಾರವಿರುತ್ತದೆ ಮತ್ತು ಆ ಸೃಷ್ಟಿಕರ್ತನೇ ಅಲ್ಲಾಹನಾಗಿರುತ್ತಾನೆ. "(ಸಂದೇಶವಾಹಕರೇ) ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ. ಅವನು, ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು." (ಅಲ್ ಅಲಕ್: 1-2)

ಪವಿತ್ರ ಕುರ್‌ಆನ್ ಮನುಷ್ಯರ ಸೃಷ್ಟಿಕಾರ್ಯವನ್ನು ವಿಸ್ತಾರವಾಗಿ ಹೀಗೆ ವಿವರಿಸುತ್ತಿದೆ, "ಜನರೇ, ನಿಮಗೆ ಮರಣಾನಂತರದ ಜೀವನದ ಬಗೆಗೇನಾದರೂ ಸಂಶಯವಿದ್ದರೆ, ನಾವು ನಿಮ್ಮನ್ನು ಮಣ್ಣಿನಿಂದಲೂ ಆನಂತರ ವೀರ್ಯದಿಂದಲೂ ಆ ಮೇಲೆ ರಕ್ತ ಪಿಂಡದಿಂದಲೂ ಆ ಬಳಿಕ ರೂಪವಿರುವ ಮತ್ತು ರೂಪವಿಲ್ಲದ ಮಾಂಸದ ತುಣುಕಿನಿಂದಲೂ ಸೃಷ್ಟಿಸಿದೆವು ಎಂಬುದು ನಿಮಗೆ ತಿಳಿದಿರಲಿ. ನಿಮಗೆ ವಸ್ತುಸ್ಥಿತಿ ವಿವರಿಸಲಿಕ್ಕಾಗಿ (ನಾವು ಇದನ್ನು ತಿಳಿಸುತ್ತಿದ್ದೇವೆ) ನಾವು ನಮಗಿಷ್ಟವಿರುವುದನ್ನು (ವೀರ್ಯವನ್ನು) ಒಂದು ನಿರ್ದಿಷ್ಟ ಅವಧಿಯ ತನಕ ಗರ್ಭಾಶಯದೊಳಗೆ ತಡೆದಿರಿಸುತ್ತೇವೆ. ಆನಂತರ ನಿಮ್ಮನ್ನು ಒಂದು ಶಿಶುವಿನ ರೂಪದಲ್ಲಿ ಹೊರತರುತ್ತೇವೆ. (ತರುವಾಯ) ನೀವು ತಾರುಣ್ಯಕ್ಕೆ ತಲುಪುವಂತಾಗಲು (ನಿಮ್ಮನ್ನು ಪೋಷಿಸುತ್ತೇವೆ) ಮತ್ತು ನಿಮ್ಮಲ್ಲಿ ಕೆಲವರನ್ನು ಮೊದಲೇ ಹಿಂದಕ್ಕೆ ಕರೆಸಿಕೊಳ್ಳಲಾಗುತ್ತದೆ ಮತ್ತು ಕೆಲವರನ್ನು ಎಲ್ಲವನ್ನೂ ತಿಳಿದುಕೊಂಡ ಬಳಿಕ ಏನೂ ತಿಳಿಯದಂತಾಗಲು ಅತೀ ವೃದ್ಧಾಪ್ಯದೆಡೆಗೆ ತಿರುಗಿಸಿ ಬಿಡಲಾಗುತ್ತದೆ. ನೆಲವು ಒಣಗಿರುವುದನ್ನು ನೀವು ನೋಡುತ್ತೀರಿ. ಆನಂತರ ನಾವು ಅದರ ಮೇಲೆ ಮಳೆಗೆರೆದಾಗ ಅದು ಒಮ್ಮೆಲೇ ಮೊಳಕೆಯೊಡೆಯಿತು. ಉಬ್ಬಿತು ಮತ್ತು ಎಲ್ಲ ಬಗೆಯ ನಯನ ಮನೋಹರ ಸಸ್ಯಗಳನ್ನು ಹೊರಗೆಡಹ ತೊಡಗಿಬಿಟ್ಟಿತು." (ಅಲ್ ಹಜ್ಜ್: 5)

ಮಣ್ಣಿನಂತಹ ನಿರ್ಜೀವ ವಸ್ತುವಿನಿಂದ ಮನುಷ್ಯನಂತಹ ಜೀವಯುಕ್ತ ಸೃಷ್ಟಿಗಳನ್ನು ಸೃಷ್ಟಿಸಿರುವ ಅಲ್ಲಾಹನಿಗೆ ಮಗದೊಮ್ಮೆ ಸೃಷ್ಟಿಕಾರ್ಯ ನಡೆಸಲು ಇರುವ ಕಷ್ಟವಾದರೂ ಏನಿದೆ? ಅದು ಅವನಿಗೆ ಯಾಕೆ ಅಸಾಧ್ಯ? ಕೊನೆಗೂ ಮನುಷ್ಯನ್ನು ಮಣ್ಣಿಂದಲೇ ಸೃಷ್ಟಿಸಲಾಗಿದೆಯಷ್ಟೇ. ಪವಿತ್ರ ಕುರ್‌ಆನ್‌ನಲ್ಲಿ ಮತ್ತೊಂದು ಕಡೆ ಮಣ್ಣಿನ ಸತ್ವದಿಂದ ಸೃಷ್ಟಿಸಿದ ಮನುಷ್ಯನನ್ನು ಮಗದೊಮ್ಮೆ ಮಣ್ಣಿನಿಂದಲೇ ಹೊರ ತರಲಾಗುವುದು ಮಾತ್ರವಲ್ಲ ಈ ಕಾರ್ಯ ಅಲ್ಲಾಹನಿಗೆ ಕಿಂಚಿತ್ತೂ ಕಷ್ಟವಿಲ್ಲ ಎಂದು ತಿಳಿಸಲಾಗಿದೆ.

"ನಾವು ಮಾನವರನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು. ಆನಂತರ ಆ ಹನಿಗೆ ಮಾಂಸಪಿಂಡದ ರೂಪ ಕೊಟ್ಟೆವು ಬಳಿಕ ಮಾಂಸ ಪಿಂಡವನ್ನು ಮಾಂಸ ಖಂಡವನ್ನಾಗಿ ಮಾಡಿದೆವು. ಆ ಮೇಲೆ ಮಾಂಸ ಖಂಡವನ್ನು ಎಲುಬುಗಳಾಗಿ ಮಾಡಿದೆವು. ಆ ಬಳಿಕ ಅದನ್ನೊಂದು ಬೇರೇಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು. ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ. ಅದಾದ ಬಳಿಕ ನಿಮಗೆ ಖಂಡಿತವಾಗಿಯೂ ಸಾಯಲಿಕ್ಕಿದೆ. ಮತ್ತೆ ಪುನರುತ್ಥಾನದ ದಿನ ಖಂಡಿತವಾಗಿಯೂ ನೀವು ಎಬ್ಬಿಸಲ್ಪಡುವಿರಿ." **(ಅಲ್ ಮೂಮಿನೂನ್ 23: 12–16)**

ಸೃಷ್ಟಿಕರ್ತನು ಅತ್ಯುದಾತ್ತನು. ಅವನ ಉಪಕಾರ ಮಹತ್ತರವಾದುದು ಮತ್ತು ಆರಾಧಿಸಲ್ಪಡಲು ಅವನೇ ಅರ್ಹನು ಹಾಗೂ ಆರಾಧಿಸಲ್ಪಡುವುದು ಅವನದೇ ಹಕ್ಕು ಕೂಡಾ ಆಗಿದೆ. ಪವಿತ್ರ ಕುರ್‌ಆನ್ ಸರಳ ಸಾಮಾನ್ಯ ವಿಧಾನದಿಂದ ಮನುಷ್ಯನ ಸೃಷ್ಟಿಕಾರ್ಯದ ಹಂತಗಳನ್ನು ವಿವರಿಸಿತಲ್ಲದೆ ಇವೆಲ್ಲವೂ ಅಲ್ಲಾಹನ ಶಕ್ತಿ ಸಾಮರ್ಥ್ಯವೆಂದಿತು. ಸಾಮಾನ್ಯವಾದ ಒಂದು ಅನ್ವೇಷಣೆಯಲ್ಲೇ ಶತ ಶತಮಾನಗಳ ಮುಂಚಿನಿಂದಲೂ ನಡೆದು ಬಂದ ಮನುಷ್ಯ ಸೃಷ್ಟಿಕಾರ್ಯದ ವ್ಯವಸ್ಥೆಯ ಜ್ಞಾನವನ್ನು ನೀಡಿತು.

ಹೇಗೆ ಸಾಧ್ಯವಾಯಿತೆಂದರೆ ಅಲ್ಲಾಹನೇ ಆ ಪವಿತ್ರ ಗ್ರಂಥದ ರಚನಾಕರ್ತ ಮತ್ತು ಒಡೆಯ. ಅವನು ಯಾವ ರೀತಿ ಮನುಷ್ಯನನ್ನು ಆರಂಭದಿಂದಲೂ ಸೃಷ್ಟಿಸಿದನು ಮತ್ತು ನಂತರ ಅವನ ಸೃಷ್ಟಿಯ ಕಾರ್ಯದ ರೀತಿ– ವಿಧಾನಗಳು ಹೇಗಿವೆ ಎಂದು ಸ್ಪಷ್ಟಪಡಿಸಿದನು. ಮಣ್ಣಿನ ಪದಾರ್ಥಗಳ ವಸ್ತುಗಳನ್ನೇ ಮನುಷ್ಯನ ದೇಹಕ್ಕೆ ಅಳವಡಿಸಲ್ಪಟ್ಟಿದೆ. ಅಂದರೆ ಮನುಷ್ಯನನ್ನು ಮಣ್ಣಿನಿಂದ ಸೃಷ್ಟಿಸಲಾಯಿತು ಮತ್ತು ಮನುಷ್ಯನು ಕೂಡ ತನ್ನ ದೇಹಕ್ಕೆ ಶಕ್ತಿತುಂಬುವ ಸಲುವಾಗಿ ಝಿಂಕ್, ಐರನ್, ಪೊಟಾಸಿಯಂ, ಕ್ಯಾಲ್ಸಿಯಂ ಮುಂತಾದ ಅದೇ ಮಣ್ಣಿನ ಪದಾರ್ಥಗಳನ್ನೇ ಬಳಸಿಕೊಳ್ಳುವುದು.

ಇನ್ನು ಪವಿತ್ರ ಕುರ್‌ಆನ್ ಮನುಷ್ಯ ಸೃಷ್ಟಿಯ ಹಲವು ಆಯಾಮಗಳನ್ನು ತೆರೆದಿಟ್ಟಿದೆ. ಇದು ಯಾಕೆಂದರೆ ಅಲ್ಲಾಹನು ಮನುಷ್ಯನನ್ನು ಎಷ್ಟು ಉನ್ನತ ಮಟ್ಟದಲ್ಲಿ ಯುಕ್ತಿಪೂರ್ವಕ ಮತ್ತು ಕರುಣೆ ಸಹಿತ ಸೃಷ್ಟಿಸಿದನು ಎಂಬುದು ಮನುಷ್ಯನಿಗೇ ಅರಿವಾಗಲಿ ಎಂದಾಗಿದೆ.

"ಅವನೇ ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದನು. ತರುವಾಯ ಆ ಜೀವದಿಂದ ಅದರ ಜೊತೆಯನ್ನು ಸೃಷ್ಟಿಸಿದವನೂ ಅವನೇ." **(ಅಝ್ಝುಮರ್: 6)**

ಇದೇ ವಚನಗಳಲ್ಲಿ ಮುಂದಕ್ಕೆ ಹೇಳಲಾಗಿದೆ, "ಮತ್ತು ನಿಮ್ಮ ಜಾನುವಾರುಗಳಿಂದ ನಿಮಗಾಗಿ ಎಂಟು ಗಂಡು-ಹೆಣ್ಣುಗಳನ್ನು ಒದಗಿಸಿದವನೂ ಅವನೇ. ಅವನು ನಿಮ್ಮ ಮಾತೆಯರ ಉದರದೊಳಗೆ, ಮೂರು ಕತ್ತಲು ಪರದೆಗಳೊಳಗೆ (ನಿಮಗೆ) ಒಂದರ ನಂತರ ಒಂದು ರೂಪ ಕೊಡುತ್ತಾ ಸಾಗುತ್ತಾನೆ. (ಇವೆಲ್ಲ ಕಾರ್ಯಗಳನ್ನು ಮಾಡುತ್ತಿರುವ) ಈ ಅಲ್ಲಾಹನೇ ನಿಮ್ಮ ಪಾಲಕ ಪ್ರಭು. ಪ್ರಭುತ್ವವು ಅವನಿಗೇ ಸೇರಿದೆ. ಅವನ ಹೊರತು ಯಾವ ಆರಾಧ್ಯನೂ ಇಲ್ಲ. ಹೀಗಿರುತ್ತಾ ನೀವು ಅದೆಲ್ಲಿಂದ ದಾರಿಗೆಡಿಸಲ್ಪಡುತ್ತಿರುವಿರಿ?" (ಅಝ್ಝುಮರ್: 6)

ಮೇಲಿನ ವಚನಗಳಲ್ಲಿ ಹೇಳಲಾಗಿರುವ ಪಾಲಕ ಪ್ರಭು ಎಂದರೆ ಪೋಷಿಸುವವನು ಮತ್ತು ಪರಿಪಾಲಕ, ಜೀವನಾಧಾರ ನೀಡುವವನು ಆಗಿದ್ದಾನೆ. ತಾಯಿಯ ಹೊಟ್ಟೆಯೊಳಗೆ ಕೂಡ ನಿಮ್ಮ ಪ್ರಭು ಅವನೇ ಆಗಿದ್ದಾನೆ. ಹೊರಗೆ ಕೂಡ ಅವನೇ ನಿಮ್ಮ ಪ್ರಭು. ಅವನು ನಿಮಗೆ ತಾಯಿಯ ಎದೆ ಹಾಲಿನಿಂದ ಹಿಡಿದು ಇಡೀ ವಿಶ್ವದಲ್ಲಿ ನಿಮ್ಮ ಜೀವನಾಧಾರಕ್ಕೆ ಆವಶ್ಯಕ ವಸ್ತುಗಳನ್ನು ಇರಿಸಿ ನಿಮ್ಮನ್ನು ಪರಿಪಾಲಿಸುವನು. ಇಂತಹ ಪಾಲಕ ಪ್ರಭುವಿನ ಆರಾಧನೆ, ವಿಧೇಯತೆ ಮಾಡಬೇಕಾಗಿದೆ. ಯಾಕೆಂದರೆ ಅವನೇ ನಿಮ್ಮ ಪರಿಪಾಲಕ ಪ್ರಭು ಆಗಿರುವನು.

ಮನುಷ್ಯನಿಗೆ ಶಾಂತಿ ಸಿಗಲೆಂದು ಮತ್ತು ಮನುಷ್ಯನ ಅಸ್ತಿತ್ವ ನಶಿಸಿ ಹೋಗದಿರಲೆಂದೇ ಅವರನ್ನು ಜೋಡಿಯ ರೂಪದಲ್ಲಿ ಸೃಷ್ಟಿಸಿರುವುದು ಅವನ ಕರುಣೆ ಮತ್ತು ಯುಕ್ತಿಯಾಗಿದೆ. ಅವನು ತಾನಿಚ್ಛಿಸುವುದನ್ನು ಮಾಡುವನು. ಯಾಕೆಂದರೆ ಅವನು ಪ್ರಪಂಚದ ಅಧಿಪತಿ. ಅವನೇ ಅಲ್ಲಾಹ್, ಸೃಷ್ಟಿಕರ್ತ ಮತ್ತು ಸಾಮ್ರಾಟನಾಗಿರುವನು. ಆದುದರಿಂದ ಅಲ್ಲಾಹನೇ ಆರಾಧ್ಯನು ಮತ್ತು ಅವನ ಹೊರತು ಇತರ ಯಾವುದೇ ಅಸ್ತಿತ್ವವನ್ನು ಆರಾಧ್ಯನಾಗಿ ಮಾಡುವುದೆಂದರೆ ಅಂತಹವರು ವಂಚನೆಗೊಳಗಾದರೆಂದರ್ಥ.

30) ಆರಾಧ್ಯನಿಗಿರುವ ಗುಣವೈಶಿಷ್ಟ್ಯಗಳ ಮೂಲಕ ಅಲ್ಲಾಹನ ಪರಿಚಯ:

ಯಾವುದೇ ಅಸ್ತಿತ್ವವನ್ನಾದರೂ ಅದರ ಪರೋಪಕಾರ, ದಯೆಯ ಕಾರಣಗಳಿಂದ ಮನುಷ್ಯರು ಆರಾಧಿಸಬೇಕಾಗಿದೆ. ಈ ಅಸ್ತಿತ್ವವನ್ನು ಅವರು ತಮ್ಮ ಆಕಾಂಕ್ಷೆ-ಆವಶ್ಯಕತೆಗಳ ಈಡೇರಿಸಿಕೊಳ್ಳುವ ಸಲುವಾಗಿ ಮತ್ತು ತಮಗಿರುವ ಸಂಕಷ್ಟ ತ್ರಾಸಗಳಿಂದ ಪಾರಾಗುವ ಸಲುವಾಗಿ ಅಥವಾ ದೂರಗೊಳಿಸುವ ಸಲುವಾಗಿ ಆ ಅಸ್ತಿತ್ವವನ್ನು ಅವರು ಆರಾಧಿಸುವುದು. ಆದುದರಿಂದ ಸರಿಯಾದ ಪ್ರತಿಫಲ ಪಡೆ ಯುವುದಾದರೆ ನೈಜ ಆರಾಧ್ಯನ ಹೊರತು ಬೇರೆ ಯಾವುದೇ ಅಸ್ತಿತ್ವವನ್ನು ಆರಾಧಿಸುವುದು ತಪ್ಪಾಗುತ್ತದೆ. ಅಥವಾ ಮಿಥ್ಯೋಪಾಸನೆ ಮಾಡಿದಂತಾಗುವುದು ಮತ್ತು ಮಿಥ್ಯ ಕರ್ಮವೆಸಗುವುದಕ್ಕೆ ಇದು ಸಮಾನವಾಗಿದೆ. ಒಂದರ್ಥದಲ್ಲಿ ಇದು ತಾವೇ ತಮ್ಮನ್ನು

ಸ್ವಯಂ ವಂಚಿಸಿದಂತಾಗುವುದು. ಇದರಿಂದ ಕೆಟ್ಟ ಪರಿಣಾಮ ಹೊರಬರುವುದು.

ಆರಾಧ್ಯನು ತನ್ನ ಮಹಿಮೆ ಮತ್ತು ದಯೆಯಿಂದಲೇ ನಿರ್ಜೀವವಾದ ಮಣ್ಣಿನಿಂದ ಮನುಷ್ಯನಂತಹ ಜೀವಿಗಳನ್ನು ಅಥವಾ ಜೀವ ಇರುವ ಅಸ್ತಿತ್ವವವನ್ನು ಸೃಷ್ಟಿಸಿದನು. ಮತ್ತು ಅವನಿಗೆ ತಾಯಿಯ ಉದರಲ್ಲಿ ಸಂಪೂರ್ಣವೂ ಮತ್ತು ಸುರಕ್ಷಿತವೂ ಆದ ಆಹಾರವೊದಗಿಸುತ್ತಾ ಹಂತ ಹಂತವಾಗಿ ಸಲಹಿ ಭೂಮಿಗೆ ತಂದನು. ಆ ನಂತರ ಮತ್ತು ಅಲ್ಲಿಂದ ಮುಂದಕ್ಕೂ ಅವನೇ ತನ್ನ ಸೃಷ್ಟಿಗಳ ಪಾಲನೆ ಪೋಷಣೆಗೆ ಜೀವನಾಧಾರವನ್ನೊದಗಿಸಿ ಸಲಹುತ್ತಾನೆ. ಅವನ ಆಜ್ಞೆಯು ಪ್ರತಿಯೊಂದು ವಸ್ತುವಿನ ಮೇಲೆಯೂ ಜಾರಿಗೊಳ್ಳುತ್ತದೆ ಮತ್ತು ಅವು ಇದಿರಾಡದೆ ಅವನ ಆದೇಶವನ್ನು ಸ್ವೀಕರಿಸಿ ಪ್ರವರ್ತಿಸುತ್ತವೆ. ಯಾವುದೇ ಒಂದು ವಸ್ತು ಅಸ್ತಿತ್ವ ಪಡೆದುಕೊಳ್ಳಲಿಕ್ಕೆ ಅವನ ಒಂದು ಆಜ್ಞೆ ಸಾಲುತ್ತದೆ. ಇದುವೇ ವಿಶ್ವ ಸಾಮ್ರಾಟತ್ವವಾಗಿದೆ.

ಮನುಷ್ಯನ ಜೀವನದ ಎರಡು ಅವಸ್ಥೆಗಳು– ಮನುಷ್ಯನು ಅಸ್ತಿತ್ವಕ್ಕೆ ಬಂದಲ್ಲಿಂದ ಅಂದರೆ ಹುಟ್ಟಿನಿಂದ ಸಾಯುವ ವರೆಗೂ ಅಲ್ಲಾಹನ ಆಜ್ಞಾದೇಶಗಳು ಜಾರಿಯಲ್ಲಿರುತ್ತವೆ. ಇದನ್ನು ಅಲ್ಲಾಹನು ತನ್ನ ದಾಸರಿಗೆ ಅತ್ಯುತ್ತಮ ವಿಧಾನದಿಂದ ತನ್ನ ಗ್ರಂಥದಲ್ಲಿ ಮನವರಿಕೆ ಮಾಡುತ್ತಿದ್ದಾನೆ. ತನ್ನ ಮಹಿಮೆ, ಶಕ್ತಿಗಳನ್ನು ಪರಿಚಯಿಸುವುದರ ಜೊತೆಗೆ ತನಗೆ ತನ್ನ ದಾಸರೊಂದಿಗಿರುವ ಪ್ರೀತಿ, ಕರುಣೆ, ಕ್ಷಮಾ ಭಾವವನ್ನು ವಿವರಿಸಿದ್ದಾನೆ. ಯಾಕೆಂದರೆ ತನ್ನ ದಾಸರು ಅಲ್ಲಾಹನನ್ನು ತಮ್ಮ ಪ್ರಭು, ಆಡಳಿತ ಗಾರ, ಆರಾಧ್ಯನೆಂದು ಅತೀ ಹತ್ತಿರದಿಂದ ಅನುಭವ ಮಾಡಿಕೊಂಡು ಅವನಲ್ಲಿ ವಿಶ್ವಾಸ ಹೊಂದಬೇಕು. ಅವನ ಆಜ್ಞಾನುಸಾರಿಗಳು ಮತ್ತು ವಿಧೇಯರು ಆಗಬೇಕು ಎಂಬುದಕ್ಕಾಗಿದೆ.

"ನಿಮ್ಮ ಪ್ರಭು ಹೀಗೆ ಹೇಳುತ್ತಾನೆ– ನನ್ನನ್ನು ಪ್ರಾರ್ಥಿಸಿರಿ. ನಾನು ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವೆನು. ಅಹಂಕಾರಪಟ್ಟು ನನ್ನ ದಾಸ್ಯ ಮತ್ತು ಆರಾಧನೆಯಿಂದ ವಿಮುಖರಾಗುವವರು ಖಂಡಿತವಾಗಿಯೂ ಅಪಮಾನಿತರಾಗಿ ನರಕಕ್ಕೆ ಪ್ರವೇಶಿಸುವರು. ನೀವು ವಿಶ್ರಾಂತಿ ಪಡೆಯಲೆಂದು ನಿಮಗಾಗಿ ರಾತ್ರಿಯನ್ನುಂಟು ಮಾಡಿದವನೂ ಹಗಲನ್ನು ಪ್ರಕಾಶಮಾನವಾಗಿ ಮಾಡಿದವನೂ ಅಲ್ಲಾಹನೇ ತಾನೆ. ವಾಸ್ತವದಲ್ಲಿ ಅಲ್ಲಾಹನು ಜನರ ಮೇಲೆ ಮಹಾ ಅನುಗ್ರಹ ತೋರುವವನಾಗಿರುತ್ತಾನೆ. ಆದರೆ ಹೆಚ್ಚಿನವರು ಕೃತಜ್ಞತೆ ಸಲ್ಲಿಸುವುದಿಲ್ಲ. (ನಿಮಗಾಗಿ ಇಷ್ಟನ್ನೆಲ್ಲ ಮಾಡಿರುವ) ಅಲ್ಲಾಹನೇ ನಿಮ್ಮ ಪ್ರಭು. ಸಕಲ ವಸ್ತುಗಳ ಕರ್ತೃ, ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ಹೀಗಿರುತ್ತಾ ಎಲ್ಲಿಂದ ನೀವು ದಾರಿಗೆಡಿಸಲ್ಪಡುತ್ತಿರುವಿರಿ? ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಿದ್ದವರೆಲ್ಲರೂ ಇದೇ ರೀತಿಯಲ್ಲಿ ವಂಚಿಸಲ್ಪಡುತ್ತಿದ್ದರು.

ಅಲ್ಲಾಹನೇ ಭೂಮಿಯನ್ನು ನಿಮ್ಮ ಪಾಲಿಗೆ ವಾಸಸ್ಥಾನವಾಗಿ ಮಾಡಿದವನು ಮತ್ತು ಮೇಲೆ ಆಕಾಶದ ಗುಂಬಜವನ್ನೂ ಮಾಡಿದವನು. ಅವನು ನಿಮಗೆ ರೂಪ ಕೊಟ್ಟನು. ಬಹಳ ಸುಂದರ ರೂಪವನ್ನೇ ಕೊಟ್ಟನು. ಅವನು ನಿಮಗೆ ಶುದ್ಧ ವಸ್ತುಗಳಿಂದ ಆಹಾರ ನೀಡಿದನು. ಈ (ಕಾರ್ಯಗಳನ್ನು ಮಾಡಿರುವಂತಹ) ಅಲ್ಲಾಹನೇ ನಿಮ್ಮ ಪ್ರಭು, ಅಗಣಿತ ಸಮೃದ್ಧಿಯುಳ್ಳವನು. ಅವನು ಸಕಲ ಲೋಕಗಳ ಪ್ರಭು. ಅವನೇ ಚಿರಂತನನು. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ನಿಮ್ಮ ಧರ್ಮವನ್ನು ಅವನಿಗಾಗಿಯೇ ಮೀಸಲಾಗಿಟ್ಟು ಅವನನ್ನೇ ಪ್ರಾರ್ಥಿಸಿರಿ. ಸಕಲ ಪ್ರಶಂಸೆಗಳೂ ಸಕಲ ಲೋಕಗಳ ಪಾಲಕ ಪ್ರಭುವಾದ ಅಲ್ಲಾಹನಿಗೆ ಮೀಸಲು. ಸಂದೇಶವಾಹಕರೇ ಇವರೊಡನೆ ಹೇಳಿರಿ– "ನೀವು ಅಲ್ಲಾಹನನ್ನು ಬಿಟ್ಟು ಯಾರನ್ನೆಲ್ಲ ಪ್ರಾರ್ಥಿಸುತ್ತಿರುವಿರೋ ಅವರ ದಾಸ್ಯ-ಆರಾಧನೆ ಮಾಡುವುದರಿಂದ ನನ್ನನ್ನು ತಡೆಯಲಾಗಿದೆ. ನನ್ನ ಬಳಿಗೆ ನನ್ನ ಪ್ರುಭುವಿನ ಕಡೆಯಿಂದ ಸುಸ್ಪಷ್ಟ ನಿದರ್ಶನಗಳು ಬಂದಿರುವಾಗ (ನಾನು ಈ ಕಾರ್ಯವೆಸಗುವುದಾದರೂ ಹೇಗೆ?) ನಾನು ಸಕಲ ಲೋಕಪಾಲಕನ ಮುಂದೆ ಶರಣಾಗತನಾಗಬೇಕೆಂದು ನನಗೆ ಅಪ್ಪಣೆ ಕೊಡಲಾಗಿದೆ. ನಿಮ್ಮನ್ನು ಮಣ್ಣಿನಿಂದ, ತರುವಾಯ ವೀರ್ಯದಿಂದ, ಅನಂತರ ರಕ್ತಪಿಂಡದಿಂದ ಸೃಷ್ಟಿಸಿದವನು ಅವನೇ ತಾನೇ. ಆಮೇಲೆ ಅವನು ನಿಮ್ಮನ್ನು ಶಿಶುವಿನ ರೂಪದಲ್ಲಿ ಹೊರ ತರುತ್ತಾನೆ. ಆ ಬಳಿಕ ನೀವು ನಿಮ್ಮ ಸಂಪೂರ್ಣ ಪ್ರೌಢಾವಸ್ಥೆಗೆ ತಲುಪಲು ನಿಮ್ಮನ್ನು ಬೆಳೆಸುತ್ತಾನೆ ಮತ್ತು ನಿಮ್ಮಲ್ಲಿ ಕೆಲವರನ್ನು ಮೊದಲೇ ಹಿಂದಕ್ಕೆ ಕರೆಸಿಕೊಳ್ಳಲಾಗುತ್ತದೆ. ನೀವು ನಿಮ್ಮ ನಿಶ್ಚಿತ ಸಮಯವನ್ನು ತಲುಪಲಿಕ್ಕಾಗಿ ಹಾಗೂ ನೀವು ವಸ್ತುಸ್ಥಿತಿಯನ್ನು ಅರಿತುಕೊಳ್ಳಲಿಕ್ಕಾಗಿ ಹೀಗೆಲ್ಲಾ ಮಾಡಲಾಗುತ್ತದೆ. ಜೀವಂತಗೊಳಿಸುವವನೂ ಮರಣ ಕೊಡುವವನೂ ಅವನೇ. ಅವನು ಯಾವ ವಿಷಯದ ಬಗ್ಗೆ ತೀರ್ಮಾನ ಮಾಡುವಾಗಲೂ ಆಗಿ ಬಿಡು ಎಂಬ ಅಪ್ಪಣೆಯೊಂದನ್ನು ಮಾತ್ರ ಕೊಟ್ಟು ಬಿಡುತ್ತಾನೆ ಮತ್ತು ಅದು ಆಗಿಬಿಡುತ್ತದೆ." **(ಅಲ್‌ಮೂಮಿನ್: 60–68)**

ಅಲ್ಲಾಹನು ಈ ವಚನಗಳ ಮೂಲಕ ಅವನೇ ಮನುಷ್ಯರ ಮತ್ತು ಪ್ರಪಂಚದ ಪ್ರಭು ಆಗಿದ್ದಾನೆ ಎಂದು ತಿಳಿಸುತ್ತಿದ್ದಾನೆ. ಅದುದರಿಂದ ಮನುಷ್ಯ ಮತ್ತು ಪ್ರಪಂಚ ಇವೆರಡರ ಪ್ರಭು ಅಲ್ಲಾಹನೇ ಆಗಿರುವನೆಂಬುದು ಮನುಷ್ಯನ ಭೌತಿಕ ಜೀವನದಲ್ಲಿಯೇ ಮನವರಿಕೆಯಾಗುವುದು. ಅವನು ಅಲ್ ಆಲಮೀನ್ ಅಂದರೆ ಸಕಲ ವಿಶ್ವದ ಪ್ರಭು ಆಗಿದ್ದಾನೆ. ಯಾಕೆಂದರೆ ಅವನು ಸಕಲ ವಿಶ್ವವನ್ನು ಸೃಷ್ಟಿಸಿದ ಸೃಷ್ಟಿಕರ್ತ. ಆದ್ದರಿಂದ ಅಲ್ಲಾಹನು ತನ್ನನ್ನು ಪ್ರಾರ್ಥಿಸಬೇಕೆಂದು ಆದೇಶಿಸುತ್ತಾನೆ. ಸಕಲ ವಿಶ್ವಗಳ ಪ್ರಭುವಾದ ಅಲ್ಲಾಹನು ವಿಶ್ವದಲ್ಲಿರುವ ಸೃಷ್ಟಿಗಳ ಸಕಲ ಪ್ರಾರ್ಥನೆಗಳನ್ನು ಆಲಿಸುವನು

ಮತ್ತು ಸ್ವೀಕರಿಸುವೆನು ಎಂದು ಮನುಷ್ಯರಿಗೆ ತಿಳಿಸುತ್ತಾನೆ.

ಅವನೇ ಸೃಷ್ಟಿಕರ್ತನಾಗಿದ್ದು ಮನುಷ್ಯರ ಸೃಷ್ಟಿಕಾರ್ಯಕ್ಕೂ ಒಂದು ವ್ಯವಸ್ಥೆಯನ್ನು ರೂಪಿಸಿದವನು. ಈ ಬಗ್ಗೆ ಈ ಹಿಂದಿನ ವಚನಗಳಲ್ಲಿ ಬಂದಿರುವ ವಿವರಣೆಯತ್ತ ಗಮನಹರಿಸಿದರೆ ಅವು ವಾಸ್ತವಿಕವೇ ಅಲ್ಲವೇ ಎಂದು ಪರಾಂಬರಿಸಿಕೊಳ್ಳಬಹುದಾಗಿದೆ. ಸಂಪೂರ್ಣ ಸೃಷ್ಟಿಕಾರ್ಯಗಳ ಮತ್ತು ಜೀವಿಸಲು ಬೇಕಾದ ವ್ಯವಸ್ಥೆಯನ್ನೂ ಅವನೇ ಮಾಡಿದನು ಮತ್ತು ಜೀವನ–ಮರಣಗಳನ್ನು ಕೊಡುವ ಅಧಿಕಾರವೂ ಅವನದೇ ವ್ಯಾಪ್ತಿಯಲ್ಲಿದೆ. ಹೀಗಿದ್ದೂ ಇತರರನ್ನು ಆರಾಧ್ಯನಾಗಿ ಮಾಡಿಕೊಳ್ಳಲು ನಿಮ್ಮನ್ನು ಯಾವ ವಸ್ತು ವಂಚಿಸುತ್ತಿದೆ. ಅವುಗಳನ್ನು ಪ್ರಾರ್ಥಿಸಿ ಏನು ಫಲವಿದೆ. ಅವುಗಳು ಅಧಿಕಾರರಹಿತವಾದ ಅಸ್ತಿತ್ವಗಳು. ಅವುಗಳು ನಿಮಗೆ ಹೇಗೆ ಸಹಾಯ ಮಾಡಬಲ್ಲುದು?

ಇದೇ ವೇಳೆ ಅಲ್ಲಾಹನು ಕೇವಲ 'ಆಗಿ ಬಿಡು' ಎಂದು ಆಜ್ಞಾಪಿಸಿದರೆ ಸಾಲುತ್ತದೆ. ಅವನು ಆಜ್ಞಾಪಿಸಿದುದು ಆಗಿ ಬಿಡುತ್ತದೆ. ಅವು ಅಸ್ತಿತ್ವ ಪಡೆದುಕೊಳ್ಳುತ್ತವೆ. ಹೀಗೆ ಅವನು ಆಜ್ಞಾಪಿಸುದೆಲ್ಲವೂ ಸಂಭವಿಸುತ್ತವೆ. ತನ್ನ ಸೃಷ್ಟಿಗಳ ಮೇಲೆ ಅಲ್ಲಾಹನ ಶಕ್ತಿ–ಸಾಮರ್ಥ್ಯಗಳು ಅಷ್ಟಿವೆ. ಇನ್ನು ಅಲ್ಲಾಹನನ್ನು ಪ್ರಾರ್ಥಿಸದಿದ್ದರೆ ನಷ್ಟವನ್ನೇ ಅನುಭವಿಸಬೇಕಾಗುತ್ತದೆ.

ಅಲ್ಲಾಹನು ಜೀವಂತ ಅಸ್ತಿತ್ವ, ಅವನೇ ಆರಾಧ್ಯನಾಗಲು ಸಮರ್ಥ. ಅಲ್ಲಾಹನ ಸೃಷ್ಟಿ ಕಾರ್ಯ ಸರ್ವ ಲೋಕಗಳನ್ನು ವ್ಯಾಪಿಸಿದೆ. ಆದುದರಿಂದ ಅವನೇ ಸರ್ವ ಲೋಕಗಳ ಪ್ರಭು ಆಗಿದ್ದು ಸರ್ವ ಸೃಷ್ಟಿಗಳಿಗೆ ಅವನೇ ಆರಾಧ್ಯನು ಆಗಿದ್ದಾನೆ. ಅವನಿಗೆ ಸೃಷ್ಟಿಗಳ ಮೇಲೆ ಪ್ರೀತಿಯಿದೆ. ಅವರ ಮೇಲೆ ಕರುಣೆ ತೋರುವನು. ಅವರ ಪ್ರಾರ್ಥನೆಯನ್ನು ಆಲಿಸುವನು. ಅವರನ್ನು ಕ್ಷಮಿಸುವನು ಮತ್ತು ಅವರು ಶಿಕ್ಷಿಸುವಂತಹ ತಪ್ಪೆಸಗಿದರೆ ಶಿಕ್ಷಿಸುವನು. ಕೆಲ ಸೃಷ್ಟಿಗಳ ಮೇಲೆ ಸರ್ವ ಆಧಿಪತ್ಯವು ಅಲ್ಲಾಹನದು ಆಗಿದೆ. ಅದರಂತೆ ಅವನೇ ಸಾರ್ವಭೌಮ ಮತ್ತು ಸಾಮ್ರಾಟ. ಅವನೇ ಅಲ್ಲಾಹ್. ಅವನೇ ಸಕಲ ಲೋಕಗಳ ಪ್ರಭು ಮತ್ತು ಅವನ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. ಅವನು ಸದಾ ಜೀವಂತ(ಶಾಶ್ವತ)ವಾಗಿದ್ದು ಸಕಲ ಸೃಷ್ಟಿಗಳು ಅವನದ್ದಾಗಿವೆ. ಆದುದರಿಂದ ಅವನೇ ಆರಾಧ್ಯ ಮತ್ತು ಅವನಲ್ಲದೆ ಅನ್ಯ ಆರಾಧ್ಯರಿಲ್ಲ. ಆದುದರಿಂದ ಆರಾಧನೆ ಮತ್ತು ಸಹಾಯ ಯಾಚನೆಗಳಲ್ಲಿ ಇತರ ಯಾರನ್ನೂ ಸಹಭಾಗಿಗಳನ್ನಾಗಿ ಮಾಡಬಾರದು.

31) ಕ್ಷಮೆ ಮತ್ತು ಕರುಣೆಯ ಗುಣಗಳ ಮೂಲಕ ದಾಸರಲ್ಲಿ ಆರಾಧ್ಯನ ಪ್ರೀತಿ ಮತ್ತು ಸಾಮಿಪ್ಯದ ಅಭಿವ್ಯಕ್ತಿ:

ಸೃಷ್ಟಿಕರ್ತ ಮತ್ತು ಆರಾಧ್ಯನಾಗಿರುವವನು ಅಪಾರ ಕ್ಷಮಾಶೀಲನಾಗಿದ್ದರೆ

ಅವನೆಡೆಗೆ ದಾಸರು ಮರಳುತ್ತಾರೆ. ಅವನೊಡನೆ ಮೊರೆಯಿಡುತ್ತಾರೆ. ಕ್ಷಮೆ ಯಾಚಿಸುತ್ತಾರೆ. ಕ್ಷಮಿಸುವುದು ಕರುಣೆ ತೋರಿಸುವುದು ಸೃಷ್ಟಿಕರ್ತನೂ ಆರಾಧ್ಯನೂ ಆದ ಅಲ್ಲಾಹನ ಮಹಾನ್ ಗುಣವೈಶಿಷ್ಟ್ಯವಾಗಿದೆ. ಆದುದರಿಂದ ಅಲ್ಲಾಹನೆಡೆಗೆ ಅವನ ದಾಸರು ಮರಳಿದರೆ, ಕ್ಷಮೆ ಯಾಚಿಸಿದರೆ ಅಲ್ಲಾಹನು ಕ್ಷಮಿಸುವನು. ಕ್ಷಮೆ ಮತ್ತು ಕರುಣೆಯು ದಾಸರ ಮೇಲೆ ಅಲ್ಲಾಹನ ಪ್ರೀತಿಯ ಅಭಿವ್ಯಕ್ತಿಯೂ ಆಗಿದೆ. ಅದನ್ನು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ...

"(ಸಂದೇಶವಾಹಕರೇ, ನನ್ನ ಪರವಾಗಿ) ಹೇಳಿರಿ: ತಮ್ಮ ಮೇಲೆಯೇ ಅಕ್ರಮವೆಸಗಿಕೊಂಡಿರುವ ನನ್ನ ದಾಸರೇ! ಅಲ್ಲಾಹನ ಕರಣೆಯ ಬಗ್ಗೆ ನಿರಾಶರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಕಲ ಪಾಪಗಳನ್ನು ಕ್ಷಮಿಸಿಬಿಡುತ್ತಾನೆ. ಅವನಂತು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ನಿಮ್ಮ ಪ್ರಭುವಿನೆಡೆಗೆ ಮರಳಿ ಬನ್ನಿರಿ ಮತ್ತು ಅವನ ಶರಣಾಗತ ದಾಸರಾಗಿ ಬಿಡಿರಿ. ನಿಮ್ಮ ಮೇಲೆ ಯಾತನೆ ಎರಗಿ ಬಿಡುವ ಹಾಗೂ ಮತ್ತೆಲ್ಲಿಂದಲೂ ನಿಮಗೆ ಸಹಾಯ ಸಿಗಲಾರದ ಸ್ಥಿತಿ ಬರುವುದಕ್ಕಿಂತ ಮುಂಚೆ ಮತ್ತು ನಿಮ್ಮ ಕಡೆಗೆ ನಿಮ್ಮ ಪ್ರಭುವಿನ ಕಡೆಯಿಂದ ಕಳುಹಿಸಲಾಗಿರುವ ಗ್ರಂಥದ ಅತ್ಯುತ್ತಮ ತಾತ್ಪರ್ಯವನ್ನು ಅನುಸರಿಸಿರಿ. ನಿಮಗೆ ಅರಿವೇ ಇಲ್ಲದಂತೆ ನಿಮ್ಮ ಮೇಲೆ ಹಠಾತ್ತನೆ ಯಾತನೆಯು ಬಂದೆರಗುವುದಕ್ಕಿಂತ ಮುಂಚೆ." **(ಅಝ್ಝುಮರ್: 53–55)**

ಮೇಲಿನ ವಚನಗಳ ಮೂಲಕ ತಿಳಿಸಿಲಾಗಿರುವಂತೆ ನಿಮ್ಮ ಮುಂದೆ ಸರಿಯಾದ ಮಾರ್ಗದರ್ಶನವಿದೆ. ಆಮೇಲೆಯೂ ನೀವು ನಿಮ್ಮ ತಪ್ಪು ನೀತಿ– ವರ್ತನೆಗಳನ್ನು ಮುಂದುವರಿಸುವಿರಿ ಎಂದಾದರೆ ಮತ್ತು ಆ ಮೂಲಕ ನೀವು ಮಾಡುತ್ತಿರುವ ತಪ್ಪು ನಿಮಗೆ ಗೊತ್ತಾಗಿದ್ದೂ ನೀವು ಅಲ್ಲಾಹನಲ್ಲಿ ಪಶ್ಚಾತ್ತಾಪಪಟ್ಟು ಕ್ಷಮೆ ಯಾಚಿಸುವುದಿಲ್ಲ ವಾದರೆ, ಆ ಮೇಲೆಯೂ ನಿಮ್ಮ ವರ್ತನೆಗಳನ್ನು ಸರಿಪಡಿಸುವುದಿಲ್ಲವಾದರೆ ನಿಮ್ಮ ಮೇಲೆ ಹಠಾತ್ತನೆ ಯಾತನೆ ಎರಗಬಹುದೆಂದು ಭಯಪಡಿರಿ ಎಂದು ಎಚ್ಚರಿಸಲಾಗಿದೆ. ಮತ್ತು ತಪ್ಪನ್ನು ತಿದ್ದಿಕೊಳ್ಳುವುದಾದರೆ ಅಲ್ಲಾಹನು ಮಹಾನ್ ಕ್ಷಮಾಶೀಲನು ಮತ್ತು ತಿದ್ದಿಕೊಳ್ಳದೆ ಕೆಟ್ಟ ವರ್ತನೆಗಳಲ್ಲೇ ತೊಡಗಿಸಿಕೊಳ್ಳುವುದನ್ನು ಮುಂದುವರಿಸಿದರೆ ಯಾತನೆ ಕೊಡುವವನೂ ಅವನೇ ಆಗಿದ್ದಾನೆ ಎಂದು ತಿಳಿಸಲಾಗಿದೆ.

32) ಆರಾಧ್ಯನ ಗುಣ ಲಕ್ಷಣಗಳು:

ಆರಾಧ್ಯನಿಗೆ ಪ್ರತಿಯೊಂದು ವಸ್ತುವಿನ ಮತ್ತು ಪ್ರತಿಯೊಂದು ಕ್ಷಣದ ಜ್ಞಾನ ಇರುವುದು ಅತ್ಯವಶ್ಯಕವಾಗಿರುತ್ತದೆ. ಇದು ಮನುಷ್ಯರಿಗಿರುವ ಜ್ಞಾನಗಳಂತಲ್ಲ. ಆರಾಧ್ಯನಲ್ಲಿ ವಿಶೇಷ ಪರೋಕ್ಷ ಜ್ಞಾನವಿದ್ದು ಗೋಚರ, ಅಗೋಚರ ಸಕಲವೂ

ಅವನ ಮುಂದೆ ವ್ಯಕ್ತ ಮತ್ತು ಪ್ರಕಟವಾಗಿರುತ್ತವೆ. ಅಂದರೆ ಅವನಿಗೆ ಭೂತ, ವರ್ತಮಾನ, ಭವಿಷ್ಯಗಳ ಹಾಗೂ ಹಿಂದಿನ ಇಂದಿನ ಮುಂದಿನ ಹೀಗೆ ಎಲ್ಲವೂ ಅವನ ಮುಂದೆ ಅದೂ ಕೂಡ ಏಕ ಸಮಯದಲ್ಲಿ ಅವನ ದೃಷ್ಟಿ ಗೋಚರದಲ್ಲಿರುತ್ತವೆ. ಎಲ್ಲವೂ ಅವನಿಗೆ ತಿಳಿಯುತ್ತದೆ ಮತ್ತು ಅವನ ಮುಂದೆ ಪ್ರತಿಯೊಂದು ಪ್ರಕಟ ಸ್ಥಿತಿಯಲ್ಲಿರುವುದು. ಆದ್ದರಿಂದ ಮನುಷ್ಯರಿಗೆ ಉಪಯುಕ್ತವಾಗುವ ಪ್ರಕ್ರಿಯೆ-ಕ್ರಮಗಳನ್ನು ಕೈಗೊಳ್ಳುವನು. ಮನುಷ್ಯನ ಪ್ರಾರ್ಥನೆಯನ್ನು ಆಲಿಸುವನು. ಅವರ ಬೇಡಿಕೆಗಳನ್ನು ಈಡೇರಿಸಿಕೊಡಲು ಈ ರೀತಿಯೂ ಅವನಿಗೆ ಸಾಧ್ಯವಾಗುತ್ತದೆ. ಈ ಕ್ರಮಗಳಲ್ಲಿ ಆರಾಧ್ಯನ ಜ್ಞಾನ, ಕರುಣೆ ಮತ್ತು ಯುಕ್ತಿ ತುಂಬಿಕೊಂಡಿರುತ್ತವೆ. ಮತ್ತು ದಾಸರಿಗೆ ಉಪಯುಕ್ತವಾದ ಕ್ರಮಗಳನ್ನೇ ಅವನು ಕೈಗೊಳ್ಳುವನು ಮತ್ತು ಅವನ ದೃಷ್ಟಿಯು ಸಂಪೂರ್ಣ ವಿಶ್ವವನ್ನು ಆವರಿಸಿವೆ. ಸಕಲ ವಸ್ತುಗಳೂ ಅವನ ಜ್ಞಾನದ ವ್ಯಾಪ್ತಿಯೊಳಗಿವೆ. ಅವನ ಜ್ಞಾನದಿಂದ ಯಾವ ವಸ್ತುವೂ ಹೊರತಲ್ಲ. ಹೊರಗಿಲ್ಲ. ಹಿಂದಿನ, ಮುಂದಿನ, ಇಂದಿನ ಹೀಗೆ ಯಾವ ವಿಷಯಗಳೂ ಆರಾಧ್ಯನಿಗೆ ದೊಡ್ಡದೆಂಬುದಿಲ್ಲ. ವಸ್ತುತಃ ಪ್ರತಿಯೊಂದು ಕಾಲವು ಅವನಿಗೆ ವರ್ತಮಾನವಾಗಿದೆ. ಅವು ಅವನ ಮುಂದೆ ವ್ಯಕ್ತ, ಅಭಿವ್ಯಕ್ತ ಮತ್ತು ಪ್ರಕಟವಾಗಿರುತ್ತವೆ.

ಅಲ್ಲಾಹನ ಹೊರತು ಈ ವಿಶೇಷ ಗುಣವೈಶಿಷ್ಟ್ಯಗಳು ಇತರ ಯಾವುದೇ ಅಸ್ತಿತ್ವದಲ್ಲಿ ಕಂಡು ಬರುವುದಿಲ್ಲ. ಆದುದರಿಂದ ಅವನೊಬ್ಬನೇ ದಾಸರಿಂದ ಆರಾಧಿಸಲ್ಪಡಲು ಅರ್ಹನಾಗಿದ್ದಾನೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ.

"ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅಗೋಚರ ವಾದ ಮತ್ತು ಗೋಚರವಾಗಿರುವ ಎಲ್ಲವನ್ನೂ ಬಲ್ಲವನು, ಅವನೇ ಪರಮ ದಯಾಮಯನೂ ಕರುಣಾ ನಿಧಿಯೂ ಆಗಿರುತ್ತಾನೆ." **(ಅಲ್ ಹಶ್ರ್: 22)**

ಆರಾಧ್ಯನಾದ ಅಲ್ಲಾಹನ ಈ ಗುಣವೈಶಿಷ್ಟ್ಯಗಳು ಪರಿಪೂರ್ಣವೂ ಸಮಗ್ರವೂ ಮತ್ತು ಆರಾಧ್ಯನಿಗೆ ಆವಶ್ಯಕವೂ ಆಗಿದ್ದು ಇವೆಲ್ಲವೂ ಅಲ್ಲಾಹನ ಅಸ್ತಿತ್ವದಲ್ಲಿ ಸೇರಿವೆ. ಅವನು ಹೆಚ್ಚಾಗಿ ತನ್ನ ಈ ಗುಣವೈಶಿಷ್ಯಗಳನ್ನೇ ಉದ್ಧರಿಸಿರುವುದನ್ನು ಕೂಡಾ ನಾವು ಕಾಣಬಹುದು. ಈ ಗುಣಗಳು ಅಲ್ಲಾಹನಲ್ಲದೆ ಇತರ ಯಾರಲ್ಲಿ ಹುಡುಕಿದರೂ ಸಿಗದು. ಸಿಗಲು ಸಾಧ್ಯವೂ ಇಲ್ಲ. ಅವು ಅಲ್ಲಾಹನ ಅಸ್ತಿತ್ವದಲ್ಲೇ ಅಡಕವಾಗಿರುವ ಮತ್ತು ಅವನಿಗೆ ಮಾತ್ರ ಸೀಮಿತವಾದ ಗುಣಗಳಾಗಿವೆ. ಆದುದರಿಂದ ಅಲ್ಲಾಹನೇ ಆರಾಧ್ಯನೆನಿಸಿಕೊಳ್ಳಲು ಅರ್ಹನು ಮತ್ತು ಅವನಿಗೆ ಮಾತ್ರ ಅದು ಸೀಮಿತವಾದ ಹಕ್ಕಾಗಿದೆ. ಈ ಬಗ್ಗೆ ವಿನಯಾನ್ವಿತ ರೀತಿಯಲ್ಲಿ ಅವನು ತನ್ನನ್ನು ಪರಿಚಯಿಸಿದ್ದಾನೆ. ತನ್ನನ್ನು ಆರಾಧ್ಯನೆಂಬ ನೆಲೆಯಲ್ಲಿ ಹೀಗೆ ಅಲ್ಲಾಹನು ವಿವರಿಸುತ್ತಿದ್ದಾನೆ.

"ಅವನೇ ಅಲ್ಲಾಹ್. ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನು ಸಾಮ್ರಾಟನು, ಪರಮ ಪಾವನನು, ಸಾದ್ಯಂತ ಮಂಗಲಮಯನು, ಶಾಂತಿದಾತನು. ಸಂರಕ್ಷಕನು, ಪ್ರಬಲನು, ತನ್ನ ಆಜ್ಞೆಯನ್ನು ಶಕ್ತಿಯಿಂದ ಅನುಷ್ಠಾನಿಸಿ ಬಿಡುವವನು. ಸದಾ ಸರ್ವೋನ್ನತನಾಗಿಯೇ ಇರುವವನು. ಜನರು ಮಾಡುತ್ತಿರುವ ಸಹಭಾಗಿತ್ವದಿಂದ ಅಲ್ಲಾಹನು ಪರಿಶುದ್ಧನು. ಸೃಷ್ಟಿಯ ಯೋಜನೆ ಮಾಡುವವನೂ ಅದನ್ನು ಜಾರಿಗೊಳಿಸು ವವನೂ ಅದರಂತೆ ರೂಪ ಕೊಡುವವನೂ ಅಲ್ಲಾಹನೇ. ಅವನಿಗೆ ಅತ್ಯುತ್ತಮ ನಾಮ ಗಳಿವೆ. ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅವನನ್ನು ಜಪಿಸುತ್ತಿವೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ." (ಅಲ್‌ಹಶ್ರ್: 23-24) ಆದುದರಿಂದ ಅಲ್ಲಾಹನನ್ನು ಆರಾಧ್ಯನೆಂದು ಸಕಲರೂ ಅಂಗೀಕರಿಸಬೇಕಾಗಿದೆ.

ಮೇಲಿನ ವಚನಗಳ ವಿವರಣೆಯಂತೆ ಅಲ್ಲಾಹನು ಸಾಮ್ರಾಟನಾಗಿದ್ದು ಪ್ರತಿ ಯೊಬ್ಬ ವ್ಯಕ್ತಿಯೂ ಸ್ವಯಂ ಪ್ರೇರಿತವಾಗಿ ಸಾಮ್ರಾಟನ ಮುಂದೆ ತಲೆಬಾಗಲೇ ಬೇಕಾಗಿದೆ. ಅವನು ಸಕಲ ಲೋಪಗಳಿಂದ ಮುಕ್ತನೂ ಪವಿತ್ರನೂ ಪರಿಶುದ್ಧನೂ ಪ್ರಬಲನೂ ಆಗಿರುವನು. ಈ ಗುಣಗಳು ಅವನ ಶ್ರೇಷ್ಠತೆ ಮತ್ತು ವೈಭವಗಳನ್ನು ದ್ವಿಗುಣಗೊಳಿಸುತ್ತಿದೆ. ಇಂತಹ ಸಾಮ್ರಾಟನಿಗೆ ಪ್ರತಿಯೊಂದು ವಸ್ತುಗಳ ಮೇಲೆ ಪ್ರಬಲ ಹಿಡಿತವಿದೆ. ಅವನ ಪ್ರತಿಯೊಂದು ಆಜ್ಞೆ ಮತ್ತು ಆದೇಶಗಳಲ್ಲಿ ಮನುಷ್ಯರಿಗೆ ಲಾಭವಿದೆ. ಅವು ಯುಕ್ತಿಯನ್ನೂ ಒಳಗೊಂಡಿವೆ. ಸಂಪೂರ್ಣ ಸುರಕ್ಷಿತವೂ ಆಗಿವೆ. ಮತ್ತು ಅವನು ಅಪಾಯ ಮತ್ತು ವಿಪತ್ತುಗಳಿಂದ ರಕ್ಷಣೆ ನೀಡುವನು ಶಾಂತಿಯ ಸ್ಥಿತಿಯನ್ನು ಒದಗಿಸುವವನಾಗಿದ್ದಾನೆ.

ಅವನು ಸರ್ವಶಕ್ತನಾಗಿದ್ದಾನೆ. ಅವನ ತೀರ್ಮಾನವು ಪ್ರಬಲವಾಗಿದೆ ಮತ್ತು ತನ್ನ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವನು. ಸಕಲ ದೌರ್ಬಲ್ಯಗಳಿಂದ ಮುಕ್ತನೂ ಸಕಲ ದೋಷ ರಹಿತನು. (ಇತರರ ಸಹಭಾಗಿತ್ವಗಳಿಂದ ಮುಕ್ತನು) ಸೃಷ್ಟಿಯ ಸಕಲ ಹಂತಗಳ ಅರಿವು ಅವನಿಗಿದೆ. ಅವುಗಳ ಎಲ್ಲ ವಿಷಯಗಳು ಅವನಿಗೆ ಪರಿಚಿತವಾಗಿದೆ. ಮತ್ತು ಅವುಗಳಿಗೆ ಆವಶ್ಯಕವಿರುವುದನ್ನು ಲಭ್ಯಗೊಳಿಸುವನು. ಮತ್ತು ಸಕಲ ಸೃಷ್ಟಿಗಳೂ ಅವನದೇ ಮತ್ತು ಅವೆಲ್ಲವುಗಳಿಗೂ ಅವನೇ ಆರಾಧ್ಯ ನಾಗಿರುವನು. ಅವನನ್ನು ಅವನ ಪ್ರತಿಯೊಂದು ಸೃಷ್ಟಿಗಳು(ಚರಾಚರಗಳು) ತಮ್ಮ ಭಾಷೆಯಲ್ಲಿ ಸ್ಮರಿಸುತ್ತವೆ, ಸ್ತುತಿಸುತ್ತವೆ ಮತ್ತು ಪ್ರಶಂಸಿಸುತ್ತವೆ. ಪ್ರತಿಯೊಂದು ವಸ್ತುಗಳ ಅಸ್ತಿತ್ವವೇ ಅಲ್ಲಾಹನ ಮಹಿಮೆಯಾಗಿದೆ. ಇದು ಅವನ ಯುಕ್ತಿ ಹಾಗೂ ಪರಿಶುದ್ಧತೆಗೆ ಸಾಕ್ಷಿಯಾಗಿದೆ.

ನೈಜ ಆರಾಧ್ಯನ ಅನ್ವೇಷಕರಿಗೆ ಆರಾಧ್ಯನ ಈ ಗುಣವೈಶಿಷ್ಟ್ಯಗಳು ಯಾವ

ಅಸ್ತಿತ್ವದಲ್ಲಿವೆ ಎಂಬುದನ್ನೂ ಯಾವ ಗ್ರಂಥ ಅಥವಾ ಯಾವ ವ್ಯಕ್ತಿಯಿಂದ ಮಾರ್ಗದರ್ಶನ ನೀಡಲು ಸಾಧ್ಯವೆಂದೂ ಪವಿತ್ರ ಕುರ್‌ಆನ್ ವಿವರಿಸುತ್ತದೆ ಮತ್ತು ಈ ಗ್ರಂಥವೇ ತನ್ನನ್ನು ಪ್ರಪಂಚ ಸೃಷ್ಟಿಕರ್ತನ ಗ್ರಂಥ ಎಂಬ ಹಕ್ಕುವಾದವನ್ನು ಮಂಡಿಸುತ್ತಿದೆ. ಅಷ್ಟು ಮಾತ್ರವಲ್ಲ ತನ್ನ ವಾದವನ್ನು ಸಾಬೀತುಪಡಿಸುತ್ತಿದೆ.

ಜೊತೆಗೆ ಪವಿತ್ರ ಕುರ್‌ಆನ್ ತನ್ನ ವಾದವನ್ನು ತಪ್ಪೆಂದು ಸಾಬೀತುಪಡಿಸುವಂತೆಯೂ ಪಂಥಾಹ್ವಾನವನ್ನು ನೀಡಿದೆ. ಮನುಷ್ಯ ಪ್ರಕೃತಿಯ ಮೂಲಭೂತ ಬೇಡಿಕೆಯಾಗಿರುವ ಆರಾಧ್ಯನ ಗುಣವೈಶಿಷ್ಟ್ಯಗಳನ್ನು ಅದು ವಿವರಿಸುತ್ತದೆ ಮತ್ತು ಮನವರಿಕೆ ಮಾಡಿಕೊಡುತ್ತದೆ. ಈ ಗ್ರಂಥವನ್ನು ಓದಿ ಆರಾಧ್ಯನನ್ನು ಗುರುತಿಸಿ ಮನವರಿಕೆ ಮಾಡಿಕೊಂಡು ಅರಿತು ಅವನಲ್ಲಿ ವಿಶ್ವಾಸವಿರಿಸಬೇಕು ಮತ್ತು ತನ್ನ ಜೀವನದೊಂದಿಗಿನ ಸಂಬಂಧವನ್ನು ಅದು ಸೂಚಿಸಿದ ದಾರಿಯಲ್ಲಿ ಮನುಷ್ಯನು ಜೋಡಿಸುವ ಸಲುವಾಗಿ ಪವಿತ್ರ ಕುರ್‌ಆನ್‌ನಿಂದ ಸಹಾಯ ಮತ್ತು ಮಾರ್ಗದರ್ಶನಗಳನ್ನು ಪಡೆಯಬೇಕು ಎಂದು ಅದು ಆಗ್ರಹಿಸುತ್ತಿದೆ. ಜನರು ತಮ್ಮ ಜೀವನವನ್ನೇ ಒಮ್ಮೆ ಅವಲೋಕಿಸಿ ನೋಡಿದರೂ ಪವಿತ್ರ ಕುರ್‌ಆನ್ ವಿವರಿಸಿದ ಆ ಅಸ್ತಿತ್ವವೇ ಪ್ರಪಂಚ ಸೃಷ್ಟಿಕರ್ತನೆಂದೂ ಅವನೇ ಅಲ್ಲಾಹನಾಗಿದ್ದಾನೆ ಎಂದು ಮನವರಿಕೆಯಾಗುವುದು. ಆದುದರಿಂದ ಅಲ್ಲಾಹನೇ ಆರಾಧ್ಯನು ಮತ್ತು ಸಕಲ ಆರಾಧ್ಯನ ಗುಣವೈಶಿಷ್ಟ್ಯಗಳು ಅವನಲ್ಲೇ ಅಡಕವಾಗಿದೆ ಎಂಬುದನ್ನು ಮೇಲಿನ ವಚನಗಳು ತಿಳಿಸುತ್ತಿವೆ.

ಪವಿತ್ರ ಕುರ್‌ಅನ್, ಪ್ರಪಂಚ ಸೃಷ್ಟಿಕರ್ತನ ಗ್ರಂಥವಾಗಿದೆ. ಈ ಕೆಳಗಿನ ವಚನಗಳಲ್ಲಿ ಅಲ್ಲಾಹನು ಇದು ತನ್ನ ಗ್ರಂಥ ಎಂದು ಪವಿತ್ರ ಕುರ್‌ಆನನ್ನು ಪರಿಚಯಿಸಿದ ನಂತರ ಇನ್ನೊಂದು ಮಗ್ಗುಲಲ್ಲಿ ತನ್ನನ್ನು ಮತ್ತಷ್ಟು ಪರಿಚಯಿಸುತ್ತಾನೆ. "ಈ ಗ್ರಂಥದ ಅವತೀರ್ಣವು ಅಲ್ಲಾಹನ ಕಡೆಯಿಂದಾಗಿರುತ್ತದೆ. ಅವನು ಪ್ರಬಲನೂ ಸರ್ವಜ್ಞನೂ ಪಾಪಗಳನ್ನು ಕ್ಷಮಿಸುವವನೂ ಪಶ್ಚಾತ್ತಾಪ ಸ್ವೀಕರಿಸುವವನೂ ಕಠಿಣ ಶಿಕ್ಷೆ ಕೊಡುವವನೂ ಮಹಾ ಅನುಗ್ರಹಿಯೂ ಆಗಿರುತ್ತಾನೆ. ಅವನ ಹೊರತು ಬೇರೆ ಆರಾಧ್ಯರಿಲ್ಲ, ಸರ್ವರಿಗೂ ಅವನ ಕಡೆಗೇ ಮರಳಬೇಕಾಗಿದೆ." **(ಅಲ್ ಮೂಮಿನ್: 2-3)**

ಈ ವಚನಗಳಲ್ಲಿ ಅಲ್ಲಾಹನು ದಾಸರಿಗೆ ತಾನು ನಿಕಟವಿರುವುದನ್ನು ತಿಳಿಸಿರುವನು. ತನ್ನ ಪ್ರೀತಿ ಪಾತ್ರರಾದ ದಾಸರ ತಪ್ಪುಗಳನ್ನು ಕ್ಷಮಿಸುವ ಭರಸೆಯನ್ನೂ ನೀಡಿರುವನು ಮತ್ತು ತನ್ನ ಈ ಗ್ರಂಥವನ್ನು ದಾಸರ ಮಾರ್ಗದರ್ಶನಕ್ಕಾಗಿ ಕಳುಹಿಸಿರುವುದೆಂದೂ ತಿಳಿಸುತ್ತಾನೆ. ಯಾಕೆಂದರೆ ಅವನೇ ಪ್ರತಿಯೊಂದು ವಿಷಯದಲ್ಲಿ ಸನ್ಮಾರ್ಗದ ಕುರಿತ ಜ್ಞಾನವನ್ನು ಹೊಂದಿರುವವನಾಗಿದ್ದಾನೆ. ಅದುದರಿಂದ ಈ ವಿಷಯದಲ್ಲಿ ಯಾವುದೇ ತಪ್ಪು ಸಂಭವಿಸುವ ಸಾಧ್ಯತೆಗಳಿಲ್ಲ. ಸಂಪೂರ್ಣ ಹೃತ್ಪೂರ್ವಕವಾಗಿ ನಿಶ್ಚಿಂತೆಯಿಂದ

ಆವನ ಮಾರ್ಗದರ್ಶನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅಗಣಿತ ಪ್ರತಿಫಲವನ್ನು ಪಡೆಯಬಹುದಾಗಿದೆ ಮತ್ತು ವಿನಾಶದಿಂದ ಪಾರಾಗಬಹುದಾಗಿದೆ ಎಂದು ಮೇಲಿನ ವಚನಗಳು ಭರವಸೆ ನೀಡುತ್ತಿವೆ. ಇನ್ನು ಒಂದು ವೇಳೆ ಇಷ್ಟರ ವರೆಗೂ ಈ ಅನುಗ್ರಹವನ್ನು ಮಿಥ್ಯವಾಗಿಸಿದವರೂ ಕೂಡ ಕ್ಷಮಿಸಲ್ಪಡಬಹುದು ಎಂಬ ಭರವಸೆ ಅದರಲ್ಲಿದೆ. ಪವಿತ್ರ ಕುರ್‌ಆನಿನ ಮಾರ್ಗದರ್ಶನದಿಂದ ವಂಚಿತರಾಗಿ ಉಳಿದರೆ ಮಾರ್ಗಭ್ರಷ್ಟರಾಗಿಯೇ ಇದ್ದರೆ. ನಿಮ್ಮ ಕೆಟ್ಟ ಕರ್ಮಗಳಿಗಾಗಿ ಕಠಿಣ ಶಿಕ್ಷೆ ಅನುಭವಿಸಬೇಕಾಗಬಹುದು ಮತ್ತು ಎಲ್ಲರೂ ಅಲ್ಲಾಹನೆಡೆಗೇ ಮರಳಬೇಕಾದವರು ಎಂಬ ಎಚ್ಚರಿಕೆಯನ್ನು ಅದು ನೀಡುತ್ತಿದೆ. ಹೀಗೆ ಅಲ್ಲಾಹನು ತನ್ನ ಗ್ರಂಥದಲ್ಲಿ ದಾಸರಿಗೆ ತನ್ನ ಸಾಮಿಪ್ಯವನ್ನೂ ತನ್ನ ಪ್ರೀತಿ, ಕರುಣೆ, ಕ್ಷಮೆ ಮತ್ತು ಮಾರ್ಗದರ್ಶನವನ್ನು ನೀಡಿರುವ ಆ ಅಲ್ಲಾಹನೇ ಮನುಷ್ಯರ ನೈಜ ಆರಾಧ್ಯ ನಾಗಿದ್ದಾನೆ.

33) ಆರಾಧ್ಯನನ್ನು ಸಕಲ ವಸ್ತುಗಳು ಪ್ರಶಂಸಿಸುತ್ತವೆ:

ಆರಾಧ್ಯನ ಪ್ರಶಂಸೆ, ಸ್ತುತಿಗಳನ್ನು ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುಗಳೂ ಮಾಡುತ್ತವೆ. ಸಕಲ ವಸ್ತುಗಳು ಅವನದೇ ಸೃಷ್ಟಿಗಳಾಗಿದ್ದು ಅವು ತಮ್ಮ ಸೃಷ್ಟಿಕರ್ತನನ್ನು ಸ್ತುತಿಸುತ್ತಿವೆ. ಆತನ ಘನತೆ ಮತ್ತು ಶ್ರೇಷ್ಠತೆಯನ್ನು ಕೊಂಡಾಡುತ್ತವೆ. ಈ ರೀತಿ ತಮ್ಮದೇ ವಿಧಾನದಲ್ಲಿ ತಮ್ಮ ಆರಾಧ್ಯನನ್ನು ಅವುಗಳು ಆರಾಧಿಸುವುವು. ಪ್ರಪಂಚದಲ್ಲಿ ಜೀವವಿರುವ ಮತ್ತು ಇಲ್ಲದ ಸೃಷ್ಟಿಗಳಿವೆ. ಆದರೆ, ಅವು ಯಾವುದೇ ರೂಪದಲ್ಲಿದ್ದರೂ, ಹೇಗೆ ಕಂಡು ಬಂದರೂ ಅವುಗಳೆಲ್ಲವೂ ಅಲ್ಲಾಹನದೇ ಸೃಷ್ಟಿಗಳಾಗಿವೆ ಮತ್ತು ಅವುಗಳ ಭಾಷೆಯು ಸೃಷ್ಟಿಕರ್ತನಿಗೆ ಅರಿವಾಗುತ್ತದೆ. ಈ ಕುರಿತು ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ಹೀಗೆ ವಿವರಿಸಿರುವನು.

"ಆಕಾಶದಲ್ಲಿರುವ ಪ್ರತಿಯೊಂದು ವಸ್ತುವೂ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸುತ್ತಿದೆ. ಅತ್ಯಂತ ಪರಿಶುದ್ಧನೂ ಪ್ರಬಲನೂ ಯುಕ್ತಿ ಪೂರ್ಣನೂ ಆಗಿರುವ ಸಾಮ್ರಾಟನು." (ಜುಮುಅ: 1)

ಮೇಲಿನ ವಚನಗಳಲ್ಲಿ ತಿಳಿಸಲಾದಂತೆ ಅವೆಲ್ಲವೂ ಅಲ್ಲಾಹನ ಸೃಷ್ಟಿಗಳಾಗಿದ್ದು ತಮ್ಮ ಭಾಷೆಯಲ್ಲಿ ಅಲ್ಲಾಹನನ್ನು ಜಪಿಸುತ್ತವೆ. ಅವೆಲ್ಲಕ್ಕೂ ಪೂರ್ಣ ಅಸ್ತಿತ್ವವಿದ್ದು ಇದು ಅಲ್ಲಾಹನ ಮಹಿಮೆ ಪಾವಿತ್ರ್ಯಗಳಿಗೆ ಸಾಕ್ಷಿಯಾಗಿರುತ್ತದೆ.

34) ಸೃಷ್ಟಿಕರ್ತ, ಪ್ರಪಂಚ ಸಾಮ್ರಾಟನೊಡನೆ ಸಹಭಾಗಿಗಳಾಗಿಸುವುದು ಸೂಕ್ತವೇ?:

ವಿಶ್ವವನ್ನು ಸೃಷ್ಟಿಸಿರುವ ನೈಜ ಸೃಷ್ಟಿಕರ್ತನೊಂದಿಗೆ ಇತರರನ್ನು ಭಾಗಿದಾರಗೊಳಿಸಿ ಅವನ ಪ್ರಶಂಸೆಯನ್ನೋ ಆರಾಧನೆಯನ್ನೋ ಮಾಡುವಂತಿಲ್ಲ. ಹಾಗೆ ಮಾಡುವುದು

ಅವನ ಅರ್ಹತೆಗೆ ವಿರುದ್ಧವಾದ ಕರ್ಮವಾಗುತ್ತದೆ. ಅವನು ತನ್ನ ಕಾರ್ಯಗಳಿಗೆ ಇತರರನ್ನು ಆಶ್ರಯಿಸಬೇಕಾದಂತಹ ದುರ್ಬಲ ಅಸ್ತಿತ್ವವಲ್ಲ. ಸೃಷ್ಟಿಕರ್ತನೊಂದಿಗೆ ಇತರ ಸಹಭಾಗಿಗಳನ್ನು ಸೇರಿಸುವುದೆಂದರೆ ಅವನನ್ನು ದುರ್ಬಲನಾಗಿಸಿದಂತಾಗುವುದು. ಅವನನ್ನು ದೋಷಪೂರಿತ ಅಸ್ತಿತ್ವವೆಂದು ಬಿಂಬಿಸಿದಂತಾಗುವುದು. ದೋಷಪೂರಿತ ಅಸ್ತಿತ್ವವು ಎಂದಿಗೂ ಪ್ರಶಂಸೆ ಮತ್ತು ಆರಾಧನೆಗಳಿಗೆ ಅರ್ಹವೆನಿಸಿಕೊಳ್ಳಲು ಸಾಧ್ಯವಿಲ್ಲ.

ಆದರೆ ಸಕಲ ವಿಧದಲ್ಲಿಯೂ ಸೃಷ್ಟಿಕರ್ತನು ಪರಿಪೂರ್ಣ ಅಸ್ತಿತ್ವವಾಗಿದ್ದಾನೆ. ಸಕಲ ಪರಾಧೀನತೆಗಳಿಂದ ಮುಕ್ತನೂ ಇತರರಿಂದ ನಿರಪೇಕ್ಷನೂ ಮತ್ತು ಏಕೈಕ ಅಸ್ತಿತ್ವವಾಗಿದ್ದಾನೆ. ಆದುದರಿಂದ ಸೃಷ್ಟಿಗಳ ಸಾಷ್ಟಾಂಗ ಸ್ವೀಕರಿಸುವ ಅರ್ಹತೆ ಈ ಏಕಮಾತ್ರನಿಗಿದೆ ಮತ್ತು ಅಲ್ಲಾಹನೇ ಈ ಆಸ್ತಿತ್ವವಾಗಿದ್ದು ತನ್ನೊಡನೆ ಇತರರನ್ನು ಸಹಭಾಗಿಗೊಳಿಸುವುದರಿಂದ ಅವನು ತಡೆದಿದ್ದಾನೆ ಮತ್ತು ಜನರು ಯಾರೊಂದಿಗೆ ಅವನನ್ನು ಸಹಭಾಗಿಗೊಳಿಸುವರೋ ಅಂತಹ ಅಸ್ತಿತ್ವಗಳಿಂದ ತಾನು ಸಂಪೂರ್ಣ ಮುಕ್ತನೆಂದು ಎಚ್ಚರಿಸಿದ್ದಾನೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ.

"ಮತ್ತು ಹೇಳಿರಿ!" ಸರ್ವಸ್ತುತಿಗಳೂ ಅಲ್ಲಾಹನಿಗೆ ಮೀಸಲು. ಅವನು ಯಾರನ್ನೂ ಮಗನನ್ನಾಗಿ ಮಾಡಿಕೊಳ್ಳಲಿಲ್ಲ. ಅವನ ಪ್ರಭುತ್ವದಲ್ಲಿ ಯಾರೂ ಸಹಭಾಗಿಯಿಲ್ಲ. ಅವನಿಗೊಬ್ಬ ರಕ್ಷಕ ಮಿತ್ರನಿದ್ದಾನೆನ್ನಲು ಅವನೇನೂ ವಿವಶನಲ್ಲ. ಅವನ ಹಿರಿಮೆಯನ್ನು (ಪರಿಪೂರ್ಣವಾದ ಹಿರಿಮೆಯನ್ನು) ಕೊಂಡಾಡಿರಿ." (ಬನೀ ಇಸ್ರಾಯೀಲ್: 111)

35) ವಿರೋಧದ ವಾಸ್ತವಿಕತೆಗಳು;

ಏಕಕಾಲದಲ್ಲಿ ಎರಡು ವಿರೋಧಾತ್ಮಕ ವಿಷಯಗಳು ಸರಿಯಾಗಿರುವುದಿಲ್ಲ. ಅವುಗಳಲ್ಲಿ ಯಾವುದಾದರೂ ಒಂದು ಸರಿಯಾಗಿರುತ್ತದೆ ಮತ್ತು ಇನ್ನೊಂದು ತಪ್ಪಾಗಿರುತ್ತದೆ. ಈ ಬಗ್ಗೆ ಪವಿತ್ರ ಕುರ್‌ಆನ್ ಹೀಗೆ ಹೇಳುತ್ತಿದೆ. "(ಪೈಂಗಬರರೇ) ನಿಮಗೆ ಭೂಮಿ ಆಕಾಶಗಳಿಂದ ಜೀವನಾಧಾರ ಕೊಡುವವನಾರೆಂದು ಇವರೊಡನೆ ಕೇಳಿರಿ, ಹೇಳಿರಿ: ಅಲ್ಲಾಹ್. ಈಗ ನಿಶ್ಚಯವಾಗಿಯೂ ನಮ್ಮ ಮತ್ತು ನಿಮ್ಮ ಪೈಕಿ ಕೇವಲ ಒಬ್ಬನೇ ಸನ್ಮಾರ್ಗದಲ್ಲಿದ್ದಾನೆ ಅಥವಾ ಸುವ್ಯಕ್ತ ಪಥಭ್ರಷ್ಟತೆಯಲ್ಲಿದ್ದಾನೆ." (ಸಬಾ: 24)

ಅಂದರೆ ನೈಜ ಅರಾಧ್ಯನು (ತೌಹೀದ್) ಮತ್ತು ಮಿಥ್ಯ ಆರಾಧ್ಯರುಗಳ ನಡುವೆ (ಶಿರ್ಕ್) ಆಕಾಶ ಭೂಮಿಗಳಷ್ಟು ಅಂತರವಿದೆ. ಏಕ ಕಾಲಕ್ಕೆ ನೈಜ ಮತ್ತು ಮಿಥ್ಯ ಈ ಎರಡೂ ಆರಾಧ್ಯಗಳಲ್ಲಿ ವಿಶ್ವಾಸವಿರಿಸುವುದು ತದ್ವಿರುದ್ಧ ವಿಚಾರವಾಗಿದ್ದು ಆರಾಧ್ಯರಲ್ಲಿ ಯಾವುದಾದರೊಂದು ಮಾತ್ರ ಸರಿಯಾದು ಮತ್ತು ನೈಜ ಆರಾಧ್ಯ ಅಗಿರುತ್ತದೆ. ಇನ್ನೊಂದು ಸುಳ್ಳು ಮತ್ತು ಮಿಥ್ಯವಾಗಿರುತ್ತದೆ. ಆದುದರಿಂದ ನೈಜ ಆರಾಧ್ಯನಲ್ಲಿ

ವಿಶ್ವಾಸ ಇರಿಸುವವನು ಮಾತ್ರ ಸರಿಯಾದ ಮಾರ್ಗದರ್ಶನವನ್ನು ಹೊಂದುವನು. ಮಿಥ್ಯಾರಾಧ್ಯನಲ್ಲಿ (ಶಿರ್ಕ್) ವಿಶ್ವಾಸ ಇರಿಸಿದವನು ಮಾರ್ಗ ಭ್ರಷ್ಟಗೊಳ್ಳುತ್ತಾನೆ.

ಯಾವನೇ ವ್ಯಕ್ತಿಯ ಮೊದಲ ಹೆಜ್ಜೆಯಲ್ಲಿಯೇ ಅವನು ಜ್ಞಾನದ ಹಾದಿಯಲ್ಲಿರುವನೋ ಅಥವಾ ಪಥಭ್ರಷ್ಟನಾಗಿರುವನೋ ಎಂದು ತಿಳಿಯುತ್ತದೆ. ಅಂದರೆ ವ್ಯಕ್ತಿಯು ನೇರ ಮಾರ್ಗವನ್ನು ಗುರುತಿಸಿರುವನೋ ಅಥವಾ ತಪ್ಪು ಮಾರ್ಗದಲ್ಲಿರುವನೋ ಎಂದು ಅವನ ಪ್ರಥಮ ಹೆಜ್ಜೆಯೇ ಸೂಚಿಸುತ್ತದೆ. ಅಂದರೆ ಯಾರು ನೈಜ ಆರಾಧ್ಯನ ಮುಂದೆ ಶಿರಬಾಗುವವರು ಮತ್ತು ಯಾರು ನೈಜ ಆರಾಧ್ಯನನ್ನು ಗುರುತಿಸಲು ನಿರಾಕರಿಸುವವರು ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

36) ಕಾಲ್ಪನಿಕ ದೇವರುಗಳನ್ನು ಆರಾಧ್ಯನಾಗಿಸುವುದು ಮನುಷ್ಯನ ವಿಚಿತ್ರ ವರ್ತನೆಯಾಗಿದೆ:

ಜನರಲ್ಲಿ ಕೆಲವರು ತಮ್ಮ ಕಲ್ಪನೆಗೆ ನಿಲುಕುವುದನ್ನು ದೇವರನ್ನಾಗಿಸಿ ಅದಕ್ಕೊಂದು ಹೆಸರಿಟ್ಟು ವಿಶ್ವದ ನೈಜ ಸೃಷ್ಟಿಕರ್ತನ ಪ್ರಭುತ್ವದಲ್ಲಿ ಸಹಭಾಗಿಗೊಳಿಸುತ್ತಾರೆ. ಜನರ ಈ ಕೃತ್ಯಕ್ಕೆ ಸೃಷ್ಟಿಕರ್ತನಿಂದ ಯಾವ ಪ್ರಮಾಣವಾಗಲಿ ದೃಢೀಕರಣವಾಗಲಿ ಇರುವುದಿಲ್ಲ. ಅವರ ಬಳಿ ಅವನ ಆರಾಧನೆಯೊಂದಿಗೆ ಅವುಗಳನ್ನು ಸಹ ಸಹಭಾಗಿಗೊಳಿಸುವುದಕ್ಕೆ ಸಂಬಂಧಿಸಿದ ಅವನ ಕಡೆಯಿಂದ ಬಂದಿರುವ ಯಾವುದೇ ಆಧಾರ ಇರುವುದಿಲ್ಲ. ವಿಶ್ವವನ್ನು ಸೃಷ್ಟಿಸಿರುವುದು ತಾನೋರ್ವನೇ ಎಂದು ಸೃಷ್ಟಿಕರ್ತ ಸ್ಪಷ್ಟವಾಗಿ ಘೋಷಿಸಿದ್ದಾನೆ. ತನ್ನ ಹೊರತು ಇತರ ಆರಾಧ್ಯರಿಲ್ಲ ಎಂದೂ ಕಟ್ಟಪ್ಪಣೆ ನೀಡಿದ್ದಾನೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವವರಿಸುತ್ತಿದೆ.

"ಅವನನ್ನು ಬಿಟ್ಟು ನೀವು ಯಾರ ದಾಸ್ಯ-ಆರಾಧನೆ ಮಾಡುತ್ತಿರುವಿರೋ ಅವರೆಲ್ಲಾ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಿರುವ ಕೆಲವು ಹೆಸರುಗಳ ವಿನಾ ಇನ್ನೇನೂ ಅಲ್ಲ. ಅಲ್ಲಾಹನು ಅವುಗಳ ಬಗ್ಗೆ ಯಾವ ಪ್ರಮಾಣವನ್ನೂ ಇಳಿಸಿರುವುದಿಲ್ಲ. ಆಜ್ಞಾಧಿಕಾರವು ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ. ಇದೇ ಅಪ್ಪಟ ಋಜು ಜೀವನ ಮಾರ್ಗ. ಆದರೆ ಹೆಚ್ಚಿನ ಜನರು ಅರಿಯುವುದಿಲ್ಲ." **(ಯೂಸುಫ್: 40)**

37) ಆರಾಧ್ಯನ ಪರಿಚಯ ಅವನ ಗುಣವೈಶಿಷ್ಟ್ಯಗಳ ಮೂಲಕ:

ಜನರು ಆರಾಧ್ಯನೆಂದು ಭಾವಿಸಿರುವವರು ಭೂಮ್ಯಾಕಾಶಗಳ ಒಡೆಯರಲ್ಲ ಮತ್ತು ಭೂಮಿಯ ಯಾವುದೇ ವಸ್ತುವಿನ ಒಡೆಯರೂ ಅವರಲ್ಲ. ಅವರು ನೈಜ

ಆರಾಧ್ಯನ ಯಾವುದೇ ಪ್ರಕಾರದ ಸಹಭಾಗಿಗಳಲ್ಲ. ಜನರು ತಿಳಿದಂತೆ ನೈಜ ಆರಾಧ್ಯನ ಸಹಾಯಕರೂ ಅಲ್ಲ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ.

"(ಪೈಗಂಬರರೇ, ಈ ಬಹುದೇವವಿಶ್ವಾಸಿಗಳೊಡನೆ) ಹೇಳಿರಿ, ನೀವು ಅಲ್ಲಾಹನ ಹೊರತಾಗಿ ನಿಮ್ಮ ಆರಾಧ್ಯರೆಂದು ಭಾವಿಸಿಕೊಂಡಿರುವವುಗಳನ್ನು ಪ್ರಾರ್ಥಿಸಿ ನೋಡಿರಿ. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅವರು ಅಣುಗಾತ್ರದ ವಸ್ತುವಿಗೂ ಒಡೆಯರಲ್ಲ. ಅವರು ಭೂಮಿ-ಆಕಾಶಗಳ ಸೊತ್ತಿನಲ್ಲಿ ಪಾಲುದಾರರೂ ಅಲ್ಲ. ಅವರಲ್ಲಾರೂ ಅಲ್ಲಾಹನ ಸಹಾಯಕನೂ ಅಲ್ಲ." (ಸಬಾ: 22)

ವಿವರಣೆ ಶೈಲಿಯನ್ನು ಗಮನಿಸುವುದಾದರೆ ಈ ಗುಣವೈಶಿಷ್ಟ್ಯಗಳು ಬೇರೆ ಯಾವುದೇ ಅಸ್ತಿತ್ವದಲ್ಲಿ (ಪ್ರಾರ್ಥನೆ ಆಲಿಸುವುದು, ಸಹಾಯ ಮಾಡುವುದು, ಸಂಕಷ್ಟ ನಿವಾರಿಸುವುದು) ಇವೆಯೇ? ಇಲ್ಲ ಎಂದಿರುವಾಗ ಅವುಗಳು ಆರಾಧ್ಯನಾಗಲು ಹೇಗೆ ಸಾಧ್ಯ? ಆದರೆ ಈ ಗುಣವೈಶಿಷ್ಟ್ಯಗಳೆಲ್ಲವೂ ಅಲ್ಲಾಹನದು. ಅಲ್ಲಾಹನಲ್ಲಿದೆ. ಯಾಕೆಂದರೆ ಅವನೇ ನಿಜವಾದ ಆರಾಧ್ಯ ಮತ್ತು ಸೃಷ್ಟಿಕರ್ತನಾಗಿದ್ದು ಅವನ ಈ ಪಂಥಾಹ್ವಾನಕ್ಕೆ ಯಾರಿಂದಲೂ ಉತ್ತರಿಸಲು ಸಾಧ್ಯವಾಗಿಲ್ಲ.

38) ಸಹಭಾಗಿತ್ವ ಮಹಾ ಪಾಪವಾಗಿದೆ:

ಅಲ್ಲಾಹನೊಂದಿಗೆ ಇತರರನ್ನು ಸಹಭಾಗಿಗೊಳಿಸುವುದು (ಶಿರ್ಕ್) ಎಂದರೆ, ನೈಜ ಒಡೆಯ, ಆಜ್ಞಾಧಿಕಾರಿ ಪ್ರಭುವಿನ ಶಕ್ತಿ ಸಾಮರ್ಥ್ಯಗಳನ್ನು ಇತರರೊಂದಿಗೆ ಹಂಚುವುದು ಎಂದು ಅರ್ಥವಾಗಿದೆ. ಅವನ ಜ್ಞಾನ, ಸಾಮರ್ಥ್ಯಗಳನ್ನು ಕಲ್ಪಿತ ಆರಾಧ್ಯಗಳಿಗೆ ಹಂಚುವುದು. ಅಂದರೆ ಜನರು ಆರಾಧ್ಯನೆಂದು ಊಹಿಸಿಕೊಂಡಿರುವ ಸೃಷ್ಟಿಗಳಿಗೆ ಹಂಚುವ ಕೆಲಸವನ್ನು ಮಾಡುತ್ತಾರೆ. ಅವುಗಳನ್ನು ಆರಾಧ್ಯನನ್ನಾಗಿ ಮಾಡಿ ನೈಜ ಆರಾಧ್ಯನಿಂದ ಜ್ಞಾನ ಸಾಮರ್ಥ್ಯಗಳನ್ನು ಕಿತ್ತುಕೊಂಡು ತಮ್ಮ ಕಲ್ಪಿತ ಆರಾಧ್ಯನಿಗೆ ಕೊಡುತ್ತಾರೆ ಅಥವಾ ಅವರನ್ನು ಅಲ್ಲಾಹನೊಡನೆ ಸಹಭಾಗಿಗೊಳಿಸ ಲಾಗುತ್ತದೆ.

ಸೃಷ್ಟಿಕರ್ತ, ಪ್ರಭುವಿನ ಹಕ್ಕುಗಳನ್ನು ಶಿರ್ಕ್ (ಸಹಭಾಗಿತ್ವದ) ಮೂಲಕ ಕಬಳಿಸುವುದು ಸತ್ಯದ ನಿರಾಕರಣೆ ಮತ್ತು ಅಕ್ರಮವಾಗಿದೆ. ಇದೇ ರೀತಿ ಇಂತಹ ವರು ದಾಸರ (ಇತರ ಜನರ) ಹಕ್ಕುಗಳನ್ನು ನಿರ್ದಾಕ್ಷಿಣ್ಯವಾಗಿ ಕಬಳಿಸಬಲ್ಲರು ಮತ್ತು ದಾಸರ ಮೇಲೆ ದೌರ್ಜನ್ಯವೆಸಗಬಲ್ಲರು.

ಆದ್ದರಿಂದ ಅಲ್ಲಾಹನ ಹಕ್ಕು ಮತ್ತು ಸಾಮರ್ಥ್ಯಗಳನ್ನು ಇತರರೊಡನೆ ಸಹಭಾಗಿ ಗೊಳಿಸುವವರು ಬಹುದೊಡ್ಡ ಅಕ್ರಮಿಗಳು ಮತ್ತು ಭ್ರಷ್ಟರು ಆಗಿದ್ದಾರೆ.

ಯಾವ ಅಸ್ತಿತ್ವವು ಅರ್ಥಾತ್ ಅಲ್ಲಾಹನು ನಮಗೆ ಶರೀರ ಕೊಟ್ಟನು ಮತ್ತು ಅದರಲ್ಲಿ ಪ್ರಾಣ ಇಟ್ಟನು. ಇದೇ ಶಕ್ತಿ ಆಧಾರದಿಂದ ನಾವು ನಡೆದಾಡುತ್ತೇವೆ. ವೀಕ್ಷಿಸುತ್ತೇವೆ. ಆಲಿಸುತ್ತೇವೆ. ಅವನು ಕೊಟ್ಟಿರುವ ಮೆದುಳಿನಿಂದ ನಾವು ಯೋಚಿಸುವುದು ಮತ್ತು ಅಲ್ಲಾಹನು ಹೃದಯ ಕೊಟ್ಟನು ಅದು ಕ್ರಮಪ್ರಕಾರ ಡವಗುಟ್ಟುತ್ತದೆ. ಮನುಷ್ಯರನ್ನು ಜೀವಂತ ಇಟ್ಟನು. ನಂತರ ಸಂಪೂರ್ಣ ಜೀವನಾಧಾರಗಳನ್ನು ಕೊಟ್ಟನು. ಇಡೀ ವಿಶ್ವಕ್ಕೆ ಜೀವನಾಧಾರದ ವ್ಯವಸ್ಥೆ ಮಾಡಿದನು. ಸೂರ್ಯ ಚಂದ್ರ ಮತ್ತು ಭೂಮಿಯನ್ನೂ ಕೊಟ್ಟನು. ಇವೆಲ್ಲ ಮಾನವರ ಜೀವನಕ್ಕೆ ಸಂಬಂಧಿಸಿರುವುದು ಆಗಿವೆ. ಇವೆಲ್ಲ ಯಾರ ಕೃಪೆಯಾಗಿದೆಯೋ ಯಾರ ಉಪಕಾರವಾಗಿದೆಯೋ ನಿಶ್ಚಯವಾಗಿಯೂ ಖಂಡಿತ ಅವನು ನಮ್ಮ ಸಾಷ್ಟಾಂಗಕ್ಕೆ ನಮ್ಮಿಂದ ಆರಾಧಿಸಲ್ಪಡಲು ಅರ್ಹನಾಗಿದ್ದಾನೆ. ನಮ್ಮ ಪ್ರಾರ್ಥನೆಗೆ ಮತ್ತು ನಾವು ಅವನಿಗೆ ವಿಧೇಯರಾಗಿರಲು ಅರ್ಹನು. ಅವನೇ ಭರವಸೆ ಇಡಬಹುದಾದವನು. ನಿರೀಕ್ಷೆ ಇರಿಸಬಹುದಾದವನು. ಯಾವ ಅಸ್ತಿತ್ವಗಳು ಅವನ ಸೃಷ್ಟಿಗಳೋ ಮತ್ತು ಅವುಗಳ ಮೇಲೆ ಅವನ ಕೃಪೆ ಅನುಗ್ರಹ, ಉಪಕಾರಗಳು ಇವೆಯೋ ಅವರು ಅವನೊಂದಿಗೆ ಭಾಗಿದಾರರಲ್ಲ. ಸಹಭಾಗಿಗಳಲ್ಲ. ನಿಸ್ಸಂದೇಹವಾಗಿ ಅಲ್ಲಾಹನೇ ನಮ್ಮ ಆರಾಧನೆಗೆ ಮತ್ತು ವಿಧೇಯತೆಗೆ ಅರ್ಹನಾದವನು.

"ಜನರೇ, ನಿಮ್ಮ ಮೇಲಿರುವ ಅಲ್ಲಾಹನ ಅನುಗ್ರಹಗಳನ್ನು ಸ್ಮರಿಸಿರಿ. ಅಲ್ಲಾಹನ ಹೊರತು ಆಕಾಶ ಮತ್ತು ಭೂಮಿಯಿಂದ ನಿಮಗೆ ಆಹಾರ ನೀಡುವಂತಹ ಸೃಷ್ಟಿಕರ್ತ ನಾರಾದರೂ ಇರುವನೇ? ಅವನ ಹೊರತು ಇನ್ನಾವ ಆರಾಧ್ಯನೂ ಇಲ್ಲ. ನೀವು ಹೋಗುತ್ತಿರುವುದಾದರೂ ಎಲ್ಲಿಂದ?" (ಫಾತಿರ್: 3)

ಮೇಲಿನ ವಚನಗಳ ಆಶಯದಂತೆ ಅಲ್ಲಾಹನ ಹಕ್ಕನ್ನು ಅವನಿಗಲ್ಲದೆ ಇತರ ರಿಗೆ ನೀಡುವುದು ಅನ್ಯಾಯವೂ ಅಕ್ರಮವೂ ಆಗಿದೆ. ಅದೊಂದು ಅಪರಾಧ, ವಂಚನೆ, ವಿದ್ರೋಹವಾಗಿದೆ. ಈ ಪ್ರವೃತ್ತಿ ಮೋಸ ಹೋಗುವುದಲ್ಲದೆ ಮತ್ತೇನು? ಒಂದು ಕಡೆ ಜನರು ಪ್ರಭು ಮತ್ತು ಜೀವನಾಧಾರ ಕೊಡುವವನೇ ಅಲ್ಲಾಹನು ಎಂದು ಒಪ್ಪುವುದು. ಆದರೆ ತಮ್ಮ ಆರಾಧ್ಯರನ್ನಾಗಿ ಬೇರೆ ಅಸ್ತಿತ್ವಗಳನ್ನು ಆರಾಧಿಸು ವುದು ಮತ್ತು ಅವುಗಳಿಗೆ ಸಾಷ್ಟಾಂಗ ಎರಗುವುದು. ಇದು ಮೋಸ ಹೋಗುವುದಲ್ಲದೆ ಮತ್ತೇನು?

❖ ❖ ❖ ❖

ಅಧ್ಯಾಯ 6

ಪರಲೋಕ

ಮನುಷ್ಯನ ಜೀವನದಲ್ಲಿ ಮರಣಾನಂತರ ಎಬ್ಬಿಸಲ್ಪಡುವ ಪುನರುತ್ಥಾನ ದಿನ ದಲ್ಲಿ ನಿಜವಾದ ಆನಂದವಿದೆ. ಯಾಕೆಂದರೆ ಕೇವಲ ಮರಣಕ್ಕೆ ಎಲ್ಲವೂ ಮುಗಿಯು ವುದಿಲ್ಲ. ಕೇವಲ ಸಾವು ಮಾತ್ರ ಇರುವುದಾದರೆ ಮನುಷ್ಯನಲ್ಲಿ ಅದು ನಿರಾಶೆಯ ಭಾವನೆ ಮೂಡಿಸುತ್ತಿತ್ತು. ಜೀವನಕ್ಕೆ ಜೀವಂತಿಕೆಯೇ ಇಲ್ಲದಾಗುತ್ತಿತ್ತು. ಯಾಕೆಂದರೆ ಪ್ರತಿಯೊಂದು ಕೆಲಸ, ಪ್ರಯತ್ನ ಮತ್ತು ತ್ಯಾಗಗಳ ಹಿಂದೆ ಪ್ರತಿಫಲ ಅಥವಾ ಬಹುಮಾನ ಇದ್ದಾಗಲೇ ಅದನ್ನೆಸಗಲು ಜನರಲ್ಲಿ ಉತ್ಸಾಹವಿರುತ್ತದೆ ಮತ್ತು ಆ ಕೆಲಸವನ್ನು ಬಹಳ ಸಂತಸದಿಂದ ಮಾಡಲಾಗುತ್ತದೆ. ಒಂದು ವೇಳೆ ಪ್ರತಿಫಲ ಸಿಗುವುದಿಲ್ಲವಾದರೆ ಆ ಕೆಲಸ ಮಾಡುವುದು ನಿಷ್ಪ್ರಯೋಜಕ ಮತ್ತು ವ್ಯರ್ಥವೆಂದೇ ತಿಳಿಯಲ್ಪಡುತ್ತದೆ. ಕೆಲಸವನ್ನು ವ್ಯಕ್ತಿ ನಿರಾಕರಿಸುತ್ತಾನೆ, ನಿರ್ಲಕ್ಷಿಸುತ್ತಾನೆ. ಮನುಷ್ಯ ಸ್ವಭಾವ ಇದು.

ಅಂದರೆ ಅವನ ಕೆಲಸ ಪರಿಶ್ರಮಗಳು ಸಂತೋಷ ಯಾನೆ ಶಾಂತಿಯ ಜೀವನ ಪರಿಹಾರವನ್ನು ಅವಲಂಬಿಸಿಕೊಂಡಿರುವ ಘಟಕವಾಗಿದೆ. ಆದುದರಿಂದ ಅವನ ಜೀವನ ಪ್ರತಿಫಲಗಳನ್ನು ಸಂಗ್ರಹಿಸುವ ಒಂದು ಘಟಕವೂ ಆಗಿದೆ. ಅರ್ಥಾತ್ ಜೀವನವಾಗಿದೆ. ನಾಳೆಯ ಭರವಸೆಯನ್ನು ಅವಲಂಬಿಸಿದ ಒಂದು ಸ್ಥಿತಿ. ಆದುದರಿಂದ ವ್ಯಕ್ತಿಯಾಗಿ ಮನುಷ್ಯನೇ ಒಂದು ಘಟಕವಾಗಿದ್ದು ಜೀವನವೆಂದು ಅದಕ್ಕೆ ಹೆಸರು. ಅಂದರೆ ಈ ಘಟಕದ ಹೆಸರೇ ಜೀವನ ಹೀಗೆ ಜೀವನದ ಪ್ರತಿಯೊಂದು ಹಂತದ ಸಂಚಲನೆಗಳಲ್ಲಿ ವಿಶ್ವಾಸ ಇಟ್ಟುಕೊಳ್ಳುವುದು ಅನಿವಾರ್ಯವಾಗಿದೆ.

ಆದುದರಿಂದ ಭೌತಿಕ (ಇಹಲೋಕ) ಜೀವನ ಮುಗಿದು ಇಹಲೋಕದ ಕರ್ಮ ಗಳಿಗೆ ಪ್ರತಿಫಲ ಅಥವಾ ಪಾರಿತೋಷಕ ಪಡೆಯುವ ಇನ್ನೊಂದು ಜೀವನ ಮರಣಾ ನಂತರ ಲಭಿಸುತ್ತದೆ. ಈ ಪ್ರತಿಫಲಕ್ಕೆ ಇಹಜೀವನ ಮುಗಿದ ಮೇಲೆ ಬರುವ (ಸತ್ತ ಮೇಲೆ) ಇನ್ನೊಂದು ಜೀವನ ಇದೆ. ಗತ (ಇಹಲೋಕದ) ಜೀವನದಲ್ಲಿ ಮಾಡಿರುವ ಕರ್ಮಗಳಿಗೆ ತಕ್ಕಂತೆ ಪ್ರತಿಫಲ ಅಥವಾ ಪಾರಿತೋಷಕ ಅಲ್ಲಿ ದೊರೆಯಲಿದೆ.

ಅಥವಾ ಹಿಂದಿನ ಜೀವನ ಕರ್ಮಗಳಿಗೆ ಸೂಕ್ತ ಪರಿಣಾಮವು ದೊರೆಯುವ ತಾಣ ಅದು ಆಗಿದೆ. ಈ ರೀತಿ ಈ ಜೀವನ ಕೂಡ ಸಮಯಗಳ ಸಂಗ್ರಹ. ಈ ಸಮಯದಲ್ಲಿ ಸಂಗ್ರಹಿಸಿರುವುದಕ್ಕೆ ಅಥವಾ ಇಹಲೋಕದ ಕರ್ಮಗಳಿಗೆ ಬಹುಮಾನ ಮತ್ತು ತಕ್ಕ ಪ್ರತಿಫಲ ಸಿಗಬೇಕಾಗಿರುವುದು ಅತ್ಯವಶ್ಯಕ.

ಮನುಷ್ಯನ ಯೋಜನೆಯೇ ವಿಚಿತ್ರ, ಅವನು ಉದ್ದೇಶರಹಿತವಾಗಿ ಯಾವ ಕಾರ್ಯವನ್ನೂ ಮಾಡಲಾರನು. ಹೀಗಿರುವಾಗ ಅವನನ್ನು ಸೃಷ್ಟಿಸಿದವನು ಉದ್ದೇಶರಹಿತವಾಗಿ ಅವನನ್ನಾಗಲಿ ಇತರ ಸೃಷ್ಟಿಗಳನ್ನಾಗಲಿ ಸೃಷ್ಟಿಸಲು ಸಾಧ್ಯವೇ? ಮನುಷ್ಯನ ಜೀವನಕ್ಕೆ ಉದ್ದೇಶ ಇದ್ದು ಇಹಲೋಕದ ಜೀವನದಲ್ಲಿ ಮಾಡಿದ ಕೆಲಸಗಳಿಗೆ ಪ್ರತಿಫಲ ನೀಡುವುದಕ್ಕಾಗಿ ಮರಣಾನಂತರ ಮನುಷ್ಯನಿಗೆ ಇನ್ನೊಂದು ಲೋಕದಲ್ಲಿ ಇನ್ನೊಂದು ಜೀವನ ಇರುವುದು ಆವಶ್ಯಕವಾಗಿದೆ. ಈ ಪ್ರತಿಫಲ ಸಿಗುವ ಇನ್ನೊಂದು ಜಗತ್ತನ್ನೇ ಪರಲೋಕ ಎನ್ನುವುದು. ಅಲ್ಲಿ ನ್ಯಾಯದೊಂದಿಗೆ ಮನುಷ್ಯನ ಪ್ರತಿಯೊಂದು ಕರ್ಮಗಳ ಪರಿಣಾಮ ಘೋಷಿಸಲ್ಪಡಲಿದೆ. ಅವರವರ ಕರ್ಮಗಳಿಗೆ ತಕ್ಕಂತೆ ಪ್ರತಿಫಲ ಇರುತ್ತದೆ. ಒಂದೋ ಪುರಸ್ಕಾರ ಅಥವಾ ಶಿಕ್ಷೆ ಅಲ್ಲಿ ಮನುಷ್ಯನಿಗೆ ದೊರೆಯುವುದು. ಆದುದರಿಂದ ಪರಲೋಕವು ತೌಹೀದ್–ಏಕದೇವತ್ವವನ್ನು ಪ್ರತಿಪಾದಿಸುವುದು. ಪ್ರಪಂಚ ಮತ್ತು ಮನುಷ್ಯನ ಸೃಷ್ಟಿಕರ್ತ, ಒಡೆಯ, ಅಧಿಪತಿ ಮತ್ತು ಆರಾಧ್ಯನ ಮೇಲೆ ವಿಶ್ವಾಸ ಇರಿಸಿದುದರ ಪ್ರಾಮುಖ್ಯತೆಯನ್ನು ಪರಲೋಕವೇ ಮನುಷ್ಯರ ಮುಂದೆ ಅನಾವರಣಗೊಳಿಸುತ್ತದೆ. ಜೊತೆಗೆ ಪರಲೋಕವೇ ನ್ಯಾಯ ಮತ್ತು ಅನುಗ್ರಹದ ಒಂದು ಬೇಡಿಕೆಯಾಗಿದ್ದು, ಅದು ಗೋಚರಿಸದೆ, ಅನುಭವಕ್ಕೆ ಬಾರದೆ ಮನುಷ್ಯನಿಂದ ದೂರ ರಹಸ್ಯ ಅಸ್ತಿತ್ವವಾಗಿ ಇದೆ. ಆದುದರಿಂದ ಮನುಷ್ಯರು ಪರಲೋಕ ಜೀವನವನ್ನು ತಮ್ಮ ಶಾಶ್ವತ ಜೀವನವಾಗಿದೆ ಎಂದು ಅದರಲ್ಲಿ ವಿಶ್ವಾಸ ಇರಿಸಬೇಕಾಗುತ್ತದೆ. ಪರಲೋಕದ ಯಶಸ್ಸಿಗೆ ಅವರು ಸಿದ್ಧತೆ ನಡೆಸಬೇಕಾಗಿದೆ. ಅಲ್ಲಿನ ಮನುಷ್ಯ ಜೀವನ ಶಾಶ್ವತವಾಗಿ ಇರುವ ಜೀವನವಾಗಿರುತ್ತದೆ ಎಂದು ತಿಳಿದು ಪರಲೋಕದಲ್ಲಿ ವಿಶ್ವಾಸ ಇರಿಸಬೇಕಾಗಿದೆ ಮತ್ತು ಪರಲೋಕ ಜೀವನಕ್ಕಾಗಿ ತಯಾರಿ ನಡೆಸಬೇಕಾಗಿದೆ. ಇದರಲ್ಲಿ ಸೃಷ್ಟಿಕರ್ತನನ್ನು ಖುಶಿಪಡಿಸುವ, ರಾಜಿಗೊಳಿಸುವ ಉದ್ದೇಶ ಇರಬೇಕು ಮತ್ತು ನ್ಯಾಯ ಪ್ರಜ್ಞೆ ಭಯದಿಂದ ಈ ಸಂಕಲ್ಪ ಮತ್ತು ಭಾವನೆಗಳು ಮೂಡುತ್ತವೆ. ಸೃಷ್ಟಿಕರ್ತನ ಸನ್ನಿಧಿಗೆ ನಾವೆಲ್ಲರೂ ತೆರಳಬೇಕಾದವರು. ಈ ವಸ್ತುಸ್ಥಿತಿ ಮರೆಯಾಗಿರುವುದಾದರೂ ಅದನ್ನು ಪವಿತ್ರ ಕುರ್‌ಆನ್ ಅಲ್ಲಲ್ಲಿ ಪದೇ ಪದೇ ಉದ್ಧರಿಸಿತು. ಮನುಷ್ಯನಿಗೆ ಮರೆವೆಯ ಗುಣವಿದ್ದು ಆದುದರಿಂದ ಖಚಿತ ಮತ್ತು ಪರಿಪೂರ್ಣ ಅರ್ಥದಲ್ಲಿ ಪರಲೋಕಕ್ಕೆ ಸಿದ್ಧತೆ ನಡೆಸಬೇಕೆಂದು ಪದೇ ಅದು ಸೂಚಿಸಿರುವುದಾಗಿದೆ.

ಒಂದು ವೇಳೆ, ಮೆದುಳನ್ನು ಹೊರಗೆ ತೆಗೆದು ನಮ್ಮ ಕಣ್ಣೆದುರು ಇಟ್ಟರೂ ಅದೊಂದು ಅಂಗಾಂಗಗಳ ಸಮೂಹವಾಗಿರುತ್ತದೆ. ಆದರೆ ಅದರ ಕೆಲಸ ಎಷ್ಟು ಅದ್ಭುತಾದ್ಭುತದ್ದು ಆಗಿವೆ, ಎಂತೆಂತಹ ವಿಚಾರಗಳನ್ನು ಅದು ಯೋಚಿಸಬಲ್ಲುದು, ಆವಿಷ್ಕರಿಸಬಲ್ಲುದು ಮತ್ತು ಎಂತೆಂತಹ ಘಟನೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು. ಅಷ್ಟೇ ಅಲ್ಲ, ಆನಂತರ ಯಾವಾಗ ಬೇಕು ಆಗ ಅದನ್ನು ಪುನಃ ಪ್ರಕಟಗೊಳಿಸುತ್ತವೆ ಅರ್ಥಾತ್ ಸ್ಮರಣೆಗೆ ತರುತ್ತದೆ. ಮೆದುಳನ್ನು ಇದಕ್ಕೆ ತಕ್ಕಂತೆ ಸೃಷ್ಟಿಕರ್ತನು ರೂಪಿಸಿ ದ್ದಾನೆ ಮತ್ತು ಅದರೊಳಗೆ ಅಂತಹ ಸಾಮರ್ಥ್ಯ ಇಟ್ಟಿದ್ದಾನೆ. ಇದರಂತೆಯೇ ಭೂಮಿ ಯನ್ನು ಅದರೊಳಗಿರುವ ಪ್ರತಿಯೊಂದು ವಿಷಯನ್ನು ಸಂರಕ್ಷಿಸಲ್ಪಟ್ಟು ಪರಲೋಕದಲ್ಲಿ ಪ್ರಕಟಗೊಳಿಸುವ ಗುಣವೈಶಿಷ್ಟ್ಯಗಳನ್ನು ಅಲ್ಲಾಹನು ಅದಕ್ಕೆ ನೀಡಿದ್ದಾನೆ. ಅವನ ಮುಂದೆ ಸಾಕ್ಷ್ಯ ನುಡಿಯಲಿಕ್ಕಿರುವವುಗಳು ಮರು ಸೃಷ್ಟಿಯಾಗುತ್ತವೆ. ಭೂಮಿಗೆ ಅವುಗಳನ್ನು ಹೊರಹಾಕುವ ಶಕ್ತಿ ಸಾಮರ್ಥ್ಯವನ್ನು ನೀಡಿದ್ದಾನೆ.

ಆದುದರಿಂದ ಈ ವಾಸ್ತವಿಕತೆಯ ಕುರಿತು ಪವಿತ್ರ ಕುರ್‌ಆನಿನಲ್ಲಿ ಬೆಳಕು ಈ ರೀತಿ ಚೆಲ್ಲಲಾಗಿದೆ. "ಭೂಮಿಯು ತನ್ನ ಸಂಪೂರ್ಣ ಉಗ್ರತೆಯೊಂದಿಗೆ ಕುಲುಕಲ್ಪಡುವಾಗ, ಭೂಮಿಯು ತನ್ನೊಳಗಿನ ಸಕಲ ಹೊರೆಗಳನ್ನು ಹೊರಹಾಕಿ ಬಿಡುವಾಗ ಮತ್ತು ಮನುಷ್ಯನು ಇದಕ್ಕೇನಾಗುತ್ತಿದೆ ಎನ್ನುವಾಗ. ಅಂದು ಅದು ತನ್ನ (ಮೇಲೆ ಗತಿಸಿದ) ಸ್ಥಿತಿಗತಿಗಳನ್ನು ವಿವರಿಸುವುದು. ಏಕೆಂದರೆ ನಿನ್ನ ಪ್ರಭು ಅದಕ್ಕೆ (ಹಾಗೆ ಮಾಡಬೇಕೆಂದು) ಅಪ್ಪಣೆ ಕೊಟ್ಟಿರುವನು. ಅಂದು ಜನರು ವಿಭಿನ್ನ ಸ್ಥಿತಿಗಳಲ್ಲಿ ಮರಳುವರು. (ಇದು) ಅವರ ಕರ್ಮಗಳು ಅವರಿಗೆ ತೋರಿಸಲ್ಪಡಲಿಕ್ಕಾಗಿ. ತರುವಾಯ ಅಣು ಗಾತ್ರದಷ್ಟು ಪುಣ್ಯ ಕಾರ್ಯವೆಸಗಿದವನು ಅದನ್ನು ಕಂಡೇ ತೀರು ವನು. ಮತ್ತು ಅಣು ಗಾತ್ರದಷ್ಟು ಪಾಪ ಕಾರ್ಯವೆಸಗಿದವನು ಅದನ್ನು ಕಂಡೇ ತೀರುವನು." (ಅಝ್ಝಿಲ್‌ಝಾಲ್: 1-8)

ಈ ವರೆಗಿನ ಚರ್ಚೆಯ ಸಂಕ್ಷಿಪ್ತ ಸಮಾರೋಪ:

1) ಪ್ರಪಂಚ ಸೃಷ್ಟಿಯ ಉದ್ದೇಶವೇ ಪರಲೋಕವನ್ನು ಸೂಚಿಸುತ್ತದೆ.

2) ಮನುಷ್ಯನ ಸೃಷ್ಟಿಯ ಉದ್ದೇಶ, ನ್ಯಾಯ ಮತ್ತು ಪ್ರತಿಫಲದಿನದ (ಪರಲೋಕದ) ಅನಿವಾರ್ಯತೆಯನ್ನು ಸೂಚಿಸುತ್ತದೆ.

3) ನ್ಯಾಯ, ಶಿಕ್ಷೆ, ಪ್ರತಿಫಲ ದಿನ ಇರಬೇಕು ಎಂಬುದು ಮನುಷ್ಯನ ಆತ್ಮಸಾಕ್ಷಿ ಮತ್ತು ಸ್ವಭಾವಕ್ಕೆ ಸಂಬಂಧಿಸಿದ ಪ್ರಬಲ ಬೇಡಿಕೆಯಾಗಿದೆ.

4) ನ್ಯಾಯದಾನದ ಯಾವುದೇ ಜಾಗ, ದಿನವಿರಬೇಕು. ಅಲ್ಲಿ ಸಂಪೂರ್ಣ

ನ್ಯಾಯದೊಂದಿಗೆ ನ್ಯಾಯ ಪ್ರದಾನ ನಡೆಯುವುದು. ವಿಚಾರಣೆ, ನ್ಯಾಯಸಹಿತ ತೀರ್ಮಾನ, ಶಿಕ್ಷೆ ಅಥವಾ ಪುರಸ್ಕಾರಗಳು ಸೃಷ್ಟಿಕರ್ತನ ನ್ಯಾಯದ ಮತ್ತು ಕರುಣೆಯ ಬೇಡಿಕೆಯಾಗಿದೆ.

ಇಹಲೋಕ ಪರೀಕ್ಷಾ ತಾಣ, ಪರಲೋಕ ಫಲಿತಾಂಶದ ತಾಣ:

ಪವಿತ್ರ ಕುರ್‌ಆನಿನ ಈ ಕೆಳಗಿನ ವಿವರಣೆಯನ್ನು ಗಮನಸಿರಿ.

"ಅವನು ಅತ್ಯಂತ ಮಂಗಲಮಯನು. ಅವನ ಕೈಯಲ್ಲಿ (ವಿಶ್ವದ) ಪ್ರಭುತ್ವವಿದೆ ಮತ್ತು ಅವನು ಸಕಲ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನಾಗಿದ್ದಾನೆ. ನಿಮ್ಮನ್ನು ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವನೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಆವಿಷ್ಕರಿಸಿದನು. ಅವನು ಪ್ರಬಲನೂ ಕ್ಷಮಾಶೀಲನೂ ಆಗಿರುತ್ತಾನೆ." (ಅಲ್‌ಮುಲ್ಕ್: 1–2)

"ತಮ್ಮ ಪ್ರಭುವನ್ನು ನಿಷೇಧಿಸಿದವರಿಗಾಗಿ ನರಕ ಯಾತನೆ ಇದೆ ಮತ್ತು ಅದು ಅತ್ಯಂತ ಕೆಟ್ಟ ವಾಸಸ್ಥಾನ." (ಅಲ್‌ಮುಲ್ಕ್: 6)

"ಕಣ್ಣಾರೆ ಕಾಣದೆ ತಮ್ಮ ಪ್ರಭುವನ್ನು ಭಯಪಡುವವರಿಗಾಗಿ ಖಂಡಿತವಾಗಿಯೂ ಕ್ಷಮೆ ಮತ್ತು ದೊಡ್ಡ ಪ್ರತಿಫಲ ಇದೆ." (ಅಲ್‌ಮುಲ್ಕ್: 12)

"ನಾವು ಮಾನವನನ್ನು ಒಂದು ಸಮ್ಮಿಶ್ರ ವೀರ್ಯದಿಂದ ಸೃಷ್ಟಿಸಿದೆವು. ಅವನನ್ನು ಪರೀಕ್ಷಿಸಲಿಕ್ಕಾಗಿ ಮತ್ತು ಈ ಉದ್ದೇಶದಿಂದ ನಾವು ಅವನನ್ನು ಆಲಿಸುವವನಾಗಿ ಹಾಗೂ ವೀಕ್ಷಿಸುವವನಾಗಿ ಮಾಡಿದೆವು. ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ. ಸತ್ಯ ನಿಷೇಧಿಗಳಿಗೆ ನಾವು ಸಂಕೋಲೆಗಳನ್ನೂ ಕಂಠಕಡಗಗಳನ್ನೂ ಧಗಧಗಿಸುವ ಅಗ್ನಿಯನ್ನೂ ಸಿದ್ಧಗೊಳಿಸಿಟ್ಟಿದ್ದೇವೆ. ಸಜ್ಜನರು (ಸ್ವರ್ಗದಲ್ಲಿ) ಕರ್ಪೂರ ಜಲ ಮಿಶ್ರಿತ ಪಾನಪಾತ್ರೆಯಿಂದ ಕುಡಿಯುವರು." (ಅದ್ದಹ್ರ್: 2–5)

"ವಾಸ್ತವದಲ್ಲಿ ಇವರ ಪೈಕಿ ಯಾರು ಉತ್ತಮ ಕರ್ಮಗಳನ್ನು ಮಾಡುತ್ತಾರೆಂದು ಪರೀಕ್ಷಿಸಲಿಕ್ಕಾಗಿ ನಾವು ಈ ಭೂಮಿಯಲ್ಲಿರುವ ಎಲ್ಲ ವಸ್ತುಗಳನ್ನು ಭೂಮಿಗೆ ಅಲಂಕಾರವನ್ನಾಗಿ ಮಾಡಿರುತ್ತೇವೆ. ಕಟ್ಟಕಡೆಗೆ ನಾವು ಇದನ್ನೆ ಅಂದು ಬಟ್ಟಬಯಲನ್ನಾಗಿ ಮಾಡಿ ಬಿಡುವವರಿದ್ದೇವೆ." (ಅಲ್‌ಹಜ್ಜ್: 7–8)

ಪರೀಕ್ಷಾ ಸಮಯದಲ್ಲಿ ಪರೀಕ್ಷೆ ಬರೆಯಲು ವಿದ್ಯಾರ್ಥಿಗೆ ಸಮಯವನ್ನು ಪರೀಕ್ಷಾ ಹಾಲ್‌ನಲ್ಲಿ ನಿಗದಿಗೊಳಿಸಲಾಗುತ್ತದೆಯಷ್ಟೇ. ಆ ಸಮಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ನಿಗದಿತ ಸಮಯದಲ್ಲಿ ತನ್ನ ಸಮಯವನ್ನು ಬಳಸಿಕೊಂಡು ಉತ್ತರಿಸಲು

ಕೊಟ್ಟಿರುವ ಬಿಳಿ ಹಾಳೆಗಳನ್ನು ಭರ್ತಿ ಮಾಡಲು ಸ್ವತಂತ್ರನಿದ್ದಾನೆ. ಅವನಾದರೋ ಒಂದೋ ಪ್ರಶ್ನೆಗಳಿಗೆ ಸರಿಯಾದ ಉತ್ತರ ಅಥವಾ ತಪ್ಪಾದ ಉತ್ತರವನ್ನೇ ನೀಡಬಹುದು. ಅಥವಾ ಏನನ್ನೂ ಬರೆಯದೆಯೂ ಇರಬಹುದು. ಪರೀಕ್ಷೆ ಬರೆದು ಸ್ವಲ್ಪ ದಿನಗಳ ನಂತರ ಪರೀಕ್ಷೆಯ ಫಲಿತಾಂಶ ಹೊರಬರುತ್ತದೆ. ಸರಿಯಾಗಿ ಉತ್ತರ ಬರೆದ ವಿದ್ಯಾರ್ಥಿಗಳು ಯಶಸ್ವಿಯಾಗುವರು. ಪಾಸಾಗುವರು. ಇದು ಅವರ ಸಂತೋಷಕ್ಕೆ ಕಾರಣವಾಗುವುದು. ಮತ್ತು ಅವರಿಗೆ ಗೌರವವೂ ದೊರೆಯುವುದು. ತಮ್ಮ ಮನಸ್ಸಿಗೆ ಬಂದಂತೆ ತಪ್ಪು ತಪ್ಪು ಉತ್ತರ ಬರೆದವರು ಸಹಜವಾಗಿ ಫೈಲಾಗುವರು. ಮುಜುಗರ ಮತ್ತು ಅವಮಾನಗಳನ್ನು ಅನುಭವಿಸಬೇಕಾಗುವುದು. ಮತ್ತು ಜನರು ಕೂಡ ಇವರ ಬಗ್ಗೆ ಉತ್ತಮ ಭಾವನೆ ಪ್ರಕಟಿಸಲಾರರು. ತಪ್ಪಾಗಿ ಬರೆದುದಕ್ಕೆ ಆದ ಪರಿಣಾಮ ಮತ್ತು ಅವಮಾನ ಇದು.

ಪರೀಕ್ಷೆಯ ಅವಧಿಯ ನಂತರವೇ ಅದರ ಫಲಿತಾಂಶ ಬರದಿದ್ದರೆ, ಹಾಳೆಯಲ್ಲಿ ಸರಿ ಮತ್ತು ತಪ್ಪು ಎರಡು ರೀತಿಯಲ್ಲಿ ಬರೆದವರ ಪರಿಣಾಮ ಒಂದೇ ರೀತಿಯಾದರೆ ಪ್ರಯೋಜನ ಏನು ಸಿಕ್ಕಂತಾಯಿತು. ಯಾರಿಗೆ ಏನೂ ಸಿಗಲಿಲ್ಲ. ಯಶಸ್ಸು ಇಲ್ಲ. ಫೈಲೂ ಆಗಿಲ್ಲ. ಗೌರವವೂ ಇಲ್ಲ, ಅವಮಾನವೂ ಇಲ್ಲ. ಇಂತಹ ಪರಿಸ್ಥಿತಿ ಎಂದಾದರೆ ಪರೀಕ್ಷಾ ಕೊಠಡಿ ಮಾಡಿದ್ದು, ಅಲ್ಲಿ ಪರೀಕ್ಷೆ ಬರೆಯಿಸಿದ್ದು, ಪ್ರಶ್ನೆ ಪತ್ರಿಕೆ ತಯಾರು ಮಾಡಿದ್ದು ಪರೀಕ್ಷೆ ಮಾಡುವುದು ವ್ಯರ್ಥ ಮತ್ತು ಅನಗತ್ಯ ಕಾರ್ಯವಾಗುತ್ತದೆ. ವ್ಯರ್ಥ ಕಾರ್ಯಗಳನ್ನು ಯಾರದೇ ಬುದ್ಧಿ, ಆತ್ಮಸಾಕ್ಷಿ ಇಚ್ಚಿಸಲಾರದು. ಮಾತ್ರವಲ್ಲ ಬಲವಾಗಿ ವಿರೋಧಿಸುತ್ತಾರೆ. ಜೊತೆಗೆ ಪರೀಕ್ಷೆ ಬರೆದ ಪರೀಕ್ಷಾರ್ಥಿಗೆ ನಿರಾಶೆ ಮೂಡುತ್ತದೆ. ಕೋಪ ಬರುತ್ತದೆ. ಪರೀಕ್ಷೆ ಬರೆಸಿದ ಮೇಲೆ ಅದಕ್ಕೆ ಸರಿಯಾದ ಪರಿಣಾಮ ಇರಲೇಬೇಕು ಮತ್ತು ಸರಿಯಾದ ಫಲಿತಾಂಶ ನೀಡಬೇಕಾದ್ದು ಅನಿವಾರ್ಯವಾಗಿದೆ.

ಇದೇ ರೀತಿ ಇಹಲೋಕ ಮತ್ತು ಇಹಲೋಕದ ಜೀವನವಾಗಿದೆ. ಇಲ್ಲಿ ಉತ್ತಮ ವಿಷಯಗಳೂ ಕೆಟ್ಟ ವಿಷಯಗಳೂ ಇವೆ. ಮನುಷ್ಯನ ಸ್ವಭಾವಗಳೇ ಅವುಗಳನ್ನು ಗುರುತಿಸಬಲ್ಲದು. ಉತ್ತಮವಾಗಿರುವುದನ್ನು ಉತ್ತಮವೆಂದೂ ಕೆಟ್ಟದ್ದನ್ನು ಕೆಟ್ಟದ್ದೆಂದೂ ಹೇಳಬಲ್ಲುದು. ಅಂದರೆ ಜಗತ್ತಿನಲ್ಲಿ ಉತ್ತಮ ಕೆಲಸ ಕೂಡ ಆಗುತ್ತ ಇರುತ್ತವೆ ಮತ್ತು ಕೆಟ್ಟ ಕೆಲಸಗಳು ಕೂಡ ಆಗುತ್ತಿರುತ್ತವೆ. ಮನುಷ್ಯನ ಸ್ವಭಾವ ಇಷ್ಟಪಡುವುದು ಮತ್ತು ಇಷ್ಟಪಡದಿರುವ ಕಾರ್ಯಗಳು ಜಗತ್ತಿನೊಳಗೆ ಸಂಭವಿಸುವುದು.

ಜಗತ್ತಿನಲ್ಲಿ ಮಾನವರ ಸೇವಾಕಾರ್ಯ ಮತ್ತು ಅವರ ಮೇಲೆ ದೌರ್ಜನ್ಯಗಳು ಕೂಡ ಜತೆ ಜತೆಗೆ ನಡೆಯುತ್ತಿರುತ್ತವೆಯಷ್ಟೇ. ಮಾನವ ಹಕ್ಕು ನಿರಾಕರಣೆ,

ಉಲ್ಲಂಘನೆಗಳು ಕೂಡಾ ಜೊತೆಯಲ್ಲೇ ನಡೆದುಬಿಡುತ್ತಿವೆ. ಆದರೆ ಇವುಗಳಲ್ಲಿ ನ್ಯಾಯವು ಮನುಷ್ಯ ಪ್ರಕೃತಿಯ ಬೇಡಿಕೆಯಾಗಿದೆ. ಆ ಬೇಡಿಕೆಯಲ್ಲಿ ಒಳ್ಳೆಯ ಕಾರ್ಯವೆಸಗಿದವರು ಪುರಸ್ಕೃತರಾಗುವುದು ಮತ್ತು ಕೆಟ್ಟ ಕಾರ್ಯವೆಸಗಿದವರು ಶಿಕ್ಷಿತರಾಗುವುದು ಅನಿವಾರ್ಯ. ಆದರೆ ಭೌತಿಕ ಜೀವನದಲ್ಲಿ ಆ ರೀತಿ ಸಂಭವಿಸುವುದು ಹೆಚ್ಚಾಗಿ ಕಂಡು ಬರುವುದಿಲ್ಲ. ಕೆಟ್ಟ ಕಾರ್ಯ ಮಾಡಿದವನಿಗೂ ಉತ್ತಮ ಕೆಲಸ ಮಾಡಿದವನಿಗೂ ಒಂದೇ ರೀತಿಯ ಪರಿಣಾಮಗಳೇ ಆಗುತ್ತಿರುವುದು ಹೆಚ್ಚಾಗಿ ಗೋಚರಿಸುತ್ತವೆ. ಹೀಗೆ ಆಗುವುದಾದರೆ ಅದಕ್ಕೆ ಅರ್ಥವೇ ಇಲ್ಲ.

ಅಂದರೆ ಈ ಜಗತ್ತು ಮತ್ತು ಇಹಲೋಕದ ಉದ್ದೇಶವೇ ಅರ್ಥ ಶೂನ್ಯವಲ್ಲವೇ ಎಂಬ ಪ್ರಶ್ನೆ ಯಾರದೇ ಮನಸ್ಸಿನೊಳಗೆ ಮೂಡಬಹುದು. ಈ ಜಗತ್ತನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿದವನು ಹಾಗೇಕೆ ಮಾಡಿದ? ಆದರೆ ಸೃಷ್ಟಿಕರ್ತನು ಇಹಲೋಕ ದೊಳಗೆ ಉತ್ತಮ ಮತ್ತು ಕೆಟ್ಟ ವಿಷಯಗಳನ್ನು ಇರಿಸಿದನು. ಮನುಷ್ಯರ ಸ್ವಭಾವಕ್ಕೆ ಒಳ್ಳೆಯದು ಮತ್ತು ಕೆಟ್ಟದ್ದನ್ನು ಗುರುತಿಸುವ ಶಕ್ತಿಯನ್ನು ತುಂಬಿದನು. ಇದಾದ ನಂತರ ಒಳ್ಳೆಯ ಮತ್ತು ಕೆಟ್ಟ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಿ ದನು. ಇವೆಲ್ಲವನ್ನು ಕೊಡುವ ಮೂಲಕ ಮನುಷ್ಯನನ್ನು ಪರೀಕ್ಷಿಸುವ ಉದ್ದೇಶವನ್ನು ಸೃಷ್ಟಿಕರ್ತನು ಹೊಂದಿದ್ದಾನೆ ಎಂಬ ವಿಚಾರವು ಮನವರಿಕೆಯಾಗುತ್ತದೆ. ಒಳ್ಳೆಯ ಕೆಲಸ ಮಾಡುವವರು ಮತ್ತು ಕೆಟ್ಟ ಕಾರ್ಯ ಮಾಡುವವರು ಎಂಬ ಮನುಷ್ಯರಿಗಿರುವ ಜೀವಿತಾವಧಿಯ ಪರೀಕ್ಷೆ ಇದಾಗಿದೆ.

ಒಂದು ವೇಳೆ ಈ ಜೀವನ ಅವಧಿಯಲ್ಲಿ ಪರೀಕ್ಷೆಗೆ ಫಲಿತಾಂಶ ಸಿಗುವುದಿಲ್ಲ ವೆಂದಾದರೆ ಸಹಜವಾಗಿ ಫಲಿತಾಂಶ ಪ್ರಕಟಗೊಳ್ಳುವುದಕ್ಕೆ ಇನ್ನೊಂದು ಸಮಯ ಇರುವುದು ಅನಿವಾರ್ಯವಾಗುತ್ತದೆ. ಅಂದರೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆದ ಪರೀಕ್ಷಾ ಹಾಲ್‌ನಲ್ಲಿಯೇ ಪರಿಣಾಮ ಸಿಗದಿರುವಂತೆ ಮತ್ತು ಪರೀಕ್ಷೆ ಮುಗಿದ ಮೇಲೆ ಕೆಲವು ಸಮಯ ಕಳೆದ ನಂತರ ಪರಿಣಾಮ ಘೋಷಿಸಲ್ಪಡುವಂತೆ ಇದು ಕೂಡ ಆಗಿದೆ. ಹೀಗಾಗಿ ಮನುಷ್ಯರಿಗೆ ಈ ಇಹಲೋಕ ಜೀವನವು ಪರೀಕ್ಷಾ ತಾಣ ವಾಗಿದೆ. ಈ ಜಗತ್ತಿನಲ್ಲಿ ಅರ್ಥಾತ್ ಇಹಲೋಕದಲ್ಲಿ ಪರೀಕ್ಷೆ ಬರೆಯುವ ಎಲ್ಲರಿಗೂ ಈ ಜಗತ್ತಿನ ಹೊರತಾದ ಇನ್ನೊಂದು ತಾಣದಲ್ಲಿ ಫಲಿತಾಂಶ ಘೋಷಿಸಲ್ಪಡುತ್ತದೆ.

ಮತ್ತು ಇಲ್ಲಿ ಹೇಗೆ ಪರೀಕ್ಷೆ ಬರೆಯುತ್ತಾರೋ ಅದರಂತೆ ವರದಿ ಪತ್ರವು ಅಲ್ಲಿ ಸಿಗುವುದು. ಅಲ್ಲಿ ಒಂದೋ ಅವನಿಗೆ ಸಂತೋಷದ ಅಥವಾ ಮುಜುಗರದ ಪರಿಸ್ಥಿತಿ ಒದಗುವುದು. ಈ ಲೋಕದಲ್ಲಿ ನ್ಯಾಯದೊಂದಿಗೆ ಪುರಸ್ಕಾರವಾಗಲಿ ಮತ್ತು ಶಿಕ್ಷೆಯಾಗಲಿ ಬಹುತೇಕ ಕಂಡು ಬರುವುದಿಲ್ಲ. ಜೊತೆಗೆ ಮನುಷ್ಯನು ಇಲ್ಲಿ

ವಿನಯಾನ್ವಿತನಾಗಿಯೇ ಏನಾದರೊಂದು ಮಾಡುತ್ತಿರುತ್ತಾನೆ. ಇವೆಲ್ಲವುಗಳಿಂದ ಫಲಿತಾಂಶ ಪ್ರಕಟಕ್ಕೆ ಇನ್ನೊಂದು ಜೀವನವಿದೆ ಮತ್ತು ಈಗ ಇಲ್ಲಿರುವ ಮನುಷ್ಯ ಜೀವನ ಪರೀಕ್ಷೆಯದ್ದೆಂದೇ ಅರ್ಥವಾಗುತ್ತದೆ. ಆದುದರಿಂದ ಮನುಷ್ಯನು ತನ್ನ ಕರ್ಮಗಳ ಮೂಲಕ ಪ್ರತೀ ಕ್ಷಣ ಕ್ಷಣವೂ ಪ್ರತಿಯೊಂದು ಸ್ಥಿತಿ ಪರಿಸ್ಥಿತಿಗಳಲ್ಲಿ ಸಕಲ ಸ್ಥಳಗಳಲ್ಲಿ ಪರೀಕ್ಷೆ ಬರೆಯುತ್ತಾನೆ ಎಂದಾಯಿತು. ತಪ್ಪು ಮತ್ತು ಸರಿಯಾದ ಕರ್ಮಗಳ ಮೂಲಕ ಉತ್ತಮ ಮತ್ತು ಕೆಟ್ಟದಾದ ಕರ್ಮಗಳ ಮೂಲಕ ಮತ್ತು ಇದರ ಸಂಪೂರ್ಣ ಪರಿಣಾಮಗಳು ಭೌತಿಕ ಜಗತ್ತಿನಲ್ಲಿ ಗೋಚರಿಸುವುದಿಲ್ಲ ಎಂದಾಯಿತು.

ಆದುದರಿಂದ ಮನುಷ್ಯನಿಗೆ ದೊರಕಿರುವ ಪ್ರಸ್ತುತ ಜೀವನ ಮತ್ತು ಈ ಭೌತಿಕ ಜಗತ್ತು ಅರ್ಥಾತ್ ಇಹಲೋಕ ಪರಿಣಾಮದ್ದಲ್ಲ. ಇಲ್ಲಿನ ಕರ್ಮಗಳಿಗೆ ಫಲಿತಾಂಶ ದೊರೆಯುವ ಲೋಕ ಬೇರೆಯೇ ಇದೆ. ಈ ಲೋಕವು ಕರ್ಮವೆಸಗಲಿಕ್ಕಿರುವುದು ಮತ್ತು ಪರೀಕ್ಷೆಯ ತಾಣವಾಗಿರುವುದು. ನಿಶ್ಚಯವಾಗಿಯೂ ಇಲ್ಲಿನ ಕರ್ಮಗಳಿಗೆ ಮತ್ತು ಇಲ್ಲಿನ ಪರೀಕ್ಷೆಯನ್ನು ಪೂರ್ಣಗೊಳಿಸುವ ಸಲುವಾಗಿ ಮನುಷ್ಯರಿಗಾಗಿ ಇನ್ನೊಂದು ಲೋಕ ಮತ್ತು ಇನ್ನೊಂದು ಜೀವನವು ·ಅಸ್ತಿತ್ವ ಪಡೆಯುವುದು ಆವಶ್ಯಕವೂ ಅನಿವಾರ್ಯವೂ ಆಗಿದೆ. ಅಲ್ಲಿ ಇಹಲೋಕದ ಕರ್ಮಗಳಿಗೆ ಪರೀಕ್ಷೆಯ ಪರಿಣಾಮ ಗೋಚರಿಸುತ್ತದೆ. ಅಂದರೆ ಅದು ಪ್ರತಿಫಲದ ಮತ್ತು ನ್ಯಾಯ ದಾನದ ದಿನ ಇರುವ ಲೋಕವಾಗಿದ್ದು ಶಿಕ್ಷೆ ಮತ್ತು ಪುರಸ್ಕಾರವನ್ನು ಪಡೆಯುವ ಜಾಗವೂ ಜೀವನವೂ ಆಗಿದೆ. ಇದನ್ನೇ ಆಖಿರತ್ (ಪರಲೋಕ) ಎಂದು ಕರೆಯಲಾಗುತ್ತದೆ.

ಇಹಲೋಕದ ಜೀವನಕ್ಕೆ ಪರಿಣಾಮವಿದೆ ಮತ್ತು ಪರಲೋಕದಲ್ಲಿ ಪುರಸ್ಕಾರ-ಶಿಕ್ಷೆಗಳಿವೆ ಎಂದಾದಾಗಲೇ ಇಹಲೋಕ ಜೀವನ ಉದ್ದೇಶಯುತವಾದುದು ಆಗುವುದು. ಇಲ್ಲದಿದ್ದರೆ ಈಗಿರುವ ಇಹಲೋಕದ ಮನುಷ್ಯರ ಜೀವನ ಉದ್ದೇಶರಹಿತವಾಗಿ ಬಿಡುತ್ತದೆ. ಇಹಲೋಕ ಮತ್ತು ಜೀವನವನ್ನು ನೀಡಿದವನು ಉದ್ದೇಶರಹಿತ ಕಾರ್ಯ ಮಾಡಿದ್ದಾನೆ ಎಂಬ ಆರೋಪ ಹುಟ್ಟಿಕೊಳ್ಳುತ್ತದೆ. ಈ ವಾಸ್ತವಿಕತೆಗಳು ಈ ಇಹ ಜೀವನಕ್ಕೆ ಉದ್ದೇಶ ಇದೆ ಎಂಬುದನ್ನೇ ವ್ಯಕ್ತಪಡಿಸುತ್ತಿವೆ. ನಿಶ್ಚಯವಾಗಿಯೂ ಇದೊಂದು ಪರೀಕ್ಷೆಯ ಜೀವನವಾಗಿದೆ. ಇಲ್ಲಿ ಪರೀಕ್ಷೆ ನಡೆಯುತ್ತಿದ್ದು ಇನ್ನೊಂದು ಜೀವನವು ಪರಿಣಾಮಗಳು ಮತ್ತು ಬಹುಮಾನಗಳು ಮತ್ತು ಶಿಕ್ಷೆಗಳಿರುವಂಥದ್ದು. ಈ ಲೋಕದ ಜೀವನದ ಪರೀಕ್ಷಾ ತಾಣ ಕೊನೆಗೊಳ್ಳುತ್ತದೆ ಮತ್ತು ತದನಂತರ ಆ ಲೋಕ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ. ಪ್ರಪಂಚ ಸೃಷ್ಟಿಕರ್ತನ ಮನುಷ್ಯರಿಗಾಗಿರುವ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ಈ ವಾಸ್ತವಿಕತೆಗಳನ್ನು ಸುಸ್ಪಷ್ಟವಾಗಿ ವಿವರಿಸಿದೆ. ಈ ಜಗತ್ತಿಗಿರುವ ಸ್ಥಾನಮಾನ ಪರೀಕ್ಷಾ ತಾಣ ಎಂಬುದು. ಪರಲೋಕದ

ಸ್ಥಾನಮಾನ ಪರಿಣಾಮ ಪ್ರಕಟಗೊಳ್ಳುವ ತಾಣ ಎಂಬುದು. ಇದು ಮನುಷ್ಯ ಪ್ರಕೃತಿಯ ಸಹಜ ಬೇಡಿಕೆಯೂ ಹೌದು.

ಮನುಷ್ಯನಿಗೆ ಇಲ್ಲಿರುವ ದೊಡ್ಡ ಪರೀಕ್ಷೆ, ತನ್ನ ಸೃಷ್ಟಿಕರ್ತನನ್ನು ಗುರುತಿಸುವುದು ಮತ್ತು ಅವನಲ್ಲಿ ವಿಶ್ವಾಸ ಇರಿಸುವುದು ಆಗಿರುತ್ತದೆ. ಸರಿಯಾಗಿ ಹೇಳುವುದಿದ್ದರೆ, ಇದಕ್ಕಿಂತ ಮಿಗಿಲಾದ ಯಾವುದೇ ಪರೀಕ್ಷೆಗಳಿಲ್ಲ. ಈ ಪರೀಕ್ಷೆಯಲ್ಲಿ ಮನುಷ್ಯ ಒಂದು ವೇಳೆ ಉತ್ತೀರ್ಣನಾದರೆ ಸರಿ. ಇಲ್ಲ, ಅನುತ್ತೀರ್ಣನಾದರೆ ಪ್ರತಿಯೊಂದು ಪರೀಕ್ಷೆಗಳಲ್ಲೂ ಅವನು ಅನುತ್ತೀರ್ಣನೂ ವಿಫಲನೂ ಆಗುವನು. ಆದುದರಿಂದ ಈ ದೊಡ್ಡ ಪರೀಕ್ಷೆಯ ಜೊತೆಯೇ ನಿಜವಾದ ಕೊಡುಗೆ ಮತ್ತು ಬಹುಮಾನ ಜೋಡಿಕೊಂಡಿದೆ ಎನ್ನಬಹುದು.

ಪ್ರಪಂಚ ಸೃಷ್ಟಿಕರ್ತನು ಮನುಷ್ಯನ ಕಣ್ಣಿವೆಯಿಂದ ಮರೆಯಾಗಿರುವವನು, ಅಂದರೆ ಮನುಷ್ಯರ ಪರೀಕ್ಷೆ ಮಾಡುವುದು. ಮತ್ತು ಪರೀಕ್ಷೆಯ ಸಿದ್ಧತೆಗಾಗಿ ಸಕಲ ಸೌಲಭ್ಯಗಳನ್ನು ಸುಲಭವಾಗಿ ಮತ್ತು ಸರಿಯಾಗಿ ಒದಗಿಸುವ ವ್ಯವಸ್ಥೆ ಮಾಡಿದ್ದಾನೆ. ಆ ಪರೀಕ್ಷೆಯ ಉದ್ದೇಶ ಏನೆಂಬುದಾಗಿ ಅಲ್ಲಾಹನು ತನ್ನ ಗ್ರಂಥ ಪವಿತ್ರ ಕುರ್‌ಆನ್ ನಲ್ಲಿ ಈ ರೀತಿ ಸ್ಪಷ್ಟಪಡಿಸಿದ್ದಾನೆ, "ನಾವು ಮಾನವರನ್ನು ಒಂದು ಸಮ್ಮಿಶ್ರ ವೀರ್ಯ ದಿಂದ ಸೃಷ್ಟಿಸಿದೆವು. ಅವನನ್ನು ಪರೀಕ್ಷಿಸಲಿಕ್ಕಾಗಿ ಮತ್ತು ಈ ಉದ್ದೇಶದಿಂದ ನಾವು ಅವನನ್ನು ಆಲಿಸುವವನಾಗಿ ಹಾಗೂ ವೀಕ್ಷಿಸುವವನಾಗಿ ಮಾಡಿದೆವು. ನಾವು ಅವ ನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ." (ಅದ್ದಹ್ರ್: 2–3)

"ನಿಮ್ಮನ್ನು ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮ ಎಸಗುವವನೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಆವಿಷ್ಕರಿಸಿದನು. ಅವನು ಪ್ರಬಲನೂ ಕ್ಷಮಾಶೀಲನೂ ಆಗಿರುತ್ತಾನೆ." (ಅಲ್‌ಮುಲ್ಕ್: 2)

ಇನ್ನು ಮನುಷ್ಯನು ಪರೀಕ್ಷೆಯಲ್ಲಿ ಯಶಸ್ವಿಯಾಗಲು ಮತ್ತು ಉತ್ತೀರ್ಣನಾಗಲು ಅವನು ಪ್ರಪಂಚದ ಸೃಷ್ಟಿಕರ್ತನಾದ ಅಲ್ಲಾಹನ ನಿದರ್ಶನ-ಚಿಹ್ನೆಗಳತ್ತ ಗಮನ ಹರಿಸಿದರೆ ಸಾಲುವುದು. ಆ ಸತ್ಯದೆಡೆಗೆ ಮನುಷ್ಯನು ಬಹಳ ಸುಲಭವಾಗಿ ತಲುಪಿ ಬಿಡಬಹುದು. ಅಲ್ಲಾಹನೇ ಪ್ರಪಂಚ ಸೃಷ್ಟಿಕರ್ತ. ಅವನೇ ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ತನ್ನ ಶಕ್ತಿ ಸಾಮರ್ಥ್ಯ ಮತ್ತು ತನ್ನ ಕೃಪೆ ಮತ್ತು ತನ್ನ ಮಹದುಪಕಾರ ಗಳ ಕಡೆಗೆ ಸೂಚನೆ ನೀಡುತ್ತಾನೆ. ಯಾಕೆಂದರೆ ಮನುಷ್ಯರು ವಿಶ್ವದ ಸೃಷ್ಟಿಕರ್ತನ ಕುರಿತು ಅನುಭವವನ್ನು ಮಾಡಿಕೊಳ್ಳಬೇಕು. ಗುರುತಿಸಬೇಕು ಮತ್ತು ವಿಶ್ವಾಸ ಇರಿಸ ಬೇಕು ಎಂದು ಹೇಳುತ್ತಾನೆ.

"ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳಿಗೆ ಭೂಮಿ ಆಕಾಶಗಳಲ್ಲಿ ಅನೇಕ ನಿದರ್ಶನಗಳಿವೆ. ನಿಮ್ಮ ಸ್ವಂತ ಸೃಷ್ಟಿಯಲ್ಲಿ ಮತ್ತು (ಭೂಮಿಯ ಮೇಲೆ) ಅಲ್ಲಾಹನು ಹಬ್ಬಿಸುತ್ತಿರುವ ಪ್ರಾಣಿಗಳಲ್ಲಿ, ದೃಢ ನಂಬಿಕೆಯುಳ್ಳವರಿಗೆ ದೊಡ್ಡ ನಿದರ್ಶನಗಳಿವೆ. ರಾತ್ರೆ ಹಗಲುಗಳ ವ್ಯತ್ಯಾಸದಲ್ಲಿ, ಅಲ್ಲಾಹನು ಆಕಾಶದಿಂದ ಜೀವನಾಧಾರವನ್ನಿಳಿಸಿ ಆ ಮೂಲಕ ಸತ್ತ ಭೂಮಿಯನ್ನು ಜೀವಂತಗೊಳಿಸುವುದರಲ್ಲಿ ಮತ್ತು ಮಾರುತಗಳ ಸಂಚಲನದಲ್ಲಿ ಬುದ್ಧಿ ಶಕ್ತಿಯುಳ್ಳವರಿಗೆ ಅನೇಕ ನಿದರ್ಶನಗಳಿವೆ. ಇವು ಅಲ್ಲಾಹನ ನಿದರ್ಶನಗಳಾಗಿದ್ದು, ಇವುಗಳನ್ನು ನಾವು ನಿಮ್ಮ ಮುಂದೆ ಸುವ್ಯಕ್ತವಾಗಿ ವಿವರಿಸುತ್ತಿದ್ದೇವೆ. ಹೀಗಿರುತ್ತಾ ಅಲ್ಲಾಹನ ಹಾಗೂ ಅವನ ವಚನಗಳ ಬಳಿಕ ಇನ್ನಾವ ವಿಷಯದ ಮೇಲೆ ಜನರು ವಿಶ್ವಾಸ ಇರಿಸುವರು." **(ಅಲ್‌ಜಾಸಿಯ: 2–6)**

"ಅಲ್ಲಾಹನೇ ನಿಮಗಾಗಿ ಸಮುದ್ರವನ್ನು ನಿಯಂತ್ರಿಸಿ, ಅವನ ಅಪ್ಪಣೆಯಿಂದ ಅದರಲ್ಲಿ ನಾವೆಗಳು ಚಲಿಸುವಂತೆಯೂ ನೀವು ಅವನ ಅನುಗ್ರಹವನ್ನರಸುವಂತೆಯೂ ಕೃತಜ್ಞರಾಗುವಂತೆಯೂ ಮಾಡಿರುವನು. ಅವನು ಭೂಮಿ ಮತ್ತು ಆಕಾಶಗಳ ಸಕಲ ವಸ್ತುಗಳನ್ನು ನಿಮಗಾಗಿ ನಿಯಂತ್ರಿಸಿಕೊಟ್ಟನು. ಇವೆಲ್ಲವನ್ನೂ ತನ್ನ ಕಡೆಯಿಂದಲೇ ಮಾಡಿದನು. ಆಲೋಚಿಸುವ ಜನರಿಗೆ ಇದರಲ್ಲಿ ಧಾರಾಳ ನಿದರ್ಶನಗಳಿವೆ."

(ಅಲ್ ಜಾಸಿಯ: 12–13)

ಈ ಪರೀಕ್ಷೆಯಲ್ಲಿ ಯಶಸ್ಸಿಗೆಂದೇ ಮನುಷ್ಯನಲ್ಲಿ ಆತ್ಮಸಾಕ್ಷಿಯನ್ನು ಇರಿಸಲಾಗಿದೆ. ಕೆಡುಕಿನಿಂದ ಎಚ್ಚರಿಸಿ ನೇರ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಕಾರ್ಯವನ್ನು ಅದು ಮಾಡುವುದು. ಮತ್ತೆ ಈ ಆತ್ಮಸಾಕ್ಷಿಯನ್ನೇ ಹೆಚ್ಚು ಸಂವೇದನಾಶೀಲಗೊಳಿಸಿ ಸತ್ಯಾಸತ್ಯಗಳ ವಿವೇಚಕ ಎಂದು ಕರೆಯಲಾಯಿತು. ಪವಿತ್ರ ಗ್ರಂಥವಾದ ಪವಿತ್ರ ಕುರ್‌ಆನನ್ನು ಸತ್ಯಾಸತ್ಯಗಳ ವಿವೇಚಕವೆನ್ನಲಾಗುತ್ತದೆ. ಮನುಷ್ಯನ ಜೀವನದಲ್ಲಿ ಯಾವುದು ಸರಿಯಾದುದು ಮತ್ತು ಯಾವುದು ಕೆಟ್ಟದು ಎಂದು ಪವಿತ್ರ ಕುರ್‌ಆನ್ ವಿವರಿಸುತ್ತಿದೆ. ಮರಣಾನಂತರದ ಶಾಶ್ವತ ಜೀವನ ಇರುವುದರ ಅರಿವು ಮೂಡಿಸುತ್ತದೆ. ಆ ಜಿವನಕ್ಕಾಗಿ ಯಾವ ರೀತಿ ತಯಾರಿ ನಡೆಸಬೇಕು ಎಂದು ಅದ್ದಹ್ರ್ ಅಧ್ಯಾಯದ 3ನೇ ವಚನದಲ್ಲಿ, ನಾವು ನಿಮಗೆ ನೇರದಾರಿ ತೋರಿಸಿದೆವು ಮತ್ತು ಆಯ್ಕೆ ಸ್ವಾತಂತ್ರ್ಯ ಕೊಟ್ಟೆವು ಎಂದು ಸಾರಲಾಗಿದೆ.

ಮನುಷ್ಯನಿಗೆ ಅವನು ಬಯಸಿದ ದಾರಿಯನ್ನು ಸ್ವೀಕರಿಸಬಹುದೆಂದು ಇದರಲ್ಲಿ ಸ್ಪಷ್ಟವಾಗುತ್ತಿದ್ದು ಇಹಲೋಕ ಜೀವನದಲ್ಲಿ ಮನುಷ್ಯನ ಪರೀಕ್ಷೆ ನಡೆಯುತ್ತದೆ. ಈ ಪರೀಕ್ಷೆಯ ಫಲಿತಾಂಶ ಪ್ರಕಟಕ್ಕೆ ಇನ್ನೊಂದು ಲೋಕವಿದೆ. ಅದು ಪರಲೋಕ. ಅಲ್ಲಿ ಪುರಸ್ಕೃತನು ಯಾರು ಮತ್ತು ಶಿಕ್ಷೆಗರ್ಹನು ಯಾರೆಂಬ ಫಲಿತಾಂಶ ಹೊರ

ಬರುತ್ತದೆ. ಹೀಗಾಗಿ ಮನುಷ್ಯರಿಗೆ ಮರಣಾನಂತರ ಇನ್ನೊಂದು ಜೀವನ ನಿಶ್ಚಿತವಾಗಿದೆ ಎಂದು ತಿಳಿದು ಬರುತ್ತದೆ.

ಪ್ರತಿಫಲಗಳ ದಿನ ಎಂಬುದು ಪರೀಕ್ಷೆಯ ಬೇಡಿಕೆಯಾಗಿದೆ

ಇಹಲೋಕ ಪರೀಕ್ಷಾ ಕೇಂದ್ರವಾಗಿದ್ದು ಪರೀಕ್ಷೆಯ ಪರಿಣಾಮ ಪ್ರಕಟವಾಗಲಿರುವ ದಿನ ಬಂದ ಮೇಲೆಯೇ ಆ ಪರೀಕ್ಷೆಯಲ್ಲಿ ಯಾರು ಉತ್ತೀರ್ಣ ಮತ್ತು ಅನುತ್ತೀರ್ಣ ಆಗಿದ್ದಾರೆಂಬ ಕುರಿತ ಫಲಿತಾಂಶವು ಪ್ರಕಟಗೊಳ್ಳುತ್ತದೆ ಮತ್ತು ಈ ಫಲಿತಾಂಶದಲ್ಲಿ ಸ್ವರ್ಗ ಅಥವಾ ನರಕ ಅಂದು ತೀರ್ಮಾನವಾಗುವುದು.

ಇದೇ ವೇಳೆ ಪವಿತ್ರ ಕುರ್‌ಆನಿನ ಮುಲ್ಕ್ ಅಧ್ಯಾಯದ 3ನೆಯ ವಚನವು ಪ್ರಯತ್ನಿಸಿ ನೋಡಿ ಎಂದು ಸೂಚಿಸಿದೆ. ಅದರರ್ಥ ಮನುಷ್ಯರಿಗೆ ಪರೀಕ್ಷೆಯ ಅವಧಿಯಿದ್ದು ಅದು ಇಹಲೋಕದ ಜೀವನವಾಗಿದೆ ಎಂದಾಗಿದೆ. ಇಹಲೋಕದ ಜೀವನದಲ್ಲಿ ಸಂಭವಿಸುವ ಮರಣವು ಮನುಷ್ಯನ ಪರಿಕ್ಷೆಯ ಅವಧಿ ಮುಗಿಯಿತು ಎಂಬುದನ್ನು ಸೂಚಿಸಿಸುತ್ತದೆ. ಆನಂತರ ವಿಚಾರಣೆ ಎದುರಿಸಲಿಕ್ಕಿದೆ ತದನಂತರ ಪರಿಣಾಮ ಘೋಷಣೆಯ ದಿನ ಬರುವುದು. ಅದು ಯೌಮುಲ್ ಹಿಸಾಬ್ (ಲೆಕ್ಕಾಚಾರಗಳ ದಿನ) ಆಗಿದೆ. ಮತ್ತೊಮ್ಮೆ ಮನುಷ್ಯರನ್ನು ಜೀವಂತಗೊಳಿಸಿ (ಪುನರುತ್ಥಾನಗೊಳಿಸಿ) ಸಕಲ ಮನುಷ್ಯರಿಗೂ ಅವರ ಪರೀಕ್ಷೆಯ ಅರ್ಥಾತ್ ಕರ್ಮಗಳಿಗೆ ಯಾವ್ಯಾವ ಪರಿಣಾಮವೆಂಬುದನ್ನು ಅಂದು ತಿಳಿಸಲಾಗುವುದು. ಅಂದು ಪುರಸ್ಕರಿಸಲ್ಪಡುವವರು ಸ್ವರ್ಗವನ್ನೂ ಮತ್ತು ಶಿಕ್ಷಿಸಲ್ಪಡುವವರು ನರಕವನ್ನೂ ಪಡೆಯುವರು. ಪರಿಣಾಮದ ನಂತರ ಸಿಗುವ ಜೀವಿತಾವಧಿಯು ಪರೀಕ್ಷಾ ಅವಧಿಗಿಂತ (ಭೂಮಿಯ ಜೀವನಕ್ಕಿಂತ) ನಿಶ್ಚಯವಾಗಿಯೂ ಅದು ಹೆಚ್ಚಿನ ಅವಧಿಯಾಗಿರುತ್ತದೆ. ಜಗತ್ತಿನ ಪರೀಕ್ಷೆಗಳನ್ನು ಎದುರಿಸಿ ಪಾರಂಗತರಾಗಿ ಪದವಿ ಪಡೆದುಕೊಂಡಂತೆ. ಪುನರುತ್ಥಾನದ ನಂತರದ ಜೀವನವು ದೀರ್ಘಾವಧಿಯದ್ದಾಗಿರುತ್ತದೆ.

ಪರೀಕ್ಷಾರ್ಥಿಯ ಉತ್ತಮ ಕರ್ಮ ಅಥವಾ ಪರೀಕ್ಷೆ ಉತ್ತಮ ನಿರ್ವಹಣೆಯಾಗಿರುತ್ತದೆ. ಪರೀಕ್ಷೆ ನಡೆಸುವವನಲ್ಲಿ ನಂಬಿಕೆಯಿಟ್ಟು ಅವನು ತೋರಿಸಿದ ಮಾರ್ಗದರ್ಶನದ ಆಧಾರದಲ್ಲಿ ಪರೀಕ್ಷೆ ಬರೆದಲ್ಲಿ ಪರಿಣಾಮವೂ ಉತ್ತಮವಾಗಿರುತ್ತದೆ. ಪರೀಕ್ಷಾರ್ಥಿಗಳು ಉತ್ತಮ ಫಲಿತಾಂಶ ಪಡೆಯಬೇಕೆಂದೇ ಅವನು ಜನರೆಡೆಗೆ ತನ್ನ ಗ್ರಂಥ ಮತ್ತು ಸಂದೇಶವಾಹಕರಾದ ಪ್ರವಾದಿ ಮುಹಮ್ಮದ್‌ರನ್ನು(ಸ) ನಿಯೋಜಿಸಿದನು. ಅಲ್ಲಾಹನು ಇಚ್ಛಿಸಿದಂತೆ ಜನರು ಕರ್ಮವೆಸಗಬೇಕೆಂದೇ ಈ ವ್ಯವಸ್ಥೆಯನ್ನು ರೂಪಿಸಿರುವನು. ಸಂದೇಶವಾಹಕರು(ಸ) ತೋರಿಸಿಕೊಟ್ಟಿರುವುದನ್ನು ಅನುಸರಿಸಿ ಕರ್ಮವೆಸಗುವುದು ಇತರರಿಗೆ ಸುಲಭವಾಗಿರುತ್ತದೆ. ಅವರನ್ನು ತೋರಿಸಿದ ವಿಧಾನದಂತೆ ಕರ್ಮವು

ಮನುಷ್ಯರಿಗೆ ಯಶಸ್ಸನ್ನು ಖಚಿತಗೊಳಿಸುತ್ತದೆ. ಯಾಕೆಂದರೆ ಪವಿತ್ರ ಕುರ್‌ಆನಿನ ಶಿಕ್ಷಣಗಳಂತೆ ಪ್ರವಾದಿಯ(ಸ) ಕರ್ಮಗಳು (ಜೀವನ ಚರ್ಯೆಯು) ಇದೆ. ಅಂದರೆ ಅಲ್ಲಾಹನ ಶಿಕ್ಷಣಗಳ ಪ್ರಕಾರವೇ ಪ್ರವಾದಿವರ್ಯರ(ಸ) ಜೀವನ ಯಥಾ ರೂಪದಲ್ಲಿದೆ. ಆದುದರಿಂದ ಪರೀಕ್ಷಾರ್ಥಿಗಳ ಮುಂದೆ ಪ್ರವಾದಿ ಮುಹಮ್ಮದ್‌ರ(ಸ) ಜೀವನವು ತೆರೆದ ಗ್ರಂಥದಂತೆ ಉಪಸ್ಥಿತವಿದೆ ಮತ್ತು ಪವಿತ್ರ ಕುರ್‌ಆನ್ ಕೂಡ ಮುಕ್ತವಾಗಿ ಲಭ್ಯವಿದೆ. ಆದುದರಿಂದ ಮನುಷ್ಯರು ಪ್ರತೀ ಕ್ಷಣವೂ ಸಕಲ ಕರ್ಮಗಳಲ್ಲಿ ಅವರು ಬಯಸಿದರೆ ಪ್ರವಾದಿವರ್ಯರನ್ನು(ಸ) ಅನುಸರಿಸಬಹುದಾಗಿದೆ. ಇಷ್ಟೆಲ್ಲ ವ್ಯವಸ್ಥೆ ಕೈಗೆಟಕುವಂತೆ ಮುಕ್ತವಾಗಿದ್ದೂ ಸರಿಯಾಗಿ ಯಾರಾದರೂ ಪರೀಕ್ಷೆ ಬರೆಯುವುದಿಲ್ಲ ಎಂದಾದರೆ ಅದು ಅವರ ಸ್ವಯಂ ಕೃತ ದುರದೃಷ್ಟವಾಗಿದೆ.

ಅಂತ್ಯದಿನ

ನಿಶ್ಚಯವಾಗಿಯೂ ಲೋಕಾಂತ್ಯ ದಿನ ಇರಲೇಬೇಕಾಗಿದೆ. ಯಾಕೆಂದರೆ ಮನುಷ್ಯರಲ್ಲಿ ಯಾರೆಲ್ಲ ತಮ್ಮ ಪ್ರಭುವನ್ನು ಗುರುತಿಸಿ ಅವನಿಗೆ ವಿಧೇಯರಾಗಿ ಉತ್ತಮ ಮನುಷ್ಯರಾಗಿ ಮಾರ್ಪಟ್ಟರೋ ಅವರಿಗೆ ಪಾರಿತೋಷಕ (ಕರ್ಮಗಳಿಗೆ ತಕ್ಕ ಪ್ರತಿಫಲ) ಸಿಗುವುದು ಅತೀ ಆವಶ್ಯಕವೂ ಅದರಂತೆ ಯಾರು ತಮ್ಮ ಪ್ರಭುವನ್ನು ನಿರಾಕರಿಸಿದರು ಮತ್ತು ಪ್ರಭುವಿನ ಆಜ್ಞಾದೇಶಗಳನ್ನು ಉಲ್ಲಂಘಿಸಿದರು, ಬಂಡಾಯವೆಸಗಿದರು, ಕೆಟ್ಟ ಕರ್ಮ (ಕೆಲಸಗಳನ್ನು) ಮಾಡಿದರು ಅವರು ಶಿಕ್ಷಿಸಲ್ಪಡಬೇಕಾದುದು ಅತ್ಯವಶ್ಯಕವಾಗಿದೆ.

ಆದುದರಿಂದ ಅಂತ್ಯದಿನ ನಿಶ್ಚಯವಾಗಿಯೂ ಬಂದೇ ತೀರುವುದು. ಈ ಬಗ್ಗೆ ಅಲ್ಲಾಹನು ಪವಿತ್ರ ಕುರ್‌ಆನ್‌ನಲ್ಲಿ ಪ್ರವಾದಿಯವರ(ಸ) ಮೂಲಕ ಹೀಗೆ ತಿಳಿಸಿದ್ದಾನೆ, "ಪರೋಕ್ಷ ಜ್ಞಾನಿಯಾದ ನನ್ನ ಪ್ರಭುವಿನಾಣೆಗೂ ಅದು ನಿಮ್ಮ ಮೇಲೆ ಬಂದೇ ತೀರುವುದು." (ಸಬಾ: 3)

ಈ ರೀತಿ ಪರೋಕ್ಷಕ್ಕೆ ಸಂಬಂಧಿಸಿದ ಲೋಕಾಂತ್ಯ ದಿನದ ಕುರಿತು ಪರೋಕ್ಷ ಜ್ಞಾನಿಯೂ ಲೋಕಾಂತ್ಯವನ್ನು ತರುವವನು (ಅಲ್ಲಾಹನು) ಅದು ಖಂಡಿತ ಸಂಭವಿಸುವುದು ಎಂದು ತಿಳಿಸುತ್ತಾನೆ. ಮತ್ತು ಈ ಕೆಳಗಿನ ವಚನಗಳಲ್ಲಿ ಅದು ಯಾಕೆ ಸಂಭವಿಸುವುದೆಂದು ವಿವರಿಸುತ್ತಾನೆ.

"ಪುನರುತ್ಥಾನ ದಿನವು ಸತ್ಯವಿಶ್ವಾಸವನ್ನು ಸ್ವೀಕರಿಸಿದವರಿಗೂ ಸತ್ಕರ್ಮಗಳನ್ನೆಸಗಿದವರಿಗೂ ಪ್ರತಿಫಲ ನೀಡಲಿಕ್ಕಾಗಿ ಬರುವುದು. ಅವರಿಗಾಗಿ ಕ್ಷಮೆಯೂ ಸನ್ಮಾನ್ಯ ಜೀವನಾಧಾರವೂ ಇದೆ. ನಮ್ಮ ಸೂಕ್ತಗಳನ್ನು ಕೀಳಾಗಿಸಲು ಶ್ರಮಿಸಿದವರಿಗೆ ಅತೀ ನಿಕೃಷ್ಟ ತರದ ವೇದನಾತ್ಮಕ ಯಾತನೆ ಇದೆ." (ಸಬಾ: 4–5)

ಮನುಷ್ಯರಲ್ಲಿ ಒಳ್ಳೆಯವರು, ಕೆಟ್ಟವರು ಇರುವಂತೆ ವಸ್ತುಗಳಲ್ಲಿಯೂ ಉತ್ತಮ, ಕೆಟ್ಟದು ಎಂಬುದಿದೆ. ಇದರ ವ್ಯತ್ಯಾಸವನ್ನು ಪ್ರತ್ಯೇಕಿಸಿ ಉತ್ತಮವಾದುವುಗಳಿಗೆ ಪಾರಿತೋಷಕವೂ ಕೆಟ್ಟವುಗಳಿಗೆ ಶಿಕ್ಷೆಯೂ ಅಲ್ಲಾಹನ ಆದೇಶವಾಗಿದೆ. ಅಲ್ಲಾಹನು ಮನುಷ್ಯರನ್ನು ಸೃಷ್ಟಿಸಿ ಈ ಎಲ್ಲ ಗುಣಗಳನ್ನು ಅವನೊಳಗೆ ಇರಿಸಿದ್ದಾನೆ. ಆದ್ದರಿಂದ ಒಳ್ಳೆಯ ಕರ್ಮವೆಸಗುವ ಉತ್ತಮರು ಮತ್ತು ಕೆಟ್ಟ ಕರ್ಮವೆಸಗುವ ಕೆಟ್ಟವರ ನಡುವೆ ಅಂತರವಿರಿಸುತ್ತಾನೆ. ಆದುದರಿಂದ ತಕ್ಕ ಪ್ರತಿಫಲ ನೀಡುವ ದಿನವನ್ನು ಅವರಿಗೆ ನಿಗದಿಗೊಳಿಸಿರುವನು. ಒಂದೋ ಪುರಸ್ಕರಿಸಲ್ಪಡುವರು ಇಲ್ಲವೇ ಶಿಕ್ಷಿಸಲ್ಪಡುವರು.

ನಿಶ್ಚಯವಾಗಿಯೂ ಇಹಲೋಕವನ್ನು ಅಂದರೆ ಭೌತಿಕ ಜಗತ್ತನ್ನು ಅಲ್ಲಾಹನು ನ್ಯಾಯದಾನ ಮತ್ತು ಪ್ರತಿಫಲ ನೀಡುವ ಸಲುವಾಗಿ ಕೊನೆಗೊಳಿಸುತ್ತಾನೆ. ಮನುಷ್ಯರ ಕರ್ಮಗಳ ನ್ಯಾಯ ಪರಿಶೀಲಿಸುವ ಸಲುವಾಗಿ ಹೊಸದಾದ ಜಗತ್ತನ್ನೇ ಆಸ್ತಿತ್ವಕ್ಕೆ ತರುತ್ತಾನೆ. ಇಹಲೋಕ ಜೀವನದಲ್ಲಿನ ಒಳ್ಳೆಯ ಮತ್ತು ಕೆಟ್ಟ ಕರ್ಮಗಳಿಗೆ ಪ್ರತಿಫಲ ಸಿಗದಿದ್ದರೆ ಕುರಣಾನಿಧಿಯೂ ದಯಾಮಯನೂ ಆದ ಅಲ್ಲಾಹನ ಮೇಲೆ ಅವನು ವ್ಯರ್ಥ ಕಾರ್ಯವೆಸಗುವವನು ಎಂಬ ಬಹು ದೊಡ್ಡ ಆರೋಪವಾಗಿ ಬಿಡುವುದು.

ಮನುಷ್ಯನೊಳಗೆ ಒಳಿತು ಮತ್ತು ಕೆಡುಕಿನ ಕುರಿತ ಪ್ರಜ್ಞೆಯನ್ನು ಅವನು ಇರಿಸಿದನು. ಆ ಪ್ರಜ್ಞೆಗಳ ಆಧಾರವಾಗಿ ಮನುಷ್ಯನ ಕರ್ಮಗಳಿರುತ್ತವೆ. ಮನುಷ್ಯನ ಕರ್ಮಗಳಿಗೆ ತಕ್ಕ ಪರಿಣಾಮವಿರುವುದಿಲ್ಲವೆಂದೋ ಅಥವಾ ಅಂತಹ ಯಾವುದೇ ಪ್ರತಿಫಲದ ಮತ್ತು ಶಿಕ್ಷೆಯ ವ್ಯವಸ್ಥೆ ಇಲ್ಲವೆಂದಾದರೆ, ಉತ್ತಮ ಕಾರ್ಯವೆಸಗಿದವರು ಮುನಿಸಿಕೊಳ್ಳಬಹುದು ಮತ್ತು ಅವರಲ್ಲಿ ನಿರಾಶೆಯಾದೀತು. ಆಗ ಮನುಷ್ಯನೊಳಗೆ ಒಳಿತು ಮತ್ತು ಕೆಡುಕಗಳ ಪ್ರಜ್ಞೆಗಳೇ ಉಪಯೋಗ ಶೂನ್ಯವಾಗಿಬಿಡುತ್ತವೆ. ಮತ್ತು ಮನುಷ್ಯರನ್ನೂ ಪ್ರಾಣಿಗಳಂತೆ ಅಸಹಾಯಕ ಸ್ಥಿತಿಯಲ್ಲಿಟ್ಟಂತಾಗುವುದು. ಪ್ರಾಣಿಗಳಾದರೋ ಸಿಕ್ಕಕ್ಕಲ್ಲಿ ಮೇಯಲು ಹೋಗಿ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಅವುಗಳ ಜೀವನಕ್ಕೆ ತಾತ್ವಿಕತೆಯಾಗಲಿ ಶಿಸ್ತು ಬದ್ಧತೆಯಾಗಲಿ ಇಲ್ಲ. ಅವುಗಳು ಎಲ್ಲಿಯೂ ಉತ್ತರಿಸಬೇಕಾದವುಗಳಲ್ಲ. ಅವುಗಳ ಕರ್ಮಗಳು ಪರಿಗಣಿಸಲ್ಪಡುವುದಿಲ್ಲ.

ಜಗತ್ತಿನಲ್ಲಿ ಒಳಿತು, ಕೆಡುಕಗಳು ಕಂಡು ಬರುವಂತೆಯೇ ಉತ್ತಮ ಮತ್ತು ಕೆಟ್ಟ ಪ್ರಜ್ಞೆಗಳು ಮನುಷ್ಯರ ಅಂತರಾಳದಲ್ಲಿ ಇರಿಸಲಾಗಿದೆ. ಆದ್ದರಿಂದಲೇ ಉತ್ತಮರು ಮತ್ತು ಕೆಟ್ಟ ಜನರಿದ್ದಾರೆ. ಉತ್ತಮರಾದವರಿಗೆ ಉತ್ತಮ ಪ್ರತಿಫಲವೂ ಕೆಟ್ಟವರಿಗೆ ಅವರ ಕೆಟ್ಟ ಕರ್ಮಗಳಿಗೆ ಫಲಿತಾಂಶವಾಗಿ ಕೆಟ್ಟ ಪ್ರತಿಫಲವು ಸಿಗಬೇಕಿರುವುದು ಆವಶ್ಯಕವಾಗಿದೆ. ಮನುಷ್ಯನ ಪ್ರಜ್ಞೆ ಮತ್ತು ಆತ್ಮಸಾಕ್ಷಿಯ ಅರ್ಥವಿದಾಗಿದ್ದು ಇದನ್ನು ಪರಿಪೂರ್ಣಗೊಳಿಸಲಾಗುತ್ತಿದೆ.

ಆದ್ದರಿಂದ ಪ್ರವಾದಿವರ್ಯರ(ಸ) ಮೂಲಕ ಪವಿತ್ರ ಕುರ್‌ಆನ್‌ನಲ್ಲಿ ಪುನರುತ್ಥಾನವನ್ನು ಮನುಷ್ಯನ ಆತ್ಮಸಾಕ್ಷಿಗೆ ಅಲ್ಲಾಹನು ವಹಿಸಿರುವನು ಮನುಷ್ಯರಿಗೆ ಪ್ರತಿಫಲದ ದಿನದ ಬೇಡಿಕೆ ಪೂರ್ಣಗೊಳ್ಳುವ ಕುರಿತು ಸಂತೃಪ್ತಿ ನೀಡಿದನು, "ಸಂದೇಶವಾಹಕರೇ, ಇವರೊಡನೆ ಹೇಳಿರಿ– ಅಲ್ಲಾಹನೇ ನಿಮಗೆ ಜೀವನ ಪ್ರದಾನ ಮಾಡುತ್ತಾನೆ. ಆನಂತರ ಅವನೇ ನಿಮಗೆ ಮರಣ ಕೊಡುತ್ತಾನೆ. ಆ ಬಳಿಕ ಪುನರುತ್ಥಾನದ ದಿನ ಅವನೇ ನಿಮ್ಮನ್ನು ಒಟ್ಟುಗೂಡಿಸುವನು. ಅದು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಹೆಚ್ಚಿನವರು ತಿಳಿಯುವುದಿಲ್ಲ." **(ಅಲ್‌ಜಾಸಿಯ: 26)**

ಅಂದರೆ, ಏಕತ್ವದ ಅರ್ಥಾತ್ ಏಕದೇವತ್ವದ ಜೊತೆಗೆ ಪರಲೋಕದಲ್ಲಿ ವಿಶ್ವಾಸ ಇರಿಸುವುದು. ಮನುಷ್ಯರಿಗೆ ಅನಿವಾರ್ಯವಾಗಿದೆ ಮತ್ತು ಪರಲೋಕದ ಅರ್ಥವ್ಯಾಖ್ಯೆಯು ಅಲ್ಲಾಹನ ಗುಣವೈಶಿಷ್ಟ್ಯ, ನ್ಯಾಯ, ನ್ಯಾಯದಾನದ ದಿನ ನಿಷ್ಪಕ್ಷಪಾತವಾದ ನ್ಯಾಯ ಸಿಗುವುದು ನಿಶ್ಚಿತ ಎಂದಾಗಿದೆ.

ನ್ಯಾಯವು ಅಲ್ಲಾಹನ ಗುಣವೈಶಿಷ್ಟ್ಯಗಳಲ್ಲಿಯೇ ಒಂದು ಮಹತ್ತರವಾದ ಗುಣವಾಗಿದೆ. ಅಲ್ಲಾಹನಲ್ಲಿ ವಿಶ್ವಾಸ ಇರಿಸುವುದು ಅನಿವಾರ್ಯವಾಗಿದೆ. ಅಂದರೆ ಅವನ ಏಕತ್ವದ ಪರಿಕಲ್ಪನೆಯ ವಿಶ್ವಾಸವು ಕೇವಲ ಲೋಕದ ವಿಷಯಕ್ಕೆ ಸೀಮಿತವಾದುದಲ್ಲ. ಅಲ್ಲಾಹನಲ್ಲಿ ವಿಶ್ವಾಸ ಇರಿಸುತ್ತೇವೆಂದಾದ ಕ್ಷಣ ಆ ವಿಶ್ವಾಸ ಪರಿಪೂರ್ಣ ವಿಶ್ವಾಸ ಎನಿಸಿಕೊಳ್ಳದು. ಇಂದಿಗೂ ನಮ್ಮಲ್ಲಿ ಕೆಲವು ವರ್ಗಗಳು ಏಕದೇವತ್ವದ ಪರಿಕಲ್ಪನೆ ಇದೆ ಎಂದು ವಾದಿಸುತ್ತವೆ. ಅವರ ವಿಶ್ವಾಸ ಕೂಡ ದೇವನ ಏಕತ್ವದ ಪರಿಕಲ್ಪನೆ ಆಧಾರಿತವಾದ್ದೇ. ಆದರೆ ಇಷ್ಟಾದರೆ ಸಾಲದು.

ಪರಲೋಕವೆಂಬುದು ವಿಶಾಲವಾದ ಅರ್ಥ ವ್ಯಾಖ್ಯೆಗಳನ್ನೊಳಗೊಂಡಿದೆ ಮತ್ತು ಬಹಳಷ್ಟು ವಿಷಯಗಳು ಅದರೊಳಗೆ ಸೇರಿಕೊಂಡಿವೆ. ಅವುಗಳಲ್ಲಿ ಪ್ರಥಮವಾದದ್ದು ಈ ಇಹಲೋಕದ ಪತನ. ಜಗತ್ತು ನಾಶಕ್ಕೆ ಅವಧಿಯಾದಂತೆ ಅಂದಿರುವ ಸಕಲ ಮನುಷ್ಯರನ್ನು ಏಕ ಕಾಲಕ್ಕೆ ನಾಶಪಡಿಸುವ ಆಜ್ಞೆಯಾಗುವುದು. ಅಲ್ಲಾಹನ ಈ ಆಜ್ಞೆಯ ನಂತರ ಅಲ್ಲಾಹನದೇ ಇನ್ನೊಂದು ಆಜ್ಞೆಯಲ್ಲಿ ಇನ್ನೊದು ಲೋಕ ಅಸ್ತಿತ್ವಕ್ಕೆ ಬರುವುದು. ಆ ಲೋಕದಲ್ಲಿ ಮನುಷ್ಯರ ಕರ್ಮಗಳ ವಿಚಾರಣೆ ನಡೆಯುವುದು. ಮತ್ತು ಕರ್ಮಕ್ಕೆ ತಕ್ಕಂತೆ ಶಾಶ್ವತವಾದ ಪುರಸ್ಕಾರ ಮತ್ತು ಶಾಶ್ವತ ಶಿಕ್ಷೆ ದೊರೆಯುತ್ತಿದೆ. ಎಲ್ಲ ಮನುಷ್ಯರ ಪುನರುತ್ಥಾನ ಏಕ ಕಾಲದಲ್ಲಿ ನಡೆಯುವುದು ಅಂದರೆ ಅರ್ಥ, ಭೌತಿಕ ಜಗತ್ತಿನಲ್ಲಿ ಅದು ಕೊನೆಗೊಳ್ಳುವ ವರೆಗೂ ಜನಿಸಿದ ಪ್ರತಿಯೊಬ್ಬರೂ ಏಕ ಕಾಲಕ್ಕೆ ಮರು ಉತ್ಥಾನಗೊಳ್ಳುವರು ಅರ್ಥಾತ್ ಎಲ್ಲರೂ ಒಂದೇ ಸಮಯದಲ್ಲಿ ಎಬ್ಬಿಸಲ್ಪಡಲಿದ್ದಾರೆ. ಹಾಗೂ ಅಲ್ಲಾಹನ ಮುಂದೆ ಹಾಜರು ಪಡಿಸಲ್ಪಡುತ್ತಾರೆ.

ಅವರು ಆಗ ಅಲ್ಲಾಹನಿಗೆ ತಮ್ಮ ಇಹಲೋಕ ಜೀವನದ ಲೆಕ್ಕವನ್ನು ಕೊಡಬೇಕಾಗುವುದು ಮತ್ತು ಅಲ್ಲಿ ಅವರವರ ಕರ್ಮಗಳಿಗೆ ತಕ್ಕಂತೆ ನ್ಯಾಯದೊಂದಿಗೆ ತೀರ್ಮಾನವಾಗುವುದು. ಅಲ್ಲಿನ ವಿಚಾರಣೆಯ ಪ್ರಕಾರ ಜನರು ಸ್ವರ್ಗ ಅಥವಾ ನರಕಕ್ಕೆ ದಾಖಲಿಸಲ್ಪಡುವರು.

ಮರು ಸೃಷ್ಟಿಯಲ್ಲಿ (ಪುನರುತ್ಥಾನದಲ್ಲಿ) ಆಶ್ಚರ್ಯ!

ಮತ್ತೊಮ್ಮೆ ಸೃಷ್ಟಿಸಲ್ಪಡುವ ಬಗ್ಗೆ ಕೆಲವು ಜನರು ಆಶ್ಚಯ ವ್ಯಕ್ತಪಡಿಸುತ್ತಾರೆ. ಆದರೆ ಅಲ್ಲಾಹನ ಮಹಿಮೆ, ಶಕ್ತಿ ಸಾಮರ್ಥ್ಯಗಳ ಅರಿವಿಲ್ಲದ ಮತ್ತು ನಂಬಿಕೆ ಇಲ್ಲದ ಜನರು ಇವರು. ಆದರೆ ಅಲ್ಲಾಹನ ಈ ಮಹಿಮೆಗಳಲ್ಲಿ ಭರವಸೆ ಹೊಂದಿರುವವರು ಪುನರುತ್ಥಾನದ ಬಗ್ಗೆ ಸಂದೇಹ ವ್ಯಕ್ತಪಡಿಸುವುದಿಲ್ಲ. ಸೃಷ್ಟಿಕರ್ತನಿಗೆ ಇವೆಲ್ಲ ಅಸಾಧ್ಯ ಕಾರ್ಯವಲ್ಲ ಎಂದು ವಿಶ್ವಾಸ ಹೊಂದಿರುತ್ತಾರೆ. ಮನುಷ್ಯರನ್ನು ಮತ್ತೊಮ್ಮೆ ಸೃಷ್ಟಿಸಿದ್ದು ಯಾರು? ಮೊದಲ ಬಾರಿ ಸೃಷ್ಟಿಸಿದವನೇ ಅವರನ್ನು ಇನ್ನೊಮ್ಮೆ ಸೃಷ್ಟಿಸುತ್ತಾನೆ. ಆದರೆ ಇಂತಹ ವಿಶ್ವಾಸ ಕಳಕೊಂಡವರು ಮಾತ್ರ ಆಶ್ಚರ್ಯ ಚಕಿತರಾಗುವರು. ಇನ್ನೊಮ್ಮೆ ಸೃಷ್ಟಿಸಲ್ಪಡುವುದಿಲ್ಲ ಎಂದು ವಾದಿಸತೊಡಗುತ್ತಾರೆ.

ಪವಿತ್ರ ಕುರ್‌ಆನ್ ಈ ಕುರಿತು ಹೀಗೆ ಗಮನ ಸೆಳೆದಿದೆ, "ನೀವು ಆಶ್ಚರ್ಯ ಪಡುವುದಾದರೆ, "ನಾವು ಸತ್ತು ಮಣ್ಣಾಗಿ ಹೋದ ಬಳಿಕ ಪುನರಪಿ ಸೃಷ್ಟಿಸಲ್ಪಡುವೆವೋ?" ಎಂದು ಪ್ರಶ್ನಿಸುವವರ ಮಾತು ಆಶ್ಚರ್ಯಪಡತಕ್ಕದ್ದೇ ಆಗಿದೆ. ಇವರು ತಮ್ಮ ಪ್ರಭು ವನ್ನು ನಿಷೇಧಿಸಿದವರು. ಇವರು ಕೊರಳಲ್ಲಿ ಕೋಳ ಬಿದ್ದವರು. ಇವರೇ ನರಕದವರು ಮತ್ತು ನರಕದಲ್ಲಿ ಸದಾ ಉಳಿಯುವವರು." (ಅರ್ರಅದ್: 5)

ಮೇಲಿನ ವಚನದಲ್ಲಿ ಬಂದ ಪ್ರಭುವನ್ನು ನಿರಾಕರಿಸಿದವರು ಅಂದರೆ ಯಾರು? ಇಂತಹವರೇ ಸೃಷ್ಟಿಕರ್ತನನ್ನು ಸುಳ್ಳಾಗಿಸಿದವರು ಆಗಿದ್ದಾರೆ ಮತ್ತು ಅವನ ಮಹಿಮೆ ಶಕ್ತಿ ಸಾಮರ್ಥ್ಯಗಳ ಪರಿಪೂರ್ಣತೆಯನ್ನು ನಿರಾಕರಿಸಿದ ಜನರು ಇವರು. ಆದರೆ ಮನುಷ್ಯ ಪುನರುತ್ಥಾನ ಅಸಂಭವ ಎಂದು ಇವರು ತಮ್ಮ ಶಕ್ತಿ ಸಾಮರ್ಥ್ಯ ಮತ್ತು ತನ್ನ ಜ್ಞಾನವನ್ನು ಆಧರಿಸಿ ಹೇಳುತ್ತಾರೆಯೇ ವಿನಃ ಸೃಷ್ಟಿಕರ್ತನ ಮಹಿಮೆ ಶಕ್ತಿ ಸಾಮರ್ಥ್ಯ ಮತ್ತು ಜ್ಞಾನಗಳನ್ನು ಅವರು ಪರಿಗಣಿಸುವುದಿಲ್ಲ. ಆದರೆ ಅಲ್ಲಾಹನು ತನಗೆ ಹೊಸ ಜಗತ್ತು ಸೃಷ್ಟಿಸುವುದಾಗಲಿ, ಹೊಸ ಜೀವನ ನೀಡುವುದಾಗಲಿ ಬಹಳ ಸುಲಭವಾದುದೆಂದು ತಿಳಿಸುತ್ತಾನೆ.

"ಭೂಮಿ–ಆಕಾಶಗಳ ಅಗೋಚರ ಸತ್ಯಗಳ ಜ್ಞಾನ ಅಲ್ಲಾಹನಿಗೆ ಮಾತ್ರವಿದೆ. ಪ್ರಳಯದ ಸಂಭವವು ಮನುಷ್ಯನು ರೆಪ್ಪೆ ಬಡಿಯುವುದರೊಳಗೆ ಅಥವಾ ಅದ ಕ್ಕಿಂತಲೂ ಕಡಿಮೆ ಸಮಯದೊಳಗಾಗುವುದು. ವಾಸ್ತವದಲ್ಲಿ ಅಲ್ಲಾಹನು ಎಲ್ಲವನ್ನೂ ಮಾಡಬಲ್ಲನು." (ಅನ್ನಹ್ಲ್: 77)

ಪರಲೋಕ ಬರುವುದು ನಿಶ್ಚಿತ

"ಈ ಭೂಮಿ–ಆಕಾಶಗಳನ್ನು ಸೃಷ್ಟಿಸಿದ ಹಾಗೂ ಇವುಗಳನ್ನು ಉಂಟುಮಾಡುವುದರಲ್ಲಿ ದಣಿಯದ ಅಲ್ಲಾಹನು ಮೃತರನ್ನು ಪುನಃ ಜೀವಂತಗೊಳಿಸಲು ಖಂಡಿತ ಶಕ್ತನೆಂದು ಇವರಿಗೆ ತೋಚುವುದಿಲ್ಲವೇ? ಏಕಿಲ್ಲ! ನಿಶ್ಚಯವಾಗಿಯೂ ಅವನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು." (ಅಲ್‌ಅಹ್ಕಾಫ್: 33)

ಮನುಷ್ಯರ ಜಮಾವಣೆ

ಯಾವುದು ಯಾವಾಗ ಮಾಡಬೇಕಾಗಿದೆ ಎಂಬ ಬಗ್ಗೆ ಸರಿಯಾದ ಅರಿವು ಸೃಷ್ಟಿಕರ್ತನಿಗೆ ಯಾವ ವಸ್ತು ಮೂಲಕ ಯಾವುದನ್ನು ಪಡೆಯಬಹುದೆಂಬುದರ ಬಗ್ಗೆ ಅವನೇ ಜ್ಞಾನಿ. ಒಣಗಿ ಬರಡಾದ ಭೂಮಿಯ ಮೇಲೆ ಮಳೆ ಸುರಿದಾಗ ಭೂಮಿ ಜೀವಂತಗೊಂಡು ಉತ್ಪಾದನೆಗೆ ಸಜ್ಜಾಗುವಂತೆ. ಇದೇ ರೀತಿ ಮನುಷ್ಯರು ಅವರ ಎಲುಬುಗಳು ಒಣಗಿ ಕರಗಿ ಹೋಗಿದ್ದು ದೇಹದ ಕಣಗಳು ಎಲ್ಲೆಲ್ಲಿ ಚೆಲ್ಲಿ ಹೋಗಿ ಕ್ರಿಮಿಕೀಟಗಳ ಪಾಲಾದರೂ ಸಹ. ಅದೇ ಮನುಷ್ಯನನ್ನು ಪುನಃ ಸೃಷ್ಟಿಸಿ ಎಬ್ಬಿಸಿ ನಿಲ್ಲಿಸಲು ಏನು ಮಾಡಬೇಕೆಂದು ಅವನಿಗೆ ಗೊತ್ತು. ಅವನೇ ಸೃಷ್ಟಿಕರ್ತ, ಸರ್ವಶಕ್ತ ಮತ್ತು ಮಹಿಮಾವಂತ ಅಸ್ತಿತ್ವ. ಆದುದರಿಂದ ಪುನಃ ನಡೆದಾಡುವ ಮನುಷ್ಯನನ್ನು ಸೃಷ್ಟಿಸುವುದು ಹೇಗೆ ಎಂಬುದು ಅವನಿಗೆ ಚೆನ್ನಾಗಿ ಅರಿವಿದೆ. ಆ ಬಗ್ಗೆ ಪವಿತ್ರ ಕುರ್‌ಆನ್ ಅಲ್ಲಾಹನ ಮಹಿಮೆಯನ್ನು ಹೀಗೆ ವಿವರಿಸಿದೆ.

"ಅಲ್ಲಾಹನೇ ಮಾರುತಗಳನ್ನು ಕಳುಹಿಸುತ್ತಾನೆ. ಅನಂತರ ಅವುಗಳು ಮೋಡವನ್ನು ಎಬ್ಬಿಸುತ್ತವೆ. ತರುವಾಯ ನಾವು ಅದನ್ನು ಒಂದು ಬಂಜರು ಪ್ರದೇಶದ ಕಡೆಗೆ ಒಯ್ಯುತ್ತೇವೆ. ಮತ್ತು ಅದರ ಮೂಲಕ ಸತ್ತು ಬಿದ್ದಿದ್ದ ಅದೇ ಭೂಮಿಯನ್ನು ಜೀವಂತಗೊಳಿಸುತ್ತೇವೆ. ಸತ್ತವರ ಪುನರುಜ್ಜೀವನವೂ ಹೀಗೆಯೇ ಆಗುವುದು." (ಫಾತಿರ್: 9)

ಮನುಷ್ಯನಿಗೆ ಯಾವ ಕೆಲಸ ಕಷ್ಟದ್ದೋ ತ್ರಾಸದಾಯಕವೋ ಮತ್ತು ಅದಕ್ಕೆ ಅವನು ಅಸಹಾಯಕನೋ ಅದು ಸಂಭವಿಸಲು ಸೃಷ್ಟಿಕರ್ತನ ಕೇವಲ ಒಂದು ಆಜ್ಞೆ ಸಾಲುವುದು. ಬರಡಾದ ಭೂಮಿಯನ್ನು ಪುನಃ ಜೀವಂತಗೊಳಿಸುವ ಶಕ್ತಿ ಅವನಿಗಿದೆ. ಅದೇ ರೀತಿ ಮನುಷ್ಯನನ್ನು ಮರು ಸೃಷ್ಟಿಸುವುದು ಕೂಡ ಅವನ ಮಹಿಮೆಗೆ ಅತೀತವಲ್ಲ. ಒಣ ಭೂಮಿಯಿಂದ ಜನರಿಗೆ ನಿರೀಕ್ಷೆಯಿರುವುದಿಲ್ಲ. ಇದರಲ್ಲಿ ಯಾವ ಬೆಳೆಯೂ ಮೊಳೆಯದೆ ನಿರಾಶರಾಗುವರು. ಮರಣಾನಂತರ ಮತ್ತೊಮ್ಮೆ ಎಬ್ಬಿಸಲ್ಪಡುವ ಬಗ್ಗೆಯೂ ಇದೇ ಅಭಿಪ್ರಾಯವನ್ನು ಇರಿಸಿಕೊಳ್ಳುತ್ತಾರೆ. ಮತ್ತೊಮ್ಮೆ ಎಬ್ಬಿಸಲ್ಪಡುವುದು ಕಷ್ಟ ಸಾಧ್ಯವೆಂದು ಬಗೆಯುತ್ತಾನೆ. ಆದರೆ ಸ್ವಲ್ಪ ಮಳೆ

ಸುರಿವಷ್ಟಕ್ಕೆ ಆ ಬಂಜರು ಭೂಮಿ ಹಸನಾಯಿತು ಮತ್ತು ಬೀಜಗಳು ಮೊಳಕೆಯೊಡೆಯಲಾರಂಭಿಸಿದವು. ಮಾನವರ ಪುನರುತ್ಥಾನಕ್ಕೂ ಅಲ್ಲಾಹನಿಗೆ ಅವನದೇ ವಿಧಾನ ಇದ್ದು ಮನುಷ್ಯನನ್ನು ಮರು ಸೃಷ್ಟಿಸುವನು ಮತ್ತು ಪುನಃ ಜೀವಂತಗೊಳಿಸುವನು. ಇವ್ಯಾವುದೂ ಅವನಿಗೆ ದೊಡ್ಡ ಕಾರ್ಯವೇ ಅಲ್ಲ. ಭೂಮಿಯು ಮಳೆ ಸುರಿಯುವುದರೊಂದಿಗೆ ಮರು ಜೀವ ಪಡೆದುಕೊಂಡಿತು. ಅಲ್ಲಾಹನ ಮಹಿಮೆ ಅಪಾರ ಮತ್ತು ಪ್ರಬಲವಾದುದು ಅವನಿಗೆ ಸಕಲ ಕಾರ್ಯವೂ ಸುಲಭ ಸಾಧ್ಯ. ಆದರೆ ಮನುಷ್ಯರು ಕಷ್ಟವೆಂದೂ ಅಸಂಭಾವ್ಯವೆನ್ನುವ ಕಾರ್ಯವೂ ಅವನಿಗೆ ಅತೀ ಸುಲಭವಾಗಿದೆ.

ಪರಲೋಕ ನಿಶ್ಚಿತ ಮತ್ತು ಸುಲಭ

ಮನುಷ್ಯನಾದರೋ ತುಂಬ ಅಸಹಾಯಕ ಅಸ್ತಿತ್ವವಾಗಿರುವನು. ಸೃಷ್ಟಿಕರ್ತ ಮರಣ ಕೊಡಲು ಇಷ್ಟಪಟ್ಟ ನಂತರ ಒಂದು ಕ್ಷಣವೂ ಅವನು ಬದುಕಿ ಉಳಿಯಲಾರ. ಹೀಗಿರುವಾಗ ಇದೇ ಸೃಷ್ಟಿಕರ್ತನು ಮನುಷ್ಯನನ್ನು ಮೃತ ಸ್ಥಿತಿಯಿಂದ ಜೀವಂತಗೊಳಿಸಲು ಬಯಸದಿದ್ದರೆ ಮನುಷ್ಯ ಏನೂ ಮಾಡಲಾರ. ಆಗಲೂ ಅಷ್ಟೇ ಮನುಷ್ಯ ಅಸಹಾಯಕನಾಗಿರುತ್ತಾನೆ. ಅವನು ಪುನಃ ಜೀವಂತಗೊಂಡು ಎದ್ದು ನಿಲ್ಲುವುದು ಅವನಿಗೆ ಅನಿವಾರ್ಯವಾಗಿರುತ್ತದೆ. ಇಲ್ಲಿ ವ್ಯಕ್ತವಾಗುವ ಎರಡು ವಿಷಯಗಳಿವು– ಒಂದು ಮನುಷ್ಯನ ಅಸಹಾಕತೆ.. ಇನ್ನೊಂದು ಅಲ್ಲಾಹನ ಮಹಿಮೆ, ಶಕ್ತಿ ಸಾಮರ್ಥ್ಯ.

ಮನುಷ್ಯನ ಅಸಹಾಯಕತೆ ಏನೆಂದರೆ ಸೃಷ್ಟಿಕರ್ತ ಸಾಯಲು ಹೇಳಿದರೆ ಮನುಷ್ಯ ಸಾಯಬೇಕು ಮತ್ತು ಜೀವಂತ ಆಗಲು ಹೇಳಿದರೆ ಜೀವಂತವಾಗಬೇಕು. ಆದುದರಿಂದ ಮನುಷ್ಯನ ಈ ಆಶ್ಚರ್ಯಕ್ಕೆ ಅರ್ಥವಿಲ್ಲ. ಅವನು ಸತ್ತು ಮತ್ತೆ ಹೇಗೆ ಹುಟ್ಟಬಲ್ಲ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮನುಷ್ಯ ಮನುಷ್ಯನೇ ಆಗಿದ್ದು ಅವನೊಬ್ಬ ಅಸಹಾಯಕ ಜೀವಿಯಾಗಿದ್ದಾನೆ. ಆದರೆ ಅಲ್ಲಾಹನು ಪ್ರಪಂಚದ ಸೃಷ್ಟಿಕರ್ತನಾಗಿದ್ದಾನೆ. ಮನುಷ್ಯನನ್ನು ಎರಡನೇ ಸಲ ಜೀವಂತ (ಜೀವನ ಕೊಡುವುದು) ಮಾಡುವುದು ಅವನಿಗೆ ಕಷ್ಟ ಸಾಧ್ಯವಲ್ಲ. ತನ್ನ ಈ ಮಹಿಮೆಯ ಕುರಿತು ಈ ರೀತಿ ಸ್ಪಷ್ಟವಾಗಿ ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ವಿವರಿಸುತ್ತಿದ್ದಾನೆ.

"ನಾವು ಸತ್ತು ಮಣ್ಣಾಗಿ ಅಸ್ಥಿ ಪಂಜರವಾಗಿ ಬಿಟ್ಟ ಬಳಿಕ ಪುನಃ ಜೀವಂತಗೊಳಿಸಿ ಎಬ್ಬಿಸಲ್ಪಡಲಿದ್ದೇವೆಯೇ? ಗತಕಾಲದ ನಮ್ಮ ಪೂರ್ವಜರೂ ಎಬ್ಬಿಸಲ್ಪಡುವರೇ?" "ಹೌದು! ನೀವು (ಅಲ್ಲಾಹನೆದುರು) ಅಸಹಾಯಕರಾಗಿರುತ್ತೀರಿ" ಎಂದು ಇವರೊಡನೆ ಹೇಳಿರಿ.. ಅದು ಕೇವಲ ಒಂದು ಘರ್ಜನೆಯಾಗಿರುವುದು ಮತ್ತು ಹಠಾತ್ತನೆ ಇವರು (ಇವರಿಗೀಗ ತಿಳಿಸಲಾಗುತ್ತಿರುವ ಎಲ್ಲವನ್ನೂ) ಕಣ್ಣಾರೆ ಕಾಣುತ್ತಿರುವರು. ಆಗ ಇವರು, ಅಯ್ಯೋ, ನಮ್ಮ ದೌರ್ಭಾಗ್ಯವೇ! ಇದು ಪ್ರತಿಫಲದ ದಿನವೇ ಆಗಿದೆ ಎನ್ನುವರು.

ಇದು ನೀವು ಸುಳ್ಳಾಗಿಸುತ್ತಿದ್ದ ಆ ನಿರ್ಣಾಯಕ ದಿನವೇ ಆಗಿದೆ." (ಅಸ್ಸಾಫಾತ್: 16–2)

ಆದುದರಿಂದ ಮಲಗಿ ನಿದ್ರಿಸುವ ವ್ಯಕ್ತಿಯೊಬ್ಬನನ್ನು ಎಬ್ಬಿಸಿದಾಗ ಗರಬಡಿದವರಂತೆ ಬೆಚ್ಚಿಬಿದ್ದು ಎದ್ದು ಕುಳಿತುಕೊಳ್ಳುತ್ತಾನೆ. ಇಷ್ಟೇ ಎಚ್ಚರಿಕೆ ಮತ್ತೊಮ್ಮೆ ಎದ್ದೇಳಲು, ಮರಣಾನಂತರ ಮರುಜೀವಂತಗೊಳ್ಳಲು ಸಾಲುತ್ತದೆ. ಅಲ್ಲಾಹನ ಇಷ್ಟೇ ಗದರಿಕೆಗೆ ಅವನು ನಿದ್ದೆಯಿಂದ ತಡಬಡಿಸಿ ಏಳುವಂತೆ ಎಚ್ಚೆತ್ತು ಕುಳಿತುಕೊಳ್ಳುವುದು ಎಂಬುದು ನಿಶ್ಚಿತವಾಗಿದೆ. ಮರಣಾನಂತರ ಮನುಷ್ಯನ ಪುನರುತ್ಥಾನ ಖಚಿತವಾಗಿದೆ.

ಮತ್ತೊಮ್ಮೆ ಜೀವಂತಗೊಳ್ಳುವುದು ಯಾಕೆ ಅಸಾಧ್ಯ?

ಮನುಷ್ಯನು ಏನೂ ಆಗಿಲ್ಲದ ಒಂದು ಸುದೀರ್ಘ ಕಾಲ ಗತಿಸಿತ್ತು. ಆ ಕಾಲ ಎಷ್ಟು ದೀರ್ಘವಾದುದೆಂದು ಮನುಷ್ಯರಿಗೆ ಊಹಿಸುವುದು ಕೂಡ ಅಸಾಧ್ಯವಾಗಿದೆ. ಅಂದರೆ ಅಷ್ಟು ಸುದೀರ್ಘ ಕಾಲದ ವರೆಗೆ ಈ ಮನುಷ್ಯನಿದ್ದಾನಲ್ಲ, ಅವನು ಏನೂ ಆಗಲಿಲ್ಲ ಅಂತಾಯಿತು. ಅವನಿಗೆ ಜೀವವೋ ಜೀವನವೋ ಅಸ್ತಿತ್ವವೋ ಏನೇನೂ ಇರಲಿಲ್ಲ. ಎಲ್ಲಿಯೂ ಅವನು ಗೋಚರಿಸುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಮನುಷ್ಯನಿಗೆ ಅಸ್ತಿತ್ವ ದೊರೆಯಿತು. ಅದು ಕೂಡ ಸಂಪೂರ್ಣ ಮಾನವೀಯ ಗುಣ ಗಳನ್ನು ಅವನೊಳಗೆ ಇರಿಸಲಾಯಿತು. ಒಂದು ವೇಳೆ ತಾನೂ ಏನಾಗಿರಲಿಲ್ಲ ಎಂಬ ಆ ಅವಧಿಯನ್ನು ಸ್ವತಃ ಮನುಷ್ಯ ಊಹಿಸಿದರೆ ಅವನಿಗೆ ಅರ್ಥವಾಗುತ್ತದೆ. ತನ್ನ ಮರುಸೃಷ್ಟಿ ಖಂಡಿತ ಸಾಧ್ಯವಿದೆ ಎಂಬುದು ಸ್ಪಷ್ಟವಾಗಿ ಮನವರಿಕೆಯಾಗಿ ಬಿಡುತ್ತದೆ. ಹಾಗೂ ಅವನನ್ನು ಮತ್ತೊಮ್ಮೆ ಎದ್ದೇಳಿಸುವುದು ಸೃಷ್ಟಿಕರ್ತನಿಗೆ ಬಹಳ ಸುಲಭ ಎಂಬ ವಿಶ್ವಾಸ ಅವನಲ್ಲಿ ಮೂಡುವುದು ಮಾತ್ರವಲ್ಲ ಅವನು ಸೃಷ್ಟಿಕರ್ತನನ್ನು ಪ್ರಶಂಸಿಸತೊಡಗುತ್ತಾನೆ. ಸ್ತುತಿಸತೊಡಗುತ್ತಾನೆ. ಯಾಕೆಂದರೆ ಮನುಷ್ಯನಿಗೆ ಮೊದಲ ಜೀವನ ಕೊಟ್ಟವನೇ ಎರಡನೇ ಜೀವನ ಕೊಡುವುದು. ಅವನೇ ಮನುಷ್ಯನ ಸೃಷ್ಟಿ ಕರ್ತ. ಅಲ್ಲಿಯ ವರೆಗೂ ತಾನೇನು ಅಲ್ಲದ ಅವನಿಗೆ ಜೀವಂತ ಅಸ್ತಿತ್ವ ಕೊಟ್ಟಿರು ವಾಗ ಸತ್ತ ಮೇಲೆ ಮತ್ತೊಮ್ಮೆ ಸೃಷ್ಟಿಸುವುದು ಸೃಷ್ಟಿಕರ್ತನಿಗೆ ಕಷ್ಟವಲ್ಲ ಎಂಬ ವಿವೇಕ ಖಂಡಿತ ಅವನಲ್ಲಿ ಮೂಡುತ್ತದೆ.

ಅದರ ಜೊತೆಗೆ ಅವನು ಮನುಷ್ಯನಾದುದು ಹೇಗೆ, ಯಾವೆಲ್ಲ ವಿಧದಲ್ಲಿ ಅಸ್ತಿತ್ವಕ್ಕೆ ಅವನು ಬಂದುದು, ಯಾವೆಲ್ಲ ಹಂತವನ್ನು ದಾಟಿ ಮನುಷ್ಯ ಮನುಷ್ಯನಾಗಿ ಗಟ್ಟಿಯಾದನು. ಈ ಮನುಷ್ಯನು ಹುಟ್ಟಿ ಬಂದ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಾಗ ಸೃಷ್ಟಿಕರ್ತನಿಗೆ ಮತ್ತೊಮ್ಮೆ ಅವನನ್ನು ಜೀವಂತಗೊಳಿಸುವುದು ಅರ್ಥಾತ್ ಇದೇ ಸ್ಥಿತಿಯಲ್ಲಿ ಸತ್ತ ನಂತರ ಎಬ್ಬಿಸುವುದು ಕಷ್ಟ ಸಾಧ್ಯವಲ್ಲ ಎಂಬ ವಿಶ್ವಾಸ ಮೂಡುತ್ತದೆ. ಮೊದಲ ಬಾರಿಗೆ ಮನುಷ್ಯ ಅಸ್ತಿತ್ವ ಪಡೆದುಕೊಂಡ ಪ್ರಕ್ರಿಯೆ ಮತ್ತು ಸೃಷ್ಟಿಯ

ಕಾರ್ಯದ ಪ್ರಗತಿಯ ಹಂತಗಳನ್ನು ಗಮನಿಸಿರಿ. ಸೃಷ್ಟಿಕರ್ತ ಯಾವ ವಸ್ತುವಿನಿಂದ (ವೀರ್ಯದಿಂದ) ಮನುಷ್ಯನನ್ನು ಮಾಡಿದನು. ಅದು ಕೂಡ ಆರೋಗ್ಯ ವಂತ ಮನುಷ್ಯನನ್ನು ರೂಪಿಸಿದನು. ಇಷ್ಟೊಂದು ಪ್ರಮುಖ ಪ್ರಕ್ರಿಯೆ ಅವನ ವ್ಯವಸ್ಥೆಯಲ್ಲಿ ಸಾಧ್ಯವಾಗಿದೆ. ಅಂತಿರುವಾಗ ಮರುಸೃಷ್ಟಿ, ಮತ್ತೊಮ್ಮೆ ಜೀವಂತಗೊಳಿಸುವುದು ಅರ್ಥಾತ್ ಮೊದಲಿದ್ದಂತೆ ಅದೇ ರೂಪದಲ್ಲಿ ಸೃಷ್ಟಿಸುವುದು ಸೃಷ್ಟಿಕರ್ತನಿಗೆ ಖಂಡಿತ ಕಷ್ಟಸಾಧ್ಯವಲ್ಲ. ಅದು ನಿಶ್ಚಿತವಾಗಿಯೂ ಸಂಭವಿಸುತ್ತದೆ.

ಅಲ್ಲಾಹನು ಮನುಷ್ಯನಿಗೆ ಅವನ ಸೃಷ್ಟಿ ಕಾರ್ಯವನ್ನು ಜ್ಞಾಪಿಸಿದ್ದು ಅ ಮೂಲಕ ಮನುಷ್ಯನು ಸ್ವಲ್ಪ ಗಂಭೀರವಾಗಿ ಚಿಂತನೆ ನಡೆಸುವ ಸಲುವಾಗಿದೆ. ಅಲ್ಲಾಹನ ಗ್ರಂಥ ಪವಿತ್ರ ಕುರ್‌ಆನ್ ಮನುಷ್ಯನನ್ನುದ್ದೇಶಿಸಿ ಹೀಗೆ ಹೇಳುತ್ತಿದೆ, "ಮಾನವನ ಮೇಲೆ ಅವನೊಂದು ಪ್ರಸ್ತಾವನೀಯ ವಸ್ತುವೇ ಆಗಿರದಂತಹ ಸುದೀರ್ಘ ಕಾಲವೊಂದು ಕಳೆದಿದೆಯೇ?" (ಅದ್ದಹ್ರ್: 1)

ಮೇಲಿನ ವಚನಗಳು ಮನುಷ್ಯನು ಅನುಪಸ್ಥಿತಿಯಿದ್ದಲ್ಲಿಂದ ಅಸ್ತಿತ್ವಕ್ಕೆ ಬಂದುದು ಎನ್ನುತ್ತಿದೆ. ಆದ್ದರಿಂದ ಮರಣಾನಂತರ ಮೊದಲ ರೀತಿಯಲ್ಲೇ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲವೇ ಎಂದು ಪ್ರಶ್ನಿಸುತ್ತಿದೆ. ಅಂದರೆ ಅವನೊಂದು ಪ್ರಸ್ತಾಪದ ವಿಷಯವೇ ಆಗಿರಲಿಲ್ಲ. ಅವನ ಬಗ್ಗೆ ಅವನಿಗೆ ತಿಳಿದಿರದ ಕಾಲವಿತ್ತು. ಈಗ ಅವನಿಗೆ ಅವನ ಅಸ್ತಿತ್ವದ ಕುರಿತು ತಿಳಿಯಿತು. ಒಮ್ಮೆ ತಾನು ಸೃಷ್ಟಿಸಲ್ಪಟ್ಟಿರುವೆನೆಂಬ ಅನುಭವ ಅವನಿಗಾಗಿದೆ. ಹೀಗೆ ಅವನನ್ನು ಮೊದಲ ಬಾರಿ ಸೃಷ್ಟಿಸಿದ ಸೃಷ್ಟಿಕರ್ತನೇ ಮರಣಾನಂತರ ಮರು ಸೃಷ್ಟಿಸಲಾಗುವುದು ಎಂದು ಹೇಳುತ್ತಾನೆ. ಪವಿತ್ರ ಕುರ್‌ಆನ್ ಅದನ್ನೇ ಹೀಗೆ ಪ್ರಶ್ನಿಸಿದೆ, "ನಿಮ್ಮ ಪ್ರಥಮ ಜನನದ ಕುರಿತಂತೂ ನಿಮಗೆ ತಿಳಿದೇ ಇದೆ. ಮತ್ತೇಕೆ ಪಾಠ ಕಲಿಯುವುದಿಲ್ಲ?" (ಅಲ್ ವಾಕಿಯ: 62)

ಮತ್ತೊಮ್ಮೆ ಮನುಷ್ಯನ ಸೃಷ್ಟಿಸಲ್ಪಡುವುದು ನಿಶ್ಚಿತ

ಹೌದು, ಏನೂ ಆಗಿರದ ಮನುಷ್ಯ ತನ್ನ ಹುಟ್ಟಿನ ಬಗ್ಗೆಯೇ ಸರಿಯಾಗಿ ಗಮನಿಸಿದರೆ ಸೃಷ್ಟಿಕರ್ತನಿಗೆ ಮರುಸೃಷ್ಟಿ ಸಾಧ್ಯ ಎಂಬ ಅರಿವು ಮೂಡುತ್ತದೆ. ಮನುಷ್ಯನೆಂದರೆ ಒಂದು ಬಿಂದು. ಅದರ ನಂತರ ಲುತ್ಫ್, ವೀರ್ಯ. ತದನಂತರ ಜಿಗುಟು ದ್ರವ ನಂತರ ಹಂತಹಂತವಾಗಿ ಜೀವ ಕೊಟ್ಟ ಮತ್ತು ಜನ್ಮ ನೀಡಲಾಯಿತು. ನೀವು ಭೂಮಿಗೆ ಬಂದಿರಿ. ಆಮೇಲೆ ಮರುಸೃಷ್ಟಿ ಕಾರ್ಯದ ಬಗ್ಗೆ ಸಂದೇಹಪಡ ಬೇಕಾದ ಅಗತ್ಯವಿಲ್ಲ. ಅಂದರೆ ಮನುಷ್ಯನನ್ನು ಒಮ್ಮೆ ಸೃಷ್ಟಿಸಲಾಗಿದೆ. ಹೀಗೆ ಸೃಷ್ಟಿಸಿದವನು ಇನ್ನೊಮ್ಮೆ ಯಾಕೆ ಸೃಷ್ಟಿಸಲಾರ? ಸೃಷ್ಟಿಕರ್ತ ತನ್ನ ಶಕ್ತಿ ಸಾಮರ್ಥ್ಯ, ವೈಶಿಷ್ಟ್ಯಗಳೂ ಮತ್ತು ಸೂಕ್ಷ್ಮವಾಗಿ ತನ್ನಿಚ್ಛೆ ಪ್ರಕಾರ ಮತ್ತು ಪ್ರಭುತ್ವದಿಂದ ಮನುಷ್ಯನನ್ನು

ಸೃಷ್ಟಿಸಿದನು. ಮತ್ತೊಮ್ಮೆ ಕೂಡಾ ಮನುಷ್ಯನ ಅಸ್ತಿತ್ವ ವನ್ನು ಅವನೇ ಎಬ್ಬಿಸುವನು. ಅಲ್ಲಾಹನು ತನ್ನ ಅಪಾರ ಮಹಿಮೆಯನ್ನು ಮನುಷ್ಯನ ಸೃಷ್ಟಿಕಾರ್ಯದಲ್ಲಿ ಪ್ರಕಟಿಸಿ ರುವನು. ಮನುಷ್ಯನಿಗೆ ಸಿಗುವ ಎರಡನೆಯ ಜೀವನ ಪ್ರತಿಫಲ ಮತ್ತು ಶಿಕ್ಷೆ ಯನ್ನೊಳಗೊಂಡುದು. ಆದುದರಿಂದ ಅವನು ಆ ಜೀವನಕ್ಕಾಗಿ ಈ (ಇಹ) ಜೀವನ ದಲ್ಲಿ ತಯಾರಿ ಮಾಡಿಕೊಳ್ಳಬೇಕಾಗಿದೆ. ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ.

"ಜನರೇ, ನಿಮಗೆ ಮರಣಾನಂತರದ ಜೀವನದ ಬಗೆಗೇನಾದರೂ ಸಂಶಯ ವಿದ್ದರೆ, ನಾವು ನಿಮ್ಮನ್ನು ಮಣ್ಣಿನಿಂದಲೂ ಅನಂತರ ವೀರ್ಯದಿಂದಲೂ ಆ ಮೇಲೆ ರಕ್ತ ಪಿಂಡದಿಂದಲೂ ಆ ಬಳಿಕ ರೂಪವಿರುವ ಮತ್ತು ರೂಪವಿಲ್ಲದ ಮಾಂಸದ ತುಣುಕಿನಿಂದಲೂ ಸೃಷ್ಟಿಸಿದೆವು ಎಂಬುದು ನಿಮಗೆ ತಿಳಿದಿರಲಿ. ನಿಮಗೆ ವಸ್ತುಸ್ಥಿತಿ ವಿವರಿಸಲಿಕ್ಕಾಗಿ (ನಾವು ಇದನ್ನು ತಿಳಿಸುತ್ತಿದ್ದೇವೆ). ನಾವು ನಮಗಿಷ್ಟವಿರುವುದನ್ನು (ವೀರ್ಯವನ್ನು) ಒಂದು ನಿರ್ದಿಷ್ಟ ಅವಧಿಯ ತನಕ ಗರ್ಭಾಶಯದೊಳಗೆ ತಡೆದಿರಿಸುತ್ತೇವೆ. ಆನಂತರ ನಿಮ್ಮನ್ನು ಒಂದು ಶಿಶುವಿನ ರೂಪದಲ್ಲಿ ಹೊರ ತರುತ್ತೇವೆ." (ಅಲ್‌ಹಜ್ಜ್: 5)

ಮಣ್ಣು ನಿರ್ಜೀವವಾದ ವಸ್ತು ಆಗಿದೆ. ತದ ನಂತರ ಮಣ್ಣಿನ ಸತ್ವದಿಂದಿರುವ ವೀರ್ಯದಿಂದ ಆ ಮೇಲೆ ರಕ್ತಪಿಂಡವನ್ನಾಗಿ ಮಾಡಿ ನಂತರ ಮಾಂಸದ ತುಣುಕ ನ್ನಾಗಿಸಿ ರೂಪವಿರುವ ಮನುಷ್ಯನಾಗುವುದು. ಹೀಗೆ ಯಾರಾದರೂ ಪರಿಕಲ್ಪನೆ ಮಾಡಬಲ್ಲರೇ. ಹೀಗೆ ವೀರ್ಯವೆಂಬ ದ್ರವದ ಮೂಲಕ ಹಂತಹಂತವಾಗಿ ಮನುಷ್ಯ ರೂಪದ ಸುಂದರ ಮಗು ಹುಟ್ಟುವುದು ಎಂದು ಯೋಚಿಸಲು ಸಾಧ್ಯವಿತ್ತೇ ಮತ್ತು ಮಗುವಿನೊಳಗೆ ಶಕ್ತಿ, ಜೀವನದ ಸಂಭಾವ್ಯತೆಗಳನ್ನು ಇರಿಸಲಾಯಿತು. ಇವೆಲ್ಲವೂ ಆಗಿದ್ದು ಮೂಲತಃ ನಿರ್ಜೀವ ಮಣ್ಣಿನಿಂದಾಗಿದೆ. ಅಂದರೆ ನಿರ್ಜೀವಾದ ಮಣ್ಣಿನಿಂದ ಜೀವಂತವಿರುವ ವಸ್ತುವನ್ನು ಅರ್ಥಾತ್ ಮನುಷ್ಯ ಜೀವಿಯನ್ನು ಸೃಷ್ಟಿಸಲಾಯಿತು. ಇದು ಸೃಷ್ಟಿಕರ್ತನ ಮಹಿಮೆ. ಹೀಗಿರುವಾಗ ಇವೆಲ್ಲ ಗಮನಿಸಿದರೆ ಮನುಷ್ಯನು ಮತ್ತೊಮ್ಮೆ ಜೀವಂತವಾಗಿ ಎಬ್ಬಿಸಲ್ಪಡುವುದು ಕಷ್ಟವಲ್ಲ ಎಂದು ಖಚಿತವಾಗುತ್ತದೆ.

ಮನುಷ್ಯನ ಮರು ಸೃಷ್ಟಿ ನಿಶ್ಚಿತ

ಮನುಷ್ಯನ ಕಾಲು ಮುರಿದರೆ ಅಥವಾ ಮೆದುಳು ನಿಷ್ಕ್ರಿಯವಾದರೆ, ಅಥವಾ ಹೃದಯ ಬ್ಲಾಕ್ ಆಗಿ ದುರ್ಬಲಗೊಂಡರೂ ಜೀವಂತವಾಗಿರಬಲ್ಲ ಮತ್ತು ಬದುಕಿರಬಲ್ಲ. ಆದರೆ ಇನ್ನೊಬ್ಬ ವ್ಯಕ್ತಿಯ ಉದಾಹರಣೆ ತೆಗೆದುಕೊಳ್ಳಿ. ಈತನ ಪ್ರತಿಯೊಂದು ಅವಯವ ಸರಿಯೂ ಸುರಕ್ಷಿತವೂ ಆಗಿದೆ. ಆದರೆ ದೇಹದೊಳಗಿನ ಆತ್ಮ ತೆಗೆಯಲ್ಪಟ್ಟರೆ ದೇಹ ನಿಷ್ಕ್ರಿಯವಾಗಿ ಅವನ ಜೀವನವೇ ಕೊನೆಗೊಳ್ಳುತ್ತದೆ.

ಇದರ ಅರ್ಥ ದೇಹದೊಳಗೆ ಬೇರೆಯೇ ಒಂದು ವಿಶೇಷ ವಸ್ತು ಇದ್ದು ದೇಹಕ್ಕೆ ಊನತೆಯಾದರೂ ಅದು ಆ ದೇಹವನ್ನು ಕ್ರಿಯಾತ್ಮಕವಾಗಿರಿಸುತ್ತದೆ. ಅಂದರೆ ಕೆಲಸ ಮಾಡುವ ಸ್ಥಿತಿಯಲ್ಲಿರಿಸುತ್ತದೆ. ಆ ವಸ್ತು ಹೊರಟು ಹೋದರೆ ದೇಹದ ಅಂಗಾಂಗ ಸುರಕ್ಷಿತವಾಗಿದ್ದೂ ನಿಷ್ಕ್ರಿಯವಾಗುತ್ತದೆ. ಹೀಗೆ ಮರಣ ಸಂಭವಿಸುತ್ತದೆ. ಮನುಷ್ಯನ ದೇಹಕ್ಕೆ ಸಾವು ಬಂದರೂ ಈ ವಸ್ತು ಸುರಕ್ಷಿತವಾಗಿರಿಸಲ್ಪಡುವುದು. ಮನುಷ್ಯನ ಮರು ಸೃಷ್ಟಿಕಾರ್ಯದ (ಪುನರುತ್ಥಾನದ ಸಂದರ್ಭದಲ್ಲಿ) ವೇಳೆ ಮನುಷ್ಯನ ದೇಹ ಜೋಡಣೆಗೊಳಿಸಿ ಅವನ ದೇಹಕ್ಕೆ ಅದನ್ನು ಇರಿಸಲಾಗುವುದು.

ಇದರ ಪರಿಣಾಮವಾಗಿ ಮನುಷ್ಯ ಪುನಃ ಜೀವಂತಗೊಳ್ಳುತ್ತಾನೆ. ಸತ್ತ ಮೇಲೆ ಅವನಿಗೆ ಎರಡನೇ ಬಾರಿ ಈ ರೀತಿ ಜೀವನ ಸಿಕ್ಕಿತು. ಮನುಷ್ಯ ತಾನು ಸತ್ತು ಮತ್ತೆ ಜೀವಂತಗೊಳ್ಳುವುದಿಲ್ಲ ಎಂದು ವಾದಿಸುವುದಾದರೆ ಇದು ಕಷ್ಟ ಕಾರ್ಯವಲ್ಲ ಮತ್ತು ಅಸಾಧ್ಯವೂ ಅಲ್ಲ ಎಂದು ಅವನು ತಿಳಿಯುವುದು ಅವನಿಗೇ ಉತ್ತಮ.

ಒಂದು ವೇಳೆ ಯಾವನೇ ವ್ಯಕ್ತಿ ವಿಶ್ವದ ಸೃಷ್ಟಿಕರ್ತನನ್ನು ಸರಿಯಾದ ರೀತಿಯಲ್ಲಿ ಗುರುತಿಸಲು ಸಮರ್ಥನಾದ ಎಂದಾದರೆ ಇಂತಹವರಲ್ಲಿ ತಮ್ಮ ಮರುಸೃಷ್ಟಿಯ ಬಗ್ಗೆ ಕಿಂಚಿತ್ತೂ ಸಂದೇಹವೇ ಉಳಿಯದು.

ಮನುಷ್ಯನಲ್ಲಿ ಸೃಷ್ಟಿಗೊಳ್ಳುವ ಇಂತಹ ಸಂದೇಹಗಳನ್ನು ಪವಿತ್ರ ಕುರ್‌ಆನ್ ದೂರಗೊಳಿಸುತ್ತಿದೆ. ಮರಣದ ವೇಳೆ ದೇವಚರ ಆ ಅಸಲಿ ವಸ್ತು(ಆತ್ಮ)ವನ್ನು ಮನುಷ್ಯನ ದೇಹದಿಂದ ಹೊರತೆಗೆಯುವುದು. ಈ ವಸ್ತು ದೇಹದಿಂದ ಬೇರ್ಪಟ್ಟ ಕಾರಣದಿಂದ ಮನುಷ್ಯನ ಸಾವು ಸಂಭವಿಸುವುದು ಮತ್ತು ದೇಹ ನಿಷ್ಕ್ರಿಯವಾಗುವುದು. ಇಲ್ಲಿಗೆ ಮನುಷ್ಯನ ಇಹಲೋಕದ ಜೀವನದ ಕತೆ ಮುಗಿಯುತ್ತದೆ.

ಪವಿತ್ರ ಕುರ್‌ಆನ್ ಈ ಕುರಿತು ಹೀಗೆ ವಿವರಿಸುತ್ತಿದೆ, "ನಾವು ಮಣ್ಣುಪಾಲಾಗಿ ಹೋದ ಬಳಿಕ ಪುನಃ ಹೊಸತಾಗಿ ಸೃಷ್ಟಿಸಲ್ಪಡುತ್ತೇವೆಯೇ ಎಂದು ಇವರು ಕೇಳುತ್ತಾರೆ. ವಾಸ್ತವದಲ್ಲಿ ಇವರು ತಮ್ಮ ಪ್ರಭುವಿನ ಭೇಟಿಯನ್ನು ನಿರಾಕರಿಸುವವರಾಗಿದ್ದಾರೆ. ನಿಮ್ಮ ಮೇಲೆ ನಿಯುಕ್ತನಾಗಿರುವ ಮೃತ್ಯು ದೂತನು ನಿಮ್ಮನ್ನು ಸರ್ವಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವನು. ತರುವಾಯ ನೀವು ನಿಮ್ಮ ಪ್ರಭುವಿನ ಕಡೆಗೆ ಮರಳಿಸಲ್ಪಡುವಿರಿ ಎಂದು ಇವರೊಡನೆ ಹೇಳಿರಿ. ಈ ಅಪರಾಧಿಗಳು ತಲೆಬಾಗಿಸಿ ತಮ್ಮ ಪ್ರಭುವಿನ ಮುಂದೆ ನಿಂತಿರುವ ಸಂದರ್ಭವನ್ನು ನೀವು ನೋಡುತ್ತಿದ್ದರೆ! (ಆಗ ಇವರು), ನಮ್ಮ ಪ್ರಭೂ, ನಾವು ಚೆನ್ನಾಗಿ ನೋಡಿಕೊಂಡೆವು ಮತ್ತು ಕೇಳಿದೆವು. ಇನ್ನು ನಮ್ಮನ್ನು ಸತ್ಕರ್ಮವೆಸಗಲಿಕ್ಕಾಗಿ ಮರಳಿ ಕಳುಹಿಸಿಬಿಡು. ಈಗ ನಮಗೆ ಖಾತ್ರಿಯಾಗಿ ತಿಳಿಯಿತು (ಎನ್ನುತ್ತಿರುವರು)." (ಅಸ್ಸಜ್ದ: 10–12)

ಮೇಲಿನ ವಚನಗಳಲ್ಲಿ ವ್ಯಕ್ತವಾಗಿರುವ ಅಪರಾಧಿಯಾದ ಮನುಷ್ಯನಿಗೆ ಇನ್ನೊಂದು ಜೀವನ ಇದೆ ಎಂಬುದನ್ನು ನಿರಾಕರಿಸಿದವನು ಆ ಜೀವನದಲ್ಲಿ ಇಹಲೋಕದ ಕರ್ಮ ಮತ್ತು ಅನುಗ್ರಹಗಳ ಕುರಿತು ಉತ್ತರಿಸಲಿಕ್ಕಿದೆ ಎಂಬುದನ್ನು ನಿರಾಕರಿಸಿದ ಸಲುವಾಗಿಯೇ ಅವರು ಪಥಭ್ರಷ್ಟಗೊಂಡರು. ದಾರಿತಪ್ಪಿ ಅಪರಾಧಿಗಳಾಗಿದ್ದು ಇಂತಹ ವರು ಎಂತಹವರೆಂದರೆ ಜನರ ಮೇಲೆ ಅಕ್ರಮವೆಸಗಿದವರು ಮತ್ತು ಇತರರ ಹಕ್ಕು ಗಳನ್ನು ಕಬಳಿಸಿದವರು ಆಗಿದ್ದಾರೆ. ಇನ್ನು ತನ್ನ ಪ್ರಭುವಿನ ಕಡೆಗೆ ಮರಳಲಿಕ್ಕಿದೆ ಎಂಬುದರ ಅರ್ಥ ಸತ್ತ ಮೇಲೆ ರೂಹ್(ಆತ್ಮ)ವನ್ನು ತೆಗೆದುಕೊಂಡು ಹೋಗಲಾಗುವುದು ಎಂದೂ ಮತ್ತು ಇನ್ನೊಂದು ಅರ್ಥ ವಿಚಾರಣೆಯ ದಿನ ಅದನ್ನು ಹಾಜರುಪಡಿಸ ಲಾಗುವುದು ಎಂದೂ ಆಗಿದೆ.

ಯಾವ ಜ್ಞಾನದ ಆಧಾರದಲ್ಲಿ ಪರಲೋಕವನ್ನು ನಿರಾಕರಿಸಲಾಗುತ್ತಿದೆ?

ಯಾರು ಪರಲೋಕ ಜೀವನವನ್ನು ಅರ್ಥಾತ್ ಮತ್ತೊಮ್ಮೆ ಎಬ್ಬಿಸಲ್ಪಡುವುದನ್ನು ಮತ್ತು ಐಹಿಕ ಜೀವನದ ಲೆಕ್ಕಾಚಾರ ನೀಡಲಿಕ್ಕಿದೆ ಎಂಬುದನ್ನು ಕೇವಲ ತಮ್ಮ ಗುಮಾನಿಯ ಆಧಾರಲ್ಲಿ ನಿರಾಕರಿಸುತ್ತಾರೆಯೇ. ಅರಿವಿದ್ದೂ ಹೀಗೆ ಮಾಡುತ್ತಿದ್ದಾರೆಯೇ? ಆದರೆ ಪರಲೋಕ ನಿಶ್ಚಿತವಾಗಿಯೂ ಬರುತ್ತದೆ ಎಂದು ಅದೃಶ್ಯ ಜ್ಞಾನಿ ಹೇಳುವುದು. ಸಂಪೂರ್ಣ ಜ್ಞಾನ ಅವನಿಗಿದೆ. ಅವನು ಮನುಷ್ಯರನ್ನು ಒಂದು ಉದ್ದೇಶದಂತೆ ಸೃಷ್ಟಿಸಿ ತನ್ನ ಸೃಷ್ಟಿಗಳಿಗೆ ಜೀವನವಿತ್ತುದು ಅವನ ಅನುಗ್ರಹವಾಗಿದೆ. ಆದುದರಿಂದ ಅವರು ಎಸಗಿದ ಕರ್ಮಗಳ ಲೆಕ್ಕಾಚಾರದ ಸಮಯದಲ್ಲಿ ಉತ್ತರಿಸುವುದು. ಅವರ ವರ ಕರ್ಮಗಳಂತೆ ನ್ಯಾಯೋಚಿತ ತೀರ್ಮಾನ ನೀಡುವುದು. ಅವರಿಗೆ ಅವರವರ ಕರ್ಮಕ್ಕೆ ಸೂಕ್ತ ಪ್ರತಿಫಲ ಅಥವಾ ಶಿಕ್ಷೆ ನೀಡುವುದು ಮತ್ತು ತನ್ನ ಸೃಷ್ಟಿಕಾರ್ಯದ ಉದ್ದೇಶವನ್ನು ಸೃಷ್ಟಿಗಳ ಬಳಿಗೇ ತಲುಪಿಸುತ್ತಾನೆ.

ಯಾಕೆಂದರೆ ಅದೃಶ್ಯ ಜ್ಞಾನಿಗೆ ಸಕಲ ಜ್ಞಾನವಿದ್ದು ಅವನೇ ಪರಲೋಕ ಅಸ್ತಿತ್ವಕ್ಕೆ ಬರುವುದನ್ನು ಜ್ಞಾನದ ಆಧಾರದಲ್ಲಿ ಪ್ರಕಟಿಸುತ್ತಾನೆ. ಇಲ್ಲ ಎಂದು ನಿರಾಕರಿಸುವವರೂ ಕೂಡ ಜ್ಞಾನಿಗಳಾಗಿದ್ದರೆ ಈ ವಾದ ನ್ಯಾಯೋಚಿತವಾಗಿರುತ್ತಿತ್ತು. ಆದರೆ ಅವರಿಗೆ ಆ ಬಗ್ಗೆ ಅರಿವಿಲ್ಲ. ತಮ್ಮ ಸುಳ್ಳು ಕತೆಗಳು ಬಹಿರಂಗವಾಗದಿರಲಿ ಎಂದು ಪರಲೋಕದ ಮಹತ್ವವನ್ನು ಕೀಳಾಗಿಸಿ ಮೂರ್ಖ ವಾದಗಳನ್ನು ಅವರು ಮುಂದಿಡುತ್ತಾರೆ. ತಮ್ಮ ಪೂರ್ವಜರನ್ನು ಪುನಃ ಜೀವಂತಗೊಳಿಸಿ ತಂದರೆ ನಾವು ಪರಲೋಕದ ಮೇಲೆ ವಿಶ್ವಾಸ ಇರಿಸುತ್ತೇವೆ ಎಂದು ಅವರು ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ.

ಇಂತಹ ನಿರಾಕರಣೆಯ ಮನೋವೃತ್ತಿಯವರ ನೆಪಗಳನ್ನು ಸೂಚಿಸಿ ಪವಿತ್ರ ಕುರ್‌ಆನ್ ಇವರ ಮಾತು ಜ್ಞಾನಾಧಾರಿತವಾದುದಲ್ಲ ಎಂದು ವಿವರಿಸುತ್ತಿದೆ.

"ಜೀವನವೆಂದರೆ ನಮ್ಮ ಈ ಲೋಕದ ಜೀವನ ಮಾತ್ರ. ನಮ್ಮ ಸಾವು ಮತ್ತು ಬದುಕು ಇಲ್ಲೇ. ಕಾಲಚಕ್ರದ ಹೊರತು ಇನ್ನಾವುದೂ ನಮ್ಮನ್ನು ನಾಶಗೊಳಿಸುವುದಿಲ್ಲವೆಂದು ಇವರು ಹೇಳುತ್ತಾರೆ. ವಾಸ್ತವದಲ್ಲಿ ಇವರ ಬಳಿ ಈ ಕುರಿತು ಯಾವ ಜ್ಞಾನವೂ ಇಲ್ಲ. ಇವರು ಕೇವಲ ಊಹೆಯ ಆಧಾರದಲ್ಲಿ ಹೀಗೆ ಹೇಳುತ್ತಿದ್ದಾರೆ. ನಮ್ಮ ಸುವ್ಯಕ್ತ ಸೂಕ್ತಗಳನ್ನು ಇವರಿಗೆ ಕೇಳಿಸಲಾದಾಗ, ಇವರ ಬಳಿ– "ನೀವು ಸತ್ಯವಂತರಾಗಿದ್ದರೆ ನಮ್ಮ ಪೂರ್ವಜರನ್ನು ಎಬ್ಬಿಸಿ ತನ್ನಿರಿ" ಎಂದು ಹೇಳುವುದರ ಹೊರತು ಬೇರೆ ಯಾವ ವಾದವೂ ಇರುವುದಿಲ್ಲ." (ಅಲ್ ಜಾಸಿಅ: 24–25)

ಅನಿರೀಕ್ಷಿತ ಸ್ಫೋಟದಂತೆ ಲೋಕಾಂತ್ಯ ಸಂಭವಿಸುವುದು

ಪರಲೋಕವನ್ನು ನಿರಾಕರಿಸುವವರು ಅದೊಂದು ಕಟ್ಟುಕತೆ ಮತ್ತು ಸುಳ್ಳೆಂದು ಭಾವಿಸಿಕೊಂಡವರು. ಒಂದು ವೇಳೆ ಅದು ಸಂಭವಿಸಿದ ನಂತರ ಅದನ್ನು ನೋಡಿ ಪರಲೋಕದ ಮೇಲೆ ಸಂಪೂರ್ಣ ವಿಶ್ವಾಸವಿರಿಸಬಹುದಲ್ಲವೇ ಎಂಬುದು ಅವರ ಭಾವನೆಯಾಗಿದೆ. ಈ ಕೆಳಗಿನ ವಚನಗಳಲ್ಲಿ ಲೋಕಾಂತ್ಯ ದಿನ ಆಗಮಿಸುವುದು ನಿಶ್ಚಿತ ಮತ್ತು ಅದು ಅನಿರೀಕ್ಷಿತವಾಗಿ ಸಂಭವಿಸುವುದು ಮತ್ತು ಹಠಾತ್ ಸ್ಫೋಟದ ರೀತಿಯಲ್ಲಿ ಸಂಭವಿಸುವುದು ಎಂಬುದನ್ನು ವಿವರಿಸಲಾಗಿದೆ.

ಅದು ಬಂದರೆ ಯಾವ ವ್ಯಕ್ತಿಗೂ ಯಾವ ವಸ್ತುವಿಗೂ ಕಿಂಚಿತ್ತೂ ಸಮಯ ಅವಕಾಶ ಸಿಗದು. ತದನಂತರ ಇನ್ನೊಂದು ಸ್ಫೋಟ ಸಂಭವಿಸುತ್ತದೆ. ಎರಡನೇ ಸಲ ಜನರು ಜೀವಂತಗೊಳ್ಳುತ್ತಾರೆ. ತಮ್ಮ ಪ್ರಭುವಿನ ಬಳಿಗೆ ಮರಳುತ್ತಾರೆ. ಆಗ ಮನುಷ್ಯರಿಗೆ ಸಿಕ್ಕಿದ ಪ್ರಥಮ ಜೀವನದಲ್ಲಿ ಅವರ ವಿಶ್ವಾಸ ಮತ್ತು ಕರ್ಮಗಳಿಗೆ ನ್ಯಾಯ ದಾನವಾಗುವುದು. ಪ್ರತಿಫಲ ಮತ್ತು ಶಿಕ್ಷೆ ಇರುವುದು. ಅಲ್ಲಾಹನು ಲೋಕಾಂತ್ಯದ ನಕ್ಷೆ ಬಿಡಿಸಿಟ್ಟಿದ್ದು ಅದನ್ನು ಪವಿತ್ರ ಕುರ್‌ಆನ್ ವಿವರಿಸುತ್ತಿದೆ.

"(ಪ್ರಳಯ ದಿನದ) ಬೆದರಿಕೆ ಈಡೇರುವುದಾದರೂ ಯಾವಾಗ? ನೀವು ಸತ್ಯವಂತರಾಗಿದ್ದರೆ ತಿಳಿಸಿರಿ ಎಂದು ಇವರು ಹೇಳುತ್ತಾರೆ. ವಾಸ್ತವದಲ್ಲಿ ಇವರು ಯಾವುದನ್ನು ಕಾಯುತ್ತಿರುವರೋ ಅದೊಂದು ಘನಸ್ಫೋಟವಾಗಿರುತ್ತದೆ. ಅದು– ಇವರು (ತಮ್ಮ ಲೌಕಿಕ ವ್ಯವಹಾರಗಳಲ್ಲಿ) ಜಗಳಾಡುತ್ತಿರುವಾಗ ಹಠಾತ್ತನೆ ಬಂದೆರಗುವುದು. ಆಗ ಅವರಿಗೆ ಉಯಿಲು ಮಾಡಲಿಕ್ಕೂ ಸಾಧ್ಯವಾಗದು ಮತ್ತು ತಮ್ಮ ಮನೆಯವರೆಡೆಗೆ ಮರಳಲಿಕ್ಕೂ ಆಗದು. ಅನಂತರ ಒಂದು ಕಹಳೆಯನ್ನು ಊದಲಾಗುವುದು. ಆಗ ಇವರು ಒಮ್ಮೆಲೇ ತಮ್ಮ ಪ್ರಭುವಿನ ಮುಂದೆ ಹಾಜರಾಗಲಿಕ್ಕಾಗಿ ತಮ್ಮ ಸಮಾಧಿಗಳಿಂದ ಹೊರಟು ಬರುವರು. ಅವರು ಭಯ ಭೀತರಾಗಿ 'ನಮ್ಮನ್ನು ನಮ್ಮ ಶಯನಗೃಹದಿಂದ ಎಬ್ಬಿಸಿರುವವರಾರು?' ಎಂದು ಕೇಳುವರು. ಇದು

ದಯಾಮಯನಾದ ದೇವನು ವಾಗ್ದಾನ ಮಾಡಿದುದೇ ಆಗಿದೆ ಮತ್ತು ಸಂದೇಶವಾಹಕರ ಮಾತು ಸತ್ಯವಾಗಿತ್ತು. ಅದೊಂದು ಘನಸ್ಫೋಟವಾಗಿರುವುದು ಮತ್ತು ಎಲ್ಲರೂ ನಮ್ಮ ಮುಂದೆ ಹಾಜರುಗೊಳಿಸಲ್ಪಡುವರು. ಇಂದು ಯಾರ ಮೇಲೂ ಸ್ವಲ್ಪವೂ ಅನ್ಯಾಯವಾಗದು. ನಿಮಗೆ ನೀವು ಮಾಡುತ್ತಿದ್ದ ಕರ್ಮಗಳಿಗನುಸಾರವಾದ ಪ್ರತಿಫಲವನ್ನೇ ಕೊಡಲಾಗುವುದು." **(ಯಾಸೀನ್: 48–54)**

ಸೃಷ್ಟಿಕರ್ತನ ಮುಂದೆ ಉತ್ತರಿಸಲು ಹಾಜರಾಗಬೇಕಾಗಿದೆ

ಪರಲೋಕದ ಸಮಾವೇಶ ಮತ್ತು ವಿಚಾರಣೆ ನಡೆಸುವುದು ಸೃಷ್ಟಿಕರ್ತನಿಗೆ ಕಷ್ಟ ಕಾರ್ಯವಲ್ಲ. ಪ್ರತಿಯೊಂದು ವಸ್ತುವೂ ಪೂರ್ಣ ರೂಪದಲ್ಲಿಯೇ ಸಂಭವಿಸುತ್ತದೆ. ಅಲ್ಲಾಹನು ತನ್ನ ಗ್ರಂಥ ಪವಿತ್ರ ಕುರ್‌ಆನ್‌ನಲ್ಲಿ ಈ ಕುರಿತು ಹೀಗೆ ವಿವರಿಸಿದ್ದಾನೆ.

"ನಾವು ಪರ್ವತಗಳಿಗೆ ಚಲನೆ ಕೊಡುವ ಆ ದಿನದ ಬಗ್ಗೆ ಚಿಂತೆ ಇರಬೇಕು. ಅಂದು ನೀವು ಭೂಮಿಯನ್ನು ಸಂಪೂರ್ಣ ನಗ್ನವಾಗಿ ಕಾಣುವಿರಿ ಮತ್ತು ನಾವು ಸಕಲ ಮಾನವರನ್ನು ಒಬ್ಬನೂ ಬಿಟ್ಟು ಹೋಗದಂತೆ ಸುತ್ತುಗಟ್ಟಿ ಒಟ್ಟುಗೂಡಿಸುವೆವು. ಸರ್ವರೂ ನಿಮ್ಮ ಪ್ರಭುವಿನ ಸನ್ನಿಧಿಯಲ್ಲಿ ಸಾಲು ಸಾಲಾಗಿ ತರಲ್ಪಡುವರು. ಇದೋ, ನಾವು ನಿಮ್ಮನ್ನು ಪ್ರಥಮ ಬಾರಿ ಸೃಷ್ಟಿಸಿದ್ದಂತೆಯೇ ನೀವೆಲ್ಲ ನಮ್ಮ ಬಳಿಗೆ ಬಂದು ಬಿಟ್ಟಿರಲ್ಲಾ! ನಾವು ನಿಮಗಾಗಿ ಯಾವುದೇ ವಾಗ್ದಾನದ ಸಮಯವನ್ನು ನಿಶ್ಚಯಿಸಿಯೇ ಇಲ್ಲವೆಂದು ನೀವು ತಿಳಿದು ಕೊಂಡಿದ್ದೀರಿ ಮತ್ತು ಕರ್ಮಪತ್ರವು ಮುಂದಿರಿಸಲ್ಪಡುವುದು. ಆಗ ಅಪರಾಧಿಗಳು ತಮ್ಮ ಜೀವನ ಗ್ರಂಥಲ್ಲಿ ಅಡಕವಾಗಿರುವುದರ ಬಗ್ಗೆ ಭಯಭೀತರಾಗಿ, "ಅಯ್ಯೋ ನಮ್ಮ ದುರ್ಗತಿಯೇ, ಇದೆಂತಹ ಗ್ರಂಥ! ನಮ್ಮ ಯಾವುದೇ ಚಿಕ್ಕ ಹಾಗೂ ದೊಡ್ಡ ಕೃತ್ಯವು ಇದರಲ್ಲಿ ಲಿಖಿತಗೊಳ್ಳದೆ ಬಿಟ್ಟು ಹೋಗಿಲ್ಲ ವಲ್ಲಾ" ಎಂದು ಹೇಳುತ್ತಿರುವುದನ್ನು ನೀವು ಕಾಣುವಿರಿ. ಅವರು ಏನೆಲ್ಲ ಮಾಡಿ ರುವರೋ ಅವೆಲ್ಲವನ್ನೂ ತಮ್ಮ ಮುಂದೆ ಕಾಣುವರು ಮತ್ತು ನಿಮ್ಮ ಪ್ರಭು ಯಾರ ಮೇಲೂ ಕಿಂಚಿತ್ತೂ ಅಕ್ರಮವೆಸಗಲಾರನು." **(ಅಲ್ ಕಹ್ಫ್: 47–49)**

ಕರ್ಮಗಳಿಗೆ ಪ್ರತಿಫಲ ಅಥವಾ ಶಿಕ್ಷೆ ಆವಶ್ಯಕವಾಗಿದೆ

ಕರ್ಮಕ್ಕೆ ಒಂದೋ ಪ್ರತಿಫಲ ಅಥವಾ ಶಿಕ್ಷೆಯು ಸಿಗುವುದು ಆವಶ್ಯಕವಾಗಿದೆ. ಆಗಲೇ ಆ ಪ್ರಪಂಚದ ಉದ್ದೇಶ ಪೂರ್ಣಗೊಳ್ಳುವುದು. ಇಲ್ಲದಿದ್ದರೆ ಈ ಪ್ರಪಂಚ ಈ ಜೀವನದ ಅಸ್ತಿತ್ವ ಅನರ್ಥಕರವೂ ವ್ಯರ್ಥವೂ ಆಗುತ್ತದೆ. ಹಾಗಲ್ಲ, ಅಲ್ಲಾಹನ ಪ್ರತಿಯೊಂದು ಕಾರ್ಯವೂ ಪರಿಪೂರ್ಣ ಉದ್ದೇಶದಿಂದ ಕೂಡಿದ್ದೆಂದು ಪವಿತ್ರ ಕುರ್‌ಆನ್ ಹೇಳುತ್ತದೆ. "ಅಲ್ಲಾಹನು ಭೂಮಿ–ಆಕಾಶಗಳನ್ನು ಸತ್ಯಪೂರ್ಣವಾಗಿ

ಸೃಷ್ಟಿಸಿರುತ್ತಾನೆ. ಪ್ರತಿಯೊಬ್ಬ ಜೀವಿಗೆ ಅದರ ದುಡಿಮೆಯ ಪ್ರತಿಫಲ ನೀಡಲಿಕ್ಕಾಗಿ. ಖಂಡಿತವಾಗಿಯೂ ಜನರ ಮೇಲೆ ಅಕ್ರಮವೆಸಗಲಾದು." (ಅಲ್ ಜಾಸಿಯ: 22)

ಸತ್ಯಪೂರ್ಣವಾಗಿ ಎಂದರೆ ಯಾವ ವ್ಯಕ್ತಿಯು ಸಂಪೂರ್ಣ ಉದ್ದೇಶದೊಂದಿಗೆ ಉತ್ತಮವಾದ ಮತ್ತು ಕೆಟ್ಟದಾಗಿರುವ ವಿಷಯ ಮತ್ತು ಕರ್ಮಗಳನ್ನ ವಿವೇಚಿಸಿ ವ್ಯತ್ಯೇಕಿಸಿ ಉತ್ತಮವಾದುದು ಅಳವಡಿಸಿಕೊಳ್ಳುವನು ಮತ್ತು ಕೆಡುಕಿನಿಂದ ಸುರಕ್ಷಿತ ವಾಗುವನು ಎಂಬ ಅರ್ಥವಾಗಿದೆ. ಅವನಿಗೆ ಅವನ ಕರ್ಮಗಳ ಪ್ರಕಾರ ನ್ಯಾಯ ಪೂರ್ಣವಾಗಿ ಪ್ರತಿಫಲ ಅಥವಾ ಶಿಕ್ಷೆಯನ್ನು ನೀಡಲಾಗುತ್ತದೆ. ಅದರಲ್ಲಿ ಕಿಂಚಿತ್ತು ಅನ್ಯಾಯವಾಗುವುದಿಲ್ಲ. ಒಂದು ವೇಳೆ ಪ್ರತಿಫಲದ ದಿನವೇ ಇಲ್ಲ ಎಂದಾದರೆ ಉತ್ತಮ ಕರ್ಮವೆಸಗಿದ ವ್ಯಕ್ತಿಗಳ ಮೇಲೆ ಅನ್ಯಾಯವಾಗುತ್ತದೆ ಅಂದರೆ ಆ ಪ್ರತಿಫಲದ ದಿನ ಬಂದರೆ ಮಾತ್ರ ಅವರ ಒಳಿತುಗಳಿಗೆ ಪ್ರತಿಫಲವು ಸಿಗಲಿದೆ.

ಪರೀಕ್ಷೆಯ ದಿನ ವಿದ್ಯಾರ್ಥಿ ಪರೀಕ್ಷಾ ಹಾಲಿನಲ್ಲಿ ಕುಳಿತುಕೊಳ್ಳುವ ಉದ್ದೇಶವೇ ಪರೀಕ್ಷೆ ನಡೆದ ಬಳಿಕ ತನಗೆ ಫಲಿತಾಂಶ(ಪರಿಣಾಮ) ಸಿಗುತ್ತದೆ ಎಂದಾಗಿದೆ ಮತ್ತು ಫಲಿತಾಂಶ ಪ್ರಕಟವಾದ ಮೇಲೆಯೇ ಆತನ ಉದ್ದೇಶ ಪೂರ್ಣಗೊಳ್ಳುತ್ತದೆ.

ಆದರೆ ಕೆಟ್ಟ ಕರ್ಮವೆಸಗಬಯಸಿದ ಜನರು ನ್ಯಾಯದಿಂದೊಳಗೊಂಡ ನೈಜ ನ್ಯಾಯಾಲಯ ರೂಪುಗೊಳ್ಳುವುದನ್ನು ಬಯಸುವುದಿಲ್ಲ. ಆದ್ದರಿಂದ ಇಂತಹವರು ಪರಲೋಕದಲ್ಲಿ ವಿಶ್ವಾಸ ಇರಿಸಲು ಸಿದ್ಧರಿರುವುದಿಲ್ಲ. ಅವರು ವಿಶ್ವಾಸ ಇರಿಸದಿದ್ದರೆ ಸತ್ಯ ಬದಲಾಗುವುದಿಲ್ಲ. ಯಾಕೆಂದರೆ ಒಳಿತು ಕೆಡುಕು ಎರಡು ಪ್ರತ್ಯಪ್ರತ್ಯೇಕವಾಗಿ ರುತ್ತವೆ. ಅದರಂತೆ ಅವೆರಡರ ಪರಿಣಾಮಗಳು ಬೇರೆ ಬೇರೆಯಾಗಿರುತ್ತದೆ. ಮನುಷ್ಯನ ಸ್ವಭಾವ ಒಳಿತನ್ನು ಇಷ್ಟಪಡುತ್ತದೆ ಮತ್ತು ಕೆಡುಕನ್ನು ಸಹಜವಾಗಿ ಮನುಷ್ಯನ ಸ್ವಭಾವ ಇಷ್ಟಪಡುವುದಿಲ್ಲ. ದ್ವೇಷಿಸುತ್ತದೆ. ಆದ್ದರಿಂದಲೇ ಉತ್ತಮ ಜನರು ಪ್ರೀತಿ ಪಾತ್ರರೂ ಕೆಟ್ಟ ಜನರು ವಿರೋಧಿಸಲ್ಪಡುತ್ತಾರೆ.

ಸಹಜವಾಗಿ ಉತ್ತಮ ವ್ಯಕ್ತಿಗಳು ಪುರಸ್ಕಾರಕ್ಕೆ ಅರ್ಹರು ಮತ್ತು ಅವರು ಪುರಸ್ಕೃತ ವಾಗಬೇಕು ಮತ್ತು ಕೆಟ್ಟವರು ಶಿಕ್ಷಿಸಲ್ಪಡಬೇಕು ಎಂಬುದು ಮನುಷ್ಯನ ಸ್ವಭಾವದ ಬೇಡಿಕೆಯಾಗಿರುತ್ತದೆ. ಒಳ್ಳೆಯ ಕರ್ಮ ಮತ್ತು ಕೆಟ್ಟ ಕರ್ಮಕ್ಕೆ ಪರಿಣಾಮ ಒಂದೇ ರೀತಿಯಿದ್ದರೆ ಅದು ಸರಿಯಲ್ಲ ಮತ್ತು ಅದು ಸ್ವೀಕಾರ ಯೋಗ್ಯವಾಗುವುದಿಲ್ಲ. ಇದನ್ನು ಮನುಷ್ಯ ಸ್ವಭಾವ ಪ್ರತಿಭಟಿಸುತ್ತದೆ ಮತ್ತು ವಿರೋಧಿಸುತ್ತದೆ.

ಕೆಟ್ಟ ಮತ್ತು ಒಳ್ಳೆಯ ಕರ್ಮಗಳಿಗೆ ಇರುವ ಪರಿಣಾಮ ಒಂದೇ ಎಂದಾದಾಗ ಅವು ನ್ಯಾಯಾಧೀಶನ ಬಹುದೊಡ್ಡ ಉತ್ಪ್ರೇಕ್ಷೆಯಾಗಿ ಗೋಚರಿಸುತ್ತದೆ. ಆದುದರಿಂದ ಸತ್ಯ ಮತ್ತು ನ್ಯಾಯ ಪ್ರದಾನ ಮಾಡುವ ಅಲ್ಲಾಹನು ಪವಿತ್ರ ಕುರ್‌ಆನ್‌ನಲ್ಲಿ ಹೀಗೆ

ವಿವರಿಸುತ್ತಾನೆ, "ದುಷ್ಕರ್ಮಗಳನ್ನೆಸಗಿದವರು, ನಾವು ಅವರನ್ನು ಸತ್ಯವಿಶ್ವಾಸವನ್ನಿರಿಸಿ ಸತ್ಕರ್ಮ ವೆಸಗಿದವರಿಗೆ ಸಮಾನರಾಗಿ ಮಾಡುವವೆಂದೂ ಅವರಿಬ್ಬರ ಜೀವನ ಮರಣಗಳು ಸಮಾನ ಸ್ವರೂಪದ್ದಾಗಿರುವುದೆಂದೂ ಭಾವಿಸಿಕೊಂಡಿರುವರೇ? ಇವರು ಮಾಡುವ ತೀರ್ಮಾನ ಬಹಳ ಕೆಟ್ಟದು." (ಅಲ್ ಜಾಸಿಯ: 21)

ಕರ್ಮಕ್ಕೆ ನ್ಯಾಯಯುತವಾದ ಪ್ರತಿಫಲ

ನಾಯಕರು ತಮ್ಮ ನೇತೃತ್ವವನ್ನು ಚಲಾಯಿಸಲಿಕ್ಕಾಗಿ ದೇವನು, ಪರಲೋಕ ಎಂಬುದೆಲ್ಲವೂ ನಿರರ್ಥಕವೂ ಅನುಪಯುಕ್ತವೂ ಆಗಿರುವ ಕಾರ್ಯಗಳೆಂದು ಪ್ರತಿಪಾದಿಸುತ್ತಾರೆ. ಈ ರೀತಿ ತಮ್ಮ ಅನುಯಾಯಿಗಳನ್ನು ವಂಚಿಸುತ್ತಾರೆ. ಒಂದು ವೇಳೆ ಪರಲೋಕ ಬಂದರೂ ಸಹ ನಾವು ನಿಮ್ಮನ್ನು ರಕ್ಷಿಸುವೆವು ಎಂದು ಅನುಚರರಿಗೆ ಮಾತು ಕೊಡುತ್ತಾರೆ. ಆದರೆ ಇವೆಲ್ಲ ಅವರಾಡುವ ಸುಳ್ಳು ಮಾತುಗಳು. ಆದುದರಿಂದ ಪ್ರತಿಯೊಬ್ಬನೂ ಸ್ವಯಂ ತನ್ನ ಭವಿಷ್ಯದ ಕುರಿತು ಚಿಂತಿಸಬೇಕಾಗುತ್ತದೆ. ಮತ್ತು ಭವಿಷ್ಯದ ಕುರಿತು ಎಚ್ಚರದಿಂದ ಸ್ವಯಂ ತೀರ್ಮಾನಿಸಿ ಹೆಜ್ಜೆ ಮುಂದಿಡಬೇಕಾಗುತ್ತದೆ. ಪರಲೋಕದಲ್ಲಿ ಅಸ್ತಿತ್ವಕ್ಕೆ ಬರುವ ನ್ಯಾಯಾಲಯದಲ್ಲಿ ಯಾರೂ ಯಾರಿಗೂ ಉಪಕಾರಕ್ಕೆ ಸಿಗುವುದಿಲ್ಲ. ಸತ್ಯದ ವಿರುದ್ಧ ಯೋಜನೆ ಸಿದ್ಧಪಡಿಸಿದ ನಾಯಕರಿಗೂ ಮತ್ತು ಅವರ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಅನುಯಾಯಿಗಳಿಗೂ ಪರಲೋಕದಲ್ಲಿ ಶಿಕ್ಷೆ ಇದೆ. ಶಿಕ್ಷಿಸಲ್ಪಡುತ್ತಾರೆ.

ಅಲ್ಲಾಹನು ನೈಜ ನ್ಯಾಯಾಧೀಶ ಮತ್ತು ಅದೃಶ್ಯ ಜ್ಞಾನಿಯಾಗಿದ್ದು ಅವನ ಬಳಿ ಯಾವುದೇ ತಕರಾರು, ಆರೋಪಗಳು ಕಾರ್ಯ ಸಾಧುವಲ್ಲ. ಇದನ್ನು ಅಲ್ಲಾಹನು ಸ್ಪಷ್ಟ ವಚನಗಳಲ್ಲಿ ಹೀಗೆ ವಿವರಿಸಿದ್ದಾನೆ, "ಆ ಬಳಿಕ ಇವರು ಪರಸ್ಪರರ ಕಡೆ ತಿರುಗಿಕೊಂಡು ಪ್ರಶ್ನಿಸತೊಡಗುವರು. (ಅನುಯಾಯಿಗಳು ತಮ್ಮ ನಾಯರೊಡನೆ) ನೀವು ನಿಜವಾಗಿ ಸ್ವತಃ ನೀವೇ ಸತ್ಯ ವಿಶ್ವಾಸ ಸ್ವೀಕರಿಸುವವರಾಗಿರಲಿಲ್ಲ. ನಿಮ್ಮ ಮೇಲೆ ನಮ್ಮ ಪ್ರಭುತ್ವವೇನೂ ಇರಲಿಲ್ಲ. ಸ್ವತಃ ನೀವೇ ವಿದ್ರೋಹಿಗಳಾಗಿದ್ದಿರಿ. ಕೊನೆಗೆ ನಾವು ಯಾತನೆಯ ಸವಿಯನ್ನು ಉಣ್ಣಲಿದ್ದೇವೆಂಬ ನಿಮ್ಮ ಪ್ರಭುವಿನ ಮಾತಿಗೆ ಅರ್ಹರಾಗಿ ಬಿಟ್ಟೆವು. ಹೀಗೆ ನಾವು ನಿಮ್ಮನ್ನು ದಾರಿಗೆಡಿಸಿದೆವು. ನಾವು ಸ್ವತಃ ದಾರಿಗೆಟ್ಟಿದ್ದೆವು. ಹೀಗೆ ಅಂದು ಅವರೆಲ್ಲರೂ ಯಾತನೆಯಲ್ಲಿ ಸಮಭಾಗಿಗಳಾಗಿರು ವರು. ನಾವು ಅಪರಾಧಿಗಳೊಂದಿಗೆ ಹೀಗೆಯೇ ವರ್ತಿಸುತ್ತೇವೆ." (ಅಸ್ಸಾಫಾತ್: 27-34)

ಇವರು ಪ್ರತಿಯೊಬ್ಬರು ತಾವೆಸಗಿದ ಕರ್ಮಗಳಲ್ಲಿ ತಪ್ಪಿತಸ್ಥರಾಗಿದ್ದರು. ಇವರಿಗೆ ಯಾವುದು ತಪ್ಪು ಯಾವುದು ಸರಿ ಎಂಬುದನ್ನು ತಿಳಿಸಿ ಪ್ರತಿಯೊಬ್ಬ ಮನುಷ್ಯನಿಗೂ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲಾಗಿತ್ತು.

ಪರಲೋಕ ನಿಶ್ಚಿತವಾಗಿರುವುದರ ನಕ್ಷೆಯನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ

ಪವಿತ್ರ ಕುರ್‌ಆನ್‌ನಲ್ಲಿ ಬಂದಿರುವ ಸತ್ತು ಹುಟ್ಟಲಿರುವ ಚಿತ್ರಣವು ಈ ಘಟನೆ ನಡೆದಿದೆ ಎಂಬಂತೆ ವಿವರಿಸಲಾಗಿದ್ದು ಮನುಷ್ಯನ ಸ್ವಭಾವ ಮತ್ತು ಆತ್ಮಸಾಕ್ಷಿಗಳೂ ಈ ವಿವರಣೆಯಿಂದ ಪ್ರಯೋಜನ ಪಡೆದುಕೊಂಡು ಪರಲೋಕದ ಮೇಲೆ ಮನುಷ್ಯನಲ್ಲಿ ವಿಶ್ವಾಸ ಮೂಡಿಸಲು ಪ್ರಯತ್ನಿಸಲಾಗಿದೆ. ಕಣ್ಣ ಮುಂದೆ ನಡೆದಿರುವಂತೆ ಅಗಿವೆ. ಯಾರಾದರೂ ಕಣ್ಣಾರೆ ಕಂಡ ಘಟನೆಯಲ್ಲಿ ಪೂರ್ಣ ವಿಶ್ವಾಸ ಹೊಂದುತ್ತಾರೆ. ಅವರ ವಿಶ್ವಾಸ ದೃಢಗೊಳ್ಳುತ್ತದೆ. ಅದರಂತೆ ತಾವು ಕೇಳಿದ ಘಟನೆಯಲ್ಲೂ ಜನರಲ್ಲಿ ನಂಬಿಕೆ ಮೂಡುತ್ತದೆ. ಅದನ್ನು ನಿರಾಕರಿಸುವ ಗೊಡವೆಗೆ ಅವರು ಹೋಗುವುದಿಲ್ಲ.

ಹೀಗಿದ್ದೂ ಜನರು ಒಂದು ವೇಳೆ ನಿರಾಕರಿಸುವುದಾದರೆ ಇಂತಹ ಜನರು ಹಟಮಾರಿಗಳಾಗಿರುತ್ತಾರೆ. ಘಟನೆಯನ್ನು ಕಣ್ಣಾರೆ ಕಂಡೂ ಅದು ನಡೆದುದನ್ನು ನೋಡಿಯೂ ಅವರು ನಿರಾಕರಿಸಿದವರು. ಪವಿತ್ರ ಕುರ್‌ಆನ್ ಸತ್ತು ಹುಟ್ಟುವುದರ (ಪುನರುತ್ಥಾನದ) ಕುರಿತು ಘಟನೆಯನ್ನು ಪರೋಕ್ಷದ ಯಥಾರ್ಥತೆಯ ಕುರಿತು ಜನರಲ್ಲಿ ನಂಬಿಕೆ ಮೂಡಲಿ ಎಂಬ ಉದ್ದೇಶದಿಂದ ಅದು ನಡೆದಿದೆ ಎಂಬಂತೆ ಸ್ಪಷ್ಟವಾಗಿ ವಿವರಿಸಿದೆ.

"ಅದು ಕೇವಲ ಒಂದು ಘರ್ಜನೆಯಾಗಿರುವುದು ಮತ್ತು ಹಠಾತ್ತನೆ ಇವರು (ಇವರೀಗ ತಿಳಿಸಲಾಗುತ್ತಿರುವ ಎಲ್ಲವನ್ನೂ) ಕಣ್ಣಾರೆ ಕಾಣುತ್ತಿರುವರು. ಆಗ ಇವರು "ಅಯ್ಯೋ ನಮ್ಮ ದೌರ್ಭಾಗ್ಯವೇ! ಇದು ಪ್ರತಿಫಲದ ದಿನವೇ ಆಗಿದೆ" ಎನ್ನುವರು. ಇದು ನೀವು ಸುಳ್ಳಾಗಿಸುತ್ತಿದ್ದ ಆ ನಿರ್ಣಾಯಕ ದಿನವೇ ಆಗಿದೆ. (ಆಗ ಹೀಗೆ ಅಪ್ಪಣೆಯಾಗುವುದು)" ಎಲ್ಲಾ ಅಕ್ರಮಿಗಳನ್ನೂ ಅವರ ಜೊತೆಗಾರರನ್ನೂ ಅವರು ಅಲ್ಲಾಹನ್ನು ಬಿಟ್ಟು ಆರಾಧಿಸುತ್ತಿದ್ದ ಆರಾಧ್ಯರನ್ನೂ ಸುತ್ತುವರಿದು ತನ್ನಿರಿ. ಆನಂತರ ಅವರೆಲ್ಲರಿಗೂ ನರಕದ ದಾರಿಯನ್ನು ತೋರಿಸಿರಿ. ಇವರನ್ನು ಸ್ವಲ್ಪ ತಡೆಯಿರಿ. ಇವರನ್ನು ಪ್ರಶ್ನಿಸಲಿಕ್ಕಿದೆ. ನಿಮಗೇನಾಗಿದೆ? ಈಗ ಪರಸ್ಪರ ಸಹಾಯ ಮಾಡುವುದಿಲ್ಲವೇಕೆ? ಇದೇನು, ಇವರಿಂದು ಸ್ವತಃ ಶರಣಾಗುತ್ತಿದ್ದಾರಲ್ಲ! "ಆ ಬಳಿಕ ಇವರು ಪರಸ್ಪರರ ಕಡೆ ತಿರುಗಿಕೊಂಡು ಪ್ರಶ್ನಿಸತೊಡಗುವರು (ಅನುಯಾಯಿಗಳು ತಮ್ಮ ನಾಯಕರೊಡನೆ) "ನೀವು ನಮ್ಮ ಬಳಿಗೆ ಬಲಬದಿಯಿಂದ ಬರುತ್ತಿದ್ದಿರಿ" ಎನ್ನುವರು. ಆಗ ಅವರು ಹೇಳುವರು, ಅಲ್ಲ, ನಿಜವಾಗಿ ಸ್ವತಃ ನೀವೇ ಸತ್ಯವಿಶ್ವಾಸ ಸ್ವೀಕರಿಸುವವರಾಗಿರಲಿಲ್ಲ. ನಿಮ್ಮ ಮೇಲೆ ನಮ್ಮ ಪ್ರಭುತ್ವವೇನೂ ಇರಲಿಲ್ಲ. ಸ್ವತಃ ನೀವೇ ವಿದ್ರೋಹಿಗಳಾಗಿದ್ದಿರಿ. ಕೊನೆಗೆ ನಾವು ಯಾತನೆಯ ಸವಿಯನ್ನು ಉಣ್ಣಲಿದ್ದೇವೆಂಬ ನಿಮ್ಮ ಪ್ರಭುವಿನ ಮಾತಿಗೆ ಅರ್ಹರಾಗಿ ಬಿಟ್ಟೆವು. ಹೀಗೆ ನಾವು ನಿಮ್ಮನ್ನು ದಾರಿಗೆಡಿಸಿದೆವು. ನಾವು

ಸ್ವತಃ ದಾರಿಗೆಟ್ಟಿದ್ದೆವು" ಹೀಗೆ ಅಂದು ಅವರೆಲ್ಲರೂ ಯಾತನೆಯಲ್ಲಿ ಸಮ ಭಾಗಿಗಳಾಗಿರುವರು. ನಾವು ಅಪರಾಧಿಗಳೊಂದಿಗೆ ಹೀಗೆಯೇ ವರ್ತಿಸುತ್ತೇವೆ. ಇವ ರೊಡನೆ, ಅಲ್ಲಾಹನ ಹೊರತು ಇನ್ನಾವ ನೈಜ ಆರಾಧ್ಯನೂ ಇಲ್ಲ ಎಂದು ಹೇಳಿದಾಗ ಇವರು ದರ್ಪ ತೋರುತ್ತಿದ್ದರು. ಮತ್ತು ನಾವು ಒಬ್ಬ ಮತಿಭ್ರಾಂತ ಕವಿಗಾಗಿ ನಮ್ಮ ಆರಾಧ್ಯನನ್ನು ಬಿಟ್ಟು ಬಿಡಬೇಕೇ? ಎನ್ನುತ್ತಿದ್ದರು. ವಾಸ್ತವದಲ್ಲಿ ಆ ವ್ಯಕ್ತಿ ಸತ್ಯವನ್ನು ತಂದಿದ್ದನು ಮತ್ತು (ಗತ) ಸಂದೇಶವಾಹಕರನ್ನು ದೃಢೀಕರಿಸಿದ್ದನು. (ಆಗ ಅವರೊಡನೆ ಹೇಳಲಾಗುವುದು) ನೀವು ಖಂಡಿತವಾಗಿಯೂ ವೇದನಾತ್ಮಕ ಶಿಕ್ಷೆಯ ರುಚಿ ಸವಿಯಲಿರುವಿರಿ ಮತ್ತು ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವನ್ನೇ ನಿಮಗೆ ಕೊಡಲಾಗುತ್ತಿದೆ." **(ಅಸ್ಸಾಫಾತ್: 19–39)**

ಮೇಲೆ ಬಂದಿರುವ ವಚನಗಳಲ್ಲಿ ಭರವಸೆ ನೀಡಲಾದ ಸತ್ಯವು ಈ ಕೆಳಗಿನಂತಿವೆ...

- ಅಲ್ಲಾಹನಿಗೆ ಮನುಷ್ಯನ ಮರುಸೃಷ್ಟಿ(ಪುನರುತ್ಥಾನ) ಕಷ್ಟಕರ ಕಾರ್ಯವಲ್ಲ. ಮನುಷ್ಯನು ಅಸಾಧ್ಯ ಎಂದು ಬಗೆದ ಈ ಕಾರ್ಯಕ್ಕೆ ಅಲ್ಲಾಹನ ಒಂದು ಗದರಿಕೆ ಸಾಕು.

- ಈಗ ಯೌಮುಲ್ ಹಿಸಾಬ್ (ಲೆಕ್ಕಾಚಾರದ ದಿನ) ಕಣ್ಣಿಗೆ ಕಟ್ಟುವಂತೆ ವಿವರಿಸಿ ರುವುದನ್ನು ಅಂದು ಜನರು ನೇರ ನೇರ ನೋಡುವರು. ಆಗ ಜನರು ವಿವರಣೆಯ ಹಂತವನ್ನು ದಾಟಿ ನೈಜ ಹಂತಕ್ಕೆ ಪ್ರವೇಶಿಸುವರು.

- ಅಯ್ಯೋ ಸತ್ತೆವು! ಇದಂತೂ ಪ್ರತಿಫಲದ ದಿನವಾಗಿದೆ. ಅದಕ್ಕಾಗಿ ನಾವು ತಯಾರಿ ನಡೆಸಿಲ್ಲ ಎಂಬ ನಿಷೇಧಿಗಳ ಮಾತು ಅದು ಖಚಿತವಾಗಿಯೂ ಸಂಭವಿಸುತ್ತದೆ, ಅದು ಅಲ್ಲಾಹನಿಗೆ ಕಷ್ಟದ ಕಾರ್ಯವಲ್ಲ ಎಂದು ಹೇಳಲಾಗಿದೆ. ಅವರ ನಿರರ್ಥಕ ವಾದಗಳಿಗೆ ಉತ್ತರಿಸಲಾಗಿಲ್ಲ. ನಿರರ್ಥಕ ಮಾತುಗಳೆಂದರೆ ತಾವು ವಿಶ್ವಾಸ ಇರಿಸದಿರುವುದಕ್ಕೆ ಅವರಾಡುತ್ತಿದ್ದ ನೆಪಗಳಾಗಿವೆ.

- ಅಪರಾಧಿಗಳನ್ನು (ಅಲ್ಲಾಹನೊಂದಿಗೆ ಸಹಭಾಗಿಗೊಳಿಸಿ ತಮ್ಮ ಮೇಲೆ ಸ್ವಯಂ ಅಕ್ರಮವೆಸಗಿದ ಜನರು), ಇವರನ್ನು ಬೆಂಬಲಿಸಿದವರು ಮತ್ತು ಅವರ ಆರಾಧ್ಯರು ಗಳನ್ನು ಕೂಡ ಹಿಡಿಯಲಾಗುವುದು. ಇವರ ಗತ ಜೀವನದಿಂದ ಇವರಿಗೆ ನರಕ ಲಭಿಸುತ್ತದೆ.

- ಅಂದು ಇಂತಹ ನಾಯಕರು ಮತ್ತು ಅವರ ಅನುಯಾಯಿಗಳು ಅನುಭವಿಸುವ ಅವಸ್ಥೆಯ ಸಂಪೂರ್ಣ ಚಿತ್ರಣ ಮೇಲಿನ ವಚನಗಳಲ್ಲಿ ನೀಡಲಾಗಿದೆ. ಮಿಥ್ಯ ವಾದಿಗಳ ನೇತೃತ್ವವು ತಮ್ಮ ಹಿಂಬಾಲಕರನ್ನು ವಂಚಿಸಿತು, ಅಂಧಕಾರಕ್ಕೆ

ತಳ್ಳಿತು, ಅವರಲ್ಲಿದ್ದ ಅಜ್ಞಾನಗಳಿಂದ ಆಮಿಷವೊಡ್ಡುವ ಮೂಲಕ ಲಾಭ ಎತ್ತಿತು. ಹಿಂಬಾಲಕರಿಗೆ ಮಿಥ್ಯವಾದಿಗಳೊಂದಿಗೆ ಸೇರಿದರೆ ಭೌತಿಕ ಸುಖ ದೊರಕುತ್ತಿತ್ತು. ದೇವನ ಏಕತ್ವ, ಪರಲೋಕದಲ್ಲಿ ವಿಶ್ವಾಸ ಇರಿಸಿದರೆ ಅವರು ಸ್ವ ಇಚ್ಛೆಯಿಂದ ಜೀವಿಸುವಂತಿರಲಿಲ್ಲ. ಎಚ್ಚರಿಕೆಯಿಂದ ಜೀವಿಸಬೇಕಾಗುತ್ತಿತ್ತು. ಇದು ಅವರಿಗೆ ತೃಪ್ತಿ ನೀಡುತ್ತಿರಲಿಲ್ಲ.

- ಮಿಥ್ಯವಾದಿ ನಾಯಕರಿಗೂ ಅವರ ಅನುಯಾಯಿಗಳಿಗೂ ಬುದ್ಧಿಶಕ್ತಿ ನೀಡಲಾಗಿತ್ತು. ದುರ್ಬಳಕೆಯ ಪರಿಣಾಮವಾಗಿ ಯಾತನೆಗೆ (ನರಕ) ಅರ್ಹರಾದರು.
- ಅಲ್ಲಿ (ಪರಲೋಕದಲ್ಲಿ) ಪರಸ್ಪರ ಯಾರೂ ಯಾರಿಗೂ ನೆರವಾಗಲಾರರು. ಒಂದು ವೇಳೆ ಪರಲೋಕ ಬಂದರೂ ಕೂಡ ನಾವು ನಿಮ್ಮನ್ನು ರಕ್ಷಿಸುತ್ತೇವೆ ಎಂದು ನಾಯಕರು ಹಿಂಬಾಲಕರಿಗೆ ಹೇಳುತ್ತಿದ್ದರು. ಆದರೆ ಅಲ್ಲಿ ಯಾರು ಯಾರನ್ನೂ ರಕ್ಷಿಸಲಾರರು. ಅವರವರ ಕರ್ಮ ಪ್ರಕಾರ ಅಲ್ಲಿ ಶಿಕ್ಷಿಸಲ್ಪಡುತ್ತಾರೆ ಎಂದು ಮೇಲಿನ ವಚನಗಳು ಸಾರುತ್ತಿವೆ.

ವಾಗ್ದಾನ ಈಡೇರಿಸಲ್ಪಡುತ್ತದೆ

ನ್ಯಾಯ ತೀರ್ಮಾನದ ದಿನ(ಪರಲೋಕ ವಿಚಾರಣೆಯ ದಿನವು)ವೂ ಅಲ್ಲಾಹನ ವಾಗ್ದಾನವಾಗಿದೆ. ಅದು ಪೂರ್ಣಗೊಳ್ಳುವುದು ಆವಶ್ಯಕವಾಗಿದೆ. ತನ್ನ ಪವಿತ್ರ ಗ್ರಂಥದಲ್ಲಿ ಅಲ್ಲಾಹನು ಈ ರೀತಿ ವಿವರಿಸಿದ್ದಾನೆ, "ಗ್ರಂಥಗಳಿಗಾಗಿ ಸುರುಳಿಯಲ್ಲಿ ಹಾಳೆಗಳನ್ನು ಸುತ್ತುವ ಹಾಗೆ ನಾವು ಅಂದು ಆಕಾಶವನ್ನು ಸುತ್ತಿಟ್ಟು ಬಿಡುವೆವು. ನಾವು ಹಿಂದೆ ಸೃಷ್ಟಿಯ ಆರಂಭ ಮಾಡಿದಂತೆಯೇ ಅದನ್ನು ಪುನರಾವರ್ತಿಸುವೆವು. ಇದು ನಮ್ಮ ಹೊಣೆಯಲ್ಲಿರುವ ಒಂದು ವಾಗ್ದಾನ ವಾಗಿದೆ ಮತ್ತು ಆ ಕಾರ್ಯವನ್ನು ನಾವು ಮಾಡಿಯೇ ತೀರುವೆವು." **(ಅಲ್ ಅಂಬಿಯ: 104)**

ಯಾವುದೇ ವಾಗ್ದಾನವಿರಲಿ ನಿಭಾಯಿಸುವ ಶಕ್ತಿಯಿದ್ದರೆ ನೀಡಲಾಗುತ್ತದೆ. ಕೊಟ್ಟ ಮಾತಿನ ಪಾಲನೆಯು ಗೌರವ ಮಹತ್ವಗಳನ್ನೊಳಗೊಂಡ ಶ್ರೇಷ್ಠ ಗುಣವಾಗಿದೆ. ಹೊಣೆಗಾರ ಅಸ್ತಿತ್ವ ಅಲ್ಲಾಹನಿಗೂ ತನ್ನ ವಾಗ್ದಾನವು ಮಹತ್ವದ ವಿಷಯವೇ ಆಗಿದೆ. ಆ ಕಾರ್ಯವನ್ನು ಅವನು ಮಾಡಿಯೇ ತೀರುವನು.

ಮನುಷ್ಯನ ಸೃಷ್ಟಿ ಕಾರ್ಯವೂ ಅಷ್ಟೇ ಸಾಮಾನ್ಯ ಪರಿಕಲ್ಪನೆಯಂತೆ ಮೊದಲನೇ ಬಾರಿ ಸೃಷ್ಟಿಸುವುದು ಕಷ್ಟವೇ ಹೊರತು ಎರಡನೆ ಬಾರಿ ಸೃಷ್ಟಿಸುವುದು ಕಷ್ಟವಲ್ಲ. ಇನ್ನೂ ಸುಲಭ ಕಾರ್ಯ. ಆದರೆ ಸೃಷ್ಟಿಕರ್ತ ಸರ್ವಶಕ್ತ. ಮೊದಲ ಬಾರಿ ಮತ್ತು ಎರಡನೇ ಬಾರಿ ಮನುಷ್ಯನನ್ನು ಅಸ್ತಿತ್ವ ತರುವುದು ಅವನ ವಾಗ್ದಾನ. ಅದನ್ನು

ಈಡೇರಿಸಲು ಅವನು ಸಮರ್ಥ. ನಿಸ್ಸಂದೇಹವಾಗಿ ಅವನು ವಾಗ್ದಾನವನ್ನು ಈಡೇರಿಸುವನು.

ದ್ರಾವಕದ ಬಿಂದುವಿನಿಂದ ಅವನು ಮನುಷ್ಯನಂತಹ ಶ್ರೇಷ್ಠ ಅಸ್ತಿತ್ವವನ್ನು ಸೃಷ್ಟಿಸಿದ್ದಾನೆ. ಅದಕ್ಕೆ ಎರಡನೇ ಬಾರಿ ಜೀವನ ನೀಡುವುದು ಅವನದೇ ಹೊಣೆಗಾರಿಕೆಯಾಗಿದೆ. ಇದರಲ್ಲಿ ಮನುಷ್ಯರಿಗೆ ಹೊಣೆಗಾರಿಕೆಗಳಿಲ್ಲ...

"ಒಂದು ಹನಿಯು ತೊಟ್ಟಿಕ್ಕುವಾಗ, ಅವನೇ ಅದರಿಂದ ಗಂಡು ಮತ್ತು ಹೆಣ್ಣುಗಳ ಜೊತೆಯನ್ನುಂಟು ಮಾಡಿದನು. ಇನ್ನೊಂದು ಜೀವನ ಪ್ರದಾನ ಮಾಡುವುದೂ ಅವನ ಹೊಣೆಗಾರಿಕೆಯಾಗಿದೆ." (ಅನ್ನಜ್ಮ್: 45–47)

ಎರಡನೇ ಬಾರಿ ಎಬ್ಬಿಸಲ್ಪಡುವ ಕುರಿತ (ಪುನರುತ್ಥಾನದ) ನಿರಾಕರಣೆಯು ಅಲ್ಲಾಹನ ಮಹಿಮೆ ಮತ್ತು ಸೃಷ್ಟಿ ಸಾಮರ್ಥ್ಯಗಳನ್ನೇ ಸಂದೇಹಿಸುವುದಾಗಿದೆ. ಅಲ್ಲಾಹನನ್ನು ದುರ್ಬಲನೆಂದೂ ಅಥವಾ ತಮ್ಮ ದೌರ್ಬಲ್ಯಗಳನ್ನು ಸೃಷ್ಟಿಕರ್ತನಲ್ಲಿ ಮನುಷ್ಯರು ಪರಿಗಣಿಸಿದಂತಾಗುವುದು. ಸೃಷ್ಟಿಕರ್ತನನ್ನು ದುರ್ಬಲನೆಂದು ಊಹಿಸುವುದೇ ಅಸಮಂಜಸ ಚಿಂತನೆ ಮತ್ತು ಸೃಷ್ಟಿಕರ್ತನು ಮನುಷ್ಯರ ಇಂತಹ ಯೋಚನಾ ವೈಫಲ್ಯದತ್ತ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಗಮನಸೆಳೆಯುತ್ತಾನೆ.

"ನಾನು ಸತ್ತು ಹೋದ ಮೇಲೆ ನಿಜಕ್ಕೂ ಜೀವಂತಗೊಳಿಸಿ ತರಲ್ಪಡುವೆನೇ? ಎಂದು ಮಾನವನು ಪ್ರಶ್ನಿಸುತ್ತಾನೆ. ಮಾನವನು ಮೊದಲು ಏನೂ ಆಗಿಲ್ಲದಿದ್ದಾಗ ನಾವು ಅವನನ್ನು ಸೃಷ್ಟಿಸಿದ್ದು ಅವನಿಗೆ ನೆನಪಾಗುವುದಿಲ್ಲವೇ?" (ಮರ್ಯಮ್: 66–67)

ಭೂಮಿಯು ಕೇವಲ ವಾಸಿಸುವುದಕ್ಕಾಗಿದೆ ಮತ್ತು ಇಲ್ಲಿನ ಸಾಧನಗಳು ಜೀವನ ಸ್ಥಾಪನೆಗಾಗಿದೆ ಎಂದು ಮನುಷ್ಯ ತಿಳಿದುಕೊಂಡಿರುವನು. ಆದರೆ ವಸ್ತು ಸ್ಥಿತಿ ಅದಲ್ಲ. ಭೂಮಿಗೆ ಬೇರೆಯೂ ವಿವಿಧ ಉದ್ದೇಶಗಳಿವೆ. ಜನರು ಜನಿಸಿ ಭೂಮಿಯಲ್ಲಿ ಹೆಚ್ಚಿದರೆ ಭೂಮಿ ಇಕ್ಕಟ್ಟಾಗದು. ವಾಸ್ತವದಲ್ಲಿ ಈ ಭೂಮಿಯಲ್ಲೇ ಮನುಷ್ಯನ ಸಾವು ಸಂಭವಿಸುತ್ತದೆ. ಈ ಭೂಮಿಯಲ್ಲೆ ಅವನು ದಫನಗೊಳ್ಳುವುದು. ಈ ಭೂಮಿಯಿಂದಲೇ ಅವನು ಪುನಃ ಎಬ್ಬಿಸಲ್ಪಡುವುದು. "ಇದೇ ಮಣ್ಣಿನಿಂದ ನಾವು ನಿಮ್ಮನ್ನು ಸೃಷ್ಟಿಸುತ್ತೇವೆ. ಇದರೊಳಕ್ಕೆ ನಿಮ್ಮನ್ನು ಮರಳಿ ಒಯ್ಯುವೆವು ಮತ್ತು ಇದರಿಂದಲೇ ನಾವು ನಿಮ್ಮನ್ನು ಪುನಃ ಹೊರತರುವೆವು." (ತಾಹಾ: 55)

ಪುನರಪಿ ಜೀವನ ಸೃಷ್ಟಿಸಿದವನೆಡೆಗೆ ಮರುಳುವುದು. ಅಲ್ಲಿ ಗತ ಜೀವನದ ಲೆಕ್ಕ ಕೊಡುವುದು ಮತ್ತು ತಕ್ಕ ಪ್ರತಿಫಲ ಯಾ ಶಿಕ್ಷೆ ಪಡೆಯುವುದು. ಇಷ್ಟೇ. ಮನುಷ್ಯನ ಪುನರುತ್ಥಾನ ಅಂದರೆ ಇಷ್ಟು ಮಾತ್ರ. ಇದನ್ನು ಪವಿತ್ರ ಕುರ್‌ಆನ್

ಹೀಗೆ ವಿವರಿಸಿದೆ, "ಅವನೇ ಜೀವದಾನ ಮಾಡುತ್ತಾನೆ. ಅವನೇ ಮರಣ ಕೊಡುತ್ತಾನೆ ಮತ್ತು ನಿಮಗೆಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ." **(ಯೂನುಸ್: 56)**

ಎರಡನೆ ಬಾರಿ ಜೀವನ (ಪುನರುತ್ಥಾನ) ಯಾಕೆ ಕಷ್ಟದ ವಿಷಯವಾದೀತು?. ಮೊದಲ ಬಾರಿ ಸೃಷ್ಟಿಸಿದವನೇ ಮರಣ ಕೊಟ್ಟನು ಮತ್ತು ಅವನೇ ಲೋಕಾಂತ್ಯದ ದಿನ ನಿಗದಿಗೊಳಿಸಿ ಜಾರಿಗೆ ತರುವನು. ಪವಿತ್ರ ಕುರ್‌ಆನಿನಲ್ಲಿ ಪ್ರವಾದಿವರ್ಯರನ್ನು(ಸ) ಅಭಿಸಂಬೋಧಿಸಿ ಅಲ್ಲಾಹನು ಹೀಗೆ ಎಚ್ಚರಿಸುತ್ತಿದ್ದಾನೆ, "ಸಂದೇಶವಾಹಕರೇ, ಇವರೊಡನೆ ಹೇಳಿರಿ: ಅಲ್ಲಾಹನೇ ನಿಮಗೆ ಜೀವನ ಪ್ರದಾನ ಮಾಡುತ್ತಾನೆ. ಆನಂತರ ಅವನೇ ನಿಮಗೆ ಮರಣ ಕೊಡುತ್ತಾನೆ. ಆ ಬಳಿಕ ಪುನರುತ್ಥಾನದ ದಿನ ಅವನೇ ನಿಮ್ಮನ್ನು ಒಟ್ಟುಗೂಡಿಸುವನು. ಅದು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಹೆಚ್ಚಿನವರು ತಿಳಿಯುವುದಿಲ್ಲ." **(ಅಲ್‌ಜಾಸಿಯ: 26)**

ಪರಲೋಕದ ನಿರಾಕರಣೆಯು ಅದನ್ನು ತಡೆಯದು. ಯಾಕೆಂದರೆ ಪರಲೋಕ ಅಸ್ತಿತ್ವಗೊಳ್ಳಬೇಕಾಗಿರುವುದು ನ್ಯಾಯದ ಬೇಡಿಕೆಯಾಗಿದೆ. ನ್ಯಾಯದಿಂದಲೇ ಮನುಷ್ಯನಿಗೆ ಸಾಂತ್ವನವಿದೆ. ನ್ಯಾಯದಿಂದಲೇ ಪುರಸ್ಕಾರವಿದೆ. ನ್ಯಾಯವು ಉತ್ಸಾಹ ಮತ್ತು ತೃಪ್ತಿ ನೀಡುತ್ತದೆ. ಕರುಣೆ ಮತ್ತು ನ್ಯಾಯ ಇವೆರಡೂ ಸೃಷ್ಟಿಕರ್ತನ ಮಹದ್ಗುಣಗಳು. ಪರಲೋಕ ಜೀವನಕ್ಕೆ ಇವು ಶರ್ತ ಮತ್ತು ಬೇಡಿಕೆಯಾಗಿದೆ. ಇವೇ ಪ್ರಪಂಚದ ಉದ್ದೇಶ ಹಾಗೂ ಸೃಷ್ಟಿಕರ್ತನ ಪರಿಪೂರ್ಣತೆಯ ಬೇಡಿಕೆಯಾಗಿದೆ. ಅಂದರೆ ಪವಿತ್ರ ಕುರ್‌ಆನ್ ಪ್ರವಚಿಸಿದುದನ್ನು ನಿರಾಕರಿಸಿ ಪಡೆಯಲು ಮನುಷ್ಯರ ಪಾಲಿಗೆ ಏನೂ ಇರುವುದಿಲ್ಲ. ಅರ್ಥಾತ್ ಯಾರು ಎಷ್ಟೇ ವಿರೋಧಿಸಿದರೂ ನ್ಯಾಯದ (ವಿಚಾರಣೆಯ) ದಿನ ಅಸ್ತಿತ್ವಕ್ಕೆ ಬಂದೇ ತೀರುತ್ತದೆ. ಪ್ರತಿಯೊಬ್ಬರ ಜೀವನದ ಅಂತಿಮ ಪರಿಣಾಮವನ್ನು ಅಲ್ಲಿ ಅವರಿಗೇ ತಿಳಿಸಲಾಗುವುದು.

"ಆಕಾಶಗಳನ್ನೂ ಭೂಮಿಯನ್ನೂ ಯಾವ ದೇವನು ಸೃಷ್ಟಿಸಿರುತ್ತಾನೋ ಅವನು ಖಂಡಿತವಾಗಿಯೂ ಇವರಂಥವರನ್ನು ಸೃಷ್ಟಿಸಲು ಶಕ್ತನೆಂಬುದು ಇವರಿಗೆ ಹೊಳೆಯಲಿಲ್ಲವೇ? ಅವನು ಇವರನ್ನು ಒಂದೆಡೆ ಸೇರಿಸಲಿಕ್ಕಾಗಿ ಒಂದು ಸಮಯವನ್ನು ನಿಶ್ಚಯಿಸಿಟ್ಟಿದ್ದಾನೆ. ಅದರ ಬರುವಿಕೆಯು ಖಚಿತ. ಆದರೆ ಅದನ್ನು ನಿರಾಕರಿಸಿಯೇ ತೀರುವೆವೆಂಬುದು ಅಕ್ರಮಿಗಳ ಹಟವಾಗಿದೆ." **(ಬನೀ ಇಸ್ರಾಯೀಲ್: 99)**

ಲೋಕಾಂತ್ಯದಲ್ಲಿ ಗುಮಾನಿ ವ್ಯಕ್ತಪಡಿಸುವವರ ಮಾತುಗಳು ಒಬ್ಬರಿಂದೊಬ್ಬರಿಗೆ ಬೇರೆ ಬೇರೆಯೂ ಪರಸ್ಪರ ತದ್ವಿರುದ್ಧವೂ ಆಗಿರುತ್ತವೆ. ಜ್ಞಾನಿಯಾಗಿರುವವರ ಮಾತುಗಳು ಪರಲೋಕ ಮತ್ತು ಇಹಲೋಕ ಜೀವನ ಮತ್ತು ಮರಣದ ವಿಚಾರದಲ್ಲಿ ಏಕ ರೀತಿಯಲ್ಲಿರುವುದು. ತದ್ವಿರುದ್ಧತೆ ವಿರೋಧಾಭಾಸಗಳಿರದು. ಇದಕ್ಕೆ ಅವರ

ಜ್ಞಾನದ ಮೂಲವು ಏಕೈಕವಾಗಿರುವುದು ಮತ್ತು ಅದು ಅಲ್ಲಾಹನಾಗಿರುವುದು ಕಾರಣವಾಗಿದೆ. ಅಲ್ಲಾಹನೇ ಸಕಲ ವಿಷಯಗಳ ಜ್ಞಾನಿ, ಯುಕ್ತಿಜ್ಞ, ನ್ಯಾಯವಾದ್ದರಿಂದ ಪ್ರವಾದಿಯ(ಸ) ವಚನಗಳು ಸತ್ಯಸಂಧವಾದದ್ದು ಆಗಿವೆ. ಇತರರು ಅಜ್ಞಾನಿಗಳು ಮತ್ತು ಅವರ ಮಾತುಗಳು ಮಿಥ್ಯ, ಬರೇ ಊಹಾಪೋಹವಾಗಿದೆ. ಆದುದರಿಂದ ಪವಿತ್ರ ಕುರ್‌ಆನ್ ತನ್ನ ವಚನಗಳಲ್ಲಿ ಮತ್ತು ಸಂದೇಶವಾಹಕರ ಮಾತಿನಲ್ಲಿ ವಿಶ್ವಾಸ ವಿರಿಸಿ ತಮ್ಮ ವಿನಾಶದಿಂದ ಪಾರಾಗಿರಿ ಎಂದು ಜನರಿಗೆ ಕರೆ ನೀಡಿತು.

"ವಾಸ್ತವದಲ್ಲಿ ಯಾವುದರ ಕುರಿತು ನಿಮ್ಮನ್ನು ಎಚ್ಚರಿಸಲಾಗುತ್ತಿದೆಯೋ ಅದು ಸತ್ಯವಾಗಿದೆ. ಕರ್ಮಗಳ ಪ್ರತಿಫಲವು ಖಂಡಿತವಾಗಿಯೂ ಮುಂದೆ ಬರಲಿಕ್ಕಿದೆ. ವಿಭಿನ್ನ ರೂಪಗಳ ಆಕಾಶದಾಣೆ. (ಪರಲೋಕದ ಕರಿತು) ನಿಮ್ಮ ಹೇಳಿಕೆಗಳು ಪರಸ್ಪರ ವಿಭಿನ್ನವಾಗಿವೆ. ಸತ್ಯದಿಂದ ವಿಮುಖನಾದವನು ಮಾತ್ರ ಅದರಿಂದ ತಿರುಗಿಸಲ್ಪಡು ತ್ತಾನೆ. ಅನುಮಾನದ ಆಧಾರದಲ್ಲಿ ತೀರ್ಮಾನ ಮಾಡುವವರು ನಾಶವಾದರು. ಅವರು ಅಜ್ಞಾನದಲ್ಲಿ ಮುಳುಗಿದ್ದಾರೆ ಮತ್ತು ನಿರ್ಲಕ್ಷ್ಯದಲ್ಲಿ ಮೈಮರೆತಿದ್ದಾರೆ. "ಪ್ರತಿಫಲದ ಆ ದಿನ ಯಾವಾಗ ಬರಲಿದೆ?" ಎಂದು ಅವರು ಕೇಳುತ್ತಾರೆ. ಅದು, ಇವರು ಅಗ್ನಿಯಲ್ಲಿ ಸುಡಲ್ಪಡುವಂದು ಬರಲಿದೆ. "ಈಗ ನೀವು ನಿಮ್ಮ ಕ್ಷೋಭೆಯ ರುಚಿಯನ್ನು ಸವಿಯಿರಿ. ನೀವು ಯಾವುದಕ್ಕಾಗಿ ತವಕ ಪಡುತ್ತಿದ್ದಿರೋ ಅದುವೇ ಇದು" ಎಂದು ಇವರೊಡನೆ ಹೇಳಲಾಗುವುದು." **(ಅದ್ದಾರಿಯಾತ್: 5–14)**

ಸತ್ತ ಮೇಲೆ ಪುನಃ ಜೀವಂತಗೊಳಿಸಲಾಗುವುದಿಲ್ಲ ಎಂದು ವಾದಿಸುವವರ ಜ್ಞಾನದ ಮೂಲ ಯಾವುದು? ತಮ್ಮ ಮಾತು, ವಾದಗಳಿಗೆ ಮೂಲವನ್ನಾಗಲಿ ಪ್ರಮಾಣವನ್ನಾಗಲಿ ಅವರು ನೀಡುವುದಿಲ್ಲ. ತಮ್ಮ ನಿರಾಕರಣೆಯ ಆಧಾರವನ್ನು ಅವರು ಪ್ರಕಟಿಸುವುದಿಲ್ಲ. ಆದರೆ ಸಂದೇಶವಾಹಕರು ಪರಲೋಕದ ಕುರಿತ ಎಚ್ಚರಿಕೆಗಳಿಗೆ ಸ್ವಯಂ ವಿಶ್ವಕರ್ತನೇ ಆಧಾರ ಮತ್ತು ಮೂಲವಾಗಿದ್ದಾನೆ. ಅವರು ಜನರನ್ನುದ್ದೇಶಿಸಿ, ಜನರೇ ಆವಶ್ಯಕವಾಗಿಯೂ ನೀವು ಎಬ್ಬಿಸಲ್ಪಡುವವರಾಗಿದ್ದೀರೆಂದು ಪ್ರಪಂಚ ಸೃಷ್ಟಿಕರ್ತನು ನೀಡಿದ ಜ್ಞಾನದಾಧಾರದಲ್ಲಿ ಹೇಳುತ್ತಾರೆ. ಸೃಷ್ಟಿಕರ್ತನು ಅದೃಶ್ಯ, ದೃಶ್ಯಗಳ ಪ್ರಕಟ–ಅಪ್ರಕಟಗಳ ಜ್ಞಾನಿ. ಪ್ರಪಂಚ ಮತ್ತು ಸಕಲವನ್ನು ಪೂರ್ಣ ಯೋಜನೆಯೊಂದಿಗೆ ಅವನೇ ಸೃಷ್ಟಿಸಿದ್ದಾನೆ. ಮನುಷ್ಯನ ಪುನರುತ್ಥಾನ ಅವನ ಜ್ಞಾನದಲ್ಲಿದೆ. ಆದುದರಿಂದ ಮನುಷ್ಯನ ಎರಡನೇ ಬಾರಿಯ ಶಾಸ್ವತ ಜೀವನ ಕೂಡ ಅವನದೇ ಯೋಜನೆಯಾಗಿದೆ. ತನ್ನ ಗ್ರಂಥದಲ್ಲಿ ಜನರಲ್ಲಿ ವಿಶ್ವಾಸ ಮೂಡಲಿ ಎಂದು ಅಲ್ಲಾಹನು ಪರಲೋಕವನ್ನು ಪ್ರಬಲವಾಗಿ ಪ್ರತಿಪಾದಿಸಿದ್ದಾನೆ.

"ಮರಣಾನಂತರ ಎಷ್ಟು ಮಾತ್ರಕ್ಕೂ ನಾವು ಪುನಃ ಎಬ್ಬಿಸಲ್ಪಡಲಾರೆವೆಂದು

ಸತ್ಯನಿಷೇಧಿಗಳು ಬಹಳ ಧೈರ್ಯದಿಂದ ಸಾರಿದ್ದಾರೆ. ಅವರೊಡನೆ ಹೇಳಿರಿ: ಹಾಗಲ್ಲ ನನ್ನ ಪ್ರಭುವಿನಾಣೆ! ನೀವು ಖಂಡಿತವಾಗಿಯೂ ಎಬ್ಬಿಸಲ್ಪಡುವಿರಿ. ತರುವಾಯ ನೀವು (ಭೂಲೋಕದಲ್ಲಿ) ಏನೇನು ಮಾಡಿರುವಿರೆಂಬುದನ್ನು ನಿಮಗೆ ಖಂಡಿತ ತೋರಿಸಿ ಕೊಡಲಾಗುವುದು ಮತ್ತು ಹೀಗೆ ಮಾಡುವುದು ಅಲ್ಲಾಹನ ಮಟ್ಟಿಗೆ ಬಹಳ ಸುಲಭವಾಗಿದೆ." (ಅತ್ತಗಾಬುನ್: 7)

ನ್ಯಾಯವು ಸೃಷ್ಟಿಕರ್ತನ ಗುಣವೈಶಿಷ್ಟ್ಯಗಳಲ್ಲಿ ಪ್ರಮುಖವಾದ ಒಂದು ಗುಣವಾಗಿದೆ. ಆದ್ದರಿಂದ ಪರಲೋಕ ಅಸ್ತಿತ್ವಕ್ಕೆ ಬರುವುದು ದಾಸರ ನಡುವೆ ನ್ಯಾಯ ತೀರ್ಮಾನಕ್ಕಾಗಿ ಅತ್ಯವಶ್ಯಕವಾಗಿದೆ. ಇದು ಅಲ್ಲಾಹನ ವಾಗ್ದಾನದ ಪೂರ್ತೀಕರಣವಾಗಿರುತ್ತದೆ. "ನಿಶ್ಚಯ ವಾಗಿಯೂ ಅಲ್ಲಾಹನು ತನ್ನ ವಾಗ್ದಾನವನ್ನು ಉಲ್ಲಂಘಿಸುವುದಿಲ್ಲ." (ಅರ್‍ರಅದ್: 31)

ಅಲ್ಲಾಹನು ನಿರ್ಜೀವ ಬಂಜರು ಭೂಮಿಯನ್ನೇ ದಾಸರ ಆಹಾರಕ್ಕಾಗಿ ಜೀವಂತ ಗೊಳಿಸಿರುವುದು ಅವನ ಕರುಣೆಯಾಗಿದೆ. ನಿರ್ಜೀವ ದೇಹವನ್ನು ಪುನಃ ಜೀವಂತ ಗೊಳಿಸುವುದು ಕೂಡ ಅಲ್ಲಾಹನ ಕರುಣೆಯಾಗಿದೆ. ಇಹಜೀವನದಲ್ಲಿ ಒಳಿತೆಸಗಿದ ಜನರನ್ನು ಪುರಸ್ಕರಿಸಬೇಕಾಗಿದೆ. ಆದುದರಿಂದ ತನ್ನ ಅಪಾರ ಕರುಣೆ–ಮಹಿಮೆಗಳನ್ನು ಹೀಗೆ ವಿವರಿಸುತ್ತಾನೆ.

"ಮಾರುತಗಳನ್ನು ಕಳುಹಿಸುವವನು ಅಲ್ಲಾಹನೇ ಆಗಿರುತ್ತಾನೆ. ಅವು ಮೋಡ ಗಳನ್ನು ಎತ್ತುತ್ತವೆ. ಆನಂತರ ಅವನು ತಾನಿಚ್ಛಿಸುವಂತೆ ಮೋಡಗಳನ್ನು ಆಕಾಶದಲ್ಲಿ ಹರಡುತ್ತಾನೆ. ಅವುಗಳನ್ನು ವಿಭಾಗಗಳಾಗಿ ಹಂಚುತ್ತಾನೆ. ಆ ಬಳಿಕ ಮಳೆ ಹನಿಗಳು ಮೋಡದಿಂದ ತೊಟ್ಟಿಕ್ಕುತ್ತ ಸಾಗುವುದನ್ನು ತಾವು ನೋಡುತ್ತೀರಿ. ಈ ಮಳೆಯನ್ನು ಅವನು ತನ್ನ ದಾಸರಲ್ಲಿ ತನಗಿಷ್ಟ ಬಂದವರ ಮೇಲೆ ಸುರಿಸಿದಾಗ ಅವರು ಒಮ್ಮೆಲೇ ಆನಂದ ತುಂದಿಲರಾಗುತ್ತಾರೆ. ವಸ್ತುತಃ ಅದರ ಅವತರಣಕ್ಕಿಂತ ಮುಂಚೆ ಅವರು ನಿರಾಶರಾಗತೊಡಗಿದ್ದರು. ಅಲ್ಲಾಹನ ಕೃಪೆಯ ಪರಿಣಾಮವನ್ನು ನೋಡಿರಿ. ಸತ್ತು ಬಿದ್ದಿದ್ದ ನೆಲವನ್ನು ಅವನು ಹೇಗೆ ಜೀವಂತಗೊಳಿಸಿ ಎಬ್ಬಿಸುತ್ತಾನೆ. ನಿಶ್ಚಯವಾಗಿಯೂ ಅವನು ಮೃತರನ್ನು ಜೀವಂತಗೊಳಿಸುವನು ಮತ್ತು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು." (ಅರ್ರೂಮ್, 48–50)

ಸ್ವರ್ಗ ಮತ್ತು ನರಕದ ಚಿತ್ರಣ

ಅಲ್ಲಾಹನ ನ್ಯಾಯಾಲಯದಲ್ಲಿ ನ್ಯಾಯದಾನವಾದ ಅಂದರೆ ನ್ಯಾಯ ಸಿಕ್ಕ ಬಳಿಕ ಸ್ವರ್ಗ ಮತ್ತು ನರಕಕ್ಕೆ ಹೋಗುವವರ ಅವಸ್ಥೆ ಮತ್ತು ಅವರ ಸ್ಥಾನಗಳ ಕುರಿತು ಪವಿತ್ರ ಕುರ್‌ಆನ್‌ನಲ್ಲಿ ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ. ಪರಲೋಕವನ್ನೂ

ನ್ಯಾಯದಾನದ ದಿನವನ್ನೂ ನಿರಾಕರಿಸಿದವರು ನಿಶ್ಚಯವಾಗಿಯೂ ನರಕವನ್ನು ಪ್ರವೇಶಿಸುವರು. ಯಾಕೆಂದರೆ ಅವರು ತಮ್ಮ ಗತ ಜೀವನದಲ್ಲಿ ಸ್ವರ್ಗಕ್ಕಾಗಿ ಸಿದ್ಧತೆ ನಡೆಸಿರಲಿಲ್ಲ ಮತ್ತು ಅವರು ಪರಲೋಕವನ್ನೇ ನಿರಾಕರಿಸುತ್ತಿದ್ದರು. ತಮ್ಮ ಸಂಪೂರ್ಣ ಜೀವಮಾನವನ್ನು ಇತರರನ್ನು ದೋಚಲು, ಅಕ್ರಮವೆಸಗಲು, ಜನರ ಹಕ್ಕು ಲಪಟಾಯಿಸಲು ಮತ್ತು ಕ್ಷೋಭೆ ಹರಡಲು ವ್ಯಯಿಸಿದರು. ಆದರೆ ಸ್ವರ್ಗ ಮತ್ತು ನರಕಗಳ ಚಿತ್ರಣವನ್ನು ಪವಿತ್ರ ಕುರ್‌ಆನ್ ಹೀಗೆ ಪ್ರಸ್ತುತಪಡಿಸುತ್ತಿದೆ.

"ಆನಂತರ ನಾವು ನಮ್ಮ ದಾಸರಲ್ಲಿ ಆಯ್ದುಕೊಂಡವರನ್ನು ಈ ಗ್ರಂಥದ ಉತ್ತರಾಧಿಕಾರಿಗಳಾಗಿ ಮಾಡಿದೆವು. ಇದೀಗ ಅವರಲ್ಲಿ ತನ್ನ ಮೇಲೆ ಅಕ್ರಮವೆಸಗಿಕೊಳ್ಳು ವವನೂ ಇದ್ದಾನೆ. ಮಧ್ಯಮ ತರದವನೂ ಇದ್ದಾನೆ. ಅಲ್ಲಾಹನ ಅಪ್ಪಣೆಯಂತೆ ಪುಣ್ಯ ಕಾರ್ಯಗಳಲ್ಲಿ ಮುಂದಾಗುವವನೂ ಇದ್ದಾನೆ. ಮಹಾ ಅನುಗ್ರಹವು ಇದುವೇ ಆಗಿದೆ. ಇವರು ಶಾಶ್ವತವಾದ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಿಸುವವರು. ಅಲ್ಲಿ ಇವರನ್ನು ಬಂಗಾರದ ಕಂಕಣಗಳಿಂದಲೂ ಮುತ್ತುಗಳಿಂದಲೂ ಅಲಂಕರಿಸಲಾಗುವುದು. ಅಲ್ಲಿ ಅವರ ಉಡುಪು ರೇಶ್ಮೆಯದ್ದಾಗಿರುವುದು. ಮತ್ತು ಅವರು, "ನಮ್ಮಿಂದ ದುಃಖವನ್ನು ದೂರೀಕರಿಸಿದ ಅಲ್ಲಾಹನಿಗೆ ಕೃತಜ್ಞತೆಗಳು. ಖಂಡಿತವಾಗಿಯೂ ನಮ್ಮ ಪ್ರಭು ಮಹಾ ಕ್ಷಮಾದಾನಿಯೂ ಗುಣಗ್ರಾಹಿಯೂ ಆಗಿರುತ್ತಾನೆ. ಅವನು ತನ್ನ ಅನುಗ್ರಹದಿಂದ ನಮ್ಮನ್ನು ಶಾಸ್ವತ ನಿವಾಸದಲ್ಲಿ ತಂದಿರಿಸಿದನು. ಇನ್ನು ಇಲ್ಲಿ ನಮಗೆ ಯಾವುದೇ ಸಂಕಷ್ಟವೂ ಇಲ್ಲ. ಆಯಾಸವೂ ಉಂಟಾಗುವುದಿಲ್ಲ" ಎನ್ನುವರು. ಸತ್ಯ ನಿಷೇಧಿಗಳಿಗಾಗಿ ನರಕಾಗ್ನಿ ಇದೆ. ಅವರಿಗೆ ಮರಣ ಕೊಟ್ಟು ಅವರನ್ನು ಮುಗಿಸಿ ಬಿಡಲಾಗುವುದೂ ಇಲ್ಲ. ಮತ್ತು ಅವರ ನರಕ ಯಾತನೆಯಲ್ಲಿ ಕಡಿತ ಮಾಡಲಾಗುವುದೂ ಇಲ್ಲ. ನಾವು ಪ್ರತಿಯೊಬ್ಬ ಸತ್ಯನಿಷೇಧಿಗೂ ಇದೇ ರೀತಿ ಪ್ರತಿಫಲ ಕೊಡುತ್ತೇವೆ. ಅಲ್ಲಿ ಅವರು ಚೀರಾಡುತ್ತಾ, "ನಮ್ಮ ಪ್ರಭೂ, ನಾವು ಹಿಂದೆ ಮಾಡುತ್ತಿದ್ದಂತಹ ಕರ್ಮಗಳಿಗಿಂತ ಭಿನ್ನವಾದ ಸತ್ಕರ್ಮವನ್ನು ಮಾಡಲಿಕ್ಕಾಗಿ ನಮ್ಮನ್ನು ಇಲ್ಲಿಂದ ಹೊರತೆಗೆದು ಬಿಡು" ಎನ್ನುವರು. (ಆಗ ಅವರಿಗೆ) "ಉಪದೇಶ ಪಡೆಯುವ ಇಚ್ಛೆ ಇರುತ್ತಿದ್ದರೆ ಉಪದೇಶ ಪಡೆಯಲು ಸಾಕಾಗುವಷ್ಟು ಆಯುಷ್ಯವನ್ನು ನಾವು ನಿಮಗೆ ಕೊಟ್ಟಿರಲಿಲ್ಲವೇ? ನಿಮ್ಮ ಬಳಿಗೆ ಎಚ್ಚರಿಕೆ ಕೊಡವವನೂ ಬಂದಿದ್ದನು. ಈಗ ಸವಿಯಿರಿ, ಅಕ್ರಮಿಗಳಿಗೆ ಇಲ್ಲಿ ಯಾರೂ ಸಹಾಯಕನಿಲ್ಲ (ಎಂದು ಉತ್ತರಿಸ ಲಾಗುವುದು)." **(ಫಾತಿರ್: 32–37)**

❖ ❖ ❖ ❖

ಅಧ್ಯಾಯ 7

ಪವಿತ್ರ ಕುರ್‌ಆನ್‌ನಲ್ಲಿ ಸತ್ಯೋಪದೇಶ

ಅಲ್ಲಾಹನು ತನ್ನ ಸಕಲ ದಾಸರನ್ನು ಪ್ರೀತಿಸುತ್ತಾನೆ. ಅವರು ಸತ್ಯವನ್ನು ಅರಿತು ಅದರಲ್ಲಿ ವಿಶ್ವಾಸ ಇರಿಸಬೇಕೆಂದು ಅವನು ಬಯಸುತ್ತಾನೆ. ಆದುರಿಂದ ಸತ್ಯವನ್ನು ವಿವಿಧ ರೀತಿಯಲ್ಲಿ ಬಗೆ ಬಗೆಯಾಗಿ ತನ್ನ ದಾಸರಿಗೆ ತಿಳಿಹೇಳಲು ನೋಡಿರುವನು. ದಾಸರ ಪೈಕಿ ಅವರ ಚಿಂತನೆ, ಮನಸ್ಸು, ಅನುಭವ ಮತ್ತು ಜ್ಞಾನಗಳು ಏಕ ತೆರನಲ್ಲ ವಿಭಿನ್ನ. ಆದುದರಿಂದ ಸಕಲರನ್ನೂ ಸಕಲವನ್ನೂ ಗಮನದಲ್ಲಿರಿಸಿಕೊಂಡು ಮೌಲ್ಯ ದಾಯಕ ಸತ್ಯವನ್ನು ಸ್ವೀಕರಿಸಿದರೆ ಅಪಾರ ಲಾಭವಿದ್ದು ಅದು ಎಲ್ಲರೂ ಅರಿತಿರ ಬೇಕೆಂದು ಅಲ್ಲಾಹನು ಬಯಸಿದನು.

ಪ್ರವಾದಿ ಮೂಸಾರಿಂದ ಸಂದೇಶವನ್ನು ಆಲಿಸಿಯೇ ಅಲ್ಲಾಹ್ ಮತ್ತು ಅಲ್ಲಾಹನ ಪ್ರವಾದಿಯ ಮೇಲೆ ವಿಶ್ವಾಸ ಇರಿಸಿದ್ದ ಫರೋವನ ಆಸ್ಥಾನಿಕನೊಬ್ಬನ ಘಟನೆಯನ್ನು ಉದ್ಧರಿಸಿ ಪ್ರಪಂಚದ ವಸ್ತುಸ್ಥಿತಿ, ಜೀವನದ ವಾಸ್ತವಿಕತೆಯನ್ನು ಪವಿತ್ರ ಕುರ್‌ಆನ್ ಅಭಿಸಂಬೋಧಿತರಿಗೆ ಹೀಗೆ ವಿವರಿಸುತ್ತಿದೆ.

"ಆ ಸತ್ಯವಿಶ್ವಾಸಿ ಹೇಳಿದನು: ನನ್ನ ಜನಾಂಗದವರೇ, ನನ್ನ ಮಾತನ್ನು ಸ್ವೀಕರಿಸಿರಿ, ನಾನು ನಿಮಗೆ ಸರಿಯಾದ ಮಾರ್ಗವನ್ನೇ ತೋರಿಸುತ್ತೇನೆ. ಓ ಜನಾಂಗವೇ! ಈ ಲೌಕಿಕ ಜೀವನವು ಕೆಲವೇ ದಿನಗಳ ಸಾಧನವಾಗಿದೆ. ಶಾಶ್ವತ ನಿವಾಸವು ಪರಲೋಕವೇ ಆಗಿದೆ. ದೋಷವೆಸಗಿದವನಿಗೆ ಅವನು ಮಾಡಿದ ದೋಷದಷ್ಟೇ ಪ್ರತಿಫಲ ಸಿಗುವುದು. ಸತ್ಕರ್ಮವೆಸಗಿದವನು ಪುರುಷನಿರಲಿ ಸ್ತ್ರೀ ಇರಲಿ, ಸತ್ಯವಿಶ್ವಾಸಿಯಾಗಿದ್ದರೆ ಇಂತಹ ವರೆಲ್ಲರೂ ಸ್ವರ್ಗವನ್ನು ಪ್ರವೇಶಿಸುವರು. ಅಲ್ಲಿ ಅವರಿಗೆ ಅಪಾರ ಜೀವನಾಧಾರ ನೀಡಲ್ಪಡುವುದು. ಓ ಜನಾಂಗವೇ, ಇದೇನು, ನಾನಂತೂ ನಿಮ್ಮನ್ನು ವಿಮೋಚನೆಯ ಕಡೆಗೆ ಕರೆಯುತ್ತಿದ್ದೇನೆ ಮತ್ತು ನೀವಾದರೋ ನನ್ನನ್ನು ನರಕಾಗ್ನಿಯತ್ತ ಆಹ್ವಾನಿಸು ತ್ತಿರುವಿರಿ! ನಾನು ಅಲ್ಲಾಹನನ್ನು ನಿರಾಕರಿಸಬೇಕೆಂದೂ ಅವನೊಂದಿಗೆ ನಾನರಿಯದಂತಹ ಅಸ್ತಿತ್ವಗಳನ್ನು ಸಹಭಾಗಿಗಳಾಗಿ ಮಾಡಬೇಕೆಂದೂ ನೀವು ನನಗೆ ಕರೆಕೊಡುತ್ತಿದ್ದೀರಿ. ನಾನಾದರೋ ನಿಮ್ಮನ್ನು ಪ್ರಬಲನೂ ಮಹಾ

ಕ್ಷಮಾದಾನಿಯೂ ಅಗಿರುವ ಆ ದೇವನ ಕಡೆಗೆ ಕರೆಯುತ್ತಿದ್ದೇನೆ. ಅಲ್ಲ, ಇದು ಸತ್ಯ. ಇದಕ್ಕೆ ವಿರುದ್ಧ ಸಾಧ್ಯವೇ ಇಲ್ಲ. ನೀವು ನನ್ನನ್ನು ಯಾರ ಕಡೆಗೆ ಕರೆಯುತ್ತಿರುವಿರೋ ಅವರಿಗೆ ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಯಾವುದೇ ಕರೆ ಇಲ್ಲ. ನಮಗೆಲ್ಲರಿಗೂ ಅಲ್ಲಾಹನ ಕಡೆಗೇ ಮರಳಿ ಹೋಗಬೇಕಾಗಿದೆ ಮತ್ತು ಮಿತಿ ಮೀರಿ ನಡೆಯುವವರು ನರಕಾಗ್ನಿಗೆ ಹೋಗಲಿರುವರು. ಇಂದು ನಾನು ಹೇಳುತ್ತಿರುವ ಮಾತನ್ನು ನೀವು ಜ್ಞಾಪಿಸಿಕೊಳ್ಳುವ ಕಾಲ ಸದ್ಯದಲ್ಲೇ ಬರಲಿದೆ. ನಾನು ನನ್ನ ವಿಷಯವನ್ನು ಅಲ್ಲಾಹನಿಗೆ ಒಪ್ಪಿಸಿ ಬಿಡುತ್ತೇನೆ. ಅವನು ತನ್ನ ದಾಸರ ಮೇಲ್ವಿಚಾರಕನಾಗಿರುತ್ತಾನೆ." **(ಅಲ್ ಮೂಮಿನ್: 38–44)**

ವಾಸ್ತವವೆಂದರೆ ಇತರರ ಬಗ್ಗೆ ಒಳಿತನ್ನು ಬಯಸುವವರು ಏಕೈಕ ಅಲ್ಲಾಹನ ಮೇಲೆ, ಅವನ ಪ್ರವಾದಿಯ ಮೇಲೆ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿಡುವವರು ಆಗಿರುತ್ತಾರೆ. ಇಂತಹವರು ಇತರರ ಒಳಿತನ್ನು ಪೂರ್ಣ ಕಾಳಜಿ ಮತ್ತು ಪ್ರಾಮಾಣಿಕತೆಯಿಂದ ಸ್ಪಷ್ಟವಾಗಿಯೂ ಸತ್ಯಸಂಧವಾಗಿಯೂ ಬಯಸುತ್ತಾರೆ ಎಂಬುದು ಮೇಲಿನ ಘಟನೆಯಿಂದ ವ್ಯಕ್ತವಾಗುತ್ತದೆ. ಇಂತಹವರ ಈ ಒಳಿತಿನ ವ್ಯಾಪ್ತಿ ಇಹಲೋಕ ಪರಲೋಕಗಳೆರಡನ್ನೂ ಆವೃತ್ತವಾಗಿರುತ್ತದೆ.

ಅಕ್ರಮವೆಸಗಿ ಪರಲೋಕ ಪ್ರವೇಶಿಸಿದವರು ಅಲ್ಲಿ ತಮಗಿರುವ ಶಿಕ್ಷೆಯನ್ನು ಕಂಡು ಸ್ವಯಂ ತಮ್ಮ ವಿರುದ್ಧವೇ ಕ್ರೋಧಗೊಳ್ಳುವರು: ಇಹಲೋಕದಲ್ಲಿ ಜನರ ಮೇಲೆ ದೌರ್ಜನ್ಯ ಎಸಗುವುದು, ಜನರ ಹಕ್ಕನ್ನು ಮತ್ತು ಅಲ್ಲಾಹನ ಹಕ್ಕನ್ನು ಕಬಳಿಸುವುದು ಸತ್ಯದ ನಿರಾಕರಣೆಯಾಗಿದೆ. ಇಂತಹವರು ಕೆಟ್ಟ ಜನರು ಆಗಿದ್ದಾರೆ. ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಗೊಳಿಸದಿರುವುದು (ಅವನ ಏಕತ್ವವನ್ನು ಒಪ್ಪುವುದು), ಪ್ರಾಮಾಣಿಕವಾಗಿ ಅವನಿಗೆ ವಿಧೇಯವಾಗಿರುವುದು ಮತ್ತು ಅವನಲ್ಲಿ ಮಾತ್ರ ಪ್ರಾರ್ಥಿಸುವುದು ಅಲ್ಲಾಹನ ಹಕ್ಕಾಗಿದೆ.

ಇದರ ಹೊರತಾಗಿ ಅಲ್ಲಾಹನೊಂದಿಗೆ ಸಹಭಾಗಿಗಳನ್ನು ಮಾಡಿಕೊಂಡಿರುವ ಜನರ ಪಾಲಿಗೆ ನ್ಯಾಯದಾನದ ದಿನ(ವಿಚಾರಣೆಯ ದಿನ)ದ ಪರಿಣಾಮ ತೀರ ಕೆಟ್ಟದಾಗಿರುತ್ತದೆ. ಆದುದರಿಂದ ಮನುಷ್ಯರು ತಮ್ಮ ಕೆಟ್ಟ ಜೀವನದಿಂದ ದೂರ ಇರಬೇಕೆಂದು ಅಲ್ಲಾಹನು ಉಪದೇಶಿಸುತ್ತಾನೆ. ಕೆಡುಕಿನಿಂದ ಮನುಷ್ಯರು ಮುಕ್ತರಾಗಬೇಕೆಂದು ಅವನು ಬಯಸುತ್ತಾನೆ. ಅಲ್ಲಾಹನು ನ್ಯಾಯದಾನಿ, ನ್ಯಾಯವು ಅವನ ಅತ್ಯುತ್ಕೃಷ್ಟ ಮತ್ತು ಅತ್ಯವಶ್ಯಕವಾದ ಗುಣವೈಶಿಷ್ಟ್ಯವಾಗಿದೆ. ಇಲ್ಲದಿದ್ದರೆ ಈ ಜೀವನವೇ ನಿರರ್ಥಕವೂ ಮತ್ತು ಉದ್ದೇಶರಹಿತವೂ ಆಗಿಬಿಡುತ್ತದೆ.

ಅಲ್ಲಾಹನು ತನ್ನ ಗ್ರಂಥದಲ್ಲಿ ಪರಲೋಕದ ಚಿತ್ರಣವನ್ನು ಈ ರೀತಿ

ಅಭಿಸಂಬೋಧಿತರ ಮುಂದಿಡುತ್ತಾನೆ: ಸತ್ಯನಿಷೇಧಿಗಳೊಡನೆ ಪುನರುತ್ಥಾನ ದಿನ ಹೀಗೆ ಕೂಗಿ ಹೇಳಲಾಗುವುದು: ಇಂದು ನಿಮಗೆ ನಿಮ್ಮ ಮೇಲೆ ಎಷ್ಟು ತೀವ್ರವಾದ ಕೋಪ ಬರುತ್ತಿದೆಯೋ ಅದಕ್ಕಿಂತಲೂ ತೀವ್ರವಾದ ಕೋಪವು ನಿಮ್ಮನ್ನು ಸತ್ಯವಿಶ್ವಾಸದ ಕಡೆಗೆ ಕರೆಯಲಾಗುತ್ತಿದ್ದ ವೇಳೆ ನೀವು ನಿರಾಕರಿಸುತ್ತಿದ್ದಾಗ, ಅಲ್ಲಾಹನಿಗೆ ನಿಮ್ಮ ಮೇಲೆ ಬರುತ್ತಿತ್ತು. ಆಗ ಅವರು ಹೇಳುವರು: ನಮ್ಮ ಪ್ರಭೂ! ನಿಜಕ್ಕೂ ನೀನು ನಮಗೆ ಎರಡು ಸಲ ಮರಣವನ್ನೂ ಎರಡು ಸಲ ಜೀವನವನ್ನೂ ನೀಡಿರುವೆ. ಈಗ ನಾವು ನಮ್ಮ ಅಪರಾಧಗಳನ್ನು ಒಪ್ಪಿಕೊಳ್ಳುತ್ತೇವೆ. ಈಗ ಇಲ್ಲಿಂದ ಹೊರ ಹೋಗುವ ದಾರಿ ಯಾವುದಾದರೂ ಇದೆಯೇ ಎನ್ನುವರು. (ಆಗ ಅವರಿಗೆ ಹೀಗೆ ಉತ್ತರ ಸಿಗುವುದು): ನೀವು ಈ ಅವಸ್ಥೆಗೆ ತುತ್ತಾಗಲು ಕಾರಣವೇನೆಂದರೆ– ನಿಮ್ಮನ್ನು ಏಕಮಾತ್ರ ಅಲ್ಲಾಹನ ಕಡೆಗೆ ಕರೆಯುತ್ತಿದ್ದಾಗ ನೀವು ನಿರಾಕರಿಸಿದ್ದೀರಿ ಮತ್ತು ಅವನ ಜೊತೆ ಇತರರನ್ನು ಸಹಭಾಗಿಗಳಾಗಿ ಮಾಡಿದಾಗ ನೀವು ಒಪ್ಪಿಕೊಳ್ಳುತ್ತಿದ್ದಿರಿ. ಈಗ ತೀರ್ಮಾನವು ಅತ್ಯುನ್ನತನೂ ಮಹಾನನೂ ಆದ ಅಲಾಹನ ಕೈಯ್ಯಲ್ಲಿದೆ. **(ಅಲ್‌ಮೂಮಿನ್: 10–12)**

"ಹೇ ಜನರೇ, ನಿಮ್ಮನ್ನೂ ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ದಾಸ್ಯ–ಆರಾಧನೆ ಮಾಡಿರಿ. (ಹೀಗೆ ಮಾಡಿದರೆ) ನೀವು ರಕ್ಷಣೆ ಹೊಂದಬಹುದು. ಅವನೇ ಭೂಮಿಯನ್ನು ನಿಮಗೆ ಹಾಸನ್ನಾಗಿ ಹಾಸಿದನು; ಆಕಾಶದ ಮೇಲ್ಛಾವಣಿ ಮಾಡಿದನು; ಮೇಲ್ಭಾಗದಿಂದ ಮಳೆ ಸುರಿಸಿದನು. ಅದರ ಮೂಲಕ ತರತರದ ಬೆಳೆಗಳನ್ನು ಉತ್ಪಾದಿಸಿ ನಿಮಗೆ ಆಹಾರ ಒದಗಿಸಿದನು. ಇದನ್ನು ನೀವು ಅರಿತಿರುತ್ತ ಇತರರನ್ನು ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನಾಗಿ ಮಾಡದಿರಿ." **(ಅಲ್‌ಬಕರ: 21–22)**

"ನೀವು ಅಲ್ಲಾಹನನ್ನು ಹೇಗೆ ನಿರಾಕರಿಸುತ್ತೀರಿ? ನೀವಾದರೋ ನಿರ್ಜೀವಿಗಳಾಗಿದ್ದಿರಿ. ಅವನು ನಿಮಗೆ ಜೀವವಿತ್ತನು. ಇನ್ನು ಅವನೇ ನಿಮ್ಮ ಪ್ರಾಣ ತೆಗೆಯುವನು ಮತ್ತು ಅವನೇ ನಿಮಗೆ ಪುನರ್ಜೀವನ ನೀಡುವನು. ತರುವಾಯ ನಿಮಗೇ ಆತನೆಡೆಗೆ ಮರಳಿ ಹೋಗಬೇಕಾಗಿದೆ." **(ಅಲ್‌ಬಕರ: 28)**

ಜೀವನದ ಆರಂಭದಿಂದ ಕೊನೆಯ ವರೆಗೂ ನಿಮ್ಮ ಮೇಲೆ ಯಾರ ಕೃಪೆಯಿದೆಯೋ ಆ ಕೃಪೆಯಲ್ಲಿ ಇತರರ ಸಹಭಾಗಿತ್ವವಿಲ್ಲ. ಹೀಗಿರುವಾಗ ಅವನನ್ನು ಬಿಟ್ಟು ಇತರರನ್ನು ಆರಾಧಿಸುವುದಾದರೆ ಅದು ತಪ್ಪು. ಅಲ್ಲಾಹನ ಮಹದುಪಕಾರಕ್ಕೆ ಅವನೊಂದಿಗೆ ಮನುಷ್ಯನ ಸಹಭಾಗಿತ್ವ ನಿಲುವು ಅಕ್ರಮವಾಗಿದೆ. ಇದಕ್ಕಾಗಿ ಮನುಷ್ಯ ಕೆಟ್ಟ ಪರಿಣಾಮ ತಮ್ಮ ಮೇಲೆ ಬಂದಪ್ಪಳಿಸುವ ಮೊದಲು ಕೃತಜ್ಞನಾಗಬೇಕಾಗಿದೆ.

ಕೆಟ್ಟ ಪರಿಣಾಮ ಎದುರಾಗುವ ಮೊದಲು ಆ ಪರಿಣಾಮದ ಕುರಿತು ತಿಳಿಸಲಾಗುತ್ತಿದೆ: ಮೇಲೆ ಉದ್ಧರಿಸಿದ ವಚನಗಳ ಮೂಲಕ ಶಾಂತ ಚಿತ್ತದಿಂದ ಗಂಭೀರ ವಾಗಿ

ಯೋಚಿಸಲು ಸೂಚಿಸಲಾಗಿದೆ. ವಿಶ್ವಾಸವಿರಿಸುವ ವಿಷಯದಲ್ಲಿ ಅಲ್ಲಾಹನು ಯಾರನ್ನೂ ಬಲವಂತಪಡಿಸುವುದಿಲ್ಲ. ಅಲ್ಲಾಹನು ತನ್ನ ಗ್ರಂಥದಲ್ಲಿ ನ್ಯಾಯವನ್ನು ಚಿತ್ರಿಸಿದನು. ಸತ್ಯ ನಿಷೇದದ ಕುರಿತು ಎಚ್ಚರಿಸಿದನು. ಜನರು ತಾವೇ ಯೋಚಿಸಿ ತಾವು ಬಯಸಿದಂತೆ ಗಂಭೀರ ತೀರ್ಮಾನ ಕೈಗೊಳ್ಳಬೇಕೆಂದು ಸೂಚಿಸಿರುತ್ತಾನೆ.

ಅಲ್ಲಾಹನು ನ್ಯಾಯ ಕೊಡುವಾಗ ಮನುಷ್ಯರಿಗೆ ಪರಿಪೂರ್ಣ ನ್ಯಾಯದಾನ ವಾಗುತ್ತದೆ ಮತ್ತು ನ್ಯಾಯವೊಂದೇ ಮಾನದಂಡ. ಯಾರದೇ ಶಿಫಾರಸ್ಸಿಗೆ ಜಾಗ ವಿಲ್ಲ. ಆಗ ಯಾವ ಕಾರ್ಯವೂ ಪ್ರಯೋಜನಕ್ಕಿರದು. ಜನರು ಅಲ್ಲಿನ ಭವಿಷ್ಯವನ್ನು ಇಲ್ಲಿ (ಇಹಲೋಕದಲ್ಲಿ) ನಿರ್ಧರಿಸಿಕೊಳ್ಳಬೇಕಾಗಿದೆ ಮತ್ತು ಸ್ವಯಂ ತಾವೇ ರೂಪಿಸಿಕೊಳ್ಳ ಬೇಕಾಗುತ್ತದೆ.

ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ, "ಅವನು ಅತ್ಯುನ್ನತ ಪದವಿ ಯುಳ್ಳವನೂ ವಿಶ್ವ ಸಿಂಹಾಸನದ ಒಡೆಯನೂ ಆಗಿರುತ್ತಾನೆ. ಭೇಟಿಯಾಗುವ ದಿನದ ಬಗ್ಗೆ ಎಚ್ಚರಿಕೆ ಕೊಡಲಿಕ್ಕಾಗಿ ಅವನು ತನ್ನ ದಾಸರ ಪೈಕಿ ತಾನಿಚ್ಛಿಸಿದವರ ಮೇಲೆ ತನ್ನ ಅಪ್ಪಣೆಯಂತೆ ದಿವ್ಯವಾಣಿಯನ್ನು ಅವತೀರ್ಣಗೊಳಿಸುತ್ತಾನೆ. ಎಲ್ಲ ಜನರೂ ಬಹಿರಂಗಗೊಳ್ಳುವ ಆ ದಿನ ಅವರ ಯಾವ ವಿಷಯವೂ ಅಲ್ಲಾಹನಿಂದ ಅಡಗಿರ ಲಾರದು. ಇಂದು ಪ್ರಭುತ್ವ ಯಾರದು (ಎಂದು ಕೂಗಿ ಕೇಳಲಾಗುವುದು) ಏಕೈಕನೂ ಅಜೇಯನೂ ಆದ ಅಲ್ಲಾಹನದು. (ಎಂದು ಇಡೀ ವಿಶ್ವವು ಕೂಗಿ ಹೇಳುವುದು) (ಆಗ) ಇಂದು ಪ್ರತಿಯೊಬ್ಬ ಜೀವಿಗೆ ಅವನು ಸಂಪಾದಿಸಿದುದರ ಪ್ರತಿಫಲ ನೀಡಲಾ ಗುವುದು. ಇಂದು ಯಾರ ಮೇಲೂ ಅನ್ಯಾಯ ಆಗದು. (ಎಂದು ಹೇಳಲಾಗುವುದು) ನಿಶ್ಚಯವಾಗಿಯೂ ಅಲ್ಲಾಹನು ಲೆಕ್ಕ ಪರಿಶೋಧನೆಯಲ್ಲಿ ಅತಿ ಶೀಘ್ರನಾಗಿರುತ್ತಾನೆ. ಸಂದೇಶವಾಹಕರೇ, ಸನ್ನಿಹಿತ ವಾಗಿರುವ ಆ ದಿನದ ಬಗ್ಗೆ ಈ ಜನರಿಗೆ ಎಚ್ಚರಿಕೆ ನೀಡಿರಿ. ಆಗ ಹೃದಯಗಳು ಗಂಟಲಿಗೇರಿ ಜನರು ಶೋಕತಪ್ತರಾಗಿ ನಿಂತಿರುವರು. ಅಕ್ರಮಿಗಳಿಗೆ ಆಪ್ತಮಿತ್ರನಾಗಲಿ ಪ್ರಭಾವಶಾಲೀ ಶಿಫಾರಸುದಾರನಾಗಲಿ ಇರಲಾರನು. ಅಲ್ಲಾಹನು ದೃಷ್ಟಿಯ ಚೌರ್ಯಗಳನ್ನೂ ಹೃದಯದೊಳಗೆ ಬಚ್ಚಿಟ್ಟಿರುವ ರಹಸ್ಯಗಳನ್ನೂ ತಿಳಿಯುತ್ತಾನೆ. ಅಲ್ಲಾಹ್ ನ್ಯಾಯಪೂರ್ಣ ತೀರ್ಮಾನವೆಸಗುವನು (ಈ ಬಹುದೇವ ವಿಶ್ವಾಸಿಗಳು) ಅಲ್ಲಾಹನನ್ನು ಬಿಟ್ಟು ಯಾರನ್ನು ಪ್ರಾರ್ಥಿಸುತ್ತಾರೋ ಅವರು ಯಾವ ವಿಷಯವನ್ನೂ ತೀರ್ಮಾನಿಸುವವರಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಎಲ್ಲವನ್ನೂ ಕೇಳುವವನೂ ಕಾಣುವವನೂ ಆಗಿರುವನು." **(ಅಲ್ ಮೂಮಿನ್: 15–20)**

ಮರಣಾನಂತರ ಶಿಕ್ಷೆಯ ಒಂದು ನೋಟ: ಮರಣಾನಂತರ ಯಾತನೆಯ ಚಿತ್ರಣವನ್ನು ಪವಿತ್ರ ಕುರ್‌ಆನಿನಲ್ಲಿ ವಿವರಿಸಲಾಗಿದೆ. ಪ್ರತಿಯೊಬ್ಬ ಮನುಷ್ಯನು ತನ್ನ

ಭವಿಷ್ಯದ ಬಗ್ಗೆ ಗಂಭೀರವಾಗಿ ಚಿಂತಿಸುವಂತಾಗಲಿ. ಆ ನಂತರ ಯಾರೂ ಯಾರಿಗೂ ನೆರವಿಗೆ ಸಿಗಲಾರರೆಂಬ ಬಗ್ಗೆ ವಿಶ್ವಾಸ ಇರಿಸು ವಂತಾಗಲಿ ಎಂಬ ಉದ್ದೇಶದಿಂದ ಅಲ್ಲಾಹನು ತನ್ನ ಗ್ರಂಥ ಪವಿತ್ರ ಕುರ್‌ಆನಿನಲ್ಲಿ ನರಕದ ಅಗ್ನಿಯ ಚಿತ್ರಣವನ್ನು ಹೀಗೆ ವಿವರಿಸಿದ್ದಾನೆ.

"ಇವರು ನರಕಾಗ್ನಿಯಲ್ಲಿ ಪರಸ್ಪರ ಜಗಳಾಡುತ್ತಿರುವ ಸನ್ನಿವೇಶವನ್ನು ಊಹಿಸಿರಿ. ಭೂಲೋಕದಲ್ಲಿ ದುರ್ಬಲರಾಗಿದ್ದವರು ದೊಡ್ಡಸ್ತಿಕೆ ತೋರಿಸುತ್ತಿದವರೊಡನೆ (ಹೀಗೆ) ಹೇಳುವರು, "ನಾವು ನಿಮಗೆ ಅಧೀನರಾಗಿದ್ದೆವು. ಈಗ ನೀವು ಇಲ್ಲಿ ನರಕಾಗ್ನಿಯ ಯಾತನೆಯ ಸ್ವಲ್ಪಾಂಶದಿಂದಾದರೂ ನಮ್ಮನ್ನು ರಕ್ಷಿಸುವಿರಾ? ದೊಡ್ಡಸ್ತಿಕೆ ತೋರು ತ್ತಿದ್ದವರು (ಹೀಗೆ) ಉತ್ತರ ಕೊಡುವರು: "ನಾವೆಲ್ಲರೂ ಇಲ್ಲಿ ಒಂದೇ ಸ್ಥಿತಿಯಲ್ಲಿದ್ದೇವೆ. ಅಲ್ಲಾಹನು ದಾಸರ ನಡುವೆ ತೀರ್ಮಾನ ಮಾಡಿಬಿಟ್ಟಿರುತ್ತಾನೆ. ತರುವಾಯ ನರಕ ದಲ್ಲಿ ಬಿದ್ದಿರುವವರು ನರಕಪಾಲಕರೊಡನೆ "ನಮ್ಮ ಯಾತನೆಯಲ್ಲಿ ಒಂದು ದಿನದ ಕಡಿತ ಮಾಡಲಿಕ್ಕಾಗಿ ನಿಮ್ಮ ಪ್ರಭುವನ್ನು ಪ್ರಾರ್ಥಿಸಿರಿ" ಎನ್ನುವರು. ಆಗ ಅವರು "ನಿಮ್ಮ ಬಳಿಗೆ ನಿಮ್ಮ ಸಂದೇಶವಾಹಕರು ಸುವ್ಯಕ್ತ ನಿದರ್ಶನಗಳೊಂದಿಗೆ ಬರುತ್ತಿರ ಲಿಲ್ಲವೇ?" ಎಂದು ಕೇಳುವರು. ಆಗ ಅವರು ಹೌದು ಎನ್ನುವರು. ಆಗ ನರಕ ಪಾಲಕರು, "ಹಾಗಾದರೆ, ನೀವೇ ಪ್ರಾರ್ಥಿಸಿರಿ. ಸತ್ಯನಿಷೇಧಿಗಳ ಪ್ರಾರ್ಥನೆ ವ್ಯರ್ಥವೇ ಆಗಲಿದೆ" ಎನ್ನುವರು." **(ಅಲ್ ಮೂಮಿನ್: 47–50)**

ಇವೆಲ್ಲ ಯಾಕಾಯಿತು ಎಂದರೆ ಎಚ್ಚರಿಕೆ ಕೊಡುವಾತನು ಎಚ್ಚರಿಸಿದ ಬಳಿಕವೂ ಅವರು ಕೆಡುಕನ್ನೇ ಆಯ್ಕೆ ಮಾಡಿಕೊಂಡಿದ್ದರು.

ನ್ಯಾಯದಾನ ನಡೆಯುವುದು ಮತ್ತು ಸಕಲ ಕರ್ಮಗಳಿಗೆ ಪರಿಣಾಮ ಬೇರೆ ಬೇರೆ ಯಾಗಿರುತ್ತದೆ: ಪ್ರತಿಯೊಂದು ವಸ್ತುವಿನ ಮೌಲ್ಯಗಳು ಬೇರೆ ಬೇರೆ ಆಗಿರುವಂತೆ ಪ್ರತಿಯೊಂದು ಕರ್ಮದ ಪರಿಣಾಮವೂ ಪ್ರತ್ಯ ಪ್ರತ್ಯೇಕವಾಗಿರುತ್ತದೆ. ಉತ್ತಮ ಕರ್ಮಕ್ಕೆ ಉತ್ತಮ ಪರಿಣಾಮವೂ, ಕೆಟ್ಟ ಕರ್ಮಕ್ಕೆ ಕೆಟ್ಟ ಪರಿಣಾಮವೂ ಇರುತ್ತದೆ. ಎರಡೂ ಒಂದೇ ತೆರನಲ್ಲ. ಮುತ್ತು ಮತ್ತು ವಜ್ರದ ಬೆಲೆ ಪ್ರತ್ಯ ಪ್ರತ್ಯೇಕವಾಗಿರುವಂತೆ ಉತ್ಕೃಷ್ಟ ಕರ್ಮಗಳ ಮೌಲ್ಯವು ಸ್ವರ್ಗವಾಗಿರುತ್ತದೆ. ಕೆಟ್ಟ ಕರ್ಮಗಳ ಮೌಲ್ಯ ನರಕವಾಗಿರುತ್ತದೆ. ಕರ್ಮಗಳ ಪರೀಕ್ಷೆಗೆ ಅಥವಾ ನ್ಯಾಯದಾನಕ್ಕೆ ಒಂದು ದಿನ ಇದ್ದು ಫಲಿತಾಂಶ ಘೋಷಿಸುವ ಸಲುವಾಗಿ ಸೂಕ್ಷ್ಮಜ್ಞನೂ ಮೌಲ್ಯಮಾಪಕನೂ ಆದ ಅಲ್ಲಾಹನು ನಿಶ್ಚಯವಾಗಿಯೂ ನ್ಯಾಯದಾನದ ದಿನವನ್ನು ಅಸ್ತಿತ್ವಕ್ಕೆ ತರುವನು.

ಪವಿತ್ರ ಕುರ್‌ಆನ್ ಈ ರೀತಿ ವಿವರಿಸುತ್ತಿದೆ, "ಕುರುಡನೂ ಕಣ್ಣಿದ್ದವನೂ ಸಮಾನರಾಗಲಾರರು–ಸತ್ಯವಿಶ್ವಾಸಿಗಳಾದ ಸದಾಚಾರಿ ಗಳು ಹಾಗೂ ದುಷ್ಕರ್ಮಿಗಳು

ಸಮಾನರಾಗಲಾರರು. ಆದರೆ ನೀವು ಸ್ವಲ್ಪವೇ ಅರ್ಥ ಮಾಡಿಕೊಳ್ಳುತ್ತೀರಿ. ಖಂಡಿತ ವಾಗಿಯೂ ಪುನರುತ್ಥಾನದ ಘಳಿಗೆ ಬರಲಿದೆ. ಅದು ಬರುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ ಹೆಚ್ಚಿನವರು ನಂಬುವುದಿಲ್ಲ." (ಅಲ್ ಮೂಮಿನ್: 58-59)

ಕೆಟ್ಟ ಪರಿಣಾಮವನ್ನು ಪೂರ್ವಭಾವಿಯಾಗಿ ಎಚ್ಚರಿಸುವುದು ಅಲ್ಲಾಹನ ಅನುಗ್ರಹ ವಾಗಿದೆ: ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ನಿರಾಕರಿಸುವವರ ಪರಿಣಾಮವನ್ನು ಅವರು ಸುಧಾರಿಸಿಕೊಳ್ಳಲಿ ಎಂದು ಸುಸ್ಪಷ್ಟವಾಗಿ ವಿವರಿಸಿದನು. ಪೂರ್ವಭಾವಿಯಾಗಿ ಸೂಚಿಸುವುದು ಹಾಗೂ ಎಚ್ಚರಿಸುತ್ತಿರುವುದು ತಿದ್ದಿಕೊಂಡು ಪಶ್ಚಾತ್ತಾಪಡುವುದಾದರೆ ನಿಮ್ಮ ಬಳಿ ಸಮಯ ಈಗಲೂ ಇದೆ ಎಂದಾಗಿದೆ. ಇಹಲೋಕ ಮತ್ತು ಪರಲೋಕದ ಒಳಿತು ನೀವು ಸತ್ಯಕ್ಕೆ ಸರಿಯಾಗಿ ಸಂಸ್ಕರಿಸುವುದರಲ್ಲಿಯೇ ಇದೆ. ಅದು ಅಲ್ಲಾಹನ ಕರುಣೆಯಾಗಿದೆ. ಸತ್ಯದಲ್ಲಿ ವಿಶ್ವಾಸ ಇರಿಸಿ ಜೀವನ ನಡೆಸಿರಿ. ಅಲ್ಲಾಹನು ಏಕೈಕ ನೆಂಬುದು ಪ್ರಪ್ರಥಮ ಮತ್ತು ಎಲ್ಲವುಗಳಿಗಿಂತ ಮಿಗಿಲಾದ ಸತ್ಯವಾಗಿದೆ. ಅವನಲ್ಲಿ ವಿಶ್ವಾಸ ಇರಿಸಿದರೆ ಎಲ್ಲವೂ ಸರಿಯಾಗುತ್ತದೆ. ಇದಕ್ಕೆ ಬದಲಾಗಿ ಪ್ರಪಂಚದ ಸೌಂದರ್ಯ–ಆಕರ್ಷಣೆಗೆ ಮಾರು ಹೋಗಿ ಮೋಸ ಹೋಗಬಾರದು. ಮಿಥ್ಯ ಆಕಾಂಕ್ಷೆ, ನಿರೀಕ್ಷೆಯ ಮೇಲೆ ಜೀವನ ಕಟ್ಟಬಾರದು. ಇಹಲೋಕದ ಪ್ರತಿಷ್ಠೆಯಲ್ಲಿಯೂ ಮಗ್ನರಾಗಬಾರದೆಂದು ತನ್ನ ಉದಾತ್ತ ಕರುಣೆಯ ಕುರಿತು ಅಲ್ಲಾಹನೇ ಮಾರ್ಗದರ್ಶನ ಮಾಡಿದ್ದಾನೆ.

"ಅಲ್ಲಾಹನ ವಚನಗಳ ಬಗ್ಗೆ ಜಗಳ ಮಾಡುವವರನ್ನು ನೀವು ಕಂಡಿರಾ? ಅವರು ಎಲ್ಲಿಂದ ದಾರಿಗೆಡಿಸಲ್ಪಡುತ್ತಿದ್ದಾರೆ? ಇವರು ಈ ಗ್ರಂಥವನ್ನೂ ನಾವು ನಮ್ಮ ಸಂದೇಶವಾಹಕರೊಂದಿಗೆ ಕಳುಹಿಸಿದ್ದ ಎಲ್ಲ ಗ್ರಂಥಗಳನ್ನೂ ಸುಳ್ಳಾಗಿಸುತ್ತಾರೆ. ಸದ್ಯವೇ ಇವರಿಗೆ ಗೊತ್ತಾಗಲಿದೆ. ಅಗ ಕಂಠಕಡಗಗಳು ಮತ್ತು ಸಂಕೋಲೆಗಳು ಅವರ ಕೊರಳು ಗಳಲ್ಲಿರುವುವು. ಅವುಗಳನ್ನು ಹಿಡಿದು ಅವರು ಕುದಿಯುತ್ತಿರುವ ನೀರಿನ ಕಡೆಗೆ ಎಳೆ ಯಲ್ಪಡುವರು. ತರುವಾಯ ನರಕಾಗ್ನಿಗೆ ಎಸೆಯಲ್ಪಡುವರು. ಅನಂತರ ಅವರೊಡನೆ, "ನೀವು ಅಲ್ಲಾಹನನ್ನು ಬಿಟ್ಟು ಸಹಭಾಗಿಗಳನ್ನಾಗಿಸಿಕೊಂಡಿದ್ದ, ಇತರ ದೇವರುಗಳು ಈಗ ಎಲ್ಲಿದ್ದಾರೆ?" ಎಂದು ಕೇಳಲಾಗುವುದು. ಆಗ ಅವರು, "ಅವು ನಮ್ಮಿಂದ ಕಳೆದು ಹೋದವು. ಮಾತ್ರವಲ್ಲ, ನಾವು ಇದಕ್ಕೆ ಮುಂಚೆ ಯಾವುದನ್ನೂ ಕರೆದು ಪ್ರಾರ್ಥಿಸುತ್ತಿರ ಲಿಲ್ಲ" ಎಂದು ಉತ್ತರಿಸುವರು. ಹೀಗೆ ಸತ್ಯ ನಿಷೇಧಿಗಳು ಪಥಭ್ರಷ್ಟ ರಾಗಿರುವುದನ್ನು ಅಲ್ಲಾಹನು ಸಾಬೀತುಪಡಿಸಿ ಬಿಡುವನು. ಅವರೊಡನೆ ಹೀಗೆ ಹೇಳ ಲಾಗುವುದು. "ನೀವು ಭೂಲೋಕದಲ್ಲಿ ಅಸತ್ಯದಲ್ಲೇ ಮಗ್ನರಾಗಿದ್ದು ಅದರ ಮೇಲೆ ದರ್ಪ ತೋರುತ್ತಿದ್ದುದರಿಂದ ನಿಮ್ಮ ಗತಿ ಹೀಗಾಯಿತು. ಈಗ ನಡೆಯಿರಿ. ನರಕ ದ್ವಾರಗಳಲ್ಲಿ

ಪ್ರವೇಶಿಸಿರಿ. ನಿಮಗೆ ಸದಾ ಅಲ್ಲೇ ಇರಬೇಕಾಗಿದೆ. ಅಹಂಕಾರಿಗಳ ಅತ್ಯಂತ ಕೆಟ್ಟ ವಾಸಸ್ಥಾನ" ಆದುದರಿಂದ ಸಂದೇಶವಾಹಕರೇ, ತಾಳ್ಮೆ ವಹಿಸಿರಿ. ಅಲ್ಲಾಹನ ವಾಗ್ದಾನವು ಪರಮ ಸತ್ಯವಾಗಿದೆ. ಇನ್ನು ನಾವು ಇವರಿಗೆ ಎಚ್ಚರಿಕೆ ನೀಡುತ್ತಿರುವಂತಹ ದುಷ್ಪರಿಣಾಮಗಳ ಒಂದಂಶವನ್ನು ನಿಮ್ಮೆದುರಲ್ಲೇ ಇವರಿಗೆ ತೋರಿಸಿದರೂ ಅಥವಾ (ಅದಕ್ಕೆ ಮುಂಚೆಯೇ) ನಿಮ್ಮನ್ನು ಇಹಲೋಕದಿಂದ ಎತ್ತಿಕೊಂಡರೂ ಇವರಿಗಂತೂ ನಮ್ಮ ಕಡೆಗೇ ಮರಳಿ ಬರಬೇಕಾಗಿದೆ." (ಅಲ್‌ಮೂಮಿನ್: 69-77)

ಕೊನೆಯ ಅವಕಾಶ. ಆನಂತರ ಯಾವ ಅವಕಾಶವೂ ಇಲ್ಲ: ನಿರಾಕರಿಸುತ್ತಲಿದ್ದು ಯಾತನೆ ಅನುಭವವಾಗುವಂತಹ ಸ್ಥಿತಿಗೆ ಯಾರಾದರೂ ತಲುಪಿದರೆ ಅಥವಾ ಪ್ರಾಣ ಪಕ್ಷಿ ಹಾರಿ ಹೋಗುವ ಪರಿಸ್ಥಿತಿ ನಿರ್ಮಾಣಗೊಂಡ ನಂತರ ವಿಶ್ವಾಸವಿರಿಸಲು ಮತ್ತು ತಪ್ಪೊಪ್ಪಿಕೊಳ್ಳಲು ಮುಂದಾದರೆ ಯಾವುದೇ ಪ್ರಯೋಜನವಾಗದು ಎಂದು ಅಲ್ಲಾಹನು ಘೋಷಿಸಿರುವನು ಮತ್ತು ಅದು ಅವನ ನಿಯಮವಾಗಿದೆ. ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ.

"ಆಗ ಅವರು: ಅವು ನಮ್ಮಿಂದ ಕಳೆದು ಹೋದವು, ಮಾತ್ರವಲ್ಲ ನಾವು ಇದಕ್ಕೆ ಮುಂಚೆ ಯಾವುದನ್ನೂ ಕರೆದು ಪ್ರಾರ್ಥಿಸುತ್ತಿರಲಿಲ್ಲ ಎಂದು ಉತ್ತರಿಸುವರು. ಹೀಗೆ ಸತ್ಯನಿಷೇಧಿಗಳು ಪಥಭ್ರಷ್ಟರಾಗಿರುವುದನ್ನು ಅಲ್ಲಾಹನು ಸಾಬೀತುಪಡಿಸಿ ಬಿಡುವನು. ಅವರೊಡನೆ ಹೀಗೆ ಹೇಳಲಾಗುವುದು: ನೀವು ಭೂಲೋಕದಲ್ಲಿ ಅಸತ್ಯದಲ್ಲೇ ಮಗ್ನರಾಗಿದ್ದು ಅದರ ಮೇಲೆ ದರ್ಪ ತೋರುತ್ತಿದ್ದುದರಿಂದ ನಿಮ್ಮ ಗತಿ ಹೀಗಾಯಿತು." (ಅಲ್ ಮೂಮಿನ್: 74-75)

ಆದ್ದರಿಂದ ಕಣ್ಣ ಮುಂದೆ ದೃಶ್ಯವಾಗುವ ಮುಂಚೆಯೇ ಅದೃಶ್ಯದಲ್ಲಿ ವಿಶ್ವಾಸ ತಂದು ತಪ್ಪೊಪ್ಪಿಕೊಳ್ಳುವುದೇ ಸತ್ಯವಿಶ್ವಾಸವಾಗಿದೆ. ಇದಕ್ಕೆ ಅಗತ್ಯವಿರುವ ಸಮಗ್ರ ವ್ಯವಸ್ಥೆಯನ್ನು ಭೂಮಿ-ಆಕಾಶಗಳಲ್ಲಿ ಮತ್ತು ಮನುಷ್ಯನ ಶರೀರದಲ್ಲಿ, ಅವನ ದೈನಂದಿನ ಜೀವನದಲ್ಲಿ ಕೂಡ ಮಾಡಲಾಗಿದೆ. ಜನರು ವಿಶ್ವಾಸ ಇರಿಸುದಕ್ಕಾಗಿಯೇ ಸಂದೇಶವಾಹಕರ ಮತ್ತು ಗ್ರಂಥವನ್ನು ಜನರೆಡೆಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಇಷ್ಟೇ ಅಲ್ಲ, ಒಂದು ಕೂಟವನ್ನು ಸಂದೇಶ ಪ್ರಚಾರ ಮತ್ತು ಜನರ ಸಂಸ್ಕರಣೆಗಾಗಿ ಎಬ್ಬಿಸಲಾಯಿತು. ಜೊತೆಗೆ ಸತ್ಯವಿಶ್ವಾಸವನ್ನು ಗ್ರಹಿಸುವ ಶಕ್ತಿಯನ್ನೂ ಮನುಷ್ಯನ ಆಂತರ್ಯದಲ್ಲಿರಿಸಲಾಯಿತು. ಮನುಷ್ಯರು ಸತ್ಯದೆಡೆಗೆ ತಲುಪಿ ಅದರಲ್ಲಿ ವಿಶ್ವಾಸ ಇರಿಸಲೆಂದು ಈ ಎಲ್ಲ ವ್ಯವಸ್ಥೆಯನ್ನು ಮಾಡಲಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಸತ್ಯ ಕಣ್ಣ ಮುಂದೆ ದೃಶ್ಯದಂತೆ ಗೋಚರಿಸಿದ ಮೇಲೆಯೇ ತಪ್ಪೊಪ್ಪಿಕೊಂಡು ವಿಶ್ವಾಸ ಇರಿಸುತ್ತೇನೆಂದು ಹೊರಡುವುದು ಅಲ್ಲಾಹನಿಗೆ ಸ್ವೀಕಾರಾರ್ಹವಲ್ಲ.

ದೃಶ್ಯವಾದ ಮೇಲೆ ಆಯ್ಕೆಗಳೇಕೆ? ಸ್ವೀಕರಿಸುವುದು ಅನಿವಾರ್ಯವಾಗಿರುತ್ತದೆ. ಅದಕ್ಕಿಂತ ಮೊದಲು ವಿಶ್ವಾಸ ಸ್ವೀಕರಿಸಲು ಆಯ್ಕೆಗಳಿದ್ದವು. ಅವಕಾಶ ನೀಡಲಾಗಿತ್ತು. ಆಗ ಯಾರು ಸತ್ಯವಿಶ್ವಾಸ ಸ್ವೀಕರಿಸಿದರೋ ಅವರು ತಮ್ಮ ಲಾಭಕ್ಕಾಗಿಯೇ ವಿಶ್ವಾಸ ಇರಿಸಿದರು. ನಿರಾಕರಿಸಿದರೆ ಅವರಿಗೇ ನಷ್ಟವಾಗಿದೆ. ಯಾಕೆಂದರೆ ಅಲ್ಲಾಹನು ಪ್ರತಿಯೊಂದರಿಂದಲೂ ನಿರಪೇಕ್ಷನಾಗಿದ್ದಾನೆ.

ಏಕದೇವತ್ವ ಮತ್ತು ದೇವಸಹಭಾಗಿತ್ವ ಎರಡೂ ಜೊತೆಯಲ್ಲಿ ಅಕ್ರಮವಾಗಿದೆ: ಜನರು ಆರಾಧ್ಯರನ್ನಾಗಿ ಮಾಡಿಕೊಂಡ ಅಸ್ತಿತ್ವವು ಭೂಮ್ಯಾಕಾಶಗಳೊಡೆಯರಲ್ಲ. ಅದರಲ್ಲಿರುವ ಯಾವ ವಸ್ತುವಿನ ಒಡೆಯರೂ ಅಲ್ಲ. ಅವುಗಳಲ್ಲಿ ಅವರ ಯಾವ ರೀತಿಯ ಪಾಲುದಾರಿಕೆಯೂ ಇಲ್ಲ. ಅವರು ಅವುಗಳ ನೈಜ ಪ್ರಭುವಿನ ಸಹಾಯಕರೂ ಅಲ್ಲ. ಶಿಫಾರಿಸ್ಸಿನ ಅಧಿಕಾರವೂ ಅವುಗಳಿಗಿಲ್ಲ. ಆದ್ದರಿಂದ ಅಲ್ಲಾಹನು ಜನರ ಅಜ್ಞಾನ ನೀಗಿಸುವ ಸಲುವಾಗಿ ಪ್ರವಾದಿಯ(ಸ) ಮೂಲಕ ಎಚ್ಚರಿಸಿದ್ದಾನೆ.

"(ಪೈಗಂಬರರೇ, ಈ ಬಹುದೇವವಿಶ್ವಾಸಿಗಳೊಡನೆ) ಹೇಳಿರಿ: ನೀವು ಅಲ್ಲಾಹನ ಹೊರತಾಗಿ ನಿಮ್ಮ ಆರಾಧ್ಯರೆಂದು ಭಾವಿಸಿಕೊಂಡಿರುವವುಗಳನ್ನು ಪ್ರಾರ್ಥಿಸಿ ನೋಡಿರಿ. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅವರು ಅಣುಗಾತ್ರದ ವಸ್ತುವಿಗೂ ಒಡೆಯರಲ್ಲ. ಅವರು ಭೂಮಿ–ಆಕಾಶಗಳ ಸೊತ್ತಿನಲ್ಲಿ ಪಾಲುದಾರರೂ ಅಲ್ಲ. ಅವರ ಪೈಕಿ ಯಾರೂ ಅಲ್ಲಾಹನ ಸಹಾಯಕನೂ ಅಲ್ಲ. ಅಲ್ಲಾಹನು ಶಿಫಾರಸು ಮಾಡಲು ಅನುಮತಿ ನೀಡಿದ ವ್ಯಕ್ತಿಯ ಹೊರತು ಅಲ್ಲಾಹನ ಸನ್ನಿಧಿಯಲ್ಲಿ ಯಾವ ಶಿಫಾರಸೂ ಯಾರ ಬಗೆಗೂ ಫಲಕಾರಿಯಾಗದು. ಎಷ್ಟರ ವರೆಗೆಂದರೆ– ಜನರ ಹೃದಯದಿಂದ ಭೀತಿಯು ದೂರವಾದಾಗ ಅವರು (ಶಿಫಾರಸುದಾರರೊಡನೆ) ನಿಮ್ಮ ಪ್ರಭು ಏನುತ್ತರ ಕೊಟ್ಟನೆಂದು ಕೇಳುವರು. ಸರಿಯಾದ ಉತ್ತರ ಸಿಕ್ಕಿದೆ ಮತ್ತು ಅವನು ಮಹೋನ್ನತನೂ ಮಹಾನನೂ ಆಗಿರುತ್ತಾನೆ ಎಂದು ಅವರು ಹೇಳುವರು." **(ಸಬಾ: 22–23)**

"(ಪೈಗಂಬರರೇ,) ನಿಮಗೆ ಭೂಮಿ–ಆಕಾಶಗಳಿಂದ ಜೀವನಾಧಾರ ಕೊಡುವವನಾರೆಂದು ಇವರೊಡನೆ ಕೇಳಿರಿ. ಹೇಳಿರಿ: ಅಲ್ಲಾಹ್. ಈಗ ನಿಶ್ಚಯವಾಗಿಯೂ ನಮ್ಮ ಮತ್ತು ನಿಮ್ಮ ಪೈಕಿ ಕೇವಲ ಒಬ್ಬನೇ ಸನ್ಮಾರ್ಗದಲ್ಲಿದ್ದಾನೆ ಅಥವಾ ಸುವ್ಯಕ್ತ ಪ್ರಥಭ್ರಷ್ಟತೆಯಲ್ಲಿದ್ದಾನೆ." **(ಸಬಾ: 24)**

ಅಂದರೆ ನಿಜವಾದ ಆರಾಧ್ಯನಿಗೂ (ಅವನು ಏಕದೇವನಾಗಿದ್ದಾನೆ) ಮತ್ತು ಮಿಥ್ಯ ಆರಾಧ್ಯರಿಗೂ (ಏಕದೇವನಿಗೆ ಸಹಭಾಗಿಗಳಾಗಿಸಿದ ಇತರ ಅಸ್ತಿತ್ವಗಳು) ಭೂಮ್ಯಾಕಾಶಗಳಷ್ಟು ಅಂತರವಿದೆ. ಆದ್ದರಿಂದ ಒಂದೇ ಸಲ ನಿಜವೂ ಮಿಥ್ಯವೂ ಏಕಕಾಲಕ್ಕೆ ಸರಿಯೆನ್ನುವುದು ವಿರೋಧಾಭಾಸವಾಗುತ್ತದೆ. ಯಾವುದಾದರೂ ಒಂದು

ಸರಿಯೂ ಇನ್ನೊಂದು ಮಿಥ್ಯವೂ ಆಗಿರುತ್ತದೆ. ಒಟ್ಟಿನಲ್ಲಿ ಏಕ ದೇವನಲ್ಲಿ (ಅಲ್ಲಾಹನಲ್ಲಿ) ವಿಶ್ವಾಸ ಇರಿಸಿದವರು ಮಾತ್ರ ಸರಿಯಾದ ಜ್ಞಾನಿಗಳು. ಅವನಿಗೆ ಸಹಭಾಗಿಗೊಳಿಸಿದವರು ಪಥಭ್ರಷ್ಟರಾಗಿದ್ದಾರೆ.

ಜಾಗೃತಿಗಾಗಿ: ಮನುಷ್ಯನ ಮೇಲೆ ಅಲ್ಲಾಹನ ಪ್ರೀತಿ ಈ ಕೋಪಾವಸ್ಥೆಯಲ್ಲಿಯೂ ಅವನ ಪ್ರೀತಿ ತುಂಬಿದ ಉಪದೇಶ ಮುನ್ನೆಚ್ಚರಿಕೆಯಲ್ಲಿ ಕಂಡು ಬರುತ್ತದೆ. ಅಲ್ಲಾಹನು ಮನುಷ್ಯರಿಗೆ ಅವರ ಶತ್ರು ಶೈತಾನನ (ಪಿಶಾಚಿಯ) ಬಗ್ಗೆ ಉಪದೇಶಿಸಿ ಮುನ್ನೆಚ್ಚರಿಕೆ ನೀಡುತ್ತಾನೆ.

"ಜನರೇ, ಅಲ್ಲಾಹನ ವಾಗ್ದಾನವು ನಿಶ್ಚಯವಾಗಿಯೂ ಪರಮ ಸತ್ಯವಾಗಿದೆ. ಆದುದರಿಂದ ಲೌಕಿಕ ಜೀವನವು ನಿಮ್ಮನ್ನು ವಂಚಿಸದಿರಲಿ ಮತ್ತು ಆ ಮಹಾ ವಂಚಕನು ಅಲ್ಲಾಹನ ವಿಷಯದಲ್ಲಿ ನಿಮ್ಮನ್ನು ವಂಚಿಸದಿರಲಿ. ವಾಸ್ತವದಲ್ಲಿ ಶೈತಾನನು ನಿಮ್ಮ ಶತ್ರುವಾಗಿದ್ದಾನೆ. ಆದುದರಿಂದ ನೀವೂ ಅವನನ್ನು ನಿಮ್ಮ ಶತ್ರುವೆಂದೇ ತಿಳಿಯಿರಿ. ಅವನು ತನ್ನ ಅನುಯಾಯಿಗಳನ್ನು ಅವರು ನರಕವಾಸಿಗಳಲ್ಲಾಗಲೆಂದೇ ತನ್ನ ಮಾರ್ಗದ ಕಡೆಗೆ ಕರೆಯುತ್ತಿದ್ದಾನೆ. ಯಾರು ಸತ್ಯವನ್ನು ನಿಷೇಧಿಸುವರೋ ಅವರಿಗೆ ಘೋರ ಯಾತನೆ ಕಾದಿದೆ. ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮವೆಸಗುವವರಿಗಾಗಿ ಕ್ಷಮೆಯೂ ಮಹಾ ಸತ್ಫಲವೂ ಇದೆ." **(ಫಾತಿರ್: 5–7)**

ಮನುಷ್ಯನ ಬದ್ಧ ವೈರಿಯಾದ ಪಿಶಾಚಿಯು (ಶೈತಾನನು) ವಿವಿಧ ಜಾಲಗಳನ್ನು ಹರಡಿ ಮನುಷ್ಯರನ್ನು ವಂಚಿಸುತ್ತಾನೆ. ಅವನು ಸೃಷ್ಟಿಕರ್ತ(ಅಲ್ಲಾಹ್)ನಲ್ಲ. ಇದ್ದರೂ ಪ್ರಪಂಚವನ್ನು ಸೃಷ್ಟಿಸಿದ ಮೇಲೆ ಹೋಗಿ ಮಲಗಿ ನಿದ್ದೆ ಮಾಡುತ್ತಿದ್ದಾನೆ. ಅವನಿಗೆ ಮನುಷ್ಯರ ವಿಷಯದಲ್ಲಿ ಆಸಕ್ತಿಯಿಲ್ಲ. ಪ್ರಪಂಚ ಉಂಟು ಮಾಡಿದ ಮೇಲೆ ನಿದ್ರಿಸಿರುವುದರಿಂದ ಮನುಷ್ಯರ ಮಾರ್ಗದರ್ಶನ ಬಗ್ಗೆ ಯಾವ ವ್ಯವಸ್ಥೆ ಮಾಡಿಲ್ಲ ಎಂದು ಮನುಷ್ಯನಿಗೆ ಪ್ರಲೋಭನೆಯೊಡ್ಡಿ ತನ್ನ ಮೋಸದ ಜಾಲದಲ್ಲಿ ಬೀಳಿಸಲು ಯತ್ನಸುತ್ತಾನೆ. ಅವನು ವಹ್ಯ್ (ದಿವ್ಯಸಂದೇಶ) ಮತ್ತು ಪ್ರವಾದಿತ್ವವಿಲ್ಲ ಎಂದು ಜನರನ್ನು ಪ್ರೇರೇಪಿಸುತ್ತಾನೆ. ಅದೊಂದು ಸುಳ್ಳು ಮತ್ತು ಮೋಸವಾಗಿದೆ. ದಾಸರು ಏನು ಮಾಡಿದರೂ ಅಲ್ಲಾಹನು ಕ್ಷಮಿಸುತ್ತಾನೆ. ಅವನು ಮಹಾ ಕ್ಷಮಾಶೀಲನೂ ಕರುಣಾಮಯಿ ಆಗಿದ್ದು ಅವನ ಮುಂದೆ ಶಿಫಾರಸ್ಸು ನಡೆಯುತ್ತದೆ. ನೀವು ಉತ್ತಮ ವ್ಯಕ್ತಿಗಳನ್ನು ಮತ್ತು ಹಿರಿಯ ಜನರನ್ನು ಶಿಫಾರಿಸಿಗಾಗಿ ಆಶ್ರಯಿಸಿರಿ ಎಂದು ಪಿಶಾಚಿ ದುರ್ಬೋಧಿಸುತ್ತದೆ. ಇಂತಹ ಚಿಂತನೆಗಳು ಪಥಭ್ರಷ್ಟವೂ ಮಹಾ ವಂಚನೆಯೂ ಆಗಿದೆ.

❖ ❖ ❖ ❖

ಅಧ್ಯಾಯ 8

ಮುನ್ನೆಚ್ಚರಿಕೆ

ಸತ್ಯ ನಿರಾಕರಿಸುವವರಿಗೆ ಇಹಲೋಕದಲ್ಲಿಯೂ ಕೆಟ್ಟ ಪರಿಣಾಮವಿದೆ

ಅಲ್ಲಾಹನನ್ನು ಅಲ್ಲಾಹನ ಸಂದೇಶವಾಹಕರನ್ನು, ಅಲ್ಲಾಹನ ಗ್ರಂಥ ಮತ್ತು ವಿಚಾರಣೆಯ ದಿನವನ್ನು ನಿರಾಕರಿಸವವರ ಮೇಲೆ ಈ ಇಹಲೋಕದಲ್ಲಿಯೂ ಕೆಟ್ಟ ಪರಿಣಾಮವಾಗಲಿದೆ ಎಂಬುದು ಸತ್ಯವಾಗಿದೆ. ಅಲ್ಲಾಹನ ಛೀಮಾರಿಯು ಇದಕ್ಕೆ ಒಂದು ಕಾರಣವಾದರೆ ದೈವಿಕ ಮಾರ್ಗದರ್ಶನವನ್ನು ತಿರಸ್ಕರಿಸಿ ಜೀವನ ಶಿಷ್ಟಾಚಾರ ವನ್ನು ಕೈಬಿಟ್ಟು ಅಕ್ರಮದಲ್ಲಿ ಮುಳುಗಿರುವುದು ಇನ್ನೊಂದು ಕಾರಣವಾಗಿದೆ.

ಪವಿತ್ರ ಕುರ್‌ಆನ್ ಈ ರೀತಿ ಮುನ್ನೆಚ್ಚರಿಕೆ ನೀಡುತ್ತಿದೆ, "ಇವರಿಗಿಂತ ಮುಂಚೆ ಗತಿಸಿದವರ ಪರಿಣಾಮವೇನಾಯಿತೆಂಬುದು ಇವರಿಗೆ ಕಾಣಿಸುವಂತಾಗಲು ಇವರು ಭೂಮಿಯಲ್ಲೆಂದೂ ಸಂಚರಿಸಿಲ್ಲವೇ? ಅವರು ಇವರಿಗಿಂತ ಹೆಚ್ಚು ಬಲಶಾಲಿಗಳಾಗಿದ್ದರು ಮತ್ತು ಇವರಿಗಿಂತ ಭದ್ರ ಸ್ಮಾರಕಗಳನ್ನು ಭೂಮಿಯಲ್ಲಿ ಬಿಟ್ಟು ಹೋಗಿರುವರು. ಆದರೆ ಅಲ್ಲಾಹನು ಅವರನ್ನು ಅವರ ಪಾಪಗಳಿಗಾಗಿ ಹಿಡಿದು ಬಿಟ್ಟನು. ಅವರನ್ನು ಅಲ್ಲಾಹನಿಂದ ರಕ್ಷಿಸುವವನಾರೂ ಇರಲಿಲ್ಲ. ಅವರ ಗತಿ ಹೀಗಾದುದೇಕೆಂದರೆ ಅವರ ಬಳಿಗೆ ಅವರ ಸಂದೇಶವಾಹಕರು ಸುಸ್ಪಷ್ಟ ನಿದರ್ಶನಗಳನ್ನು ತಂದಿದ್ದರು. ಅವರು ನಿರಾಕರಿಸಿಬಿಟ್ಟರು. ಕೊನೆಗೆ ಅಲ್ಲಾಹನು ಹಿಡಿದು ಬಿಟ್ಟನು. ನಿಶ್ಚಯವಾಗಿಯೂ ಅವನು ಪ್ರಬಲನೂ ಕಠಿಣವಾಗಿ ಶಿಕ್ಷಿಸುವವನೂ ಆಗಿರುತ್ತಾನೆ." (ಅಲ್ ಮೂಮಿನ್: 21–22)

ತೌಹೀದ್‌ನೆಡೆಗೆ (ದೇವನ ಏಕತ್ವದೆಡೆಗೆ) ಜನರನ್ನು ಆಹ್ವಾನಿಸುವುದು ಸಂದೇಶ ವಾಹಕರ ಹೊಣೆಗಾರಿಕೆಯಾಗಿದೆ. ವಿಶ್ವಾಸ ಇರಿಸಿದವರಿಗೆ ಸ್ವರ್ಗದ ಶುಭವಾರ್ತೆ ಯನ್ನೂ ನಿರಾಕರಿಸುವವರಿಗೆ ನರಕದ ಕುರಿತು ಮುನ್ನೆಚ್ಚರಿಕೆ ನೀಡುವುದೂ ಅವರ ಹೊಣೆಗಾರಿಕೆಯಾಗಿದೆ. ಅವರು ಮಾನವ ಜೀವನದ ಅತ್ಯಂತ ಮಹತ್ವಪೂರ್ಣ ವಿಷಯದ ಮೇಲೆ ಗಂಭೀರವಾಗಿ ಚಿಂತನೆ ನಡೆಸಲು ಜನರಿಗೆ ಕರೆ ನೀಡಿದರು. ಯಾಕೆಂದರೆ ಈ ದೈವಿಕ ಸಂದೇಶದಲ್ಲಿ ವಿಶ್ವಾವಿರಿಸುವುದು ಮತ್ತು ಇರಿಸದಿರುವುದು

ಇವೆರಡರ ಪರಿಣಾಮ ಸಮಾನವಲ್ಲ. ಅದು ಭೂಮಿ-ಆಕಾಶಗಳಷ್ಟು ಅಂತರವನ್ನು ಹೊಂದಿದ್ದು ವಿಶ್ವಾಸಿಗಳು ಮಾತ್ರ ವಿಜಯಿಯಾಗುವರು ಮತ್ತು ನಿರಾಕರಿಸಿದವರು ನಷ್ಟಕ್ಕೊಳಗಾಗುವರು. ಆದುದರಿಂದ ಸತ್ಯಾಸತ್ಯ ವಿವೇಚಕವಾದ ಅಲ್ಲಾಹನ ಗ್ರಂಥಕ್ಕೆ (ಪವಿತ್ರ ಕುರ್‌ಆನ್‌ಗೆ) ಮಹತ್ವ ಕಲ್ಪಿಸದ ಜನರಿಗೆ ಪ್ರಪಂಚ ಸಾಮ್ರಾಟನಾದ ಅಲ್ಲಾಹನು ಹೀಗೆ ಮುನ್ನೆಚ್ಚರಿಕೆ ನೀಡುತ್ತಾನೆ.

"ಸಂದೇಶವಾಹಕರೇ ಇವರೊಡನೆ ಹೇಳಿರಿ: ಒಂದು ವೇಳೆ ಈ ಸಂದೇಶವು ಅಲ್ಲಾಹನ ಕಡೆಯಿಂದಲೇ ಬಂದಿದ್ದು ನೀವಿದನ್ನು ತಿರಸ್ಕರಿಸಿಬಿಟ್ಟರೆ (ನಿಮ್ಮ ಗತಿ ಏನಾದೀತು) ಎಂದು ನೀವೆಂದಾದರೂ ಯೋಚಿಸಿರುವಿರಾ?" **(ಅಲ್ ಅಹ್ಕಾಫ್: 10)**

ಪೂರ್ವಗ್ರಹ ಮತ್ತು ಸ್ವಾರ್ಥಗಳಿಂದ ಸತ್ಯದ ನಿರಾಕರಣೆ

ಮನುಷ್ಯರು ಸತ್ಯವನ್ನು ಅವರ ಅಹಂಕಾರದಿಂದಾಗಿ ಅಥವಾ ಸತ್ಯವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡ ನಂತರವೂ ನಿರಾಕರಿಸುತ್ತಾರೆ. ಸತ್ಯವನ್ನು ಸ್ವೀಕರಿಸಿದರೆ ಅವರ ಸ್ವಾರ್ಥ ಹಿತಾಸಕ್ತಿಗೆ ಅದರಿಂದ ಅಡಚಣೆಯಾಗುವುದು ಕಾರಣವಾಗಿದೆ. ಆದರೆ ಒಂದು ವೇಳೆ ಸತ್ಯವು ಅವರಿಗೆ ದೃಢವಾದ ಮೇಲೆ (ದೇವನ ಏಕತ್ವವನ್ನು) ನಿರಾಕರಿಸುವುದರ ಪರಿಣಾಮವನ್ನು ಚಿಂತಿಸುತ್ತಿದ್ದರೆ ಬೇರೆಯೇ ತೀರ್ಮಾನ ಮಾಡಬಹುದಾಗಿತ್ತು.

ಅಲ್ಲಾಹನು ಈ ರೀತಿ ಮುನ್ನೆಚ್ಚರಿಕೆ ನೀಡುತ್ತಾನೆ, "ಇವರೊಡನೆ ಹೇಳಿರಿ- ಇದಕ್ಕಿಂತಲೂ ಕೆಟ್ಟದೇನೆಂಬುದನ್ನು ನಾನು ನಿಮಗೆ ಹೇಳಲೇ? ಅಗ್ನಿ, ಸತ್ಯನಿಷೇಧಿಗಳಿಗೆ ಅಲ್ಲಾಹನು ಅದನ್ನೇ ವಾಗ್ದಾನ ಮಾಡಿದ್ದಾನೆ ಮತ್ತು ಅದು ಅತ್ಯಂತ ನಿಕೃಷ್ಟ ಸ್ಥಾನವಾಗಿದೆ." **(ಅಲ್‌ಹಜ್: 72)**

ಈ ರೀತಿ ನಿರಾಕರಿಸುವವರ ಮೇಲೆ ಯಾತನೆ ಬರುವ ಮುಂಚೆಯೇ ಮುನ್ನೆಚ್ಚರಿಕೆ ನೀಡುವುದು ಅಲ್ಲಾಹನ ಸಹಾಯ ಮತ್ತು ಕೃಪೆಯಾಗಿದೆ.

ಅಹಂಕಾರದಲ್ಲಿ ಮುಳುಗಿ ನಿರಾಕರಣೆ

ಜನರ ಅಹಂಕಾರವು ಕೂಡ ಸತ್ಯ(ಏಕದೇವತ್ವ, ಪರಲೋಕ, ಪ್ರವಾದಿತ್ವ)ವನ್ನು ಸ್ವೀಕರಿಸದಂತೆ ತಡೆಯಾಗಿದೆ. ಶ್ರೀಮಂತಿಕೆ, ಅಧಿಕಾರ, ಜ್ಞಾನ ಇತ್ಯಾದಿಗಳು ಜನರ ದರ್ಪ ಅಹಂಕಾರಗಳಿಗೆ ಕಾರಣವಾಗಿದ್ದು ಸಂದೇಶ ನೀಡುವ ಸಾಮಾನ್ಯ ವ್ಯಕ್ತಿಯ ಮಾತಿನಲ್ಲಿ ವಿಶ್ವಾಸ ಇರಿಸುವುದು ತಮ್ಮ ಘನತೆ ಸೂಕ್ತವಲ್ಲ ಎಂದು ಇಂತಹವರು ಬಗೆಯುತ್ತಾರೆ. ಸ್ಥಾನಮಾನವಿಲ್ಲ, ವಿಶೇಷ ವ್ಯಕ್ತಿತ್ವವಿಲ್ಲ ಇಂತಹ ಸಾಮಾನ್ಯ ವ್ಯಕ್ತಿಯ ಸಂದೇಶವನ್ನು ನಾವು ಸ್ವೀಕರಿಸುವುದೇ ಎನ್ನುತ್ತಾ ಅವರು ಪವಿತ್ರ ಕುರ್‌ಆನ್ ಅನ್ನು

ಅಹಂಭಾವದಿಂದ ನಿರಾಕರಿಸುವರು. ಇಂತಹವರ ಪರಿಣಾಮವನ್ನು ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ.

"ಸತ್ಯನಿಷೇಧಿಗಳೊಂದಿಗೆ (ಹೀಗೆ ಹೇಳಲಾಗುವುದು) ನನ್ನ ಸೂಕ್ತಗಳನ್ನು ನಿಮಗೆ ಓದಿ ಹೇಳಲಾಗುತ್ತಿರಲಿಲ್ಲವೇ? ಆದರೆ, ನೀವು ಅಹಂಕಾರಪಟ್ಟಿರಿ ಮತ್ತು ಅಪರಾಧಿಗಳಾಗಿ ಬಾಳಿದಿರಿ." (ಅಲ್‌ಜಾಸಿಯ: 31)

ಪರಿಣಾಮ ಕರ್ಮವನ್ನು ಅವಲಂಭಿಸಿದೆ. ಕರ್ಮಗಳು ವಿಶ್ವಾಸವನ್ನು ಅವಲಂಬಿಸಿ ಕೊಂಡಿವೆ. ಒಂದೋ ಒಳ್ಳೆಯ ಕರ್ಮ ಅಥವಾ ಕೆಟ್ಟ ಕರ್ಮ ಅವರವರ ವಿಶ್ವಾಸಕ್ಕೆ ತಕ್ಕಂತಿರುವುದು. ಸತ್ಕರ್ಮವು ಸತ್ಯವಿಶ್ವಾಸವನ್ನು ಸಂಬಂಧಿಸಿದ್ದರೆ, ಕೆಟ್ಟ ಕರ್ಮವು ಪರಲೋಕ ಮತ್ತು ದೇವನ ಏಕತ್ವದ ನಿರಾಕರಣೆಗೆ ಸಂಬಂಧಿಸಿದ್ದಾಗಿ ಅಥವಾ ದುರ್ಬಲ ವಿಶ್ವಾಸದ ಕಾರಣದಿಂದಾಗಿ ಸಂಭವಿಸುತ್ತದೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ.

"ಅನಂತರ ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗುತ್ತಿದ್ದವರನ್ನು ಅವರ ಪ್ರಭು ತನ್ನ ಕೃಪೆಯೊಳಗೆ ಪ್ರವೇಶಗೊಳಿಸುವನು. ಇದುವೇ ಸುವ್ಯಕ್ತ ವಿಜಯ." (ಅಲ್‌ಜಾಸಿಯ: 30)

ಸತ್ಯದ ವಿರೋಧಿಗಳಿಗೆ

ಸತ್ಯವು ಇವರ ಮುಂದೆ ಬಂದಾಗ ಅದಕ್ಕೆ ತಲೆಬಾಗದೆ ವಿರೋಧಿಸಿ ಪೈಪೋಟಿಗೆ ಇಳಿಯುತ್ತಾರೆ. ನಿಜಕ್ಕಾದರೆ ಅವರು ಅಲ್ಲಾಹನೊಂದಿಗೆ ಸ್ಪರ್ಧೆಗಿಳಿದಿದ್ದಾರೆ. ತತ್ಪರಿಣಾಮ ವಾಗಿ ಅವರು ಕಠಿಣವಾಗಿ ಶಿಕ್ಷಿಸಲ್ಪಡುವರು. ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ.

"ಅವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ಎದುರಿಸಿದ್ದರಿಂದ ಇವೆಲ್ಲ ಸಂಭವಿಸಿತು. ಅಲ್ಲಾಹನನ್ನು ಯಾರೇ ಎದುರಿಸಿದರೂ ಅಲ್ಲಾಹನು ಅವನಿಗೆ ಶಿಕ್ಷೆ ಕೊಡುವುದರಲ್ಲಿ ಕಠೋರನು." (ಅಲ್ ಹಶ್ರ್: 4)

ಸತ್ಯವು ತಲುಪಿಯೂ ವಿಶ್ವಾಸ ಇರಿಸದಿರುವವರು ಪರಲೋಕದ ವಿಚಾರಣೆಯ ನಂತರ ಶಿಕ್ಷಿಸಲ್ಪಡುವರು. ನಿರಾಕರಣೆಯಲ್ಲೇ ಮುಂದುವರಿದು ಸತ್ಯಕ್ಕೆ ಅಡಚಣೆ ಯುಂಟು ಮಾಡಿ ಅದನ್ನು ಎದುರಿಸುತ್ತಿರುವವರು ಇಹಲೋಕದಲ್ಲಿಯೂ ಕಠಿಣವಾಗಿ ಶಿಕ್ಷಿಸಲ್ಪಡುತ್ತಾರೆ ಮತ್ತು ಪರಲೋಕದಲ್ಲಿಯೂ ಕಠಿಣ ಯಾತನೆಗೊಳಗಾಗುತ್ತಾರೆ.

ನಿದರ್ಶನಗಳು ಮುಂದಿದ್ದೂ ನಿರಾಕರಿಸುವ ಜನರಿಗೆ ಮುನ್ನೆಚ್ಚರಿಕೆ

ಇಡೀ ವಿಶ್ವದಾದ್ಯಂತ ಸೃಷ್ಟಿಕರ್ತನ ಕುರಿತ ವ್ಯಾಪಕ ನಿದರ್ಶನ, ಕುರುಹುಗಳಿವೆ. ಮಾತ್ರವಲ್ಲ ಮನುಷ್ಯ ಜೀವನ ಮತ್ತು ಜೀವನದ ಪ್ರತಿಯೊಂದು ಹೆಜ್ಜೆಗಳಲ್ಲೂ ಮತ್ತು

ತಿರುವುಗಳಲ್ಲಿಯೂ ಅವು ವ್ಯಕ್ತವಾಗುತ್ತಿವೆ. ಇವೆಲ್ಲವೂ ಜನರು ಸುಲಭವಾಗಿ ಸೃಷ್ಟಿಕರ್ತನೆಡೆಗೆ ತಲುಪಬೇಕು ಎಂಬುದಕ್ಕಾಗಿದೆ. ಇದರ ಹೊರತಾಗಿಯೂ ಯಾವನೇ ವ್ಯಕ್ತಿ ಈ ನಿದರ್ಶನ- ಮಾರ್ಗದರ್ಶನಗಳಿಂದ ಪ್ರಯೋಜನ ಪಡೆಯದಿಲ್ಲವಾದರೆ ಅವನೇ ಸ್ವಯಂ ಸೃಷ್ಟಿಕರ್ತನಿಂದ ದೂರ ಉಳಿಯುವುದಾದರೆ ತನ್ನ ಮೇಲಾಗಲಿರುವ ಕೆಟ್ಟ ಪರಿಣಾಮಕ್ಕೆ ಅವನೇ ಹೊಣೆಗಾರನಾಗಿರುವನು. ಯಾಕೆಂದರೆ ಸೃಷ್ಟಿಕರ್ತನಲ್ಲಿ ವಿಶ್ವಾಸ ಇರಿಸುವುದು ಮತ್ತು ಇರಿಸದಿರುವುದು ಒಂದೇ ತೆರನಲ್ಲ. ಪವಿತ್ರ ಕುರ್‌ಆನ್ ಇಂತಹವರ ಅವಸ್ಥೆಯನ್ನು ಈ ರೀತಿ ವಿವರಿಸುತ್ತಿದೆ.

"ವಾಸ್ತವದಲ್ಲಿ ಅಲ್ಲಾಹನ ಸೂಕ್ತಗಳಲ್ಲಿ ವಿಶ್ವಾಸವಿರಿಸದವರಿಗೆ ಅಲ್ಲಾಹನು ಎಂದೆಂದಿಗೂ ಸನ್ಮಾರ್ಗದರ್ಶನ ಮಾಡುವುದಿಲ್ಲ. ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ." (ಅನ್ನಹ್ಲ್: 104)

"ಈ ಸತ್ಯನಿಷೇಧಿಗಳು ಅಗ್ನಿಯ ಮುಂದೆ ತರಲ್ಪಡುವಾಗ ಇವರೊಡನೆ, "ಇದು ಸತ್ಯವಲ್ಲವೇ?" ಎಂದು ಕೇಳಲಾಗುವುದು. ಆಗ ಇವರು, "ಹೌದು! ನಮ್ಮ ಪ್ರಭುವಿನಾಣೆ (ಇದು ನಿಜಕ್ಕೂ ಸತ್ಯ)" ಎನ್ನುವರು. ಆಗ ಅಲ್ಲಾಹನು, "ಹಾಗಿದ್ದರೆ ನೀವು ಮಾಡುತ್ತಿದ್ದ ನಿರಾಕರಣೆಯ ಫಲವಾಗಿ ಈಗ ಯಾತನೆಯ ಸವಿಯನ್ನು ಅನುಭವಿಸಿರಿ" ಎನ್ನುವನು." (ಅಲ್ ಅಹ್ಕಾಫ್: 34)

ಅಲ್ಲಾಹನ ವಿಧಾನದಲ್ಲಿ ಬಲವಂತವಿಲ್ಲ

ಪ್ರವಾದಿ ಮತ್ತು ಕುರ್‌ಆನ್‌ನ ಮೂಲಕ ಅಲ್ಲಾಹನಲ್ಲಿ ವಿಶ್ವಾಸ ಇರಿಸುವುದು ದಾಸರ ಆಯ್ಕೆಗೇ ಬಿಡಲಾಗಿದೆ. ಅಲ್ಲಾಹನ ಕಡೆಯಿಂದ ಯಾವುದೇ ಬಲವಂತವಿಲ್ಲ. ಬಲವಂತಪಡಿಸುವುದು ಅಲ್ಲಾಹನ ವಿಧಾನವೂ ಅಲ್ಲ. ಅದು ಅವನ ಸುನ್ನತ್ ಅಲ್ಲ. ಬಲವಂತದಿಂದ ಜನರು ವಿಶ್ವಾಸ ಇರಿಸುವಂತೆ ಮಾಡುವುದು ಅಲ್ಲಾಹನ ರೀತಿಯಲ್ಲ. ಹಾಗೆಂದಾದರೆ ಮನುಷ್ಯನನ್ನು ಪರೀಕ್ಷಿಸುವ ಉದ್ದೇಶವೇ ಇಲ್ಲದಂತಾಗುವುದು. ಅಲ್ಲಾಹನು ತನ್ನ ಕರುಣೆ ಪ್ರೀತಿಯ ಆಧಾರದಲ್ಲಿ ಸೃಷ್ಟಿಕರ್ತನನ್ನು ನೋಡದೆಯೇ ದಾಸರು ಸಂದೇಶವಾಹಕರು ಮತ್ತು ಪವಿತ್ರ ಗ್ರಂಥ ಕುರ್‌ಆನ್ ಮತ್ತು ಬೇರೆ ಇತರ ನಿದರ್ಶನಗಳನ್ನು ನೋಡಿ ತಮ್ಮ ವಿವೇಕ ಬಳಸಿಕೊಂಡು ವಿಶ್ವಾಸ ಇರಿಸಲೆಂದು ಬಯಸುವನು. ಇದಕ್ಕಾಗಿ ಅಲ್ಲಾಹನು ಬಲವಂತಪಡಿಸುವುದೂ ಇಲ್ಲ. ಅದು ಅವನ ವಿಧಾನವೂ ಅಲ್ಲ.

"ನಾವಿಚ್ಛಿಸಿದರೆ ಇವರ ಕೊರಳುಗಳನ್ನು ಬಾಗಿಸಿ ಬಿಡುವಂತಹ ನಿದರ್ಶನವನ್ನು ಆಕಾಶದಿಂದ ಇಳಿಸಬಲ್ಲೆವು." (ಅಶ್ಶುಅರಾ: 4)

ಅಲ್ಲಾಹನ ಸಹಾಯ ಸತ್ಯವಿಶ್ವಾಸಿಗಳ ಜೊತೆಗಿದೆ

ಅಲ್ಲಾಹನ ದಾಸರಿಗೆ ಅಲ್ಲಾಹನ ಕರುಣೆಯ ಸಂದೇಶ ತಲುಪಿಸುವುದು, ಅವನ ಪರಿಚಯ ಮಾಡಿಸುವುದು ಅತ್ಯುತ್ಕೃಷ್ಟ ಕಾರ್ಯವೆಂದು ತನ್ನ ಗ್ರಂಥದ ಹಾಮೀಮ್ ಅಸ್ಸಜ್ದ ಅಧ್ಯಾಯದಲ್ಲಿ ಘೋಷಿಸಿದ್ದಾನೆ.

ಆದುದರಿಂದ ಈ ಅತ್ಯುತ್ತಮ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಸಕಲ ವಿಧದ ಸಹಾಯ ಮತ್ತು ಮಾರ್ಗದರ್ಶನ ಮಾಡುತ್ತಾನೆ. ಅವರ ಕೆಲಸವನ್ನು ಸುಲಭಗೊಳಿಸಿ ಪರಿಣಾಮವನ್ನು ಉನ್ನತಗೊಳಿಸುತ್ತಾನೆ. ಕಷ್ಟಗಳನ್ನು ದೂರೀಕರಿಸುತ್ತಾನೆ. ಶತ್ರುಗಳ ಜಾಲದಿಂದ ಸಂರಕ್ಷಿಸುತ್ತಾನೆ. ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಆದ್ಯ ಕಾಲದ ಸತ್ಯವಿಶ್ವಾಸಿಗಳಿಗೆ ಈ ರೀತಿ ಸಹಾಯದ ವಾಗ್ದಾನ ನೀಡಿದ್ದಾನೆ.

"ನಾವು ಖಂಡಿತವಾಗಿಯೂ ನಮ್ಮ ಸಂದೇಶವಾಹಕರಿಗೆ ಹಾಗೂ ಸತ್ಯವಿಶ್ವಾಸಿಗಳಿಗೆ ಈ ಲೋಕದ ಜೀವನದಲ್ಲಿಯೂ ಸಹಾಯ ಮಾಡುತ್ತೇವೆ ಮತ್ತು ಸಾಕ್ಷಿದಾರರು ಎದ್ದು ನಿಲ್ಲುವ ದಿನದಂದೂ ಮಾಡುವೆವು. ಅಂದು ಅಕ್ರಮಿಗಳಿಗೆ ಅವರ ನೆಪಗಳು ಯಾವುದೇ ಪ್ರಯೋಜನ ಕೊಡಲಾರವು. ಅವರ ಮೇಲೆ ಶಾಪವೆರಗುವುದು ಮತ್ತು ಅತ್ಯಂತ ನಿಕೃಷ್ಟ ವಾಸಸ್ಥಾನವು ಅವರ ಪಾಲಿಗೆ ಬರುವುದು."

(ಅಲ್‌ಮೂಮಿನ್: 51–52)

"ಆದುದರಿಂದ ಸಂದೇಶವಾಹಕರೇ, ತಾಳ್ಮೆ ವಹಿಸಿರಿ, ಅಲ್ಲಾಹನ ವಾಗ್ದಾನವು ಪರಮ ಸತ್ಯವಾಗಿದೆ. ನಿಮ್ಮ ತಪ್ಪಿನ ಬಗ್ಗೆ ಕ್ಷಮೆ ಯಾಚಿಸಿರಿ ಮತ್ತು ಬೆಳಗು-ಬೈಗುಗಳಲ್ಲಿ ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸುತ್ತಿರಿ. ವಾಸ್ತವದಲ್ಲಿ ಯಾವುದೇ ಪ್ರಮಾಣವಾಗಲಿ, ಆಧಾರವಾಗಲಿ ತಮ್ಮ ಬಳಿ ಬಾರದಿದ್ದರೂ ಅಲ್ಲಾಹನ ಸೂಕ್ತಗಳ ವಿಷಯದಲ್ಲಿ ಜಗಳವಾಡುವವರ ಹೃದಯಗಳಲ್ಲಿ ಅಹಂಕಾರ ತುಂಬಿಕೊಂಡಿದೆ. ಆದರೆ ಅವರು ತಾವು ಅಹಂಕಾರಪಡುವಂತಹ ಔನ್ನತ್ಯವನ್ನು ತಲುಪುವವರಲ್ಲ. ಅಲ್ಲಾಹನ ಅಭಯವನ್ನು ಯಾಚಿಸಿರಿ. ಅವನು ಸರ್ವವನ್ನು ಕೇಳುವವನೂ ಸರ್ವವನ್ನು ನೋಡುವವನೂ ಆಗಿರುತ್ತಾನೆ." **(ಅಲ್ ಮೂಮಿನ್: 55–56)**

❖ ❖ ❖